ಬೆಳ್ಳಿ ಬಿಟ್ಟ ಬಳ್ಳಿ-91 ಪ್ರಧಾನ ಸಂಪಾದಕರು : ಹಂಪ. ನಾಗರಾಜ

ಕನ್ನಡ ಗಾದೆಗಳ ಮಹಾಕೋಶ

ಪ್ರೊ. ಮ. ರಾಮಾರಾಧ್ಯ

ಸಂಪುಟ : ೨



ಗಾದೆಗಳ ಸಂಗ್ರಹಕಾರ್ಯ ನಡೆಸಿದವರ ಪೈಕಿ ದಿವಂಗತ ಹು. ಮ. ರಾಮಾರಾಧ್ಯರ ಹೆಸರು ಪ್ರಮುಖವಾದುದೇ. ಇವರು ಕನ್ನಡ ಗಾದೆಗಳ ಭಂಡಾರವನ್ನೇ ಸೂರೆಮಾಡಲು ಹೊರಟ ಅಪೂರ್ವ ಸಾಹಸಿಗಳಾಗಿದ್ದಾರೆ. ಹದಿನೈದು ಸಾವಿರಕ್ಕೂ ಹೆಚ್ಚು ಗಾದೆಗಳನ್ನು ಕಲೆಹಾಕಿರುವ ಇವರು ಕನ್ನಡ ಗಾದೆಗಳ ಸಂಗ್ರಹ ಕಾರ್ಯ ಮಾಡಿದವರಲ್ಲಿ ಅಗ್ರಗಣ್ಯರು. ಇದಕ್ಕಾಗಿ ಇವರು ಸತತವಾಗಿ ಮೂವತ್ತು ವರ್ಷಗಳ ಕಾಲ ತಮ್ಮ ಜೀವವನ್ನು ತೇದಿದ್ದಾರೆ. ಈವರೆಗೆ ಅಚ್ಚುಗೊಳ್ಳದಿರುವ ಈ ಸಂಕಲನ ಕನ್ನಡದಲ್ಲೊಂದು ಅದ್ವಿತೀಯ ಗಾದೆಗಳ ಸಂಪುಟವಾಗುವುದರಲ್ಲಿ ಅನುಮಾನವಿಲ್ಲ. ಇಲ್ಲಿಯವರೆಗೆ ಪ್ರಕಟಗೊಂಡಿರುವ ಬೇರೆ ಬೇರೆ ಸಂಗ್ರಹಗಳಲ್ಲಿ ಕಂಡುಬರದ ಬಹಳಷ್ಟು ಗಾದೆಗಳು ಈ ಮಹಾಕೋಶದಲ್ಲಿವೆ. ಜಾನಪದ ಕ್ಷೇತ್ರದಲ್ಲಿಯೇ ಪ್ರಸ್ತುತ ಮಹಾಕೋಶಕ್ಕೆ ಮಹತ್ವದ ಸ್ಥಾನ ಲಭಿಸುತ್ತದೆಂದೂ, ರಾಮಾರಾಧ್ಯರ ಸಂಗ್ರಹ ಕಾರ್ಯದ ಬಗೆಗೆ ಗೌರವ ಭಾವನೆಯುಂಟಾಗುತ್ತದೆಂದೂ ಭಾವಿಸಿದ್ದೇನೆ. ರಾಮಾರಾಧ್ಯರು ಬೇರೆ ಬೇರೆ ಮೂಲಗಳಿಂದ ಗಾದೆಗಳನ್ನೆತ್ತಿ ಕೊಂಡು ಅವನ್ನು ಪಾಠಾಂತರಗಳಾಗಿ ಸೂಚಿಸಿರುವುದು ಅವುಗಳ ಅಭ್ಯಾಸದ ದೃಷ್ಟಿಯಿಂದ ಉಪಯುಕ್ತವಾಗಿದೆ. ಒಟ್ಟಿನಲ್ಲಿ ಈ ಪ್ರಮಾಣದ ಗಾದೆಗಳ ಭಂಡಾರ ಕನ್ನಡ ಗಾದೆಗಳ ಅಧ್ಯಯನಕ್ಕೆ, ಜನಪದರ ಬದುಕಿನ ಬೇರುಗಳನ್ನು ಅಗೆಯಲಿಕ್ಕೆ, ಸಾಂಸ್ಕೃತಿಕ ಅಧ್ಯಯನ ನಡೆಸಲಿಕ್ಕೆ ಹೊಸ ಆಯಾಮವೊಂದನ್ನು ತೆರೆಯುತ್ತದೆ.

ಹಂಪ. ನಾಗರಾಜಯ್ಯ
ಅಧ್ಯಕ್ಷರು

ಟಿ. ವಿ. ವೆಂಕಟರಮಣಯ್ಯ
೨೪-೧೨-೧೯೮೨

ಬೆಳ್ಳಿ ಬಿಟ್ಟ ಬಳ್ಳಿ - 91

ಕನ್ನಡ ಗಾದೆಗಳ ಮಹಾಕೋಶ

ಸಂಪುಟ-೨

ಪ್ರಧಾನ ಸಂಪಾದಕರು
ಹಂಪ. ನಾಗರಾಜಯ್ಯ

ಸಂಪಾದಕರು
ಹು. ಮ. ರಾಮಾರಾಧ್ಯ

ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ : : ಬೆಂಗಳೂರು-18
1982

KANNADA GAADEGALA MAHAAKOSHA (A Collection of Proverb[s])
by H. M. Ramaradhya, Published by Kannada Sahitya Parishat Chamarajpe[t]
Bangalore-18, Size - Demy Octavo. 696 + viii Pages

ಮೊದಲ ಮುದ್ರಣ : 1982

ಬೆಲೆ : ಇಪ್ಪತ್ತೈದು ರೂಪಾಯಿ

ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್ತು,
ಚಾಮರಾಜಪೇಟೆ, ಬೆಂಗಳೂರು-18

ಮುದ್ರಕರು :

ಅಶ್ವಥ್ ಪ್ರಿಂಟರ್ಸ್
೪೪೩, ಮೊದಲನೇ ಮುಖ್ಯ ರಸ್ತೆ, ೪೪ನೇ ಅಡ್ಡ ರಸ್ತೆ, ೮ನೇ ಘಟ್ಟ,
ಜಯನಗರ, ಬೆಂಗಳೂರು – ೮೨

ಮುನ್ನುಡಿ

ಕರ್ನಾಟಕ ಏಕೀಕರಣದ ಬೆಳ್ಳಿಹಬ್ಬವನ್ನು ಕನ್ನಡ ಸಾಹಿತ್ಯ ಪರಿಷತ್ತು ವ್ಯಾಪಕವಾಗಿಯೂ, ವ್ಯವಸ್ಥಿತವಾಗಿಯೂ ಆಚರಿಸುತ್ತಿದೆ. ಅದರ ಸಂಬಂಧವಾಗಿ 'ಬೆಳ್ಳಿ ಬಿಟ್ಟ ಬಳ್ಳಿ' ಎಂಬ ಹೆಸರಿನ ಒಂದು ಹೊಸ ಪ್ರಕಟನ ಮಾಲೆಯನ್ನು ಪರಿಷತ್ತು ಕೈಗೊಂಡಿದೆ. ಈ ಮಾಲೆಯಲ್ಲಿ ಒಂದು ನೂರಕ್ಕಿಂತ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದೆ. ಜನಪದ ಸಾಹಿತ್ಯ, ಗ್ರಂಥ ಸಂಪಾದನೆ, ವಿಮರ್ಶೆ, ಡಾಕ್ಟರೇಟ್ ಪ್ರಬಂಧ ಮೊದಲಾದವನ್ನು ಈ ಮಾಲೆಯಲ್ಲಿ ಪ್ರಕಟಿಸಲಾಗುತ್ತಿದೆ. ಕರ್ನಾಟಕ ಸರ್ಕಾರದ ಉದಾರ ಸಹಾಯ ಈ ಮಾಲೆಗೆ ದೊರೆತಿರುವುದರಿಂದ ಈ ಮಾಲೆಯಲ್ಲಿ ಪ್ರಕಟಿಸುವ ಪುಸ್ತಕಗಳ ಬೆಲೆಯನ್ನು ಎಲ್ಲರಿಗೂ ಎಟಕುವಂತೆ ಇಡಲಾಗಿದೆ. ಕಡಿಮೆ ಬೆಲೆಯಲ್ಲಿ ಉತ್ತಮ ಗ್ರಂಥಗಳನ್ನು ಕನ್ನಡಿಗರಿಗೆ ಸಿಗುವಂತೆ ಸಹಾಯ ನೀಡಿದ ಕರ್ನಾಟಕ ಸರ್ಕಾರವನ್ನು ಪರಿಷತ್ತು ಕೃತಜ್ಞತೆಯಿಂದ ಸ್ಮರಿಸುತ್ತದೆ.

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಒಂದಾದ ಗಾದೆಗಳು ಬದುಕಿನ ನಾನಾ ಮುಖಗಳನ್ನು ಪರಿಚಯಿಸುವ ಶ್ರೇಷ್ಠ ದಾಖಲೆಗಳು. ಸುಖ ಸಂತೋಷ, ಮಾನಸಿಕ ಬದಲಾವಣೆ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಇತ್ಯಾದಿ ಇನ್ನೂ ಹಲವಾರು ರೀತಿಯ ಅಂಶಗಳನ್ನು ತನ್ನ ಒಡಲಲ್ಲಿ ತುಂಬಿಕೊಂಡಿರುವ ಗಾದೆಗಳು, ಇರುವುದನ್ನು ಇದ್ದ ಹಾಗೇ ಹೇಳುವ ಲಕ್ಷಣವನ್ನು ಹೊಂದಿವೆ. ಅಲ್ಲದೆ ನಾವು ಪ್ರಪಂಚದಲ್ಲಿ ಅನುಭವಿಸುವ ನಿತ್ಯದ ಅನುಭವಗಳ ಕ್ರೋಢೀಕರಣಗಳಾಗಿಯೂ ಕಂಡುಬರುತ್ತವೆ. ಜೊತೆಗೆ ಯಾವುದೇ ಅತಿರೇಕಕ್ಕೆ ಅವಕಾಶ ಮಾಡಿಕೊಡಬಾರದೆಂಬ ಸಲಹೆಯನ್ನೂ ಅವು ಕೊಡುತ್ತವೆ. ಈ ಕಾರಣದಿಂದಲೇ, ನಮ್ಮ ಜೀವನದ ಅನೇಕ ರಹಸ್ಯಗಳನ್ನು ಗಾದೆಗಳು ಬಿಟ್ಟುಕೊಡುತ್ತವೆಂದು ಹೇಳುವುದು, ಇಂಥ ವಿಶಿಷ್ಟ

ಲಕ್ಷಣಗಳನ್ನು ಪಡೆದುಕೊಂಡ ಗಾದೆಗಳ ಸಂಗ್ರಹಕಾರರಲ್ಲಿ ದಿವಂಗತ ಹು. ಮ. ರಾಮಾರಾಧ್ಯರ ಹೆಸರು ಪ್ರಮುಖ ವಾದುದು. 'ಕನ್ನಡ ಗಾದೆಗಳ ಮಹಾಕೋಶ (ಸಂಪುಟ ೨)', ಅವರ ಮೂವತ್ತು ವರ್ಷಗಳ ಸಂಗ್ರಹ ಕಾರ್ಯದ ಸಾಧನೆಯ ಫಲವಾಗಿ ಈಗ ನಿಮ್ಮ ಕೈಸೇರಿದೆ. ಗುಣಶೀಲ ಸ್ವಭಾವ ಮತ್ತು ಸಂಕೀರ್ಣ ಎಂಬ ಎರಡೇ ಅಧ್ಯಾಯದಲ್ಲಿ ೧೦೬೫೪ ರಿಂದ ೧೫೫೮೪ರ ವರೆಗಿನ ಗಾದೆಗಳು ಸೇರ್ಪಡೆಯಾಗಿರುವುದು ಕೋಶದ ವೈಶಿಷ್ಟ್ಯಗಳಲ್ಲಿ ಒಂದೆನಿಸಿದೆ. ಉತ್ತಮ ನಡೆವಳಿ, ಸಂಪ್ರದಾಯ, ಗೆಳೆತನ, ಸಜ್ಜನಸಂಗ, ದುಷ್ಟ, ತುಂಟ, ಪೋಲಿ-ಮೊದಲಾದ ಬದುಕಿನ ಎಲ್ಲ ಮುಖಗಳನ್ನು ಪರಿಚಯಿ ಸುವ ಇಲ್ಲಿನ ಸಾವಿರಾರು ಗಾದೆಗಳು ವಿಶಿಷ್ಟ ಅನುಭವವನ್ನು ಪಡೆಯಲು, ಸಾಕಷ್ಟು ಮಾಹಿತಿಯನ್ನು ಒದಗಿಸಿಕೊಳ್ಳಲು ಸಹಾಯಕವಾಗುತ್ತವೆ. ಅಂದಂದಿನ ಸಮಾಜದ ಬಣ್ಣ ಬಯಲು ಮಾಡುವ, ವಿಡಂಬಿಸುವ, ಸಂಪ್ರದಾಯ, ಹೋಲಿಕೆ, ರೂಪಕ-ಇತ್ಯಾದಿ ಎಲ್ಲಾ ರೀತಿಗೂ ಇಲ್ಲಿಯ ಗಾದೆಗಳು ತಕ್ಕ ಉತ್ತರ ನೀಡುತ್ತವೆ. ರಾಮಾರಾಧ್ಯರು, ತಾವು ಸಂಗ್ರಹಿಸಿರುವ ಬೃಹತ್ಪ್ರಮಾಣದ ಗಾದೆಗಳಿಗೆ ಪೂರಕವಾಗಿ, ಇಂದಿನ ಕೆಲವು ಗಾದೆಗಳು, ಅನ್ಯ ದೇಶೀಯ ಹಾಗೂ ಅನ್ಯಭಾಷಾ ಗಾದೆಗಳು, ಕೆಲವು ಅಂತರ ಭಾರತೀಯ ಭಾಷೆಗಳ ಗಾದೆಗಳು ಮತ್ತು ಗಾದೆಗಳ ಕಾವ್ಯಪ್ರಯೋಗಗಳನ್ನು ಅನುಬಂಧದಲ್ಲಿ ಒದಗಿ ಸಿದ್ದಾರೆ. ಅಧ್ಯಯನಾಸಕ್ತರಿಗೆ, ಸಂಶೋಧಕರಿಗೆ ಅನುಕೂಲ ವಾಗಲೆಂಬ ಉದ್ದೇಶದಿಂದ ಪ್ರತಿ ಅಧ್ಯಾಯದಲ್ಲಿಯೂ ಉಪ ವಿಭಾಗಗಳನ್ನಾಗಿ ವಿಂಗಡಿಸಿದ್ದಾರೆ. ಪಾಠಾಂತರ ಮತ್ತು ವಿವಿಧ ಭಾಷೆಗಳ ಸಮನಾರ್ಥಕ ಗಾದೆಗಳನ್ನು ಅಡಿ ಟಿಪ್ಪಣಿಯಾಗಿ ಕೊಟ್ಟಿದ್ದಾರೆ. ಪಾಠಾಂತರಗಳು ಜಾನಪದದ ಎಲ್ಲ ಸಾಮಗ್ರಿಗಳಂತೆ ಗಾದೆಗಳಲ್ಲೂ ಪರಂಪರಾಗತವಾದವುಗಳು ಹೇರಳವಾಗಿರುತ್ತವೆ. ಅಲ್ಲದೆ ಅವು ಸಮಾನ ರೀತಿಯ ಖಚಿತ ಅರ್ಥವನ್ನೂ ಕೊಡುತ್ತವೆ. ಆದ್ದರಿಂದ ಇವು, ಸಂಗ್ರಾಹಕನಿ ಗಿರಬೇಕಾದ ಸಾಮಾನ್ಯ ಎಚ್ಚರ, ಸಂಶೋಧನ ದೃಷ್ಟಿ ಮತ್ತು ಅನ್ಯ ಭಾಷಾಪಾಂಡಿತ್ಯಕ್ಕೆ ಸಾಕ್ಷಿಯಾಗಿವೆ. ಜನಪದ ಗಾದೆ ಗಳನ್ನು ಶಿಷ್ಟ ಕಾವ್ಯಗಳಲ್ಲಿಯೂ ಗುರ್ತಿಸಿ ಪಟ್ಟಿ ಮಾಡುವುದರ

ಮೂಲಕ, ತಮ್ಮ ಅಭಿವ್ಯಕ್ತಿಯ ಸಮರ್ಥನೆಗಾಗಿ ಶಿಷ್ಟಕವಿಗಳು ಯಾವ ರೀತಿ ಜನಪದ ಗಾದೆಗಳನ್ನು ಬಳಸಿಕೊಂಡಿದ್ದಾರೆ ಎಂಬುದನ್ನು ಸಮರ್ಥ ರೀತಿಯಲ್ಲಿ ಗುರುತಿಸಿದವರಲ್ಲಿ ಹು. ಮ. ರಾಮಾರಾಧ್ಯರ ಹೆಸರು ಪ್ರಮುಖವಾದುದು. ಈ ರೀತಿಯ ದೃಷ್ಟಿಕೋನವುಳ್ಳ ಹಾಗೂ ಬೃಹತ್ಪ್ರಮಾಣದ ಗಾದೆಗಳನ್ನುಳ್ಳ ಕೃತಿ ಕನ್ನಡದಲ್ಲಿ ಇದೇ ಮೊದಲು ಎಂದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ. ರಾಮಾರಾಧ್ಯರು ಸಂಗ್ರಹಿಸಿ ಕೊಟ್ಟಿರುವ ಗಾದೆಗಳ ಜೊತೆಗೆ ಪ್ರಕಟವಾಗಿರುವ ಗಾದೆಗಳಿಗೆ ಸಂಬಂಧಿಸಿದಂತೆ ಮಲ್ಲೇಶ್ವರದ ಗಾಂಧಿ ಸಾಹಿತ್ಯ ಸಂಘದ ಸನ್ಮಿತ್ರರು ಇನ್ನೂ ಕೆಲವು ಭಾಗಗಳನ್ನು ಸೇರಿಸಿ ಪ್ರಕಟಣೆಗಾಗಿ ಪರಿಷತ್ತಿಗೆ ಒಪ್ಪಿಸಿದ್ದರು. ಅವರು ಒಪ್ಪಿಸಿದ ಪೂರ್ಣಭಾಗ ದಲ್ಲಿ ಪರಿಶೀಲಕರು ಪ್ರಕಟಣೆಗೆ ಒಪ್ಪಿದ ಭಾಗಗಳನ್ನು ಅಂದರೆ ರಾಮಾರಾಧ್ಯರು ಸಂಗ್ರಹಿಸಿ ಜೋಡಿಸಿರುವ ಭಾಗಗಳನ್ನು ಮಾತ್ರ ಮುದ್ರಿಸಲಾಗಿದೆ. ಈ ಬಗೆಗೆ ಇದರ ಮೊದಲ ಸಂಪುಟದ ಮುನ್ನುಡಿಯಲ್ಲಿ ವಿವರವಾಗಿ ಪ್ರಸ್ತಾಪಿಸಲಾಗಿರುವುದರಿಂದ ಅದೇ ವಿವರಗಳನ್ನು ಇಲ್ಲಿ ಮತ್ತೆ ಬರೆಯುವುದು ಅಪ್ರಸ್ತುತ ವೆಂದು ಭಾವಿಸಿದ್ದೇನೆ.

ಬೃಹತ್ ಪ್ರಮಾಣದ ಗಾದೆಗಳನ್ನು ಸಂಗ್ರಹಿಸಿಕೊಟ್ಟ ದಿವಂಗತ ಹು. ಮ. ರಾಮಾರಾಧ್ಯ ಅವರಿಗೆ ಪರಿಷತ್ತು ಕೃತಜ್ಞತೆ ಸಲ್ಲಿಸುತ್ತದೆ. ಕನ್ನಡ ಜಾನಪದದಲ್ಲಿ ವಿಶಿಷ್ಟ ಸ್ಥಾನ ಪಡೆಯುವ ಈ ಗ್ರಂಥ ಪ್ರಕಟಣೆಯ ಮೂಲಕ ದಿವಂಗತರಿಗೆ ನಿಜವಾದ ಗೌರವ ಶ್ರದ್ಧಾಂಜಲಿ ಸಂದಂತಾಗಿದೆಯೆಂದು ನಾನು ತಿಳಿಯುತ್ತೇನೆ. ಮಲ್ಲೇಶ್ವರದ ಗಾಂಧಿ ಸಾಹಿತ್ಯ ಸಂಘದ ಸನ್ಮಿತ್ರರ ಸೇವೆಯನ್ನು ಈ ಸಂದರ್ಭದಲ್ಲಿ ಪರಿಷತ್ತು ಕೃತಜ್ಞತೆಯಿಂದ ಸ್ಮರಿಸುತ್ತದೆ. ಇದನ್ನು ಅಚ್ಚುಕಟ್ಟಾಗಿ ಮುದ್ರಿಸಿ ಕೊಟ್ಟ ಅಶ್ವಥ್ ಮುದ್ರಣಾಲಯದವರಿಗೂ ಕೃತಜ್ಞತೆ ಸಲ್ಲಬೇಕು.

ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಹಂಪ· ನಾಗರಾಜಯ್ಯ

ವಿಷಯಾನುಕ್ರಮಣಿಕೆ

ಭಾಗ - ೨

೭. ಗುಣಶೀಲ ಸ್ವಭಾವ

ಉತ್ತಮ ನಡೆವಳಿ

೧೦೬೫೪ ಅಗಸರ ಕಲ್ಲಾಗಿ ಸಾವಿರ ವರ್ಷ ಇರೋಕಿಂತ ಪೂಜೆಗಲ್ಲಾಗಿ ಮೂರು ದಿವಸ ಬಾಳಿದರೂ ಸಾಕು

೧೦೬೫೫ ಅಜ್ಞಾತದಲ್ಲಿ ಜಿಜ್ಞಾಸೆ ಇರಬೇಕು, ಅಜ್ಞರಲ್ಲಿ ಕನಿಕರವಿರಬೇಕು

೧೦೬೫೬ ಅತಿಶಯವಾದ ಕಾರ್ಯ ಚೆಂದ, ಮತಿಗುಂದದ ಗಾಂಭೀರ್ಯ ಚೆಂದ

೧೦೬೫೭ ಅರಸಿ ಬಂದವರನ್ನು ಅಳಿಸಿ ಕಳುಹಬಾರದು

೧೦೬೫೮ ಅರಿತವರ ಮುಂದೆ ಅಣಕಬೇಡ, ಹಿರಿಯರ ಮುಂದೆ ಹಿಗ್ಗೋದು ಬೇಡ

೧೦೬೫೯ ಅಲ್ಪ ಸಂತೋಷಿಯಾಗಬಹುದು, ಅಲ್ಪ ಮನುಷ್ಯನಾಗಬಾರದು

೧೦೬೬೦ ಆನೆಯಾಗಿ ಹುಟ್ಟಿ ಜೊಂಡು (ಕಳಿಲು, ಸೊಪ್ಪು) ಮೇಯೋಕಿಂತ, ಇರುವೆಯಾಗಿ ಹುಟ್ಟಿ ಜೂರು ಸಕ್ಕರೆ ಮೆಲ್ಲುವುದು (ಲೇಸು) ಮೇಲು

೧೦೬೬೧ *ಇಲಿಯಾಗಿ (ಆಡಾಗಿ, ಮರವಾಗಿ) ನೂರು ವರ್ಷ ಬಾಳೋಕಿಂತ, ಹುಲಿಯಾ (ಮಲ್ಲಿಗೆಯಾ)ಗಿ ಮೂರು (ದಿವಸ) ವರ್ಷ ಬಾಳೋದು ಲೇಸು

೧೦೬೬೨ ಆರಕ್ಕೆ ಹೋಗಲ್ಲ, ಮೂರಕ್ಕೆ ಬರೋಲ್ಲ

೧೦೬೬೩ ಉಗುರು ಕಡೀಬಾರ್ದು, ಬುಗುರಿ ಬಡೀಬಾರ್ದು

---

* ಹಂದಿ (ಕೆಟ್ಟವನು) ಅನ್ನಿಸಿಕೊಂಡು ನೂರು ವರ್ಷ ಬಾಳೋಕಿಂತ ನಂದಿ (ಒಳ್ಳೆಯಂವನು) ಅನಿಸಿಕೊಂಡು ಮೂರು ವರ್ಷ ಬಾಳೋದು ಮೇಲು

೧೦೬೬೪ ಊಜ (ಊಜ್ಯ)ವಾದುದನ್ನು ನೀಜವೆಂದು ಹೇಳಬಾರದು

೧೦೬೬೫ ಊರಿಗೆ ದ್ರೋಹ ಮಾಡಿ ಬದುಕಲೆಣಿಸಬೇಡ

೧೦೬೬೬ ಋಜು ಮಾರ್ಗಕ್ಕೆ ಋಗ್ವೇದ ಓದಬೇಕಾಗಿಲ್ಲ

೧೦೬೬೭ ಎತ್ತರವಾಗಿ ಬೆಳೆಯೋವರೆಗೆ ಕತ್ತಿ ಓಡೀಬ್ಯಾಡ

೧೦೬೬೮ ಎಲ್ಲ ಗುಣವೂ ಏಕತ್ರ ಇರೋದಿಲ್ಲ

೧೦೬೬೯ ಕೊಡೊ ಕೊಳ್ಳೋ ಕೇಳಬೇಡ, ನಡಪಡಿ ಬಿಡಬೇಡ

೧೦೬೭೦ ತನ್ನ ಕೇಡು ಎಣಿಸವು, ಪರರ ಒಳ್ಳೇದೆಣಿಸವು (ಹವ್ಯಕ)

೧೦೬೭೧ ತನ್ನ ನೆರಳಿಗೆ ತಾನು ಅಂಜಿ ನಡೆಯಬೇಕು, ಕ್ರಿಯೆಗೆ ತಪ್ಪಬಾರದು.

೧೦೬೭೨ ತನ್ನಂತೆ ನೆರೆ ಅಂದ್ರೆ ಚೆನ್ನ ಒಂದೇ ಕೈಲಾಸ

೧೦೬೭೩ ತನ್ನನ್ನು ಆಳದವನು ಲೋಕ ಆಳ್ತಾನ್ಯೇ ?

೧೦೬೭೪ ತಾ ಕೆಟ್ಟರೂ ನೆರೆ ಬಾಳಲಿ

೧೦೬೭೫ ತಾನು ಒಳ್ಳೆಯವನಾದರೆ ನಾಡೆಲ್ಲ ಒಳ್ಳೆಯದು

೧೦೬೭೬ ತಾ ನೆಟ್ಟಗಿದ್ದರೆ ಜಗವೆಲ್ಲ ನೆಟ್ಟಗೆ

೧೦೬೭೭ ಕಿರಿದೂರದಲ್ಲಿ ಮೆರೀಬೇಡ, ಮರೆದ ಊರಲ್ಲಿ ತಿರೀಬೇಡ

೧೦೬೭೮ ತುಂಬಿದ ಕೆರೆಗೆ ಕಲ್ಲಿಡಬಾರದು

೧೦೬೭೯ ತುಂಬಿದವರ ಕೂಡ ತುಳುಕಾಡಬಾರದು

೧೦೬೮೦ ದೃಷ್ಟಿ ಚೆನ್ನಾಗಿದ್ರೆ ಸೃಷ್ಟಿಯೆಲ್ಲ ಒಳ್ಳೆಯಂದೇ

೧೦೬೮೧ ದುಡ್ಡಿಗೆ ಬಡತನವಾದರೂ ಮನಸ್ಸಿಗೆ ಬಡತನವಿರಬಾರದು

೧೦೬೮೨ ದೇವರಿಗೆ ಅಂಜದವನಿಗೆ ನೀನು ಅಂಜು

೧೦೬೮೩ ದೊಡ್ಡ ಮನಸ್ಸಿನಿಂದ ದೊಡ್ಡಸ್ತಿಕೆ ಬರುವುದು

೧೧೬೮೪ ದೊಡ್ಡವರ ಜೊತೆಯಲ್ಲಿ ಕುಳಿತು ಒಡ್ಡಾದ ಹಣ್ಣು ತಿನ್ನಬಾರದು

೧೦೬೮೫ ದೊಡ್ಡವರ ಮನಸ್ಸು ಯಾವಾಗ್ಲೂ ದೊಡ್ಡದೇ

೧೦೬೮೬ ನಯವಿದ್ದರೆ ಭಯವಿಲ್ಲ

೧೦೬೮೭ [1]ನಿಯಿತ್ತಿದ್ದರೆ ಬರ್ಕತ್ತು

೧೦೬೮೮ ನೀಟಾಗಿ ನಡೆದರೆ ಕಾಟಬಾರದು

೧೦೬೮೯ ನೆಲದಗುಣ ನೀರಿಗೆ, ನಾಡಿನ ಗುಣ ಜನರಿಗೆ

೧೦೬೯೦ ನೋಟವಿಲ್ಲದೆ ಓಡಿದರೆ ಕಾಟ ತಪ್ಪದು

೧೦೬೯೧ ಪದಕಕ್ಕಿಂತ ಬದುಕು ಮೇಲು

೧೦೬೯೨ ಪರಾಮೋಷಿಯಾದರೂ ಪಡಪೋಸಿಯಾಗಬಾರದು

೧೦೬೯೩ ಪರಿಮಳದ ಹೂ ಪರಿಮಳದಲ್ಲೇ ಇರಬೇಕು

೧೦೬೯೪ ಪ್ರಾಮಾಣಿಕತನದಿಂದಲೇ ಪರಮಾರ್ಥ, ಮಿತಾಹಾರದಿಂದಲೇ ಮೈಕಟ್ಟು

೧೦೬೯೫ ಬಡತನ ಬಂದರೂ ದೊಡ್ಡತನ ಹೋಗಬಾರದು

೧೦೬೯೬ [2]ಬಾದಿ ಇಲ್ಲದ ಮನುಷ್ಯ ಬೂದಿಗೆ ಸಮಾನ

೧೦೬೯೭ ಬೇರೆಯವರನ್ನು ನೋಯಿಸೋಕಿಂತ ಬಂದಕಷ್ಟ ಸಹಿಸೋದೇ ಮೇಲು

೧೦೬೯೮ ಮಟ್ಟು ತಿಳಿದವರ ಸಂಗಡ ಹೆಟ್ಟ್ಯಾಡಬಾರದು

೧೦೬೯೯ ಮಾಡಿ ಮನೆಗೆ ತಕ್ಕ ಮಡದಿ ಕೂಡು

---

1 ಕೈಸಾ ನಿಯತ್ ವೈಸಾ ಬರ್ಕತ್

2 ಬಾದಿ = ತೂಕ, ಗಾಂಭೀರ್ಯ, ದೊಡ್ಡತನ

೧೦೭೦೦ ಮುಳ್ಳು ಮೊನೆಯಷ್ಟು ಅಸ್ಪದ ಕೊಡದವನ ತಳ್ಳಿಗೆ ಹೋಗಬೇಡ

೧೦೭೦೧ ಯಾರ್ರು ಸಾಜ, ಅವನೆ ರಾಜ

೧೦೭೦೨ ಲೇಸಾಗುವಾಗ ಘಾಸಿಗೊಳ್ಳಬಾರದು

೧೦೭೦೩ ಲೇಸಾಗಿಕೊಂಡು ಐದುದಿನ ಬದುಕಿದರೆ ಸಾಲದೆ ?

೧೦೭೦೪ ಲೋಕದ ಸುಖವೇ ತನ್ನ ಸುಖ, ಲೋಕದ ಕಷ್ಟವೇ ತನ್ನ ಕಷ್ಟ

೧೦೭೦೫ ಶ್ರಾದ್ಧ ಮಾಡಿ ಒಡೆ ತಿನ್ನುವುದಕ್ಕಿಂತ ಮದುವೆ ಮಾಡಿ ಒಬ್ಬಟ್ಟು ತಿನ್ನುವುದು ಲೇಸು

೧೦೭೦೬ ಸುಖ ಮೆರೆ, ಅಸುಖ ತೊರೆ

೧೦೭೦೭ ಶುಭಸ್ಯ ಶೀಘ್ರಂ, ಅಶುಭಸ್ಯ ಕಾಲಹರಣಂ

೧೦೭೦೮ ಸರ್ವರಿಗೂ ಸಮ ಸಿದ್ಧಯ್ಯ

೧೦೭೦೯ ಸರೀಕರಲ್ಲಿ ಸಾಧಿಸಿ ಕಲಿ

೧೦೭೧೦ ಓಡಿದವರ ಕೈಗನ್ನಡಿಯಾಗಿರಬೇಕು

೧೦೭೧೧ ಹೊಡೆಯುವವರಿಗೆ ಬೆನ್ನು ಕೊಡು, ಹಿಡಿಯುವವರಿಗೆ ಮುಂದಲೆ ಕೊಡು

ದೊಡ್ಡವರು ಮಾಡಿದ್ದೇ ಪದ್ಧತಿ

೧೦೭೧೨ ಆನೆ ಹುಟ್ಟಿದ್ದೇ ಸಂದು, ಸೆಟ್ಟಿ ಬಿಟ್ಟ (ಇಳಿದಲ್ಲೇ, ಕುಂತ)ದ್ದೇ ಪಟ್ಟಣ

೧೦೭೧೩ ಆನೆ ಹೋದದ್ದೇ ಹಾದಿ, ಹಾವು ಹರಿದದ್ದೇ ಮಾರ್ಗ

೧೦೭೧೪ ದೊಡ್ಡವರು ಹೋದ ದಾರಿಯೇ ದಾರಿ

೧೦೭೧೫ ಮಹಾನುಭಾವರು ಮಾಡಿದ್ದೇ ಪದ್ಧತಿ

೧೦೭೧೬ ಹತ್ತು ಜನ ನಡೆದದ್ದೇ ರಾಜಪಥ

೧೦೭೧೭ ಹತ್ತಿರ ತುಳಿದದ್ದೇ ಹಾದಿ

ಗೆಳೆತನ

೧೦೭೧೮ ಅಕ್ಕಿ ತಿನ್ನುವ ಹಕ್ಕಿಗೆ ಅರಸು ಗರುಡ (ಸಿಂಹ)ನ ಸಹವಾಸವೇ?

೧೦೭೧೯ ಅಟ್ಟಿ ಹೊಸದಿರಬೇಕು, ಮಿತ್ರರು ಹಳೆಯವರಿರಬೇಕು

೧೦೭೨೦ ಅಡ್ಡ ಮಾತು, ಹೆಡ್ಡನಕುಣಿತ, ದಡ್ಡನ ಸ್ನೇಹ–ಈ ಮೂರೂ ಕೆಡಕು

೧೦೭೨೧ ಅತಿಸ್ನೇಹ ಮತಿ ಕೆಡಿಸಿತು

೧೦೭೨೨ ಅತಿಯಾದ ಸ್ನೇಹ, ಪತಿವ್ರತೆಯ ಮೋಹ

೧೦೭೨೩ ಅತಿಸ್ನೇಹ ವಿಷಮಕ್ಕೆ ಕಾರಣ

೧೦೭೨೪ ಅರಿತು ಮಾಡಿದರೆ ಸ್ನೇಹ, ಬೆರೆದು ಕೂಡಿದರೆ ಮೋಹ

೧೦೭೨೫ ಅಸಿ ಕಲ್ಲಿಗೂ ಹಪ್ಪಳದ ಹಿಟ್ಟಿಗೂ ನಂಟು

೧೦೭೨೬ ಆನೆಗೂ ಸಿಂಹಕ್ಕೂ ಸ್ನೇಹ ಸಾಧ್ಯವೆ ?

೧೦೭೨೭ ಎಣೆಯಿಲ್ಲದವನ ಸಂಗಡ ಗೆಣೆತನ ಬೇಡ

೧೦೭೨೮ ಎಲೆ ಹೆಂಟೆ ಸ್ನೇಹದ ಹಾಗೆ

೧೦೭೨೯ ಕಲೆಯುವುದು ಇಷ್ಟ, ಅಗಲುವುದು ಕಷ್ಟ

೧೦೭೩೦ ಗುಣ ತಿಳಿದು ಗೆಣೆತನ ಮಾಡು

೧೦೭೩೧ ಗೆಣೆಗೆ ಗೆಣಸುಬೇಡ, ಹುಣಿಸೆಗೆ ಹುಳಿಬೇಡ

೧೦೭೩೨ ಗೆಳೆತನದ ಗುಣ ಬಡತನದಲ್ಲಿ ನೋಡು

೧೦೭೩೩ ಗೆಳೆಯರಿಲ್ಲದ ಗ್ರಾಮ ಗೋಂಡಾರಣ್ಯ

೧೦೭೩೪ ಜೊತೆಗಾರ ಹೋಗಿ ವ್ಯಥೆ ಆರಂಭಿಸಿತು

೧೦೭೩೫ ಜೊತೆಗಾರನ ಸಂಗಡ ಮಂಥನಿಸಬಾರದು

೧೦೭೩೬ ದಡ್ಡ ಮಿತ್ರನಿಗಿಂತ *ಜಾಣ ಶತ್ರು ಶ್ರೇಷ್ಠ

೧೦೭೩೭ ಬಂಗಾರವನ್ನು ಬೆಂಕಿಯಲ್ಲಿ ಪರೀಕ್ಷಿಸಬೇಕು, ಸ್ನೇಹಿತರನ್ನು ಕಷ್ಟದಲ್ಲಿ ಪರೀಕ್ಷಿಸಬೇಕು

೧೦೭೩೮ ಬಿಟ್ಟು ಆಡುವ ಗೆಳೆಯು ಹರಕು ತೊಗಲಿನ ಮಿಣಿಯು

೧೦೭೩೯ ವೀರಣ್ಣನ (ಲಿಂಗದ) ಮುಂದೆ ಬಸವಣ್ಣ

೧೦೭೪೦ ಸಂಗತಿ ಗುಣ ಸೋ (ಸಾ) ತು ನೋಡು, ಹೆಂಡತಿ ಗುಣ ಹೇತು ನೋಡು

೧೦೭೪೧ ಸಂಗತಿ ಬಿಡಿಯೊ, ಬಾಳೆಹಣ್ಣು ಸಿಹಿಯೊ ?

೧೦೭೪೨ ಸ್ನೇಹಿತರೊಡನೆ ಸತ್ತರೆ ಶೋಭಾನೆ ಹಾಕಿಸಿಕೊಂಡಂತೆ

೧೦೭೪೩ ಕೌದೆಯವನಿಗೂ ಸೊಪ್ಪಿನವನಿಗೂ ಸಂಗಡವಾ ?

೧೦೭೪೪ ಹಲವರ ಸಂಗ ಕಲಹಕ್ಕೆ ಕಾರಣ

೧೦೭೪೫ ಹಳೆಯ ಗೆಳೆತನವಿದ್ದರೆ ಹಗೇವಿನಲ್ಲಿ ಜೋಳವಿದ್ದ ಹಾಗೆ

ಸಜ್ಜನ ಸಂಗ

೧೦೭೪೬ ಅಜನಾಗಬೇಕಾದರೆ ಸುಜನರ ಸಂಗಬೇಕು

೧೦೭೪೭ ಉರಿದರೆ ದೀಪ, ಕೊತ್ತಿದರೆ ತಾಪ

೧೦೭೪೮ ಒಳ್ಳೆಯವರ ಗುಣ ಮಲ್ಲಿಗೆ ಹಾಗೆ

೧೦೭೪೯ ಕಚ್ಚಿದರೆ ಕಬ್ಬು, ಹಿಂಡಿದರೆ ಜೇನು

---

*ಬುದ್ಧಿವಂತನ ಹಗೆ ಲೇಸು

೧೦೭೫೦ [1]ಗಾಣಿಗ (ಇದ್ದಲಿನವ, ಸಗಣಿಯುವ)ನ ಸ್ನೇಹ (ಸರಸ)ಕ್ಕಿಂತ ಗಂಧದವನ ಗುದ್ದಾಟ ಲೇಸು

೧೦೭೫೧ ದಡ್ಡರ ಒಡೆಯನಾಗಿರುವುದಕ್ಕಿಂತ, ಜಾಣರ ಸೇವಕನಾಗಿರೋದು ಲೇಸು

೧೦೭೫೨ ದೊಡ್ಡವರ ಸಂಗ, ಗೆಜ್ಜೆ ಮೇಲಿನ ಲಿಂಗ

೧೦೭೫೩ ದೊಡ್ಡೋರ್ಸಂಗ ಗುಡಿಯೊಳಗಲ ಲಿಂಗ, ಹೈಕಳ ಸಂಗ ಅವಮಾನ್ಭಂಗ

೧೦೭೫೪ ನರಕದಲ್ಲಿ ದೊರೆಯಾಗಿರೋಕಿಂತ, ಸ್ವರ್ಗದಲ್ಲಿ ಆಳಾಗಿರೋದು ಲೇಸು

೧೦೭೫೫ ನಿಂದೆ ಮಾಡಿದರೂ ಸಂದ ಸಜ್ಜನ ಲೇಸು

೧೦೭೫೬ ಮುಗಳಿಯು ನೆರಳಿಗಿಂತ ನುಂಗುವ ನೆಗಳು ವಾಸಿ

೧೦೭೫೭ ಮೊಗತಿ ಸಂಗಡ ಮೂರು ಮುತ್ತು ಕೊಂಬೋದಕ್ಕಿಂತ ಗಾಣತಿ ಸಂಗಡ ಮೂರು ಗುದ್ದೇಲೇಸು

೧೦೭೫೮ ಸಕಲಾತಿ ಹೊದಿಯುವವನ ಸಂಗ ಮಾಡಿದರೆ ಕಂಬಳಿಯಾದರೂ ಹೊದೀಬಹುದು. ಕಂಬಳಿ ಹೊದಿಯುವವನ ಸಂಗ ಮಾಡಿದರೆ ಏನು ಹೊದೀಬಹುದು.

೧೦೭೫೯ ಸಜ್ಜನರ ಸಂಗಮಾಡು, ಮಧ್ಯಾಹ್ನದ ಪುರಣಕೇಳು

೧೦೭೬೦ ಹೂವನ್ನು ತಿಕ್ಕಿದರೇ ಒಂದು ವಾಸನೆ, ಮುಡಿ (ಮೂಸಿ)ದರೇ ಒಂದು ವಾಸನೆ

೧೦೭೬೧ [2]ಹೂವಿನಿಂದ ನಾರು ಸ್ವರ್ಗಸೇ (ಮುಡಿಗೇ, ಮಂಡೆಗೇ)ರಿತು

---

1 ಸಲಗೆಟ್ಟವನ ಹತ್ತಿರ ಸಂದೇನ ಕುಂತಿರುವ ಗಂಧವನ ಹತ್ತಿರ ಒಂದುಗಳಿಗೆ ಕುಂತಿದ್ದಾ.

2 ಮಲ್ಲಿಗೆ ಹೂವಿನಿಂದ ಬಾಳೆಯ (ಪಟ್ಟೆ ಕೈಲಾಸ ಸೇರಿತ್ತು) ನಾರು (ಹಗ್ಗ) ಪಾವನವಾಯಿತು.

ಅನ್ಯಾಯಕಾರ

೧೦೭೬೨ ಅನ್ನೆಕಾರ್ರಗೆ ಹನ್ನೆರಡು ಜನ ಗಂಡ್ಮಕ್ಕಂತೆ

೧೦೭೬೩ ಅನ್ಯಾಯ ತನ್ನ ಬೆನ್ಬಿಡ್ದು

೧೦೭೬೪ ಅನ್ಯಾಯದ ಹೊನ್ನು ಹೊರಸಿದವ್ರ ಬ್ಯಾಡ

೧೦೭೬೫ ಅನ್ಯಾಯ ಮಾಡಿ ಹೊನ್ನರಳಿ ಮರ ಸೇರ್ದಂಗೆ

ದುಷ್ಟ

೧೦೭೬೬ ಅಂತೆಯಲ್ಲಿ ಚತುರನಾದವ ಪರರ ನೀತಿ ಬಯಸ್ಯಾನೆ ?

೧೦೭೬೭ ಈಶ್ವರ ಧರಿಸುವ ಹಾವು
ಅವನ ಮಗ ಹತ್ತುವ ಇಲಿಯನ್ನು ತಿಂದ ಹಾಗೆ

೧೦೭೬೮ ಊರಿದ್ದ(ಲ್ಲಿ) ಕಡೆ ಹೊಲಗೇರಿ, ನೀರಿದ್ದಲ್ಲಿ ಕೆಸರು

೧೦೭೬೯ ಊರು ಒಳ್ಳೇದು ಉತ್ಪಾತಕರ ಕಾಟ,
ನೀರೊಳ್ಳೇದು ಮೊಸಳೆ ಕಾಟ

೧೦೭೭೦ ಒಂಟಿಗನಾದರೂ ತಂಟೆ ಬಿಡಲಿಲ್ಲ

೧೦೭೭೧ ಕಾಲಿಗೆ ಬೀಳುವ ನೀಚ ಕಾಲು ಕಚ್ಚ್ಯಾನು

೧೦೭೭೨ ಚರ್ಮ ಕಡಿಯೋ ನಾಯಿಗೆ ಧರ್ಮಕರ್ಮ ಹೇಗೆ ತಿಳಿಯಬೇಕು?

೧೦೭೭೩ ದನ ಕಾಲು ತುಳಿದರೆ ಅದರ ಕಾಲ್ನೇ ತುಳಿಯೊ ಮನುಷ್ಯ

೧೦೭೭೪ ದುಷ್ಟನಿಗೆ ಕಷ್ಟ ಬಂದರೂ ನಿಷ್ಠುರ ಗುಣ ಬಿಡಲಾರ

೧೦೭೭೫ ದುರ್ಯೋಧನನಿಗೆ ಒಳ್ಳೆಯವರು ಗೊತ್ತಿಲ್ಲ,
ಧರ್ಮರಾಯನಿಗೆ ಕೆಟ್ಟವರು ಗೊತ್ತಿಲ್ಲ

೧೦೭೭೬ ನರಡು ಮನುಷ್ಯ ಕೊರಡಿಗೆ ಸಮಾನ

೧೦೭೭೭ ನಾಯಿಗೆ ಗೊತ್ತೆ ಒಳ್ಳೇದು

೧೦೭೭೮ ನಾರುವ ಬೇರಿನ ನಾತವೇ ಬೇರೆ

೧೦೭೭೯ *ನೀಚ ಜನ್ಮವನ್ನು ನಾಯಿಯೂ ಹೊರೆಯುವುದಿಲ್ಲ

೧೦೭೮೦ ನೀಚನಿಗೆ ಊಚವಸ್ತು ಕೊಟ್ಟರೂ ನಾಚಿಗ್ಗೇಡಿತನ ಹೋದೀತೆ ?

೧೦೭೮೧ ನೆಲದೊಳಗಿದ್ದರೂ ಖಲನಿಗೆ ಹೆದರಬೇಕು

೧೦೭೮೨ ಪಾದಕ್ಕೆ ಬಿದ್ದರೂ ನಾಗಪ್ಪ ಕಚ್ಚದೆ ಬಿಡ

೧೦೭೮೩ ಪಿತೂರಿ ಮಾಡುವವನಿಗೆ ಪಿತೃವೇನು, ಮಾತೃವೇನು?

೧೦೭೮೪ ಪಿತೂರಿ ಮಾಡುವವ (ಪಿತನಿಗೆ ಬಲ್ಲನೆ ?) ಪಿತನನ್ನು ಬಿಟ್ಟಾನೆ ?

೧೦೭೮೫ ಪುಂಡನಾದವ ಉಂಡಸಕ ಹೋಗ

೧೦೭೮೬ ಬಡವರ ಮುಂದೆ ಬಂಟ, ಬಲ್ಲಿದರ ಮುಂದೆ ಕುಂಟ

೧೦೭೮೭ ಮನೆತನಕ್ಕೆ ಮದ್ದು ಹಾಕುವ ಮನುಷ್ಯ

೧೧೭೮೮ ಯಾರು ಮುತ್ತು ಕೊಟ್ಟರೂ ಚೇಳು ಮುತ್ತು ಕೊಟ್ಟೀತೆ?

೧೦೭೮೯ ರೊಕ್ಕ ಕೊಟ್ಟು ಪಕ್ಕದವನನ್ನು ಕೆಡಿಸಿದ

೧೦೭೯೦ ಶೇಷನೇ ಇರುವಾಗ ವಿಷಕ್ಕೆ ಕಡಿಮೆಯೇ?

೧೦೭೯೧ ಸರಳು ಹೋದಾಕ್ಷಣ ದುರುಳತನ ಬಿಟ್ಟಾನೆ?

೧೦೭೯೨ ಹಸು (ಹಪ್ಪ) ತಿನ್ನೋ ಹುಲಿ ಎತ್ತಿಗೆ ದಾರಿ ಬಿಟ್ಟೀತೆ?

೧೦೭೯೩ ಹಂಸದಂಥ ಪಕ್ಷಿಯಿಲ್ಲ, ಕಂಸನಂಥ ರಾಕ್ಷಸನಿಲ್ಲ

೧೦೭೯೪ ಹುಲಿಯಾ ! ಅಂದರೂ ತಿನ್ನುತ್ತದೆ,
ಹುಲಿಯಪ್ಪಾ ! ಅಂದರೂ ತಿನ್ನುತ್ತದೆ

೧೦೭೯೫ ಹೂವಿದ್ದ ಕಡೆ ಮುಳ್ಳುಂಟು

---

* ನಾಯಿಯೂ ಹೊಟ್ಟೆ ಹೊರೆಯಲ್ವೆ ?

೧೦೭೯೬ ಸತ್ತ ತಾಯಿಗೆ ಲಾಡಿ ಬಿಚ್ಚಿದ್ನ

ತುಂಟ

೧೦೭೯೭ ಅತ್ತೆ ಮನೆ ತೋರಿಸು ಅಂದ್ರೆ ಹೇತ ಕುಂಡೆ ತೋರಿಸ್ದ

೧೦೭೯೮ 'ಇಷ್ಟು ಹೊತ್ತಿನ ತನಕ ಎಲ್ಲಿ ಹೋಗಿದ್ದೆ ?' ಅಂದ್ರೆ
'ನಿಲಂಕದ ಮನೆಗೆ ಕಲ್ಲು ಒಗೆಯೋಕೆ' ಅಂದ

೧೦೭೯೯ ಎಲ್ಲರಿಗೂ ನಂಟ, ನಾಳಕ್ಕೆ ನಿಂತ ತುಂಟ

೧೦೮೦೦ ಕಾಟದ ಮಲ್ಲ ಕೋಟಿಗೆ ಬಂದ

೧೦೮೦೧ ಗಂಟ್ಲು ಗಿಡ ತಂಡೆ ಮಾಡ್ತನೆ

೧೦೮೦೨ ತುಂಟ ಹುಡುಗನಲ್ಲಿ ಕಾಡಿದಾಗ ತಂಟೆ ಮಾಡದ ಸಂಸಾರ

೧೦೮೦೩ ತುಂಟನ ನಂಟು ಸಲ್ಲ, ಬಂಟನಾಗಿ ಹೋಗಲು ಸಲ್ಲ

೧೦೮೦೪ ತುಂಟನ ಮನೆಗೆ ನಂಟರು ಬಂದರೆ ಹೆಂಟೆಗಿಂತ ಕಡೆ

೧೦೮೦೫ ತುಂಟನಾದರೆ ತಂಟೆ ತೀರದೆ ?

೧೦೮೦೬ ತುಂಟನಿಗೆ ನಂಟರೆಲ್ಲ ಬಂಟರು

೧೦೮೦೭ ತುಂಟ ತುಂಟನಿಗೆ ಗಂಟು ಬಿದ್ದರೆ ಗಂ(ಟು)ಟೆ ಆಗತನ ಗಮ್ಮತ್ತ

ಪೋಲಿ

೧೦೮೦೮ ಊರ ಮೇಲೆ ಊರು ಬಿದ್ದರೂ
ಅವನ ಮೇಲೆ ಒಂದು ತಾರ ಸಹ ಬೀಳಲಿಲ್ಲ

೧೦೮೦೯ ಕೇಳಿ ನೊಂಬಿನ ಮಾತನೆಯೋ ಬೇರೆ.
ಪೋಲಿಗಳ ಬುದ್ದಿಯೋ ಬೇರೆ

೧೦೮೧೦ ಕೋಳಿಯಾಗಲಿ, ಹೋರಿಯಾಗಲಿ
ಪೋಲಿ ಮಾಡುವವನಿಗೆ ಬೇಡ ಏನಿಲ್ಲ

೦೦೨೨೧ ಪೋಲಿ ಕೈಗೆ ಪೈಸೆ ಕೊಟ್ಟರೆ ಖಾಲಿ

೦೦೨೨೨ ಪೋಲಿ ದನದೊಡೆಯನಿಗೆ ಕೊಳಕಾಯಿ ಆದೀತೆ ?

೦೦೨೨೩ ಪೋಲಿ ದನಕ್ಕೆ ಬಾಲ ಕಟ್ಟಿದರೆ ಬಾಲ ಬಾಲ, ಪೋಲಿ ಪೋಲಿ

೦೦೨೨೪ ಪೋಲಿಯಾದವನ ಜೊತೆಕ್ಕೆ ಹೋದರೆ ಬಾಳೀ ?

೦೦೨೨೫ ಸಂದೇಹ ಸರ್ಪ, [illegible]

೦೦೨೨೬ ಹುಟ್ಟಿಗೇಡಿ ಮುಂದೆ ಹುಲ್ಲು
ಹಾಕಿದರೆ ಗಂಡು ಕಟ್ಟ್ಯಾರು ಗುಡ್ಡಕ್ಕೆ ಬಿಟ್ರು

ದುಷ್ಟ ಯಶಾಪ್ರದಕ್ಕೆ ಹೆದರ

೦೦೨೨೭ ಅಧರ್ಮಕ್ಕೆ ದೇಸ, ಅಮಾನ್ಯಕ್ಕೆ ಹೆದರ, ಅನ್ಯಾಯದಲ್ಲಿ ಚದುರ

೦೦೨೨೮ ಪತ್ರಿ ಹಾಕಿದರೆ ಒಡೆಯ. ಒಳಿದರೆ ನಾಯ

೦೦೨೨೯ ಹಣ ಇಲ್ಲದವ ಬಡಕ್ಕೆ ಹೇಸ

೦೦೨೩೦ ಒಂಟಿ ಬಡಕ (ಒಂಟರ್ ಬಿಟ್ಟರೆ) ಸುಂಟರ ಗಾಳಿ

೦೦೨೩೧ ಸರಟು ಮನುಷ್ಯ ಒರಟಾಗುತ್ತಾನೆ

೦೦೨೩೨ ಬೋಳು ಮನೆ ದಾಳಿಗೆ ಅಂಜೀತೆ ?

೦೦೨೩೩ ಬೋಳು ಮರ ಗಾಳಿಗೆ (ಹೆದರದು) ಬಿಂಕ

೦೦೨೩೪ [1]ತಂಡ ಮುಂಡ ವಾಸುದೇವ

೦೦೨೩೫ ಒಡೆದರೆ ದೋಣಿ, ತಂದರೆ ಗದ್ದೆ

---

1 ತಂಡೋ ಮುಂಡೋ ವಾಸುದೇವ
–ಶಿಂಡಾ ಮುಂಡಾ ವಾಸುದೇವ (ತ)

ದುಷ್ಟರನ್ನು ಕೆಣಕಬಾರದು

೧೦೮೨೬ ಅಲ್ಪನ ಮುಂದೆ ಹಲ್ಲು ಕಿರೀಬೇಡ,
ದುಷ್ಟನ ಮುಂದೆ ಕಾಲು ಕಿರೀಬೇಡ

೧೦೮೨೭ ಎಕ್ಕಡ ಕಾಲು ಕಚ್ಚಿತು ಅಂತ ಅದನ್ನು ಕಚ್ಚಲಾದೀತೆ ?

೧೦೮೨೮ ಕೀಳ ಕೆಣಕಬೇಡ, ಹಾಳ (ಹುಳ) ಮುಟ್ಟಬೇಡ

೧೦೮೨೯ ಕೀಳರನ್ನು ಕೆಣಕಬೇಡ, ಮೋಗಾಲು ತುರಿಸಬೇಡ

೧೦೮೩೦ ಸುರೆ ಚೆಲ್ಲಿದರೆ ಮೋರೆ ಮೇಲೆ ಬೀಳದೆ ?

೧೦೮೩೧ [1]ಹೇಸಿಕೆ (ಕೊಳಚೆ) ಮೇಲೆ ಕಲ್ಲು (ಹೆಂಟೆ) ಹಾಕಿದರೆ
ಮೋರೆ ಮೇಲೆ ಸಿಡಿಯುತ್ತೆ

ದುಸ್ಸಂಗ

೧೦೮೩೨ ಅಲ್ಪ (ನೀಚ, ಸಲುವಲ್ಲದವ)ರ ಸಂಗ ಅಭಿಮಾನ ಭಂಗ

೧೦೮೩೩ ಉಚ್ಚೆ ಕುಡಿದರೂ ಲುಚ್ಚ ಸಂಗಬೇಡ

೧೦೮೩೪ ಕತ್ತೆಯ ಸಂಟಸ್ತನಕ್ಕೆ ಲತ್ತೆಯೇ ಫಲ

೧೦೮೩೫ ಕಾಗೆಗಳ ಗುಂಪಿನಲ್ಲಿ ಕೋಗಿಲೆ ಮರಿ ಬದುಕುತ್ಯೇ?

೧೦೮೩೬ [2]ಕಾಲ ಸೋಂಕಿ (ತೊಂತಿ, ಸುತ್ತಿ) ದ
ಹಾವು ಕಚ್ಚದೆ ಬಿಡುತ್ಯೇ?

೧೦೮೩೭ ಕಚ್ಚಿನ ಕಪಿ ಅಂತ ಗೊತ್ತಿದ್ದರೂ ಕಚ್ಚೇಲಿ ಕಟ್ಟಿಕೊಳ್ಳೋದೇಕೆ?

೧೦೮೩೮ ಕುಜನರ ಸಂಗ ಅಜನಿಗೂ ಬೇಡ

೧೦೮೩೯ ಕೊಟ್ಟರೂ ಬೇಡ ಕೆಟ್ಟವರ ಸಹವಾಸ

---

1 (i) ಹೇಲು ಕೆಣಕಿ ಮೋರೆ ಮೇಲೆ ಸಿಡಿಸಿಕಂಡಂಗೆ
(ii) ಹೊಲಸು ರಾಶಿ ಮೇಲೆ ಕಲ್ಲೆತ್ತಿ ಹಾಕಿದರೆ ಮೈಯೆಲ್ಲ ಹೊಲಸು

2 ಕೊರಳಿಗೆ ಸುತ್ತಿದ (ಮಗ್ಗುಲಲ್ಲಿರುವ) ಹಾವು ಕಚ್ಚದೆ ಬಿಡುತ್ಯೆ ?

೧೦೮೪೦ ಬೋಡಿ ಕಕ್ಕೊಂಡು ಕೊಲ್ಲಾಪುರಕ್ಕೆ ಹೋದರೆ
ಬೇಡಿ ಮುನ್ಯಾಗ ಸಹಿತ ಬೇಡ ಬೇಡ ಅಂತಿದ್ದರು

೧೦೮೪೧ ಚೇಳಿಗೆ ಮುತ್ತು ಕೊಟ್ಟ ಹಾಗೆ

೧೦೮೪೨ ತುಚ್ಛನ ಸಂಗಡ ಬಾಳೋಕಿಂತ
ಹುಚ್ಚನ ಸಂಗಡ ಬಾಳೋದು ವಾಸಿ

೧೦೮೪೩ [1]ದುರುಳರ ಕಂಡರೆ ದೂರ ತೆರಳು

೧೦೮೪೪ ದುರುಳರ ಜೊತೆ ಸೇರಿದರೆ ಕರೆ ಕರೆ

೧೦೮೪೫ ದುಷ್ಟರ ಸಂಗ ಕೇಡಿಗೆ ಕಾರಣ

೧೦೮೪೬ ದುಷ್ಟರ ಸಹವಾಸಕ್ಕಿಂತ ಏಕಾಂಗಿಯಾಗಿ ಬಾಳೋದು ವಾಸಿ

೧೦೮೪೭ ದುಷ್ಟುಳ್ಳ ದೇವರಿಗೆ ದೂರದಲ್ಲೇ ಶರಣು

೧೦೮೪೮ ನಾಯಿ ಕೂಡಿ ನಾತ ಕುಡಿದಂಗೆ

೧೦೮೪೯ ನಾಯಿ ತಡವಿ ಲಕ್ಷಣ ಕಳಕೊಂಡಂತೆ

೧೦೮೫೦ [2]ನಾಯಿ ಸಂಗ ಶಾಲೆ ಕೇಡು

೧೦೮೫೧ [3]ನೀಚರ ಗೋಷ್ಠಿ ನಾಚಿಗ್ಗೇಡು

೧೦೮೫೨ ನೀಚರ ಸಂಗ ಈಚಲ ನೀರು,

೧೦೮೫೩ ಸಪ್ಪೆ ಅನ್ನಕ್ಕಿಂತ ಉಪ್ಪುಗಂಜಿ ಲೇಸು

೧೦೮೫೪ '[4]ಸನ್ಯಾಸಿ ಕಚ್ಚಿದ ನಾಯಿ ನರಕ (ಪಾತಕ)ಕ್ಕೆ ಹೋಗೋವರೆಗೆ
(ಈಗಿನ ಯಾತನೆ ಹೇಳು) ಕಾಲು ಕೊಳೆಯುದೆ ಇದ್ದೀತೆ ?

---

1 ದುಷ್ಟನ ಕಂಡರೆ ದೂರ ಸರಿ

2 ನೀಚರ ಸಭೆಗೆ ಹೋದರೆ...

3 (i) ನೀಚರಿಗಿಂತ ಈಚಲು ವಾಸಿ
(ii) ನೀಚರ ಸಂಗವೂ ಈಚಲ ನೀರೂ ನಾಚಿಕೆ ಕೆಡಿಸುವುದು

4 (i) ನಾಯಿ ಸಾಯುವವರೆಗೆ ಕಾಲು ಕೊಳೆಯದೆ
(ii) ನಾಯಿ ಕೊಂದವನು ನರಕಕ್ಕೆ ಹೋಗುವ ಹೊತ್ತಿಗೆ ನೋವು ತಿನ್ನುವುದು ಕಷ್ಟ?

೧೦೮೫೫ 'ಹತ್ತದಿರು ಗೆದ್ದಲೆ !' ಅಂದರೆ
'ನನ್ನ ಕೆಲಸವೇ ಅದು' ಎಂದಿತಂತೆ

೧೦೮೫೬ ಹಾದಿ ತಪ್ಪಿ ಕೆರೆ ಹೊಕ್ಕ ಹಾಗೆ

೧೦೮೫೭ ಹಾವಿಗೆ ಹಲ್ಲಲ್ಲೂ ವಿಷ, ಬಾಲ್ದಲ್ಲೂ ವಿಷ

೧೦೮೫೮ ಹೀನನ ಸಂಗ ಮಾನಿಗಾಗದು. ಮಾನಿ ಸಂಗ ಹೀನನಿಗಾಗದು

೧೦೮೫೯ ಹುಚ್ಚನಾಯಿ ಒಡೆಯ ಅಂತ ಬಿಡುತ್ಯೇ ?

೧೦೮೬೦ ಹೋರಿಗೂ ಮಾರಿಗೂ ದೂರ ಇರು

ದುಷ್ಟರ ನಡುವಣ ಸಜ್ಜನನ ಸ್ಥಿತಿ

೧೦೮೬೧ ಉರಿ ಎಡೇಲಿ ಸಸಿ ನಿಂತಂಗೆ

೧೦೮೬೨ ಕಾಗೆ ಮಧ್ಯೆ ಹಂಸೆ ಇದ್ದಹಾಗೆ

೧೦೮೬೩ [1]ಕಾಗೆ ಹಿಂಡಿನಲ್ಲಿ ಕೋಗಿಲೆ ಇದ್ದಹಾಗೆ

೧೦೮೬೪ [2]ಸೀಗೆ ಒಳಗಿನ ಬಾಳೆ ಹಾಗೆ

ದುಷ್ಟರ ನಡುವೆ ಎಚ್ಚರಿಕೆಯಿಂದಿರಬೇಕು

೧೦೮೬೫ ಸ್ನೇಹಿತರ ಮನೆಗೆ ಹೋಗದೆ ಇರಬೇಡ,
ನಿಚ್ಚ ಮುಂಡೆ ಪಟ್ಟಣದಲ್ಲಿ ನಿದ್ದೆ ಮಾಡಬೇಡ

೧೦೮೬೬ ಹಲ್ಲುಗಳ ಮಧ್ಯೆ ನಾಲಗೆ ಇದ್ದ ಹಾಗೆ

೧೦೮೬೭ ಹುಚ್ಚು ಮುಂಡೆ ಪಟ್ಟಣದಲ್ಲಿ ಎಚ್ಚರಿದ್ದವನೇ ಜಾಣ

---

1 ಕೋಗಿಲೆ ಸುತ್ತ ಕಾಗೆಗಳು ಸೇರಿದ ಹಾಗೆ

2 ಸೀಗೆ ಎಡೆಯಲ್ಲಿ ಬಾಳೆ ತಪಸ್ಸು ಮಾಡಿದ ಹಾಗೆ

ಪ್ಪರೆಲ್ಲ ಒಂದೇ

೧೦೮೬೮ ಅಂತಿಗೆ ಅಂತು ಕೂಡಿದರೆ ಸಂತೇಪೇಟೆ

೧೦೮೬೯ ಊರೊಳಗಿನ ದುರ್ಜನರೂ ಅಡವಿಯೊಳಗಿನ ಕ್ರೂರ ಮೃಗಗಳೂ ಒಂದೇ

೧೦೮೭೦ ಬಿಂಘೋಘವರೊ ಕೂಡಿ ಸಂತೆಗೆ ಹೋದರೆ ಸಂತೆಯಲ್ಲೂ ನಾಲ್ಕುಜನ ಅಂಥವರೇ

೧೦೮೭೧ ಓತಿ ಕ್ಯಾ (ಕೇ)ತನ ಗೋತ್ರವೆಲ್ಲ ಒಂದೇ

೧೦೮೭೨ ಕರಡಿಗೆ ಕೂದಲ್ಯಾವುದು, ಕಾಟವ್ಯಾವುದು ?

೧೦೮೭೩ ಕಳ್ಳ ಕಳ್ಳನಿಗೆ ನಂಟು, ಹುಳಿ ಮೊಸರಿಗೆ ನಂಟು

೧೦೮೭೪ [1]ಕಳ್ಳನಲ್ಲಿ ಕಡು ಕಳ್ಳ ಸೇರಿದ ಹಾಗೆ

೧೦೮೭೫ ಕಳ್ಳ ಕಳ್ಳರು ಸೇರಿ ಸಂತೆ ಕಟ್ಟಿದ ಹಾಗೆ

೧೦೮೭೬ ಕಾಳಿನಾಯಕನ ಓಣಿಗೆ ಎಲ್ಲ ಒಂದೇ

೧೦೮೭೭ ಗಾರ್ದಭ ಕೂಟದಲ್ಲಿ ಗಾರ್ಹಪತ್ಯ ಯಾರಿಗೆ ?

೧೦೮೭೮ ದುರ್ಯೋಧನನಿದ್ದಲ್ಲಿ ಕೌರವರ ಬಳಗಕ್ಕೆ ಕೊರತೆಯೆ?

೧೦೮೭೯ ಪಾಯಿಖಾನೆ ಪಾಲು ಪಾಡಿದರೆ ನಾರುವುದು ಯಾವುದು, ನಾರದ್ದು ಯಾವುದು ?

೧೦೮೮೦ ಪುಂಡ ಲಂಡರ ಜೊತೆ ಹಾಗೆ

೧೦೮೮೧ [2]ಬೆಂಕಿ ಗಾಳಿ ಸೇರಿದ ಹಾಗೆ

೧೦೮೮೨ ಭೂತಗಳ ಮೇಳದಲ್ಲಿ ತಾಳವೆಲ್ಲಿ ?

---

1 ಕಳ್ಳ ಕಳ್ಳರು ಸೇರಿದ ಹಾಗೆ

2 ಬೆಂಕಿಗೆ ಗಾಳಿ ಸಹಾಯ

೧೦೮೮೩ ಮುದುಕರೂ ಸೇರಿದರಲ್ಲಾ ಹೋಟ್ಟರು ಬಾಯಿಗೆ ಮಣ್ಣು

೧೦೮೮೪ ಮೋಸಗಾರನಿಗೆ ಒಬ್ಬ ಮಂಚಿಗಾರ ಜೊತೆ

೧೦೮೮೫ ರಂಡೆ ಕಿಲ್ಲಾಡಿ ಸೇರಿದ ಹಾಗೆ

೧೦೮೮೬ ಲಂಕೆಯಲ್ಲಿ ಹುಟ್ಟಿದ್ದೆಲ್ಲಾ ರಾವಣನ ಪಡೆ

೧೦೮೮೭ ಸಮುದ್ರದ ನೀರು ಎಲ್ಲಿ ಕುಡಿದರೂ ಉಪ್ಪೇ

೧೦೮೮೮ ಸೂಜಿಗೆ ಸೂಜಿ ಮುದ್ದುಕೊಟ್ಟ ಹಾಗೆ

೧೦೮೮೯ ಸೋರುವ ಮನೆಯಲ್ಲಿ ಉಪ್ಪು ಹೂವ (ನೀರು ಚೆಲ್ಲಿದ)ರೆ
ಹಳ್ಳದ ಕೂಡ ಹಳ್ಳ

೧೦೮೯೦ ಹಾಗಲ ಬೀಳಿನಲ್ಲಿ ಕಹಿಸಿಹಿ ಭೇದವಿದೆಯೆ ?

ದುಷ್ಟರ ಸಂಗ ದುಮ್ಮಿಕೊಟ್ಟು ಕಳೆ

೧೦೮೯೧ ಅಲ್ಲದ ದೇವರಿಗೆ ಬೆಲ್ಲದ ನೈವೇದ್ಯ

೧೦೮೯೨ [1]ಒಳ್ಳೆಯವರ ಸಂಗತಿ ಕೊಟ್ಟು (ಕಾರ್ಯ)ಮಾಡು
ಕೆಟ್ಟವರ ಸಂಗತಿ ಕೊಟ್ಟುಬಿಡು

೧೦೮೯೩ [2]ಕಟ್ಟಿದ ನಾಯಿಯ ಮುಂದೆ ಪಿಂಡಗ ಸುರಿದರು

೧೦೮೯೪ ಕಲ್ಲು ಕಟ್ಟಿನ ದೇವರಿಗೆ ಮರದ ಗಂಟೆ

೧೦೮೯೫ [3]ಕರಕರೆ (ಕಟಕಟೆ)ದೇವರಿಗೆ ಕಾಯಿ ಕಾಯಿ ಹಣ್ಣು

೧೦೮೯೬ ಕಾಡುವ ದೇವರ ಕಾಟ ಕಳಕೊಂಡ ಹಾಗೆ

---

1 ಕೆಟ್ಟವರ ಸಂಗ ದಕ್ಕದ ಕೊಟ್ಟುಬಿಡು/ಒಳ್ಳೆಯವರ ಸಂಗ ಹತ್ತಿದ ಕೊಟ್ಟುವಹಾದ

2 ರಗಳೆ ದೇವರಿಗೆ ಮರದ ಜಾಂಪಟೆ

3 (i) ಕಾಟದ (ಕಾಟಕಟೆ) ದೇವರಿಗೆ ಮರದ ಜಾಗಟೆ

(ii) ಕಾಟ (ಕಾಟಾಚಾರ)ದ (ಕುಲಗೆಟ್ಟ)ದೇವರಿಗೆ ನಾಯಿ ಬಾಳೆ ಹಣ್ಣಿನ ನೈವೇದ್ಯ

೦೦೮೯೭ [illegible]

೦೦೮೯೮ ಕಾಡುವ ಭೂತಕ್ಕೆ ಬೇಡುವ ಪೂಜೆ

೦೦೮೯೯ [1][illegible]

೦೦೯೦೦ [illegible] ?

೦೦೯೦೧ [illegible]

೦೦೯೦೨ [illegible]

೦೦೯೦೩ [2][illegible]

ದುಷ್ಟರಿಂದ ಬಿಡುಗಡೆ ಹೊಂದುವುದೂ ಒಂದು ಪುಣ್ಯ

೦೦೯೦೪ [illegible] ([illegible]) [illegible]
[illegible]

೦೦೯೦೫ [illegible] ಪುಣ್ಯ

೦೦೯೦೬ [illegible]
[illegible]

ದುಷ್ಟನಿಗೆ ದಂಡವೇ ಮದ್ದು

೦೦೯೦೭ [illegible]

೦೦೯೦೮ [illegible]

೦೦೯೦೯ [illegible]?

೦೦೯೧೦ [illegible]

೦೦೯೧೧ [illegible] ಮದ್ದು

---

1 [illegible]?

2 [illegible]

೧೮೯೧೨ ಒನಕೆ ಪೆಟ್ಟು ಬೀಳದ ಮುನ್ನ ಒಳಕಲ್ಲಿನ ಬತ್ತ ನುರಿತೀತೆ ?

೧೮೯೧೩ ಕಬ್ಬಿಣ ಬಡಿಗೆ ಬಗ್ಗೋದು ಅಂದರೆ ಆಚಾರಿಗೇ

೧೮೯೧೪ ಕಾದ ಕಬ್ಬಿಣ ಬಡೀ ಬೇಕಾದ್ರೆ ಕಬ್ಬಿಣದ ಇಕ್ಕುಳಬೇಕು

೧೮೯೧೫ ಕುದುರೆ ಕಡಿವಾಣಕ್ಕೆ ಅಳುಕುತ್ತೆ

೧೮೯೧೬ ಕುದುರೆಗೆ ಕಡಿವಾಣದ ಸನ್ನೆ. ಕತ್ತೆಗೆ ದೊಣ್ಣೆ ಸನ್ನೆ

೧೮೯೧೭ ಕೊಡಲಿಗೆ ಹೆದರದ ಮರ ಕೊಡಲಿ ಕಾವಿಗೆ ಹೆದರಿತಂತೆ

೧೮೯೧೮ ಕೊಂಕಿಗೆ ಕೊಂಕೇ ಮದ್ದು

೧೮೯೧೯ ಕೊಂಕಿನ ದೇವರಿಗೆ ಕೊಡತಿ ಮದ್ದು

೧೮೯೨೦ ಡೊಂಕ ಸೌದೆಗೆ ಬೆಂಕಿ ಮದ್ದು

೧೮೯೨೧ ಕಾಗದೆ ಬಾಗದು. [1]ಬಿಸಿಯಾಗದೆ ಬೆಣ್ಣೆ ಕರಗದು

೧೮೯೨೨ [2]ಕಾಯಿಗ್ಗಂಟ ದೇವರಿಗೆ ಮಾದರ್ಚೋತ್ ಬಿಲ್ಪತ್ರೆ

೧೮೯೨೩ ತೊಗರಿ ಕಡ್ಡೀಲಿ ತೊಗರಿ ಜಾಡಿಸಿದ ಹಾಗೆ

೧೮೯೨೪ ದುರುಳರ ಕಂಡರೆ ಹರಳು ಚೆಲ್ಲಬೇಕು

೧೮೯೨೫ ದುರ್ಬುದ್ಧಿಗೆ ಗುದ್ದೇ ಮದ್ದು

೧೮೯೨೬ ಬ್ರಹ್ಮಾಸ್ತ್ರಕ್ಕೆ ಬ್ರಹ್ಮಾಸ್ತ್ರವೇ (ಗಂಟು) ಮದ್ದು

೧೮೯೨೭ ಬೆಂಕಿ ಡೊಂಕಿಗೆ, ಬೆಂಡು ನೀರಿಗೆ

೧೮೯೨೮ ಮಂತ್ರಕ್ಕೆ ಮಾವಿನಕಾಯಿ ಉದುರೀತೆ ?

---

1 ಬಿಸಿನೀರ್ ಹೊರ್ತು ಬೆಣ್ಣೆ ಕರಗಿಲ್ಲ (ಹವ್ಯಕ)

2 ಕಾಯ್ ಹಡಕರಿಗೆ ಮಾದರ್ಚೋತ್ ಪೂಜೆ

೧೯೨೯ [1]ಮಾದಿಗ ದೇವರಿಗೆ ಎಕ್ಕಡದ ಪೂಜೆ

ದುಷ್ಟನಿಗೆ ಕಷ್ಟ ತಪ್ಪದು

೧೯೩೦ ಅಗಡುತನ ಮಾಡಿದರೆ ದಗಡಿಮಂಗ ಅನ್ನಿಸಿಕೊಂಡಾನು

೧೯೩೧ ಉದ್ಧುರುಟುತನದಿಂದ ಇದ್ದದ್ದೆಲ್ಲ ಪಲಾಯನವಾಯ್ತು

೧೯೩೨ ಕುಂಗಿದ್ದವನನ್ನು ಎಲ್ಲರೂ ನುಂಗ ನೋಡುವರು

೧೯೩೩ ಗುಂಡುಗೋವಿ ಮುಂಡೇದು ಮುಂಡು ಮೋಚಿಕೊಳ್ಳದೆ ಇರುತ್ತೈ?

೧೯೩೪ ಕೆಟ್ಟತನಕ್ಕೆ ಒಪ್ಪಿದವನು ಕಟ್ಟನ್ನಕ್ಕೂ ಒಪ್ಪಬೇಕು

೧೯೩೫ [2]ತೋಳ (ಗೂಳಿ, ಹುಲಿ, ಮೊಲ) ಹಳ್ಳಕ್ಕೆ ಬಿದ್ದಾಗ ಆಳಿ (ತಲೆ)ಗೊಂದು ಕಲ್ಲು

೧೯೩೬ ತೋಳ ಹಳ್ಳಕ್ಕೆ ಬಿದ್ದಾಗ ಕುರಿಗಳೆಲ್ಲ ಬಿದ್ದು ಬಿದ್ದು ನಕ್ಕುವಂತೆ

೧೯೩೭ ನಿರ್ಬಂಧ ಮಾಡಿದವನ ಸ್ವಬಂಧ ಹೋದೀತೆ ?

೧೯೩೮ ನೀಚಾಟ ಆಡುವವನಿಗೆ ಪೇಚಾಟ ತಪ್ಪೀತೆ ?

೧೯೩೯ ಪಟಿಂಗತನದಿಂದ ಗಟ್ಟಿಗತನ ಕಳಕೊಂಡ

೧೯೪೦ ಪುಂಡಗಾರನ ಹೆಂಡತಿ ಕುಂಡಿಗೆ ಅರಿವೆ ಕಾಣ್ಕಂತೆ

೧೯೪೧ ಪುಂಗೂಳಿ ಮುಂಡೇದು ಹೆಂಗೆಂಗೊ ಆಡಿ ಭಂಗಪಟ್ಟು ಅಂಗ ಕಳಕೊಂಡಿತು

---

1 (i) ಚಮ್ಮಾರ (ಚಂಡಾಳ) ದೇವರಿಗೆ ಚಪ್ಪಲಿ ಪೂಜೆ
(ii) ಹಾಪ (ಹರಾಮಿ)ದೇವರಿಗೆ ಹಾಹಾಸದ (ನಪ್ಪಾಸಿನ)ಪೂಜೆ
(iii) ಸಮಗಾರ ದೇವರಿಗೆ ಮೊಟ್ಟೆಯ ಪೂಜೆ

2 ಬಿದ್ದಗೂಳಿಗೆ ಆಳಿಗೊಂದು ಕಲ್ಲು

೧೦೯೪೨ ¹ನಾಗು ಮಾನಾಂಗನೆಗೆ ಮಾವಿ ಬಲ್ಲಳೆ

೧೦೯೪೩ ದುಂದುಸೆಟ್ಟ್ಯರಿಗೆ ದಾರಿ ಶಸ್ತ್ರವು

೧೦೯೪೪ ಮುಂಗ್ಯ ಪರಿದಾನದ ಬಯಾಬಂಡ್ಲಿ ಸಡಿಲಾದ್ದು

ದುಷ್ಟ ಕತ್ರಿ ಯಿಸಿಗೆ ದಾಯಿದಿರು

೧೦೯೪೫ ಕತ್ರಿ ಕತ್ರಿ ಯಾರಿಗೆ ದಾದು ಹೊಂದುದ್ದು?

೧೦೯೪೬ ನಾದು ಕತ್ರಿ ಸಾಕಲಾದ ಅಕ್ಕ್ರಿಗೆ?

೧೦೯೪೭ ಹಿಡಿ ಕೊಂಡಿಗದ ಅಗಿದುದ್ದರಿ?

ದುಷ್ಟನನ್ನು ಅಡಗಿಸಲು ಯಾಯಾದದು ಇದುಕ್ತ್ರಿ

೧೦೯೪೮ ²ಗುಂಡ ದೇವತೆ [illegible] ಗೊಂಡುಬಿಟ್ಟಿತ
ಗ್ರಾಮದೇವತೆ ಬಂದು ಆ ದೇವತೆಯನ್ನೇ ನುಂಗಿದಳು

೧೦೯೪೯ ಇಂತ್ತ್ರಿ ಬಂದದ್ದು ದೊಡಿ ಗೊಡ್ಡನಿ ಒಡೆದೊಯಿದ್ದು

೧೦೯೫೦ ಗಂಟುಳಪದಾರಿ ಬಂದು ತಂಟುಳವದಾರಿನ
ಹೊಡೆದೊಂದು ಹೋದರು

ಸಮಾಸದಂತೆ ಬುದ್ಧಿ

೧೦೯೫೧ ಅದಂದವರಿಂದವರಾರಿ ಬಾರು ರಿಗ್ರ ದು ಕಲಿತುಕೊಂಡನ

೧೦೯೫೨ ಅದಾದವರೊಂದನಾವ್ಯ್ಯಯ ಅಡುವಿ ಪಾರ್ಥ್ಯಾದಂಗೆ

೧೦೯೫೩ ಎದ್ದು ಕೊಂಡ ಆಡಿ ಅಕಿ ಕರಗಾನಾವೃದಕ್ಕ ಕಲಿಯಿತು

೧೦೯೫೪ ಕುಂಬಾರ ಕಾಲ್ಯಗಿದ ಪಡಿ ಪಡಿ ಅಂಬದ
ದಾರುದರ ಕಾಲ್ಯಗಿದ ಗಿಗಿ ಅಂಬದ

---

1 ಮಾಯ ಮಾದೇವದ ಮಾರವ್ವ ಬಲ್ಲಳೇ ?

2 ಗ್ರಾಮದೇವತೆ [illegible] ದೇವತೆಯನ್ನು ಅಟ್ಟಿದಳು

೧೦೯೫೫ [1]ಕಪ್ಪುರದ ಜೊತೆಗೂಡಿ ಸೇರಿದ ಬಾಣ್ಲೀಕ್ಷ್ವರನಿಗೂ ಮೂಢರಾದೆಟ್ಟು

೧೦೯೫೬ ಕೋಡಿ ಕೂಡ ಆಡಿ ಗೋಡಿ ಮಾದಂತೆ

೧೦೯೫೭ ಕೌರವರ ಜೊತೆಗೂಡಿ ಸೇರಿ ಭೀಷ್ಮನೂ ಗೋವು ಕದ್ದ

೧೦೯೫೮ ಗುಣವುಳ್ಳ ಗೋಟಡಿಕೆಯಲ್ಲಿ ತರಗೆಲೆ ಕೆಡಿಸಿತು

೧೦೯೫೯ ತುಪ್ಪ ಅಳೆದ ಕೈ ಜಿಡ್ಡಾಗದೆ ಇರುತ್ತೆ ?

೧೦೯೬೦ ಜೊತೆಯಂತೆ ಮತಿ, ಮತಿಯಂತೆ ಕೃತಿ

೧೦೯೬೧ ದುರ್ಜನರ ಸಹವಾಸದಿಂದ ಸಜ್ಜನ ಕೆಟ್ಟ

೧೦೯೬೨ ದೊಂಬರ ಜೊತೆಗೂಡಿ ದಾಸಪ್ಪನಾದ ಹಾಡಿಂದ ಹಾಡಿನ್ನುದ

೧೦೯೬೩ ನರಿ ಕೂಡ ಆಡಿ ಕರು ಹೇಸಿಗೆ ತಿಂತು

೧೦೯೬೪ ಮಿರುಕೋಳಿ ಸಂಗದ ಅಡಿ ಹಾರುಕೋಳಿ ಕೆಟ್ಟಿತು

೧೦೯೬೫ ಪಂಗುಡಿನ ಸಂಗಮಾಡಿ ಅಂಗ ಕಳಕೊಂಡ

೧೦೯೬೬ 'ಪುಟಗೋಸಿ (ಕಚ್ಚೆ) ! ನೀನೇಕೆ ನಾರುತಿ ?' ಅಂದ್ರೆ,
'ನಾನಿರೊ ಸ್ಥಳ ಅಂತಾದ್ದು' ಅಂತಂತೆ

೧೦೯೬೭ ಪ್ರಾಂತನ ಜೊತೆ ಸೇರಿಕೊಂಡು ಮಾರಾಯ ಕಣ್ಣಿಗೆ
ಸೋತು ಹೋದ

೧೦೯೬೮ [2]ಮಾದಿಗನ ಸಂಗದ ಅಡಿ ಅರಗಿನ ಕೆಟ್ಟಿತು

೧೦೯೬೯ ಸಖ್ಯದಂತೆ ಗುಣ

೧೦೯೭೦ ಸಂಗೆಟ್ಟವನ ಸಂಗಮಾಡಿ ಕೈ ಬಿದ್ದವನ ಕಳ್ಳಂದಿ ಅಂತ

೧೦೯೭೧ ಸಹವಾಸದಂತೆ ಬುದ್ಧಿ, ತಿಂಡಿಯಂತೆ (ಭಾಷೆಯಂತೆ) ಲದ್ದಿ

---

1 ಹಾಲ ಕಪ್ಪುರಕ್ಕೆ ಮೊದಲಿನ ಮೊಸರ ಕಪ್ಪುರಕ್ಕೆ. ಬಂದೀತೋ?
2 ಹಾಗಿ ಕೂಡ ಅಡಿ ಗಿಳಿ ಕೆಟ್ಟಿತು

೧೦೯೭೨ ಸಹವಾಸದಿಂದ ಸನ್ಯಾಸಿ ಕೆಟ್ಟ

೧೦೯೭೩ ಸಂಗತಿ ಶಟ್ಟಿಕೊಂಡು ಸಂಸಾರಾದು ಬಿದ್ದಂತೆ

೧೦೯೭೪ ಸಂಗ ಗುಣವೋ, ಸಹಜಗುಣವೋ ?

೧೦೯೭೫ [1]ಸಂಗಡಕ್ಕೆ ಬಂಗಿ ಕಟಕೊಂಡವೊನ ಗಂಗಳ ಹೊಂಡು ಎರಡು
ಕಳಕೊಂಡ

೧೦೯೭೬ ಸಂಗಡದಲ್ಲಿ ಸಾವಾಸ. ಎಕ್ಕಿನಂತೆ ಎಕ್ಕ

೧೦೯೭೭ ಸಂಗತಿ (ಸಂಗ) ದೋಷ ಜಾ(ಗ)ದ ವಿನ್ಯಾಸ (ಕೊರಳಿಗೆ ದೊ

೧೦೯೭೮ ಸೂಳೆ ಜಾರರ ಕೊಂಬ್ಲಾದಲ್ಲದ ನಿಲುವನೆಲ್ಲ ಕೆಡಿಸಿದಂ

೧೦೯೭೯ ಕಿಷ್ಟರಿರೊಂದಿಗೆ ಅತಿ ಕೆಂಪಗಾದು ಹೇಲು ತಿಂದು

೧೦೯೮೦ ಹಾದರಗಿತ್ತಿಯ ಸಂಗ ನೋಡಿ ಗಂಡ ಗಂಡನ ಬಿಟ್ಟಳು

೧೦೯೮೧ ಓಲಗ ಕಂಡ ಅಡಿಗೆ ಹಾಳು ಎನ್ನಲು

೧೦೯೮೨ ಹೆಂಚಿ ಕೈಲಾಡಿ ಕಲ್ಲು ಹಾಗುವಾಯ್ತು

ಸಂಗ ಬಿಡುವುದು

೧೦೯೮೩ ಕತ್ತೆಯೊಂದಿ ಕಟಗೆದ್ದ

೧೦೯೮೪ ಕೊಯ್ಯುವುದಕ್ಕೆ ಕಾಯಿ, ಹರಿಯುವುದಕ್ಕೆ ಬಾಳೆ. ಹಂಗು ಹರಿಯು

೧೦೯೮೫ ಕೋಳಿ ಮೇಲೆ ಹುಡುಗೆಟ್ಟೆಕ್ಕ. ಹೇಲಿ ಮೇಲೆ ಬೆಲ್ಲ ಇಕ್ಕ
ಜಾಳೆ ಗಟ್ಟು ಹೊತ್ತಿಗೆ ನಿನ್ನ ಸಂಗ ಬಿಟ್ಟೆನೋ ಬಿಟ್ಟೆ

೧೦೯೮೬ ಅಡಿಕೆಹಾಕ್ಕಿ ಹಾಡಿಕೆಹಾಕ್ಕಿ ಕಳ್ಳಬಿಟ್ಟ. ನಿನ್ನ ಸಂಗ ಬಿಟ್ಟೆನೋ
ಉಸ್ಸ್, ಉಸ್ಸ್ !

---

1 ಹಾಗಿದ್ದರೆ ಸಂಗಡಕ್ಕೊಬ್ಬ ಗಂಗಳದೊಂದಿಗೆ ಹೊಂಡು ಹೊ

2 ಹಂದಿ ಜೊತೆ ಗಾದಿ ಸಂಗ ಕೆಟ್ಟ ಹೋಗ ದಾರಿ

೧೧೯೮೭ ಜಿಪುಣ ಮಿತ್ರನ ಸ್ನೇಹ ಬೇಡವೆಂದು

ಸಮಾಜಿಕರ ಗೆಳತನ

೧೧೯೮೮ ಅಕ್ಕನ ಹಗೆ, ಭಾವನ ನೆಂಟ

೧೧೯೮೯ ಅಡವಿಗಾದಲಿಕ್ಕೆ. ಕೊಡದು ಗಾಂಭೀರ್ಯ

೧೧೯೯೦ ಅಪ್ಪನ ಮನೆ ಕಿತ್ತು, ಗಂಡನ ಮನೆ ಹೊತ್ತಾಯಿತು, ಅಷ್ಟು ಒಳಿದ ಹಾ, ಕೇಳಿದರು ಹಲೋಂದಾಯ್ತು

೧೧೯೯೧ ಇವನು ಕಿವುಡ. ಅವನು ಕೀರಲ

೧೧೯೯೨ ಒಟ್ಟು ಗಡಿಗೆ. ಹುಳಿಯ ಕೊಡಗಿ

೧೧೯೯೩ ಒಡಕು ದೋಣಿಗೆ ನಿದ್ದೆ (ಲ್ಲ) ಭಾ

೧೧೯೯೪ ಕಮಲ ಕೆಸರಿನಲ್ಲಿ ಹುಟ್ಟಿದರೂ ದೇವರಿಗೆ ಗಣ

೧೧೯೯೫ ಕಂಬಳಿ ಕಟ್ಟಿಗೆ ಕತ್ತದ ಹಗ್ಗ

೧೧೯೯೬ ಕಾಗೆ ಶಾಪಕ್ಕೆ ಗೂಗೆ ಸಂತಾಪ

೧೧೯೯೭ ಕಾಳು ನಾಯಿಗೊಂದು ಮುಳ್ಳನಾಯಿ

೧೧೯೯೮ ಕಿವುಡ ಮನುಷ್ಯನಿಗೆ ಮೂಕ ಬಂಟ

೧೧೯೯೯ ಕುಂಟ ಕುದುರೆಗೆ ಗುಣಿಯೊಂದಾಯ್ತು

೧೨೦೦೦ ಕೊಳೆತ ಕುಂಬಳಕಾಯಿಗೆ ಕೆಟ್ಟ ಕೆಂಗಾಡಂತೆ

೧೨೦೦೧ ಗತಿಯಿಲ್ಲದವಳಿಗೆ ಮತಿಯಿಲ್ಲದ ಗಂಡ

೧೨೦೦೨ ಗಂಡ ಗಂಡಾಗುಂಡಿ, ಹೆಂಡ್ತಿ ಫಂಗಾಬಿಂಗಿ

೧೨೦೦೩ ಗಾಂಗಾತ್ರೆಯಲ್ಲಿ ನ (ರ)ಸಿಗಳ ಕುಂಬಾರನಿತ್ತು ಮಾಡಿದರೆ ಸರಿ

೧೨೦೦೪ ಗೊರವನ ಹಕ್ಕಿ ಗಾನ ಹಾಡಿದ್ದಕ್ಕೆ, ಗೂಬೆಯ ಹಕ್ಕಿ ಕೇಳ್ತದಂತೆ

೧೧೦೦೫ ತಕ್ಕಂಗೂ ಮುಕ್ಕಂಗೂ ತರ, ಈರುಳ್ಳಿಗೂ ಬೆಳ್ಳುಳ್ಳಿಗೂ ವರ

೧೧೦೦೬ ತಕ್ಕಂಗೂ ಮುಕ್ಕಂಗೂ ಸರಿಹೋಯ್ತು, ಹುರಿದ ಹುರುಳಿ ತಕ್ಕಂಡು ಮುಕ್ಕಾಯ್ತು

೧೧೦೦೭ ತರಕಲಡಲೆಗೆ ತಾಳಿ ಹೂವು

೧೧೦೦೮ ತರಗು ಲಡ್ಡುಗೆಗೆ ಡೊಳ್ಳುಗಣಪತಿ

೧೧೦೦೯ ತರಲೆ ಮುಂಡೆಗೆ ತಾಪತ್ರಯದ ಮಿಂಡಗಾರ

೧೧೦೧೦ ತಾರಾಕಿ ಕಟಿ ಗಾಡಿಗೆ ಜಾರಾ ಬಂಗಾಳಿ ಎತ್ತು

೧೧೦೧೧ ನಾಯಿ ಬೊಟ್ಟಕ್ಕೆ (ಸಂತರ್ಪಣೆಗೆ) ಅಮೇಧ್ಯದ ಹೋಳಿಗೆ

೧೧೦೧೨ ನಾಯಿ ಪಲ್ಲಕ್ಕಿ ಬೆಳ್ಳುಳ್ಳಿ ಒಗ್ಗರಣೆ

೧೧೦೧೩ ನೋಡುವ ಕಣ್ಣಿಗೆ ಕಾಣುವ ಗೊಂಬೆ

೧೧೦೧೪ ಬರಡು ಎಮ್ಮೆಗೆ ಕರಡು ಹುಲ್ಲು

೧೧೦೧೫ ಭಂಡ ಮಾವನಿಗೆ ಪುಂಡ ಅಳಿಯ

೧೧೦೧೬ ಪುರುಷನ ಪುಣ್ಯಕ್ಕೆ ತರಗೆಲೆ ಸಂಗಡಿಗ

೧೧೦೧೭ ಮಂಕನ ಒಡೆಯ, ಮುಡೆಯ

೧೧೦೧೮ ಮಂಕನಿಗೆ ಮಡ್ಡಿಯ ಬೆಂಬಲ

೧೧೦೧೯ ಮಾನಗೇಡಿಗೆ ಬುದ್ಧಿಗೇಡಿ ಗೆಳೆಯ

೧೧೦೨೦ ಮೂಗು ಹರುಕನಿಗೆ ಮುಕ್ಕಡಿ ತಿಮ್ಮನ ಸ್ನೇಹ

೧೧೦೨೧ ಮೂಳಿ ಮದುವೆಗೆ ಮುಟ್ಟಾಳ ಪುರೋಹಿತ

೧೧೦೨೨ [1]ಸಾಣೆ ಕಲ್ಲಿಗೂ ಬೋಳಂತಲೆಗೂ ಗಂಟು

---

1 ಭೋಡೆನೆತ್ತಿಗೂ ಸಾಣೆ ಕಲ್ಲಿಗೂ ಗಂಟು

೧೧೦೨೩ ಹಾಳು ಬಾವಿಗೆ ಹರಕು ಹಗ್ಗ

೧೧೦೨೪ ಹೆಂಡ ಕುಡಿಯೋ ದೇವರಿಗೆ ಹೇಸಿಗೆ ತಿನ್ನೊ ಪೂಜಾರಿ

೧೧೦೨೫ ಹೇಸಿಗೆ (ಖಂಡ) ತಿನ್ನೊ (ಭಂಗಿ) ದೇವರಿಗೆ ಹೆಂಡಗುಡುಕ ಪೂಜಾರಿ

೧೧೦೨೬ ಹೇಸಿಗೆ ದೇವರಿಗೆ ಈಚಲ ಹೊಂಬಾಳೆ

೧೧೦೨೭ [1]ತುಂಡು ದೇವರಿಗೆ ಭಂಡ ಪೂಜಾರಿ

೧೧೦೨೮ ರೂಪದಲ್ಲಿ ನಾನು (ಒಂಟೆ), ರಾಗದಲ್ಲಿ ನನ್ನ ಅಣ್ಣ (ಕತ್ತೆ ಹೇಳಿಕೆ)

೧೧೦೨೯ ಲಂಡ ಅತ್ತೆಗೆ ಭಂಡ ಅಳಿಯ

೧೧೦೩೦ ಸಮಾನತೆ ಇದ್ದ ಬಳಿ ಸ್ನೇಹ

೧೧೦೩೧ ಸುಳ್ಳ ಸುಳ್ಳಿನ ಜೊತೆಗೆ, ಕಳ್ಳ ಕಳ್ಳಿನ ಜೊತೆಗೆ

ನೀಚರಿಗೆ ಸಲುಗೆ ಕೊಡಬಾರದು

೧೧೦೩೨ ಅಲ್ಪನಿಗೆ ಸಲುಗೆ ಕೊಡಬಾರದು, ಹಗೆತನ ಮಾಡಬಾರದು

೧೧೦೩೩ [2]ಕಾಲಿನಲ್ಲಿರೋದು ಕಾಲಿನಲ್ಲಿರಬೇಕು, ತಲೆಯಲ್ಲಿರೋದು ತಲೆಯಲ್ಲಿರಬೇಕು

೧೧೦೩೪ ಒಗ್ಗಿಸಿಕೊಂಡ ಕತ್ತೆ ಅಗಸಗಿತ್ತಿ ಮೇಲೆ ಹತ್ತಿತಂತೆ

೧೧೦೩೫ ತಟ್ಟನೆ ಬಾ ಎಂದರೆ ತಬ್ಬಲಿಕ್ಕೆ ಬಂದ ಹಾಗೆ

---

1 (i) ಭಂಡ ದೇವರಿಗೆ ಲಂ (ಪುಂ) ಡ ಪೂಜಾರಿ

(ii) ಸುಳ್ಳ ದೇವರಿಗೆ ಕಳ್ಳ ಪೂಜಾರಿ

2 ಎಕ್ಕಡ ಎಲ್ಲಿಡಬೇಕೊ ಅಲ್ಲಿಡಬೇಕು, ಅದ ತೆಗೆದು ತಲೆ ಮೇಲೆ ಇಟ್ಟುಕೊಳ್ಳಬಾರದು

೧೧೦೩೬ [1]ತೊಡೆ ಸೋಕಿದ ನಾಯಿ ಒಡೆಯನ ಗುರುತರಿಯದು

೧೧೦೩೭ ನಾಗನ ಹತ್ತಿರ ನಕುಳು ಹೆಣ್ಣು ಕೇಳಿತಂತೆ

೧೧೦೩೮ ಮಿತಿಮೀರಿದ ಸದರ ಮರ್ಯಾದೆಗೆ ಭಂಗ

೧೧೦೩೯ ಪೋಕಿ ಬಿದ್ದ ನಾಯಿ ಸಾಕಿದವನನ್ನೂ ಅರಿಯದು

೧೧೦೪೦ ಸದರ ಕಂಡ ಬಡ್ಡಿ ಎದುರಿಗೇ ಹೇತ್ಲಂತೆ

೧೧೦೪೧ [2]ಸದರ ನೋಡಿ ಕೈಹಾಕಿದರಂತೆ

೧೧೦೪೨ ಸದರದ ಜೇಡನ ಕಂಡರೆ ಮೊಲ ಮೂರೇ ಕಾಲಲ್ಲಿ ನೆಗೆಯಿತು

೧೧೦೪೩ ಸಲ್ಲದ ತಾವಿನಲ್ಲಿ ಸಲುಗೆ ಮಾಡಿದರೆ ಅಲ್ಲೇ ಹೋಯಿತು ಅಭಿಮಾನ

೧೧೦೪೪ ಸಲುಗೆ ಕೊಟ್ಟರೆ ನಾಯಿ ತಲೆಗೇರಿತು, ಬಡಿಯಲಿಕ್ಕೆ ಹೋದರೆ ಕಾಲುಕಚ್ಚಿತು

೧೧೦೪೫ [3]ಸಲುಗೆ ಕೊಟ್ಟ ನಾಯಿ ಲಳಿಗ್ಯಾಗ ಹೇತಿತು

೧೧೦೪೬ ಸಲುಗೆಯ ನಾಯಿ ಮೊಲಕ್ಕೆ ಮುತ್ತು ಕೊಟ್ಟಿತು

೧೧೦೪೭ ಸವಿ ಕಂಡ ನಾಯಿ ಕಿವಿ ಕಂಡರೆ ಬಿಟ್ಟೀತೆ ?

ಸತ್ಯ

೧೧೦೪೮ ಗುಲಾಬಿ ಗಿಡದಲ್ಲಿ ಮುಳ್ಳಿರೋ ಹಾಗೆ ದಿಟದ ಮಾತು ಎಂದೂ ಕೆಟ್ಟುದು

---

1 i) ಕೊಬ್ಬಿದ ನಾಯಿ......
ii) ತೊಡೆಮೇಲೆ ಸಾಕಿದ ನಾಯಿ ಒಡೆಯನನ್ನು ಅರಿಯದು

2 ಸದರ ಕೊಟ್ಟರೆ ಪದರಕ್ಕೆ ಕೈ ಹಾಕಿದ

3 (i) ಸಲುಗೆ ಕೊಟ್ಟ ನಾಯಿ (ಲಳಿಗೆ ಮೂಸಿತು) ಸಟುಗ ನೆಕ್ಕಿತು
(ii) ನಸಿ ಕೊಟ್ಟರೆ ನಾಯಿ (ಮೀಸೆ ನೆಕ್ಕಬಹುದು) ನೊಸಲು ನೆಕ್ಕಿತು
(iii) ನಾಯಿಗೆ ಸಲುಗೆ ಕೊಟ್ಟರೆ ನೊಸಲು ನೆಕ್ಕಿತು
(iv) ನಾಯಿಗೆ ಸಲಿಗೆ ತೋರಿಸಿದರೆ ಅದಿಗೆ ಪಾತ್ರೆ ನೆಕ್ಕುವುದಂತೆ (ತುಳು)
(v) ಮುದ್ದು ಮಾಡಿದ ನಾಯಿ ಮಡಿ ಪಾತ್ರೆ ನೆಕ್ಕುವುದು

೧೧೦೪೯ ಚಿತ್ತಕ್ಕೆ ನಾನಾದಾರಿ, ಸತ್ಯಕ್ಕೆ ಒಂದೇ ದಾರಿ

೧೧೦೫೦ *ರಾಮ ವಾಕ್ಯ ಸತ್ಯ, ಕೃಷ್ಣವಾಕ್ಯ ಮಿಥ್ಯ

೧೧೦೫೧ ಸತ್ತರೂ ಸತ್ಯವನ್ನು ಬಿಡಬಾರದು

೧೧೦೫೨ ಸತ್ಯ ಕೆಡಿಸುವುದಿಲ್ಲ, ಅನಾಚಾರ ಬದುಕಿಸುವುದಿಲ್ಲ

೧೧೦೫೩ ಸತ್ಯ ಹೇಳಿ ಕೆಟ್ಟವರಿಲ್ಲ, ಸುಳ್ಳು ಹೇಳಿ ಬದುಕಿದವರಿಲ್ಲ

೧೧೦೫೪ ಸತ್ಯಕ್ಕೆ ಮಿಂಚಿದ ಪುಣ್ಯವಿಲ್ಲ, ಅಸತ್ಯಕ್ಕೆ ಮಿಂಚಿದ ಪಾಪವಿಲ್ಲ

೧೧೦೫೫ ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ (ಬೆಲೆಯಿಲ್ಲ) ಸುಖವಿಲ್ಲ

೧೧೦೫೬ ಸತ್ಯಮೇವ ಜಯತೆ ನಾನೃತಂ

೧೧೦೫೭ ಸತ್ಯವಿದ್ದರೆ ಎತ್ತಲೂ ಭಯವಿಲ್ಲ

೧೧೦೫೮ ಸತ್ಯವಾಗಿ ನಡೆಯುವವನಿಗೆ ಸುತ್ತಲೂ ವಿರೋಧಿಗಳು

೧೧೦೫೯ ಸತ್ಯವೂ ಪಥ್ಯವೂ ಕೆಡಿಸುವುದಿಲ್ಲ

೧೧೦೬೦ ಸತ್ಯವೇ ಗತಿ, ಧರ್ಮವೇ ಜಯ

೧೧೦೬೧ ಸತ್ಯವೇ ನಿತ್ಯ

೧೧೦೬೨ ಸಂಸಾರಿಗೆ ಸತ್ಯ, ರೋಗಿಗೆ ಪಥ್ಯ

ಅಸತ್ಯ

೧೧೦೬೩ ಅನ್ನ ತಿನ್ನುವ ಬಾಯಲ್ಲಿ ಮಣ್ಣು ತಿಂದಂತೆ

೧೧೦೬೪ ಈ ಸುಳ್ಳು ಬಸವ ಪುರಾಣದಲ್ಲೂ ಇಲ್ಲ

೧೧೦೬೫ ಒಳ್ಳೆಯ ಮಾತಿಗೆ ಸುಳ್ಳೇ ಪ್ರಧಾನ

---

* ರಾಮವಾಕ್ಯವೊ, ಕೃಷ್ಣವಾಕ್ಯವೊ ?

೧೧೦೬೬ ಒಂದು ಸುಳ್ಳನ್ನು ಮುಚ್ಚಲು ಒಂಬತ್ತು ಸುಳ್ಳು

೧೧೦೬೭ ತಗಲು ತಂದು ಹೆಗಲಿಗೆ ಹಾಕಿದರೆ ಹೆಗಲು ಬಾತು ಹೆಮ್ಮರ ಆತಂತ

೧೧೦೬೮ ನನ್ನದು ಸವ್ವಾಸೇರು ಸುಳ್ಳಾದರೆ ನಿನ್ನದು ಅಡಿಸೇರು

೧೧೦೬೯ ನಾಳೆ ನಾಳೆ ಅಂತ ಸುಳ್ಳು ಹೇಳಿ ಹೋಳಿಗೆ ತುಪ್ಪ ತಪ್ಪಿಸಿದ

೧೧೦೭೦ ಪುಟಕ್ಕೆ ಹಾಕಿದರೂ ಸುಟಿಬಿಡಲಿಲ್ಲ

೧೧೦೭೧ ಪೋಕನ ಮಾತು ಕಾಕು, ಸುಳ್ಳನ ಮಾತು ಜಳ್ಳು

೧೧೦೭೨ ಮಂಜಿನ ಮನೆಗೆ ಮರಳು ಗೋಡೆ

೧೧೦೭೩ ಹುಸಿಗಾಳ ಎತ್ತು ಬೇಡ, ಹುಸಿಗಾರನ ಜೊತೆ ಬ್ಯಾಡ

೧೧೦೭೪ ಹಾಡೋದು ಮಂಗನ ಕೆಲಸ, ಮೇಲೊಂದು ಸುಳ್ಳು

೧೧೦೭೫ ಮುಂಡೆ ಕಟ್ಟಿನ ತಾಲಿಯು ಬಂಜೆ ಮಗ ಕದ್ದ ಅಂದಂಗೆ

೧೧೦೭೬ ಸನ್ಯಾಸಿ ಮಗ ಸಾಸವೆ ಮರ ಹತ್ತಿದನಂತೆ

೧೧೦೭೭ ಸಟೆಗಾರನ ಮಾತು ದಿಟವಾದರೂ ನಂಬರು

೧೧೦೭೮ ಸಾವಿರ ಸುಳ್ಳನ ಮಗ ಕೋಟಿ ಸುಳ್ಳ

೧೧೦೭೯ *ಸಾವಿರ (ಅರೆ) ಸುಳ್ಳನ ಮನೆಗೆ ಕೋಟಿ (ಬರಿ) ಸುಳ್ಳ
ಹೋದರೆ ಹೊರಿಸಿಕೊಟ್ಟನಂತೆ ಮೂರು ಮೊರ ಸುಳ್ಳ

೧೧೦೮೦ ಸುಳ್ಳನ ಮನೆ ಔತಣ ಉಂಡಲ್ದೆ ಬದ್ಧವಿಲ್ಲ

೧೧೦೮೧ ಸುಳ್ಳನ ಮಾತು, ಕಳ್ಳನಹಾದಿ–ಕೇಳಬಾರದು

೧೧೦೮೨ ಸುಳ್ಳನಿಗೆ ಸಂತೆಯು ನೆವ

೧೧೦೮೩ ಸುಳ್ಳನಿಗೆ ಮಾತೇ ಬಲ, ಕಳ್ಳನಿಗೆ ಸುಳ್ಳೇಬಲ

---

* ಗಡಿಗೆ ಸುಳ್ಳಿನವನ ಮನೆಗೆ ಹೆಡಗೆ ಸುಳ್ಳಿನವನು ಹೋದಂತೆ

೧೧೦೮೪ ಸುಳ್ಳಾಡ್ದೆ ಇದ್ದರೆ ಉಂಡ್ಬಿಟ್ಟು ನಂಗ್ಗಿಳಿಯುದಿಲ್ಲ

೧೧೦೮೫ ಸುಳ್ಳು ಮಾತು ಕೆಸರಿನಲ್ಲಿ ಮುಳ್ಳು ತುಳಿದ ಹಾಗೆ

೧೧೦೮೬ ಸುಳ್ಳು ಮುಂಡೆ ಜೋಳ ಹೊತ್ತುಕೊಂಡು ಬಂದರೆ ದತ್ತಗೇಡಿ ಮುಂದೆ ದಣಿಯು ಇಳವಿಕೊಂಡಳಂತೆ

೧೧೦೮೭ ಸುಳ್ಳು ಹೇಳಬಾರದು, ಅನ್ಯಾಯ ಮಾಡಬಾರದು

೧೧೦೮೮ ಸುಳ್ಳು ಹೇಳಿದರೂ ನಿಜದ ತಲೆ ಮೇಲೆ ಹೊಡೆದಹಾಗಿರಬೇಕು

೧೧೦೮೯ ಸುಳ್ಳು ಹೇಳುವವನ ಮನೆಹಾಳು, ನಳ್ಳಿ ಹೆಚ್ಚಿದ ಕೆರೆಹಾಳು

೧೧೦೯೦ ಸುಳ್ಳು ಹೇಳೂಕಿಂತ ಸುಮ್ಮನಿರೂದು ಲೇಸು

೧೧೦೯೧ 'ಸುಳ್ಳು ಹೇಳೋ ಸುಕ್ರ !' ಅಂದ್ರೆ 'ವಾಟೆ ಕೊಳವೀಲಿ ಒಂಬತ್ತಾನೆ ಹೋಗಿ ಮರಿ ಆನೆ ಬಾಲ ಸಿಕ್ಕೊಂಡ್ತು" ಅಂದನಂತೆ

೧೧೦೯೨ 'ಸುಳ್ಳು ಹೇಳೋ ಹೊಲೆಯಾ !' ಅಂದ್ರೆ 'ತೊಂಡೆಕಾಯಿ ತೊಡೆಗಾತ್ರ' ಅಂದ

೧೧೦೯೩ ಸುಳ್ಳೇ ನಮ್ಮನೆ ದೇವರು

೧೧೦೯೪ ಸೂರಲ್ಲಿ ಮೊಗ ಸಿಕ್ಕಿಸಿ ಬಂದವನಂತೆ

೧೧೦೯೫ ಹರಿಶ್ಚಂದ್ರನ ಬಾಯಲ್ಲಿ ಅಸತ್ಯ ಬರಲ್ಲ, ಅತನ ಬಾಯಲ್ಲಿ ನಿಜಬರಲ್ಲ

೧೧೦೯೬ ಹಸಿತಿನ್ನಬೇಡ, ಹುಸಿ ಬೊಗಳಬೇಡ

೧೧೦೯೭ ಹುಸಿ ಬಗುಳುವ ಮಾನವ ಶ್ರೇಷ್ಠ, ಹಸಿ ಪಡವಲಕಾಯಿ ಒಡಲಿಗೆ ಶ್ರೇಷ್ಠ

೧೧೦೯೮ ಹುಸಿ ಹೇಳಿದ್ರೂ ಹಸ್ನಾಗಿರಬೇಕು.
(ಹುಸಿ ಹೇಳಿದರು ಹಸನಾಗಿ ಹೇಳು)

ಧರ್ಮ

೧೧೦೯೯ ಧರ್ಮ ಮಾಡಿ ದರ್ಮಟ್ಟೆಯಾದ್ರು

೧೧೧೦೦ ಧರ್ಮದಿಂದ ನಡೆದರೆ ದಕ್ಕಿಲ್ಲ

೧೧೧೦೧ ಧರ್ಮಕ್ಕೆ ಹೋದರೆ ಕರ್ಮ ಬಂತು

೧೧೧೦೨ ಧರ್ಮರ ಮನೆಯೂ ಹೊರಿನ ಹೊಲವೂ ಕೆಡುದಿಲ್ಲ

೧೧೧೦೩ ಧರ್ಮರ ಮನೆ ಪೊಳಿ ದಂಡೆ ಗರಿಕೆ ಅಂಗೆ

೧೧೧೦೪ ಧರ್ಮರ ಮಕ್ಕಳಿಗೆ ಅರೆಕಲ್ ಮ್ಯಾಲ್ಬೋದ್ರೂ ಅಂಬಲ್ಹುಟ್ಟದೆ

೧೧೧೦೫ ಧರ್ಮವಿದ್ದ ಕಡೆ ದೈವ ಸಹಾಯ

೧೧೧೦೬ ಧರ್ಮವೇ ಜಯ

೧೧೧೦೭ ಸ್ವಧರ್ಮ ತಪ್ಪಿದರೂ ಅಧರ್ಮ ಮಾಡಬಾರದು

ನೀತಿ

೧೧೧೦೮ ಜಾತಿ ಕೆಟ್ಟರೂ ನೀತಿ ಕೆಡಬಾರದು

೧೧೧೦೯ ಜ್ಯೋತಿ ಉರಿದ ಮನೆ ನೀತಿ ಹೆಚ್ಚು

೧೧೧೧೦ ಜ್ಯೋತಿ ಇಲ್ದೆ ಇರೊ ಮನೆ,
ನೀತಿ ಇಲ್ದೆ ಇರೊ ಜನ ಯಾತಕ್ಕೂ ಬ್ಯಾಡ

೧೧೧೧೧ ನೀತಿಯಿದ್ದರೆ ಭೀತಿಯಿಲ್ಲ

೧೧೧೧೨ ನೀತಿಯಿಂದ ಖ್ಯಾತಿ, ಭಯದಿಂದ ಭೀತಿ

೧೧೧೧೩ ನೀತಿಯುಳ್ಳವ ಖ್ಯಾತಿಪಟ್ಟಾನು

೧೧೧೧೪ ನೀತಿಯುಳ್ಳವನ ಮನೆ ದಾತು ಕೋತಿಯಾದ್ರೂ ಕೇಳೀತು

೧೧೧೧೫ ನೀತಿಯಿಲ್ಲವನಿಗೆ ಖ್ಯಾತಿ ಎಲ್ಲಿ ?

೧೧೧೧೬ ನೀತಿಹೀನನಿಗಿಂತ ಜಾತಿ ಹೀನ ಉತ್ತಮ

೧೧೧೧೭ ಪ್ರೀತಿಯಿದ್ದರೂ ನೀತಿ ಬಿಡಬಾರ್ದು

೧೧೧೧೮ ಪ್ರೀತಿಯಿದ್ದರೂ ನೀತಿಯಿರಬೇಕು

೧೧೧೧೯ ಮಾತಿಗೆ ಮಲಕಿಲ್ಲ, ನೀತಿಗೆ ತೊಡಕಿಲ್ಲ

೧೧೧೨೦ ರೀತಿ ತಪ್ಪಿದರೂ ನೀತಿಯಿರಬೇಕು

೧೧೧೨೧ ಸುಮ್ಮನಿದ್ದು ನೀತಿ ಅಂದ ಹಾಗೆ

ಶೀಲ

೧೧೧೨೨ ರೋಗಕ್ಕೆ ಮದ್ದುಂಟು, ಶೀಲಕ್ಕೆ ಮದ್ದಿಲ್ಲ

೧೧೧೨೩ ಶೀಲ ಗುಣವಂತರ ಕೈಗನ್ನಡಿ

೧೧೧೨೪ ಶೀಲವಂತರಿಗೆ ಶಿಲೆ ಒಲಿಯಿತು

ಹಿಂಸೆ

೧೧೧೨೫ ಆಣೆಯಿಡಬಾರದು, ಪ್ರಾಣಿ ಹಿಂಸೆ ಮಾಡಬಾರದು

೧೧೧೨೬ ಇರುವೆಗೂಡಿಗೆ ಕಿಚ್ಚಿಟ್ಟ ಹಾಗೆ

೧೧೧೨೭ ಕಾಗೆ ಹೊಡೆಯೋನಿಗೆ ಬೇಗೆ ಬೆನ್ನತ್ತಿತು

೧೧೧೨೮ ಚೀಕ್ರ ಗುಡ್ಲಿಗೆ ಬೆಂಕಿ ಹೆಟ್ಟಿದ ಹಾಗೆ

೧೧೧೨೯ ಪರಹಿಂಸೆ ತನ್ನ ಹಿಂಸೆಗೆ ಮೂಲ

ಅಹಿಂಸೆ

೧೧೧೩೦ ಈ ಕೆನ್ನೆಗೆ ಹೊಡೆದರೆ ಆ ಕೆನ್ನೆ ತೋರಿಸು

೧೧೧೩೧ [1]ಕಲ್ಲಲ್ಲಿಟ್ಟವ್ರಿಗೆ ಬೆಣ್ಣಿ (ಬೆಣ್ಣೆಯು)ಲ್ಲಿ ಇಡು

೧೧೧೩೨ ನಂಜು ಮರನಾದರೂ ನಟ್ಟವನು ಕಡಿಯಬಾರದು

೧೧೧೩೩ ನಾಯಿ ಕಾಲು ಕಚ್ಚಿದರೆ ನಾವು ಕಾಲು ಕಚ್ಚಬಾರದು

೧೧೧೩೪ ಪಾಪಿಗಳ ದೇವರೆಂದು ಪಾಪಾಸಿನಲ್ಲಿ ಹೊಡೀಬಾರ್ದು

೧೧೧೩೫ ಹೊಡೆಯುವವನಿಗೆ ಬೆನ್ನು ತೋರಿಸು,
ನಡೆಯುವವನಿಗೆ ದಾರಿ ತೋರಿಸು

ದಾನ

೧೧೧೩೬ ಆತ್ಮ ಕಾದು ಧರ್ಮ, ತಲೆ ಕಾದು ಮರ್ಮ

೧೧೧೩೭ ಆನೆಯ ಮೇಲಿದ್ದರೂ ದಾನಕ್ಕೆ ಕೈಯೊಡ್ಡುವುದು ಬೇಡ

೧೧೧೩೮ ಆಸ್ತಿಕ (ಆಸ್ತಕ)ನ ದಾನ, ನಾಸ್ತಿಕನ ಭಿಕ್ಷೆ

೧೧೧೩೯ ಇಂದು ಕೊಳ್ಳೋದು ನಾಳೆ ಕೊಳ್ಳು,
ನಾಳೆ ಕೊಡೋದು ಇಂದೇ ಕೊಡು

೧೧೧೪೦ [2]ಇಕ್ಕಲಾರದ ಕೈ ಎಂಜಲು, ಹುದಿಗೆ ಮಾಡಿದ ಅನ್ನ ಗಿಂಜಲು

೧೧೧೪೧ ಇಟ್ಟಿದ್ದು ಕೊಳೆಯುತ್ತದೆ, ಕೊಟ್ಟದ್ದು ಬೆಳೆಯುತ್ತದೆ

೧೧೧೪೨ ಇದ್ದಾಗ ಕೊಡು, ಇಲ್ಲದಾಗ ಬೇಡು

೧೧೧೪೩ ಇದ್ದಾಗ ದಾನ ಮಾಡು, ಎದ್ದಾಗ ಧ್ಯಾನ ಮಾಡು

೧೧೧೪೪ [3]ಈ ಕೈ ಕೊಟ್ಟದ್ದನ್ನು ಆ ಕೈ ಕಾಣಬಾರದು

೧೧೧೪೫ ಈಗ ಏಳು ಬೇಕೊ, ಮುಂದೆ ಎಪ್ಪತ್ತು ಬೇಕೊ ?

---

1 ಬೆಳ್ಳಿಗಲ್ಲಲ್ ಹೊಡೆದವನ ಬೆಣ್ಣೆಲ್ಲಿಡು (ಹವ್ಯಕ)
2 ಇಕ್ಕಲಾರದ ಕೈನ ಎಂಜಲಾಗೈತೆ ಅಂದರಂತೆ
3 (i) ಬಲಗೈ ಕೊಡುವಾಗ ಎಡಗೈ ಕಾಣದೆ ಇರಲಿ
(ii) ಬಲಗೈಲಿ ಕೊಟ್ಟಿದ್ದು ಎಡಗೈಗೆ ಗೊತ್ತಾಗಬಾರದು

೧೧೧೪೬ ಒಬ್ಬರಿಗೆ ಕೊಟ್ಟಿದ್ದೇ ಬಂತು, ಇಬ್ಬರಿಗೆ ಇಕ್ಕಿದ್ದೇ ಬಂತು

೧೧೧೪೭ ಕಾಡದ ಹಾಗೆ ಕೊಟ್ಟರೆ ಬೇಡಿದ ಹಾಗೆ ಹೋಯಿತು

೧೧೧೪೮ ಕೆಟ್ಟು ಹೋಗುವುದನ್ನು ಕೆಲವಟ್ಟಿಗಾದರೂ ಕೊಟ್ಟು
ಪುಣ್ಯ ಕಟ್ಟಿಕೊಳ್ಳಬೇಕು

೧೧೧೪೯ ಕೈ ಖಂಡುಗ ಒಡಿಯಲ್ಲ, ಬಾಯಿ ಬಳ್ಳ ಒಡಿಯಲ್ಲ

೧೧೧೫೦ ಕೈಲಾದಾಗ ಮಾಡದ ದಾನ ಸತ್ತ ಮೇಲೆ ಏನು ಮಾಡಿಯಾನು ?

೧೧೧೫೧ ಕೊಟ್ಟ ಕೈ ಆಸೆ, ಕೊಡ (ಹೊಡೆ)ದ ಕೈ ಹೆದರಿಕೆ

೧೧೧೫೨ ಕೊಟ್ಟ ಕೈ ಬೇಡಿಸುತ್ತದೆ

೧೧೧೫೩ ಕೊಟ್ಟ ದಾನಕ್ಕೆ ನೀರೆರೆ

೧೧೧೫೪ ಕೊಟ್ಟದ್ದು ತನಗೆ. ಬಚ್ಚಿಟ್ಟದ್ದು ಪರರಿಗೆ

೧೧೧೫೫ ಕೊಟ್ಟವನಿಗೆ ಬಡತನ ಬರಲ್ಲ. ಕೊಡದೆ ಇದ್ರೆ ಸಿರಿತನವಿಲ್ಲ

೧೧೧೫೬ *ಕೊಡುವ ಕೈ ಮೇಲೆ, ಕೊಂಬುವ ಕೈ ಕೆಳಗೆ

೧೧೧೫೭ ಕೊಡುವ ದಾನಕ್ಕೆ ಇಂದು, ನಾಳೆ ಎನಬೇಡ

೧೧೧೫೮ ಜೀ(ದೀ)ನನ (ಲೋಭಿಯ) ಸಿರಿಗಿಂ (ಸಂಗಕ್ಕಿಂ)ತ
ದಾನಿಯ ಬಡತನ ಲೇಸು

೧೧೧೫೯ ತಾನು ತಿಂದು ದಾನ ಧರ್ಮ

೧೧೧೬೦ ತಾನೇ ತಿರುಕ, ದಾನ ಧರ್ಮ

೧೧೧೬೧ ದಾತೃ ಮರುಳೋ. ಶ್ರೋತೃ ಮರುಳೊ ?

೧೧೧೬೨ ದಾನ ಮಾಡಿದ ಜನಕ್ಕೆ ಹಾನಿಯಿಲ್ಲ

೧೧೧೬೩ ದಾರಿಯಲ್ಲಿ ಸಿಕ್ಕಿದ್ದು ಧರ್ಮಕ್ಕೆ ಹೋಯಿತು

---

* ಕೊಡುವವನ ಕೈ ಅನುಗಾಲವೂ ಮೇಲೆಯೇ

೧೧೧೬೪ ದುಡ್ಡು ಕೊಟ್ಟವನೇ ದೊಡ್ಡಪ್ಪ

೧೧೧೬೫ 'ದೇಹಿ' ಅಂದವನಿಗೆ 'ನಾಸ್ತಿ' ಎನಬಾರದು

೧೧೧೬೬ ದೈವವುಳ್ಳವರು ಬಡವರಿಗೆ ಸಹಾಯ ಮಾಡಬೇಕಂತೆ

೧೧೧೬೭ ಧನವಿದ್ದಲ್ಲಿ ಮನವಿಲ್ಲ, ಮನವಿದ್ದಲ್ಲಿ ಧನವಿಲ್ಲ

೧೧೧೬೮ ಧರ್ಮಕ್ಕೆ ಬಂದ (ಕೊಟ್ಟ)ದ್ದು ದಾನಕ್ಕೆ ಹೋಯಿತು

೧೧೧೬೯ ಧರ್ಮಪ್ಪ ನಮ್ಮಪ್ಪ, ಕರ್ಮಪ್ಪ ನಿಮ್ಮಪ್ಪ

೧೧೧೭೦ 'ನಹಿ ನಹಿ' ಎಂಬುವವ ಮಹಿಗೆ ಹೊರೆ

೧೧೧೭೧ ನೀಡಿದ ಕೈಗೆ ನೆರವಾಗು

೧೧೧೭೨ ನೂರಕ್ಕೆ ಒಬ್ಬ ದಾನಿ, ಸಾವಿರಕ್ಕೆ ಒಬ್ಬ ಶರಣ

೧೧೧೭೩ ಬೇಡುವುದೇ ಕಷ್ಟ, ಬೇಡಿದರೆ ಇಲ್ಲವೆನ್ನುವುದೇ ಕಷ್ಟ

೧೧೧೭೪ ಬೈದು ಕೊಟ್ಟದ್ದು ಧರ್ಮಕ್ಕೂ ಬೇಡ

೧೧೧೭೫ ಭಟ್ಟೆ ಕೊಟ್ಟಷ್ಟೂ ಕೆಟ್ಟು ಹೋಗಲಾರ

೧೧೧೭೬ ಮನಸು ಕೆಟ್ಟಾದರೂ ಸೈರಿಸ್ತದೆ, ಕೊಟ್ಟು ಸೈರಿಸೋದಿಲ್ಲ ?

೧೧೧೭೭ ಮಮತೆಯಿಂದ ಕೊಟ್ಟದ್ದು ಅಮೃತ

೧೧೧೭೮ ಮುತ್ತೈದೆ ಕೈ ಭಿಕ್ಷ ಮೂರು ಹಿಡಿ ಸಾಕು

೧೧೧೭೯ ಹೂ ಕೊಡುವಲ್ಲಿ ಹೂವಿನೆಸಳು

ಪಾತ್ರವರಿತು ದಾನ

೧೧೧೮೦ ತೀರದಲ್ಲಿರುವ ಮರಕ್ಕೆ ನೀರು ಏತಕ್ಕೆ ?

೧೧೧೮೧ ನಡೆನುಡಿ ಅರಿತು ಕೊಟ್ಟವರಿಗೆ ಕ್ರಿಯುವೇ ದಾನ
ಅರಿಯದೆ ಕೊಟ್ಟವರಿಗೆ ಕ್ರಿಯುವೇ ಕರ್ಮ

೧೧೧೮೨ ಪಾತ್ರವರಿತು ದಾನ, ಕ್ಷೇತ್ರವರಿತು ಬೀಜ

೧೧೧೮೩ ಬೆಸ್ತನಿಗೆ ದಾನ ಕೊಟ್ಟರೆ ಬಲೆದಾರ ತಂದನಂತೆ

೧೧೧೮೪ [1]ಮರ್ಮ ತಿಳಿದು ಧರ್ಮ ಮಾಡು

೧೧೧೮೫ [2]ಸಮುದ್ರಕ್ಕೆ ನೀರು ಹೊತ್ತ ಹಾಗೆ

೧೧೧೮೬ ಸಮುದ್ರಕ್ಕೆ ಮಳೆ ಸುರಿದ ಹಾಗೆ

ದಾನ ಫಲ

೧೧೧೮೭ ಅಷ್ಟಕ್ಕಿಷ್ಟಾದರೆ ಇಷ್ಟಕ್ಕೆಷ್ಟು ?

೧೧೧೮೮ [3]ಉಂಡವ ಹರಸ್ಯಾನು, ನೊಂದವ ಬೈದಾನು

೧೧೧೮೯ ಕಾಸು ಕೊಟ್ಟು ಕರ್ಮ ಕಳೆ

೧೧೧೯೦ ಕೊಟ್ಟು ಕೆಟ್ಟವರಿಲ್ಲ, ಕೊಡದೆ ಬಾಳಿದವರಿಲ್ಲ, ತಿರಿದು ಬದುಕಿದವರಿಲ್ಲ

೧೧೧೯೧ ಕೊಡುವ ಕೈ ಬರಿದಾಗದು, ಕಳ್ಳ ಕೈ ತುಂಬದು

೧೧೧೯೨ ಗಂಡ ಮಾಡಿದ ದಾನದಲ್ಲಿ ಹೆಂಡ್ತಿಗೆ ಒಂದು ಪಾಲು, ಹೆಂಡ್ತಿ ಮಾಡಿದ ದಾನದಲ್ಲಿ ಗಂಡನಿಗೆ ಎರಡು ಪಾಲು

೧೧೧೯೩ ದಾನ ಮಾಡಿ ಧ(ದ)ನ ಮಾಡಿದಳು

೧೧೧೯೪ ದೈವ ದಾಯಿದ್ರನ ಕೂಡಿಸಿತು

೧೧೧೯೫ [4]ಫಲ ಕೊಟ್ಟು (ಬಿತ್ತಿ) ಪಾಪ ಕಳೆ

---

1 ಧರ್ಮ ಮಾಡಿದರೂ ಮರ್ಮ ತಿಳಿಯಬೇಕು

2 ಕೆರೆಗೆ ನೀರು ಹೊತ್ತ ಹಾಗೆ

3 (i) ಉಂಡಮ್ಮ ಹರಸಿದಳು, ನೊಂದಮ್ಮ ಬೈದಳು
(ii) ಉಂಡವ ಹರಸಬೇಡ, ನೊಂದವ ಬೈಯಬೇಡ

4 ಕಾಯಿ ಸೊಪ್ಪು ಕೊಟ್ಟು ಪಾಪ ಕಳೆ

೧೧೧೯೬ ಮಾಡಿದವರಿಗೆ ಮಾಡಿದಷ್ಟು, ನೀಡಿದವರಿಗೆ ನೀಡಿದಷ್ಟು

ನಿಷ್ಫಲ ದಾನ

೧೧೧೯೭ [4]ಅಗಸನ ಕತ್ತೆ ಡೊಂಬನಿಗೆ ತ್ಯಾಗ

೧೧೧೯೮ ಅಟ್ಟಕ್ಕೆ ಎಸೆದರೆ ಬೆಕ್ಕು ಒಲ್ಲದು, ತಿಪ್ಪೆಗೆಸೆದರೆ ನಾಯಿ ಒಲ್ಲದು

೧೧೧೯೯ ಅತ್ತೆಯ ತುರಿಯ ಮಾವನಿಗೆ ದಾನ

೧೧೨೦೦ ಅತ್ತೆಯನ್ನು ಅಳಿಯ ದಾನ ಮಾಡಿದ ಹಾಗೆ

೧೧೨೦೧ ಊರ ಧಾರೆ ಎರೆಕೊಟ್ಟ ಹಾಗೆ

೧೧೨೦೨ ಒಳ್ಳೆದು ಒಳಗಿಲಿ ಬೆಕ್ಕು ದಾನ ಮಾಡಿದ ಹಾಗೆ

೧೧೨೦೩ ಕೆಟ್ಟ ಹಾರುವನಿಗೆ ಸತ್ತ ಹಸುವಿನ ದಾನ

೧೧೨೦೪ 'ಕೊಳೆತ ಕುಂಬಳಕಾಯನ್ನು ಏನು ಮಾಡಲಿ'?'
'ಎಮ್ಮೆಗೆ ಹಾಕು'. 'ಎಮ್ಮೆ ತಿನ್ನಲ್ಲ', "ಪುರೋಹಿತರಿಗೆ ಕೊಡು"

೧೧೨೦೫ ಗೋವಿನ ಹಾಲು ಕರೆದು ನಾಯಿಯ ಬಾಯಿಗೆ ಹೊಯ್ದು

೧೧೨೦೬ ಗೋವು ಕೊಂದು ಕೆರ ದಾನ ಮಾಡಿದರು

೧೧೨೦೭ ತಂದೆಯ ಬದುಕು ತಾಯಿಗೆ ದಾನ

೧೧೨೦೮ ದಾನವನಿಗೆ ದನ ಕೊಟ್ಟಂತೆ

೧೧೨೦೯ ಬಿದ್ದು ಹೋದ ಕಾಸು ಸತ್ತು ಹೋದ ದಾಸಯ್ಯನಿಗೆ

೧೧೨೧೦ ಬಂದು ಹೋಗೋ ಮರಮುಟ್ಟು
ಬಂದವರಿಗೇ ಸಂದು ಹೋಗಲಿ

---

4 ಡೊಂಬನ ನಷ್ಟಕ್ಕೆ ಅಗಸನ ಕತ್ತೆ ಈಡಾದ ಹಾಗಾಯ್ತು

೧೧೨೧೧ ಮಾಡಿದರೂ ಮನವಿಲ್ಲ, ನೀಡಿದರೂ ನಿಜವಿಲ್ಲ

೧೧೨೧೨ ಯಾರೂ ಒಲ್ಲದ್ದು ಹಾರವಯ್ಯನಿಗೆ ಕೊಡು

೧೧೨೧೩ ಸುಂಕದವನು ಗೋದಾನ ಮಾಡಿದ ಹಾಗೆ

೧೧೨೧೪ ಹಳಸಿದ್ದು ಪಳಸಿದ್ದು ಹಾರುವಗೇರಿಗೆ

೧೧೨೧೫ ಹಂದಿ (ಕೊಂದು) ಕದ್ದು ಅದರ ಕಾಲು ದಾನ ಮಾಡಿದ ಹಾಗೆ

೧೧೨೧೬ ಹಾವು (ಕಾಗೆ) ಕೊಂದು ಹದ್ದಿಗೆ ಹಾಕಿದ ಹಾಗೆ

ದತ್ತಾಪಹಾರ

೧೧೨೧೭ *ಇಟ್ಟು ಕುದಿಯ ಬಾರದು, ಕೊಟ್ಟು ಹಂಗಿಸಬಾರದು

೧೧೨೧೮ ಎರೆದು ಕೊಟ್ಟ ಮೇಲೆ ತಿರುಗಿ ಕೇಳ ಬ್ಯಾಡ

೧೧೨೧೯ ದತ್ತಾ ಕೊಟ್ಟು ಮತ್ತೆ ಕೇಳಿದವ ಎತ್ತಿಗಿಂತ ಕಡೆ

೧೧೨೨೦ ಬಲಿದಾನ ಕೊಟ್ಟರೂ ಸಮಾಧಾನವಿರಬೇಕು

೧೧೨೨೧ ಹಿಡಿತುಂಬ ಹಣಕೊಟ್ಟರೂ ನುಡಿ ಚೆನ್ನಾಗಿರಬೇಕು

ದಾನ ಪಡೆದವನ ಸ್ವಭಾವ

೧೧೨೨೨ ಕೊಟ್ಟ ವಸ್ತುವಿನಲ್ಲಿ ದೋಷ ಎಣಿಸೋದ್ಯಾಕೆ ?

೧೧೨೨೩ ಕೊಟ್ಟರೆ ಎರಡು ಕಾಸು, ಕೊಡದಿದ್ದರೆ ಮೂರು ಲೇಸು

೧೧೨೨೪ ಕೊಡುವವರೆಗೂ ನನ್ನಪ್ಪ, ಕೊಟ್ಟ ಮೇಲೆ ನನ್ನ ಶಪ್ಪ

೧೧೨೨೫ ತಿನ್ನುವವರಿಗೆ ತಿಂದಷ್ಟು ಸಾಕಾಗ ಬಾರದು, ಕೈ ಮುಂದು ಮಾಡುವವನಿಗೆ ಕೊಟ್ಟಷ್ಟು ಸಾಕಾಗಲಾರದು

---

* ಕೊಟ್ಟು ಕುದೀ ಬ್ಯಾಡ, ಕೊಟ್ಟಾಡಿ ಕೇಳಬ್ಯಾಡ

೧೧೨೨೬ [1]ದಾನ ಕೊಟ್ಟ ಆಕಳಿನ ಹಲ್ಲು ಹಿಡಿದು ನೋಡಿದ

೧೧೨೨೭ [2]ಧರ್ಮಕ್ಕೆ ದಟ್ಟಿ ಕೊಟ್ಟರೆ ಒತ್ತಲಿಗೆ ಹೋಗಿ ಮೊಳ ಹಾಕಿದ

೧೧೨೨೮ ಧರ್ಮಕ್ಕೆ ಕತ್ತೆ ಕೊಟ್ಟರೆ ಬಾಲ ಹಿಡಿದೆತ್ತಿ ನೋಡಿದ

೧೧೨೨೯ ಪುಣ್ಯಕ್ಕೆ ಸೀರೆ ಉಡಿಸಿದರೆ ಹನ್ನೆರಡು ಮೊಳ ಅಂದಳು

೧೧೨೩೦ ರಾಜ ಕೊಟ್ಟ ದಾನ ಕುಂಬಳಕಾಯಿ ದಾನ

ಅನ್ನದಾನ

೧೧೨೩೧ ಅಂಗಳು ನೆಲೆಯಲಿಲ್ಲ. ಅನ್ನ ದಣಿಯಲಿಲ್ಲ

೧೧೨೩೨ ಅನ್ನದಾನಕ್ಕಿಂತ ಮಿನ್ನ ದಾನವಿಲ್ಲ

೧೧೨೩೩ ಅನ್ನಕ್ಕೆ ಅವರಿವರು ಎಂಬ ಭೇದವುಂಟೆ ?

೧೧೨೩೪ ಅನ್ನದಾನಕ್ಕೆ ಸಮಾನವಿಲ್ಲ, ಬನ್ನಪಡೋದು ತಪ್ಪಲಿಲ್ಲ.

೧೧೨೩೫ ಇಕ್ಕಲಾರದವನಿಗೆ ಮುಕ್ಕರಿತ ಹೆಚ್ಚಂತೆ

೧೧೨೩೬ ಇಕ್ಕಿ ಹಂಗಿಸಬೇಡ, ಸೊಕ್ಕಿ ನಡೆಯ ಬೇಡ

೧೧೨೩೭ ಇಟ್ಟು ದಣಿಸಬಹುದು, ಕೊಟ್ಟು ದಣಿಸೋಕಾಗೋಲ್ಲ

೧೧೨೩೮ ಉಣ್ಣಬಾರದ ಮುಕ್ಕನ ಮನೇಲಿ ಊಟವಾದರೇನು, ಮಾದಿಗನ ಮನೇಲಿ ಮದುವೆಯಾದರೇನು ?

---

1 ಧರ್ಮಕ್ಕೆ ಎಮ್ಮೆ ಕೊಟ್ಟರೆ ಒತ್ತಲಿಗೆ ಹೋಗಿ ಹಲ್ಲು ಹಿಡಿದು ನೋಡಿದ

2 (i) ಧರ್ಮಕ್ಕೆ ದಟ್ಟಿ ಉಡಿಸಿದರೆ ದಟ್ಟಿಯನ್ನು ಒಯ್ದು ಮೊಳ ಹಾಕಿದನಂತೆ

(ii) ಧರ್ಮದ ದಟ್ಟೀನ ಅಳೆದರೆ ಧರ್ಮ ಕೆಟ್ಟಿತು

(iii) ಹಳ್ಳಿ ನಾಯ್ಗೊಂದಜಿನ ಸಿಕ್ಕರ ಹಾಳು ಗ್ವಾಡ್ಯಾಗೊಯ್ದು ಮಳಾ ಹಾಕಿತಂತೆ

(iv) ಹಾಗೆ ಇನ್ನವನಿಗೆ ಹಳೆ ಕಂಬಳಿ ಕೊಟ್ಟರೆ ಒತ್ತಲಿಗೆ ಹೋಗಿ ಗುದ್ದಿಗುದ್ದಿ ಮೊಳ ಹಾಕಿದ

(v) ಹುಟ್ಟು ತಿರುಕನ ಮಗಳಿಗೆ ಚೀಟಿ ಸೀರೆ ಕೊಟ್ಟರೆ ಒತ್ತಲಿಗೋಗಿ ಮೊಳ ಹಾಕಿದಳಂತೆ

೧೧೨೩೯ ಉಣ್ಣಲಾರದವ ಇಕ್ಕಲಾರ

೧೧೨೪೦ ಕೊಡೋರನ್ನ ಕಂಡರೆ ಬೇಡೋರು ಬಹಳ, ಇಕ್ಕೋರನ್ನ ಕಂಡರೆ ಉಣ್ಣೋರು ಬಹಳ

೧೧೨೪೧ ತಾನುಂಡದ್ದು ಮಣ್ಣು, ಪರರಿಗುಣಿಸಿದ್ದು ಹೊನ್ನು

೧೧೨೪೨ ತೆರೆದ ಬಾಗಿಲು ಈರಣ್ಣನ ಮಠ ; ಬಂದವರು ಬಂದ ಹಾಗೆ, ಹೋದವರು ಹೋದ ಹಾಗೆ

೧೧೨೪೩ ಧರ್ಮಸತ್ರದ ಸಂತರ್ಪಣೆ ಹಾಗೆ

೧೧೨೪೪ ನೂಕುವವನ ಊಟಕ್ಕಿಂತ ಬೋಕಿಯ ಊಟ ಲೇಸು

೧೧೨೪೫ ಪೂಜೆ ಮಾಡೋರು ಕಂಡ್ರೆ ದೇವರು ಘನ, ಇಕ್ಕೋರ ಕಂಡ್ರೆ ಉಣ್ಣೋರು ಘನ

೧೧೨೪೬ ಪೂರ್ಣಯ್ಯನ ಛತ್ರವಾಗೋಯ್ತು ಮನೆ

೧೧೨೪೭ ಮಾಡದವರಿಗೆ ಮಾಡಿ ತೋರಿಸು, ಇಕ್ಕದವರಿಗೆ ಇಕ್ಕಿ ತೋರಿಸು

೧೧೨೪೮ ಸತ್ತೇಸು ಎಂಬುವವರಿಗೆ ಉಂಬೇಸು ಅನ್ನುವಷ್ಟು ಅನ್ನ

ಔದಾರ್ಯ

೧೧೨೪೯ ಅನ್ನಹಾಕಿದ ಮನೆ ಹಾಳು, ದೀಪ ಹಚ್ಚಿದ ಮನೆ ಬಾಳು

೧೧೨೫೦ ಅರೆಮಾನ ಅಕ್ಕಿತಂದು ಬೀಸಿ ತಿರುವಿ ಕೆಂಡಕ್ಕೆ ಹಾಕಿದರೆ ಮಗಳು ತಿಮ್ಮಮ್ಮ ಉಂಡು, ಮೊಮ್ಮಗಳು ತಿಮ್ಮಾಜಮ್ಮ ಉಂಡು, ಒಂದೂಮನಗಳು ಬಂದುಂಡು, ಕಿಕ್ಕೇರಿ ಮಗಳು ಇಕ್ಕಂಡುಂಡು, ಬಾಚಳ್ಳಿ ಮಗಳು ಬಾಚ್ಕೊಂಡುಂಡು, ಮಿಕ್ಕದ್ದು ಏಳೆಮ್ಮೆ ಗೊಂತಿಗೆ ಸುರಿದರೆ, ಅವು ಮುಟ್ಟದೆ ಹೋದವು

೧೧೨೫೧ ಅಂಗಕ್ಕೆ ಬಡತನವಾದರೆ ಮನಸ್ಸಿಗೂ ಬಡತನವೇ ?

೧೧೨೫೨ ಉರುಕಿ ಕೈಲಿ ಉಣ್ಣೋಕಿಂತ ಉದಾರಿ ಕೈನ ಉದಕ ಲೇಸು

೧೧೨೫೩ ಕೊಡಬೇಕಲ್ಲ ಅಂತ ಕೊಟ್ಟ ಕೂರೆ ತರಡಿನ ಗಾತ್ರವ

೧೧೨೫೪ *ಕಂಡವರ ಮನೇಲಿ ನೋಡು ನನ್ನ ಕೈ ಧಾರಾಳವ !

೧೧೨೫೫ ಕೊಡುವ ಕೈಗೆ ಮೂಳೆ ಇಲ್ಲ

೧೧೨೫೬ ಜೀರ್ಣಶಕ್ತಿ ಇದ್ದವನಿಗೆ ತಿನ್ನಕ್ಕಿಲ್ಲ, ದುಡ್ಡಿದ್ದವನಿಗೆ ದಾತೃತ್ವವಿಲ್ಲ

೧೧೨೫೭ ದೊಡ್ಡ ಮನೆ ಅಂತ ಹೋದರೆ ಹಾಕಿದ್ದು ಎರಡು ಅಕ್ಕಿಕಾಳು ಗುಬ್ಬಿಗೆ ಸಾಲಲಿಲ್ಲ

೧೧೨೫೮ ದೊಡ್ಡವರ ಕೈಗಿಡ್ಡ

೧೧೨೫೯ ಧಾರಾಳಕ್ಕೀಶ್ವರ ದಂಡನೆಯಾದರೆ ಊರಾಳು ಏನು ಮಾಡಿಯಾರು ?

೧೧೨೬೦ ಧಾರಾಳವಿದ್ದವನ ಹತ್ತಿರ ಹೇರಾಳ ಕೇಳಬಹುದು

೧೧೨೬೧ ಪರರ ವೆಚ್ಚಕ್ಕೆ ಉದಾರತನ ಹೆಚ್ಚು

೧೧೨೬೨ ಮನಸ್ಸು ದೊಡ್ಡದು, ಕೈಗಿಡ್ಡ

೧೧೨೬೩ ಮಹಾರಾಯನ ಕೈ, ಮಾಧವರಾಯನ ಕೊಳಗ

೧೧೨೬೪ ಮಾರಾಯನ ಮನೇಲಿ ಮಾರಿ ಹಬ್ಬವಾದರೆ ನನ್ನ ಮಗೀನ ಹೊಟ್ಟೆ ನಗಾರಿ ಕಾಯಾಯ್ತು

ತಾಳ್ಮೆ

೧೧೨೬೫ ಕಾದವನಿಗೆ ಕಣಕದ ರೊಟ್ಟಿ

೧೧೨೬೬ ತಗ್ಗಿದೋನಿಗೆ ಭಯವಿಲ್ಲ, ಅಂತವನಿಗೆ ಬಾಳಿಲ್ಲ

೧೧೨೬೭ ತಾಳದಲ್ಲಿ ಜಾಣ್ಮೆಯಿದ್ದರೆ ತಾಳ್ಮೆ ಇದ್ದೀತೆ ?

---

* ನೆರೆಮನೆಯಲ್ಲಿ ನೋಡು ನನ್ನ ಕೈ ಪರಿಯ !

೧೧೨೬೮ [1]ತಾಳಿದವ ಬಾಳ್ಯಾನು, ಏರಿದವ ಇಳಿದಾನು

೧೧೨೬೯ ತಾಳಿದವನಿಗೆ ತಪೋರಾಜ್ಯ

೧೧೨೭೦ ತಾಳುವಿಕೆಗಿಂತ ತಪವು ಇಲ್ಲ

೧೧೨೭೧ ತಾಳ್ಮೆಯಿದ್ದ ಪುರುಷನಲ್ಲಿ ಬೀಳಿದ್ದರೇನು ?

೧೧೨೭೨ [2]ಬಗ್ಗು ಅಂದರೆ ಎಲ್ಲಿಗಂಟ ಬಗ್ಗೋಕಾದಾತು ?

೧೧೨೭೩ ಬುಟ್ಟಿಯಷ್ಟು ಬುದ್ಧಿಗಿಂತ ಮುಟ್ಟಿಯಷ್ಟು ತಾಳ್ಮೆಬೇಕು

೧೧೨೭೪ ಬಾವಿಗೆ ಹಾರುವ ಮೊದಲು ಬಗ್ಗಿನೋಡು

೧೧೨೭೫ ಸ್ಮರಣೆ ತಪ್ಪಿದರೂ ಸೈರಣೆ ತಪ್ಪಬಾರದು

ನಿದಾನಿಸುವಿಕೆ

೧೧೨೭೬ [3]ಕುಂತು ಮಲಗು, ನಿಂತು ನಡಿ

೧೧೨೭೭ [4]ಕೂತಲ್ಲವೆ ಕಾಲು ನೀಡಬೇಕು

೧೧೨೭೮ ತಡೆದವನಿಗೆ ತಡಿ ದೊರೆತೀತು

೧೧೨೭೯ ದಾನದಾನಕ್ಕೆಲ್ಲ ನಿದಾನವೇ ದಾನ

೧೧೨೮೦ ನಿದಾನವಿದ್ದವನು ಸ್ವಾಧೀನ ತಪ್ಪಿಯಾನೆ ?

---

1 (i) ತಾಳಿದವ ಬಾಳ್ಯಾನು, ತೂಗಿದವ ನೀಗ್ಯಾನು

(ii) ಏರಿದವ ಇಳಿದಾನು, ಜಾರಿದವ ಬಿದ್ದಾನು

2 (i) ಬಗ್ಗು ಬಗ್ಗು ಅಂದರೆ ನೆಲದವರೆಗೂ ಬಗ್ಗಬಹುದು, ಆಮೇಲೂ ಬಗ್ಗೋಕಾದಾತಾ ?

(ii) ಗೂಂಕ್ಕೆ ದವ್ಮ್ರಯ್ಯ (ದೈ) ಅಂತಾರೆ, ಗೂದೆಗೂ ದವ್ಮ್ರಯ್ಯ (ದೈ) ಅಂದಾರಾ?

3 (i) ನಿಂತು ಮಲಗುವುದಕ್ಕಿಂತ ಕುಂತು ಮಲಗುವುದು ಲೇಸು

(ii) ಕೂತು ಮಲಗಬೇಕು

4 ಕೂತು ಕಾಲು ಚಾಚಬೇಕು

೧೧೨೮೧ ನಿದಾನವಿದ್ದಷ್ಟೂ ಸ್ವಾಧೀನವಿರುವುದು

೧೧೨೮೨ ನಿಧಿ ಇದ್ದರೂ ನಿದಾನವಿರಬೇಕು

ನಿಧಾನ ಪ್ರಕೃತಿ

೧೧೨೮೩ ಊರ್ಮಿಳಾ ದೇವಿ ಬಚ್ಚಲಲ್ಲಿ ಕುಳಿತ ಹಾಗೆ

೧೧೨೮೪ ನೀರು ನಿಲ್ಲದವಳ ಕೈಲಿ ನಿದಾನವಿಲ್ಲ

ಆತುರ

೧೧೨೮೫ ಅಟ್ಟಕ್ಕೆ ಏರೋಕ್ಹೋಗಿ ತಲೆ ಗಟ್ಟಿಸಿಕೊಂಡ ಹಾಗೆ

೧೧೨೮೬ ಅನ್ನ ಬೇಯುವವರೆಗೆ ಇದ್ದವಳು ಬಸಿಯುವ ತನಕ ಇರಲಾರಳು

೧೧೨೮೭ ಅವಸರ ಮಾಡಿ ರಸಭಂಗ ಮಾಡಿಕೊಂಡ

೧೧೨೮೮ ಅವಸರ ಹುಟ್ಟಿದರೆ ಅಜ್ಜನ ಕಾಲಿಗೂ ಬಲಬರುತ್ತದೆ

೧೧೨೮೯ ಅವಸರಕ್ಕೆ ನನಗಂಡ ಮೆಣಸಾಳೆ ಒಲ್ಲ

ಅವಸರಕ್ಕೆ ನಿಯಮವಿಲ್ಲ

೧೧೨೯೧ ಅವಸರಕ್ಕೆ (ಸಂತೆ ಹೊತ್ತಿಗೆ) ಮೂರು ಮೊಳ ನೇದ ಹಾಗೆ

೧೧೨೯೨ ಅವಸರದಲ್ಲಿ ಅಜ್ಜಿ ಮೈ ನೆರೆದಳು

೧೧೨೯೩ ಅವಸರದಲ್ಲಿ ಕೋಟೆ ಬಾಗಿಲು ತಲೆ ಒಡಿಸಲಿಲ್ಲವಂತೆ

೧೧೨೯೪ ಅವಸರದಲ್ಲಿ ದಿಗಂಬರನಾಗಿ ಎದ್ದೋಡಿವನಂತೆ

೧೧೨೯೫ ಅವಸರದಾಗ ನನ್ನ ಗಂಡ 'ಅವಕ್' ಅಂದ

೧೧೨೯೬ ಆಗವ ಕೆಲಸಕ್ಕೆ ಅವಸರಪಟ್ಟು ಅಪಹಾಸ್ಯಕ್ಕೆ ಗುರಿಯಾಗ
ಭಾರದು

೧೧೨೯೭ [1]ಆಗುವ ತನಕ ತಡೆದು ಆರುವ ತನಕ ತಡೆಯಲಿಲ್ಲ

೧೧೨೯೮ ಆತ್ರ ಗೋತ್ರ ಕೆಡಿಸಿತು

೧೧೨೯೯ ಆತುರಪಟ್ಟರೆ ಆಗುವುದು ಅರೆವಾಸಿ ಕೆಲಸ

೧೧೩೦೦ ಆತುರಗಾರ ಮನ್ನ ಮೂತ್ರದಲ್ಲಿ ಮೊಕ ತೊಳೆದ

೧೧೩೦೧ ಆತುರಗಾರನಿಗೆ ಕಾತರ ಹೆಚ್ಚು

೧೧೩೦೨ ಆತುರಗಾರನಿಗೆ ನೆಲದಲ್ಲಿ ಹಾಕಿ, ನನಗೆ ಎಲೆಯಲ್ಲಿ ಹಾಕಿ

೧೧೩೦೩ *ಆತುರಗಾರನಿಗೆ ಬುದ್ಧಿ (ಸುದ್ದಿ) ಮ (ಟ್ಟ)ಟ್ಟ
(ಮಡ್ಡು. ಮಂಕು)

೧೧೩೦೪ ಆತುರಗಾರನಿಗೆ ಮಾತಾಡೋಕೆ ಪುರುಸತ್ತಿಲ್ಲ

೧೧೩೦೫ ಆತುರದಿಂದ (ಅನಾಹುತ) ಅನರ್ಥ

೧೧೩೦೬ ಆತುರಪಡಿಸೋರನ್ನ ಕೊಳೆ ಹಾಕಿದರು

೧೧೩೦೭ ಆದ ಅಡಿಗೆಯಾದರೂ ಆರಬೇಡವೆ ?

೧೧೩೦೮ ಊರಿಗೆ ಹೋಗುವವನಿಗಿಂತ ನೀರಿಗೆ ಹೋಗೋನು ಅವಸರ ಮಾಡಿದ

೧೧೩೦೯ [2]ಎತ್ತು ಹಾರುವುದಕ್ಕಿಂತ ಮುಂಚೆ ಗೋಣಿ (ಕವುದಿ, ಸಬರ) ಎದ್ದೆದ್ದು ಹಾರಿತು

೧೧೩೧೦ ಒಂದೇ ನಗರದಲ್ಲಿ ನಗರ ನಿರ್ಮಾಣವಾಗಲಾರದು

---

1 (i) ಆಗುವವರೆಗೆ ಇದ್ದವಳು ಆರುವವರೆಗೆ ಇರಲಾರಳೆ ?

(ii) ಅಡೋತನಕ ಇದ್ದು ಆರುವ ತನಕ ಇರಲಿಲ್ಲ

* ತೆ. ಆತುರಗಾನಿಕಿ ತೆಲಿವಿ ಮಂದ್ದು

ತ. ಆತುರಗಾರನುಕ್ಕು ಬುದ್ಧಿ ಮಟ್ಟು

2 ಎತ್ತು ಎಳಿಯೋಕೆ ಮೊದಲೇ ನೊಗ ಎದ್ದೆದ್ದು ಕುಣೀತಂತೆ

೧೧೩೧೧ [1]ಕುದಿಯೊ ಅವರೆ ಬಾಯೊಳಗೆ ಹಾಕಿಕೊಂಡ ಹಾಗೆ

೧೧೩೧೨ ಕುರಿ ಸತ್ತರೂ ತಿನ್ನೋವರೆಗೆ ತೃಪ್ತಿಯಿಲ್ಲ

೧೧೩೧೩ ಕುಂಡಿಗೆ ತೊಣಚಿ ಹೊಕ್ಕ ಹಾಗೆ ಆಡ್ತಾನೆ

೧೧೩೧೪ ಗೌಡನಿಗೆ ಅವಸರವಾದರೆ ಎರಡೊಂದಾಗಿ ಹಾಡೋಕಾಗುತ್ಯೇ ?

೧೧೩೧೫ ತಡವಾಗಿದ್ರೂ ಹದ್ವಾಗವ್ನೆ

೧೧೩೧೬ ತತ್ತರಿಬಿತ್ತರಿಯುವನ ಮುಂದೆ ಕತ್ತೆಯು ಹಾಗೆ ಆದ

೧೧೩೧೭ ತವಕಪಟ್ಟವ ತಬ್ಬರಿಸಿ ಬಿದ್ದ

೧೧೩೧೮ ತ್ವರೆ ಪಟ್ಟರೆ ಮರಿ (ರೆ) ಯಾಗುವುದೊ ?

೧೧೩೧೯ ತುಡು ಮುದ್ಕಿ ಜೀವ ತುಪ್ಪದ ಗಡಿಗೇಲೂ ನಿಲ್ದು, ಎಲ್ಲೂ ನಿಲ್ದು

೧೧೩೨೦ ತೊಗರಿ ಬೇಯೋಕ್ಮುಂಚೆ ತುಟಿ ಕಚ್ಕೊಂಡ ಹಾಗೆ

೧೧೩೨೧ ದಡವಡನೆ ಬಂದು ಬುಡಬುಡನೆ ಹೋದ

೧೧೩೨೨ ದಾಟಿಯಿಂದ ಬಂದು ಮೋಟನಾದ

೧೧೩೨೩ ದೋಸೆ ಬಿಸಿಯೆಂದು ಮುಸಿ ಕೆಂಡ ನುಂಗಿದ

೧೧೩೨೪ ನಿರುಮ್ಮು ಇಲ್ಲದ ಮನಸ್ಸು ನಿದಾನವಿಲ್ಲ

೧೧೩೨೫ ನಿಲ್ಲದಿರುವ ಮಲ್ಲನನ್ನು 'ಕಲ್ಲು ಹೊತ್ತೀಯಾ ?' ಅಂದ

೧೧೩೨೬ ಬರಬರನೆ ಹೋಗುವವನನ್ನು 'ಹೊರೆ ಹೊತ್ತೀಯಾ ?' ಅಂದಹಾಗೆ

೧೧೩೨೭ ಬೇಗನೆ ಮಾಡಿದ್ದು ಹಾಗೆಯೇ ಹೋಗುವುದು

೧೧೩೨೮ [2]ಹನ್ನೊಂದುದಿವಸ ಇದ್ದವನು ಇನ್ನೊಂದಿವ್ಸ ಇರಲಾರನೆ ?

---

1 ಎದೆಗುದಿಪಟ್ಟು ಕುದಿಯೊ ಅವರೆ ಬಾಯಿಗೆ ಹಾಕ್ಕೊಂಡ ಹಾಗೆ

2 ಹನ್ನೊಂದುತಿಂಗಳು ಇದ್ದವಳು ಇನ್ನೊಂದು ತಿಂಗಳು ಇರಲಾರಳೆ ?

ದುಡುಕು

೧೧೩೨೯ ಒಮ್ಮೆ ಕತ್ತರಿಸುವುದಕ್ಕಿಂತ ಮೂರುಸಲ ಅಳತೆಮಾಡಿನೋಡು

೧೧೩೩೦ ದುಡುಕಿದರೆ ದುಗುಡ

೧೧೩೩೧ ದುಡುಕಿದ್ದವಗೆ ಬಡತ(ನ) ತಪ್ಪದು

೧೧೩೩೨ ನುಗ್ಗಿದವನಿಗೆ ಹಗ್ಗ ತಪ್ಪೀತೆ ?

ಕರುಣೆ

೧೧೩೩೩ ಅಜ್ಞಾತರಲ್ಲಿ ಜಿಜ್ಞಾಸೆಯಿರಬೇಕು
ಅಜ್ಞರಲ್ಲಿ ಕನಿಕರವಿರಬೇಕು

೧೧೩೩೪ ಕಟುಕರಲ್ಲಿ ಕರುಣೆಯೆ ?

೧೧೩೩೫ ಕಡಗವಿಲ್ಲದ ಕೈ, ಕರುಣೆಯಿಲ್ಲದ ಪುರುಸ

೧೧೩೩೬ ಕರುಣೆಯಿಲ್ಲದ ಬಾಳು ಕಲ್ಲಿಗಿಂತ ಕಡೆ

೧೧೩೩೭ [1]ಗಾಣಗಿತ್ತಿ (ಗಾಣತಿ. ಎಣ್ಣೆಗಾಣಿಗ) 'ಅಯ್ಯೋ' ಅಂದರೆ
ನೆತ್ತಿ ತಣ್ಣಗಾದೀತೆ ?

೧೧೩೩೮ ಚಂಡಾಲನಿಗೆ ಕರುಣೆಯಿಲ್ಲ
ಮುಂಡಾಸಿನವನಿಗೆ ಮಣೆಯಿಲ್ಲ

೧೧೩೩೯ ತಾರುಣ್ಯವೇ ರೂಪು, ಕಾರುಣ್ಯವೇ ಗುಣ

೧೧೩೪೦ ದಯವಿಲ್ಲದ ಧರ್ಮವಿಲ್ಲ

೧೧೩೪೧ [2]ನಯವಾಗಲಿ ಭಯವಾಗಲಿ ಇಲ್ಲದವ ದಯವೇನು ಮಾಡ್ಯಾನು

೧೧೩೪೨ ಮಂಜಿನಹಾಗೆ ಮನಸ್ಸು ಕರಗೀತು
ಎದೆಯಹಾಗೆ ಕಲ್ಲು ಕರಗೀತೆ ?

---

1 ಬೀದೀಲಿ ಹೋಗೋ ಮಕ್ಕಳಕಂಡು ಗಾಣಗಿತ್ತಿ 'ಅಯ್ಯೋ !' ಅಂದಹಾಗೆ

2 ನಯ ಭಯಗಳಿಲ್ಲದವ ದಯವೇನು ಮಾಡ್ಯಾನು ?

ಕೀರ್ತಿ

೧೧೩೪೩ *ಅಳಿಯುವುದು ಕಾಯ, ಉಳಿಯುವುದು ಕೀರ್ತಿ

೧೧೩೪೪ ಕಾಂಚನಕ್ಕಿಂತ ಕೀರ್ತಿಯೇ ಶ್ರೇಷ್ಠ

೧೧೩೪೫ ಕೀರ್ತಿಯೇ ಕೈಲಾಸ, ಅಪಕೀರ್ತಿಯೇ ನರಕ

೧೧೩೪೬ ಖ್ಯಾತಿಯ ಮುಂದೆ ಜಾತಿಯೇ ?

೧೧೩೪೭ ಧನಕ್ಕಿಂತ ಮಾನವೇ ಮಿಗಿಲು
ಹಣಕ್ಕಿಂತ ಕೀರ್ತಿಯೇ (ಹೆಸರೇ) ಹಸನು

೧೧೩೪೮ ನಾಮವಿದ್ದವನು ನಾಯಕ

೧೧೩೪೯ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು

ಕೀರ್ತಿಶನಿ

೧೧೩೫೦ ಊರ ದನ ಕಾಯ್ದು ದೊಡ್ಡಬೋರೇಗೌಡ ಅನಿಸಿಕೊಂಡ ಹಾಗೆ

೧೧೩೫೧ ಕೀರ್ತಿಗೆ ಹೋಗಿ ಕೋಲು ಮುರಿಸಿಕೊಂಡ

೧೧೩೫೨ ತೋಳು ಪೂಜಿಸಿಕೊಳ್ಳುವುದಕ್ಕೆ ಹೋಗಿ ಮೂಳನಾದ

೧೧೩೫೩ ದೊಡ್ಡತನಕ್ಕೆ ಗುಗ್ಗುಳ ಹೊತ್ತರೆ ಬಗಲಾಗಿನ ಕೂದಲು
ಊರೆಲ್ಲ ನೋಡಿತು

೧೧೩೫೪ ಸಂಬಳ ಸಾರಿಕೆ ಏನಿಲ್ಲದಿದ್ದರೂ ನನ್ನ ಗಂಡನ್ನ 'ಸುಬೇದಾರ'
ಅಂದರೆ ಎಷ್ಟೋ ಹೆಚ್ಚಾಳ ಅಂದಳಂತೆ

ಅಪಕೀರ್ತಿ

೧೧೩೫೫ ದೆಸೆ ನೋಡಿದರೆ ಮೂರುಪಾಲು,
ಕೀರ್ತಿ ನೋಡಿದರೆ ಕಿಲುಬು ದುಗ್ಗಾಣಿ

---

* ಕಾಯ ಅಳಿದರೂ ಚಿಂತೆಯಿಲ್ಲ, ಕೀರ್ತಿ ಉಳಿಯಬೇಕು

೧೧೩೫೬ ಪ್ರಕಾಶವಿಲ್ಲದೆ ಆಕಾಶಕ್ಕೆ ಹೋದರೇನು ?

೧೧೩೫೭ ಪ್ರಸಿದ್ಧವಾದದ್ದು ನಿಷಿದ್ಧವಾಗದೆ ?

೧೧೩೫೮ ಭರ್ತಿಮಾಡುವವ ಕೀರ್ತಿಪಟ್ಟಾನೆ ?

೧೧೩೫೯ *ವಿಖ್ಯಾತಿಪಟ್ಟರೂ ಅಪಖ್ಯಾತಿ ಹೋಗಲಿಲ್ಲ

ಉಪಕಾರ

೧೧೩೬೦ ಅಪಕಾರ ಮಾಡಿದವರಿಗೂ ಉಪಕಾರ ಮಾಡಬೇಕು

೧೧೩೬೧ ಕಸ ಇದ್ದ ತಾವ ಬಸವಣ್ಣ

೧೧೩೬೨ ಕಟ್ಟುವ ಕೆರೆಗೆ ಒಂದು ಕಲ್ಲು ಹಾಕು

೧೧೩೬೩ ದೇವಸ್ಥಾನಕ್ಕೆ ಹೋಗಿ ಶ್ರದ್ಧಿಸದಿದ್ದರೆ ಧೂಪ ಹಾಕಿ
(ಊದಿನ ಕಡ್ಡಿ ಹಚ್ಚಿ)ದಷ್ಟು ಫಲ

೧೧೩೬೪ ನಾವು ಒಬ್ಬರಿಗಾದ್ರೆ ನಮಗೂ ಯಾರಾದ್ರೂ ಆಗ್ತಾರೆ

೧೧೩೬೫ ಪರೋಪಕಾರಿಗಳಿಗೆ ಪಾಲೇಕೆ ?

೧೧೩೬೬ ಪರೋಪಕಾರದಂಥ ಪುಣ್ಯವಿಲ್ಲ, ಪರಪೀಡೆಯಂಥ ಪಾಪವಿಲ್ಲ

೧೧೩೬೭ ಪರೋಪಕಾರವು ಪುಣ್ಯದ ತಾಯಿ
ಪುಣ್ಯವು ಪುರುಷಾರ್ಥದ ತಾಯಿ

೧೧೩೬೮ ಮನೆಗೆ ಮಾರಿ, ಪರರಿಗೆ ಉಪಕಾರಿ

೧೧೩೬೯ ಹೂವಿಗೆ ಬಡತನವಾದ್ರೂ ಹೂಸಿಗೆ ಬಡತನವಿಲ್ಲ

೧೧೩೭೦ ಹೂಸದಿದ್ದರೆ ಹೂ ಕೊಟ್ಟಷ್ಟು ಫಲ

---

* (i) ವಿಖ್ಯಾತಿ ಹೊಂದಿ ಅಪಖ್ಯಾತಿ ಪಟ್ಟ
(ii) ಪ್ರಖ್ಯಾತಿ ಹೊಂದಿ ಅಪಕೀರ್ತಿ ಹೊಂದಿದ ಹಾಗೆ

ಕೃತಜ್ಞತೆ

೧೧೩೭೧ ಅನ್ನ ಇಕ್ಕಿದವರ ಮನೆ ತಣ್ಣಗಿರಲಿ

೧೧೩೭೨ ಅನ್ನ ಇಟ್ಟವರನ್ನು ಎದ್ದವನೇ ನೆನೆ

೧೧೩೭೩ ಆದವರನ್ನು ಅರುತಾಸು ರಾತ್ರಿ ನೆನಿ

೧೧೩೭೪ ಉಪ್ಪಿನ ಋಣ ಇಪ್ಪತ್ತು ಜನ್ಮದಾದರೂ ತೀರುವುದಿಲ್ಲ

೧೧೩೭೫ ಉಪ್ಪು ಇಕ್ಕಿದವರನ್ನು ಮುಪ್ಪಿನವರೆಗೆ ನೆನೆ

೧೧೩೭೬ ಉಂಡವ ಹರಸಬೇಕು, ಕಂಡವ ಮರೆಯಬೇಕು

೧೧೩೭೭ ಜನ್ಮಕೊಟ್ಟವಳು ತಾಯಿ, ಅನ್ನ ಕೊಟ್ಟವನು ದಾತ

೧೧೩೭೮ ಒಟ್ಟಿಕ್ಕಿದವರ ಹೊಟ್ಟೆ (ಮನೆ) ತಣ್ಣಗಿರಲಿ

ಕೃತಘ್ನತೆ

೧೧೩೭೯ *ಅನ್ನಹಾಕಿದ ಮನೆಗೆ ಕನ್ನಹಾಕಿದ

೧೧೩೮೦ ಅಪಕಾರ ಮಾಡುವವ ಅಪಕೀರ್ತಿಗಂಜ್ಯಾನೆ ?

೧೧೩೮೧ ಆದವರನ್ನು ಅಲ್ಲಮಾಡಿ ಬೂದಿಯಲ್ಲಿ ಹೋಮಮಾಡಿದರು

೧೧೩೮೨ 'ಇತ್ತತ್ತ ಬಾ' ಅಂದರೆ (ಹೆಗಲ ಮೇಲೆ ಹತ್ತಿಕೊಂಡ)
ಇದ್ದ ಮನೆ ಕಿತ್ತುಕೊಂಡ

೧೧೩೮೩ ಇರಲಿಕ್ಕೆ ಇಂಬು (ಮಲಗಲಿಕ್ಕೆ ಚಾಪೆ)ಕೊಟ್ಟರೆ
ಮನೆಯೇ ನನ್ನದು ಅಂದ

೧೧೩೮೪ ಈಚಲ ಗಿಡಕ್ಕೆ ನೀರೆರೆದ ಹಾಗೆ

೧೧೩೮೫ ಉಪಕಾರ ಮರೆತು ಬೈಗಳ ಬಂತು

---

* ಉಂಡಮನೆಗೆ ಕಿಂಡಿ ಕೊರೆದ

೧೧೩೮೬ [1]ಉಪಕಾರಕ್ಕೆ ಅಪಕಾರ ಮಾಡಿದ ಹಾಗೆ

೧೧೩೮೭ ಉಪಕಾರವರಿಯದವನನ್ನು ನಿಪುಣನೆಂದು ಹೇಳಬೇಡ

೧೧೩೮೮ ಉಪ್ಪುಂಡ ಮನೆಗೆ ಎರಡು ಬಗೆದ

೧೧೩೮೯ ಉಪ್ಪುಂಡು ಕುತ್ತಿಗೆ ಕೊಯ್ಯಾರ್ಯೇ ?

೧೧೩೯೦ ಉಪ್ಪುಂಡು ಸಪ್ಪಗನ್ನಬಾರದು

೧೧೩೯೧ ಉಂಡ ಊಟ ತುಂಡುಗಂಬಳಿಗೆ ಸಮ

೧೧೩೯೨ ಉಂಡಮನೆ ದೂರಿದ

೧೧೩೯೩ ಉಂಡ ಮನೆ ಗಳ(ಜಂತೆ, ಜಾತಿ) ಎಣಿಸಬೇಡ

೧೧೩೯೪ ಉಂಡಮನೆಗೆ ಎರಡು ಬಗೆದು ತುಂಬಿದ
ಕೆರೆಗೆ ಕುಂಡೆ ತೋರಿಸಬೇಡ

೧೧೩೯೫ ಉಂಡ ಮನೆಗೆ ಎರಡು ಬಗೆಯಬೇಡ
[2]ತಲೆ ಸೆರಗು ತೆಗೆದು ನಿಲಬೇಡ

೧೧೩೯೬ ಉಂಡ ಮನೆಗೆ ಕೆಂಡಸುರಿಯೊ ಬುದ್ಧಿ

೧೧೩೯೭ ಉಂಡಮನೆಗೆ ದಂಡ ಬಗೆಯಬಾರದು

೧೧೩೯೮ ಏರಿದ ಏಣಿ ಕಾಲಲ್ಲಿ ಒದ್ದ

೧೧೩೯೯ ಒರಗಿದವರ ಮೇಲೆ ಪ್ರಾಣ ಬಿಡುವುದು

೧೧೪೦೦ ಕದ್ದು ಹೋಳಿಗೆ ಕೊಟ್ಟರೆ ತುಪ್ಪವಿಲ್ಲ
(ಬೆಣ್ಣೆ (ಸಿಹಿ) ಸಾಲದು) ಅಂದನಂತೆ

೧೧೪೦೧ ಕೆರೆಯಲ್ಲುಂಡು ತೊರೆ ಹೊಗಳಿದಂತೆ

೧೧೪೦೨ ತನ್ನ ರೊಟ್ಟಿ ತನ್ನ ಕಪಾಲಕ್ಕೆ ಹೊಡೆಯಿತು

---

1 ಉಪಕಾರ ಮಾಡಿದವನಿಗೆ ಅಪಕಾರ ಮಾಡಬಾರದು

2 ತುಂಬಿದ ಕೆರೆಗೆ ಕಲ್ಲುಹಾಕಬೇಡ

೧೧೪೦೩ ತಲೆ ಒಡೆವವನೂ ಒಂದೇ, ಲೇಪ ಹಾಕಿದವನೂ ಒಂದೇ

೧೧೪೦೪ [1]ತಾನು ನೆಟ್ಟಬೀಳು ತನ್ನ ಎದೆಗೆ ಹಬ್ಬಿತು

೧೧೪೦೫ ತಿಂದಿದ್ದಾಗ್ಲೆ ತಿಕ್ಕಾಣ್ಸೋಯ್ತು, ನೀವನಿಕ್ದೆ ಅಂದಂಗೆ

೧೧೪೦೬ ನಮ್ಮನೆ ಅನ್ನ ಉಂಡು ನಮಗೇ ಎರಡು ಬಗೆದ

೧೧೪೦೭ ನಾಯಿಗೆ ಮಾಡಿದರೆ ನಷ್ಟ,
ದೇವರಿಗೆ ಮಾಡಿದರೆ ದೃಷ್ಟ

೧೧೪೦೮ ನಾಯಿಗೆ ಮಾಡಿದೆಯೊ, ನಾತ ಕುಡಿದೆಯೊ

೧೧೪೦೯ ನೂರು ಹಾರಿ ಹೋಯಿತು, ಎರಡು ಬೆರಸಿ ಬಂತು

೧೧೪೧೦ ಬೋನಾಸಿಗೆ ಜಾಗ ಕೊಡೋವತ್ಗೆ ಪೂರ್ತಿ ಮನೆಯನ್ನೇ
ಆಕ್ರಮಿಸಿಕೊಂಡ

೧೧೪೧೧ ಪಕ್ಷ ಪಾಂಡವರಲ್ಲಿ, ಊಟ ಕೌರವರಲ್ಲಿ

೧೧೪೧೨ ಪಥ್ಯ ಹಾಕುವವನ ಕೈ ಕಚ್ಚಿದ

೧೧೪೧೩ ಬಿದ್ದಿ (ಹಸಿದಿ)ದ್ದವನಿಗೆ ಬಿಸಿಮುದ್ದೆ ಕೊಟ್ಟರೆ
ಎದ್ದುಬಂದು (ಮುಂದೆಲೆ ಹಿಡ್ಕಂಡ್ನಂತೆ) ಎದೆಗೊದ್ದನಂತೆ

೧೧೪೧೪ ಮನೆ ಮಾಡಿದ ಅಜ್ಜಿ ಹೊರಗಿರು

೧೧೪೧೫ [2]ಮಲಗು ಅಂತ ಮಂದಲಿಗೆ ಕೊಟ್ಟರೆ ಕಿವಿ ಹತ್ತಿರ ಬಂದು
ಉಚ್ಚೆಹುಯ್ದ

೧೧೪೧೬ ಮಿಾಸೆ ಬಂದಮೇಲೆ ಮೂಗು ಯಾರಿಗೆ ನೆನಪಿರುತ್ತದೆ

೧೧೪೧೭ ಮುತ್ತಿಡುವ ಕೈಗೆ ಮುತ್ತಿಗೆ ಹಾಕಿದ ಹಾಗೆ

---

1 ತಾನೆಟ್ಟುದು ತನಗೇ ಅಂಬಾಯಿತು

2 ಮಲಗೂಕೆ ಮನೆಕೊಟ್ಟರೆ ಕಿವಿಯೊಳಗೆ ಉಚ್ಚೆಹುಯ್ದ

೧೧೪೧೮ ಮೂಗು ಕೊಟ್ಟವನನ್ನು ಬಿಟ್ಟು ಮೂಗುತಿ ಕೊಟ್ಟವನನ್ನು ನೆನಸಿದಂತೆ

೧೧೪೧೯ ಯಾರಿಗೆ ಮಾಡಿದ್ರೆ ಏನು ಹಿತ ?

೧೧೪೨೦ ಸಾಕಿದ ನಾಯಿ (ಕಾಲು ಕಚ್ಚಿತು) ಏನು ಮಾಡೀತು, ಬದುಕಿದ್ದರೆ ಕಾಲು ಕಚ್ಚೀತು

೧೧೪೨೧ ಸಾಕಿದವನ ಮನೆಗೆ ಸಗಣಿ ನೀರು ಹಾಕಿದಂತೆ

೧೧೪೨೨ ಸಾಗಿದರೆ ಉಪಕಾರ, ಇಲ್ಲದಿದ್ದರೆ ಅಪಕಾರ

೧೧೪೨೩ ಹಾಲು ಕೊಡಲು ಹೋದರೆ ಕಾಲು ಕಚ್ಚಲು ಬಂದ

೧೧೪೨೪ ಹಾಲುಂಡ (ಮಜ್ಜಿಗೆ) ಕೊಟ್ಟವ್ರ ಮನೆ ಕರು ಸಾಯಲಿ

೧೧೪೨೫ ಹಾಲುಂಡ ಮನೆಗೆ ಗುಂಡು ಹಾಕಬೇಡ

೧೧೪೨೬ ಹಾಲುಂಡ ಮನೆಗೆ (ಅನ್ಯಾಯ ಮಾಡಿದ)ವಿಷ ಹಾಕಿದ

೧೧೪೨೭ [1]ಹಾವಿಗೆ ಹಾಲೆರೆದ ಹಾಗೆ

೧೧೪೨೮ ಹುಲಿಗೆ ಉಪಕಾರ ಮಾಡಿದರೆ ಮೇಲೆ ಬೀಳದೆ ಇರುತ್ತ್ಯೇ ?

೧೧೪೨೯ ಹೊಕ್ಕಮನೆ ಹೆಂಚು ತೆಗೆ (ಎಣಿಸಿ)ದ

ಉಪಕಾರಿಗೆ ಬರುವ ಉಪದ್ರವ

೧೧೪೩೦ ಉಪಕಾರಕ್ಕೆ ಹೋದರೆ ಉಪದ್ರವ ಬಂತು

೧೧೪೩೧ [2]ಊರ ಉಸಾಬರಿ ಕಟ್ಕೊಂಡು ಉಲ್ಲಾಸಪ್ಪ ಬಡವಾದ

---

1 ಹಾವಿಗೆ ಹಾಲೆರೆದರೆ ಅಮೃತ ಕೊಟ್ಟೀತೆ ?

2 (i) ಊರ ಚಿಂತೆ ಕಟ್ಕೊಂಡು ವೀರ (ಕೋರಿ)ಶೆಟ್ಟಿ, ಬಾಜಿ ಸಾಬಿ(ಕೊತ್ವಾಲ) ಬಡವಾದಂತೆ

(ii) ಊರ ಉಸಾಬರಿ ತೆಗೆದುಕೊಂಡ, (ಹಿರಿಯತನ ಮಾಡಿ) ಜೋಗಪ್ಪ ದಂಡ ಕೊಟ್ಟನಂತೆ

೧೧೪೩೨ ಊರ ಗಂಟೆಗೆ ಓಬಳಿ ಸಿಡಿ ಆಡಿದನಂತೆ

೧೧೪೩೩ ಊರ ಮಾತಾಡಿ (ಉಣಲು ಹೋದಂತೆ) ಉಣದೆ ಕೆಟ್ಟರು

೧೧೪೩೪ [1]ಊರಿ (ದಾಯಾದಿ)ಗೆ ಮಾಡಿದ ಉಪಕಾರ,
ಹೆಣಕ್ಕೆ ಮಾಡಿದ ಶೃಂಗಾರ

೧೧೪೩೫ ಊರೆಲ್ಲ ಮಾಡಿದ್ದಕ್ಕೆ ನನ್ನಮಗ ಹಣಕೊಟ್ಟ

೧೧೪೩೬ ಪಳೂರು ಗೌಡಿಕೆ ಮಾಡಿ ತೋಳಿಗೆ ಅಂಗಿ ಕಾಣದೆ ಹೋದನಂತೆ

೧೧೪೩೭ ಗ್ರಾಮಶಾಂತಿಗೆ ತಳವಾರ ತಲೆ ಬೋಳಿಸಿಕೊಂಡನಂತೆ

೧೧೪೩೮ ತಾವು ಕೊಟ್ಟು ನೋವು ಪಡಕೊಂಡ

೧೧೪೩೯ ಪರಹಿತಮಾಡಿ ತನ್ನಹಿತ ತಪ್ಪಿಸಿಕೊಂಡ

೧೧೪೪೦ ಪರಿಷೆ ಯಜಮಾನ ಅಂತ ಪರರ ಹೇಸಿಕೆ ತೆಗೆಸಿದರು

೧೧೪೪೧ ಪುಣ್ಯಕ್ಕೆ ಹೋದರೆ ಪಾಪ ಬಂತು

೧೧೪೪೨ ಮಸಿಕದ ಕೊಟ್ಟು ಬೆಳಗೂ ನಾಯಿ ಹೊಡೆದರಂತೆ

೧೧೪೪೩ ಮಾನುವನಕ ಮಾಡಿ ಮಾರ್ನೋಮಿಯಲ್ಲಿ 'ಛೀ !' ಅನ್ನಿಸಿಕೊಂಡ

೧೧೪೪೪ ಮೊಸಳೆಗೆ ಉಪಕಾರ ಮಾಡಿ ನಶಿಸಿ ಹೋದ ಹಾಗೆ

೧೧೪೪೫ [2]ಹತ್ತರ ತಾಯಿ ಬೀದಿಯಲ್ಲಿ ಬಿದ್ದು ಸಾಯಿ

೧೧೪೪೬ ಹೆರವರಿಗೆ ಮಾಡಿ ಹೆಡಕುರಳ ಕೊಂಡದಂತೆ

೧೧೪೪೭ ಹೆರವರಗೊಡವೆಗೆ ಕರೆ ಮೀಸೆ ಸುಟ್ಟುಕೊಂಡರಂತೆ

೧೧೪೪೮ ಹೇಸಿಕೆ ಎತ್ತಿ ಹೆಣಹಾಪಿ ಅನಿಸಿಕೊಂಡ

---

1 (i) ಊರು ಉಪಕಾರವರಿಯದು. ಹೆಣ ಶೃಂಗಾರವರಿಯದು
(ii) ಊರು ಉಪಕಾರ ಹರ್ಕ, ಹೆಣಕ್ಕ ಶೃಂಗಾರ ಹರ್ಕ (ಹವ್ಯಕ)

2 (i) ಹತ್ತು ಮಕ್ಕಳ (ಮುಂದಿಯ) ತಾಯಿ ಮೊಳೆಯಲ್ಲಿ ಬಿದ್ದು ಸತ್ತಳಂತೆ
(ii) ಹಲವು ಮಕ್ಕಳ ತಾಯಿ ಹಾದಿಯಮೇಲೆ

ಕಾರ್ಯಾಂತೇ ಅಪ್ರಯೋಜಕಃ

೧೧೪೪೯ ಆಗುವವರೆಗೆ ಅಗನಿಗುಂಟ, ಆದಮೇಲೆ ಬಗನಿಗುಂಟ

೧೧೪೫೦ ಆಗುಗಂಟ "ನಮ್ಮ ಹೆಡ್ತಿ ಕೊಡ್ತೀವಿ" ಅಂತಾರೆ,
ಆದಮೇಲೆ "ನಿನ್ನ ಹೆಡ್ತಿ ಕೊಡ್ತೀಯಾ ?" ಅಂತಾರೆ

೧೧೪೫೧ ಅಗೊಗಂಟ ಅಣ್ಣಾರಾಯ, ಆದಮೇಲೆ ದೊಣ್ಣೆರಾಯ

೧೧೪೫೨ ಉಂಡಾಗೊ ತನಕ 'ಬಾಳೆ ಹಾಕ್ತೀನಿ, ಬದನೆ ಹಾಕ್ತಿನಿ'ಅಂದ
ಉಂಡಾದ ಮೇಲೆ 'ನನ್ನ ಗಂಡೆ ಹಾಕ್ತೀನಿ' ಅಂದ

೧೧೪೫೩ ಕೊಳು ತೆಗೆದಮೇಲೆ 'ಬೋಳಿಮಗ'ಅಂದರೆ ಕೇಳ್ತಾನ್ಯೆ ?

೧೧೪೫೪ ಕೆಲಸ ಆಗೋತನಕ ನಂದು ಓಡಿ, ಆಮೇಲೆ ನಿಂದು ಓಡಿ

೧೧೪೫೫ ಗಿರಿ ಕಂಡಮೇಲೆ ಕುಂಟ ದಾಸಯ್ಯನ ಕಾಲು ಯಾಕೆ ಹಿಡಿಬೇಕು

೧೧೪೫೬ ಗೋಳಿ ಬಾ (ಬೇ)ರು ದಾಟಿದ ಮೇಲೆ ಗೋಪಾಲರಾಯ

೧೧೪೫೭ ತಿನ್ನುವ ತನಕ ದೊಂಬರ ಸನ್ನೆ
ತಿಂದಮೇಲೆ ಪಾಣನ ವೇಷ

೧೧೪೫೮ ತೀಟೆ ತೀರಿದಮೇಲೆ ತೌಡಿ ಸಂಗವೇನು ?

೧೧೪೫೯ *ತೊರೆ ಇಳಿದ ಮೇಲೆ ಅಂಬಿಗನ ಹಂಗೇನು ?

೧೧೪೬೦ ಪೊಟ್ಟಣ ಕಟ್ಟಿದ ಮೇಲೆ ತಟ್ಟನೆ ಹೋಗನೆ?

೧೧೪೬೧ ಮಳೆ ನಿಂತಮೇಲೆ ಕೊಡೆ ಭಾರವಲ್ಲವೆ?

೧೧೪೬೨ ಸಮಯವಾದ ಮೇಲೆ ಬಿಜ್ಯತ್ತಿ ಹೊರಗೆ

೧೧೪೬೩ ರೋಗ ವಾಸಿಯಾದ ಮೇಲೆ ವೈದ್ಯನ ಹಂಗೇನು?

---

* (i) ಹೊಳೆ (ದೋಣಿ) ದಾಟಿದಮೇಲೆ ಅಂಬಿ (ಗಾರನ)ಗರ ಮಿಂಡ

(ii) ಹೊಳೆ ಹಾಯುಗಂಟ ಅಂಬಿಗರಣ್ಣ, ಹೊಳೆ ಹಾಯ್ತು ಸಿನ್ ಹಂಗೇನಣ್ಣ

ಅತಿ ಸಾಧುತನ ಅಪಾಯ

೧೧೪೬೪ ಅವನಿಗೆ ನಾನೇ ಸುಲಿದ ಬಾಳೆಯಹಣ್ಣು

೧೧೪೬೫ ಆನೆ ಸಾಧುವಾದರೆ ಅಗಸ ಮೋಳಿಗೆ ಹೇರಿದ

೧೧೪೬೬ ಬಗ್ಗಿದ ಬೆನ್ನಿಗೆ ಬಂಡೆ ಹೇರಿದರು

೧೧೪೬೭ ಬಗ್ಗಿದವನಿಗೆ ಒಂದು ಗುದ್ದು ಹೆಚ್ಚು

೧೧೪೬೮ ಬೆರಕಿ ಎತ್ತಿಗೆ ಒಂದು ಲಗಳೆಯಾದರೆ ಸಾಧು ಎತ್ತಿಗೆ ಎರಡು

೧೧೪೬೯ ಬೇಲಿ ತಗ್ಗಿರುವ ಕಡೆ ಎಲ್ಲರೂ ತುಳೀತಾರೆ

೧೧೪೭೦ *ಮೆತ್ತಗಿದ್ದವನನ್ನು ಮೊಣಕೈಯಿಂದ ಗುದ್ದಿದರು

೧೧೪೭೧ ಮೆತ್ತಗಿದ್ದವನಿಗೆ ಮತ್ತೆರಡು ಗುದ್ದು

೧೧೪೭೨ ಸಾಧು ಎತ್ತಿಗೆ ಎರಡು (ಗೋಣಿ, ಜೋಡು, ಸಬಿರ) ಹೇರು

ಆಶಾವಾದ

೧೧೪೭೩ ಆಯುಸ್ಸಿದ್ದರೆ ಪಾಯಸಕ್ಕೆ ಅರ್ಪಣ (ಕಷ್ಟ) ವೇ ?

೧೧೪೭೪ ಉಸಿರುಂಟಾದರೆ ಮೊಸರು (ಉಪ್ಪು) ಮಾರಿ ತಿನ್ನ ಬಹುದು

೧೧೪೭೫ ಎಳಗರು ಎತ್ತಾಗದೇ ?

೧೧೪೭೬ ಕೆಟ್ಟರೂ ಜೀವದಿಂದುಳಿ

೧೧೪೭೭ ಗೋಡೆ ಇದ್ದರೆ ಸಾವಿರ ಚಿತ್ತಾರ (ಚಿತ್ರ) ಬರೆಯಬಹುದು

೧೧೪೭೮ ಘಟ ಇದ್ದರೆ ಮಠ ಕಟ್ಟಿಸಬಹುದು

೧೧೪೭೯ ಜೀವವಿದ್ದರೆ ಬೇಡಿ ತಿನ್ನಬಹುದು

---

* (i) ಮೆತ್ತಗಿರೋನ್ನ ಕಂಡರೆ ಮೊಣಕೈಲಿ ತಿವಿ
(ii) ನೆಲ ಮೆತ್ತಗಿದೆ ಅಂತ ಮೊಳಕೈಯಿಂದ ಗುದ್ದಿದರು

೧೧೪೮೦ ತಲೆ ಚೆನ್ನಾಗಿದ್ದರೆ ಮುಂಡಾಸು ಮೂವತ್ತು ಮೊಳ
(ಸಾವಿರ ಮೊಳ) ವಾದರೂ ಕಟ್ಟಬಹುದು

೧೧೪೮೧ ದೇಹವಿದ್ದರೆ ಭಾವಿಸಬಹುದು

೧೧೪೮೨ ಬದುಕಿದ್ದರೆ ಭಿಕ್ಷವಾದರೂ ಬೇಡಬಹುದು

೧೧೪೮೩ ಬದುಕಿದ್ದರೆ ಬುಧನ ದೆಸೆ ಬಂದೀತು ?

೧೧೪೮೪ ಬದುಕಿದ್ದರೆ ಸುಖ, ಸತ್ತ ಮೇಲೇನಿದೆ ?

೧೧೪೮೫ ಸಾಯದೆ ಉಳಿದರೆ ಸಾವಿರ ಚೋದ್ಯ ಕಂಡೇನು ?

ಕಾಮ–ಪ್ರೇಮ

೧೧೪೮೬ ಅಂತಃಕರಣಕ್ಕೆ ನಾಚಿಕೆ ಇಲ್ಲ, ಪ್ರೇಮಕ್ಕೆ ಬೆಲೆ ಇಲ್ಲ

೧೧೪೮೭ ಉಪ್ಪುಕಾರ ತಿನ್ನೊ ಜೀವ ಏನೇನೊ ಬಯಸುತ್ತೆ

೧೧೪೮೮ ಎರಡು ನಾಯ ಪ್ರಣಯ, ಹತ್ತುನಾಯ ಕಚ್ಚಾಟ

೧೧೪೮೯ ಎಲ್ಲ ವಾಸನೆಗಿಂತ ಕಾಮವಾಸನೆ, ಎಲ್ಲ ರುಚಿಗಿಂತ ಉಪ್ಪಿನರುಚಿ

೧೧೪೯೦ [1]ಒಣಮೋಹ ನಿದ್ರೆಗೇಡು, ನಾಯಿ ಮೋಹ ನಾಚಿಗೆಗೇಡು

೧೧೪೯೧ ಒಲಿದ ಅರಸನಿಗೆ ಕುಲಶೀಲ ಒಂದೂ ಬೇಡ

೧೧೪೯೨ ಒಲಮೆಯ ಕೂಟಕ್ಕೆ ಹಾಸಿಗೆಯ ಹಂಗೇ ಬೇಡ

೧೧೪೯೩ ಕಣ್ಣಿಟ್ಟು ನೋಡಿದರೆ ಮನೆ ಹೆಂಡತಿ ಕುರುಡಿ

೧೧೪೯೪ ಕನ್ನೆ ಅರಿವಳೆ ಕಾಮರಸವ ?

೧೧೪೯೫ ಕಾಮನ ಕಟ್ಟು, ಭೀಮನ ಪಟ್ಟು

೧೧೪೯೬ [2]ಕಾಮಕ್ಕೆ ಕಣ್ಣಿಲ್ಲ, ಸಿಟ್ಟಿಗೆ ದೃಷ್ಟಿ ಇಲ್ಲ

---

1 ಬಂಗುಲ್ಲು ನಿದ್ದೆಗೇಡು

2 ಪ್ರೇಮ ಕುರುಡು

೧೧೪೯೭ ಮೋಹಕ್ಕೆ ಮದ್ದಿಲ್ಲ, ಕಾಮನಿಗೆ ಕಣ್ಣಿಲ್ಲ

೧೧೪೯೮ ಕಾಮನ ಕಾಟ ತಪ್ಪಿಸೋಕಾಗುತ್ಯೆ ?

೧೧೪೯೯ ಕಾಮವಿರುವವರೆಗೆ ಪ್ರೇಮವಿರದು

೧೧೫೦೦ ಕ್ಷಾಮದಲ್ಲೂ ಕಾಮಕೇಳಿಯೇ ?

೧೧೫೦೧ ತನಗೊಪ್ಪಿದುದೇ ಸುಂದರ

೧೧೫೦೨ ತಾನು ಒಲಿದವಳೇ ರಂಭೆ, ತಾನು ಮಿಂದದ್ದೇ ಗಂಗೆ

೧೧೫೦೩ ತಾನೊಲಿದ ಮಂಕೇ ಮಾಣಿಕ

೧೧೫೦೪ ತಾಳಲಾರದ ವಿರಹ ತಿಣಕಿದರೆ ಹೋದೀತೆ?

೧೧೫೦೫ ನಾಯಿಮರಿಯೋಲುಮೆಗೆ ನಾರೋ ಬೇರಿಕ್ತಾರ್ರೆ?

೧೧೫೦೬ ಪಾತ್ರದವಳ ಪ್ರೇಮ

೧೧೫೦೭ ಪ್ರೇಮವನ್ನು ಕಲಿಸಲು ಯಾವ ಗುರುವೂ ಬೇಡ

೧೧೫೦೮ ಬೇಕಾದಾಕೆ ಬಲು ಚೆಲುವೆ

೧೧೫೦೯ ಬೇತಾಳನಿಗೆ ಜ್ಯೇಷ್ಠಾದೇವಿಯೇ ಒಲಿದ ಹೆಂಡತಿ

೧೧೫೧೦ ಮನಸ್ಸಿನಲ್ಲಿ ಇಲ್ಲದ ಮೋಹ ತಿಣಕಿದರೆ ಹೋದೀತೆ?

೧೧೫೧೧ ಮಳೆಗಾಲದಲ್ಲಿ ಛತ್ರಿಬಿಟ್ಟವ ಕೆಟ್ಟ,
ಚಳಿಗಾಲದಲ್ಲಿ ಹೆಂಡತಿ ಬಿಟ್ಟವ ಕೆಟ್ಟ

೧೧೫೧೨ ಮೆಚ್ಚಿದವನಿಗೆ ಅಚ್ಚಿಯೇ ಲಚ್ಚಿ

೧೧೫೧೩ ಮೆಚ್ಚಿದವನಿಗೆ ಕಾಗೆ ಮುದ್ದು

೧೧೫೧೪ ಮೆತ್ತಗೆ ಮುತ್ತುಕೊಡೋಕೆ ಬಂದರೆ ಹೆಣದಂತೆ ಬಾಯ್ಬಿಟ್ಟ

೧೧೫೧೫ *ಶುಕ್ಲಾಟಕ್ಕೆ (ಸುಕಲಾಟದ) ಶುಂ(ಸೊಂ)ಠಿ ತಿಂದು
ಹೊಟ್ಟೆಯೆಲ್ಲ ಉರಿಯಿತು

---

* ಸುಳ್ಳಾಟಕ್ಕೆ ಶುಂಠಿ ತಿಂದು ಬಾಯೆಲ್ಲ ಉರಿ

೧೧೫೧೬ ಹುಡುಗರ ಪ್ರೇಮವೂ ಹುಲ್ಲಿನ ಬೆಂಕಿಯೂ ಕ್ಷಣಕಾಲ

ಕಾಮಿ

೧೧೫೧೭ ಅಚ್ಚ ಹೆಣ್ಣಿನ ಸಂಗ ನಪುಂಸಕನೇನು ಬಲ್ಲ?

೧೧೫೧೮ ಅಯ್ಯನವರ ಗ್ಯಾನ ಹೊಲೆಗೇರೀಲಿ

೧೧೫೧೯ ಅಂಗನೆಯನ್ನು ಒಲಿಸಿಕೊಳ್ಳಲಿಕ್ಕೆ ತಿಂಗಳು ದಿನ ಬೇಕೆ?

೧೧೫೨೦ ಆಕೆ ಅಂದ್ರೆ, ಈತನಿಗೆ ಇಂದ್ರಲೋಕ

೧೧೫೨೧ ಇಚ್ಚೆ(ಚ್ಚಿ)ಗ (ಇಚ್ಚಕ) ಚಿಕ್ಕವನಲ್ಲ

೧೧೫೨೨ ಇಣುಕಿ ಇಣುಕಿ ನೋಡಿದ, ಒಣಕಲು ಗೌರೀನ

೧೧೫೨೩ ಕಣ್ಣುಮರೆಯಾದರೆ ಕಾಮಿಗೆ ಕೆನೆ

೧೧೫೨೪ ಕಲೆ ಗಂಡಿಗೆ ಒಲೆ ಮುಂದಿಕ್ಕು

೧೧೫೨೫ ಕಳ್ಳ ಹಾದರಕ್ಹೋಗಿ ಕಾಲು ಮುರಿದುಕೊಂಡ

೧೧೫೨೬ ಕಾಳಿಗೆ ಕಲೆ ಹೆಚ್ಚು

೧೧೫೨೭ ಕಾಳಿಯಾದರೇನು, ಬೋಳಿಯಾದರೇನು?

೧೧೫೨೮ ಕಿವಿಮಾತು ಅಂತ ಕೆನ್ನೆ ಕಚ್ಚಿದ

೧೧೫೨೯ ಕೆಮ್ಮನ್ನೂ ಪ್ರೇಮವನ್ನೂ ಬಚ್ಚಿಡುವುದಕ್ಕೆ ಆಗುವುದಿಲ್ಲ

೧೧೫೩೦ *ಕೈಯಲ್ಲಿ ಕಾಸಿಲ್ಲ, ಮೈಯಲ್ಲಿ ಕಸುವಿಲ್ಲ;
ಹಾದೀಲಿ ಹೋಗುವ ರಂಡೆಯನ್ನು ಇಣುಕಿ ಇಣುಕಿ ನೋಡಿದ

೧೧೫೩೧ 'ಚತುರೆ, ಚತುರೆ!' ಅಂತ ಹೊಗಳಿ ಇತರೆ ಮಾತು ತೆಗೆದ

೧೧೫೩೨ ಚಿಕ್ಕಂದಿನಲ್ಲಿ ಗೆಳೆಯ, ಪ್ರಾಯದಲ್ಲಿ ಗೆಣೆಯ

---

* ಕೈಯಲ್ಲಿ ಕಾಸಿಲ್ಲ, ಮೈಯಲ್ಲಿ ಘೋಷವಿಲ್ಲ; ಹೋಗೋ ಸೂಳೆ ಕಂಡು ಹಮ್ಮೈಸಿದ

೧೧೫೩೩ ತಪಿತೆಗಿಂತಲೂ ಕುಪಿತೆ ಶ್ರೇಷ್ಠ

೧೧೫೩೪ ದೃಷ್ಟಿನಾಟಿವರೆ ಕಿತ್ತುಹಾಕೋಕಾಗುತ್ಯೇ?

೧೧೫೩೫ ದಂಪತಿ ಪೂಜೆಗೆ ಹೋಗಿ ಲಂಪಟ ಜನಿಸಿಕೊಂಡ

೧೧೫೩೬ ನಾರಿ ಮೋರೆ ನೋಡಿ ಊರಿ ಕುಳಿತ

೧೧೫೩೭ ನೋಡಿದವಳನ್ನೇ ನೋಡಿದ ನಸ್ ಮೂಡಲಗಿರಿಯ

೧೧೫೩೮ 'ಪಂಡಿತರೇ!' ಅಂದ್ರೆ 'ಹೆಂಡತಿ ಕೊಟ್ಟುಹೋಗು' ಅಂದರು

೧೧೫೩೯ ಪಂಕ್ತಿ ಊಟಕ್ಕೆ ಹೋದರೂ ಸಂಗ್ತಿಗುಣ ಬಿಡಲಿಲ್ಲ

೧೧೫೪೦ ಬಳಿಯು ಸಪ್ಪಳ ಕೇಳಿ ಬಾಯಿಸಪ್ಪಳ ನಿಂತುವಂತೆ

೧೧೫೪೧ ಬುಟ್ಟಿರಲಾರೆ ಬಟಾಣೆ ಮೊಖದೋಳ್ನ

೧೧೫೪೨ ಮುತ್ತಿಡಕ್ಹೋಗಿ ಮೂಗು ಕಚ್ಚಿದಂಗೆ

೧೧೫೪೩ ಮುದ್ದಿಸಿದ ರಭಸದಲ್ಲಿ ಮುಂದಿನ ಹಲ್ಲು ಮುರೀತು

೧೧೫೪೪ ರೋಗದವನ ರಾಗದ ಹಾಗೆ

೧೧೫೪೫ ವ್ಯಭಿಚಾರ ಮಾಡಿದರೂ ಅಭಿಚಾರ ಬಿಡಲಿಲ್ಲ

೧೧೫೪೬ ವಾದ ಮಾಡಿ ಹಾದರ ಕಲಿತುಕೊಂಡ

೧೧೫೪೭ ವಿಟನಿಗೆ ಮತವಾದರೇನು, ಮಾನ್ಯವಾದರೇನು ?

೧೧೫೪೮ ಸೆರಗು ಹಾರಿಸಿ ಕೊರಗು ತಂದಳು

೧೧೫೪೯ ಹೇಮವಿಲ್ಲದಿದ್ದರೂ ಕಾಮಕ್ಕೆ ಕಡಿಮೆಯೆ?

೧೧೫೫೦ ಹೇವಗೇಡಿಗಳಿಗೆ ವಾವೆಯೇನು, ವರಸೆಯೇನು ?

೧೧೫೫೧ ಹೊಲಸು ಲೋಲುಪತೆಗೆ ಬಿದ್ದ ಲಾಲು

ಜಾರ

೧೧೫೫೨ ಒಡವೇರೂ ದೋಚಿ ಒಲಿಸಿಕೊಂಡೂ ಬಿಟ್ಟ

೧೧೫೫೩ ಕಟ್ಟಿಕೊಂಡವಳು ಕಡೆವರೆಗೆ, ಇಟ್ಟುಕೊಂಡವಳು ಇರೋವರೆಗೆ

೧೧೫೫೪ ಕಟ್ಟಿಕೊಂಡವಳೂ ಹೋದಳು, ಕೂಡಿದವಳೂ ಹೋದಳು

೧೧೫೫೫ ಕಣ್ಣುಸನ್ನೆಗೆ ಬರದೆ ಇರೋಳು ಕೈಹಿಡಿದು ಎಳೆದರೆ ಬಂದಾಳೆ ?

೧೧೫೫೬ ಕತ್ತೆ ಒದ್ದರೆ ಕಡವನಿಗೆ ನಾಚಿಕೆಯೆ?

೧೧೫೫೭ ಕೋರೀರಾದ್ರೆ ಕೋಡೀಗಂಟ್ಲೂ ಕಾಣ್ತಾರೆ,
ಮುದುಕೀರು ಮುಂದಿದ್ರೂ ಕಾಣಲ್ಲ ಅಂದ್ನಂತೆ

೧೧೫೫೮ ತಾ ಕಳ್ಳ ಪರರ ನಂಬ, ಹಾದರಗಳ್ಳ ಹೆಂಡತಿ ನಂಬ

೧೧೫೫೯ 'ನಿಮ್ಮ ಮನೆಯುಲ್ಲಿ ಎಲ್ಲಾ ಚೆನ್ನಾಗಿವ್ದಾರ್ಯೆ?' ಅಂದ್ರೆ
'ಇಲ್ಲ, ನಮ್ಮ ಬೀದಿಯುಲ್ಲಿರುವ ನಾಯಕಸಾನಿಯರು
ಚೆನ್ನಾಗಿದಾರೆ' ಅಂದ

೧೧೫೬೦ ಪಾಪಿ ಯಾಕೆ ಹೋದೆ ಗೋಪಾಳದಾಸ

೧೧೫೬೧ ಪ್ರೀತಿ ಯಾಕೆ ಓರೆಯಾದಳು

೧೧೫೬೨ *ಮನೆ ಮಡದಿ ಬಿಟ್ಟು ಬೀದಿ ಬಸವಿ ಹುಡುಕ್ಕೊಂಡು
ಹೋದ ಹಾಗೆ

೧೧೫೬೩ ಮಿಂಡನ ಕಣ್ಣು ಮೇಲ್ಮೇಲೆ,
ಈಶ್ವರಾಯ್ಯನ ಕಣ್ಣು ದೇಶದ ಮೇಲೆ

೧೧೫೬೪ ಮಿಾಸಲಂಬಲಿಗೆ ನಾಯಿ ನಾಲಗೆ ಚಾಚಿದ ಹಾಗೆ

೧೧೫೬೫ ಮುದ್ದಾದಲ್ಲೊ ಸಿದ್ದಬಸವ ಅಂದ್ರೆ,
ಇದ್ದಬದ್ದವರೆಲ್ಲ ನನ್ನ ಹೆಂಡ್ತೀರು ಅಂದ

೧೧೫೬೬ ಮೇಲೆ ಬಿದ್ದ ಸೂಳೆ ಹಾಗದ ಕಾಸಿಗೂ ಬೇಡ

---

* (i) ಬೀದಿ ಸೂಳೆ ನಂಬಿ (ಸಂತೆ ಸೂಳೆ ನೆಚ್ಚಿ) ಮನೆ ಹೆಂಡತಿ ಬಿಟ್ಟ
(ii) ಕಸ ಗುಡಿಸೋಳ್ನೆಚ್ಚಿ ..."
(iii) ವೇಶ್ಯೆಯನ್ನು ನೆಚ್ಚಿ ತನ್ನ ನಾರಿಯನ್ನು ಬಿಡುವಂಥ ಪುರುಷನೇಕೆ ?

೧೧೫೬೭ ಮಾಣೆಗೆಟ್ಟವನ ಕೊಳಕ್ಕೆ ಹಾಕಿದರೆ
ಕೊಳದಲ್ಲೂ ಹುಬ್ಬು ಹಾರಿಸಿದನಂತೆ

೧೧೫೬೮ ಸಾಲಸೋಲ ಮಾಡಿ ಸೂಳೆಬಣ್ಣ ತಂದೆ,
ಸೂಳೆ! ನನ್ನ ಸಾಲಕ್ಕೆ ಹೊಣೆಯಾಗು

೧೧೫೬೯ 'ಸುಂದರ ಪುರುಸನೆಲ್ಲ ಸುವಪಣಾತಿ!' ಅಂದ್ರೆ
'ಸೂಳೆ ಮನೇಲಿ ಸುಖನಿದ್ರೇಲವ್ರೆ' ಅಂದಳು

೧೧೫೭೦ ಸೂಳೆ ಇದ್ರೂ ಸೂಳೆ ತಾಯಿ ಇರಬಾರದು

೧೧೫೭೧ *ಸೂಳೆ ದೇವರಿಗೆ ಮಿಂಡಗಾರ ಸಿಡಿಯಾದ

೧೧೫೭೨ ಸೂಳೆ ಸಂಗ ಮಾಡಿದ್ರೂ ಗೀಳೆ ಸಂಗ ಮಾಡಬಾರದು

೧೧೫೭೩ ಹವಗೆಟ್ಟ ದೇವಿಗೆ ನೆಗೆದು ಮುತ್ತಿಕ್ಕಿದ

೧೧೫೭೪ ಹಾದರಕ್ಬಂದವನು ಬಾಗಲು ಹಾಕ್ಕೊಂಡು ಹೋದಾನಾ?

೧೧೫೭೫ ಹಾದಿ ಜಗಳ ಹಣವಡ್ಡ, ಹಾದರಗಿತ್ತಿ ಮನೆ ಯಾವುದು?

೧೧೫೭೬ 'ಹೆತ್ತಮುತ್ತರ ನೆನೆ' ಅಂದ್ರೆ
'ನಾನು ನಿಚ್ಚ ಮುತ್ತೈದೇನೆ ನೆನೀತೀನಿ' ಅಂದ

ಜಾರನಿಗೆ ಮನೆಯ ಹೆಂಡತಿಯಲ್ಲಿ ಉಪೇಕ್ಷೆ

೧೧೫೭೭ ಅವರೆ ಸತ್ತ ಮೇದ ಎತ್ತಿಗೆ ಬೇರೇನು ರುಚಿ?

೧೧೫೭೮ ಆಗ ಭೋಗ ಸೂಳೆ ಪಾಲು, ಗೂರಲು ಉಬ್ಬಸ ಹೆಂಡತಿ ಪಾಲು

೧೧೫೭೯ ಕೂಡಿಬಂದವಳ ಮಕ್ಕಳು ಕುಲಕ್ಕಾದರು,
ಮದುವೆಯಾದವಳ ಮಕ್ಕಳು ಮೂಲೆಗಾದರು

೧೧೫೮೦ ಕೂಡಿಬಂದವಳಿಗಿಂತ ಓಡಿಬಂದವಳೇ ಹೆಚ್ಚು

---

* ಅತ್ತೆಮನೆ ದೇವರಿಗೆ ಅಳಿಯ ಸಿಡಿ ಆಡಿದ್ನಂತೆ

೧೧೫೮೧ ಸೂಳೆ ಮುಂದಣ ಸುಮಾನಕ್ಕೆ
ಮೂಲೆ ಹುಡುಗಿ ಹಿಡ್ಕೊಂಡು ಒದ್ದ

೧೧೫೮೨ ಸೂಳೆಗೆ ರೇಷ್ಮೆಸೀರೆ, ಹೆಂಡತಿಗೆ ನೂಲಿನ ಸೀರೆ

೧೧೫೮೩ ಹೆಂಡತಿ ಮದುವೆಯಾದ ಸೂಳೆ, ಸೂಳೆ ಮದುವೆಯಾದ ಹೆಂಡತಿ

೧೧೫೮೪ ಹೋರಾಟ ಹೆಂಡತಿ ತಾವ, ಸೋಬಾನ ಸೂಳೆ ತಾವ

ಜಾರನಿಗೆ ಕೆಟ್ಟಮೇಲೆ ಬುದ್ಧಿ ಬಂತು

೧೧೫೮೫ ಕುರುಡಿಯಾಗಲಿ ಕುಂಟಿಯಾಗಲಿ ಮದುವೆ ಹೆಂಡತಿ ಲೇಸು;
ಹರಕಾಗಲಿ ಮುರುಕಾಗಲಿ ಎಣ್ಣೆ ಹೋಳಿಗೆ ಲೇಸು

೧೧೫೮೬ ಕುಂಟಿಯಾಗಲಿ ಕುರುಡಿಯಾಗಲಿ ತಾಳಿ ಕಟ್ಟಿದವಳು ಲೇಸು

೧೧೫೮೭ ಕೆಮ್ಮುವಳಾದರೂ ನಮ್ಮವಳೇ ವಾಸಿ,
ದಡ್ಡಳಾದರೂ ದೊಡ್ಡವಳೇ ವಾಸಿ

೧೧೫೮೮ ಕೈಹಿಡಿದವಳು ಕೊನೇತನಕ

೧೧೫೮೯ ಮದುವೆಯಾದ ಹೆಂಡತಿ ಲೇಸು,
ಎದುರುತ್ತರ ಕೊಡದ ಮಗ ಲೇಸು

೧೧೫೯೦ ಮನೆಗೆ ಬಂದ ಮರುಳು ಲೇಸು

೧೧೫೯೧ ಸೂಳೆಗಿಕ್ಕ್ಯ ಚಿನ್ನ ನಾರಿಗಿಕ್ಕು

೧೧೫೯೨ ಹಂಗೂ ಕೆಟ್ಟೆ ಹಿಂಗೂ ಕೆಟ್ಟೆ ಪಂಗನಾಮ,
ಸದಾರಮೆ ನಂಬಿದ್ರೆ ಮೂರುನಾಮ

ಜಾರೆ

೧೧೫೯೩ ಅಪಾರ ಪತಿವ್ರತೆ ಅಪ್ಪನ್ನ ಗಂಡ ಅಂತ ತಬ್ಬಿಕೊಂಡ್ಳಂತೆ

೧೧೫೯೪ ಅಪ್ಪಂಥವರು ಕೈಹಿಡಿವರೆ ಒಪ್ಪದಿರುವುದು ಹೇಗೆ?

೧೧೫೯೫ ಅಪ್ಪಂಥವರು ಬಂದು ತಲೆ ಹತ್ತಿರ ಕೂತುಕೊಂಡರೆ 'ಅಕ್ಕ'
ಎಂಥ ಹೇಳುವುದಾ? 'ಆಗ' ಎಂಥ ಹೇಳುವುದಾ?

೧೧೫೯೬ ಅಮ್ಮನ್ನೇ ಹೋತಳಲ್ಲೇ ಈ ಅವತಾರ ಪುರುಷಳು

೧೧೫೯೭ ಅರಸನನ್ನು ನಂಬಿ ತನ್ನ ಪುರುಷನನ್ನು ಕೈಬಿಟ್ಟಳಂ

೧೧೫೯೮ ಅರಿಯಂದ ಮಕ್ಕಳಿಗೆ ಹಾದರ ಕಲಿಸಿದಂಗೆ

೧೧೫೯೯ 'ಅಲಾ' ಅನ್ನೋ ಅತ್ತೆ ಇಲ್ಲ, 'ಭಲಾ' ಅನ್ನೋ ಮಾವ ಇಲ್ಲ,
ದಂಡಿಸೋ ಗಂಡ ದಂಡಿಗೋಗವ್ನೆ,
ತಗ್‌ಬಿಗಿ ಅನ್ನುಗಂಡ ಮೊದ್ಲೇ ಇಲ್ಲ

೧೧೬೦೦ ಅಂಬಲಿ (ಗಂಜಿ) ಕುಡಿದವನು
ಅಳಿಗೆ (ಗಂಗಳ) ಹೊತ್ತುಕೊಂಡು ಹೋದಾನೆ?

೧೧೬೦೧ ಆರಿದ ಹಿಟ್ಟು ಹರಕು ಕಂಬಳಿ ತನ್ನ ಗಂಡನಿಗೆ,
ಬಿಸಿ ಬೋನ ಹೊಸ ಕಂಬ್ಳಿ ಬಂದ ಮಿಂಡನಿಗೆ

೧೧೬೦೨ [1]ಗಂಡನಿಗೆ ಗಂಜಿ, ಮಿಂಡನಿಗೆ ಬುತ್ತಿ

೧೧೬೦೩ ಆರುಮಕ್ಕಳ ಹೆತ್ತಮೇಲೆ ಹಾದರಕ್ಕಿಳಿದಳಂತೆ

೧೧೬೦೪ ಆರು ಹೆತ್ತವ್ಳು ಮನೇಲವ್ಳೆ, ಮೂರು ಹೆತ್ತವಳು ಬೀದಿಲವ್ಳೆ

೧೧೬೦೫ [2]ಆಳುದ್ದ ಬಾವಿಗೆ ಗೇಣುದ್ದ ಹಗ್ಗವೇ ?

೧೧೬೦೬ ಇಬ್ಬರ ಕೂಡಿದವಳು ಇಬ್ಬಂದಿ

೧೧೬೦೭ ಇಷ್ಟು ಕೆಟ್ಟವಳ ಆಟ ನೋಡು,
ಅಷ್ಟು ಕೆಟ್ಟವಳ ನೋಟ ನೋಡು

---

1 ಗಂಡನಿಗೆ ರಾಗಿ ರೊಟ್ಟಿ, ಮಿಂಡಂಗೆ ಗೋಧಿರೊಟ್ಟಿ

2 ಆರಾಳುದ್ದ ಬಾವಿಗೆ ಮೂರಾಳುದ್ದ ಹಗ್ಗವೇ?

೧೧೬೦೮ ‘ಇಷ್ಟೊತ್ತ್ಗಂಟ ಎಲ್ಲಿ ಹೋಗಿದ್ದೆ?’ ಅನ್ನೋವತ್ಗೆ
‘ಕುಟ್ಟುವ ಒನಕೆ ಸಲುವಾಗಿ ಪುಟ್ಟೇಗೌಡನ ಅಟ್ಟಕ್ಕೋಗಿದ್ದೆ’
ಅಂದ್ಳು

೧೧೬೦೯ *ಊರಗೌಡನ ಸೆರಗು ತಾಗಿದರೆ
ಪರಿಪಾಟ್ಲಮೂಳೆ ಪಾವನವಾಯ್ತು

೧೧೬೧೦ ಊರ ತುಂಬ ಗಂಡರು, ಉಡಲಿಕ್ಕೆ ಸೀರೆಯಿಲ್ಲ

೧೧೬೧೧ ಎಡಕಲು ಹತ್ತುವ ಬೆಕ್ಕು ಎಡಬಲದವರನ್ನು ಗಣಿಸೀತೆ ?

೧೧೬೧೨ ಏಳು ಮನೆ ಚೀ(ಚೇ)ಲಿ ಪೋಲಿಹುಡುಗಿ

೧೧೬೧೩ ಏಳು ಮೆಳೆ ಸೊಪ್ಪು ಮೇದವ್ಳು

೧೧೬೧೪ ಒಡವೆ ಆಸೆಗೆ ಒಡಲು ಮಾರಿದಳು

೧೧೬೧೫ ಓಲಾಡ್ದೆ ಏನ? ಮೇಲಂಡೆ ನೀರು ಕಾಯ್ತಾ ಅದ

೧೧೬೧೬ ಕತ್ತೆಗೆ ಸೊಕ್ಕು ಬಂದರೆ ಕರ್ಕಿ ಬಲ್ಲದು,
ಮುಂಡಿ(ಡೆ)ಗೆ ಸೊಕ್ಕು ಬಂದರೆ ಗಂಡನ್ನೊಲ್ಲಳು

೧೧೬೧೭ ಕಷ್ಟಪಟ್ಟ ಹೆಣ್ಣು ಕಾಸಿಗನಿಗೆ ಬೇಡ,
ಸಂತೋಷಪಟ್ಟ ಹೆಣ್ಣು ಶಾನಂಭೋಗನಿಗೆ ಬೇಡ

೧೧೬೧೮ ಕಳ್ಳದನ ಒಡೆಯನಿಗೆ ಹಿತ, ಹಾದರದ ಹೆಂಡ್ತಿ ಗಂಡಂಗ್ಹಿತ

೧೧೬೧೯ ಕುದುರೆ ಕೊಂಡ್ರೇನ ?
ಲಗಾಮು ಹಿಡಿಯೋ ಕೈಯೇ ಇಲ್ಲದ್ಮೇಲೆ?

೧೧೬೨೦ ಕೆಟ್ಟಮುಂಡೆ ಕುಲ ಸೇರಳು

೧೧೬೨೧ ಕೆಟ್ಟವಳ ತನುಜಳನ್ನು ಕಟ್ಟಿಕೊಳ್ಳುವರಾರು?

---

* ಶಾನುಭೋಗನ ಸೆರಗು ತಾಕಿ ಪಾವನನಾದೆ ಪರತೊತ್ತೆ

೧೧೬೨೨ ಗಡ್ಡಮೀಸೆ ಇಲ್ಲದ ಗಂಡನ ನಂಬದೆ ಹಾದರಕ್ಕಿಳಿದಳು

೧೧೬೨೩ ಗಂಡ ಇರುವಾಗ ಮಿಂಡನ ಚಿಂತೆ ಯಾಕೆ?

೧೧೬೨೪ ಗಂಡ ಗಾಳಿ ಪಾಲು, ಹೆಂಡತಿ ಪೆರರ ಪಾಲು

೧೧೬೨೫ ಗಂಡ ಬಿಟ್ಟರೂ ಗಣಾಚಾರ ಬಿಡ

೧೧೬೨೬ ಗಂಡ ಬಿಟ್ಟ ಸೂಳೆಗೆ ದಂಡವಿಲ್ಲ

೧೧೬೨೭ ಗಂಡ ಬೈದರೆ ರೊಚ್ಚು, ಮಿಂಡ ಬೈದರೆ ಮೆಚ್ಚು

೧೧೬೨೮ ಗಂಡ ಸತ್ತಮೇಲೆ ಮೀಂಡೆಗೆ ಬುದ್ಧಿ ಬಂತು

೧೧೬೨೯ ಗಂಡನ ಮನೆ ಬೋನ, ಮೀಂಡನ ಮನೆ ಗಾಣ

೧೧೬೩೦ ಗಂಡುಳ್ಳ ಗರತಿ, ಗಂಡನ ಮರೆಯಲ್ಲಿ ಹಾದರ

೧೧೬೩೧ *ಗಂಡ ಬರೊ ಹೊತ್ತಿಗೆ ಸರಿಯಾಗಿ ಕದರು ತಕ್ಕೊಂಡಳಂತೆ

೧೧೬೩೨ ಚಂದ ಇದ್ದವ ನನ್ನ ಗಂಡ

೧೧೬೩೩ ಚಾಪೆ ಸೆರಗಲಿ ಅಡಕೆ ಕಟ್ಕೋಳು

೧೧೬೩೪ ಚಿತ್ತ ಚಿಗರೆ ಕಡೆ, ಜ್ಞಾನ ಗೆಣೆಯನ ಕಡೆ

೧೧೬೩೫ ಚಿನ್ನಾಲ ಚಿಟ್ಟಗುಬ್ಬಿ, ಹೊಗೆಸೊಪ್ಪಿನ ಮಿಟ್ಟ (ಪುಟ) ಗುಬ್ಬಿ

---

* (i) ಸಂದೆಯಲ್ಲಿ ಗಿಲಿಗಿಲಿ, ಮಂದೆಯಲ್ಲಿ ಗಿಲಿಗಿಲಿ ; ಮನೆ ಗಂಡ ಬರುವಾಗ ಹತ್ತಿರಾಟ ಗಿಲಿಗಿಲಿ

(ii) ಹಗಲೆಲ್ಲ ಹಾರಾಟ, ಇರುಳೆಲ್ಲ ತಿರುಗಾಟ, ಹೈದ ಬರುವಾಗ ರಾಟೆ ತಿರುಗಾಟ

(iii) ಹಗಲೆಲ್ಲ ಹರಿದಾಡಿ ಗಂಡ ಬಂದಾಗ ಕುಣಿ ನನ್ನ ಕುದುರೆ

(iv) ಹಗಲೆಲ್ಲ ಹರಿ (ಕುಣಿ) ಕುದುರೆ, ಗಂಡ ಬಂದಾಗ ಕರಿಕುದುರೆ (ಗಡಿಬಿಡಿ)

(v) ಹಗಲೆಲ್ಲ ಹಾದರ, ರಾತ್ರಿ ಗಂಡನ ತಲೆಯ ಹೇನು ತೆಗೆಯುವುದು

(vi) ಹಗಲೆಲ್ಲ ಹಾರಾಟ, ರಾತ್ರಿ ತೂರಾಟ

(vii) ಹಗಲೆಲ್ಲ ಹಾರಾಡಿ ಗಂಡ ಬಂದಾಗ ಗಿರಿಗಟ್ಲೆ ಆಡ್ತಿದ್ಳು

(viii) ಹಗಲೆಲ್ಲ ಹಾರಾಟ, ಇಳ್ಳೆಲ್ಲ ತೂರಾಟ, ನನ್ನ ಗಂಡ ಬರುವಾಗ ರಾಗಿಕಲ್ ಗಿರಕ್ ಅಂದೆ

೧೧೬೩೬ ಜಾರಿಣಿಗೆ ದಾರಿ ಮನೆ ಮೃತ್ಯು

೧೧೬೩೭ ಜಾರಿಸಿ ಸೆರಗೆಳೆಯೋದ್ಯಾಕೆ ಅಂದ್ರೆ
ದಾರೀಲಿ ಹೋಗೋವ್ರ ಕರೆಯೋಕೆ

೧೧೬೩೮ ಜಾರೆಗೆ ಜಾತಿ(ನೀತಿ)ಯಿಲ್ಲ, ಮಾರಿಗೆ ಕರುಣವಿಲ್ಲ

೧೧೬೩೯ ಜಾರೆ ಕಣ್ಣು ಹೋರಿ ಮ್ಯಾಲೆ

೧೧೬೪೦ ಜಾರೆಯ ಗುಣ ಮೋರೆಯಲ್ಲಿ (ಮಾತಿನಿಂದ)ತಿಳಿದೀತು

೧೧೬೪೧ ಜಾರೇನ 'ಯಾಕೆ ಜಾರ್‍ತೀಯೆ?' ಅಂದರೆ
'ಎಲ್ಲಾದರೂ ಉಂಟೆ? ನಾನು ಏರ್‍ತಾ ಇದೀನಿ' ಅಂದಳು

೧೧೬೪೨ ಜಾರೋಳನ್ನ ಕೈಹಿಡಿದೆತ್ತಿದರೆ ನಿಲ್ತಾಳ್ಯೆ ?

೧೧೬೪೩ ತನಗೇ ಇಲ್ದೆ ತಡಕಾಡ್ತಾ ಇದ್ದರೆ
'ನನಗೊಬ್ಬನನ್ನು ಹವಣಿಸಿಕೊಂಡು ಬಾ' ಅಂದಳು

೧೧೬೪೪ ತಾಟಗಿತ್ತಿ ಮೋಟು ಸೆರಗು

೧೧೬೪೫ ತಾನು ಗರತಿಯಾದರೆ ಸೂಳೆಗೇರಿಯಲ್ಲಿ ಮನೆ ಕಟ್ಟಬೇಕು

೧೧೬೪೬ ತಾಲಿ ಇಕ್ಕೋತನಕ ತಾಳ್ತಾರೆ, ವಾಲೆ ಇಕ್ಕ್ಯಾತನಕ ಬಾಳ್ತಾರೆ

೧೧೬೪೭ ತುಟಿ ಮೀರಿದ ಹಲ್ಲು, ತೋಟ ಮೀರಿದ ಕಾಯಿ

೧೧೬೪೮ ತುಂಡುಕಿನ್ನಿ ಗಂಡನ ಬಡತನ ಬಲ್ಲಳೆ?

೧೧೬೪೯ ತುಡುಗು ಮಾಡಿ ಗಂಡಸು ಕೆಟ್ಟ,
ಹಾದರ ಮಾಡಿ ಹೆಂಗಸು ಕೆಟ್ಟಳು

೧೧೬೫೦ ತೊಡೆ ಏರಿದವಳು ತೋಳಿಗೆ ಏರಳೆ ?

೧೧೬೫೧ ತೊಂಡು ಮುಂಡೆಗೆ ಗಂಡನೇನು, ಮಿಂಡನೇನು?

೧೧೬೫೨ ದಾರಿ ಮನೆ ಸಲ್ಲ, ಜಾರೆ ನೆರೆ ಸಲ್ಲ

೧೧೬೫೩ ದೆಸೆ ಇಲ್ಲದವಳನ್ನು ಬಸವಿಗೆ ಬಿಟ್ರೆ
ಮನೆಯವರೆಲ್ಲ ಉಪವಾಸ ಬಿದ್ದರಂತೆ

೧೧೬೫೪ ನವಿಲಾಡಿ ಹಾದರಗಿತ್ತಿಗೆ ಮಿತ್ತು ಬಂತಂತೆ

೧೧೬೫೫ ನಂಜನಗೂಡು ತಂಬಡಗಿತ್ತಿ ಗಂಡನ ಹತ್ತಿರ ಮಲಗಿದ್ದಂಗೆ

೧೧೬೫೬ ನಾಚ್‌ಗೆಟ್ಟ ಹೆಣ್ಗೆ ಓಣಿ ಚಂದ

೧೧೬೫೭ [1]ನಾಯಿ ಮುಟ್ಟಿದ ಮಡಕೆಯನ್ನು
ನಾಯಿಯ ಕೊರಳಿಗೇ ಕಟ್ಟಿದರಾಯಿತು

೧೧೬೫೮ ನಾಯಿ ಮುಟ್ಟಿದ ಮಡಕೆ ಮುಸುರೆಯಾದರೇನು,
ಮಡಿಯಾದರೇನು?

೧೧೬೫೯ ನಾಯಿ ಮುಟ್ಟಿದ ಮಡಕೆ ತಿಪ್ಪೆಗೆ ಬಿಸಾಡೋದೆ?

೧೧೬೬೦ ನಾರಿ ಒಲಿಯೋದು ನೀಚನಿಗೆ

೧೧೬೬೧ [2]ನೀನು ಓಲೆಕಿವಿಯವಳನ್ನು ನೋಡಿದರೆ
ನಾನು ಒಂಟಿಕಿವಿಯವನನ್ನು ನೋಡ್ತೀನಿ

೧೧೬೬೨ ನೂಲಿನ ಹೆಣೇಲಿ ಬಂದ ಹೊಲೆ ಮಿಂಡ

೧೧೬೬೩ ನೆರೆ ನೋಡಿ ಕಲಿಯೇ ಸಲೆ ಹಾದರಗಿತ್ತಿ

೧೧೬೬೪ ನೆರೆಯೂರಿನ ಮಿಂಡ ದೀಪದೆಣ್ಣೆ ದಂಡ

೧೧೬೬೫ ಪಟ್ಟೆಗೆ ಮೈಲಿಗೆ ಸಲ್ಲ, ಮುತ್ತೈದೆಗೆ ಹಾದರ ಸಲ್ಲ

೧೧೬೬೬ ಪತಿಯಿದ್ದವಳು ನೀತಿವಂತೆಯಲ್ಲ, ಸತಿ ಇದ್ದವನು ಸತ್ಯವಂತನಲ್ಲ

೧೧೬೬೭ ಪತಿಯೇ ಇಲ್ಲದ ಎಳೆ ವಯಸ್ಸಿನಲ್ಲಿ ಎಲ್ಲರೂ ಪತಿವ್ರತೆಯರೇ

೧೧೬೬೮ ಪರಪುರುಷನಿಲ್ಲದಾಗ ಕೈಹಿಡಿದ ಪತಿಯೇ ಗತಿ

---

1 ನಾಯಿ ಮುಟ್ಟಿದ ಮಡಕೆ
2 ಅವನು ಓಲೆ ಕಿವಿಯವಳನ್ನು ನೋಡಿದ, ಇವಳು ಒಂಟ ಕಿವಿಯವ್ನ ನೋಡಿದಳು

೧೧೬೬೯ ಪಾಗಾರ ಹಾರುವ ಎತ್ತು ಅಡ್ಡೆಯನ್ನು ಬಿಟ್ಟೀತೆ?

೧೧೬೭೦ ಬಿಟ್ಟ ಗೆಣೆಯನನ್ನ ಬೆಳಗಿನತನಕ ಹೇಳಿದರೂ ತೀರಲಿಲ್ಲ

೧೧೬೭೧ ಬಿಟ್ಟು ವೇದ ಕಡಸು ಕಟ್ಟಿಹಾಕಿದರೆ ಇದ್ದಾತಾ?

೧೧೬೭೨ ಬೀದಿ ಬಸವಿಗೆ ನಾದಿನಿ ಉಂಟೆ ?

೧೧೬೭೩ ಬೀದಿ ಬಸವಿಗೆ ಹಾದಿಯಲ್ಲಿ ಕೈದಾರೆ

೧೧೬೭೪ ಭಾವನ್ನ ನಂಬಿಕೊಂಡು ಗಂಡನ್ನ ಬಿಟ್ಟಳು

೧೧೬೭೫ ಮನೆ ಗಂಡನ್ನ ಕಂಡರೆ ಉರಿಯೊ ಕೆಂಡ,
ನೆರೆಮನೆ ಗಂಡನ್ನ ಕಂಡರೆ ಹಾಗಲದ ಹಣ್ಣು ಕಂಡಂಗೆ

೧೧೬೭೬ ಮನೇಲಿ ಮಲೆ ಹೋರಿ ಕಟ್ಟ್ಯಾಕಿ ಸುಂಡನ ಬೇಟೆಗೆ ಹೋದಳಂತೆ

೧೧೬೭೭ ಮಂಗಿ ಮನೆ ತಾರಿಸಿದ್ರೆ ಜಪ್ಪಿ ಜನ ತಾರಿಸಿದ್ಲು

೧೧೬೭೮ ಕೆಣಕಿ ಕೆಡಸಿಕೊಂಡ್ರು ನನ್ನ ಮಣಕ ಮರಿ

೧೧೬೭೯ *ಮಹಾಪತಿವ್ರತೆ ಗಂಡನನ್ನು 'ಅಪ್ಪಾ!' ಅಂತಿದ್ಲಂತೆ

೧೧೬೮೦ ಮಾರಿಕಣ್ಣು ಹೋತನ ಮೇಲೆ, ಕೋರಿಕಣ್ಣು ಮಿಂಡನ ಮೇಲೆ

೧೧೬೮೧ ಮಿಂಡನ ನೆಚ್ಕೊಂಡು ಗಂಡನ್ನ ತಿನ್ಕೊಂಡಳಂತೆ

೧೧೬೮೨ ಮಿಂಡ ಗಂಡನಲ್ಲ, ಬಾಳೆದಿಂಡು ಪದಾರ್ಥವಲ್ಲ

೧೧೬೮೩ ಮಿಂಡಗಾತಿ ಕಣ್ಣು ಅವಳ ಗಂಡನ ಮೇಲೆ,
ದೇಶ ತಿರುಗುವವನ ಕಣ್ಣು ಮೀಸೆ ಮೇಲೆ

೧೧೬೮೪ ಮಿಂಡಂದ್ರು ಬರೋಳ ಮನೆಗೆ ಬಾಗಿಲೊಂದು ದಂಡ

೧೧೬೮೫ ಮಿಂಡನ ದನ ಕಾಯೋಕಿಂತ ಗಂಡನ ದನ ಕಾಯೋದು ಲೇಸು

---

* (i) ಪತಿವ್ರತೆ ಅನ್ನಿಸಿಕೊಳ್ಳೊಕೆ ಗಂಡನ್ನ 'ಅಪ್ಪ!' ಅಂದ್ಲಂತೆ
(ii) ಮಾದಿಗಿತ್ತಿಗೆ ಮದ ಬಂದರೆ ಗಂಡನನ್ನು 'ಅಪ್ಪ!' ಅಂದಳು

೧೧೬೮೬ ಮಿಂಡತನ ಮೇಲೆ ಆಸೆ ಮಾಡಿದವಳು ಗಂಡನ ಮಾನ ಉಳಿಸ್ತಾಳಾ?

೧೧೬೮೭ ಮುದ್ದಿಗೆ ಮಗಳನ್ನು ಸಾಕೋವೊತ್ತಿಗೆ
ಕಬ್ಬಾರನ ಕರ್ಕೊಂಡು ಹೋದಳು

೧೧೬೮೮ ಮೂರು ದಿನಕ್ಕೊಮ್ಮೆ ಮೂಳಿಯ ಶೋಭನ

೧೧೬೮೯ ಮೂವರನ್ನು ಕೂಡಿದವಳು ಯಾರ್ಯಾರಿಗತ್ತಾಳು

೧೧೬೯೦ ಮೋಟಿ ಒಂದಿದ್ರೆ ಕೋಟಿ ಬಳಸಬಹುದು

೧೧೬೯೧ ಯಾರೂ ಇಲ್ಲದವಳು ಮಾನಿ, ಬಂಗಾರ ಇಟ್ಟಾಕೆ ಚೆಲುವೆ

೧೧೬೯೨ ಸಿಳ್ಳು ಹೊಡೆದರೆ ಹಳ್ಳಕ್ಕೆ ಬಂದಳಂತೆ,
ಲೊಟ್ಟೆ ಹಾಕಿದ್ರೆ ಅಟ್ಟಕ್ಕೆ ಬಂದ್ಳಂತೆ

೧೧೬೯೩ ರಾಟೆ ಮ್ಯಾಗಳ ಕೈ ಮಿಂಡರ ಮ್ಯಾಗಳ ನೋಟ

೧೧೬೯೪ ಸುಖವ ಮಿಂಡಿ ಶಾನುಭೋಗನಿಗೆ ಗಂಟುಬಿದ್ಲಂತೆ

೧೧೬೯೫ ಸುತ್ತಿ ಸುತ್ತಿ ಬರುತಿಹೆ ನನಗಾಗಿ,
ಮೇಲೊಬ್ಬ ಕುಂತವ್ನೆ ನಿನಗಾಗಿ

೧೧೬೯೬ ಸಂಪಾನಕ್ಕೆ ಗೌಡರು ಸೀರೆ ಎಳೆದ್ರು ಅಂದ್ಲಂತೆ

೧೧೬೯೭ ಸೂಳೆ ಗಂಡ ಸುಖವಾಗಿ ಬಾಳ

೧೧೬೯೮ ಸೊಲ್ಲುಸೊಲ್ಲಿಗೆ ನಲ್ಲರಾದರೆ
ಸಾಯೋ ಪರಿಯಂತ್ರ ಎಷ್ಟು ನಲ್ಲರು ?

೧೧೬೯೯ ಷಡಿ ಶರಣಾರ್ತಿ ಇಪ್ಪಣ ಅಡ್ಡ ಅಂದ್ಲಂತೆ

೧೧೭೦೦ ಹಣ್ಣು ಹೆಣ್ಣಿನ ಬೆಲೆ ಮುಟ್ಟಿದ ಮೇಲೆ ಮುಗಿದುಹೋಯ್ತು

೧೧೭೦೧ ಹದವಿಲ್ಲದ ಹೆಣ್ಣು, ಕದವಿಲ್ಲದ ಮನೆ

೧೧೭೦೨ ಹಬ್ಬದಲ್ಲೂ ಅದೇ ಗಂಡನೇ,
ಉಗಾದಿಯಲ್ಲೂ ಅದೇ (ಹಳೆ) ಗಂಡನೆ

೧೧೭೦೩ ಹಬ್ಬದೊಳಗೆ ಹಬ್ಬ ಮಾಡಲಿಲ್ಲ, ಒಬ್ಬ ಗಂಡನಿಗೆ ಬಾಳ್ವೆ ಮಾಡಲಿಲ್ಲ

೧೧೭೦೪ ಹರುಕು ಶಾಲೆಗೆ ಕೊಳೆ ಘನ, ಹಾದರಗಿತ್ತಿಗೆ ಮಡಿ ಘನ

೧೧೭೦೫ ಹಂಗಿನವಳು ಹಾದರಗಿತ್ತಿ

೧೧೭೦೬ ಹಂಗೆ ಕುಣಿಯುವ್ಳು ಹರೆಯಕ್ಕೆ ಬಂದರೆ ಬಿಡುತಾಳ್ಯೇ?

೧೧೭೦೭ *ಹಾದರ, ಕಳ್ಳತನ ಮನೆ ಮೇಲೆ ಕಾಣುತ್ತವೆ

೧೧೭೦೮ ಹಾದರ ಹಲಸಿನಹಣ್ಣು ಎರಡೂ ಒಂದೇ

೧೧೭೦೯ ಹಾದರಕ್ಕೆ ಬಂದೋಳು ಕದ ಮುಚ್ತಾಳ್ಯೆ?

೧೧೭೧೦ ಹಾದರ ಮಾಡೂಕಿಂತ ಮುಂಚೆ ಹಗಣ ಕಲೀಬೇಕು

೧೧೭೧೧ ಹಾದರಗಿತ್ತಿ ಎಡೇಲಿ 'ಆ್ಞ' ಅನ್ನಕ್ಕಿಲ್ಲ, ಗರತಿ ಎಡೇಲಿ 'ಊ್ಞ' ಅನ್ನಕ್ಕಿಲ್ಲ

೧೧೭೧೨ ಹಾದರಗಿತ್ತಿ ಋಷಿಪಂಚಮಿ ಮಾಡಿದ ಹಾಗೆ

೧೧೭೧೩ ಹಾದರಗಿತ್ತಿ, ಕಾಲು ಹಸೆ ಮೇಲೆ ನಿಲ್ಲದು

೧೧೭೧೪ ಹಾದರಗಿತ್ತಿ ಗರತಿಯುಲ್ಲ, ತೂಪರದ ಸವುದೆ ಒಲೆಗಲ್ಲ

೧೧೭೧೫ ಹಾದರಗಿತ್ತಿ, ಬಾದರಿಸೂಳೆ, ಕಾನಕನಹಳ್ಳಿ ಕರಿಸೂಳೆ

೧೧೭೧೬ ಹಾದರಗಿತ್ತಿ ಮಾತು ಚಂದ, ಹರವೆಸೊಪ್ಪಿನ ಊಟ ಚೆಂದ

---

* ಹಾದರದ ಸುದ್ದಿ ಹಂಚಿನ ಮೇಲೆ ಸಾರಿದಂತೆ

೧೧೭೧೭ ಹಾದರಗಿತ್ತಿ ಮಾತು ಹರಕು ಪರಕು

೧೧೭೧೮ ಹಾದರಗಿತ್ತಿ ಮಾತು ಹಲಸಿನ ತೊಳೆ ಹಾಗೆ

೧೧೭೧೯ ಹಾದರಗಿತ್ತಿಗೆ ಗಂಡನೇ ಒಂದು ಡೌಲು

೧೧೭೨೦ ಹಾದರಗಿತ್ತಿಗೆ ದಿನನಿತ್ಯದ ಪಾಣಿಗ್ರಹಣ

೧೧೭೨೧ ಹಾದರಗಿತ್ತಿಗೆ ಪಾಣಿಗ್ರಹಣವೇ ?

೧೧೭೨೨ ಹಾದರಗಿತ್ತಿ ಮನೇಲಿ ಹಾಲಿನಂಥ ಹಣಕಿನಲ್ಲಿ ಇಟ್ನಿಲ್ಲ

೧೧೭೨೩ ಹಾದರಗಿತ್ತಿ ಹಾದರ ಮಾಡಿ ತೊಟ್ಟಿಲು ಕಟ್ಲಿಲ್ಲ,
ಭಿಕ್ಷುಕ ಭಿಕ್ಷ ಬೇಡಿ ಲಕ್ಷೀಕನಾಗ್ಲಿಲ್ಲ

೧೧೭೨೪ ಹಾದರಗಿತ್ತಿಗೆ ಹದಿನಾರು ವಿದ್ಯೆಯಂತೆ

೧೧೭೨೫ ಹಾದರಗಿತ್ತಿಗೆ ಹದಿನಾರು ಬಣ್ಣ, ಪತಿವ್ರತೆಗೆ ಒಂದೇ ಬಣ್ಣ

೧೧೭೨೬ ಹಾದರಗಿತ್ತಿಗೆ ಹದಿನೆಂಟು ಹೆಸರು

೧೧೭೨೭ ಹಾದರಗಿತ್ತಿಗೆ ಹಗಲೇನು ಇರುಳೇನು ?

೧೧೭೨೮ ಹಾದರಗಿತ್ತಿಗೆ ಹಗಲೊಬ್ಬ ಇರುಳೊಬ್ಬ

೧೧೭೨೯ ಹಾದರಗಿತ್ತಿಗೆ ಹಾ ತೊರೆದ ಹಾಗೆ

೧೧೭೩೦ ಹಾದರದ ಸುದ್ದಿ ಅಂದ್ರೆ ಹಪರ್ಾನವಾಯ್ತು ಜೀವ

೧೧೭೩೧ ಹಾದರದವಳ ಮನೆಗೆ ಹದಿನಾರು ಬಾಗಿಲು

೧೧೭೩೨ ಹಾರೊ ಹಕ್ಕಿಗೆ ಹಾದರ ಕಟ್ಟಿದವರು

೧೧೭೩೩ [1]ಹಾಲನ್ನ (ಹಾಲುಬಾನ, ಬೋನ) ಉಂಡು ಹಾಸಿಕ್ಕು (ಹಾಸುಹೊಯ್ಯ್ಯ ಮಗಳೇ !) ಅಂದರೆ 'ನಾಲ್ವರನ್ನು ನೋಡ್ತಾ ನೀರು ತರ್ತೀನಿ' ಅಂದಳು

೧೧೭೩೪ ಹಾವಿನ ಕಾಲ್ನೋಡಬಹುದು, ಹಾದರಗಿತ್ತಿ ನೆಲೆ ನೋಡೋಕಾಗಲ್ಲ

೧೧೭೩೫ ಹಿಡಕ ಬೆಳೆ ಕೆಡಿಸ್ತು, ಮೆಡಕಿ ಮನೆ ಕೆಡಿಸಿದ್ಲು

೧೧೭೩೬ ಹಿಡಿದವನಿಗೆ ಹೆಂಡ್ತಿ, ಬಿಟ್ಟವ್ನಿಗೆ ಸೂಳೆ

ಜಾರೆಯನ್ನು ಕಾಯಲಾದೀತೆ

೧೧೭೩೭ ಅಸಾಸುರನ ಹೆಂಡ್ತೀನ ಕಸ ಸುರಿಯೋನು ಕರ್ಕೊಂಡ್ಹೋದ

೧೧೭೩೮ ಆಧರ ಇಲ್ಲದವನ ಹೆಂಡ್ತೀನ ಸೋದರಮಾವ ಹೊತ್ತುಕೊಂಡು ಹೋದ

೧೧೭೩೯ ಆಳೋನು ಭದ್ರವಾಗಿದ್ದರೆ ಹೆಂಡತಿಗ್ಯಾಕೆ ಹಲವರು ?

---

1 (i) 'ಹಾಲು ಅನ್ನ ಉಂಡು ಹಾಸು ಮಂಚದ ಮೇಲೆ ಮಲಗಿರು' ಅಂದ್ರೆ 'ತಂಗಳನ್ನ ಉಂಡು ತಡೀಕೆ ಮನೇಲಿ ಇರ್ತೀನಿ' ಅಂದಳು

(ii) 'ಹಾಲು ಅನ್ನ ಉಂಡ್ಕೊಂಡು ಮನೇಲಿರು ಮಗಳೆ' ಅಂದ್ರೆ 'ಹಾದೀಲಿ ತಿರುಗಾಡವ್ರನ್ನ ನೋಡಿಕೊಂಡು ಮನೆ ಹೊರಗೇ ಇರ್ತೀನಿ' ಅಂದಳು

(iii) 'ವಾಣಿಯಾಗಿ ಒಳೆ ಮುಂದಿರು ಮಗಳೇ' ಅಂದ್ರೆ 'ಹಾದಿ ಮಿಂಡನ್ ನೋಡ್ಕಂಡು ನೀರ್ನ ಹೊರ್ತೀನಿ' ಅಂದಳಂತೆ

(iv) 'ಮಲ್ಲಿಗೆ ಹೂ ಮುಡ್ಕೊಂಡು ಮನೇಲಿರು ಮಗಳೆ' ಅಂದ್ರೆ 'ಕಿಳ್ಳೇಲಿ ಕೂತ್ಕೊಂಡು ಹೋಗ್ಬರೋರ್ನ ನೋಡ್ತೀನಿ' ಅಂದಳಂತೆ

(v) 'ಅಂಜಣ ಹತ್ಕಂಡು ನಡುಮನೇಲಿ ಕೂತ್ಕೊ' ಅಂದ್ರೆ 'ಇಲ್ಲ ಇಲ್ಲ ಕಲಗಚ್ಚು ಹೊತ್ಕೊಂಡು ಕಿಳ್ಳಲ್ಲಿ ನಿಂತ್ಗತಿನಿ' ಅಂತಿದ್ಲಂತೆ

(vi) 'ಮುಂಡಿ ಮುರ್ಕಂಡು ರಾಗಿ ಬೀಸು' ಅಂದ್ರೆ 'ಮಿಂಡನ್ನೋಡ್ಕಂಡು ನೀರ್ ಹೊರ್ತೀನಿ' ಅಂದ್ಲಂತೆ

(vii) 'ಹಾಸು ಮಂಚ ಹಾಕ್ಕೊಂಡು ಮಲಗಿರು ಮಗಳೆ' ಅಂದ್ರೆ 'ಊರ ಮಿಂಡಗಾರನ್ನ ನೋಡಿ ನೀರು ಹೊರ್ತೀನಿ' ಎಂದಳಂತೆ

೧೧೭೪೦ ಕಟ್ಬಾಳವ್ನ ಹೆಂಡತಿ ಹಿಟ್ಟಿಕಟ್ಬುಟ್ಟು ಹೋಯಿತಿದ್ಲಂತೆ

೧೧೭೪೧ ಕಾದಿದ್ದವನ ಹೆಂಡ್ತೀನ ಕಳ್ಳ ಹೊತ್ಕೊಂಡು ಹೋದ

೧೧೭೪೨ ಗಡಸುಗಾರನ ಹೆಂಡತೀನ ಬಳಸಿದೋನು ಹೊತ್ಕೊಂಡು ಹೋದ

೧೧೭೪೩ ಗಳಿಸಿದವನ ಹೆಂಡ್ತಿ ಬಳಸಿದವನ ಪಾಲು

೧೧೭೪೪ ಚಪಲೆಯರನ್ನು ಬ್ರಹ್ಮನೂ ರಕ್ಷಿಸಲಾರ

೧೧೭೪೫ ದಾರಿಗಂಡವಳು ಯಾರಿಗಂಜ್ಯಾಳೆ?

೧೧೭೪೬ ಸರ್ಪಗಾವಲು ಕಾಯೋನ ಹೆಂಡತಿ ಸಲೆ ಹಾದರಗಿತ್ತಿ

೧೧೭೪೭ ಹಾದರಗಿತ್ತಿಯನ್ನು ಕಾಯುವರಿಲ್ಲ

ಮುಪ್ಪಿನ ಜಾರೆ

೧೧೭೪೮ *ಕೋಲಿಯವಾಗಿದ್ದಾಗ ಊರೆಲ್ಲ ನೆಂಟರು, ಕೋಲೂರ್ಕೊಂಡು ತಿರುಗುವಾಗ ಯಾರೂ ಇಲ್ಲ

೧೧೭೪೯ ಮುಪ್ಪಿನಲ್ಲಿ ಮುದುಕಿಯೂ ಪತಿವ್ರತೆ

೧೧೭೫೦ ಸೂಳೆ ಮುಪ್ಪಾಗಿ ಗರತಿಯಾದಳು

೧೧೭೫೧ ಹರೇವಲ್ಲಿ ಹಾದರದ ಬೆಡಗಿ, ಮುಪ್ಪಿನಲ್ಲಿ ಮುದಿಬೆಡಗಿ

೧೧೭೫೨ ಹರೇವು ಪರೇವು ಎಲ್ಲಾನೂವೆ ಹರಿದಾಸನಿಗೆ ಕೊಟ್ಟೆ, ನಿಂಗೇನು ಕೊಡ್ಲೋ ಗಿರಿದಾಸ

೧೧೭೫೩ ಹಾದರ ಹಳೇದಾಯ್ತು ಶರೀರ ಮುಪ್ಪಾಯ್ತು, ಹೋಗಾನ ಬಾ ಗುಡಯ್ಯ ಪರ್ವತಕ್ಕೆ

---

* ವಯಸ್ಸಿನಲ್ಲಿ ಊರೆಲ್ಲ. ಕೋಲೂರುವಾಗ ಯಾರೂ ಇಲ್ಲ

೧೧೭೫೪ ಹಾಲು ಪಟಕದಿರುವಾಗ ಬೆಕ್ಕು ಪ್ರಾಮಾಣಿಕನಂತೆ

೧೧೭೫೫ ಒಂದಲದ್ದು ಒಂದಕ್ಕಾಯ್ತು. ಏಳು ಗಂಡ ಪರ್ವತಕ್ಕೆ ಹೋಗಾನೆ

ಕಾಮ ಕೆಟ್ಟದ್ದು

೧೧೭೫೬ ಉಟ್ಟ ಬಟ್ಟೆ ಭದ್ರವಾಗಿದ್ದರೆ ಮೆಟ್ಟಿ ಕೇಳೋ ಮಗನಿಲ್ಲ

೧೧೭೫೭ ಒಂದು ಕ್ಷಣದ ಭೋಗ, ಸಾಯುವ ತನಕ ರೋಗ

೧೧೭೫೮ ಕಣ್ಣುಕೊಟ್ಟ ದೇವರು ಆಸನ್ನು ಕೆಡಿಸಿಕೊ ಅಂದನೆ ?

೧೧೭೫೯ ಕಾಮನ ಗೆದ್ದವನಿಗೆ ಕಾಲನ ಭಯವಿಲ್ಲ

೧೧೭೬೦ ಕಣ್ಣು ಕೆಟಲಕ್ಕ ಕಚ್ಚೆ ಕಟ್ಟೋಕೆ ಏಡೆಯಾ?

೧೧೭೬೧ ಕಚ್ಚೆದೆಯುವನ ಕಚ್ಚೆ ಭದ್ರ

೧೧೭೬೨ ಕೈಬಾಯ್ ಕಚ್ಚೆ ಇವು ಮೂರೂ ಶುದ್ಧ (ಭದ್ರ) ವಾಗಿದ್ದರೆ (ಸೂಳೆಗೇರಿಗೆ ಹೋದ್ರೂ ಕೇಳುವ್ರಿಲ್ಲ) ಭಯವಿಲ್ಲ

೧೧೭೬೩ *ಗಂಡು ತುಪ್ಪದ ಕೊಡ, ಹೆಣ್ಣು ಬೆಂಕಿ ಕೊಡ

ಧೀರನಿಗೇಕೆ ನಾರಿ ಯೋಚನೆ

೧೧೭೬೪ ನೆರೆಮನೆ ಮುತ್ತೈಗೆ ಮಾತ್ಕೊಟ್ಟರೆ ಮಾತ್ಬರೋ ಮಟ್ಟಿಗೆ ಹೊಡೆದಾರು

೧೧೭೬೫ ಪರಸತಿಯ ನೋಟ, ನರಕದ ಕಾಟ

೧೧೭೬೬ ಪ್ರೇಮವು ಬರುವಾಗ ಬಹು ಸವಿ. ಹೋಗುವಾಗ ಅತಿ ಕಹಿ

೧೧೭೬೭ ರಾಗವು ಮನ ರೋಗಕ್ಕೆ ತವರು

---

* ಗಂಡು ಹೆಣ್ಣು ಅಂದ್ರೆ ಬೆಂಕಿ–ಬೆಣ್ಣೆ ಇದ್ದಂಗೆ

೧೧೭೬೮ ರೂಪಕ್ಕೆ ಮನಸೋತವರಿಗೆ ಪಾಪದ ಭಯವಿಲ್ಲ

೧೧೭೬೯ ಸುಖ ಸಾಸಿವೆಯಷ್ಟು, ದುಃಖ ಗುಡ್ಡದಷ್ಟು

೧೧೭೭೦ ಹೂವನ್ನು ಉಗುರಿನಿಂದ ಮುಟ್ಟಬೇಡ, ಹುಡುಗಿಯರನ್ನು ಬೆರಳಿನಿಂದ ಮುಟ್ಟಬೇಡ

೧೧೭೭೧ ಹೆಣ್ಣಿಗೆ ಸಿಕ್ಕಿ ಬಾಳುವ ಬಾಳು ಎಣ್ಣೆಯಲ್ಲಿ ನೊಣ ಹಾರಿ ಬಿದ್ದಹಾಗೆ

೧೧೭೭೨ ಹೆಣ್ಣಿದೆ ಎಂದು ಹೋದವ ಕೆಟ್ಟ, ಅನ್ನವಿದೆ ಎಂದು ತಿಂದವ ಕೆಟ್ಟ

ಕಾಮದಿಂದ ಕೆಟ್ಟವರು

೧೧೭೭೩ [1]ಅಂದಣ ಏರಿ ನಹುಷ ಕೆಟ್ಟ, ದುಂದು ಮಾಡಿ ಸೂಳೆ ಕೆಟ್ಟಳು

೧೧೭೭೪ ಇಂದ್ರ ಕೆಟ್ಟದ್ದೂ ಹೆಣ್ಣಿನಿಂದ, ಚಂದ್ರ ಕೆಟ್ಟಿದ್ದೂ ಹೆಣ್ಣಿನಿಂದ

೧೧೭೭೫ ಪಾಂಡುವಿನ ಆಸೆ, ಚೇಳಿನ ಬಸಿರು

೧೧೭೭೬ ಮಣ್ಣಿನಿಂದ ಕೌರವ ಕೆಟ್ಟ, ಹೆಣ್ಣಿನಿಂದ ರಾವಣ ಕೆಟ್ಟ

ಕ್ರೋಧ

೧೧೭೭೭ ಅಗ್ರಹಾರಕ್ಕೆ ಹೋದರೂ ಮರಾಗ್ರಹ ಬಿಡಲಿಲ್ಲ

೧೧೭೭೮ ಅಟ್ಟಕ್ಕೆ ಹಾರಿ ನೆಲಕ್ಕೆ ಬೀಳ್ತಾನೆ

೧೧೭೭೯ ಅಡಕು ಎತ್ತಿಗೆ ಶಡಕು ಹೆಚ್ಚು

೧೧೭೮೦ ಅಲ್ಪ ಬುದ್ಧಿಗೆ ಅಧಿಕ ಕೋಪ

---

1 (i) ನಹುಷನಾದರೂ ನಾಕದಿಂದ ಬಿದ್ದನು
(ii) ನಹುಷನಿಗೂ ನೋವು ತಪ್ಪಲಿಲ್ಲ
(iii) ನಹುಷರಾಯನ ಭೋಗ ನಾಕದಲ್ಲಿ ಹೋಯಿತು

೧೧೭೮೧ ಅಧಮನ ಸಿಟ್ಟು ಹಗಲು ರಾತ್ರಿ, ಚಂಡಾಲನ ಸಿಟ್ಟು ಮರಣದವರೆಗೆ

೧೧೭೮೨ ಇದ್ದದ್ದು ಇದ್ದ ಹಾಗೆ ಹೇಳಿದರೆ, ಕೆಂಡದಂತಹ ಕೋಪ

೧೧೭೮೩ ಈದ ಹುಲಿ ಹಾಗೆ ಆಡ್ತಾನೆ

೧೧೭೮೪ ಉಪ್ಪಿಲ್ಲದೆ ಉರಿ ಅಂದರೆ ಎಣ್ಣೆಲ್ಲದೆ ಉರಿತೀನಂದ

೧೧೭೮೫ ಉಂಡು ಉರಿ ಅಂದ್ರೆ ಉಪಾಸ ಉರಿದ

೧೧೭೮೬ ಊಟಕ್ಕೆ ಬಾರಪ್ಪ ಅಂದರೆ ಓಟಕ್ಕೇ ಮುನಿಕೊಂಡ

೧೧೭೮೭ ಒಲಿದರೆ ಮನುಷ್ಯ, ಮುನಿದರೆ ಮೃಗ

೧೧೭೮೮ ಕಾಡುರಿ ಅಂದರೆ ಕೆಚ್ಚುರಿದ

೧೧೭೮೯ ಕಾವಶಾಲೆಗೂ ಕೋಪಕ್ಕೂ ಗೇಣುದ್ದ

೧೧೭೯೦ ಕಿಚ್ಚು ಉರಿಯೋ ಹಾಗೆ ಉರೀತಾನೆ

೧೧೭೯೧ ಕೋಪ ಎನ್ನುವುದು ಪಾಪಿ

೧೧೭೯೨ ಕೋಪ ಬಂದವನಿಗೆ ಕಂಬ ಕಾಣದು

೧೧೭೯೩ ತಫಾವತುಗಾರ ತಪ್ಪಿದರೆ ತಿಮ್ಮಯ್ಯನಿಗೇಕೆ ಕೋಪ ?

೧೧೭೯೪ ದೂರ್ವಾಸರು ಬಂದಾಗ ದೂರ ಓಡಬೇಕು

೧೧೭೯೫ ದೋಷವಿದ್ದವನಿಗೆ ರೋಷ ಬಹಳ

೧೧೭೯೬ ಪ್ರವೇಶ ಮಾಡಿದ ಸ್ಥಳದಲ್ಲಿ ಆವೇಶ ಮಾಡಿದರೆ ಹೇಗೆ ?

೧೧೭೯೭ ಮುಟ್ಟಿದರೆ ಮುನಿ, ಕುಟ್ಟಿದರೆ ಕಿಡಿ

೧೧೭೯೮ ಮೂಗಿನ ಕೆಳಗೆ ಬಾಯಿ ಅಂದರೆ ಬ್ರಹ್ಮಾಂಡ ಸಿಟ್ಟು

೧೧೭೯೯ ಮೂರ್ಖರ ಕೋಪ ಮೂಗಿನ ತುದಿಯಲ್ಲಿ

೧೧೮೦೦ ಮೂಗಿನ ಮೇಲೆ ಮುಸಿ ಅಂದರೆ ಕೋಪ

೧೧೮೦೧ *ಮೊದಲೇ ಚೆಲುವೆ, ಮುನಿದರೆ ಹೇಗೆ?
(ಮೊದಲೇ ಚೆಲುವ, ಮುನಿದರೆ ಹೇಗೆ?)

೧೧೮೦೨ ರೇಗಿವವನ ಕೂಡ ಕೂಗಾಟ ಮಾಡುವವನೇ ಮೂಢ

೧೧೮೦೩ ಸಿಂಡೆತ್ತಿಗೆ ಸಿಡಗ್ಯಾನ

೧೧೮೦೪ ಹರೆಯದಲ್ಲಿ ಉರಿಯದವರಿಲ್ಲ, ಮುಪ್ಪಿನಲ್ಲಿ ತಿರಿಯದವರಿಲ್ಲ

ಕೋಪ ಮಾಡಿದರೆ ತನಗೇ ಹಾನಿ

೧೧೮೦೫ ಅವ್ವಡು ಕಚ್ಚಿದರೆ ದವಡೆಗೆ ತೊಂದರೆ

೧೧೮೦೬ ಉರಿತದಲ್ಲಿ ಉರಿದು ದುರಿತದಲ್ಲಿ ಕೈ ತೊಳೆದ

೧೧೮೦೭ ಕಾಡುಬೆಂಕಿ ಕಾಡು ಸುಡ್ತು, ತನ್ನ ಕೋಪ ತನ್ನೇ ಸುಡ್ತು

೧೧೮೦೮ ಕೋಪ ತಾಪ ತಂದಿತು, ಪಾಪ ಬ್ರಹ್ಮೇತಿ ತಂದಿತು

೧೧೮೦೯ ಕ್ರೋಧವಿದ್ದವನಿಗೆ ಬಾಧೆ ತಪ್ಪದು

೧೧೮೧೦ ತನ್ನ ಕೋಪ ತನ್ನನ್ನೇ ತಿಂದಿತು, ತನ್ನ ಶಾಂತ ಹೆರರನ್ನು ತಿಂದಿತು.

೧೧೮೧೧ ಪೆಟ್ಟಿನ ಮೇಲೆ ಪೆಟ್ಟು ಬಿದ್ದರೂ, ಸಿಟ್ಟು ಬಿಡಲಿಲ್ಲ

೧೧೮೧೨ ಮುಖದ ಮೇಲಿನ ಕೋಪಕ್ಕೆ ಮೂಗು ಕೊಯ್ಕೊಂಡ

೧೧೮೧೩ ಮೊರಕೊಂಡು ಹೋದವನು ಒದೆಯಿಸಿಕೊಂಡು ಬಂದ

೧೧೮೧೪ ಕ್ಯಾಣ ಜಾಸ್ತಿ, ತ್ರಾಣ ಕಮ್ಮಿ ಏಟಿಗೆ (ದವಡೆಗೆ) ಮೂಲ

---

* ಈಗಲೇ ಈ ಚೆಂದ, ಮುನಿಸಿಕೊಂಡರೆ ಯಾವ ಚಂದವೊ ?

೧೧೮೧೫ ರೋಷದಿಂದ ನಾಶ

೧೧೮೧೬ ಸಿಟ್ಟಿಗೆದ್ದು ಕೂದಲು ಕಿತ್ತುಕೊಂಡರೆ ಯಾರ ತಲೆ ಉರಿಯುತ್ತೆ

೧೧೮೧೭ ಸಿಟ್ಟಿಗೆ ಮೂಗು ಕೊಯ್ಕೊಂಡರೆ ಸಿಂಗಾರಕ್ಕೆ ಬರದಂತೆ

೧೧೮೧೮ ಸಿಟ್ಟು ತನಗೆ (ವೈರಿ) ಕೇಡು, ಸಮಾಧಾನ (ಶಾಂತಿ) ಪರರ (ವೈರಿ) ಕೇಡು

೧೧೮೧೯ ಸಿಟ್ಟು ಹೊಲೆಯನ ಸಮ

೧೧೮೨೦ ಸಿಡುಕನಿಗೆ ಅಂಬಲಿ ಬುಡೋವತ್ಗೆ ಬೋನಾಸಿ ಕಿತ್ತುಕೊಂಡ್ರು ಸೆಟೆದುಕೊಂಡು ಹೋದವನಿಗೆ ಅಡುಗೋಲು

ಕೋಪದಿಂದಾಗುವ ನಷ್ಟ

೧೧೮೨೧ ಊರ ಮೇಲೆ ಸಿಟ್ಟಾಗಿ ಊಟ ಕಾಣದೆ ಹೋದರಂತೆ

೧೧೮೨೨ ಒಳಗೆರೆ ಜೊತೇಲಿ ಕತ್ತೆ ಮುನಿಸಿಕೊಂಡ(ರೆ ಬಳಲೋರು ಯಾರು ?) ಹಾಗೆ

೧೧೮೨೩ *ಕೆರೆ ಜೊತೇಲಿ ಮುನಿಸಿ (ಕೊಂಡ ಹಾಗೆ) ಕೊಂಡು ಕಾಲು (ಅಂಡು) ತೊಳೆಯದೆ ಬಿಟ್ಟರು

೧೧೮೨೪ ಕೊತ್ತಿ ಮುನಿಸಿಕೊಂಡು ಹಿತ್ತಲಿಗೆ ಹೋಯ್ತು, ಕತ್ತಲೆಯಾಯ್ತು ಮನೆಗೆ ಬಂತು

೧೧೮೨೫ ಕೊಳಗದ ಕೈಲಿ ಬಳ್ಳ ಮುನಿಸಿಕೊಂಡಂತೆ

೧೧೮೨೬ ಗಾಣಿಗನ ಸಂಗಡ ಸೆಟಗೊಂಡು (ಕಡಿದಾಡಿ, ಗುದ್ದಾಡಿ) ಒಣರೊಟ್ಟಿ ತಿಂದ್ಹಾಂಗ

---

* ಕೆರೆ ಜೊತೇಲಿ ಸಿಟ್ಟಾಗಿ ಕರುಳು ಒಣಗಿಸಿಕೊಂಡು ಹೋದರಂತೆ

೧೧೮೨೭ ಹೊಟ್ಟೆ ಜೊತೇಲಿ ಕೈಕಾಲು ಮುಸಿಸ್ಕೊಂಡಂಗೆ

ಕೋಪ ಸಹಿಸು

೧೧೮೨೮ ಒಂದು ಸಿಟ್ಟಿನಲ್ಲಿ ಬಾವಿಗೆ ಬಿದ್ದರೆ ಏಳು ಸಿಟ್ಟಿನಲ್ಲಿ ಏಳ ತೀರದು

೧೧೮೨೯ ಒಂದು ಸಿಟ್ಟಿನಲ್ಲಿ ಮಡಕೆ ಒಡೆದರೆ ಮತ್ತೆ ಕೂಡುವುದೇ?

೧೧೮೩೦ ಕಡುಕೋಪ ಬಂದಾಗ ತಡಕೊಂಡವನೇ ಜಾಣ

೧೧೮೩೧ ಕೋಪದಲ್ಲಿ (ಸಿಟ್ಟಿಗೆ) ಕೊಯ್ದ ಮೂಗು ಶಾಂತದಲ್ಲಿ ಬಂದೀತೆ?

೧೧೮೩೨ ಕೋಪ ಬಂದಾಗ (ಕತೆಕೇಳು) ನೂರೊಂದೆಣಿಸು, ಧನ ಬಂದಾಗ ದಾನ ಮಾಡು

೧೧೮೩೩ ಸಿಟ್ಟಿಲ್ಲದವ ಕಡು ಮೂರ್ಖ, ಸಿಟ್ಟಿಗೇಳದವ ಬಲು ಜಾಣ

೧೧೮೩೪ ಸಿಟ್ಟು ಬಂದರೆ ಹಿಟ್ಟು (ದೀಪ ಕಜ್ಜು) ಮುಕ್ಕು

೧೧೮೩೫ ಸಿಟ್ಟಿನ ಬಾಯಿ, ಗೋಡೆಗೆ ಹಾಯಿ

ಒಬ್ಬರ ಮೇಲಿನ ಕೋಪ ಮತ್ತೊಬ್ಬರ ಮೇಲೆ

೧೧೮೩೬ ಅಗಸನ ಸಿಟ್ಟು ಅನ್ಯರ ವಸ್ತ್ರದ ಮೇಲೆ

೧೧೮೩೭ ಅತ್ತೆ ಮೇಲಿನ (ಅತ್ತಿತ್ತಲ) ಕೋಪ ಕೊತ್ತಿ ಮೇಲೆ

೧೧೮೩೮ ಉಳಕ್ಕೆ ಎತ್ತು ಬರದಿರೊ ಕೆಚ್ಚಿಗೆ ಹಿಟ್ಟುತಂದವಳ ಹಿಡ್ಕೊಂಡು ಹೊಡೆದಂಗೆ

೧೧೮೩೯ ಕುಪಿತೆ ಮೇಲೆ ಕಪಿತೆ ಬಿದ್ದ ಹಾಗೆ

೧೧೮೪೦ ಚಿಕ್ಕಣ್ಣನ ಕೋಪ ಸಣ್ಣಪ್ಪನ ದವಡೆಗೆ ಮೂಲ

೧೧೮೪೧ ಯಾರ ಮೇಲಿನ ಕೋಪ ಯಾರ ಮೇಲೆ ತೆಗೆಯುವುದು ?

೧೧೮೪೨ ಸೊಳ್ಳೆ ಮೇಲಿನ ಕೋಪ ಇರುವೆ ಮೇಲೆ ತೀರಿಸಿಕೊಂಡ ಹಾಗೆ

೧೧೮೪೩ ಹಾವಿಗೆ ಮುನಿದು ಒಳ್ಳೆಯನ್ನು ಕೊಲ್ಲುವೆ!

ದುರ್ಬಲನ ಕೋಪ

೧೧೮೪೪ ಕಾಗೆ ಸೆಟಗೊಂಡ ಹಾಗೆ

೧೧೮೪೫ ಕ್ಯಾಣ (ಸರ)ಕ್ಕೆ ಕಿವಿ ಕಿತ್ತುಕೊಂಡಂಗೆ

೧೧೮೪೬ ಕುರುಡನ ಸಿಟ್ಟು, ಗ್ವಾಡಿ ಮುಪ್ಪು

೧೧೮೪೭ ಕೈಲಿ ಹರಿಯದ ಮುರುವ (ಕೈಲಾಗದವ) ಮೈಯನ್ನು ಪರಚಿಕೊಂಡ

೧೧೮೪೮ ಗೌಡ ಊರ ಮುಂದೆ ಬೈದರೆ ಕುಳವಾಡಿ ಒಲೆ ಮುಂದೆ ಬೈದ

೧೧೮೪೯ ಬಡವನ ಕೋಪ ಅವುಡಿ (ಹೊಟ್ಟೆ)ಗೆ (ಮಾರಿ) ಮೃತ್ಯು

೧೧೮೫೦ ಬಡವನ ಸಿಟ್ಟು (ಹೊಟ್ಟೆಗೆ ಕೇಡು) ಬಾಯಿಗೆ ಬೆಟ್ಟು

೧೧೮೫೧ ಬಡವನ ಸಿಟ್ಟು ದವಡೆಗೆ ಮೂಲ, ಹೆಣ್ಣಿನ ಸಿಟ್ಟು ಬೆನ್ನಿಗೆ ಮೂಲ

೧೧೮೫೨ ಬೋಡ ಹಲ್ಲು ಮು(ಡಿ)ರಿ ಕಚ್ಚಿದ ಹಾಗೆ

೧೧೮೫೩ ಹೊಟ್ಟೆಯ ಸಿಟ್ಟು ರಟ್ಟೆಯಲ್ಲಿಲ್ಲ

ಕೋಪ-ಬಡಿಗಾದೆ

೧೧೮೫೪ ಉರಿಯುವ ಬೆಂಕಿಗೆ ತುಪ್ಪ (ಉಪ್ಪು, ಎಣ್ಣೆ) ಹೊಯ್ದು (ಸುರಿದ) ಹಾಗೆ

ಲೋಭ

೧೧೮೫೫ ಇದ್ದಾಗ ಉಂಡವನೇ ಜಾಣ

೧೧೮೫೬ ಕೊಡದವನ ಹಣ ನೆಲಗಿದ್ದಲ್ಲಿಯೇ ಹಾಳು

೧೧೮೫೭ ಜಿಗುಟುಗಾರನ ಕೂಟಕ್ಕಿಂತ ಜಿಗಣೆಯ ಕಾಟವೇ ಲೇಸು

೧೧೮೫೮ ಜೀನನ ಮನಸ್ಸು ಹೀನವೇ ಸರಿ

೧೧೮೫೯ ನಾಭಿ ಪರ್ಯಂತ ಉಟ್ಬಾ ಕ್ಷಣಕ್ಕೆ ಲೋಭ ಹೋದೀತೆ ?

೧೧೮೬೦ ನಿಪುಣನಾದವ ಕೃಪಣನಾಗಬಾರದು

೧೧೮೬೧ ಲೋಭ ಮಾಡಿ ಭೋಗ ಕೆಡಿಸಿಕೊಂಡ

ಲೋಭಿ

೧೧೮೬೨ ಅಗುಳು ಎಣಿಸಿ ತಿನ್ನುವವ

೧೧೮೬೩ ಅಕ್ಕಿಯ ಮೇಲೆ ಆಸೆ, ನೆಂಟರ ಮೇಲೆ ಹಿತ

೧೧೮೬೪ ಅಜ್ಜಿ ತುಪ್ಪ ಮೂಸಿಯೇ ಹೋಯಿತು

೧೧೮೬೫ ಅಟ್ಟಿಪಿಟ್ಟು ಅವರೆ ಕಾಳ್ನಿಸರು ನರಸೀಪುರದ ಸಂತೇಲಿ ಹೊತ್ತು ಮಾರಿದ

೧೧೮೬೬ ಅರಮನೆಗೆ ಆರುಸಾವಿರ ಕೊಟ್ಟರೂ (ಗುರುಮನೆಗೆ ಆರು ಕಾಸೂ ಕೊಡ) ನೆರೆಮನೆಗೆ ಅಟ್ಟುದಕ (ಅಟ್ಟುಪ್ನೀರ್) ಬುಡ

೧೧೮೬೭ ಅಂಗಲಾಚಿ ಬೇಡಿದಾಗ ಕೊಡದವನು ಸುಮ್ಮನಿದ್ದಾಗ ಕೊಟ್ಟಾನೆ ?

೧೧೮೬೮ ಆಚೆ ಮನೆ ಧನಿಕ ದಾನಿಯಾದರೆ ಈಚೆ ಮನೆ ಲೋಭಿಗೆ ಪ್ರಾಣಸಂಕಟ

೧೧೮೬೯ ಆಡಿದರೆ ಕೊಡದ ಲೋಭಿ ಬೇಡಿದರೆ ಕೊಡ್ತಾನ್ಯೆ ?

೧೧೮೭೦ ಅಕ್ಕ ಸವೆಯ ಬಾರದು. ಅಕ್ಕನ ಮಕ್ಕಳು ಬಡವಾಗಬಾರದು

೧೧೮೭೧ ಇಪ್ಪತ್ತು ಕೊಡದವ ಎಪ್ಪತ್ತು ಕೊಡ್ತಾನ್ಯೆ ?

೧೧೮೭೨ ಇರುಳೆಲ್ಲ ಕುಂತಿದ್ರೂ ಈರುಳ್ಳಿ ಹಂಗಿಲ್ಲ, ಬೆಳಗಾನ ಕುಂತಿದ್ರೂ ಬೆಳ್ಳುಳ್ಳಿ ಹಂಗಿಲ್ಲ

೧೧೮೭೩ ಈ ಕೈಲಿ ಕೊಡದವ ಆ ಕೈಲಿ ಕೊಡ್ತಾನ್ಯೆ ?

೧೧೮೭೪ ಈಗ ಕೊಡದವ ನಾಳೆ ಕೊಡ್ತಾನ್ಯೆ ?

೧೧೮೭೫ [1]ಎಂಜಲು ಕೈಯಲ್ಲಿ ಕಾಗೆ ಹೊಡೆಯುವುದಿಲ್ಲ

೧೧೮೭೬ ಉಂಡಿದ್ದರೆ ಬಾ, ಉಣದಿದ್ದರೆ ಬ್ಯಾಡ

೧೧೮೭೭ ಎಲ್ಲಕ್ಕೂ ಇದೆಯಂತೆ, ಮಗನ ಮದುವೆಗೇ ಇಲ್ಲವಂತೆ

೧೧೮೭೮ ಒಕ್ಕಳ ಹೊನ್ನಿನ ಬಡವ (ಪರದೇಶಿ)

೧೧೮೭೯ ಒಕ್ಕಳ ಹೊನ್ನಿನ ಬಡವ ಉಪ್ಪಿಲ್ದೆ ಉಂಡ

೧೧೮೮೦ ಒಳಗೆ ಭೋಜನವಿಲ್ಲ, ಹೊರಗೆ ದಕ್ಷಿಣೆಯಿಲ್ಲ

೧೧೮೮೧ ಕಡಿದದ್ಕೆ ಕೊಡ, ಕೈಹಿಡ್ಕೊಂಡು ಬಿಡ

೧೧೮೮೨ ಕಣ್ಣು ಚುಚ್ಚು ಅಂದ್ರೆ ಕೈ ನೋಯುತ್ತೆ ಅಂದ

೧೧೮೮೩ [2]ಕತ್ತೆಯ ಮೊಲೇಲಿ ಖಂಡುಗ ಹಾಲು. ನಾಯಿಯ ಮೊಲೇಲಿ ನಾಗಳ ಹಾಲು

೧೧೮೮೪ 'ಕಾ' ಎಂಬ ಕಾಕೇಗನ್ನ ಹಾಕವ್ನಲ್ಲ, 'ಮ್ಯಾವ್' ಎಂಬ ಬೆಕ್ಕಿಗೆ ಹಾಲು ಹಾಕವ್ನಲ್ಲ

೧೧೮೮೫ [3]ಕೀತ ಬೆರಳಿನ (ಉಗುರು ಸುತ್ತಿನ) ಮೇಲೆ ಉಚ್ಚೆಹುಯ್ಯಿ ಅಂದರೆ ಮೂತ್ರ ಕಟ್ಟಿ ಮೂರು ತಿಂಗಳಾಯ್ತು ಅಂದ

---

1 ಎಲ್ಲಿ ಒಂದಗಳು ನಷ್ಟವಾಗುತ್ತದೆ ಎಂದು

2 (i) ಕತ್ತೆಯ ಮೊಲೇಲಿ ಹಾಲಿದ್ದ ಹಾಗೆ
(ii) ನಾಯಿಯ ಮೊಲೇಲಿ ನಾಗಳ ಹಾಲು, ದೇವರಿಗಿಲ್ಲ (ಮನುಷ್ಯಕ್ಕೂ ಇಲ್ಲ) ದಿಂಡರಿಗಿಲ್ಲ

3 ಏನಾದ ಬೆರಳಿಗೆ 'ಬೆಣ್ಣೆ ಕೊಡು' ಅಂದ್ರೆ ಗಡಿಗೆ ಒಡೆದುಹೋಗಿ (ಹುಣ್ಣರಕ್ಕೆ ದೀಪ ಹಚ್ಚಿ) ಆರು ತಿಂಗಳಾಯ್ತು ಅನ್ನಂತೆ

೧೧೮೮೬ ಕೆಟ್ಟು ಸೈರಿಸಿದರೂ ಕೊಟ್ಟು ಸೈರಿಸಲಾರ

೧೧೮೮೭ ಕೈ ಕೆಳಗೇ ಹೊರ್ತು ಮೇಲಿಲ್ಲ

೧೧೮೮೮ ಕೊಡವ ಲೋಭಿಯ ಮಾತು ಕೊಡಲಿ ಗಾಯ

೧೧೮೮೯ 'ಗಾಡಿ ಕೊಡು ಗುಂಡಣ್ಣ' 'ನಿಡುಘಟ್ಟಕ್ಕೋಗಿ ನಿದ್ಗೆಟ್ಕೊಂಡು ಬಂದವೆ' ಅಂದ್ನಂತೆ

೧೧೮೯೦ ಜಾಣ ಬಿಡ, ಜೀಣ ಕೊಡ

೧೧೮೯೧ ಜಿ(ೀ)ನಸಿದ್ದರೂ ಮನಸ್ಸಿಲ್ಲ

೧೧೮೯೨ ಜೀನನ ಮನಸ್ಸು ಹೀನವೇ ಸರಿ,
ಜೀನ ಘಳಿಸಿದ್ದ ಜಾಣ ಉಂಡ

೧೧೮೯೩ ತಾನೂ ಉಂಡ ಹಾಗಲ್ಲ, ದಾನವೂ ಮಾಡಿದ ಹಾಗಲ್ಲ

೧೧೮೯೪ ತಾನೂ ಕುಡಿಯ, ಕುಡಿಯುವವರಿಗೂ ಬಿಡ

೧೧೮೯೫ ತಾನೂ ತಿನ್ನ, ಪರರಿಗೂ ಕೊಡ

೧೧೮೯೬ ತಾನೂ ಮಾಡ, ಮಾಡೋ ಪೂಜೇನೂ ನೋಡ

೧೧೮೯೭ ತಾನೂ ಮಾಡ, ಮಾಡವ್ರ್ನೂ ಮಾಡಗೊಡಿಸ

೧೧೮೯೮ ದಂಡಕ್ಕುಂಟು, ದ್ರೋಹಕ್ಕುಂಡು ಹಿರೇಮಗನ ಹಿಂಡೇ ಕೂಳಿಗಿಲ್ಲ

೧೧೮೯೯ ದಂಡಕ್ಕೆ ರಾಜ್ಯ ಕೊಡುವೆ, ಪಿಂಡಕ್ಕೆ ಕಾಸುಕೊಡೆ

೧೧೯೦೦ ನರಿ ಕಂಡರೆ ಕೊಟ್ಟೀತೆ ಉಪ್ಪುಖಂಡವ

೧೧೯೦೧ ನಾಗರ ಹಾವಿನ ತಲೇಲಿ ಮಾಣಿಕ್ಯ ಇದ್ದ ಹಾಗ

೧೧೯೦೨ ನಾನು ಸತ್ತ ಹಾಗೆ ಮಾಡ್ತೀನಿ, ನೀನು ಅತ್ತ ಹಾಗೆ ಮಾಡು

೧೧೯೦೩ ನಮ್ಮನೇಲಿ ನಾ ಉಂಡು ಬತ್ತೀನಿ, ನಿಮ್ಮನೇಲಿ ನೀ ಉಂಡ್‌ಬಾ, ಗೌಡನ ಕೊಟ್ಟಿಗೇಲಿ ಬಿದ್ದು ಬಿದ್ದು ಏಳುವ

೧೧೯೦೪ ನೊಣೇನ ಕಾಲಂಬಲಿ ಬಳಕೊಳವ್ವ

೧೧೯೦೫ ಬಾಯಿ ಸಕ್ಕರೆ, ಕೈ ಕೊಕ್ಕರೆ

೧೧೯೦೬ ಬಿಕ್ಕಲುಗೊಟ್ಟಿಯು ಮನೆಗೆ ಬಿಸಿರೊಟ್ಟಿಗೆ ಹೋದರೆ ಆಗಲಾಗಿನದು ತೆಗೆದು ಬಗಲಾಗಿಟ್ಟು ಕೊಂಡಿತಂತೆ

೧೧೯೦೭ ಬ್ಯಾರಿ ಸಾಕಿದ ನಾಯಿ

೧೧೯೦೮ ಬೇಡಲಿಕ್ಕೆ ಬಂದಾಗ ಶುಕ್ರವಾರ (ಅಂದ) ಅಂತ ಹೇಳ್ತಾನೆ

೧೧೯೦೯ ಭೀಮನಿಗೆ ಭಿಕ್ಷವಿಲ್ಲ, ನಾರಾಯಣನಿಗೆ ಪಡಿಯಿಲ್ಲ

೧೧೯೧೦ ಮಕ್ಕಳಿದ್ದಲ್ಲಿ ನನ್ನ ಹುಗಿಬೇಡ ಅಂತ ಬ್ಯಾರಿ ಹೇಳಿದ

೧೧೯೧೧ ಮಾದಿಗನ ಮನೇಲಿ ಪರಮಾನ್ನವಿದ್ದರೆ ಹಾದಿಯಲ್ಲಿ ಹೋಗುವವರಿಗೇನು ?

೧೧೯೧೨ ರಾಯಪ್ಪ ನಾಯಕನ ಫಲಾಹಾರ

೧೧೯೧೩ ರುವ್ವಿ ಕೊಡದವನು ರುಮಾಲು ಕೊಟ್ಟಾನೆ ?

೧೧೯೧೪ ಲೋಭಿ ಸದಾ ದರಿದ್ರನಂತೆ

೧೧೯೧೫ ಲೋಭಿಗೆ ಖರ್ಚು ಆಗಲ್ಲ, ಸೋಮಾರಿಗೆ ಕೆಲಸ ಆಗಲ್ಲ

೧೧೯೧೬ ಲೋಭಿಯ ಸಿರಿ, ಕಾಡಿನ ಬೆಳದಿಂಗಳು

೧೧೯೧೭ ಸಗ್ಗದಲ್ಲೂ ಸೈದಾನವೇ, ನಿನ್ನಲ್ಲೂ ದಾನಧರ್ಮವೆ ?

೧೧೯೧೮ ಸುಟ್ಟ ಬೆಟ್ಟಿಗೆ (ಗಾಯಕ್ಕೆ) ಸುಣ್ಣ ಹತ್ತಿಸುವುದಿಲ್ಲ

೧೧೯೧೯ ಹಸಿದಿರಬೇಡ, ಹಗೆಯ ತುಂಬ ಬೇಡ

೧೧೯೨೦ ಹಂಡೆಯಲ್ಲಿ ಕಲೆಯಲಿಲ್ಲ, ಒಂಡಿನಲ್ಲಿ ಕೂಡಲಿಲ್ಲ

೧೧೯೨೧ ಹಾಡಿ ಹಾಡಿ ದಾಸಯ್ಯ ಅಡಿ ಮುಚ್ಚಿಕೊಂಡು ಹೋದ

೧೧೯೨೨ *ಹುಲ್ಲು ಬಣಿವೆಯೊಳಗಿನ ನಾಯಿ

೧೧೯೨೩ ಹೋರಿ ಕೋಡಿನಲ್ಲಿ ಜೇನು ಇದ್ದರೇನು, ಇಲ್ಲದಿದ್ದರೇನು

ಲೋಭಿಯ ಗುರಿ ಸಂಗ್ರಹ

೧೧೯೨೪ ಅರೆ ಕಾಸಿಗೆ ಅಮೇಧ್ಯ ತಿಂತಾನೆ

೧೧೯೨೫ ಆಗೊ ಕೆಲಸ ಆಗಬೇಕು, ಕೈ ಕಾಸು ಖರ್ಚಾಗಬಾರದು

೧೧೯೨೬ ಇರುವೆ ಕಾಲಿಗೆ ಉರುಲು ಹಾಕೋವ

೧೧೯೨೭ ಊರಲ್ಲಿ ತಿಂದುಂಡು ನನ್ನಲ್ಲಿ ಬಂದು ಪದ ಹೇಳು

೧೧೯೨೮ ಬಿಟ್ಟಿ ಹಣ್ಣು ಸಿಕ್ಕಿದ ಹಾಗಿದ್ರೆ : ನನಗೊಂದು, ನಮ್ಮಪ್ಪನಿಗೊಂದು: ತೆರಕೊಟ್ಟು ತರುವ ಹಾಗಿದ್ರೆ ನಮ್ಮಪ್ಪ ಮುದುಕ, ನಾನಿನ್ನೂ ಹುಡುಗ

೧೧೯೨೯ ಕಾಸಿಗೆ ಕಾಸು ಗಂಟುಹಾಕಿದ ಕೋಸಕ್ಕೆ ಮಾ(ಈ)ರಯ್ಯ

೧೧೯೩೦ ಕಾಸು ಕಾಸಿಗೆ ಪರಂಗಿ (ತಿಪ್ಪರ)ಲಾಗ ಹಾಕುವುದು

೧೧೯೩೧ ಕೃಪಣನಿಗೇ ಧನ ಬಲಿಯೋದು, ಗುಡ್ಡದ ಮೇಲೆಯೇ ಮಳೆ ಹೊಯ್ಯೋದು

೧೧೯೩೨ ಜಿಪುಣನಿಗೂ ಕಾಸಿಗೂ ಜೀವನೊಡನೆ ಗಂಟು

೧೧೯೩೩ ಹಣ ಕಟ್ಟುವವನ ಹತ್ತಿರ ಹೋಗಬಹುದು, ಹಣ ಕೂಡಿಸುವವನ ಹತ್ತಿರ ಆಗದು

೧೧೯೩೪ ಪಿಸುಣನ ದ್ರವ್ಯ ಲೋಭಿ ಬಯಸಿದ

೧೧೯೩೫ ಪೆಟ್ಟಿಗೆ ತುಂಬ ಹಣವಿದ್ದರೂ ಕಟ್ಟಿಗೆ ಹೊರತು ಗತಿಯಿಲ್ಲ

೧೧೯೩೬ ಪ್ರಾಣವಿರುವಾಗ ಕೊಡದ ಹಣ ಹೆಣವಾದ ಮೇಲೆ ಬಂದೀತೆ?

---

*ಗೋದಲೆಯ ನಾಯಿ

೧೧೯೩೭ ಪ್ರೇಮದಿಂದ ಹೇಮ ಕೂಡಿಸಿ ಹೋಮಕ್ಕೆ ತಂಟೆ ಮಾಡಿದ

೧೧೯೩೮ ಮುದುಕಿ ಪ್ರಾಣ ಕುಡಿಕೇಲಿ

೧೧೯೩೯ [1]ಹೇಸಿಗೆ ಮೇಲೆ ಕಾಸು ಬಿದ್ದಿದ್ರೆ ನಾಲಗೇಲಾದ್ರೂ ಎತ್ಕೊಳ್ತಾನೆ

ಲೋಭಿ ಗಳಿಸಿದ್ದು ಪರರಿಗೆ

೧೧೯೪೦ ಆಲಸ್ಯದವನಿಗೆ ಎರಡು ಕೆಲಸ, ಲೋಭಿಗೆ ಮೂರು ಖರ್ಚು

೧೧೯೪೧ ಉಳ್ಳಾಗ ಉಣದವನ, ಉಳ್ಳಾಗ ಉಡದವನ, ಉಳ್ಳಾಗ ಕೊಡದವನ ಒಡವೆ ಕಳ್ಳನಿಗೆ

೧೧೯೪೨ ಕೂಡಿಡುವನು ಕೋಣ, ಅನುಭವಿಸುವವನು ಜಾಣ

೧೧೯೪೩ ಕೂಡಿಡುವನೊಬ್ಬ ಪೊಟನಾಯಕ, ಕಳೆಯುವವನೊಬ್ಬ ಖಳನಾಯಕ

೧೧೯೪೪ ಧಾರಾಳಿಗೆ ಒಂದು ಖರ್ಚು, ಲೋಭಿಗೆ ನಾಲ್ಕು ಖರ್ಚು

೧೧೯೪೫ ಗಳಿಸುವವನೊಬ್ಬ, ಬಳಸುವವನೊಬ್ಬ

೧೧೯೪೬ [2]ಜೇನ ಗಳಿಸಿದ, ಜಾಣ ಉಂಡ

೧೧೯೪೭ [3]ಜೇನನ ಬಾಳ್ವೆ ಮಸಿ (ಪಾಲು) ಮುಟ್ಟಿತು

೧೧೯೪೮ ತಿನ್ನಾರ್ದೊಡವೆ ಪರರಿಗೆ

೧೧೯೪೯ ನರಕನ ಸ್ವತ್ತು ನಾಯಿ ತಿಂದಿತು

೧೧೯೫೦ ಪಾಪಿಯ ಧನ ಪರರಿಗೆ, ದೋಭಿಯ ಧನ ಕತ್ತೆಗೆ

---

1 ಕಸದಲ್ಲಿ ಕಾಸು ಕಂಡ್ರೂ ನಾಲಗೆಯಲ್ಲಿ ತೆಗೆಯೋನು

2 ಜೇನ ಗಳಿಸಿದ್ದು, ಜಾಣನ (ಅಡವಿಯ) ಪಾಲು

3 ಜೇನಪ್ಪನ ಬದುಕನ್ನು ಸುನಿಯಪ್ಪ ತಿಂದ

೧೧೯೫೧ ಪಾಪಿ ಗಳಿಸಿದ್ದು ಪರರ ಪಾಲು, ಪುಣ್ಯವಂತ ಗಳಿಸಿದ್ದು
ತನ್ನವರ ಪಾಲು

೧೧೯೫೨ ಮೂಳಿ ಮೂರ್ಕಾಸ್ ಗಳಿಸಿ ಇಲಿ ಬಿಲಕ್ಕೆ ಹಾಕಿದಂತೆ

೧೧೯೫೩ ಮೊಟ್ಟೆಗಾರನಿಗೆ ಒಬ್ಬ ವೆಚ್ಚಗಾರ

೧೧೯೫೪ ಲೋಭಿಯ ಅರ್ಥ, ಎಷ್ಟಿದ್ದರೂ ವ್ಯರ್ಥ

೧೧೯೫೫ ಹೇಸಿಕೆ ಬಾಯಾಕೆ ಗಳಿಸಿದ್ದನ್ನು ಹಾಲ ಬಾಯಾಕೆ ತಿಂದಳಂತೆ

೧೧೯೫೬ [1]ಜೇನ ಬಾಯಿ ಜಿಪುಣಿಸ್ತು, ಸಕ್ಕರೆ ಬಾಯಿ ತಿಂದಿತು

ಲೋಭಿಯನ್ನು ಕುರಿತು ಲಕ್ಷ್ಮಿಯ ಹೇಳಿಕೆ

೧೧೯೫೭ ಜಿಪುಣನ (ನಡು) ಮನೆಗಿಂತ ದಾಸಿಯ ಕಿಪ್ಪಂಡೆ ಲೇಸು

೧೧೯೫೮ [2]ಜೀನನ ಮನೆಯ ಬಚ್ಚಲಲ್ಲಿದ್ದೇನು. ದಾಸಿಯ ಮನೆ
ಮಾಳಿಗೆಯಲ್ಲಿ ಇರಲಾರೆ

ಮದ

೧೧೯೫೯ ಅಭವ ನಿಂದೆಯಿಂದ ದಕ್ಷ ಕೆಟ್ಟ, ವಿಭವ ಮದದಿಂದ ಯಕ್ಷ ಕೆಟ್ಟ

೧೧೯೬೦ ಕೇರೆ ಹಾವು ಸೊಕ್ಕಿ ಗಂಟಿ ಮಕ್ಕಳ ತಂಟೆ ಹೋದಂತೆ

೧೧೯೬೧ ಪದವಿ ದೊರೆತ ಮೇಲೆ ಮದ ಬರುವುದು ಸಹಜ

೧೧೯೬೨ ಪದ ಬಾರದಿದ್ದರೆ ಮದ ಹೋದೀತೆ ?

೧೧೯೬೩ ಪದದಂತೆ ತಾಳ, ಮದದಂತೆ ಗರ್ವ

೧೧೯೬೪ ಮತ ಬಿಟ್ಟರೂ ಮದ ಬಿಡಲಿಲ್ಲ

---

1 ನಾರಲು ಬಾಯಿಗಳಿಸಿತು, ಸಕ್ಕರೆ ಬಾಯಿ ತಿಂದಿತು

2 ಕಿನಾಸಿ ಕಿಪ್ಪಲಲ್ಲಾದ್ರು ಇದ್ದೇನು, ಧಾರಾಳಗಾರನ ಮನೇಲಿರಲಾರೆ

೧೧೯೬೫ ಮತ್ತನಾದವನ ಹತ್ತಿರ ಕತ್ತಿ ಇದ್ದಹಾಗೆ

೧೧೯೬೬ ಮದ್ದು ತಕೊಂಬ ಅಂದರೆ ಮದ ತಂದ

೧೧೯೬೭ ವಿಥ ತಿಳಿದ ಮಾತ್ರಕ್ಕೆ ಮದ ಹೋದೀತೆ ?

ಗರ್ವ

೧೧೯೬೮ ಇಪ್ಪಾಡ್ತಿದ್ದವಳಿಗೆ ಹಿಟ್ಟಿನ ಮಡಕೆ ಸಿಕ್ಕಿದಂಗೆ

೧೧೯೬೯ ಉಡುದಾರವಿಲ್ಲದ ಬಡ್ಡಿ ಬಡಾಯಿ ನೋಡು

೧೧೯೭೦ ಉಪ್ಪಿಲ್ದೆ ಉರೀತಾನೆ, ಎಣ್ಣಿಲ್ದೆ ಕರೀತಾನೆ

೧೧೯೭೧ *ಎಮ್ಮೆ ಕೊಟ್ಟು ಹಮ್ಮು ತಕ್ಕಂಡ

೧೧೯೭೨ ಎಮ್ಮೆಗೆ ಎರಡು ಕೋಡು, ಹೆಮ್ಮೆಗೆ ಎಂಟು ಕೋಡು

೧೧೯೭೩ ಏನೂ ಇಲ್ಲದವನ ಗರ್ವ ನೋಡು, ಹೆಂಡ್ತಿ ಇಲ್ಲದವನ ಭಾಗ್ಯ ನೋಡು

೧೧೯೭೪ 'ಏನೆ ಹುಡುಗಿ !' ಅಂದರೆ 'ನಾನು ದೊಂಬರ ಹುಡುಗಿ !' ಅಂದ್ಲು

೧೧೯೭೫ ಕುರಿ ಹೈದನಿಗೆ ಕೊಡೆಯಾಕೆ ಅಂದ್ರೆ ಅದು ಎರಡು ಜಿನ್ದ ಬಡಾಯ್ಕೆ ಅಂತ

೧೧೯೭೬ ಕೂಳು ಹೆಚ್ಚಿದರೆ ಕುವಾಡ (ಕುವತ್) ಹೆಚ್ಚು, ಬಟ್ಟೆ ಹೆಚ್ಚಿದರೆ ಬಡಾಯಿ ಹೆಚ್ಚು, ನೀರು ಹೆಚ್ಚಿದರೆ ನೇಮನಿಷ್ಠೆ ಹೆಚ್ಚು

೧೧೯೭೭ ಕೈಲಾಸದರುಂಟು, ವೈಕುಂತದವರುಂಟು

೧೧೯೭೮ ಜಮ್ಮುಗಾರಗೆ ಹಮ್ಮು ಹೆಚ್ಚು

೧೧೯೭೯ ಜಂಬದ ಕೋಳಿ ಬಗುಳೋದು ಹೆಚ್ಚು

---

* ಘಾಜರು ಎಮ್ಮೆ ಕೊಟ್ಟು ಹಮ್ಮು ಈಸಕಂಡ್ರು

೧೯೮೦ *ತನ್ನ ಕೋಳಿಯಿಂದಲೇ ಬೆಳಗಾಯಿತು

೧೯೮೧ ತಲೆ ಬಾಗಿದರೆ ತಲೆಬಾಗಿಲು ಎತ್ತರ, ತಲೆ ಎತ್ತಿದರೆ ತಲೆಬಾಗಿಲು ಹತ್ತಿರ

೧೯೮೨ ತಿಂದ್ದಿಟ್ಟು ತ್ವಾರಾ ಭಾರಿ

೧೯೮೩ ತಿರಿದುಣ್ಣೋರ್ಗೆ ತಿರುಕೆ ಜಂಬ

೧೯೮೪ ತಿರಿದುಣ್ಣೋರ ತಿಕ ಕೊಬ್ಬಿದ ಹಾಗೆ

೧೯೮೫ ತಿರುಕ ತಿರುಕ ! ನಿನ್ನ ಬಿರುಕು ಮುಚ್ಚು

೧೯೮೬ ದಚ್ಚಿಬಾರ ಆಡ್ತೀನಿ ಅಂತ ಜಂಬಕೊಚ್ಚಿಕೊಂಡ ದೊಡ್ಡಗಂಡು

೧೯೮೭ ದಂಭ ಮಾಡಿ ಜಂಬಾರಿ ಕೆಟ್ಟ

೧೯೮೮ ದಂಭವಿದ್ದವನಿಗೇ ಇಂಬು

೧೯೮೯ ನಲಿಬ್ಯಾಡ ಅಂದ್ರೂ ನಲೀತನೆ. ನಡಿನ್ ಹಾವತೆ ತಲೆಗಪ್ಪತ್ಕಂದು

೧೯೯೦ ನಾನೂ ನಾಗಪ್ಪನೂ ಸೇರಿ ಕಟ್ಟಿದೆವು ಎಂದು ಓತಿ ಹೇಳಿತಂತೆ

೧೯೯೧ ಪರ್ವಕಾಲದಲ್ಲಿ ಹರಿವೆ ಸೊಪ್ಪು ತಿಂದರೆ ಜಂಬ ಹೋದೀತೆ ?

೧೯೯೨ ಪೂರ್ವ ತಿಳಿದವ ಗರ್ವಿಯಾದಾನೆ ?

೧೯೯೩ ಬಡಾಯಿ ಬಲ್ಲವನು ಲಡಾಯಿ ಮಾಡಿಯಾನೆ ?

೧೯೯೪ ಬಡಾಯಿ ಬಸಪ್ಪ ನಿನ್ನ ಕುಂಡೆಗೆ ಪಾಪಾಸ ಅಂದನಂತೆ

೧೯೯೫ ಬಡಾಯಿ ಬಡಾಯಿ ಬಳ್ಳಿ ಸೊಪ್ಪು, ಸೋತ ಪುರುಕಿಗೆ ಸೋರೆ ಸೊಪ್ಪು

೧೯೯೬ ಬಡಾಯಿ ಮುಕ್ಕನ ಮುಡುಕುದೊರೆಗೆ ಕರ್ಕಂಡು ಹೋದ್ರೆ ಅಲ್ಲೂ ಬುಡನಂತೆ ಅವನ ಮೊಡಕಾಟವ

---

* (i) ಕೋಳಿ ಯಾಕೆ ಕೂಗಬೇಕು, ತನ್ನಿಂದ ಬೆಳಗಾಯಿತು ಅಂತ ಯಾಕನ್ನಬೇಕು
(ii) ಮಿಣುಕು ಹುಳ ತನ್ನಿಂದಲೇ ಬೆಳಗಾಗುತ್ತೆ ಅಂತಿತ್ತಂತೆ

೧೧೯೯೭ ಬಾಗ ಮರಕ್ಕೆ ಬಾಗುವ ಗುಣವಿಲ್ಲ

೧೧೯೯೮ ಬಿಮ್ಮಗೆ ಹಿಡಿದರೆ ಹಮ್ಮು ಹೋದೀತೆ ?

೧೧೯೯೯ ಮುದ್ದೆ ಸಿರಿಯೊ, ಮುದಿಗಂಡನ ಸಿರಿಯೊ, ನ್ಯಾತಾಡವ್
ಎರಡು ಪ್ವಾತೆ ಸಿರಿಯೊ ?

೧೨೦೦೦ 'ಮೋಡದಲ್ಲಿ ಕೊಡೆ ಯಾಕೆ ?' ಅಂದರೆ 'ಆದೂ ಒಂದು
ಬಡಾಯ್ಕೆ' ಅಂದ

೧೨೦೦೧ ರಾಜನಿಗೆ ಮೀಸೆ ಮೇಲೆ ಕೈ ಹೋದರೆ ಸಭೆಯೇ ಕಾಣುವುದಿಲ್ಲ

೧೨೦೦೨ ವಾಲಾಡಿ ವಾಲಾಡಿ ವಾಲೆ ಕಳ್ಕಂಡ್ಳು

೧೨೦೦೩ ಸವುಟು ಕೈಗುಲ್ಲಿದ್ದಾಗ ಅವುಟು ಮಾಡಿದ್ದೇ ಬಂತು

೧೨೦೦೪ ಸೊಕ್ಕಿದ ನಾಯಿ ಒಡೆಯನ ಗುರುತು ಬಲ್ಲುದೆ ?

೧೨೦೦೫ ಹಮ್ಮಿಗೆ ಹೆಂಡ ಕುಡಿದು ನೆತ್ತಿಪತ್ತಿ ಗಾಸಿಗೊಂಡ

೧೨೦೦೬ ಹಮ್ಮು ಹತ್ತಿದವ ದಮ್ಮಯ್ಯ ಅಂದಾನೆ ?

೧೨೦೦೭ ಹರಕಲು ಹುಡುಗಿಗೆ ತಿರುಕಲು ಜಂಬ

೧೨೦೦೮ ಹೂವಾಡಗಿತ್ತಿ ತನ್ನ ಮೈಯೆಲ್ಲ ಪರಿಮಳ ಅಂದಳು

೧೨೦೦೯ ಹೆಚ್ಚಿದವಳಿಗೆ ಬಿಸಿರಕ್ತ

ಗರ್ವದ ಪರಿಣಾಮ

೧೨೦೧೦ ಅಡ್ಡಾದದ್ದು ಹರಿದೀತು, ಉದ್ದಾದದ್ದು ಮುರಿದೀತು

೧೨೦೧೧ ಅಪಜಯಕ್ಕೆ ಅಹಂಕಾರವೇ ಕಾರಣ

೧೨೦೧೨ ಅಪ್ಪಟಿದ್ದವಗೆ ಸವುಟಿನಿಂದ ಹೊಡೆದ ಹಾಗೆ

೧೨೦೧೩ ಅಹಂಕಾರಕ್ಕೆ ಉದಾಶೀನವೇ ಮದ್ದು

೧೨೦೧೪ ಅಹಂಕಾರದಿಂದ ಹರಿಕೆಟ್ಟ, ಭೀಂಕಾರದಿಂದ ಬಲಿ ಕೆಟ್ಟ

೧೨೦೧೫ ಇಂದಿನ ಹಮ್ಮು ನಾಳೆಗಿಲ್ಲ

೧೨೦೧೬ ಉಕ್ಕಿಗೆ ಬೆಂಕಿ, ಸೊಕ್ಕಿಗೆ ಸಂಕಟ

೧೨೦೧೭ ಉರಿದು ಉಪ್ಪಾಗಿ ಸಿರಿಯು ಮಣ್ಣಾದಳು

೧೨೦೧೮ ಉರಿಯುವ ಕಾಲಕ್ಕೆ ಉರಿದ, ಬಡ್ಡಿಸಾಲಕ್ಕೆ ಹೊಲ ಕಳೆದ

೧೨೦೧೯ ಉರುಟಾದ್ದು ಉರುಳದೇ ಇರದು

೧೨೦೨೦ ಐಶ್ವರ್ಯವೇ ಅಹಂಕಾರದ ತವರು

೧೨೦೨೧ ಕಿರುಬೆರಳು ಬೀಗಿದರೆ ಎಷ್ಟು ಬೀಗೀತು?

೧೨೦೨೨ ಕೊಬ್ಬಿದ ಕೋಣನಿಗೆ ಕೊರಡೇ ಮದ್ದು

೧೨೦೨೩ *ಗರ್ವವು ಸರ್ವವನ್ನೂ ಕೊಂಡುಹೋಯಿತು

೧೨೦೨೪ ತಿಂಡಿಪೆಟ್ಟಿ ತಿರುಪತ್ತೂರಿಗೆ ಹೋದರೆ ತಿರುಪ್ಪಟ್ಟಿ ಕೈಗೆ ಬಂತು

೧೨೦೨೫ ತೀರ್ ಕೆಡಿಸ್ಬಿಟ್ಟ ನನ್ನ ಜೀರ್‌ರಾಗಿಹಿಟ್ಟು

೧೨೦೨೬ ತೂಗಿದೆಯೊ, ನೀಗಿದೆಯೊ?

೧೨೦೨೭ ದರ್ಪದಿಂದ ದಕ್ಷ ಕೆಟ್ಟ, ಸರ್ಪದಿಂದ ಪರೀಕ್ಷಿತ ಕೆಟ್ಟ

೧೨೦೨೮ ಸೆಟ್ಟನ್ನ ಮರಕ್ಕೆ ಕೊಡಲಿ ಏಟು

೧೨೦೨೯ ನೆಲನೋಡಿ ನೂರುಮಾರು ನಡೆಯಬಹುದು;
ಮುಗಿಲು ನೋಡಿ ಮೂರುಮಾರು ನಡೆಯಬಾರದು

೧೨೦೩೦ ಬಡಾಯಿದವನಿಗೆ ಬಡಿಗೆ ಕೊಟ್ರೆ
ಅಡಿಗೆಮನ್ಯಾಗ ಹೋಗಿ ಅಲಾಯಿ ಆಡ್ತಿದ್ದನಂತೆ

೧೨೦೩೧ ಬಿಮ್ಮನೆ ದಮ್ಮುಕಟ್ಟಿ ಹಮ್ಮು ಕಳಕೊಂಡ

* ಗರ್ವದಿಂದ ಸರ್ವನಾಶವಂತೆ

೧೨೦೩೨ ಬೆಳತ ಹೆಚ್ಚೋದು ಬೀಳೋದಕ್ಕೆ

೧೨೦೩೩ ಮರಹತ್ತುವವನ ಕಾಲು ಕೆಳಗೆ

೧೨೦೩೪ ಮರಣಕ್ಕೆ ಮುಂಚೆ ಬಿಕ್ಕು, ದುಮ್ಮಾನಕ್ಕೆ ಮುಂಚೆ ಸೊಕ್ಕು

೧೨೦೩೫ ಮುದ್ದೆ ಕಬ್ಬಿಣ ಮುಳುಗುತ್ತೆ, ಜಿಲ್ಲೆ ಕಬ್ಬಿಣ ತೇಲುತ್ತೆ

೧೨೦೩೬ ಮೆರೆದವನು ಉರಿಯುತ್ತಾನೆ

೧೨೦೩೭ ಮಾಲಾಡು ಗೊಂಬೆ ಮಾಲಾಡು, ನೀರಿಗೆ ಬಿದ್ದರೆ ತೇಲಾಡು

೧೨೦೩೮ ಸುಖ ಹೆಚ್ಚಾದರೆ ಕಣ್ಣು ಎತ್ತರ,
ಸೊಕ್ಕು ಹೆಚ್ಚಾದರೆ ನಾಶ ಹತ್ತಿರ

೧೨೦೩೯ ಸೊಕ್ಕಿಗೆ ಬಂದವ ದಕ್ಕಿ ತಿಂದಾನು

೧೨೦೪೦ ಸೊಕ್ಕಿದ್ದು ಉಕ್ಕುತ್ತೆ, ಉಕ್ಕಿದ್ದು ಒಲೆಗೆ ಬೀಳುತ್ತೆ

೧೨೦೪೧ ಹಮ್ಮಿಗೆ ಹಡಿದಡಿ ಮುರ್ಕೊಂಡಿತ್ತಂತೆ

೧೨೦೪೨ ಹಮ್ಮಾಡಿ ದೊಂಬ ಕೆಟ್ಟ, ಮರಹತ್ತಿ ಕೈಬಿಟ್ಟವ ಕೆಟ್ಟ

೧೨೦೪೩ ಹಮ್ಮಿಗಾಡಿ ದೊಮ್ಮಕೆಟ್ಟ, ನಮ್ಮೂರಲ್ಲೊಬ್ಬ ಹಂಗೇ ಕೆಟ್ಟ

೧೨೦೪೪ ಹಮ್ಮಿನಿಂದ ಬ್ರಹ್ಮಕೆಟ್ಟ, ಪಂಥಮಾಡಿ ಪಾಂಡವರು ಕೆಟ್ಟರು

೧೨೦೪೫ ಹಮ್ಮಿನಿಂದ ಹರಿಹರಬ್ರಹ್ಮರು ಕೆಟ್ಟರು

೧೨೦೪೬ *ಹಮ್ಮುಗಾರ ಕೊಮ್ಮೆಸೊಪ್ಪೆ ! ಸುಮ್ಮಗೆ ಬೇಯಿ ಒಲೆ ಮೇಲೆ

೧೨೦೪೭ ಹಮ್ಮು ಮುರಿದ ಮೇಲೆ ಸುಮ್ಮಗಾದ

೧೨೦೪೮ ಹರುಕು ಬಟ್ಟೆ ಹರಿದೀತು, ಬಿರುಕು ಮಡಕೆ ಒಡೆದೀತು

೧೨೦೪೯ ಹೆಚ್ಚಿದ ಕೋಣ ಹೆಚ್ಚಿದ (ಹುಚ್ಚು) ಮನುಷ್ಯ
ಹೆಚ್ಚುದಿನ ಬದುಕೋದಿಲ್ಲ

---

* ನಾನು ಕಾಣದ ಸೊಪ್ಪೇ ! ಸುಮ್ಮನೆ ಬೇಯಿ

೧೨೦೫೦ ಹೆಚ್ಚಿದ ಮನುಷ್ಯ ಉಬ್ಬಿದ ಎಮ್ಮೆ ಹೆಚ್ಚು ದಿವಸ ಬಾಳೋಲ್ಲ

೧೨೦೫೧ ಹೆಚ್ಚಿದವನಿಗೆ ಕಿಚ್ಚಿನ ಗುದಿಗೆ

೧೨೦೫೨ ಹೆಮ್ಮೆಯವನಿಗೆ ಒಮ್ಮಾನಕ್ಕಯೂ ಇಲ್ಲ

ಬಡಿವಾರ

೧೨೦೫೩ ಅಗಸನ ಬಡಿವಾರವೆಲ್ಲ ಹೆರರ ಬಟ್ಟೆ ಮೇಲೆ

೧೨೦೫೪ ಅಗಸನ ಮನೆ ಉಡುಪು, ಅಕ್ಕಸಾಲೆ ಮನೆ ಕಡಕು—ಅವನೇನು ಕಮ್ಮಿ?

೧೨೦೫೫ ಅಡಿಜಾಲಿ ಬಿದ್ದಲ್ಲಿಂದ ಬಡಿವಾರ ಮಾಡ್ತಿದ್ದನಂತೆ

೧೨೦೫೬ [1]ಅತಿರೇಕದ ಜಂಗಮಯ್ಯಗೆ ಅಂಗವೆಲ್ಲ ರುದ್ರಾಕ್ಷಿ

೧೨೦೫೭ ಅಪ್ಪನಿಗೆ ಅಪ್ಪ್ರಕೈ, ಮಗನಿಗೆ ಪಪ್ಪಳಿ ಕೈ

೧೨೦೫೮ [2]ಅಯ್ಯ ಅಡಿಸೇರು, ಲಿಂಗ ಪಂಚೇರು

೧೨೦೫೯ ಅರಕಲಗೂಡಿನ ಅರಸ್ತನ, ನೆರಿಕೆ ಮನೆ ವಾಸಸ್ಥಾನ

೧೨೦೬೦ ಅರಮನೆ ತಿರುಗಾಟ, ವರುಷದ ಕೂಳಿಗೆ ಬಡಿದಾಟ

೧೨೦೬೧ ಅರಸ ಆರುಮೊಳ, ಬಂಟ ಮೂರುಮೊಳ

೧೨೦೬೨ ಅರೆಕಾಸಿನ ಬಡ್ಡಿ (ಪೋರಿ, ಹೆಣ್ಣ)ಗೆ ಆರ್ಭಟ ಬಹಳ

೧೨೦೬೩ ಅಲ್ಪರಲ್ಲಿ ಅಬ್ಬರ ಹೆಚ್ಚು

೧೨೦೬೪ ಅಂಕ ಆರ್ಮೊಳ, ಬಿಂಕ ಮೂರ್ಮೊಳ,
ಕಂಕುಳಲ್ಲಿರೋದು ಹದಿನಾರ್ಮೊಳ

೧೨೦೬೫ ಅಂಗಳ ನೋಡಿದರೆ ತಿಳಿಯದೆ ಅಮ್ಮನ ಸಿರಿ?

---

1 ವಿಪರೀತದ ಒಡೆಯರಿಗೆ ತರಡೆಲ್ಲ ರುದ್ರಾಕ್ಷಿ

2 (i) ಸೆಟ್ಟಿ ಸವಾಸೇರು, ಲಿಂಗ ಅಡಿಸೇರು
(ii) ಸೆಟ್ಟಿ ಸವಾಸ ಸೇರು, ಲಿಂಗವ ಅಡಿಸೇರು

೧೩೦೬೬ ಅಂಗಿ ಬಿಂಗಿ ರಾಪ್ಪತ, ಹೊಟ್ಟೆಗಿಲ್ಲದೆ ಸಾಯುತ

೧೩೦೬೭ ಅಂಬಲಿ ಅರಪಟ್ಟೆಗೇಲಿ ಮುತ್ತಿನ ಮೇಲ್ಕಟ್ಟಂತೆ

೧೩೦೬೮ ಅಟಾಟೋಪದವನ ಮನೇಲಿ ಬೂಟಾಟಿಕೆ ಭಂಡಾರ

೧೩೦೬೯ [1]ಆನೆಗಿಂತ ಬಾಲ ಉದ್ದ

೧೩೦೭೦ ಅಮ್ಮಟ್ಟಿಲ್ಲದ ಮುರುಮಗೆ ಅರುಕಟ್ಟಿನ ವಿಭೂತಿ

೧೩೦೭೧ ಅರತಿ ಪತ್ರೋಳಿಗೆ ಅಪ(ದಬ)ರು ಒಡಿಯೋಳೊಬ್ಬಳು

೧೩೦೭೨ ಅರುಕಾಸಿನ ಅಡಕೆಲೆ ತಕ್ಕೊಂಡು ಅರಮನೆಗೆ ಹೋಗೋವ್ನ
ಮನೇಲಿ ರಾಗಿಯಿಲ್ಲ

೧೩೦೭೩ ಆಳಿನ ಅಬ್ಬರಕ್ಕೆ ಪೋ(ಪೇ)ತಾ ಬಬ್ಬರಿಸಿತು

೧೩೦೭೪ ಆಳು ಅಬ್ಬರ, ಕೂಳು ಗೊಬ್ಬರ

೧೩೦೭೫ ಆಳು ಆಕಾರ, ಬಾಳು ಬಣ್ಣಗೇಡು

೧೩೦೭೬ ಆಳು ಚೋಟುದ್ದ, ಮಾತು ಮಾರುದ್ದ

೧೩೦೭೭ ಆಳು ನೋಡಿದರೆ ಅಲಂಕಾರ,
ಬಾಳು ನೋಡಿದರೆ ಬಡಕೊಂಡಹಾಗೆ

೧೩೦೭೮ ಆಳು ನೋಡಿದರೆ ಆರ್ಭಟ, ಬಾಳು ನೋಡಿದರೆ ಬೊಬ್ಬಾಟ

೧೩೦೭೯ ಆಳು ನೋಡಿದರೆ ಒಡ್ಡು, ಒಳಗೆ ನೋಡಿದರೆ ಲಡ್ಡು

೧೩೦೮೦ ಆಳು ನೋಡಿದರೆ ದಳ್ಳಾಳಿ, ಮನೆ ನೋಡಿದರೆ ಮಳ್ಳಾಳಿ

೧೩೦೮೧ ಆಳು ನೋಡಿದರೆ ಹಸ, ತಲೆ ಮೇಲೆ ಮೂರುಮಂಕ್ರಿ ಕಸ

೧೩೦೮೨ [2]ಆಳೊಂದು (ತಲೆ ಒಪ್ಪಿಡಿ) ಒಡಿ, ತರಡು ಇಪ್ಪಿಡಿ

---

1 ಆನೆಗಿಂತ ಲದ್ದಿ ಬಿರುಸು

2 ಆಳು ಒಪ್ಪಿಡಿ, ಗಡ್ಡ ಒಪ್ಪಿಡಿ

೧೨೦೮೩ ಇದ್ದಕ್ಕಿದ್ದಹಾಗೆ ಕತ್ತೆಗೆ ರುದ್ರಾಕ್ಷಿ ಸರ ಬಂತು

೧೨೦೮೪ ಇಪ್ಪಣ ಅಷ್ಟ ಕಂದಾಯ, ಏಳು ಹಣದ ಅಡ್ಡಗಚ್ಚೆ

೧೨೦೮೫ [1]ಇಂತೇದು ಸಂತೇಲೆಪ್ಪೊ!

೧೨೦೮೬ [2]ಉಟ್ಟುಕೊಳ್ಳಲು ಬಟ್ಟೆಯಿಲ್ಲ,
ಪಟ್ಟಾವಳಿ ಪೀತಾಂಬರದ ಮಾತು

೧೨೦೮೭ [3]ಉಣ್ಣಕ್ಕಿಲ್ಲದವನು ಸಣ್ಣಕ್ಕಿ ಅನ್ನ ಉಂಡ,
ಉಡಕಿಲ್ಲದವಳು ಪಟ್ಟೆಸೀರೆ ಉಟ್ಟಳು

೧೨೦೮೮ ಉಣ್ಣೋದು ರಾಗಿಹಿಟ್ಟು, ಮೀಸೆ ಮೇಲೆ ಸಣ್ಣಕ್ಕಿ ಅನ್ನ

೧೨೦೮೯ ಉಣ್ಣೋದು ಧಂಗದ ಕಾಳು, ಆಡೋದು ಜಂಬದ ಮಾತು

೧೨೦೯೦ [4]ಊಟಗೆಟ್ಟ ಮನೆಹಾಳನಿಗೆ, ಶಾಟ ಮೂರ್ವೊಳ

೧೨೦೯೧ ಉದ್ದಾನೆ ಕುತ್ತಿಗೆಗೆ (ಮುಲಕಾ? ಮುಲಕೀ?) ಮುಲುಕು ಯಾಕೆ?

೧೨೦೯೨ ಊರಗೌಡನ ಮನೆ ಪಾತ್ರೆಲ್ಲಾ ತತಾತೂತು,
ಮಡಕೆಯೆಲ್ಲ ದದ್ದು

೧೨೦೯೩ ಊರಗೌಡನ ಮನೇಲಿ ಮೂರು ತೂತಿನ ಹರವಿ

೧೨೦೯೪ ಊರ ಮುಂದಿನ ಹನುಮಂದೇವರುಗಳೆಲ್ಲ ನನ್ನ ಗರ್ಭಗುಡಿ
ನೋಡಿಕೊಂಡೇ ಹೋಗಬೇಕು

೧೨೦೯೫ ಎಡವಿದ ಬೆಟ್ಟು ಎಣ್ಣೆ ಕಾಣದು,
'ಕರಡಿ ಗುಡ್ಡಕ್ಕೆ ಹೋಗಿ ಕಾರ್ತಿಕ ಹಚ್ಚಿಬಾ' ಅಂದ

---

1 ಇಂತೆ ಕಳ್ಳೆ ಸಂತೇಲೆಪ್ಪೊ!

2 ಉಟ್ಟುಕೊಳ್ಳಲು ಬಟ್ಟೆಯಿಲ್ಲದಿದ್ದರೂ ಪಟ್ಟಾವಳಿ ಪೀತಾಂಬರ ಉಟ್ಟೇನು ಅಂದ

3 (i) ಉಂಬೋಕಿಲ್ಲದವನಿಗೆ ಜೀರಿಗೆ ಸಾಲೆ ಅಕ್ಕಿ, ಉಡಕ್ಕಿಲ್ದವನಿಗೆ ಪಟ್ಟೆ ದೋತ್ರ
(ii) ಬಟ್ಟೆ ಇಲ್ಲದೋನಿಗೆ ಪಟ್ಟೆ, ಊಟಕ್ಕಿಲ್ದೋನಿಗೆ ಜೀರಿಗೆ ಸಾಲೆ ಅಕ್ಕಿ

4 ಅಟ್ಟಹಾಸ ಆರ್ವೊಳ, ಶಾಟ ಮೂರ್ವೊಳ

೧೨೯೬ ಎತ್ತಿಗಿಂತ ಕೋಡೇ ದೊಡ್ಡದು

೧೨೯೭ ಎತ್ತೋಕೆ ಪಾತ್ರೆ ಇಲ್ಲ, ಬಿಡ್ತಾನೆ ಪಾತಾಳಗರುಡಾನ!

೧೨೯೮ ಒಡನುಲಿಕೆ ಹರಿಯದಿದ್ದರೂ ಬಡಿವಾರ ಬಹಳ

೧೨೯೯ ಒಳಗಿನ ಬೇಗೆ ಶಿವ(ಸಂಗಯ್ಯ)ನೇ ಬಲ್ಲ

೧೩೦೦ ಒಳಗೆ ನೋಡಿದರೆ ಓಟೆ, ಹೊರಗೆ ನೋಡಿದರೆ ಕೋಟೆ

೧೩೦೧ ಒಳಗೆ ನೋಡಿದರೆ ಹದಿನೆಂಟು ವ್ಯಾಧಿ,
ಮೇಲೆ ನೋಡಿದರೆ ಬರೀ ಭೂಷಣ

೧೩೦೨ ಒಳಗೆ ಹುಳುಕು, ಮೇಲೆ (ಹೊರಗೆ) ಥಳು(ಬೆಳ)ಕು

೧೩೦೩ ಓಂಕಾರಕ್ಕಿಂತ ಹುಂಕಾರವೇ ಪ್ರಭಾವಶಾಲಿ

೧೩೦೪ ಕಟ್ಟೋಕೆ ಎತ್ತಿಲ್ಲ, ಬಿತ್ತೋಕೆ ರಾಗಿಯಿಲ್ಲ,
ಕೂರಿಗೆ ತಕೊಂಡು ಕುಣಿದಾಡ್ತಾನೆ ಕೆಂಚಣ್ಣ

೧೩೦೫ ಕಳ್ಳಹಣಕ್ಕೆ (ಹೊನ್ನಿಗೆ) ದೊಡ್ಡಮುದ್ರೆ

೧೩೦೬ ಕಾಯಿಗಿಂತ ಜುಟ್ಟೇ ಉದ್ದ(ವಂತೆ)ವಾದಂತೆ

೧೩೦೭ *ಕುಡಿಯೋದು ಅಂಬಲಿ, ಮುಕ್ಕಳಿಸೋದು ಪನ್ನೀರು

೧೩೦೮ ಕುಣಕಾಲ್ಗಂಟ್ಲೂ ಪಂಚೆ, ಕುದೇರು ಗಂಟ್ಲೂ ಸಾಲ

೧೩೦೯ ಕುದುರೆ (ಹಿಂಡಿ) ಗಿಂತ ಲದ್ದಿ ಬಿರುಸು

೧೩೧೦ ಕುಂಟ ಮಹೂಳಿಗೆ ಗುಂಡಿನ ಟೀಕೆ ಕಟ್ಟಿದರೆ,
ಹಿಂದೆ ಇಬ್ಬರನ್ನು ಹಿಡಿಯುಲಿಕ್ಕೆ ಹಚ್ಚಿತು,
ಮುಂದೆ ಇಬ್ಬರನ್ನು ನೋಡಲಿಕ್ಕೆ ಹಚ್ಚಿತು

---

* ತಿನ್ನೋದು ಸಗಣಿ,......

೧೨೧೧೧ ಕೂಸು ಕಾಸು (ಪಡೆಯ) ಹೋಲದೇ,
ಜೋಗುಳ ಮುಗಿಲು ಮುಟ್ಟಿತು

೧೨೧೧೨ ಕುಂಟೆ ಕೂರಿಗೆ ಇಲ್ಲ, ಹಲಗೆಗೆ ನನ್ನ ಗಂಡ ಹಮ್ಮಿಶೂರ

೧೨೧೧೩ [1]ಗಂಜಿ ಕುಡಿಯೋನಿಗೆ ಗಪ್ಪ (ಮೀಸೆ ಹಿಡಿಯುವವರು)
ನೀವ್ರೋರು ಮೂರು ಮಂದಿ

೧೨೧೧೪ ಗುಡಗುಡ ಅಂತ ಗುಡುಗಿದರೆ ಗುಡಗಿನ ಗಾತ್ರ ಮಳೆ ಬೀಳಲ್ಲ

೧೨೧೧೫ [2]ಗಂಜಿಗೆ ಗತಿಯಿಲ್ಲ ನಂಜಿಗೆ ಬುಲಾವ್ ಅಂದ ಹಾಗೆ

೧೨೧೧೬ [3]'ಗೌಡ !' ಅಂದ್ರೆ 'ಓ' ಅಂದ, ಒಂದಾಳಿನ ಮುದ್ದೆ ಅಂದರೆ
ಸದ್ದೇ (ಉಪ್ಪೇ) ಇಲ್ಲ

೧೨೧೧೭ [4]ಗೌಡನ್ನ ನೋಡಿದ್ರೆ ಗಟಾನುಗಟಿ (ಗಟಾಂಗಟಿ),
ಒಳಗೆ ನೋಡಿವರೆ ಲೊಟಾಪಿಟಿ

---

1 (i) ಅಂಬಲಿ ಕುಡಿಯೋನಿಗೆ ಮೀಸೆ ತಿಕ್ಕುವವನೊಬ್ಬ
(ii) ಜವಳಿ ಮಾರೋನಿಗೆ ಗೋಣಿ ಹೊರೋನೊಬ್ಬ
(iii) ಜೊಲ್ಲು ಸುರಿಸೋನಿಗೆ ಗಪ್ಪ ನೀವ್ರೋನೊಬ್ಬ
(iv) ತಮ್ಮಟೆ ಬಡಿಯೋನಿಗೆ ಕಡ್ಡಿ ಪುಡಿ ಕೊಡೋನೊಬ್ಬ
(v) ತವುಡು ತಿನ್ನೋನಿಗೆ ಬಳ್ಳ ಹಿಡಿಯುವವನೊಬ್ಬ
(vi) ತಂಬಾಕು ಸೇದೋನಿಗೆ ಮೀಸೆ ತಿಕ್ಕುವವನೊಬ್ಬ
(vii) ಸಗಣಿ ತಿನ್ನೋನಿಗೆ ಮೀಸೆ ತಿಕ್ಕುವವನೊಬ್ಬ
(viii) ಸುಟ್ಟೇವು ಸುಡ ಮುದುಕಿಗೆ ಮೂಸುಂಬಳು ತೆಗೆಯುಲು ಮೂರುಜನ (ಹವ್ಯಕ)
(ix) ಹುರುಳಿ ತಿನ್ನೋನಿಗೆ ಕರಟ ಹಿಡಿಯುವವರು ಆರುಮಂದಿ
(x) ಹೆಂಡ ಕುಡಿಯುವವನಿಗೆ ನೆತ್ತಿ ತಟ್ಟೋರಿಬ್ಬರು

2 (i) ಗಂಜಿಗೆ ಗತಿಯಿಲ್ಲದಿದ್ರೂ ನಂಜಿಗೆ ಬುಲಾಕು
(ii) ಗಂಜಿಗೆ ಗತಿಯಿಲ್ಲದ ಪೈವ ನಂಜಿ ಕರೆದನಂತೆ

3 'ಊರಗೌಡ ಯಾರಪ್ಪ ?' ಅಂದ್ರೆ 'ನಾನು' ಅಂದನಂತೆ, 'ಇಬ್ಬರಿಗೆ ಊಟ ಹಾಕಪ್ಪ' ಅಂದ್ರೆ 'ನಾನಲ್ಲ ಮುಂದೆ ಹೋಗ್ರಪ್ಪ' ಅಂದನಂತೆ

4 ಗೌಡನ್ನ ನೋಡಿದರೆ ಗಟಾಂಗಟಿ, ಅನ್ನ ನೋಡಿವರೆ ಈ ಪೀಪಾಟಿ

೧೨೧೧೮ ಚೇಂವಗೇಡಿ ಕೊರಳಾಗೆ ಚವುಕ (ಜಾತು) ಕಟ್ಟಿದರೆ ಮುಂದೆ
ನೋಡಲೆಂದು ಕುಂಭಿಯ ಮೇಲೆ ಕೂತ

೧೨೧೧೯ ಚಿಕ್ಕಮೋಣಸಿ (ಚೊಕ್ಕಮಾತಿ)ಗೆ ಕಾರ ಹೆಚ್ಚು

೧೨೧೨೦ ಚಿಕ್ಕ ಹಕ್ಕಿಗೆ ಪುಕ್ಕ ಉದ್ದ

೧೨೧೨೧ [1]ಚೋಟುದ್ದ ಮುಂಡೆಗೆ ಬಾ (ಮಾ) ರುದ್ದ (ಜಡೆ) ಕಚ್ಚೆ

೧೨೧೨೨ ಡಾಂಭಿಕರಿಗೆ ಗಂಭೀರ ಯಾಕೆ ?

೧೨೧೨೩ [2]ತರಗು ತಿನ್ನೋನಿಗೆ ಒರಗೊಂದು (ಬೇರೆ) ಕೇಡು

೧೨೧೨೪ [3]ತಲೆಗಿಂತ ಕಿರೀಟ ದೊಡ್ಡದು

೧೨೧೨೫ ತವುಡು ತಿಂದರೂ ಮುರುಕು ಘನ

೧೨೧೨೬ [4]ತವುಡು ತಿನ್ನೋರಿಗೆ ಒಯ್ಯಾರವೇಕೆ ?

೧೨೧೨೭ [5]ತಾ ತಿನ್ನೋದು ಪಲ್ಲೇ ಸೊಪ್ಪು, ಹಿರೀ ಕುದುರೆ ಚೇಷ್ಟೆ

೧೨೧೨೮ ತಾಳಿ ಮಣಿಯ ಮೇಲೆ ಬ್ಯಾಳಿ ಮಣಿಯಿಲ್ಲ.
ಬೋಳವ್ವ ತನ್ನ ಭಾಗ್ಯ ಹೇಳಿಕೊಂಡಳಂತ

೧೨೧೨೯ ತಿನ್ನಕ್ಕೆ ಹಿಟ್ಟಿಲ್ಲ (ತಂಬಿಟ್ಟು ಕಲಸು) ಕಮಟ ಕಾಯಿಸೆ ಬಡ್ಡಿ

೧೨೧೩೦ ತಿನ್ನಕ್ಕೆ ಹಿಟ್ಟಿಲ್ಲ, ತಿರುಮಲೆ ದೇವರಿಗೆ ಓಲಗ

೧೨೧೩೧ ತಿನ್ನೋಕೆ ಹಿಟ್ಟಿಲ್ದೆ ಇದ್ರೂ ತಿರುಪತಿಗೆ ಹೋಗಂವ್ ಬಾ

---

1 ಚೋಟುದ್ದ ಹುಡುಗನಿಗೆ ಮಾರುದ್ದ (ಗೇಣುದ್ದ) ಕುಲಾವಿ (ಕಂಬಳಿ)

2 ಉಣ್ಣೋಕಿಲ್ದೇ ಇದ್ರೂ ಒರಗುಬೇಕು

3 (i) ತಲೆಗಿಂತ ತರಡು ದಪ್ಪ
(ii) ಆಳಿಗಿಂತ ತರಡೇ ಭಾರ

4 ತಿನ್ನೋದು ತವುಡು, ನಡೆಯೋದು ವೈಯಾರ

5 ತಿನ್ನೋದು ಪಲ್ಲಿ ಹುಲ್ಲು, ಮಾಡುವುದು ಹಿರೇ ಕುದುರೆ ಚೇಷ್ಟೆ

೧೨೧೩೨ [1]ತಿನ್ನೋದು ಕೊಮ್ಮೆ ಜೇರು,
ಹೂಸೋದು ಬಾಜಿರಾಯನ ಹೂಸು

೧೨೧೩೩ ತಿನ್ನೋದು ತವುಡು, ವಾರಕ್ಕೆ ಹಂದಿ ಸಾಕಿದ

೧೨೧೩೪ [2]ತಿನ್ನೋದು ತಿರಿಕೆ ಹಿಟ್ಟು ನಡೆಯೋದು ಚೌಕಿ ನಡಗೆ

೧೨೧೩೫ ತೀರಿಲ್ಲ ತಿಟಂವಟವಿಲ್ಲ, ಜಂಘ ವರಾತ್ರ ತೊಂಬೆ ಅಷ್ಟು

೧೨೧೩೬ ತುಪ್ಪಿಲ್ಲದೆ ನನ್ನ ಗಂಡ ತುತ್ತು ಒಡಿಯುಲ್ಲ ಅಂದಳಂತೆ

೧೨೧೩೭ ತೇಟೆ ಗಂಜಿ ಕುಡಿಯೋನಿಗೆ ಪಟೇಟು (ಏಳೆಂಟು) ಪಾರುಪತ್ಯ

೧೨೧೩೮ ತೋಟ ಮೂರು ಮೊಳ, ಕಾಯಿ ಆರು ಮೊಳ

೧೨೧೩೯ ತೋಟ ಹೊರಗೆ ಶೃಂಗಾರ,
ಒಳಗೆ ನೋಡಿದ್ರೆ ಗೋ(ಳಿ)ಣಿ ಸೊಪ್ಪು

೧೨೧೪೦ ದೇಹಕ್ಕಿಂತ ಬಾಲವೇ ಭಾರ

೧೨೧೪೧ ದೊಡ್ಡಗೌಡನ ಮನೇಲಿ ದೊಡ್ಡ ಗಂಡಾಣ ಎತ್ತಿದರೆ ಏನೂ ಇಲ್ಲ

೧೨೧೪೨ ನಡೆಯೋದು ಕಾಲಿಂ ನಡೆ, ಮಾತು ಪಲ್ಲಕ್ಕಿ ಮೇಲೆ

೧೨೧೪೩ ನನ್ನ ಹತ್ರ ಎಲ್ಲಾ ಅದೆ, ತರಗ್ಗೆ ಸುಣ್ಣ ಸವರಿ
ಗೋಟ್ನೋ ಕಡ್ಡಿ ಪುಡೀನೂ ಕೊಡು ಅಂದ್ಲಂತೆ

೧೨೧೪೪ ನಿಮ್ ಬೆಡಗು ನಿಟ್ಟುಪಾಸ, ಕಮರು ತೇಗು

೧೨೧೪೫ ನಿಸೂರ್‌ಗಾತಿ ಮನೇಲಿ ಎಸರೇನು ಅಂದ್ರೆ,
ನೀರಿಗೆ ಮೆಣಸಿನಕಾಯಿ ಜಡಾಯಿಸವಳೆ

೧೨೧೪೬ ಪಟೇಲನ ಮನೆ ಪ್ರಸ್ತ, ಬರಿ ತಪ್ಪಲೆ ಬಸ್ತ.
ಬಂದೋರ್ ಮುಂದೆ ಹಲ್ಲು ಕಿಸ್ತ

---

1 ತಿನ್ನೋದು ತಿರಿಕೆ ಹಿಟ್ಟು, ಹೂಸೋದು ದಬಾಣದ ಹೂಸು

2 (i) ಗುರಂಕಾರ ಶಿಸ್ತು

(ii) ಮನ್ಗದು ಮಾರಿಗುಡಿ ಚಾವಡಿ

೧೨೧೪೭ ಬಟ್ಟೆ ಬೆಳ್ಳಗೆ, ಹೊಟ್ಟೆ ತೆಳ್ಳಗೆ

೧೨೧೪೮ ಬಟ್ಟೆಬರೆಯಲ್ಲಿ ದಿಟ್ಟಗಾರ, ಹೊಟ್ಟೆಗಿಲ್ಲವಲ್ಲ ನನ್ನ ಬಟ್ಯಾಳ

೧೨೧೪೯ ಬಡನೂಲು ಹರಿದಿದ್ರೂ ಬಡಿವಾರ ಬಹಳ

೧೨೧೫೦ ಬಡ ಹೆಗಡೆಗೆ ಹೆಡಗೆಯಂತ ಮುಂಡಾಸ

೧೨೧೫೧ *ಬಡಾಯ್ಗೆ ಒಂದು ಕಡಾಯ್ ತಂದರೆ
ಕಡಾಯುದವನು ಬಂದು ಲಡಾಯಿ ಮಾಡಿದನಂತೆ

೧೨೧೫೨ ಬಡಾಯಿ ನೋಡಿದರೆ ಕಡಾಯಿ ಗಾತ್ರ.
ಕಡಾಯುದಲ್ಲಿ ಒಕ್ಕಳ ರಾಗಿಲ್ಲ

೧೨೧೫೩ ಬಡಾಯಿ ಬೋರನ ಮನೆಯಲ್ಲಿ ಕುಡಿಯೋಕೆ ನೀರಿಲ್ಲ.
'ಕರುವಿಗೆ ಮೂರು ಹಿಡಿ ಸಕ್ಕರೆ ಇದೇ!' ಅಂತಿದ್ನಂತೆ

೧೨೧೫೪ ಬಡಾಯಿ ಬೋರನ (ಬಡಿವಾರದವರ)
ಮನೆಯಲ್ಲಿ ಹೆಡಗೇಲಿ ರಾಗಿಯೇ ಇಲ್ಲ

೧೨೧೫೫ ಬಡಿವಾರದ ಜತೆಗೆ ಇನ್ನಷ್ಟು ಬಡಿವಾರ

೧೨೧೫೬ ಬಡಿವಾರದ ನರಿ ನಾಯು ಪಾಲಾಗಿ ಸತ್ತು ಹೋಯಿತಂತೆ

೧೨೧೫೭ ಬಡಿವಾರದ ಮೂಳನನ್ನು ಬಡಿಗೆಯಿಂದ ಬಡಿದರೆ.
ಅಡಿಗೆ ಮನೆ ತನಕ ಗುಡುಗುಡು (ಗೊಣ) ಗುಟ್ಟುತ್ತಿದ್ದ.

೧೨೧೫೮ 'ಬಡಿವಾರದ ವಲ್ಲಿ ತತ್ತಾರೆ ಗುಡಿಗಂಟ ಹೋಗಿ ಬತ್ತೀನಿ' ಅಂದ

೧೨೧೫೯ ಬಡಿವಾರದವನ ಸಂಗಡ ಹೋಗಿ ನಡು ದಾರಿಯಲ್ಲಿ ಬಿದ್ದ

೧೨೧೬೦ ಬಣ್ಣದ ಬೆಕ್ಕಿಗೆ ಬಣ್ಣದ ಹಾಲು

೧೨೧೬೧ ಬರಿ ಬಡಾಯಿ, ಒಳಗೆ ಲಡಾಯಿ

---

* ಬಡಾಯ್ಗೆ ಒಂದು ಕಡಾಯಿ ತಕ್ಕಂಡು ಅದೇ ಕಡಾಯಿ ಅಡವಿಟ್ಟು ಸಾಲ ತೀರಿಸಿದರಂತೆ

೧೨೧೬೨ ಬರಿ ಬಡಾಯಿ ಹೊಡಿವ ತರಾಯಿ.
ಹುಲ್ಲು ಮನೆ ಮೇಲೆ ಹೋಗ್ತಾಯಿ

೧೨೧೬೩ ಬರಿಗೈಯವರ ಬಡಿವಾರ ಬಹಳ

೧೨೧೬೪ ಬಸವನಿಗಿಂತ ಬಸವನ ಬಾಲ ಹಿರಿದು

೧೨೧೬೫ ಬಾಗದ ಮುದುಕನಿಗೆ ಬಣ್ಣದ ಲಂಗೋಟಿ

೧೨೧೬೬ ಬಂಡವಾಳ ಮೂರು ಕಾಸು, ಬಡಿವಾರ ಆರು ಕಾಸು

೧೨೧೬೭ ಬಂಡವಾಳವಿಲ್ಲದ ಬಡಾಯಿ

೧೨೧೬೮ ಬಾಪ್ಪಳಾಕಿ ಅರೆ ದೇವತ್ತಿಗೆ ಬಂದು ಮಗು ಹೆತ್ತು,
ತೂಗಾಕೆ ಬರಲ್ಲ ಅಂದ್ಲು

೧೨೧೬೯ ಬಾಯಿ ಬೆಳ್ಳಕ್ಕಿ ಕಾಣದು.
ಕೇಳ್ತಂತೆ ಮೂರು ಕಾಸಿನ ಲವಂಗಾನ

೧೨೧೭೦ ಬಿಂಕ ಮಾಡಿದರೆ ಬೊಂಕು ಹೋದೀತೆ

೧೨೧೭೧ ಬೀಗ್ತಿಗೆ ಬೀಸೋಕೆ ರಾಗಿಯಿಲ್ಲ.
'ಕೋಳಿ ಮುಕ್ಕ್ಯುವುದು ಕಂಪನಿ ರಾಗಿ' ಅಂದ್ಲಂತೆ

೧೨೧೭೨ ಬೀಗ್ತಿ ಬೀಗ್ತಿ ಬಿಸ್ಲ್ಕಾಟ ಚೆನ್ನ! ಬೀಗಾದ್ರೆ ಉರುಳಾಡು ಚೆನ್ನ!

೧೨೧೭೩ ಬೀಸೋ ಕಲ್ಲಿಗೆ ಎರಡು ದೋಸೆ ಹಾಕ್ಕೊಂಡು.
ಬೀಗ್ರು ಬರೋ ದಾರಿ ನೋಡು

೧೨೧೭೪ *ಬೂಟಾಟಿಕೆ ದಾಸಯ್ಯನಿಗೆ ಬುರುಡೆಯೆಲ್ಲ ನಾಮ

೧೨೧೭೫ ಬೆಂದ ಮನೆ ಮುಂದೆ ತೋರಣವಂತೆ

---

* ಬುಡುಬುಡುಕೆ ದಾಸಯ್ಯನಿಗೆ ಬುಂಡೆ (ಬುರ್ಡೆ)ಯೆಲ್ಲ ನಾಮ

೧೩೦೭೬ ಬೀಗೆ ಚಿಕ್ಕಪ್ಪನಿಗೆ ಬುದ್ಧಿ ಕಲ್ತಿ ಮಾವನ

೧೩೦೭೭ ಬಿಕ್ಷುಮಾನದ ಅಕ್ಕಿ ತಾಂಬೂಲಕ್ಕೆ ಹಾಕಿದ್ರಂತೆ
ಆ ಮನೆಗೂ ಈ ಮನೆಗೂ ಓಡಾಡಿದ್ಲು

೧೩೦೭೮ ಭಿಕ್ಷವಿಲ್ಲದ ಮನೆಗೆ (ಭಿಕ್ಷಮಾದ ಹೆಬ್ಬಗೆಗೆ)
ಮುದ್ರೆ ಒಂದು ಕೇಡು

೧೩೦೭೯ ಭಕ್ತಿಗೆ ಹೊಂಗ್ಯಾಳಿ ಕುದುರೆ (ಜಾಬು)ಗೆ ಬಡಿ ಹಾಕಿದ

೧೩೦೮೦ ಭೋಜನಕಾರನ ಮನೇಲಿ ಬೀಸೋಕೆ ರಾಗಿಯಿಲ್ಲ

೧೩೦೮೧ ಮಾಗಿಮಗಿನ (ಒಣಗಿ) ಈ (ಒ)ಡೆ ನೂಲು ಗಡು(ನು)ಕರ

೧೩೦೮೨ ಮನೆಯಲ್ಲಿ ಬಕ್ಕರಿ ಇಲ್ಲದ್ದರೂ ಬಿಡಾಕ್ಕೆ ನಕ್ಕರಿ ಬೇಕು

೧೩೦೮೩ ²ಮಾಡಲು ನೋಡಿ ಮನೆ ನೆಕ್ಕಿದ ಕ್ಷೌರ (ಕೊಂಪ್ಪು) ಹಾಕಿ
ಒಲೆ ಮುಂದೆ ಕೂತಿದ್ಲ

೧೩೦೮೪ ಮಂತ್ರಿಗಳು ನೋಡಿದಾಗ ಮಾಡಿ.
ಮನೆ ಮನೆ ಗುಲಾಮ ಹಾಬ್ಬಿನ ಹಾಲ

೧೩೦೮೫ ³ಮಂತ್ರ ಕಡಿಮೆ, ಉಗುಳು ಜಾಸ್ತಿ

೧೩೦೮೬ ಮಾತಿನಲಿ ಅರಮನೆ ಕಟ್ಟಿ, ಮನೆ ಮಾಡಿಕೊಳ್ಳಲ್ಲ ಜಾಗಿ

೧೩೦೮೭ ಮಾಡುವುದು ಕಡಿಮೆ, ಬೀಗುವುದು ಜಾಸ್ತಿ

---

2 ಹೊಂಕಪ್ಪ ನೋಡಿ ಮನೆ ನೆಕ್ಕಿದ ಗರುಗ ಉಗಿದು ಹಾಕಿದ್ದಾನೆ ಒಲೆ ಊದುವುದಕ್ಕೆ

3 (i) ಭಟ್ಟರಿಗೆ ಮಂತ್ರ ಕಡಿಮೆಯಾದರೂ ಹೊಟ್ಟೆ ಹಿರಿದು
(ii) ಉಗುಳು ತುಂಬ, ಓದು ಸ್ವಲ್ಪ
(iii) ಭಟ್ಟರಿಗೆ ಮಂತ್ರ ಹೋಕಿ, ಉಗುಳು ಬಹಳ
(iv) ಭಟ್ಟರ ತುಪ್ಪವಿಲ್ಲ ಮಂತ್ರ
(v) ಭಟ್ಟನಿಗೆ ಮಂತ್ರಕ್ಕಿಂತ ಉಗುಳು ಅಪಾರ

೧೨೧೮೮ ಮಾತುಗಾತಿ ಮನೇಲಿ ಬೇಸಿಗೇಲಿ ಬೀಸಿದ ರಾಗಿ ಹಸಿಟ್ಟು

೧೨೧೮೯ ಮುದ್ದೆ ಸಿರಿಯೊ, ಮುದಿ ಗಂಡನ ಸಿರಿಯೊ, ಮೂಗಲ್ಲಿಕ್ಕಿರುವ ಬೇವಿನಕಡ್ಡಿ ಸಿರಿಯೊ !

೧೨೧೯೦ ಮುರುಕಲು ಮನೆಗೆ ಮುವತ್ತಾರು ಕಂಬಗಳು

೧೨೧೯೧ ಮೂಗಿಗಿಂತ ಮೂಗುತಿ ಭಾರ

೧೨೧೯೨ ಮೇಲೆ ಗೌಡ, ಒಳಗೆ ಲೌಡ

೧೨೧೯೩ ಮೊಣ್ಣೇಗಾರನ ಮದುವೇಲಿ ಅಣ್ಣೆ ಹೂವಿಗೂ ದಿಕ್ಕಿಲ್ಲ

೧೨೧೯೪ ಯಾವ ದೊಡ್ಡ ಪದಾರ್ಥ ಅಮಟೆಕಾಯಿ ಗೊಜ್ಜು!

೧೨೧೯೫ ಯಾರೂ ಕಾಣದ ಸೀರೆಯ ಅಗಸನಿಗೆ ಹಾಕಿದಳಂತೆ

೧೨೧೯೬ ರಾಜನ ಠೀವಿ, (ಹೊಲೆಪಾಡು) ತಿರುಕನ ಲಕ್ಷಣ

೧೨೧೯೭ ರಾತೀಬಿಗೆ ಗತಿಯಿಲ್ಲ, ರತ್ನಪಡಿ ವ್ಯಾಪಾರವೇ ?

೧೨೧೯೮ ಲೋಗರ ಮನೆಯಲ್ಲಿ ಎಮ್ಮೆ ಇದ್ದರೆ ನಮ್ಮ ಮನೆಯಲ್ಲಿ ಹಾಲೋಗರಕ್ಕೆ ಕಡಿಮೆಯೇನು ?

೧೨೧೯೯ ಶಂಬಪ್ಪನಿಗೆ ಉಂಬೋಕೇ ಇಲ್ಲ

೧೨೨೦೦ ಶೂರನ ಹೆಂಡತಿ ಊರಿಗೆಲ್ಲ ಬೇಕಾದವಳೇ

೧೨೨೦೧ ಸಗಣಿ ಒಡಿಯುವಾಕೆಯನ್ನು ಪಲ್ಲಕ್ಕಿಯಲ್ಲಿ ಕೂಡಿಸಿದರೆ 'ಮುಂದಿನ ಹೊತ್ತಿಲ ನನ್ನದೇ' ಅಂದಳಂತೆ

೧೨೨೦೨ ಸಟೆ ಇದ್ದವನಿಗೆ ಹಟ ಯಾಕೆ ?

೧೨೨೦೩ ಸಂಜೆಗೆ ಅಕ್ಕಿ ಇಲ್ಲದಿದ್ದರೂ ಬರೀ ಬೋಮಾನ

೧೨೨೦೪ ಸಂತೆಗೆ ಚೀಟು, ಮುಂಗೈಗೆ ಬಳೆ

೧೨೨೦೫ ಸಾವಿರ ರೂಪಾಯಿನ ಸರದಾರ, ಹರಿದ ಬಟ್ಟೆಗೆ ತ್ಯಾಪೆಯಿಲ್ಲ

೧೨೨೦೬ ಸಿದ್ದಿ ಅಕ್ಕಿಯಾಕೆಯ ಗುದ್ದಾಟ ನೋಡು,
ಅರೆಪಾವಿನಕ್ಕಿಯಾಕೆಯ ಆರ್ಭಟ ನೋಡು

೧೨೨೦೭ ಸಿರಿಗೇಡಿಗೆ ಸೀರೆ ಉಡಿಸಿದರೆ ಹೊಲಗೇರಿಗೆ ಹೇಳಲಿಕ್ಕೆ ಹೋಯಿತು.

೧೨೨೦೮ ಸೇರು ರಾಜ, ಮಣ ಬಂಟ

೧೨೨೦೯ ಹಗ್ಗ ಮೂರು ಮಾರು, ತಲೆಕಣಿ ಆರುಮಾರು

೧೨೨೧೦ ಹರಿವಾಣದ ಅನ್ನ ಹಾದಿಗೆ ಚೆಲ್ಲಿದ ಜಾಣ ಅವನು ಸಾಮಾನ್ಯವಾ ?

೧೨೨೧೧ ಹಾಕೆ ನೆಕ್ಕಕ್ಕೆ ಎಣ್ಣೆಲ್ಲ, ಹಜಾರಕೆ ಪತ್ತಿಸು ದೀಪವ ಅಂದ

೧೨೨೧೨ ಹುರಿಯಲಿಕ್ಕೆ ಹಂಚಿಲ್ಲ ಹುಕ್ಕೇರಿಯತನಕ ಪಂಜು ಹಿಡಿಸಿ (ಹುಡೆಕೊಂಡಿ)ದ್ದರಂತೆ

೧೨೨೧೩ ಹೂಸು ಹುರಿಯುಲಿಕ್ಕೆ ಜೋಳವಿಲ್ಲ, ಹೂಡೆ (ಹುಂಡೆ) ಕಟ್ಟು ವುದಕ್ಕೆ ಓಡಾಡ್ತಾ ಇದ್ದ

೧೨೨೧೪ ಹೆಮ್ಮೆ ನೋಡಿದ್ರೆ ಕೊಮ್ಮೆಗಾತ್ರ, ಕೊಮ್ಮೇಲಿ ಒಕ್ಕಳರಾಗಿ ಇಲ್ಲ

೧೨೨೧೫ ಹೆಬ್ಬಾಗಿಲಿನ ಅಬ್ಬರ

೧೨೨೧೬ 'ಹೆಸರು ದಾರಯ್ಯ, ಊರು ಎಲ್ಲಯ್ಯ ?' ಮೂರರೂರು, ಆರೂರು, ಸೀರೂರು, ಬರಿಯ ಗುಡಿ

೧೨೨೧೭ ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ (ಜುಟ್ಟು) ಮಲ್ಲಿಗೆ ಹೂವು (ಬೇಡಿತು)

೧೨೨೧೮ ಹೊರಗಿನ ಡಬ್ಬು ಒಳಗಿಲ್ಲ, ಹೊಗೆಸೊಪ್ಪಿಗೆ ಕಾಸಿಲ್ಲ ; ದಗಲೆ ಮಲ್ಲನ ದಿಗಿಲು ಬೇರೆ

೧೨೨೧೯ ಹೊರಗೆ ಜಗ ಜಗ, ಒಳಗೆ ಭಗ ಭಗ !

೧೨೨೨೦ ಹೊಲದಲ್ಲಿ ಆಕಳಿಲ್ಲ, ಮನೆಯಲ್ಲಿ ಕರುವಿಲ್ಲ : 'ನೆಲವಿನ ಮೇಲೆ ಬೆಣ್ಣೆ ಇದೆ' ಅಂದಳಂತೆ

ಮಾತ್ಸರ್ಯ

೧೨೨೨೧ [1]ಅಸೂಕರು ಹಂತೀಲಿರಬೇಕು, ಕರುಬರು ನೆರೇಲಿರಬೇಕು

೧೨೨೨೨ ಅರಗು ಬಂಗಾರ ತಿಂತು, ನಮ್ಮ ಕಿಬ್ರು ನಮ್ಮನ್ನೇ ತಿಂತು

೧೨೨೨೩ ಆಡಿ ಆಡಿ ಮಾತು ಕಲಿಸು, ಮಾಡಿ ಮಾಡಿ ಮತ್ಸರ ಕಲಿಸು

೧೨೨೨೪ ಆ ಮನೆ ಅಮ್ಮ ಗಂಡು ಮಗು ಹೆತ್ತಳು, ಈ ಮನೆ ಅಮ್ಮ ಗುದ್ದುಕೊಂಡು ಸತ್ತಳು

೧೨೨೨೫ ಕರುಬಿದವರಿಗೆ ಕ್ಷಯ

೧೨೨೨೬ [2]ಕರುಬಿದವನ ಮನೆ ಬರಿ ಮನೆ

೧೨೨೨೭ ಕರುಬಿ ಬದುಕಿದವರಿಲ್ಲ, ಕರುಬದೆ ಕೆಟ್ಟವರಿಲ್ಲ

೧೨೨೨೮ ಕರುಬುವನ ಜೊತೇಲಿ ಸುಖದ ಮಾತಾಡಬೇಡ

೧೨೨೨೯ ಕುದುರೆ ಹುಳ್ಳಿ ತಿಂತಿದ್ರೆ ಕತ್ತೆಗೆ ಹೊಟ್ಟೆನೋವು

೧೨೨೩೦ ಕುರುಬ ಕುಂಬಾರತಿಗೆ ಹೋದರೆ ಬೇಡ ಆಡಿನ ಕಾಲು ಮುರಿದ

೧೨೨೩೧ ಕೇಡು ಬಗೆದವನಿಗೆ ಕೇಡು ತಪ್ಪದು

೧೨೨೩೨ [3]ಗುಣಕ್ಕೆ ಮತ್ಸರವೆ ?

೧೨೨೩೩ ತನ್ನ ಕಾಡುವುದನ್ನು ನೆರೆಮನೆ ಬೊಮ್ಮಕ್ಕನನ್ನು ಕಾಡು

---

1 ಕುರುಬನ್ನ ನೆರೇಲಿರು, ದೀನನ ಹಂತೀಲುಣ್ಣು

2 ಕರುಬಲು ಕಲಿತೆಯೊ, ಬರಿ ಮನೇಲಿ ಕುಳಿತೆಯೊ ?

3 ಗುಣಕ್ಕೆ ಮಚ್ಚರವುಂಟೆ ?

೧೨೨೩೪ ತನ್ನ ಮುಂದೆ ಉಪ್ಪು ಇಕ್ಕಲಿಲ್ಲ, ಕಣ್ಣಿಗೆ ಉರಿ

೧೨೨೩೫ ತನ್ನ ಮನೆ ಉಪ್ಪಿಲ್ಲ, ಬೆನ್ನು ಹಿಂದೆ ಉರಿಯೋ!

೧೨೨೩೬ *ತನ್ನ ಮೂಗು ಹೋದರೂ ಚಿಂತೆಯಿಲ್ಲ, ಅನ್ಯರಿಗೆ ಅಪಶಕುನವಾದರೆ ಸರಿ

೧೨೨೩೭ ತರುಬಿ ಹೋಗುವವನನ್ನು ಕರುಬಿ ಮಾಡುವುದೇನು ?

೧೨೨೩೮ ತಾನೂ ಬಾಳಲಿಲ್ಲ, ಬಾಳುವವರನ್ನೂ ಬಾಳಗೊಡಿಸಲಿಲ್ಲ

೧೨೨೩೯ ತೊನ್ನು ಹತ್ತಿದವಳ ಮೈಗೆ ಶರಣು ಅನ್ನೋವತ್ಗೆ 'ನನ್ನ ಹಂಗೆ ಆಗೋ ನನಕಂದ' ಅಂದ್ಲಂತೆ

೧೨೨೪೦ ನನ್ನದು ಒಂದು ಕಣ್ಣು ಹೋದರೂ ಚಿಂತೆಯಿಲ್ಲ, ಅವನದು ಎರಡು ಕಣ್ಣೂ ಹೋಗಲಿ

೧೨೨೪೧ ನಾವು ಒಬ್ಬರನ್ನು ಕೆಡಲಿ ಅಂದ್ರೆ ದೇವರು ನಮ್ಮನ್ನೂ ಕೆಡಿಸುತ್ತಾನೆ

೧೨೨೪೨ ನೆರೆ ಬದುಕುತ್ತಾರೆ ಅಂತ ಅರೆಗಂಜಿ (ಅರಂಬ್ಲಿ) ಕುಡಿದ

೧೨೨೪೩ ನೆರೆಮನೆ ದುಃಖಕ್ಕೆ ಮೆಚ್ಚು

೧೨೨೪೪ ನೆರಮನೆಯವರು ಬದುಕ್ತಾರೆ ಅಂತ ಅರಮನೆಗೆ ಕನ್ನ ಹಾಕಿ ಸಿಕ್ಕಿಬಿದ್ದ

೧೨೨೪೫ ನೊಣದಂತೆ ತಾನೂ ಕೆಟ್ಟು, ಪರರನ್ನೂ ಕೆಡಿಸಿದ

೧೨೨೪೬ ಪರರ ಕೇಡು ತನ್ನ ಕೇಡು

೧೨೨೪೭ ಮಚ್ಚರಿಸುವವನ ಮನೆಹಾಳು, ಒತ್ತರಿಸಿದವನ ಹೊಲ ಹಾಳು

೧೨೨೪೮ ಮತ್ಸರಕ್ಕೆ ದುಡ್ಡಿಲ್ಲ

---

*ಮೂಗು ಕೊಯ್ದುಕೊಂಡು ಅವಲಕ್ಷಣ ಅನಿಸಿಕೊಂಡ

೧೨೨೪೯ ಮತ್ಸರವಿದ್ದ ಊರಲ್ಲಿ ಮಂಗ್ಯಾ ಬಾಳ್ವೆ ಮಾಡದು

೧೨೨೫೦ [1]ಮನೆ ಕಿಚ್ಚು ಮನೆಯ ಸುಡುಗು

೧೨೨೫೧ ಮಾಡಿ ಉಂಡರೆ ಮನುಷ್ಯರಕಾಟ. ಬೇಡಿ ಉಂಡರೆ ನಾಯಿ ಕಾಟ

೧೨೨೫೨ ನೆರೆ ಕೆಟ್ರೆ ಕರ ಕಟ್ಟೇನಿ ಅಂತಿದ್ನಂತೆ

೧೨೨೫೩ ಮಿಂಗಿಲಾಗಿ ಒಬ್ಬರಿಗಿದ್ದರೆ ಹಗಲು ತಲೆನೋವು

೧೨೨೫೪ ವಿದ್ವಾಂಸರ ಮುಂದೆ ವಿದ್ವಾಂಸರು ಬರಬಹುದೇ ಗೋವಿಂದ !

೧೨೨೫೫ ವೆಚ್ಚಕ್ಕೆ ಕಡಮೆಯಾದರೂ ಮತ್ಸರಕ್ಕೆ ಕಡಿಮೆಯಿಲ್ಲ

೧೨೨೫೬ ಸರಿಯು ಜನರ ನೋಡಿ ಕರುಬಿ ಸೊರಗಿದ

೧೨೨೫೭ [2]ಹಗಲು ಜನ ಕಂಡರೆ ಇರುಳು ತಲೆನೋವು

೧೨೨೫೮ ಹಾವಿನ ಮತ್ಸರ ಹನ್ನೆರಡು ವರ್ಷ

೧೨೨೫೯ ಒಟ್ಟು ತಿಂದರೆ ಹೊಟ್ಟೆಕಿಚ್ಚು

೧೨೨೬೦ ಹೆರರಿಗೆ ಕೇಡು ಬಗೆದರೆ ತನಗೆ ಕೇಡು ತಪ್ಪದು

೧೨೨೬೧ ಹೊಟ್ಟೆಕಿಚ್ಚಿಗೆ ಎದೆಒಡಕೊಂಡ್ಳು, ಗಾಂಧಾರಿ ಗರ್ಭ ಗುದ್ಕೊಂಡಂಗೆ

೧೨೨೬೨ ಹೊಟ್ಟೆಕಿಚ್ಚಿನ ಪೊಟ್ಟೆ ಕೋಳಿ

ಆತ್ಮಪ್ರಶಂಸೆ

೧೨೨೬೩ [3]ಆತ್ಮಸ್ತುತಿ ಪರನಿಂದೆ ಧನಾಕಾಂಕ್ಷೆಯಿಲ್ಲದ ಯೋಗ್ಯ ಬ್ರಾಹ್ಮಣನಾದ ನನಗೂ ಮೂರುಕಾಸು, ಆ ದಡ್ಡನಿಗೂ ಮೂರು ಕಾಸೆ ?

---

1 ಮನೆಕಿಚ್ಚು ಕೇರಿ ಸುಟ್ಟಿತು

2 ಅಪ್ಪಾರ ಜನ ಕಂಡರೆ ದಪ್ಪಾಗಿ ತಲೆನೋವು

3 ನನಗೆ ಆತ್ಮ ಪ್ರಶಂಸೆ ಬರೊಲ್ಲ. ದುರಾಸೆ ಹೊಟ್ಟೆಕಿಚ್ಚು ಇಲ್ಲ. ಆದರೆ ಬಂದಿದ್ದ ವಿದ್ವಾಂಸರಿಗೆ ಕೊಟ್ಟಷ್ಟೇ ನನಗೂ ಸಂಭಾವನೆಯೇ ?

೧೨೨೬೪ ಎನ್ನದೂ ಹರಿನಾಮ, ಮಾಧವನದೂ ಹರಿನಾಮ, ಎನಗೂ ಜಲಶಯನ; ಮಾಧವನಿಗೂ ಜಲಶಯನ; ಎನ್ನದು ಕಿರಿದೇನು ಮಾಧವನದು ಹಿರಿದೇನು ? ಟೋರೊ ಟೋರೊ ಎಂದಿತು

೧೨೨೬೫ ತನ್ನದು ಯಾರಕ್ಕ ? ಪರಮೇಶ್ವರಿಯಕ್ಕ. ಪರರದು ಯಾರಕ್ಕ ? ವಾಣಿ ಕೊರಟಿಯಕ್ಕ

೧೨೨೬೬ ತನ್ನಗುಣ ತಾನೇ ಹೊಗಳಿಕೊಳ್ಳೋದೆ ? ಪರರು ಹೊಗಳ ಬೇಕು

೧೨೨೬೭ *ತನ್ನ ಬುದ್ಧಿ ಹೊನ್ನು ಬುದ್ಧಿ ಪರರ ಬುದ್ಧಿ ಹೇಸಿಕೆ ಬುದ್ಧಿ

೧೨೨೬೮ ನನಗಿಂತ ಶ್ರೋತ್ರಿಯನಿಲ್ಲ, ನನ್ನ ಅಳಿಯನಿಗಿಂತ ಯೋಗ್ಯನಿಲ್ಲ

೧೨೨೬೯ ನಮ್ಮ ಗಡ್ಡವೇ ಗಡ್ಡ. ಪರರ ಗಡ್ಡ ಇಪ್ಪಣ ಅ(ಜ)ಡ್ಡ

೧೨೨೭೦ ನಮ್ಮಿಂದ ಮೇಲೆ ಯಾರು, ನಾವೇ ಮೇಲು

೧೨೨೭೧ ನಾನೇ ಶರಣೆ, ಗರುಡಗಂಬ ಎತ್ತಿದೆ

೧೨೨೭೨ ನೀವು ನಾಗಲೋಕದವರಾದರೆ ನಾವು ನಾಕ ಲೋಕದವರು

೧೨೨೭೩ 'ಹಗಲ ದೀವಟಿಗೆ ಕೊಟ್ಟವರಾರು ?' 'ನನ್ನ ಕೊನೆ ಹೊಲದ ಹರಳಪ್ಪನಾಯಕ'

ಸ್ವಪ್ರತಿಷ್ಠೆ

೧೨೨೭೪ ಎಲ್ಲವರಲ್ಲಿಯೂ ತನ್ನ ಮೂರು ಅಕ್ಕಿ ಕಾಳು

೧೨೨೭೫ ಕಿತ್ತುಕೊಂಡು ತಿಂದು ಎತ್ತುಕೊಂಡು ಕುಡಿದಂತೆ

೧೨೨೭೬ ಕುಚೇಷ್ಟೆಯಿಲ್ಲದೆ ಪ್ರತಿಷ್ಠೆಬಾರದು

೧೨೨೭೭ ಜೊತೇಲುಂಡೂ ಬೇರೆ ಕೈತೊಳೆ ಅಂದನಂತೆ

---

*ತನ್ನ ಹೂಸು ಹೊನ್ನು ಹೂಸು

೧೨೨೭೮ ತಿನ್ನೋಕೆ ಹಿಟ್ಟಿಲ್ಲದಿದ್ದರೂ ತಿಕವೆಲ್ಲ ಪ್ರತಿಷ್ಠೆ

೧೨೨೭೯ ತಾಳ ತಳ್ಳಲು ಹೋಗಿ ನರಿ ಬಾಲ ಸಿಕ್ಕಿಸಿಕೊಂಡಿತಂತೆ

೧೨೨೮೦ ನನ್ನದೊಂದು ಪಡಿ ಎಲ್ಲಿ ಹಾಕನೆ, ಮೇಳವಳ್ಳಿ ಮಡಿಗೆ ಹಾಕನೆ?

೧೨೨೮೧ ನಂದೊಂದು ಸಟ್ಟುಗ ಎಲ್ಲಿರಿಸಲಿ?

ಹೊಗಳಿಕೆ

೧೨೨೮೨ ಒಳ್ಳೆಯವರು ಅಂದ್ರೆ ಒಲೆ ಮುಂದೆ ಹೇತರು

೧೨೨೮೩ ದೂರನ್ನು ಇದಿರಿಗಾಡು, ಹೂಗಳನ್ನು ಹಿಂದಾಡು

೧೨೨೮೪ ಮುಂದೆ ಹೊಗಳಬಾರದು, ಹಿಂದೆ ತೆಗಳಬಾರದು

೧೨೨೮೫ ದೊಡ್ಡವನ ಶಾಬಾಸು, ಬಡವನ್ ಬೆನ್ನು ಉರಿದಿತ್ತು

೧೨೨೮೬ ದೊರೆಯನ್ನು ಮುಂದಿನಿಂದ ಹೊಗಳಬೇಕು, ಮಕ್ಕಳನ್ನು ಹಿಂದಿನಿಂದ ಹೊಗಳಬೇಕು

೧೨೨೮೭ ಹೊಗಳಿ ಹೊಗಳಿ ಅಗಳಿಗೆ ಹಾಕಿದರು

೧೨೨೮೮ ನಾಯಿ ಕೊಂಡಾಟ ಮಾಡಿದರೆ ಬಾಯಿ ನೆಕ್ಕಿತು

ಸ್ತೋತ್ರಪ್ರಿಯತೆ

೧೨೨೮೯ ಕಾಡಿನ ಕಾಸರ್ಕನ ಮರಕ್ಕೆ ಅಡ್ಡ ಬಿದ್ದರೆ ಹಣ್ಣೆಲೆ ಉದುರುತ್ತಿತ್ತು

೧೨೨೯೦ *ಕುರುಡೀನ 'ಚನ್ನಕ್ಕ' ಅಂದರೆ ಅವಳಿಗೆ ಎಷ್ಟೋ ಹೆಚ್ಚಳ

೧೨೨೯೧ 'ಭಲೆ ಜಟ್ಟಿ !' ಅಂದರೆ ಕೆಮ್ಮಣ್ಣು ಮುಕ್ಕಿದ

---

* (i) ಕುರುಡಿಯನ್ನು 'ಚನ್ನವ್ವ !' ಅಂದರಾಯಿತು
  (ii) ಕುಂಡ ಅಂದರೆ ಕೋಪ 'ಚಿನ್ನ !' ಅಂದರೆ?

೧೨೯೨ 'ಭಲರೆ ಗೌಡಸಾನಿ (ಬಾಸಗಿತ್ತಿ)' ಅಂದರೆ ಸುಡೋ ಆಮ್ರ ತಕೊಂಡು ಬಾಯಿಗೆ ಹಾಕೊಂಡ (ಸುರಿಕೊಂಡ)ಳಂತೆ

೧೨೯೩ 'ಭಲೇರೆ ಬೋನ (ಬಾಣ)ಗಿತ್ತಿ ಅಂದರೆ (ಮೈಯಲ್ಲ ಆಮ್ರ ಅಂದಹಾಗೆ, ಮೈಯೆಲ್ಲ ಮಸಿ ಮಾಡಿಕೊಂಡಳು) ಗಳಗೆ ತಕೊಂಡು ನೀರಿಗೆ ಹೋದಳು

೧೨೯೪ 'ಮಲ್ಯರಂಡೆ !' ಅಂದರೆ ಉಲ್ಲಾಸಿಸಿಕೊಂಡು ಹೋದ ಹಾಗೆ

೧೨೯೫ ಹೊಗೆಳಿದ ಎಮ್ಮೆ ಹೋರಿಗರ ಹಾಕಿತು

ಆಸೆ

ಆಸೆ ಇರುವುದೊಳ್ಳೆಯದು

೧೨೯೬ ಬಯಿಕೆ ಆದದ್ದು ಬಾರಿಸಿದರೆ ಸಿಕ್ಕೀತು

೧೨೯೭ ಬಯಕೆ ಬಡವರ ಬಾಳಿನ ಅನ್ನ

೧೨೯೮ ಬಯಕೆ ಬದುಕಿನ ಅರ್ಧಾಂಗ, ಅನಾಸ್ಥೆ ಮರಣದ ಅರ್ಧಂಗ

೧೨೯೯ ಬೇಕೆಂಬುದೇ ಬದುಕು, ಸಾಕೆಂಬುದೇ ಸಾವು

೧೩೦೦ ಬವಸ್ಕಂದ್ ಅಟ್ಟಿದ್ದ ಬಂದವ್ರುಂಡ್ರು

ಆಸೆಗೆ ಕೊನೆಯಿಲ್ಲ

೧೩೦೧ ಆಸೆ ಅತಿ, ಆಯುಷ್ಯ ಮಿತಿ

೧೩೦೨ ಆಸೆ ತಂದವೇ ಹೊರತು ಆಯುಷ್ಯ ತರಲಿಲ್ಲ

೧೩೦೩ ಆಸೆ ತುದಿ ಮೇಲೆ, ಮೀಸೆ ತುದಿ ಕೆಳಗೆ

೧೨೩೦೪ ಆಸೆಗೆ ಅಂತ್ಯವಿಲ್ಲ, [1]ಪಾಶಕ್ಕೆ ಕಡವೆಂಯಿಲ್ಲ

೧೨೩೦೫ ಆಸೆಗೆ ಆಳವಿಲ್ಲ, ದುಃಖಕ್ಕೆ ಎಣೆಯಿಲ್ಲ

೧೨೩೦೬ ಆಸೆಗೆ ಕೊನೆಯಿಲ್ಲ, ಆಯುಸ್ಸಿಗೆ ಹೊಣೆಯಿಲ್ಲ

೧೨೩೦೭ ಆಶೆಗೆ ನಾಶವಿಲ್ಲ

೧೨೩೦೮ ಆಸೆಗೆ ಮಿತಿಯಿಲ್ಲ, ಸಾಯೋದು ತಪ್ಪಲಿಲ್ಲ

೧೨೩೦೯ *ಆಸೆಗೆ ಮೇರೆಯಿಲ್ಲ

೧೨೩೧೦ ನರಕದಲ್ಲಿ ಬಿದ್ದರೂ ಬಯಕೆ ತಪ್ಪದು

ಪರರೊಡವೆಯ ಬಯಕೆ

೧೨೩೧೧ ನಮ್ಮದೇ ನಮಗಿಲ್ಲವಂತೆ, ಇನ್ನೊಬ್ಬರದು ನಮ್ಮದಾದೀತೆ ?

೧೨೩೧೨ ಪರರೊಡವೆ ಬಯಸಬಾರದು

ಆಸೆ ಮನುಷ್ಯನನ್ನು ಬಿಡದು

೧೨೩೧೩ ಅಂಬು ತಾಗಿದರೂ ಹಂಬಲ ಹೋಗದು

೧೨೩೧೪ ಕೊದಲಿದ್ದವಳು ತುರುಬು ಬಯಸಿದ ಹಾಗೆ

೧೨೩೧೫ ಕ್ಷೇಮವಿಲ್ಲದಿದ್ದರೂ ಹೇಮದಾಸೆ ಬಿಡದು

೧೨೩೧೬ ತುಂಬ ಇದ್ದರೂ ಹಂಬಲ ಹೋಗದು

೧೨೩೧೭ ನಾಶವಾಗುವವರೆಗೂ ಆಸೆ ಬಿಡದು

---

*ಭ್ರಾಂತಿಗೆ ಮೇರೆಯಿಲ್ಲ

ತ. ಆಸೆಕ್ಕು ಓಟಿಬ್ ಅಳವಿಲ್ಲೈ

ಮ. ಆಸೆಕ್ಕು ಅತಿರು ಇಲ್ಲಾ

೧೨೩೧೮ ಪೂರ್ಣವಾಗಿದ್ದರೂ ಸ್ವರ್ಣದ ಬಯಕೆ ಹೋಗದು

೧೨೩೧೯ ಬೇಕಾದಷ್ಟಿದ್ದರೂ ಸೋಕುವುದು ತಪ್ಪಲಿಲ್ಲ

೧೨೩೨೦ ಭಾಗ್ಯವಿದ್ರೆ ಬಾಯಿಗಾದರೂ ತುಂಬಿಕೊಂಡೇನು

ಆಸೆ ದುಃಖಕ್ಕೆ ಕಾರಣ

೧೨೩೨೧ ಅತಿ ಹಂಬಲ ದುಃಖದ ಮೂಲ

೧೨೩೨೨ ಅಂಗೈಲಿರೊ ನೆಲ್ಲಿಕಾಯಿ ಬಿಸಾಕಿ ಕೊಂಬೇಲಿರೋದಕ್ಕೆ ಬಾಯಿ ಬಿಟ್ಟ ಹಾಗೆ

೧೨೩೨೩ ಆಸೆ ಅರಸಿನ ಪ್ರಾಣಕ್ಕೆ ಸಂಚಕಾರ

೧೨೩೨೪ ಆಸೆ ಅಸಂತೃಪ್ತಿಗೆ ದಾರಿ

೧೨೩೨೫ ಆಸೆ ಎಲ್ಲ ದುಃಖಗಳಿಗೂ ಮೂಲ

೧೨೩೨೬ ಆಸೆಗೆ ದಾಸಿ ಕೂಡಿ ಕೂಸಿನ ಹೇಲು ಬಳಿದಂಗೆ

೧೨೩೨೭ ಆಸೆಗೆ ದೋಸೆ ತಿಂದು (ಅಂಬಲಿ ಕುಡಿದು) ಹಾಸಿಗೆಲ್ಲ ಹೇಸಿಗೆ ಯಾಯ್ತು

೧೨೩೨೮ ಆಸೆ ಹಿಡಿದ ಮನುಷ್ಯನನ್ನು ಭಯ ತಿನ್ನುತ್ತೆ

೧೨೩೨೯ ಇಷ್ಟದ ವಸ್ತು ಕಷ್ಟ ತಂದಿತು

೧೨೩೩೦ ಎರಡು (ಕಡೆ ನೆಚ್ಚಿ) ಕಣಕಾದ ದಾಸಯ್ಯ (ಒಕ್ಕಲಗಿತ್ತಿ, ಹೊಲೆಯ, ಹೊಲತಿ) ಕೆಟ್ಟಹಾಗೆ

೧೨೩೩೧ ಒಪ್ಪಾನಕ್ಕಿಗೆ ಹೋಗಿ ಇಪ್ಪಾನಕ್ಕಿ ನಾಯಿ ತಿಂತು

೧೨೩೩೨ ಬಗಸಿ ಬಗಸಿ ಬಾಳೆಹಣ್ಣು ತಿಂದರೆ ಬಾಯಿ ತುಂಬ ಶಂಭ ಬಂದವಂತೆ

೧೨೩೩೩ ಬಯಸಿ ಬಯಸಿ ಬಾವಿಗೆ ಬಿದ್ದಹಾಗೆ

೧೨೩೩೪ ಬೇಕು ಅಂತ ಬಯಸಿದ್ದು ಬೇಸರವಾಯ್ತು

೧೨೩೩೫ ಬೆಳೀ ಹುಲ್ಲಿನ ಗೋಣಬೆ ನೋಡಿ ಎಮ್ಮೆ ಕಣ್ಣೀರ್ಬಿಟ್ಟಿತ್ತಡ (ಹವ್ಯಕ)

೧೨೩೩೬ ಹಕ್ಕಿಯ ಆಸೆಗೆ ಹೋಗಿ ಅಕ್ಕಿ ಕಳಕೊಂಡ

೧೨೩೩೭ ಹಲವು ಹಂಬಲಿಸುವವರ ಪಾಡು ಹಲವಂಗ

೧೨೩೩೮ ಹಸುರಿನ ಆಸೆಗೆ ಹಸು ಹೋಗಿ ಡೊಸರಿಗೆ ಬಿದ್ದಂತೆ

೧೨೩೩೯ [1]ಹಾರಕದ ಕಣವೂ ಹೋಯಿತು, ಹರಿಸೇವೆಯ ಊಟವೂ ಹೋಯಿತು

೧೨೩೪೦ ಹಿಡಿಕಾಳಿಗೆ ಹೋಗಿ ಪಡಿಕಳಕೊಂಡ

೧೨೩೪೧ ಹೊನ್ನ್ ಅಳಿದ್ಕೊಳಗ ಇಷ್ಟು ಗಾತ್ರ ಇತ್ತು ಅಂತ ಕೈ ಬಿಟ್ಟಂಗ

ಇಲ್ಲದ್ದಕ್ಕೆ ಆಸೆ (ಪಡುವುದು)

೧೨೩೪೨ ಇಲ್ಲದ್ದಕ್ಕೆ ಬಗಸ್ತ ನನ್ನ ಗಂಡ ಇಲಿಬಾಡ, ಸಾಯೊ ಹೊತ್ತಿನ ಬಗಸ್ತ ಆಡಿನಬಾಡ

೧೨೩೪೩ ಎಳ್ಳಿದ್ದರೆ ಚಿಕ್ಕಿ ಇಡೀ ಬೈದಾಗಿತ್ತು, ಬೆಲ್ಲೇ ಇಲ್ಲವಲ್ಲ

ಅತ್ಯಾಸೆ

೧೨೩೪೪ [2]ಅತಿ ಆಸೆ ಗತಿಗೆಡಿಸಿತು

೧೨೩೪೫ ಅತಿ ಆಸೆಯಿಂದ, ಆದದ್ದೂ ಹೋಯಿತು

---

1 ಊರೆಲ್ಲಾಗೊ ಪರಿಸೇವೆ, ಬೆಟ್ಟವಲ್ಲಾಗೊ ಪರ ಎರಡನ್ನೂ ತಳಕೊಂಡ ಹಾಗೆ

2 ತೆಲುಗು : ಅತ್ಯಾಶ ಅನರ್ಥಕರ
ತಮಿಳು : ಪೇರಾಸೈ ಪೆರುಂ ಕೇಡು
ಮಳಿಯಾಳ ; ಅತ್ಯಾಶೆಕ್ಕು ಅನರ್ಥಂ

೧೨೩೪೬ ಆಸೆಗಾರ ಹಾರವಯ್ಯ ಗೋಸಿಯೊಳಕ್ಕೆ ಮಂಗಗಳ ಕಟ್ಟಿದ

೧೨೩೪೭ ಚಿಕ್ಕಾಸಿಗೆ ಆಸೆ ಮಾಡಿ ಕೋಳಿ ಕಳೆದುಕೊಂಡ

೧೨೩೪೮ ಆಗ್ಗದ ಅಸೆಗೆ ಗೊಬ್ಬರ ಕೊಂಡರು

೧೨೩೪೯ ದುಡ್ಡಿನಾಸೆಗೆ ಬೆಲ್ಲಮಾರಿ ಗೋಣಿ (ಚೀಲ) ನೆಕ್ಕಿದನಂತೆ

೧೨೩೫೦ ಬಂದೆತ್ತ ನಂಬಿ ಇದ್ದೆತ್ತು ಹೋಯಿತು

೧೨೩೫೧ ಲವಲವಿಕೆ ಇಲ್ಲದವನ ಲೋಲುಪ್ತಿ ಹಾಗೆ

೧೨೩೫೨ ಸತ್ತ ಎಮ್ಮೆ ಹಾಲು ಇದ್ದೆಮ್ಮೆಯಲ್ಲಿ ಕರೆದರು

೧೨೩೫೩ ಹಿಡಿದ ಹಕ್ಕಿ ಬಿಟ್ಟು ಹಾರೋ ಹಕ್ಕಿಗೆ ಆಸೆಪಟ್ಟ

ದುರಾಸೆ

೧೨೩೫೪ ಎಲ್ಲ ದೇವರ ಜಗಲಿಯಾದರೆ (ನಿಲ್ಲೋದಕ್ಕೆ ಸ್ಥಳವೆಲ್ಲಿ ?) ಕೂರೋದೆಲ್ಲಿ?

೧೨೩೫೫ ಕದ್ದ ರೊಟ್ಟಿ ಬೇರೆ, ದೇವರ ಪ್ರಸಾದ ಬೇರೆ

೧೨೩೫೬ ಕರೆದುಂಬುವ ಮೊಲೆಯನ್ನು ಕೊಯ್ದುಣ್ಣ ಬಾರದು

೧೨೩೫೭ ದುಡ್ಡು ದೊರಕಿದ ಹಾಗೆ ದುರಾಸೆ ಹೆಚ್ಚು

೧೨೩೫೮ ದುರಾಸೆಗೆ ದುಃಖವೇ ಫಲ

೧೨೩೫೯ ದೊರಕಿದಷ್ಟೂ ದುರಾಸೆ ಹೆಚ್ಚು

೧೨೩೬೦ ಬರಿಯ ಉಂಡ ಬ್ರಾಹ್ಮಣ ಭಿಕ್ಷಕ್ಕೆ ಕೈನೀಡಿದ

೧೨೩೬೧ ಹೆಚ್ಚು ಹಾಲಿನ ಆಸೆಗೆ ಕರೆಯೋ ಎಮ್ಮೆ (ಹಸುವಿನ) ಕೆಚ್ಚಲು ಕೊಯ್ದ

ಆಸೆಯಲ್ಲಿ ಕೀಳಾತನ

೧೨೩೬೨ ಅರಮನೆ ತುಪ್ಪಕ್ಕೆ ಸೆರ(ಗೊಡ್ಡಿವರು)ಗಾವರೂ ಒಡ್ಡು

೧೨೩೬೩ [1]ಉಚ್ಚೆಯಲ್ಲಿ (ಕರ)ಮೀನು ಹಿಡಿದ (ಅಯ್ಯ) ಹಾಗೆ

೧೨೩೬೪ [2]ಕೈಯಲ್ಲಿಯ ವೀಳ್ಯ ಕೊಟ್ಟು ಬಾಯೊಳಗಿನ ತಂಬುಲಕ್ಕೆ
ಆಸೆ ಮಾಡಿದ

೧೨೩೬೫ [3]ತನ್ನ ಕಾಲಡಿಯ ಕಳಿತ ಕುಂಬಳವನ್ನು ಬಿಟ್ಟು, ಪರರ
ಅಡಿಯಲ್ಲಿರುವ ಸಾಸವೆ ಕಾಳನ್ನು ಯಾಕೆ ಹೆಕ್ಕ ಬೇಕು ?

೧೨೩೬೬ ತುಪ್ಪದ ಆಸೆ (ಸವಿ)ಗೆ (ತುರುಕನ ಎಂಜಲು ತಿಂದ)
ಎಂಜಲು ನೆಕ್ಕಿದ (ತಿಂದ)

೧೨೩೬೭ ದೊರೆ ಹಿಡ್ಡಿ ಗೂಡೆ ಹಿಟ್ಟು ಬವಸ್ಯಂದಂಗೆ

೧೨೩೬೮ ಮಗುವಿನ ಆಸೆಯಲ್ಲ, ಮಗುವಿನ ಕೈಲಿರೊ ಬಾಳೆಹಣ್ಣಿನ ಆಸೆ

ತನ್ನ ಯೋಗ್ಯತೆಗೆ ಮೀರಿದ ಆಸೆ

೧೨೩೬೯ ಅಂಗಡಿ ಇಟ್ಟವನು ಅಂದಣ ಬೇಡಿ ಬಂದ

೧೨೩೭೦ ಅಟ್ಟಕ್ಕೆ ಹಗರಿಲ್ಲೆ ತಾ ಕಂಡ ಮೆತ್ತ (ಹವ್ಯಕ)

೧೨೩೭೧ ಅಡುಗೆಯವನಿಗೇಕೆ ಅಂತಸ್ತಿನ ಮನೆ ?

೧೨೩೭೨ ಅಂಬಲಿಗೆ ಗತಿಯಿಲ್ಲ, ಅಂಬಾರಿ ಹಂಬಲ

೧೨೩೭೩ ಅಂಬಲಿಗೆ ಉಪ್ಪಿಲ್ಲ, ತಿನ್ನುವುದಕ್ಕೆ ಒಬ್ಬಟ್ಟು ಬಯಸಿದ

೧೨೩೭೪ ಉಣ್ಣಕ್ಕಿಲ್ಲದವಳು ಬಣ್ಣ ಬಯಸಿದಳು

---

1 ನೀರಿನಲ್ಲಿ ಮೀನು ಹಿಡಿದರೆ ಸಿಕ್ಕೀತು, ಉಚ್ಚೇಲಿ ಹಿಡಿದರೆ ಸಿಕ್ತದಾ ?

2 ಎಲಡಕೆ ಕೊಟ್ಟು ತಂಬುಲ ತಕಂಡ ಹಾಗೆ

3 ಮನೆಯ ಹಿತ್ತಲ ಕುಂಬಳಕ್ಕೆ ಕಣ್ಮುಚಿ ಪರರ ಸಾಸುವೆಗೆ ಕಣ್ಣು ತೆರೆದಂತೆ

೧೨೩೭೫ ಕರುಳು ಕಾಟಿ ಕಾಣದು, ಕೊರಳು ಬುಕ್ಕಿಟ್ಟು ಬೇಡಿತಂತೆ

೧೨೩೭೬ ಕೂತುಕಳ್ಳೋಕೆ ಸ್ಥಳವಿಲ್ಲದವ ಅರಮನೆ ಕಟ್ಟಲು ಎಣಿಸಿದನಂತೆ

೧೨೩೭೭ ಗಂಜಿಗೆ ಗತಿಯಿಲ್ಲದವ ಅನ್ನಕ್ಕೆ ಅಳುವನು

೧೨೩೭೮ ಗೊಬ್ಬರದ ಗುಂಡಿ ಕನಸಿನಲ್ಲಿ ಹೆಣಭಾರ ಹೊತ್ತ ಕತ್ತೆ ಹಾಗೆ

೧೨೩೭೯ ಚಪ್ಪರಕ್ಕೆ ಗತಿಯಿಲ್ಲ, ಉಪ್ಪರಿಗೆ ಅಪೇಕ್ಷಿಸಿದ

೧೨೩೮೦ ತಲೆ ಕೂದಲು ಇಲ್ಲದವಳು ತುರುಬು ಬಯಸಿದ ಹಾಗೆ

೧೨೩೮೧ ತಲೆಗೆ ಎಣ್ಣೆ ಇಲ್ಲ. ತನು ಮೃಗನಾಭಿ ಬೇಡಿತು

೧೨೩೮೨ [1]ತಾಸಿರುವುದು ಕೋಳಿ (ಗೂಡು) ಗುಡಿಸಲು, ಮೇಲುಪ್ಪರಿಗೆ ಕನಸು ಕಂಡ

೧೨೩೮೩ ತಾನು ಕೋತಿಯಾಗಿ ರತಿಯನ್ನು ಬಯಸಿತು

೧೨೩೮೪ ತಿರುಕ ತಿಪ್ಪೆ ಮೇಲೆ ಮಲಗಿ ಉಪ್ಪರಿಗೆ ಕನಸು ಕಂಡನಂತೆ

೧೨೩೮೫ ತಿರುಕನ ಕನಸು

೧೨೩೮೬ ನತ್ತಿಗೆ ಗತಿಯಿಲ್ಲದವಳು ಮುತ್ತು ಬಯಸಿದ ಹಾಗೆ

೧೨೩೮೭ ನಾಯಿ ಬೂದಿಗುಂಡಿಯಲ್ಲಿ ಮಲಗಿ ದೇವಲೋಕದ ಕನಸು ಕಂಡಿತಂತೆ

೧೨೩೮೮ ಬರ (ದ)ಗದ ಅನ್ನ ತಿನ್ನುವವ ಹೂರಿಗೆ ಬಯಸಿದನಂತೆ

೧೨೩೮೯ ಬೆಪ್ಪು ಗರುಡ ಬೆಳುದಿಂಗಳು ಬಯಸಿದ ಹಾಗೆ

೧೨೩೯೦ ಬೆಳಕಿಡುವುದಕ್ಕೆ ಇಲ್ಲದವ ಮಲಕು ಬಯಸಿದ ಹಾಗೆ

೧೨೩೯೧ ಬೊಜ್ಜು ಬಾಯಿವನು ಕೆಜ್ಜಿ ಕೆತ್ತಿದ ಕಬ್ಬು ಬಯಸಿದ ಹಾಗೆ

---

1. (i) ತಾಸಿರುವುದು (ಜೋಪಡಿ) ಆಡಿನ ಕೊಟ್ಟಿಗೆ, ದೇವಲೋಕದ ಕನಸು
(ii) ಇರುವುದು ಆಡಿನ ಕೊಟ್ಟಿಗೆ, ಕನಸು ಮಾತ್ರ ಸ್ವರ್ಗಲೋಕದ್ದು

೧೨೫೯೨ ಮಂಜೆ ಕಾಣದವ ಮಾಳಿಗೆ ಕಂಡಾನೆ?

೧೨೫೯೩ ಸಿಂಬಳ ಬುರುಕನಿಗೆ ಯಾಕೆ ಇಬ್ಬರು ಹೆಂಡಿರು?

೧೨೫೯೪ ಹಟ್ಟಿಗೆ ಗತಿಯಿಲ್ಲದವ ಮಠ ಕಟ್ಟ್ಯಾನೆ ?

೧೨೫೯೫ ಹುಳ್ಳಿಕಾಳು ತಿನ್ನುವ ಮುಕ್ಕ ಒಬ್ಬಟ್ಟಿನ ಊರ್ಣ ಕೇಳ್ದಂಗೆ

ವ್ಯರ್ಥವಾದ ಆಸೆ

೧೨೫೯೬ ಆಲ ಆತ್ತಿ ಉರುಳುರುಳಿ ಹೋಗುವಾಗ [1]ಕಲ್ಲೊಳಗಿನ ದೇವರು ಕಾರಿಕ ಕೊಳ್ತಿತ್ತಂತೆ

೧೨೫೯೭ [2]ಎಂತೆಂತಾ ದೇವರೊ ಅಂತರಿಸಿ ಬಿತ್ತು, ಪರಪಟ್ಟೆ ದೇವರು ಕೊಳಕಟ್ಟೆ ಬೇಡಿತು

೧೨೫೯೮ ಎಂತೆಂತೊ ಗೌಡ್ರು ಹುಳಿ ಮೇಯ್ತ್ಯಾರೆ, ಇವನ್ಯಾಂದ ಅರಳಿ ಎಲೆ ಮೇಲೆ ಅರ್ಜಿ ಹಾಕೂಕೆ, ಹಸೀಟಿನ ಮೇಲೆ ದಾಬ ಹಾಕೂಕೆ

---

1 ಬಟ್ಟೊಟ್ಟೆಗಿಡ ಕವಲು ಬೇಡಿತು

2 (i) ಎಂತೆಂತಾ ದೇವರಿಗೋ ಅಂತರಾಳ (ಟ)ದ ನೈವೇದ್ಯ, ಕಾಲು ಮುರುಕ ದೇವರಿಗೆ ಕೈಲಾಸವೆ ?

(ii) ಎಂತೆಂತವರಿಗೆ ಅಂತರಾಟ, ಸುಮ್ಮನಿರೊ ಕಕ್ಕಟ

(iii) ಎಂತೆಂತಾ ದೇವರಿಗೋ ಅಂತರಾಟ, ಕುಂಟು ಬೋರೆ ದೇವರಿಗೆ ಕುಣ್ದಾಟ

(iv) ,, ,, , ಕುಂಡ ಬೋರೆ ದೇವರು · ಕೊಂಡೆ ಬಾಡಿ ಅಂತ ಗೊಣಗ್ತಿತ್ತಂತೆ

(v) ಎಂತೆಂತ್ಯವಗೆರ್ಲೇ ಅಂತರಾಟ, ಸೊಂಟ ಮುರುಕನಿಗೂ ಬೇಕಾ ತಾಣ ದೀವಿಗೆ

(vi) ಎಂತೆಂತಾದ್ದೋ ಅಂತರಿಸಿತು, ಸಂಕ್ರಾಂತಿ ಬಂದು ಹುಳಿದೋಸೆ ಬೇಡಿತು

(vii) ಎಂತೆಂತಾ ಹಬ್ಬಗಳನ್ನೇ ಅಂತರಕ ಬಿಟ್ಟಿದ್ರೆ ಶಂಕ್ರಾಂತ್ರೆ ಹಬ್ಬ ಬಂತು ಸಂತೆ ಮಾಡಂತಂತೆ

(viii) ಎಂತೆಂತಾವ್ರೊ ಅಂತೆಯೇ ಹೋಗುವಾಗ ಅಗಳಿಗೂಟ ಕೇಳಿತಂತೆ ಚಿಗಳಿ ತಂಬಿಟ್ಟು

೧೨೩೯೯ [1]ಎಂತೆಂತಾವ್ರೊ ಉರುಳಾಡಿ ಹೋಗುವಾಗ ಕಲ್ಲೊಳಗಿನ
ದೇವರು ಕಾಯಿ ಬೇಡ್ತಿತ್ತಂತೆ

೧೨೪೦೦ ಕುನ್ನಿ ಕೂಳು ಕಾಣದು, ಹಳೆನಾಯಿ ದೋಸೆ ಬೇಡ್ತಿತ್ತಂತೆ

೧೨೪೦೧ ಗಲ್ಲಕ್ಕೇರು ಕಳ್ಳ, ಹಾಲು ಅನ್ನ ಬವಸ್ತಂಗೆ

೧೨೪೦೨ ಗರ್ಭಗುಡಿ ದೇವರು ಬೆತ್ತಲೆ ಇದ್ರೆ, ಬಾಗಿಲಲ್ಲಿರೋ ದೇವ್ರು
'ಬಣ್ಣದ ಸೀರೆ, ಬಣ್ಣದ ಸೀರೆ!' ಅಂತಂತೆ

೧೨೪೦೩ [2]ಗುಡಿಯೊಳಗಿನ ದೇವ್ರೇ ಗೊಬ್ಬರ ತಿನ್ನುವಾಗ
ಪೂಜಾರಿ ಶಾಂವಿಗೆ ಸಕ್ರೆ ಬೇಡಿದನಂತೆ

---

1 (i) ಒಳ್ಳೊಳ್ಳೆ ಗಿಡ ಉಳ್ಳಾಡಿ ಹೋಗುವಾಗ ಮುಳ್‌ಹರವಿಗಿಡ ಕವಲು ಕೇಳ್ತಿತ್ತಂತೆ
(ii) ಒಳ್ಳೊಳ್ಳೆ ದೇವರು ಹೊಳ್ಳಾಡು ವುಂದೆ ಕಳ್ಳೆನ್ನದೇವರು ಕಾಯಿ ಬೇಡ್ತಿತ್ತಂತೆ
(iii) ಒಳ್ಳೊಳ್ಳೆಯವರು ಉಳ್ಳಾಡಿ ಹೋಗುವಾಗ ಗುಳ್ಳವ್ವ ನಿಂದೇನು ಕೆಲಸ?
(iv) ಒಳ್ಳೊಳ್ಳೆಯವರು ಉಳ್ಳಾಡಿ ಹೋಗುವಾಗ ಗುಳ್ಳವ್ವ ಪಲ್ಲಕ್ಕಿ ಬೇಡಿದಳಂತೆ
(v) ಒಳ್ಳೊಳ್ಳೆಯವರೆಲ್ಲ ಹಳ್ಳಹಿಡಿದು ಹೋಗುವಾಗ ಗುಂಗಿಹುಳ ಗುಡಾರ ಹಾಕ್ತಿತ್ತು
(vi) ಒಳ್ಳೊಳ್ಳೆಯವರೆಲ್ಲ ಉಳ್ಳಾಡುವಾಗ ಗುಂಗೀ ಹುಳು ಗಂಗಾಳ ಬೇಡಿತಂತೆ
(vii) ಮುಕ್ಕಣ್ಣನಂಥವರು ಮುಚ್ಚಳದಾಗ ಉಣ್ಣುವಾಗ ಗುಂಗಾಡಿ ನನಗೆ ಗಂಗಾಳ ಅಂತಿತ್ತಂತೆ

2 (i) ತಬ್ಲಿ ದೇವರು ತಂಬಿಟ್ಟು ಬೇಡಿದಂಗೆ
(ii) ಪೂಜಾರಿಯೇ ಹಗ್ಗ ತಿನ್ನುವಾಗ ದೇವರಿಗೆಲ್ಲಿ ಬರಬೇಕು ಶ್ಯಾವಿಗೆ ಕೊಂಡ
(iii) ಬಾಗಿಲು ಭೈರವ ಬೂದಿ ಮುಕ್ಕಾತ ಇದ್ರೆ ಸಂತೆ ದೇವ್ರು ಕಾಯಿ ಕೇಳ್ತಿತ್ತಂತೆ
(iv) ಮನೆ ದೇವ್ರು ಮಣ್ಣು ಮುಕ್ಕಾತ ಇದ್ರೆ ಮಾರಿಯಮ್ಮ ತಂಬಿಟ್ಟು ಬೇಡ್ತಿದ್ದಂತೆ
(v) ಮಹಾಮಹಾ ದೇವ್ರೆಲ್ಲ ಮಣ್ಣು ಮುಕ್ಕಾತ ಇದ್ರೆ ತಾಯಿಗ್ಗಂಡ ದೇವ್ರು ತಂಬಿಟ್ಟು ಕೇಳ್ತಿತ್ತಂತೆ
(vi) ಮಾನ್ಯ ಮಾನ್ಯರೆಲ್ಲ ಮಣ್ಣು ಮುಕ್ಕುವಾಗ ಡೊಣ್ಣೆ(ಓತಿ)ಕಾಟ ತಲೆಹಾಕ್ತಿತ್ತು
(vii) ಮೂಲದೇವರಿಗೆ ನೈವೇದ್ಯವಿಲ್ಲ, ಪೂಜಾರಿ ಪೊಂಗಲಿಗತ್ತ
(viii) ಮೊದಲು ದೇವರು ಮೂಲೇಲಿದ್ದರೂ ಹನುಮಂತರಾಯನಿಗೆ ದೀಪೋತ್ಸವ
(ix) ಹಣಮಪ್ಪ ಹಗ್ಗ ಮೇಯ್ತಾ ಇದ್ರೆ ಪೂಜಾರಿ ಬಯಸಿದ ಸಣ್ಣ ಶಾವಿಗೆಯ
(x) ಹನುಮಂತರಾಯನೇ ಹೆಗ್ಗಣ ತಿನ್ನುವಾಗ ಪೂಜಾರಯ್ಯ ಶಾವಿಗೆ ಬೇಡಿದ

೧೨೪೦೪ ಗಂಡನಿಗೇ ಗಂಜಿಕಾಣೆಯು. ಮಿಂಡನಿಗೆಲ್ಲಿ ಪಕ್ವಾನ್ನ?

೧೨೪೦೫ ಗಂಡನಿಗೆ ಗಂಜಿಗೂ ನೀರಾದ್ರೆ, ಮಿಂಡನಿಗೆ ಮಜ್ಜಿಗೆ ನೀರಂತೆ

೧೨೪೦೬ ಇದ್ದ ದೇವರಿಗೇ ನೆಲೆಯಿಲ್ಲ. ಹೊಸ ದೇವರಿಗೆಲ್ಲಿ?

೧೨೪೦೭ ತನ್ನ ಉಳಿಯುಗರವು ಸಾವಾಗಿ ಹೋಯಿತಾಗ.
ಗಂಡಿಬೋಳಗಿನ ದೇವರು (ಬಂಡಾಳ ಬೆಂಡ್ರಿದ್ದು)
ಉಪ್ಪುಕೊಳಕೊಳ್ಳಕೆ ಬಸ್ಟಿಯಿಲ್ಲ ಅಂದ

೧೨೪೦೮ [1]ಹುಟ್ಟು ತುಪ್ಪ ಕಾಣದು. ಕುಟ್ಟಿಗೆಲ್ಲಿ ಪರಿಮಳ

೧೨೪೦೯ ಮದುವನಿಗೇ ಮನೆಯಿಲ್ಲ. ಇನ್ನು ಮೈದುನನಿಗೆಲ್ಲಿ?

ಸರ್ವನಾಶದಲ್ಲೂ ಆಸೆ

೧೨೪೧೦ [2]ಆನೆ ಆಸೆಯೇ ಹೋಗುವಾಗ ಅದರ ಬಾಲಕ್ಕೆ
ಜೋತಾಡಿದರಂತೆ

೧೨೪೧೧ ತಲೆ ಹೋಗುವಾಗ (ಜುಟ್ಟಿಗೆ ಬೆಲೆಯೆ?) ಕಿವಿ ಕತ್ತರು

೧೨೪೧೨ ತಾಳಿ ಹರಿದ್ಹೋಯ್ತಂತೆ, ಹೊರೆ ಬಾಳೆಗೊನೆಯಂತೆ

೧೨೪೧೩ [3]ಉರಿಯುವ (ಬೇಗ) ಮನೆಯಲ್ಲಿ ಹಿರಿದಷ್ಟೇ ಲಾಭ

೧೨೪೧೪ [4]ಸುಡುವ ಹುಲ್ಲು ಹೋಗುವಾಗ ಹಿಡಿ ಹುಲ್ಲಿಗೆ ಗಂಟು (ಜಡಿದ

---

1 ತುಟಿಗೆ ತುಪ್ಪವಿಲ್ಲ. ಪೂಜಾರಿ ಕಟ್ಟೆಗೆ ಕರ್ಪೂರ ಬೇಕಂತ

2 ಆನೆ ಹೋಯಿತು. ಬಾಲ ಉಳಿಯಿತು

3 (i) ಉರಿಯುವ ಮನೆಯಲ್ಲಿ ಹಿರಿದು ಕಿತ್ತುಕೊಂಡಷ್ಟೇ ಲಾಭ
(ii) ಸುಡುವ ಮನೆ ಗಳ ಹಿರಿದಷ್ಟೇ ಲಾಭ

4 (i) ಹೊರೆಹೊರೆಯಲ್ಲಿ ಹೋಗುವುದನ್ನ, ಹಿಡಿ ಅರೆಅರೆಯಲ್ಲಿ ಹೋಗುವುದ
ತಡೆದರು
(ii) ಹೊಲವೆಲ್ಲ ಹಾಳಾಯಿತು. ಹಿಡಿಸೂಡಿಗೆ ಜಡಿದಾಟ
(iii) ಹೊಲವೆಲ್ಲ ಹಾಳಾಯಿತು ಹುಡಿಗೆ ಜಡಿದಾಟ

೧೨೪೧೫ ಸನ್ಯಾಸಿ ಹಾವು ಕಾಟ ಹಚ್ಚಿಕೊಂಡಹಾಗೆ

೧೨೪೧೬ ಸಾಯುವಾ ಹೆಂಗುಸಾಗ ಗಡ್ಡಕ್ಕೆ ಅತ್ತಂತೆ

ಶೃಂಗಾರದ ಆಸೆ

೧೨೪೧೭ [1]ಕುಂಟಿ ಕಾಲಿ ಬಯಸಿದ ಹಾಗೆ

೧೨೪೧೮ ಬಗ್ಗನ ಬಾಳೇಹಣ್ಣು ತಿನ್ನಲಿಕ್ಕೆ ಬಂದೀತೆ ?

೧೨೪೧೯ ಬೇಸಗೆಯಲ್ಲಿ ನನ್ನ ಮಗ ಕಾಸಕ್ಕೆ ಬಂದಿದ

೧೨೪೨೦ [2]ಇಪ್ಪ ಬೆಟ್ಟದಲ್ಲಿ ಕೂತು ಬಿಟ್ಟು ಬಯಸಿದ ಹಾಗೆ

೧೨೪೨೧ ಬಸಿರಿ ಇಲ್ಲದ ಗಂಡಿಗೆ ಹೋಗಿ ನೀರುಮಜ್ಜಿಗೆ ಬಯಸಿದ ಹಾಗೆ

೧೨೪೨೨ ಹಲ್ಲಿಲ್ಲದ ಮುದುಕ್ಕೆ ಕಲ್ಲಿಲ್ಲದ ಗಿಡ ಹೊಂದಿದ ಹಾಗೆ

೧೨೪೨೩ ಹೆಣದ ಜೇನಿಗೆ ಆಸೆಪಟ್ಟಂತೆ

೧೨೪೨೪ ಹೆಣದ ಹೊಟ್ಟೆಯ ಹಣ್ಣು ಬಯಸಿದಂತೆ

ನಿರಾಶೆ

೧೨೪೨೫ ಅಂತೆಯ ಇಂತೆಯ ಕಂತೆ ಹಾಕ್ಕಳಿ ದಾಸ್ಯವಿಲ್ಲ

೧೨೪೨೬ ನಿರಾಶೆ ಅಕ್ಕನ ಆಸೆ ಮಾಡಿದರೆ ಭಾವಾ ಹೋಗದೆ ?

೧೨೪೨೭ ಸಿಕ್ಕಿದ ಬಟ್ಟೆ ಕೊಂಡ(ಹಾಯಿತು)ನನ್ನು ಕಳೆಯಿತು

೧೨೪೨೮ ನೀರಾಟದ (ಹಾಳು)ಬಾವಿ ಕಂಡ. ನಾಯಿ ಸಂತೆಗಂಟ ಬಿಟ್ಟಂತೆ

---

1 (i) ಕುಂಟನಿಗೇಕೆ ಪಂಢರಿಯಾತ್ರೆ ?
(ii) ಕಾಲಿಲ್ಲದವನು ಕಾಶಿಗೆ ಹೋದರೆ ನೀರಿಲ್ಲ ಹೊಂಗ್ರಿ ಕುಂಟು(ಮುಡುಕಾಟ ?) ಮಾಡುವ?

2 ಕಾಡಿನಲ್ಲಿ ಹೊಂಬಾಳೆ ಬಯಸಿದಂತೆ

ಆಸೆ ಮಾಡಬಾರದು

೧೨೪೨೯ ಆಸೆಯಿಂದ ಪಾಶಿಗೆ ಬೀಳಬಾರದು

೧೨೪೩೦ ಆಸೆಯಿಲ್ಲದವಗೆ ಪಾಪದ ಕ್ಲೇಶವಿಲ್ಲ

೧೨೪೩೧ ಆಸೆ(ತೃಷೆ)ಯಿಲ್ಲದವ ಋಷಿಗೆ ಸಮಾನ

ಒಬ್ಬೊಬ್ಬರಿಗೆ ಒಂದೊಂದು ಆಸೆ

೧೨೪೩೨ ಐಗಳಿಗೆ ಪ್ರೀತಿ ಗೋಧಿಯ ಹುಗ್ಗಿ, ನಮ್ಮಾಕೆಗೆ ಪ್ರೀತಿ ಮಲ್ಲಿಗೆ ಮೊಗ್ಗಿ

೧೨೪೩೩ ಕಣ್ಣಿಗೆ ಕಪ್ಪಿನ ಆಸೆ, ಬಣ್ಣಕ್ಕೆ ಸೆರಗಿನ ಆಸೆ

೧೨೪೩೪ ಹೆಣ್ಣಿಗೆ ತುಪ್ಪದಾಸೆ, ಹಾಲಿಗೆ ಸಕ್ಕರೆ ಆಸೆ

೧೨೪೩೫ ಮಗುವಿಗೆ ಸಿಂಗಾರದಾಸೆ, ಕಳಸಕ್ಕೆ ಇಂಗಾರದಾಸೆ. ಒಡವನಿಗೆ ಬಂಗಾರದಾಸೆ

೧೨೪೩೬ ಮಡದಿಗೆ ಗಡಿಗೆ ಆಸೆ, ಬಡವನಿಗೆ ಕಡುಬಿನ ಆಸೆ

೧೨೪೩೭ ಹೆಳವನಿಗೆ ಕಾಲಾಸೆ, ಕುರುಡನಿಗೆ ಕಣ್ಣಾಸೆ

ಆಸೆ ತೋರಿಸುವಿಕೆ

೧೨೪೩೮ ಅನ್ನ ಕಾಣದವರು ಬನ್ನಿ ನನ್ನ ಊರ ಮೇಲೆ, ಬೆನ್ನಿಗೆ ಮೂರುಮುದ್ದೆ ಹೊರಿಸಿ ಕೊಟ್ಟೇನು

೧೨೪೩೯ *ಇದ್ದೂರಲ್ಲಿ ಮಜ್ಜಿಗೆ ನೀರಿಲ್ಲ, ಬೇರೂರಿಗೆ ಬಾ ಹಾಲು ಕೊಡ್ತೀನಿ

---

* (i) ಕಾಲು ಕಟ್ಟಿಕೊಂಡರೆ ಕಡೆದ ಮಜ್ಜಿಗೆ ಕೊಡದವಳು ಕರೆದು ಕೊಡ್ತಾಳ್ಯೆ ಕೆನೆಮೊಸರ?

(ii) ಮನೆಗೆ ಹೋದರೆ ಮಜ್ಜಿಗೆ ಕೊಡದವಳು ಕರೆದು (ಹೇಳಿಕಳುಹಿಸಿದರೆ) ಕೊಡ್ತಾಳ್ಯೆ (ಹಿಪ್ಪಿನ ನೀರನ್ನ) ಮೊಸರನ್ನ ?

(iii) ತಾನು ಹೋದರೆ ಮಜ್ಜಿಗೆ ಇಲ್ಲ, ಮೊಸರಿಗೆ ಚೀಟಿ

೧೨೪೪೦ ಒಂದಿಪ್ಪತ್ತು ಕೊಡಲಾರೆ, ಎರಡಿಪ್ಪತ್ತು ಕೊಡ್ತೀನಿ

೧೨೪೪೧ ಈಸೀಸಗಲ ದೋಸೆ, ಏಸೇಸು ಮೆದ್ದೀ ?

೧೨೪೪೨ ಕಳಕ್ಕೆ ಬಾ ಕಾಣಿಸಿಕೊಡ್ತೀನಿ, ಹೊಲಕ್ಕೆ ಬಾ ಹೊರಿಸಿಕೊಡ್ತೀನಿ,
ಚಟ್ಟೆ ಹೊಲಕ್ಕೆ ಬಾ ದುಬ್ಬಿಸ್ತೀನಿ

೧೨೪೪೩ ಕೆಂಡರೆ ಕಡಿದ ಅಡಕೆ ಕೊಡದವನು 'ನಂಜನಗೂಡಿಗೆ ಬಾ
ಸಿಸ್ತುಬಂದಿ ಕೊಡ್ತೀನಿ' ಅಂದನಂತೆ

೧೨೪೪೪ [1]'ಕೈಲಿರೊ ಕಲ್ಲು ಕೊಡು' ಅಂದ್ರೆ
'ಮನೆಗೆ ಬಾ ಬೆಲ್ಲ ಕೊಟ್ಟೇನು' ಅಂದಳು

೧೨೪೪೫ ತೋಟಕ್ಕೆ ಹೋದಾಗಿಲ್ಲ,
'ಮನೆಗೆ ಬಾ ಬಿರಿದ ಬಾಳೆಹಣ್ಣು ಕೊಡ್ತೀನಿ'

೧೨೪೪೬ ಮೂಗಿನ ಮುಸುರೆ ಕೊಡದವಳು,
ಮೂಲಂಗಿ ಪಚಡಿ ಕೊಟ್ಟಾಳಾ ?

೧೨೪೪೭ ಹೊಲಕ್ಕೆ ಹೋದಾಗ ಹುಳುಕು ಹಣ್ಣೆ ಸೊಪ್ಪು
ಕೊಯ್ಯಗೊಡದವಳು (ಹೇಳಿ ಕಳುಹಿಸಿದರೆ ಕೊಡ್ತಾಳ್ಯೆ
ತೊಗರಿ ಬೇಳೆಯ ?) 'ಮನೆಗೆ ಬಾ ತೊಗರಿ ಬೇಳೆ ಕೊಡ್ತೀನಿ'
ಅಂದಳು

ಆಸೆ ಫಲಿಸುವ ಕಾಲಕ್ಕೆ

೧೨೪೪೮ ಅಡಿಕೆ ಹುಡುಕುತ್ತಿದ್ದೋನಿಗೆ ಮಾಣಿಕ್ಯ ಸಿಕ್ದಂಗೆ

೧೨೪೪೯ ಕಾಶಿಗೆ ಹೋಗುವಾಗ ಗಂಗೆ ಎದುರಿಗೆ ಬಂದ ಹಾಗೆ

೧೨೪೫೦ ಕುಂಡಸಿಗೆ ಕಣ್ ಬಂದಂಗೆ

೧೨೪೫೧ [2]ನೆಲು ಹರಿದು ಬೆಕ್ಕಿನ ಮುಂದೆ ಬಿದ್ದ ಹಾಗೆ

---

1 ಕೈಲಿದ್ದ ಕಲ್ಲು ಕೊಡೆ ; ಮನೆಗೆ ಬಂದರೆ ಬೆಲ್ಲ ಕೊಡ್ತೀಯಾ ?
2 ಬೆಕ್ಕಿನ ಪುಣ್ಯಕ್ಕೆ ಸಿಕ್ಕ ಹರಿದು ಬಿತ್ತು

೧೨೪೫೨ [1]ರೊಟ್ಟಿ (ಹೋಳಿಗೆ) ಜಾರಿ ತುಪ್ಪಕ್ಕೆ ಬಿದ್ದ ಹಾಗೆ

೧೨೪೫೩ ಹಸಿದ ಕೋಳಿಯ ಮುಂದೆ ಕಾಳು ಒದಗಿತು

೧೨೪೫೪ [2]ಅಕ್ಕಲಾಡೋನಿಗೆ ಮರ ಸಿಕ್ಕಂಗಾಯ್ತು

೧೨೪೫೫ ಹುಡುಕಿಕೊಂಡು ಹೋದ ಬಳ್ಳಿ ಕಾಲಿಗೆ ತೊಡರಿದ ಹಾಗೆ

೧೨೪೫೬ ಹೊಳೆ ದಾಟುವುದು ಹೇಗೆ ಎಂದು ಯೋಚಿಸುತ್ತಾ ಇದ್ದವನು ಹರಿಗೋಲು ಕಂಡ ಹಾಗೆ

ಜಾಣತನ

೧೨೪೫೭ ಎಲ್ಲ ಹೋಗುವಾಗ ಅರ್ಧ ಬಿಡುವವನೇ ಜಾಣ

೧೨೪೫೮ ಕೋಣನಾದವನು ಅನುಭವದಿಂದ ಕಲಿಯುತ್ತಾನೆ, ಜಾಣ ಕೋಣನ ಅನುಭವದಿಂದ ಕಲಿಯುತ್ತಾನೆ

೧೨೪೫೯ ಜಾಣ ಜಗತ್ಪ್ರಾಣ

೧೨೪೬೦ ಜಾಣತನ ನಾಯಲ್ಲೂ ಉಂಟು

೧೨೪೬೧ ಜಾಣನ ಗೋಣೆ ಬರಿದು

೧೨೪೬೨ ಜಾಣನಿಗೆ ಊಣೆಯವಿಲ್ಲ

೧೨೪೬೩ ಜಾಣನಿಗೆ ವಸ್ತ್ರದ ತಲೆಯೇ ಜೋಪಾನ

೧೨೪೬೪ ಜಾಣನಿಗೆ ಮೂಗು ಹೆಚ್ಚು

---

1 ಹಣ್ಣು ಜಾರಿ ಹಾಲಲ್ಲಿ ಬಿದ್ದ ಹಾಗೆ

2 (i) ಆಯ್ಕೊಂಡ್ ತಿಂತಿದ್ದವನಿಗೆ ಅರಿ ಸಿಕ್ಕದಂಗೆ

(ii) ಹಂಕಲು ಆಯುತ್ತಿದ್ದವನಿಗೆ ಅರಿ ಹುಲ್ಲು ಸಿಕ್ಕಿದ ಹಾಗೆ

೧೨೪೬೫ *ಜಾಣ ಜಾಣರಿಗೆ ಮೂರು ದಾರಿ,
ಜಾಣ ಕೋಣರಿಗೆ ಎರಡು ದಾರಿ,
ಕೋಣ ಕೋಣರಿಗೆ ಒಂದೇ ದಾರಿ

ಬುದ್ಧಿ

೧೨೪೬೬ ಆಹಾರಕ್ಕೆ ತಕ್ಕ ಲದ್ದಿ, ವೀರ್ಯಕ್ಕೆ ತಕ್ಕ ಬುದ್ಧಿ

೧೨೪೬೭ ಇದ್ದಲಿಗಿಂತ ಕರಿದಿಲ್ಲ, ಬುದ್ಧಿಗಿಂತ ಹಿರಿದಿಲ್ಲ

೧೨೪೬೮ ಗತಿಗೆಟ್ಟರೂ ಮತಿಗೆಡಬಾರದು

೧೨೪೬೯ ದೇಹದಲ್ಲಿ ಹುಟ್ಟಬೇಕು ಬುದ್ಧಿ,
ಭೂಮಿಯಲ್ಲಿ ಹುಟ್ಟಬೇಕಂ ಒರತೆ (ತುಳು)

೧೨೪೭೦ ಬುದ್ಧಿ ಒಬ್ಬರ ಸ್ವತ್ತೇ

೧೨೪೭೧ ಬುದ್ಧಿ ಕಳಕೊಂಡು ಹುಡುಕಿದ ಹಾಗೆ

೧೨೪೭೨ ಬುದ್ಧಿ ಕೊದ್ದಿ ಸುಖ

೧೨೪೭೩ ಬುದ್ಧಿ ಬಲವೇ ಬಲ

೧೨೪೭೪ ಬುದ್ಧಿಯಿಂದ ಆಗುವ ಕೆಲಸ ಶಸ್ತ್ರದಿಂದಲೂ ಆಗುವುದಿಲ್ಲ

೧೨೪೭೫ ಬುದ್ಧಿಯಿಲ್ಲದವ ಉದ್ಯೋಗ ಪರ್ವ ಓದಬೇಕು

೧೨೪೭೬ ಮತಿಗೆಟ್ಟರೆ ಗತಿ ಕೆಡವುದು

೧೨೪೭೭ ಮತಿ ಮಿತಿ ಇಲ್ಲದೋನಿಗೆ ದೇವರೇ ಗತಿ

೧೨೪೭೮ ಮೀಸೆ ಬೆಳೆದ ಮಾತ್ರಕ್ಕೆ ಬುದ್ಧಿ ಬೆಳೆಯಿತೆ ?

೧೨೪೭೯ ಸ್ಥಿತಿಯಿಲ್ಲದಿದ್ದರೂ ಮತಿಗೆಡಬಾರದು

---

* (i) ಜಾಣ, ಜಾಣನಿಗೆ ದಾರಿ ಬಿಟ್ಟು ಹಾಗಿರಬೇಕು
(ii) ಜಾಣನಿಗೆ ಮೂರು ಕಡೆ, ಪೆದ್ದನಿಗೆ ಒಂದೇ ಕಡೆ

೧೨೪೮೦ ಹತ್ತು ಹೆತ್ತ ಮಾತ್ರಕ್ಕೆ ತೊತ್ತಿಗೆ ಬುದ್ಧಿ ಬರುತ್ಯೇ ?

೧೨೪೮೧ ಹದಿನೈದಕ್ಕೆ ಹೋದ ಬುದ್ಧಿ
ಐವತ್ತಕ್ಕೆ ಬಂದರೆಷ್ಟು, ಹೋದರೆಷ್ಟು?

ಬುದ್ಧಿವಂತ

೧೨೪೮೨ [1]ಅಜ್ಞನ ಬುದ್ಧಿ ಮೊಗ್ಗಿನ ಹಾಗೆ,
ಪ್ರಾಜ್ಞನ ಬುದ್ಧಿ ಫಲದ ಹಾಗೆ

೧೨೪೮೩ ತುರಿ ಇದ್ದವನಿಗೆ ನಾಚಿಕೆಯಿಲ್ಲ,
ಮತಿಯಿದ್ದವ (ಮರವೆ ಇಲ್ಲದವ)ನಿಗೆ ಮಂದತ್ವವಿಲ್ಲ

೧೨೪೮೪ [2]ಬುದ್ಧಿ ಇಲ್ಲಾತನಿಗೆ ಮನೆಯೆಲ್ಲಾ ಸೌದೆ

೧೨೪೮೫ ಬುದ್ಧಿವಂತನ ಮೋರೆ ಮುದ್ದಾಗಿರುತ್ತೆ

೧೨೪೮೬ ಬುದ್ಧಿವಂತನೇ ಬಲವಂತ

೧೨೪೮೭ ಬುದ್ಧಿವಂತರ ತಾಯೆಲ್ಲ ಒಬ್ಬಾಕೆ

೧೨೪೮೮ ವಿಪರೀತ ಬುದ್ಧಿ ಮೂರು ಕಡೆ ಪಾಯಿಖಾನೆ

ಬುದ್ಧಿವಾದ

೧೨೪೮೯ ಕೇಳುವವರಿಗೆ ಬುದ್ಧಿ, ಹೇಳುವವನಿಗೆ ಸುದ್ದಿ

೧೨೪೯೦ ಕೇಳೋರಿಲ್ಲದೆ ಹೇಳೋದ್ಯಾಕೆ ?
ನಾಯಿ ಬಗುಳಿ 'ಛೀ' ಅನ್ನಿಸಿಕೊಂಡಂಗೆ

೧೨೪೯೧ ತೆಂಗಿನ (ಅಡಿಕೆ)ಮರ (ಏಣಿ) ಹತ್ತುವವನನ್ನು
ಎಲ್ಲಿಯವರೆಗೆ ನೂಕುವುದಕ್ಕಾದೀತು ?

---

1 ಅಜ್ಞಯ ಬುದ್ಧಿ ಮೊಗ್ಗಿನ ಹಾಗೆ, ಅಜ್ಞನ ಬುದ್ಧಿ ಪ್ರಾಜ್ಞನ ಹಾಗೆ

2 ಬುದ್ಧಿ ಇಲ್ಲದವನಿಗೆ......

೧೨೪೯೨ ಅಟ್ಟಕ್ಕೆ ಹತ್ತೋಳ ತಿಕವ ಯಾರ್‍ಯಾರು ಎತ್ತಾರು ?
ಬೆಟ್ಟಕ್ಕೆ ಹತ್ತೋಳ ತಿಕವ ಯಾರು ಯಾರು ತಳ್ಳ್ಯಾರು ?

೧೨೪೯೩ ನಾಲ್ಕು ಕಿವಿ ಮಾತೇ ಸ್ಥಿರವಾಗಿ ನಿಲ್ಲೋದು

೧೨೪೯೪ ಬಾಳೆಹಣ್ಣಿಗೆ ಬೆಲ್ಲ, ಬದನೆಕಾಯಿಗೆ ಹುಳಿಕಾರ

೧೨೪೯೫ ಬುದ್ಧಿ ಮಾತು ಕೇಳಿ ನಿದ್ದೆ ಹೋಯ್ತು

೧೨೪೯೬ ಬೋಧನೆ ಮಾಡಿದರೆ ತಿರೆ ಅಲ್ಲಾಡೀತೆ ?

೧೨೪೯೭ *ಬೈದು (ಗದರಿಸಿ) ಹೇಳಿದವ ಬದುಕೋಕೆ ಹೇಳಿದ,
ನಗುತ ಹೇಳಿದವ (ಹೊಗಳುವವ, ಇಚ್ಚಕವಾಡುವವ)
ಕೆಡೋಕೆ ಹೇಳಿದ

೧೨೪೯೮ ಮುಂದಣ ಬುದ್ಧಿ ತಪ್ಪಿದರೆ ಮೂರು ದಾರಿ ಮಣ್ಣೇ

೧೨೪೯೯ ಹೇಳಿ ಕೊಟ್ಟ ಮಾತು (ಕಟ್ಟಿದ ಬುದ್ಧಿ),
ಕಟ್ಟಿಕೊಟ್ಟ ಬುತ್ತಿ (ಏಸ್ಹೊತ್ತು ಬಕ್ಕು ?) ಎಲ್ಲಿಯುವರೆಗೆ ?

೧೨೫೦೦ ಹೊಗಳಿಸಿಕೊಂಡವ ಒಕ್ಕಲು ಹೋದ,
ತೆಗಳಿಸಿಕೊಂಡವ ತಳಕುಳವಾದ

ಮೂರ್ಖ

೧೨೫೦೧ ದೃಢ ಬುದ್ಧಿ ಇಲ್ಲದವ ಕಡು ಮೂರ್ಖ

೧೨೫೦೨ ಮೂಕನ ಮಾತು, ಮೂರ್ಖನ ಮತಿ

೧೨೫೦೩ ಮೂಢೋ ಮೂರ್ಖೋ ಗಾರ್ದಭೋ ಏಕರಾಶಿಃ

೧೨೫೦೪ ಮೂರ್ಖನ ಸ್ನೇಹ ಮಾಡೋದೂ ಒಂದೇ,
ಕರಡಿ ತಬ್ಬೋದೂ ಒಂದೇ

---

* (i) ನಗುಕೆ ಹೇಳಿದವ್ರು ಕೆಡುಕೆ ಹೇಳಿದ್ರು, ಅಳುಕೆ ಹೇಳಿದವ್ರು ಬದಕುಕೆ ಹೇಳಿದ್ರು
(ii) ನಗುವಿನ ಮಾತಿನವನು ಕೇಡು ಬಯಸಿದ

೧೨೫೦೫ ಮೂರ್ಖನಾದವನಿಗೆ ಮಾರ್ಕಂಡೇಯನ
ಆಯುಷ್ಯವಿದ್ದರೂ ಏನು ಫಲ?

೧೨೫೦೬ ಮೂರ್ಖರಿಗೆ ಬುದ್ಧಿಯಿಲ್ಲ, ದೊಡ್ಡ ರೋಗಕ್ಕೆ ಮದ್ದಿಲ್ಲ

ಮೂರ್ಖನ ವಿಲಕ್ಷಣ ಸ್ವಭಾವ

೧೨೫೦೭ [1]ಊರಿಗೆ ಒಂದು ದಾರಿಯಾದರೆ
ಪೋರನಿ (ಮಾರಿ, ಪೋರಿ, ಕುರುಡಿ)ಗೇ ಒಂದು ದಾರಿ

೧೨೫೦೮ ಊರೆಲ್ಲ ಅಮಾಸೀ ಮಾಡಿದರ
ಊಡಕ ಒಂದು ಉಗಾದಿ ಮಾಡ್ತಿತ್ತಂತ !

ಮೂರ್ಖನಿಗೆ ಹೇಳಿದ ಬುದ್ಧಿವಾದ

೧೨೫೦೯ ಅಡಕೆ ಕೊಟ್ಟು ತಂಬುಲ ಈಸಿಕೊಂಡ ಹಾಗೆ

೧೨೫೧೦ ಅಡವಿಯಲ್ಲಿ ಬೆಳುದಿಂಗಳು ಕಾದ ಹಾಗೆ

೧೨೫೧೧ ಅನೀತಿಯಲ್ಲಿ ಚದುರನಾದವ ವಿದುರ ನೀತಿ ಬಯಸ್ಯಾನೆ ?

೧೨೫೧೨ ಅರೆ ಕಲ್ಮೇಲೆ ನೀರು ಹೊಯ್ದರೆ ಅದು ಚಿಗುರೀತೆ ?

೧೨೫೧೩ ಅವನಿಗೆ ಏನು ಹೇಳಿದರೂ ಹಗೇವಿನಲ್ಲಿ ಹಾಕಿದಂತೆಯೇ

೧೨೫೧೪ 'ಆರು' ಅಂದ್ರೆ ನನ್ನ ಅಂಡಿಗಾಯ್ತು,
'ಮೂರು' ಅಂದ್ರೆ ನನ್ನ ಕುಂಡಿಗಾಯ್ತು

೧೨೫೧೫ [2]ಎತ್ತನ್ನಾದರೂ ತಿದ್ದಬಹುದು, ಎಮ್ಮೇನಾದ್ರೂ ತಿದ್ದಬಹುದು,
ನಿನ್ನ ಯಾರು ತಿದ್ದುತಾರೋ ಒನಕೆನಾಥ?

---

1 (i) ಊರಿಗೆಲ್ಲ ಒಂದು ಮಾರ್ಗವಾದರೆ ಉಡುಸ್ಲಮ್ಮನಿಗೇ ಒಂದು ಮಾರ್ಗ
(ii) ಎಲ್ಲರಿಗೂ ಒಂದು ದಾರಿ (ಬಟ್ಟೆ) ಯಾದರೆ ಎಡವಟ್ಟ (ಕೋಡಗ, ನಮ್ಮ ಮನೆ ಮುರುವ)ನಿಗೇ ಒಂದು (ಬಟ್ಟೆ) ದಾರಿ

2 ಬಿದರು ತಿದ್ದಬಹುದು, ಕದರು ತಿದ್ದಬಹುದು; ನಿನ್ನ ತಿದ್ದಬಹುದೆ ಒನಕೆನಾಥ!

೧೨೫೧೬ [1]ಎತ್ತಿನ ಮುಂದೆ ತೆಂಗಿನಕಾಯಿ (ಬೇಲದಕಾಯಿ ಎಸೆದ ಹಾಗೆ) ಒಡೆದ ಹಾಗೆ

೧೨೫೧೭ ಏನು ಹೇಳಿದರೂ ಆನೇ ಬುದ್ಧಿ

೧೨೫೧೮ ಕಟುಕರ ಅಂಗಡೀ (ಬೀದೀ) ಲಿ ಬಸವ ಪುರಾಣವೆ?

೧೨೫೧೯ ಕತ್ತೆ ಮುಂದೆ ಬತ್ತ ಕಂಟ್ಟಿದಂಗೆ

೧೨೫೨೦ ಕತ್ತೆಗೆ ಕೌದಿ ಬಿಗಿದಂಗೆ

೧೨೫೨೧ ಕನ್ನಡಿಗೆ ಹಲ್ಲು ಬಿಟ್ಟರೆ ಹಲ್ಲಾದ್ರೂ ಕಾಣ್ತವೆ,
ಮುಂಡುಗೋಡೆಗೆ ಹಲ್ಲು ಬಿಟ್ಟರೆ ಏನು ಕಂಡಾತು?

೧೨೫೨೨ ಕಲ್ಲಿಗೆ ಬೆಲ್ಲ ತೊಡೆದಂತೆ

೧೨೫೨೩ ಕಲ್ಲಿನ ಮೇಲೆ ಬೀಜ ಚೆಲ್ಲಿದ ಹಾಗೆ

೧೨೫೨೪ ಕಾಡಿನಲ್ಲಿ ಅತ್ತ ಹಾಗೆ

೧೨೫೨೫ ಕಾದ ಮಡಕೆಯಲ್ಲಿ ನೀರು ಹೊಯ್ದ ಹಾಗೆ

೧೨೫೨೬ ಕಿವುಡನ ಮುಂದೆ ಸಂಗೀತ ಹಾಡಿದಂತೆ

೧೨೫೨೭ ಕಿವುಡನಿಗೆ ಕಥೆ ಹೇಳಿದಂತೆ

೧೨೫೨೮ ಕುರುಡನ ಕೈಲಿ ಕನ್ನಡಿ ಕೊಟ್ಟ ಹಾಗೆ

೧೨೫೨೯ ಕುರುಡನಿಗೆ 'ಅಗೊ! ಅಲ್ಲಿ ಕಾಣುವ ದಾರಿ ಹಿಡಿದು ಹೋಗು' ಅಂದಹಾಗೆ

೧೨೫೩೦ ಕೊಳಲ ಸನ್ನೆಗೆ ಕೋಣ ಬಂದೀತೆ?

---

1 ಕತ್ತೆ ಮುಂದೆ ತೆಂಗಿನಕಾಯಿ ಒಡೆದರೆ ಅತ್ಲೊಂದು ಹೋಳು, ಇತ್ಲೊಂದು ಹೋಳು

೧೨೫೩೧ [1]ಕೋಣ (ಕಿವುಡ) ನ ಮುಂದೆ (ಕರಡಿ, ಕತ್ತೆಯ ಮುಂದೆ ವೀಣೆ (ಕಿನರಿ, ಕಿನ್ನರಿ) ಬಾರಿಸಿದ ಹಾಗೆ

೧೨೫೩೨ ಕೋಣನ ಮುಂದೆ ಹೂಬಾಣ ಬಿಟ್ಟರೆ ಹುಸಿದು ಹೋಗದೆ ಇನ್ನೇನಾದೀತು?

೧೨೫೩೩ ಗುಳ್ಳೇನರಿಗೆ ಉಪದೇಶ ಕೊಟ್ಟ ಹಾಗೆ

೧೨೫೩೪ ಗೂಬೆಗೆ ಕತ್ತಲೆ ತಾನೇ ಹಿತ

೧೨೫೩೫ [2]ಗೋಡೆ ತೊಳೆದರೆ ಬರಿ ಮಣ್ಣು

೧೨೫೩೬ ತಾಯಿ ಮೂಸಿದರೆ ಏಳದೇ ಹೋದ್ದು,
ನಾಯಿ ಮೂಸಿದರೆ ಏಳ್ತೋ! (ಹವ್ಯಕ)

೧೨೫೩೭ 'ತಿಪ್ಪೆಗೆ ಹೋಗುವಾಗ ರೊಟ್ಟಿ ತಿನ್ನಬೇಡ!' ಅಂದ್ರೆ
'ನಾನು ಅದರಲ್ಲೇ ಅದ್ದುಕೊಂಡು ತಿಂತೀನಿ' ಅಂದ್ರೆ
ಯಾರೇನು ಮಾಡಾರು ?

೧೨೫೩೮ ತೂತು ಗಡಿಗೆಗೆ ತುಪ್ಪ ತುಂಬಿದಂತೆ

೧೨೫೩೯ ನಾಯಿಗೆ ಸಿಪ್ಪೆ ತೆಂಗಿನಕಾಯಿ ಸಿಕ್ಕಿದ ಹಾಗೆ

೧೨೫೪೦ ನಿನಗೂ ಬೆಬ್ಬೆಬ್ಬೆ, ನಿಮ್ಮಪ್ಪನಿಗೂ ಬೆಬ್ಬೆಬ್ಬೆ

೧೨೫೪೧ ನೀರಿಗೆ ಬೆರಳದ್ದಿ ಚೀಪಿದ ಹಾಗೆ

೧೨೫೪೨ ನೀರಿನ (ಬೂದಿಯ) ಲ್ಲಿ ಹೋಮ ಮಾಡಿದ ಹಾಗೆ

೧೨೫೪೩ ನೆರೆ ನೋಡಿ ಕಲಿಯೊ ನಿರ್ಭಾಗ್ಯ ಮಯರುವ !

---

1 (i) ಕೋಣನ (ಕೋತಿಯ) ಮುಂದೆ ಕಿನ್ನು(ನ್ನೂ)ರಿ ಬಾರಿಸಿದರೆ ಕೋಡು ಯಾವುದು, ಕೊಳಗ ಯಾವುದು? ಎಂದಿತಂತೆ

(ii) ಕೋಣನ ಮುಂದೆ ಕಿನ್ನರಿ ಬಾರಿಸಿದರೆ ಕೊಂಬು ಕೊಳಗ ಅಂದಿತು

2 ಗೋಡೆ ತೊಳೆದಷ್ಟೂ ರಾಡಿ (ಹೆಚ್ಚು) ಯೇ

೧೨೫೪೪ ಪದರು ಕಾಣಿಸಿದ ಬುದ್ಧಿ ಗದರಿಸಿದರೂ ಹೋಗದು

೧೨೫೪೫ ಪದೇಪದೇ ಹೇಳಿದರೂ ಸದೆ ಕೂಡಿಸುವುದು ಬಿಡ

೧೨೫೪೬ ಪಾಯಸ ಮಾಡಿ ಹೊಳೇಲಿ ಕದಡಿದ ಹಾಗೆ

೧೨೫೪೭ ಪಾಳುಗೋಡೆಯ ಮುಂದೆ ಶಂಖ ಊದಿದ ಹಾಗೆ

೧೨೫೪೮ ಬರಿ ಕೊಳಗ ಅಳೆದಂತೆ

೧೨೫೪೯ ಬುದ್ಧಿಮಾತು ಹೇಳಿವರೆ ಎದ್ದೋಗೊ ಮೊಮ್ಮಗ್ನೆ ಅಂದ್ನಂತೆ

೧೨೫೫೦ *ಬುದ್ಧಿ ಹೇಳುವವರ ಸಂಗಡ ಗುದ್ದಾಟಕ್ಕೆ ಹೋದ

೧೨೫೫೧ ಬೇಡ ಅಂದರೂ ಮಗ ಆಡು ಕಾಯುವುದು ಬಿಡ

೧೨೫೫೨ ಬೇಡ ಅಂದರೂ ಮಗ ಹರಿಸ್ಮರಣೆ ಬಿಡ

೧೨೫೫೩ ಪ್ರಸಂಗ ಕೇಳಿದರೂ ಅಸಂಗತಿ ಬಿಡಲಿಲ್ಲ

೧೨೫೫೪ ಬೋಧನೆ ಮಾಡಿದರೆ ಕಿವಿ ಅಲ್ಲಾಡುತ್ತೈ?

೧೨೫೫೫ ಬೋರೆ ಮೇಲೆ ಮಳೆ ಸುರಿದ ಹಾಗೆ
ಗೋರ್ಕಲ್ಲ ಮೇಲೆ ಮಳೆ ಸುರಿದಂತೆ

೧೨೫೫೬ ಮಗದಣ ಮನುಷ್ಯ ಹೆಣಗಿದರೂ ಬಿಡ

೧೨೫೫೭ ಮಣ್ಣಿನ ಬೆನಕನನ್ನು ನೀರಿನಿಂದ ತೊಳೆದಷ್ಟೂ ಕೆಸರೇ

೧೨೫೫೮ ಮೂರ್ಖನಿಗೆ ಉಪದೇಶ ಮಾಡುವುದೂ
ಸತ್ತವನಿಗೆ ಔಷಧಿ ಕುಡಿಸುವುದೂ ಒಂದೇ

೧೨೫೫೯ ಮೂರ್ಖನಿಗೆ ಹೇಳಿದ ಬುದ್ಧಿ, ಅಡಿಗೆ ಹಾಕಿದ ಮೇವು

೧೨೫೬೦ ಮೂರ್ಖನಿಗೆ ಹೇಳಿದ ಬುದ್ಧಿ ಗೋರ್ಕಲ್ಲಿನ ಮೇಲೆ ಸುರಿದ ಮಳೆ

---

* ಬುದ್ಧಿಯಾಡುವುದಕ್ಕೆ ಹೋದರೆ ಗುದ್ದಿಕೊಂಡು ಸತ್ತನಂತೆ

೧೨೫೬೧ ಮೂರ್ಖಂಗೆ ನೂರ್‌ಕಾಲ ಬುದ್ಧಿಯನು ಪೇಳಿದೊಡೆ ಗೋರ್ಕಲ್ಲ
ಮೇಲೆ ಮಳೆ ಸುರಿದಂತೆ–ಸರ್ವಜ್ಞ

೧೨೫೬೨ ರುಚಿ ಕಂಡ ನಾಯಿಗೆ ಶುಚಿ ಹಿಡಿಸೀತೆ ?

೧೨೫೬೩ ವಾಜಿ ಕಲಿ ಮಗನೆ ಅಂದ್ರೆ
ಒಲೆಯಲ್ಲಿ ಉಚ್ಚೆ ಹೊಯ್ದಿದ್ನಡ (ಹವ್ಯಕ)

೧೨೫೬೪ ವಿಷ ತಿಂದು ಸಾಯುವವ ಹಾಲು ಕೊಟ್ಟರೆ ಬದುಕ

೧೨೫೬೫ ಶಕುನ ಹೇಳುವ ಹಕ್ಕಿ ಗೋಣು ಮುರಿದ ಹಾಗೆ

೧೨೫೬೬ ಸಗಣಿಯ ಬೆನಕನಿಗೆ ಸಂಪಗೆ ಹೂ ಮುಡಿಸಿದರೆ
ಗಂಜಳದ ವಾಸನೆ ಬಿಟ್ಟೀತೆ ?

೧೨೫೬೭ ಸಡಿಲು ಬಿಟ್ಟವನಿಗೆ ಬುದ್ಧಿ ಮಡಿಲಲ್ಲಿ ಹಾಕಿದರೂ ಆಗದು

೧೨೫೬೮ *ಸಮುದ್ರಕ್ಕೆ ಇಂಗು ಕದಡಿದ ಹಾಗೆ

೧೨೫೬೯ ಸಮುದ್ರಕ್ಕೆ ಬೆರಣಿ ಇಟ್ಟ ಹಾಗೆ

೧೨೫೭೦ ಸರಿಯಾದ ಕಣ್ಣು ಕತ್ತಲೆಗೆ ಅಂಜುವ ಹಾಗೆ
ಕುರುಡಗಣ್ಣು ಅಂಜುವುದಿಲ್ಲ

೧೨೫೭೧ 'ಸೆಟ್ಟಿ, ಹೇಸಿಗೆ ಮೆಟ್ಟೀ!' ಅಂದರೆ
'ಆದ್ನೇ ತಿಂದರೇನು ಕೊಟ್ಟೀ?' ಅಂದ

೧೨೫೭೨ ಹದಗೆಟ್ಟ ಮುರಂವ ಗದರಿಸಿದರೂ ಬಿಡ

೧೨೫೭೩ ಹಸಿ ಗೋಡೆಮೇಲೆ ಹಳ್ಳಿಟ್ಟಂಗೆ,
ಬಿಸಿಗೋಡೆ ಮೇಲೆ ಬೆಣ್ಣೆ ಇಟ್ಟಂಗೆ

---

* (i) ಸಮುದ್ರದಲ್ಲಿ ಇಂಗು ತೇದ ಹಾಗೆ
(ii) ಕಾಸಿನ ಇಂಗು ಕಾವೇರಿಯಲ್ಲಿ ಕದಡಿದಂಗೆ
(iii) ಇಂಗನ್ನ ಗಂಗೇಗ್ಹಾಕ್ದಂಗೆ

೧೨೫೭೪ ಹಂದಿ ತೊಳೆದರೆ ಕೆಸರಿನಲ್ಲಿ ಹೊರಳೋದು ಬಿಡದು

೧೨೫೭೫ ಹಂದಿಗೆ ಸಕ್ಕರೆ ತುಪ್ಪ ಉಣಿಸಿದರೆ ಆನೆ ಆಗುತ್ಯೇ ?

೧೨೫೭೬ ಹೀನತನ ಬಿಡಲಿಲ್ಲ, ಸ್ವಾನುಭವ ಕೂಡಲಿಲ್ಲ

೧೨೫೭೭ ಹೆಣಕ್ಕೆ ಚಕ್ಕಳಗುಳಿ ಇಟ್ಟ ಹಾಗೆ

೧೨೫೭೮ ಹೇಳಿ ಹೇಳಿ ಹಲ್ಲಿಗೆ ಕಿಲುಬು ಹಿಡಿಯಿತು

೧೨೫೭೯ ಹೊಲಸು ತಿನ್ನೊ ನಾಯಿಗೆ ಅಮೃತ ರುಚಿಸದು

೧೨೫೮೦ ಹೊಳೆಯಲ್ಲಿ ಹುಣಿಸೆಹಣ್ಣು ತೇ(ಕದಡಿ)ದ ಹಾಗೆ

ಬುದ್ಧಿಗೇಡಿ

೧೨೫೮೧ ಅಂಗಡಿ ಮಾರಿ ಗೋಂಗಡಿ (ಕಂಬಳಿ) ಹೊದ್ದ

೧೨೫೮೨ [1]ಅಟ್ಟ, ಪಾಯಸದಲ್ಲಿ ಕೆರ ಹೆಟ್ಟಿದ

೧೨೫೮೩ ಆಕಳು ಕರು ಹಾಕಿದರೆ ಚೆಂಬು ತಕಂಡು ಗಿಣ್ಣೆಹಾಲಿಗೆ ಬಂದ

೧೨೫೮೪ ಇದ್ದ ಮತಿ ಹಾರಿತೊ ಸಿದ್ಧಗಣೇಶ

೧೨೫೮೫ ಇರುಳಿನಲ್ಲಿ ಮಂಗನ ಹಾಗೆ ಅರಚಾಡಿದ

೧೨೫೮೬ [2]ಇಲಿ ಹೆಚ್ಚಿತು ಅಂತ ಮನೆಗೆ ಬೆಂಕಿ ಇಟ್ಟ (ತುಳು)

೧೨೫೮೭ ಉಣ್ಣುವ ಅನ್ನದ ಮೇಲೆ ಉಗುಳಿಕೊಂಡಂತೆ

೧೨೫೮೮ ಊರಲ್ಲಿಲ್ಲದವನನ್ನು ಹೆಸರಿಡಿದು ಕರೆದ ಹಾಗೆ

೧೨೫೮೯ ಊರನ್ನೆಲ್ಲ ತಿರಿದು ತಂದು (ಒಲೆ ಮುಂದೆ ಮಾಡಿದರು)
ಜೂಲುನಾಯ ಮುಂದೆ ಸುರಿದರು

---

1 ಕುಡಿಯೋ ಮಜ್ಜಿಗೇಲಿ ಪ್ರಜಾಪತಿ ಅಲ್ಲಾಡಿಸಿವ!
(ಕುಡಿಯೋ ನೀರಿನಲ್ಲಿ ತುಣ್ಣೆ ಅಲ್ಲಾಡಿಸಿದ ಹಾಗೆ)

2 ಇಳ್ಳಿಗೆ ಹೆದರಿ ಇದ್ದ ಮನೆ (ಸುಡಬಹುದೆ) ಸುಟ್ಟಿದ್ನಡ (ಹವ್ಯಕ)

೧೨೫೯೦ ಎಟುಕದ ಅಟ್ಟಕ್ಕೆ ಏಣಿ ಹಾಕಿದನಂತೆ

೧೨೫೯೧ ಎತ್ತಿದವರ ಕೈಕೂಸು

೧೨೫೯೨ ಎದುರಿಗೆ ಆನೆ ಬಂದಾಗ ಗುರ್ತಿಸದೆ ಹೆಜ್ಜೆ ನೋಡಿ 'ಹೋದದ್ದು ಆನೆಯೋ' ಅಂದನಂತೆ

೧೨೫೯೩ ಎಲ್ಲಿಯದೋ ಮೂಳಿಗೆ ಒಲ್ಲಿ ಹೊಚ್ಚಿದರಂತೆ

೧೨೫೯೪ ಏರಿಬಂತು ಅಂತ ಆನೆ ಕಾಲು ಕಟ್ಟಿದ ಹಾಗೆ

೧೨೫೯೫ ಒಡೆ ಉಬ್ಬಿತ್ತು ಹೇಳಿ ಮಂಚೆ ಕೆತ್ತ್ಗೊಂಡಿತ್ತಡ

೧೨೫೯೬ ಓಲೆ ಮಾರಿ ಎಮ್ಮೆ ತಂದು ಓಂಡಿ (ಕೂರಿಗೆ) ತರಲಿಕ್ಕೆ ಎಮ್ಮೆ ಮಾರಿದಳು

೧೨೫೯೭ ಕಂಚು ಬಿಟ್ಟು ಹಂಚು ಹಿಡಿದ

೧೨೫೯೮ ಕಡಗ ನೋಡಲಿ ಅಂತ ಗುಡಿಸಲು ಸುಟ್ಕೊಂಡ ಹಾಗೆ

೧೨೫೯೯ ಕಡಾಣಿ ಕಿತ್ತು ಗಾಡಿ ಕಟ್ಟಿದ ಹಾಗೆ

೧೨೬೦೦ ಕಸ್ತೂರಿ ಬಿಟ್ಟು ಕೆಸರು ಬಳಕೊಂಡಂತೆ

೧೨೬೦೧ ಕಸ್ತೂರಿ ಹುರಿದು ಅರಳು ಮಾಡಿದಂತೆ

೧೨೬೦೨ ಕಾಡೆಲ್ಲ ಅಡ್ಡಾಡಿ (ತಿರುಗಿ) ಕಟ್ಟಿಗೆ ಇಲ್ಲ ಅಂದ ಹಾಗೆ

೧೨೬೦೩ ಕೀಲಿಗಾಗಿ ದೇವಸ್ಥಾನ ಅಳಿದನಂತೆ

೧೨೬೦೪ ಕುಂಡೆಯಿಂದ ಬಂಡೆ ಒಡೆದ

೧೨೬೦೫ ಕೆರದ ಅಳತೆಗೆ ಕಾಲು ಕೊಯಿಸಿಕೊಂಡ ಹಾಗೆ

೧೨೬೦೬ ಕೊಡುವುದನ್ನು ಕೊಟ್ಟು ಕುಷ್ಟರೋಗಿ ಕಾಲಿಗೆ ಬಿದ್ದ ಹಾಗೆ

೧೨೬೦೭ ಕೊಡೋದು ಕೊಟ್ಟು ಕೊಳಕಿ ತಂದ

೧೨೬೦೮ ಕೊಡೋ ದುಡ್ಡು ಕೊಟ್ಟು ಕೊಳಕು ಮಜ್ಜಿಗೆ ಕುಡಿದ ಹಾಗೆ

೧೨೬೦೯ ಗಂಗೆ ಇದ್ದಹಾಗೆ ಮಂಜಿನ ನೀರಿಗೆ ಕೈ ಒಡ್ಡಿದ ಹಾಗೆ

೧೨೬೧೦ ಚಂದಗೇಡಿ, ಮಂದಬುದ್ಧಿ ನೋಡು

೧೨೬೧೧ ತಂತಿ ಕಿತ್ತುಹೋಯಿತು ಅಂತ ತಂಬೂರಿ ಎಸೆದ ಹಾಗೆ

೧೨೬೧೨ ತೀರಿಹೋದ ಮುಂಡೆಯನ್ನು ಊರು ಮುಂದೆ ಕರೀತಿದ್ದರಂತೆ

೧೨೬೧೩ [1]ತೂತು ದೋಣಿಯಲ್ಲಿ ಹೊಳೆ ದಾಟುವ ಹಾಗೆ

೧೨೬೧೪ ತೆರೆ ಕೊಟ್ಟು ಮೊರ ಕೊಂಡ

೧೨೬೧೫ ತೊಡೆ ಮೇಲೆ ಉಚ್ಚೆ ಹುಯ್ಕೊಂಡ ಹಾಗೆ

೧೨೬೧೬ ದಡ ಕೆಡವಿ ಮೈಮೇಲೆ ಹಾಕ್ಕೊಂಡ ಹಾಗೆ

೧೨೬೧೭ ದನ ಬೇಲಿ ಮೇಯಿತು ಅಂತ ಬೇಲಿ ಕಿತ್ತು ಎಸೆದ

೧೨೬೧೮ ದುಡ್ಡು ಕೊಟ್ಟು ಎಂಜಲು ತಿಂದ

೧೨೬೧೯ ದೊಡ್ಡಿ ಒಳಗೆ ಹುಲ್ಲು ಮೆದೆ ಹಾಕಿದನಂತೆ

೧೨೬೨೦ ದೋಟಿಯಿಂದ ಜೇನು ತೆಗೆದ ಹಾಗೆ

೧೨೬೨೧ ನೂಲೋ ಅಜ್ಜಿ ಕೊಟ್ಟು ಹೇಲೋ ಅಜ್ಜಿ ತಕೊಂಡ ಹಾಗೆ

೧೨೬೨೨ ನೆಳಲು ಸೇರಬೇಕೆಂದು ಹಳುವಕ್ಕೆ ಹೋದ ಹಾಗೆ

೧೨೬೨೩ ಪರಂಜೋತಿಗೆ ದೀಪ ಹತ್ತಿಸ್ತಾರ್ಯೆ ?

೧೨೬೨೪ ಪಾದಪ್ರಕ್ಷಾಲನೆಗೆ ಗೋಮೂತ್ರ ತರ್ತಾರ್ಯೇ ?

೧೨೬೨೫ [2]ಪಾಯಸ ಮಾಡಿ ನಾಯಿ ಬಾಲದಿಂದ ತೊಳಸಿದ ಹಾಗೆ

---

1 ಓಟೆ ದೋಣಿಯ ಪ್ರಯಾಣ (ಓಟೆ–ತೂತು)

2 ನಾಯಿಗೆ ಪಾಯಸ ಮಾಡಿ ನಾಯಿ ಬಾಲ ಅದ್ದಿದ ಹಾಗೆ

೧೨೬೬೦ ಹೊದಿಯೋ ಕಂಬಳಿ ಕೊಟ್ಟು ಪಳ್ಳ್ಯಕೋಸು ಕೊಂಡರಂತೆ

೧೨೬೬೧ ಹೋತನ ಗಡ್ಡ ನೂತನವೆಂದು ಕೊಯಿದರೆ ಆದೀತೆ ?

ಬುದ್ಧಿಗೇಡಿಯಿಂದ ಇತರರಿಗೂ ತೊಂದರೆ

೧೨೬೬೨ ನರಿ ಕೂಗಿ ಮರಿಗೆ ಮಾರಿ ತಂತು

೧೨೬೬೩ ನಾಯಿ ಬೊಗಳಿ ಪಾಳ್ಯಕ್ಕೆ ಕೇಡು ತಂದಿತು

೧೨೬೬೪ ಬುದ್ಧಿಯಿಲ್ಲದ ಮಕ್ಕ, ಇದ್ದವರಿಗೆ ಕೇಡು ತಂದ

೧೨೬೬೫ ಬುದ್ಧಿಯಿಲ್ಲದವರ ಸ್ನೇಹ, ಇದ್ದವರ ಮಾನಕ್ಕೆ ಹಾನಿ

ಬುದ್ಧಿಗೇಡಿಯನ್ನು ದಾರಿಗೆ ತರುವ ಮಾರ್ಗ

೧೨೬೬೬ ಕತ್ತೆಗೆ ಲತ್ತೆ ಪೆಟ್ಟು, ಕೋಣನಿಗೆ ದೊಣ್ಣೆ ಪೆಟ್ಟು

೧೨೬೬೭ ಕುದುರೆಗೆ (ಲಗಾಮು) ಕಾಲು ಸನ್ನೆ, ಕತ್ತೆಗೆ (ದಡಿ) ದೊಣ್ಣೆ ಸನ್ನೆ

೧೨೬೬೮ ಜಾಣನಿಗೆ ಮಾತಿನ ಪೆಟ್ಟು, ಹೆಡ್ಡನಿಗೆ ದೊಣ್ಣೆ ಪೆಟ್ಟು

೧೨೬೬೯ ಜಾಣ ಹೆಂಡತಿಗೆ ಕಣ್ಣು ಸನ್ನೆ, ಕೋಣ ಹೆಂಡತಿಗೆ ದೊಣ್ಣೆ ಸನ್ನೆ

೧೨೬೭೦ ಪೈಪುರಿ ಪೆಟ್ಟು ತಿಂದ ಮೇಲೆಯೇ ಮೂರ್ಖರು ದಾರಿಗೆ ಬರುವುದು

ದಡ್ಡ

೧೨೬೭೧ ಅಜ್ಜನಾಗಬಹುದು, ಅಜ್ಞನಾಗಬಾರದು

೧೨೬೭೨ ಅಜ್ಞಾನಿಯಾದವ ಸುಜ್ಞಾನಿಗೆ ಸಮವೇ

೧೨೬೭೩ ಅಡ್ಡ ಮಾತು, ಹೆಡ್ಡನ ಸ್ನೇಹ, ಗುಡ್ಡದ ವಾಸ—ಈ ಮೂರೂ ಕೆಡುಕು

೧೨೬೭೪ [1]ಅರುವುಗೇಡಿಗೆ ಆರತಿ ಕೊಟ್ಟರೆ ಆರು ತಿಂಗಳು ಕೆಳಗೇ ಇಡಲಿಲ್ಲವಂತೆ

೧೨೬೭೫ ಅಂದ ಚೆಂದ ನೋಡಿದರೆ ಮಂದತ್ವ ಹೋದೀತೆ ?

೧೨೬೭೬ ಉಚ್ಚೆ ಕುಡಿಯುವುದಕ್ಕೆ ಉಪ್ಪು ಕೇಳಿದ

೧೨೬೭೭ ಊರು ನೋಡು ಅಂದರೆ ಸೂರು (ಹೊಲಗೇರಿ) ನೋಡಿದಳು

೧೨೬೭೮ ಊರೆಲ್ಲ ತಿರುಗಾಡಿ ಊರ ಬಾಗಿಲು ಯಾವುದು ಅಂದ ಹಾಗೆ

೧೨೬೭೯ 'ಎಡವಟ್ಟ' ಅಂದ್ರೆ ಎಡವಟ್ಟನಲ್ಲ ಹೊಡೆಗಟ್ಟ ಅಂದ್ನಂತೆ

೧೨೬೮೦ 'ಎಡವಟ್ಟ' ಅಂದ್ರೆ 'ನಿನ್ನ ದವಡೆಗಟ್ಟ' ಅಂದ್ನಂತೆ

೧೨೬೮೧ ಏನೂ ಅರಿಯದವ ಶ್ವಾನನಿಗಿಂತ ಕಡಮೆ

೧೨೬೮೨ ಏನೂ ತಿಳಿಯದವ ಎದೆಗುದ್ದಿಕೊಂಡು ಸತ್ತ

೧೨೬೮೩ ಏನೂ ಅರಿಯಲ್ಲೆ, ಪ್ರಾಣಕ್ಕೆ ತಂದಳಲ್ಲೆ !

೧೨೬೮೪ ಏಬರೇಸಿ ನಮ್ಮ ದರವೇಶಿ ಕಂಡಿರಾ ?

೧೨೬೮೫ ಒಬ್ಬನನ್ನು 'ಬಾರೊ ಅಂದರೆ 'ಇಬ್ಬರು ಬಂದ್ರಾ ತಬ್ಬಲಿ ಮುಂಡೆ ಮಕ್ಕಳ್ರಾ !'

೧೨೬೮೬ ಬಲ್ಲಿಯಲ್ಲಿ ಮೂಲೆ ಹುಡುಕಿ (ದಸಾತೆ)ದ ಹಾಗೆ

೧೨೬೮೭ [2]ಓಡಿ ಓಡಿ ತನ್ನನ್ನು ತಾನೇ ಹಿಡಿದುಕೊಳ್ಳುವ ಮರುಳಂತೆ

೧೨೬೮೮ ಕಡುಬು ಮಾಡು ಅನ್ನಾಕೆ ಬರ್ದೆ ಕಿನ್ನಿಗೆ ಹೊಡ್ದು ಊದಿಸಿದ

೧೨೬೮೯ ಕಣ್ಣಿಲ್ಲದ ಕಸಬರಿಗೆ ಊರ್ನೆಲ್ಲ ಗುಡಿಸಿತು

---

1 ಅನಾದಿ ಕ್ರಿಯಾಗ ಆರತಿ ಕೊಟ್ರು ಆರು ತಿಂಗಳು ಕೆಳಗೇ ಇಟ್ಟಿತ್ತಂತೆ

2 ತನ್ನನ್ನು ತಾನೇ ಓಡಿ ಹಿಡಿದನಂತೆ

೧೨೮೯೦ ಕಲಿಕಾಲಿ ಉಟ್ಟವರೆಲ್ಲ ನನ್ನ ಹೆಂಡ್ರು ಅಂದ್ರೆ ಯಾವನಾದ್ರೂ ಕಪಾಳಕ್ಕೆ ಹೊಡೀತಾನೆ

೧೨೮೯೧ ಕಂಬಳಿಯನ್ನ ಕಲ್ಲು ಹಾಕಿ ಒಗೆದಂತೆ

೧೨೮೯೨ ಕುರುಬ ಕಂಬಿ ಹೊತ್ತುಕೊಂಡು ಬಾವಿಗೆ (ಬಗ್ಗಿ ನೋಡಿದ ಹಾಗೆ) ಬಿದ್ದ ಹಾಗೆ

೧೨೮೯೩ ಕುರಿದವನಾದ್ರೂ ಮಂದನಾಗಬಾರದು

೧೨೮೯೪ ಕೂಲಿ ಹುಟ್ಟಿದರೂ ಕುಡುಗೋಲು (ಹುಟ್ಟುವುದಿಲ್ಲ) ಹುಟ್ಟಬೇಡ

೧೨೮೯೫ ಕೋಣೆಯಲ್ಲಿ ಬೆಳಕಿಲ್ಲ ಅಂತ ರಾತ್ರಿಲಿ ಕಿಟಕಿ ತೆಗೆದನಂತೆ

೧೨೮೯೬ [1]ಗಗ್ಗನ್ನ 'ಗುಗ್ಗು' ಅಂದರೆ ಅವನಿಗೇನು ಅರ್ಥವಾಯ್ತು?

೧೨೮೯೭ ತಂತ್ರ ಬಾಯಲ್ಲಿಟ್ಟುಕೊಳ್ತಾನೋ. ಕಿವೀಲೋ ?

೧೨೮೯೮ ದಡ್ಡನಿಗೆ ಹೆಡ್ಡ ಅಂದರೆ ಮಡ್ಡನಿಗೆ ಜಾಣ ಅಂದ ಹಾಗೆ

೧೨೮೯೯ ದಡ್ಡನೆಂದರೆ ಗೊಡ್ಡೆದ್ದೆಯಂತೆ

೧೨೯೦೦ ದಡ್ಡರ ರಾಜ್ಯದಲ್ಲಿ ಜಾಣನೇ ಹೆಡ್ಡ

೧೨೯೦೧ ದುಡ್ಡಿಗೆ ಧಡಿಯ ಬೆಲ್ಲವಾದರೆ ದಡ್ಡನಿಗೇನು?

೧೨೯೦೨ ದುಡ್ಡಿಗೆ ಸೇರಾದ್ರೆ ದಡ್ಡಗೆ ಬಂದಿದ್ದೇನು?

೧೨೯೦೩ ನಡುಮನೆಗೆ ಹೋಗಿ ಮಡುವಿನಲ್ಲಿ ಬಿದ್ದೆ ಅಂದ ಹಾಗೆ

೧೨೯೦೪ ನಿನ್ನ ಹೆಂಡತಿ ತಮ್ಮ ನಿನಗಿಂತ ದೊಡ್ಡವನಾದ್ರೆ ಏನಂತ ಕಾಗದ ಬರೀತಿ?

---

1 ಗಗ್ಗನ್ನ 'ಗುಗ್ಗು' ಅಂದ ಹಾಗೆ

೧೨೭೦೫ 'ನೀನು ಯಾರ ಮಗ ?' ಅಂದರೆ 'ಧೃತರಾಷ್ಟ್ರ ರಾಮರಾಯನ ಮಗ' ಅಂದ

೧೨೭೦೬ ನೇಣು ಹಾಕಿಕೊಳ್ಳುವವನ ಹತ್ತಿರ ಹೋಗಿ ನಶ್ಯ ಕೇಳಿದ

೧೨೭೦೭ ಪಾನಕ ಬೇಕು ಅಂತ ಶುನಕವನ್ನು ಕರೆದ ಹಾಗೆ

೧೨೭೦೮ ಪಾಯಸಕ್ಕೆ ಆಸೆಪಟ್ಟು, ಪಾಯಸ ಕೊಂದು ತಿಂದನಂತೆ

೧೨೭೦೯ ಓದಿ ಬಿಟ್ಟರೂ ಮೂಢತ್ವ ಬಿಡದು

೧೨೭೧೦ ಪೆಚ್ಚರ ಸಹವಾಸ ಹೆಚ್ಚು ಮಾಡಬಾರದು

೧೨೭೧೧ ಬಸವನ ಮುಂದೆ ಬಂಡಿ ಹೂಡಿದರಂತೆ

೧೨೭೧೨ ಬುದ್ಧಿಯಿಲ್ಲದವನ ಬಲ ಅಲ್ಲ, ವಿದ್ಯೆಯಿಲ್ಲದವನ ಮುಖ ಅಲ್ಲ

೧೨೭೧೩ ಮಡ್ಡನಾದರೆ ಗಡ್ಡ ಹತ್ತದೆ

೧೨೭೧೪ ಮಡ್ಡಿಯಾದರೂ ಮಹಾನುಭಾವ

೧೨೭೧೫ ಮತಿಯಿಲ್ಲದವನಾದರೆ ಗತಿ ನೋಡನೆ ?

೧೨೭೧೬ ಮದುವೆ ಮಂಟಪದಲ್ಲಿ ಎತ್ತು ಹುಡುಕುತ ಬಂದ ಹಾಗೆ

೧೨೭೧೭ ಮರ ಹತ್ತಿ ಮುಟ್ಟಿನೋಡಿ ಕೆಳಗೆ ಬಂದು ಕಲ್ಲು ಹೊಡೆದ

೧೨೭೧೮ ಮಂಕನನ್ನು ಮದುವೆಗೆ ಕಳುಹಿಸಿದರೆ ಅಂಕ ಕಾಣದೆ ಒಂದಕ್ಕೆ ಬಂದ

೧೨೭೧೯ 'ಮಂಕ, ಶಂಖ ಒಡಿ' ಅಂದ್ರೆ ಅಂಕಯ್ಯನ ಕುಂಡೆಗೆ ಒಡಿದನಂತೆ

೧೨೭೨೦ ಮಂಕು ಮುರುವ ಮದುವೆಗೆ ಹೋದರೆ
ಕೊಂಬು ತಮಟೆಯವರೆಲ್ಲ ಅಟ್ಟಾಡಿಕೊಂಡು ಹೊಡೆದರು

೧೨೭೨೧ ‘[1]ಮಂಚದ ಕಾಲಿನಂತೆ ಪಂಚಪಾಂಡವರು ಮೂರೇ ಜನ’ ಅಂತ ಎರಡು ಬೆರಳು ತೋರಿಸಿದ

೧೨೭೨೨ ಮಾಸಾರ್ಧವಾದರೆ ಅಮಾವಾಸೆಯೋ, ಹುಣ್ಣಿಮೆಯೊ ?

೧೨೭೨೩ ಮೂಢನಿಗೆ ಆದ ಕೇಡೂ ಗೊತ್ತಿಲ್ಲ, ಆಗೊ ಕೇಡೂ ಗೊತ್ತಿಲ್ಲ

೧೨೭೨೪ ಮೂಢನಿಗೆ ಭಯವಿಲ್ಲ, ಮೂಡೆ ಬತ್ತಕ್ಕೆ ಕೇಡಿಲ್ಲ

೧೨೭೨೫ ಮೂಳಿಗೆ ಮುಕ್ಕು ಮಡಕೆಯಾದರೆ ಸಾಲದೆ ?

೧೨೭೨೬ ಮೂಳಿಯು ಮೂಗುತಿ ಹೋಗಲಾಗಿ ಮೂಲೆಯ ಕಸವೆಲ್ಲ ಹೊರಗೆ ಹೋಯಿತು

೧೨೭೨೭ ಮೂಳಿಯು ಹಂಗು ನೀರು ಹೊಳೆ ದಾರಿಯಲ್ಲಿ

೧೨೭೨೮ ಮೌಢ್ಯಕ್ಕೆ ಅಧ್ಯತೆ ಬಂದಾಗ ವಿವೇಕಕ್ಕೆ ಅಜ್ಞಾತವಾಸ

೧೨೭೨೯ ಮಷ್ಟಂತಿ ಮಾಡಿಕೊಂಡರೆ ಹೆಷ್ಟತನ ಹೋದೀತೆ?

೧೨೭೩೦ ಶಿಡ್ಲ ಕಡಬಕ್ಕೆ ಹೋದ ಹಾಗೆ

೧೨೭೩೧ ಶಿಸು ಹೋಗಿ ಕೆಸು ತಿಂತು ಅಂತ ಮುಖಕ್ಕೆ ಮಸಿ ಒರೆಸಿಕೊಂಡ

---

1 ಮಂಚದ ಕಾಲಿನಂತೆ ಪಂಚಪಾಂಡವರಂತೆ ಒಬ್ಬನೇ ಮಗ

(i) ಅದೆಯ ಭಟ್ಟ ಸ್ವಾದಿಗೆ ಹೋದ ಹಾಗೆ

(ii) ಕುಟ್ಟಿ ಕುಂದಾಪುರಕ್ಕೆ ಹೋದ ಹಾಗೆ

(iii) ತಿಪ್ಪಣ್ಣಯ್ಯ ಕರೂರಿಗೆ ಹೋದ ಹಾಗೆ

(iv) ಮಾರಾಜೋಯಿ (ಮಾರುಬಯ್ಯ) ಮದ್ದೂರಿಗೆ ಹೋದ ಹಾಗೆ

(v) ವೆಂ (ಯೆಂ) ಕು ಪಣಂ (ಪೆಡಂ) ಬೂರಿಗೆ ಹೋದ ಹಾಗೆ

(vi) ಸೋದೆಗೆ ಪ್ರಭು ಹೋದ ಹಾಗೆ

(vii) ಸಣ್ಣ ಮಲ್ಲ ಸಂತೆಗೋದಂಗೆ

(viii) ಮಾರುಬಯ್ಯ ಮದ್ದೂರಿಗೆ ಹೋದ್ಹಾಗೆ

೧೨೭೩೨ ಸನ್ನೆ ಕಾಣದ ಮುಕ್ಕನ್ನ ಸಂಜೆಗೆ ಬಾರೊ ಅಂದ್ರೆ ಮಧ್ಯಾಹ್ನಕ್ಕೆ ಮುಂದಾಗಿಯೇ ಬಂದು ಕುಳಿತನಂತೆ

೧೨೭೩೩ [1]ಸನ್ನೆಗೇಡಿ ಕೈಲಿ ಸುಣ್ಣ ಕೊಟ್ಟರೆ ಬೆಣ್ಣೆ ಅಂತ ಬಾಯಿಗೆ ಹೊಕೊಳ್ತ

೧೨೭೩೪ ಸೆಕೆ ಹೆಚ್ಚಾಯಿತು ಅಂತ ಕಂಬಳಿ ಹೊದ್ದುಕೊಂಡ

೧೨೭೩೫ ಸೆಟ್ಟಿ ಹೆಡ್ಡ ನಾ ಜಾಣ

೧೨೭೩೬ ಸೋರುವ ಸೂರಿಗೆ ಸೀರೆ ಕಟ್ಟಿದ ಹಾಗೆ

೧೨೭೩೭ ಹೆಡ್ಡನಾದರೂ ಒಡ್ಡನಾಗಿರಬೇಕು

೧೨೭೩೮ ಹೆಡ್ಡನಾದರೆ ಬಹಳ ಗಡ್ಡವನಿರಿಸಿಕೊಂಡರೇನು ?

೧೨೭೩೯ 'ಹೆಡ್ಡನಿಗೆ ಹೆಣ್ಣು ಯಾರು ಕೊಟ್ಟಾರು' ಅಂದ್ರೆ 'ನಮ್ಮ ದೊಡ್ಡಪ್ಪನ ಮನೇಲವೆ ನಾಲ್ಕೈದು' ಅಂದನಂತೆ

೧೨೭೪೦ ಹೇಳ್ತಾ ಹೇಳ್ತಾ ಹೆಡ್ಡನೇ ಆದ

ಮಳ್ಳಿ

೧೨೭೪೧ [2]ಅಣೆ ಜಾಣೆ ಅಣೆ ಜಾಣೆ ! ಅಕಳಿಗೆಷ್ಟೆ ಪೊಲೆ ?' ಅಂದ್ರೆ 'ಮೂರು ಮತ್ತೊಂದು' ಅಂದ್ಲು

---

1 ಸುಳಿವುಗೇಡಿಯು ಕೈಗೆ ಬೆರಣೆ ಕೊಟ್ಟರೆ ಬೆಣ್ಣೆ ಅಂತ ಬಾಯಿಗೆ ಹಾಕಿಕೊಂಡನಂತೆ

2 (i) 'ಮಳ್ಳಿ ಮಳ್ಳಿ ! ಮಂಚಕ್ಕೆಷ್ಟು ಕಾಲು ?' ಅಂದ್ರೆ 'ಮೂರು ಮತ್ತೊಂದು ಕಣ್ಮಾವಯ್ಯ' ಅಂದ್ಲು

(ii) ಮರಳಿ ಮರಳಿ ಮಂಚಕ್ಕೆ ಕಾಲೆಷ್ಟು ಅಂತ ಕೇಳಿದ

೧೨೭೪೨ [1]ಅಲಬೆಲೆ (ಅಲಬೇಲಿ) ಚೆನ್ನಿ ! (ಹಲಮಾಲಿ, ಹಲಮಾಲಿ
ಎಲೆ ಎಲ್ಲಿ ಮಡಗಿದ್ದೀ? ಅಂತ ಕೇಳೋವತ್ಗೆ 'ಒ
ಹೋಯ್ತದೆ ಅಂತ ಒಲೆ ಸಂದೀಲಿ ಮಡಗಿವ್ನಿ" ಅಂದಳು

೧೨೭೪೩ ಅಂಗಣೆ ಮಿಂಗಣೆ ಮಾಯಾಂಗ್ನ !

೧೨೭೪೪ ಅಂಗ ಮಂಗಿ ಕೈಲಿ ಎರಡು ಅವರೆ ಕಾಳು ಕೊಟ್ರೆ ನುಂಗಲಾ
ಅವಳ ಮಿಂಡನ ಕೈಲಿ ಕೊಟ್ಟಂತೆ

೧೨೭೪೫ [2]ಅಂಗಿ ಮಂಗಿ ಕೈಲಿ ಕೊಟ್ಟು ಕೊಡೋವತ್ಗೆ 'ಯಾವ ಕಡೆ
ಕಡ್ಕೊಂಡು ತಿನ್ಲಿ ? ಅಂದಳಂತೆ

೧೨೭೪೬ ಆ ಮಳ್ಳಿ ಈ ಮಳ್ಳಿ ಮಾವನ ಗೆಣತಿ ಮಂಗಿ ಮಳ್ಳಿ

೧೨೭೪೭ [3]ಊರೆಲ್ಲ ಬಲ್ಲೆ, ಗಾಣಿಗ್ಗೇರಿ ಅರಿಯೆ

೧೨೭೪೮ ಏನೂ ಅರಿಯದ ಮಂಗಿ ಬತ್ತಾಳೆ, ಗ್ಯಾನ ಕೊಡು ನಡು
ಬೆಟ್ಟದಯ್ಯ

---

1 (i) 'ಕಾಮಬಿಲ್ಲಿ ಕಲ್ಲಪ್ಪನ ಮಡದಿ ! ಕಡುಬಿನ ಚಿಬ್ಲು ಎಲ್ಲಿಟ್ಟಿದ್ದೀ?' ಅಂದ್ರೆ '
ತಿಂತಾಳೆ ಅಂತ ಕತ್ತೆ ಕೊರಳಿಗೆ ಕಟ್ಟಿವ್ನಿ' ಅದ್ಲಂತೆ
(ii) 'ಕಾಜಗಾತಿ ಕಾಜಗಾತಿ! ಕಾಯಿ ತಾರೆ' ಅಂದ್ರೆ 'ಕಂಡ್‌ಗಿಂಡ್ಕೊಂಡಾರು ಅ
ಕಡಾಯದ ಸಂಧೀಲಿ ಮಡಗಿವ್ನಿ' ಅಂದಳಂತೆ
(iii) 'ಮಾತಿ ಮಾರಿಯ ಹೆಣ್ಣೆ ! ಹೂತಿ ಎಲ್ಲಿಟ್ಟಿದ್ದೀ?' ಅಂದ್ರೆ 'ಅರಿ
ಹೋದೀತು ಅಂತ ಅರಿವೆ ಗಂಟ್ನಲ್ಲಿ ಮಡಗಿವ್ನಿ' ಅಂದಳು
(iv) 'ಮುಂಚ್ಗಣ್ಣ ಮುಂಚ್ಗಣ್ಣ ! ಮುಂಚ್ಗಳ ಎಲ್ಲಿ ಮಡಗಿದ್ದೀ ?' ಅಂದೊ
'ಎತ್ತಾಗಿತ್ತಾಗೇನು ಅಂತ ಎತ್ತಿ ಕಾಲ್ದೇ ಕೀಲಿ ಮಡಗಿವ್ನಿ' ಅಂದಳಂತೆ
(v) 'ಹೆಗ್ಗೆ ಹೆಗ್ಗೆ ! ಎಣ್ಣೆ ತಾರೆ' ಅಂದ್ರೆ 'ಚೆಲ್ಲಿಗಿಲ್ಲಿ ಹೋದಾತು ಅಂತ ಎಕ್ಕ
ಸಂಧೀಲಿ ಮಡಗಿವ್ನಿ' ಅಂದಳು

2 'ಬಿಟ್ಟಿನ ಮುದ್ದೆ ಎತ್ತಲಾ ಕಡೆಯಿಂದ ಮುರೀಲಿ' ಅಂದನಂತೆ

3 (i) ಊರನೆಲ್ಲ ಉಳ್ದಿದ್ನಂತೆ, ಗಾಣಿಗ್ಗೇರಿ ಗುರುತರಿಯೆ ಅಂತಿದ್ನಂತೆ
(ii) ಊರೆಲ್ಲ 'ಊರ್ಫೇ' ಅಂತೀನಿ, ಗಾಣಿಗ್ಗೇರಿ ಗುರುತರಿಯೆ ಅಂದಂತೆ
(iii) ಊರೆಲ್ಲ ಹೋಗೋಳಂತೆ, ಗಾಣಿಗರ ತಟ್ಟಿ ಕುರು ಕಾಣಳಂತೆ
(iv) ಮನೆ ಬಲ್ಲೆ, ದಾರಿ ಅರಿಯೆ

೧೨೭೪೯ ಬೊಂಬೆಯಂತ ಮಳ್ಳಿ! ಬಸವನಂತ ಹಳ್ಳಿ! ಇಕ್ಕ್ಯಾದು (ಇಟ್ಟರೆ) ಕೊಳ್ಳಿ!

೧೨೭೫೦ ಬಳ್ಳಿ ಹಬ್ಬದಿರದು. ಮಳ್ಳಿ ತಬ್ಬದಿರಳು

೧೨೭೫೧ ಬೇತೂರಿ ಕಡೀತು ಅತ್ತೆ ಹುಚ

೧೨೭೫೨ ಮಳ್ ಕನಸು ಮುರಿದರೆ ಹೋಗಿ ಮಾದ್ಯಾಹದ ಹತ್ತಿರ ಮಲಗಿತ್ತಂತೆ (ಮದ್ಯಾಹ)

೧೨೭೫೩ ಮಳ್ಳಿ ಒಬ್ಬ ಮಗ್ನ ಹೆತ್ತು ಊರ ಗೌಡ್ನ ಹೆಸರು ಕರೆದಿದ್ದಂತೆ

೧೨೭೫೪ ಮಳ್ಳಿ ಕಂಡು ಮಳ್ಳಿ ದ್ಯಾಂ ದ್ಯಾಂ ಅಂತಿತ್ತಂತೆ

೧೨೭೫೫ [1]ಮಳ್ಳಿ ಕೈಯಾಗ ಕೊಳ್ಳಿ ಕೊಟ್ರೆ, ಅರಳಿ ಅಂಗಾಲ್ಯಾಗ ಇಟ್ಟು "ಉಧೋ" ಅಂತಿದ್ಲಂತೆ

೧೨೭೫೬ [2]'ಮಳ್ಳಿ ಮಳ್ಳಿ! ಎಷ್ಟಿಲ್ಲೀ?' ಅಂದ್ರೆ "ಸಾವಿನ ಮಗ್ಗುಲ್ಲಿ 'ಬಿಸಿಯೇರ್' ಅಂದ್ಲು

೧೨೭೫೭ ಮಂಗಿ ಮನೆ ಗಂಡ್ನ 'ಅಪ್ಪ' ಅಂದ್ಲು

೧೨೭೫೮ ಮಂಗೀನ ಮದ್ವೆಗೆ ಕಳಿಸಿದ್ರೆ, ಓಲಗದವರೆಲ್ಲ ಓಡ್ಯಾಡಿಸಿದ್ರು

೧೨೭೫೯ ಮಂಗಿ (ಮಳ್ಳಿ) ಅಂದ ಕೊಂತಿ ಒಂದು ಸಾವಿರದಂಥ ಮಡಕೆ ಒಡೆದೋಕೆ

೧೨೭೬೦ ಮಂಗಿ ಸುಟ್ಟಳು ಬೆಣ್ಣೆ ರೊಟ್ಟ್ಯಾ, ಊರಿಗೆಲ್ಲ ಬಿಟ್ಟು (ಊರೆಲ್ಲ ಕೊಂಡೋಯ್ತು) ಊರ್ಮ್ಯಂದಕ್ಕ

---

1 ಅಲ್ಲೀ ಮಿಮ್ಯಗೆಲ್ಲ ಅಡಕೆ ಮಿಡ್ಯಾಗ ಮಿಡುಕುವಳಂತೆ

2 (i) 'ಮಂಗಿ, ಎಲ್ಲ್ಯಾಗಿದ್ದೆ?' ಅಂದ್ರೆ, 'ಮಮ್ಮೈತೆ ಕಾಯ ಕೊಳ್ಳದೆ ಅಂತ ಸಮ್ಮುದ್ದ ನಂತೇಲಿ ಮಿಲ್ಲಿದ್ದೆ' ಅನ್ನುತ್ತೆ

(ii) [illegible]

೧೨೭೬೧ ಸಂತೇಗೋಗ್ತೀನಿ ಬೀದೀಲಿ ಯಾರಾದ್ರೂ ಇದ್ದಾರ ನೋಡಿ ಅಂದ್ನಂತೆ

೧೨೭೬೨ ಹನ್ನೆರಡು ಮಕ್ಕಳ ಹೆತ್ತ ತಾಯಿ: 'ಯಾವ ಕಡೆ ಹಸೆ ಮೇಲೆ ಕೂತ್ಕಳ್ಲಿ ?' ಅಂದ್ಲಂತೆ

ಮೆತ್ತಾನಿ ಮನುಷ್ಯ

೧೨೭೬೩ [1]'ಗಲಗಾ' ಅನ್ನೋ ಅರಳಿ ಮರ ನಂಬಬಹುದು. ಮೆತ್ತಗಿರುವ ಕಳ್ಳಿಮರ ನಂಬಬಾರದು

೧೨೭೬೪ ಎಲ್ಲಾ ಜಾಣ, ತುಸ ಕೋಣ

೧೨೭೬೫ ಏನೂ ಅರಿಯದ ಹ್ಯಾಪನಂಗಿದ್ದಿ, ಒಳಗೆ ಮಡಗಿದ್ದಿ ಪಾವು ಮರಿಯ!

೧೨೭೬೬ ಕುಂತರೆ ಕುರುಬ, ನಿಂತರೆ ಕಿರುಬ

೧೨೭೬೭ ಗಲಗಲ ಅಂದವರು ಗಂಟೆ ನುಂಗಿದರೆ, ಗುನುಗುನು ಅಂದವರು ಗುಮ್ಮಿ ನುಂಗಿದರು

೧೨೭೬೮ ನಸುಗುನ್ನಿ ಬೀಜ

೧೨೭೬೯ ನೋಡಲಿಕ್ಕೆ ತಬ್ಬಲಿ, ಹಾರಿದರೆ ಹೆಬ್ಬುಲಿ

೧೨೭೭೦ ಬಾಯ್ಗೆ ಬೆಳ್ಳಾಕಿದ್ರೆ ಕಚ್ಚದಿಲ್ಲ, ಶಟ್ಟಳ್ಳಿಶರಣ

೧೨೭೭೧ [2]ಮಾತಾಡದೆ ಮನೆ ತೆಗೀತಾನೆ

೧೨೭೭೨ ಮೂದಿತಾನೆ ದಿಲ್ ಹುಷಾರ್

೧೨೭೭೩ [3]ಮೂಸುಕೋತಿ ಮೂಸಿ ಮೂರು ಗಾವುದ ಹಾಳು

---

1 'ಗಲಗಲ' ಅನ್ನುವ ಅರಳೀಮರದ ತಾವಿರಬಹುದು, ಮಳ್ಳಿ ಹಾಗಿರುವ ಕಳ್ಳಿಮರದ ತಾವಿರಬಾರದು

2 ಮಾತಾಡಲ್ಲ, ಆದರೆ ಮನೆ ಉಳಿಯಲ್ಲ

3 ಮೂಸಿದರೆ ಮೂರು ಗಾವುದ ಹಾಳು

೧೨೭೭೪ ಮೆಲ್ಲಗಿರುವ ಕಳ್ಳಿಮರ ಸರಕ್ಕನೆ ಸುರುಕುತ್ತದೆ

೧೨೭೭೫ ಮೆಲ್ಲಗಿರೋ ನೀರು ಕಲ್ಲು ಕೊರೆಯಿತಂ

೧೨೭೭೬ ಮೆಲ್ಲಗೆ ಬಂದ ಮೆತ್ತಾನಿ ಕಳ್ಳ

೧೨೭೭೭ ಮೆಲ್ಲಗಿರೋರ್ನ್ಯಾವೆ ಇರೋದು ಮೆಂತ್ಯದ ಗಂಟು

೧೨೭೭೮ ಸುಮ್ಮನಿದ್ದವ ಗುಮ್ಮನ್ ಕಳ್ಳ

೧೨೭೭೯ ಸುಮ್ಮನಿದ್ದವ ಸುರಲೋಕ ನುಂಗಿದ, ಗಳಿ ಬಿಳಿ ಮಾಡುವವ ಗಳಗೆ ನುಂಗಿದ

ಮಡೆಯು ವಸ್ತುವಿನ ಮಹತ್ವವರಿಯು

೧೨೭೮೦ ಆಡು ಬಲ್ಲಾ ಅವಲಕ್ಕಿ ರುಚಿಯು ?

೧೨೭೮೧ ಒಡ್ಡನಿಗೇನು ಗೊತ್ತು ಲಡ್ಡುವಿನ ರುಚಿ ?

೧೨೭೮೨ ಕಣ್ಣ ಕಾಡಿಗೆ ಅರಿಯುವುದುಂಟೆ ?

೧೨೭೮೩ [1]ಕತ್ತೆ ಖಂಡುಗ (ಖಂಡಿ) ಹೊತ್ತರೆ ಸೆಟ್ಟಿತನ (ಬತ್ತದ ಧಾರಣೆ) ಬಲ್ಲುದೆ ?

೧೨೭೮೪ ಕತ್ತೆ ಬಲ್ಲುದೆ ಬತ್ತದ ಗುಣವ, ನಾಯಿ ಬಲ್ಲುದೆ (ನಾಗರ ಹಬ್ಬವ ?) ದೇವರಗುಣವ?

೧೨೭೮೫ ಕತ್ತೆ ಮೊಸರನ್ನದ ರುಚಿ ಬಲ್ಲುದೆ ?

೧೨೭೮೬ ಕತ್ತೆಗೇಕೆ ಕಬ್ಬಿನಗದ್ದೆ, ಗೊಬ್ಬರದ ಗುಂಡಿ ಇರುವಾಗ

೧೨೭೮೭ ಕತ್ತೆಗೇಕೆ ಕಾಲುಕಡಗ ?

---

1 (i) ಕತ್ತೆಖಂಡುಗ ಹೊತ್ತರೆ ಸೆಟ್ಟಿ ಎನಿಸಿಕೊಳ್ಳುವುದಿಲ್ಲ
(ii) ಕತ್ತೆಯೂ ಹೊರುತ್ತೆ ಮೂರು ಮಣವ
(iii) ಕತ್ತೆ ಬಲ್ಲುದೆ ಬತ್ತದ (ಸುಗ್ಗಿಯ?) ಗುಣವ ?
(iv) ಕತ್ತೆಗೇಕೆ ಬತ್ತದ ಸುಗ್ಗಿ ?

೧೨೭೮೮ ಕತ್ತೆಗೆ ಭಾಗ್ಯ ಬಂದರೆ ಕಸ್ತೂರಿ (ಗುಣ ಬಲ್ಲುದೆ?) ಹೊರುತ್ತೆ ?

೧೨೭೮೯ ಕತ್ತೆ ಕಸ್ತೂರಿ ಹೊತ್ತ ಹಾಗೆ

೧೨೭೯೦ ಕತ್ತೆಗೇಕೆ ಮುಸುರೆ ?

೧೨೭೯೧ ಕತ್ತೆಗೇನು ಗೊತ್ತು ಕಸ್ತೂರಿ ಪರಿಮಳ?

೧೨೭೯೨ [1]ಕತ್ತೆಯೇನು ಬಲ್ಲು ಹತ್ತಿ ಕಾಳಿನ ಸವಿ ?

೧೨೭೯೩ ಕಬ್ಬಿನ ಗಾಣ ಕಬ್ಬಿನ (ಹಾಲಿನ) ರುಚಿ ಬಲ್ಲುದೆ ?

೧೨೭೯೪ ಕಾಡು ಕೋಳಿಗೆ (ಸಂಕ್ರಾಂತಿಯೇ?) ಮಕರ ಸಂಕ್ರಮಣವೆ?

೧೨೭೯೫ [2]ಕುರುಡನ ಕೈಗೆ ಕನ್ನಡಿ ಕೊಟ್ಟ ಹಾಗೆ

೧೨೭೯೬ ಕುರುಡ ದೂಮಗೆ ಶ್ರೀಮುದ್ರೆ ಸಿಕ್ಕಿದ ಹಾಗೆ

೧೨೭೯೭ [3]ಕುರುಬ ಬಲ್ಲನೆ ಮರುಗದ ಗಮನವ ?

೧೨೭೯೮ ಕುರುಬನಿಗೆ ಶಿವರಾತ್ರಿಯೆ ?

೧೨೭೯೯ ಕುರುಬರ ಹಳ್ಳಿಯಲ್ಲಿ ಗಾಜೇ ಮಾಣಿಕ್ಯ

---

1 (i) ಕತ್ತೆಗೆ ಹತ್ತಿಕಾಳು ಇಟ್ಟಂತೆಯೇ ಸರಿ
(ii) ಕತ್ತೆಗೇಕೆ ಹತ್ತಿಕಾಳಿನ ತೊಕ್ಕು ?

2 ಕುರುಡ ಕನ್ನಡಿ ಹಳಿದ ಹಾಗೆ

3 (i) ಕುರುಬನಿಗೆ ಮರುಗ ಕೊಡೋವತ್ಗೆ ಮೂಸಿ ನೋಡಿ ತಿಕ್ಕೆ ಹೆಟ್ಟು ಕೋಡನಂತೆ
(ii) ಕುರುಬನಿಗೆ ಹೂವು ಕೊಟ್ಟರೆ ಮೂಸಿ ನೋಡಿ ಕುಂಡೀಲಿಟ್ಟುಕೊಂಡ
(iii) ಮಡೆಯನಿಗ ಮಲ್ಲಿಗೆ ಕೊಟ್ಟರೆ ಬುಡದಲ್ಲಿಟ್ಟುಕೊಂಡನಂತೆ
(iv) ಮೂಢನಿಗೆ ಮುಡಿವಾಳದ ಬೇರು ಕೊಟ್ಟರೆ ಮೂಸಿ ನೋಡಿ ಬಿಸಾಡಿದ
(v) ಒಡ್ಡನಿಗೆ ಮುಡಿವಾಳ ಕೊಡೋಪ್ಪೊತ್ಗೆ ಗುದ್ದಲಿ ಕಾನಿಗೆ ಸಿಗಾಕಿದನಂತೆ
(vi) ಕೋತಿ ಕೈಯಲ್ಲಿ ಸಂಪಗೆ ಹೂವು ಕೊಟ್ಟರೆ ಮೂಸಿ ನೋಡಿ ತಿಕದಡಿ ಇಟ್ಟುಕೊಂಡಿತು
(vii) ಕೋತಿ ಕೈಲಿ ಹೂ ಮಾಲೆ ಕೊಟ್ಟರೆ ಮೂಸಿ ನೋಡಿ ಎಸೆದಿತ್ತು

೧೨೮೦೦ ಕೋಡಗ ಬಲ್ಲುದೇ ಸೆಳೆ ಮಂಚದ ಸುಖವ ?

೧೨೮೦೧ [1]ಕೋತಿ ಕೈಲಿ ಮುತ್ತಿನ ಸರ ಕೊಟ್ಟ ಹಾಗೆ

೧೨೮೦೨ ಗಂಧವ ಕೊರಡು ಸಮಗಾರನ ಕೈಲಿ ಸಿಕ್ಕಿದ ಹಾಗೆ

೧೨೮೦೩ ಗೀತದ ಸೊಬಗ ವಾತ ರೋಗಿ ಬಲ್ಲನೆ ?

೧೨೮೦೪ [2]ಚಿನ್ನಿವಾರನ ಮನೆ ನಾಯಾದರೆ ನಾಣ್ಯದ ನೋಟ ಬಲ್ಲಳೆ ?

೧೨೮೦೫ [3]ತಿಪ್ಪೆ ಮೇಲೆ ಕೂರುವವನಿಗೆ ತಕ್ಕ ಯಾಕೆ ?

೧೨೮೦೬ ತೂಕದ ಗರುಡನ (ಗುರುತ)ನ್ನು ಸೂಕರ ಬಲ್ಲುದೆ ?

೧೨೮೦೭ ತೈಲದ ಗುಣ ನವಿಲು ತಿಳಿದೀತೆ ?

೧೨೮೦೮ ದಡ್ಡನಿಗೇನು ಗೊತ್ತು ದುಡ್ಡಿನ ಬೆಲೆ?

೧೨೮೦೯ ಧ್ವಜದ (ಗುರುತು) ಗೌರವ ಗಜಕ್ಕೇನು ಗೊತ್ತು ?

೧೨೮೧೦ ನಾಕದ ಸುಖ ನಾಯಿಗೇನು ಗೊತ್ತು?

೧೨೮೧೧ ನಾಕದ ಸೊಗಸು (ಸುಖ) ಸೂಕರನಿಗೆ ತಿಳಿದೀತೆ

೧೨೮೧೨ ನಾಗರ ಕಲ್ಲಿನ ಬೆಲೆ ನಾಯಿಗೇನು ಗೊತ್ತು ?

೧೨೮೧೩ ನಾಗಸ್ವರ ಊದಿದರೆ ನಾಯಿ ಆದೀತೆ ?

೧೨೮೧೪ ನಾಯಿ ಬಲ್ಲುದೆ ದೇವರ ಜಗುಲಿಯ ?

೧೨೮೧೫ ನಾಯಿ ಬಲ್ಲುದೆ ಪ್ರೇಮ ಎಂಬುದ ?

೧೨೮೧೬ ನಾಯಿಗೆ ನಾರಂಗದ ಉಪ್ಪಿನಕಾಯಿ ?

---

1 ಕೋತಿ ಬಲ್ಲುದೆ ಮುತ್ತಿನ ಬೆಲೆಯ ?

2 ಅಣಕಾರನ ಮನೆ ತೊತ್ತು ನಾಣ್ಯದ ನೋಟ ಬಲ್ಲಳೆ ?

3 ಶಿವಾಸಿ ಯಾತಕ್ಕೆ ತಿಪ್ಪೇ ಮೇಲಣವಗೆ

೧೨೮೧೭ ನಾಯಿಗೇಕೆ ಗಸಗಸೆ ಪಾಯಸ ?

೧೨೮೧೮ ಪರಡಿ (ಪಾಯಸದ) ರುಚಿ ಕರಡಿಗೇನು ಗೊತ್ತು ?

೧೨೮೧೯ ಪಾಮರ ಕಾವ್ಯ ಹಳಿದ ಹಾಗೆ

೧೨೮೨೦ [1]ಪಂಕಜದ ಯೋಗ್ಯತೆ ಮಂಕಿಗೆ ತಿಳಿದೀತೆ ?

೧೨೮೨೧ ಬಸಳೆ ಸೊಪ್ಪು ಬಸವನಿಗೇಕೆ ?

೧೨೮೨೨ ಬಂಗಾರ ತೂಗಿದ ಬಟ್ಟು ಬಂಗಾರದ ಬೆಲೆ ಬಲ್ಲುದೆ ?

೧೨೮೨೩ ಬಿನ್ನಾರಿ ಕೈಲಿ ಬೆಳ್ಳಿ ಕೊಡೋವತ್ತ್ಗೆ ಕನ್ನರಿಸಿ ನೋಡಿ ಎಸೆದಳಂತೆ

೧೨೮೨೪ ವಂಧ್ಯಾಸ್ತ್ರೀ ತಿಳಿಯುವಳೆ ಗರ್ಭಿಣಿಯ ನೋವ ಬಲ್ಲಳೆ ?

೧೨೮೨೫ [2]ಮಂಗನ ಕೈಲಿ ಮಾಣಿಕ್ಯ ಕೊಟ್ಟರೆ ಅದರ ಇಂಗಿತ ಬಲ್ಲುದ ?

೧೨೮೨೬ ಮಂಗಳ ಗಾನ (ಮಂಗನಿಗಾಗದೆ ? ಮಂಗನಿಗಾದೀತೆ ?)
ಮಂಗ ಬಲ್ಲುದೆ ?

೧೨೮೨೭ ಮೀನು ಬಲ್ಲದೆ ತಾನಿರುವ ನೀರು ಸಪ್ಪಳು ಸ್ವಾದ ಅನ್ನುವುದನ್ನು ?

೧೨೮೨೮ ಮುತ್ತಿನ ಚೆಲುವು (ಯೋಗ್ಯತೆ) ಕತ್ತೆಗೆ ತಿಳಿದೀತೆ ?

೧೨೮೨೯ ಯಳಂದೂರಿನ ಕಪಿಯಾದರೆ ಎಳನೀರಿನ ಸವಿ ಗೊತ್ತೆ ?

೧೨೮೩೦ [3]ವೃಕ್ಷ ದೊಡ್ಡದು ಅಂತ ಪಕ್ಷಿ ಬಲ್ಲುದೆ ?

೧೨೮೩೧ [4]ಶ್ವಾನನ ಮುಂದೆ ಗಾನ ಮಾಡಿದ ಹಾಗೆ

೧೨೮೩೨ ಹಂಚಿನಲ್ಲಿ ಉಣ್ಣೋನಿಗೆ ಹರಿವಾಣ ಯಾಕೆ ?

---

1 ಪಂಕಜವಾದರೆ ಮಂಕನಿಗೆ ದೊಡ್ಡದೇ ?

2 ಕಾಡ ಕಪಿ ಬಲ್ಲದೆ ಮಾಣಿಕ್ಯದ ಬೆಲೆಯ ?

3 ವೃಕ್ಷ ದೊಡ್ಡದಾದರೂ ಪಕ್ಷಿ ಹೇಲದೆ ಬಿಡದು

4 (i) ಶ್ವಾನನ ಮುಂದೆ ಗಾನವೇಣು (ವೇ)
(ii) ಗಾನದ ಸೊಬಗ ಶ್ವಾನ ಬಲ್ಲುದೆ ?

೧೨೮೩೩ ಹಂದಿ ಬಲ್ದೆ ಗಂಧ ಪರಸಾದವ ?

೧೨೮೩೪ ಹಂದಿ ಮುಂದೆ ಮುತ್ತು ಚೆಲ್ಲಿದರೇನು ?

೧೨೮೩೫ ಹಾರಾಡುವ ಹಕ್ಕಿ ಸೂರ್ಯನ ನಿಲುವು ಬಲ್ದೇ ?

೧೨೮೩೬ ಹುರಿಯುವ ಹಂಚು ಅವಲಕ್ಕಿ ರುಚಿ ಹೇಗೆ ತಿಳಿದೀತು ?

೧೨೮೩೭ ಹುಲ್ಲು ಒರೆಯುವವಳಿಗ್ಯಾಕೆ ಹೂವಿನ ದಂಡೆ ?

೧೨೮೩೮ ಹೇನಿಗೆ ಮುಡಿದ ಹೂವಿನ ಪರಿಮಳ ಗೊತ್ತೆ ?

೧೨೮೩೯ ಹೊಲೆಯನಿಗೆ ಒಲ್ಲಿ ಕೊಟ್ಟರೆ ಕಲ್ಲು ಕಟ್ಟಿ ಹರಿದ

೧೨೮೪೦ ಹೊಂಗೆಜ್ಜೆ ಮಂಗನಿಗ್ಯಾಕೆ ?

ಮಾನ

೧೨೮೪೧ ಅರಸನ ಮಾನ ಅರಸನಿಗೆ, ಅಗಸನ ಮಾನ ಅಗಸನಿಗೆ

೧೨೮೪೨ ಅಂಜನ, ಅನುಮಾನ, ಅವಮಾನ-ಇವು ತಾಗಿದವನ ಕಣ್ಣಿಗೆ ಪ್ರಪಂಚದಲ್ಲಿ ಇಲ್ಲದ್ದೇ ಕಾಣಿಸುತ್ತೆ

೧೨೮೪೩ ಧನಕ್ಕಿಂತ ಮಾನವೇ ಮಿಗಿಲು, ಹಣಕ್ಕಿಂತ ಹೆಸರೇ ಹಸನು

೧೨೮೪೪ *ಪ್ರಾಣ ಬಿಟ್ಟು ಮಾನ ಕಾಯಿ

೧೨೮೪೫ ಮನೆಗಿಂತ ಮಾನ ದೊಡ್ಡದು

೧೨೮೪೬ ಮಾನ ಕೊಟ್ಟರೂ ಮಾರೇಲಿ ಕಿಡಬೇಕು

೧೨೮೪೭ ಮಾನಕ್ಕೆ ಹಾನಿ ಇಲ್ಲದ ತಾಣದಲ್ಲಿರಬೇಕು

೧೨೮೪೮ ಮಾನಗೆಟ್ಟು ಮನೆಯಲ್ಲಿರಬಾರದಂತೆ

೧೨೮೪೯ ಮಾನ ಬೇಕಾದರೆ ಮೌನವಾಗಿರಬೇಕು

---

* ಪ್ರಾಣ ಹೋದ್ರೂ ಮಾನ ಬಿಡಬಾರ್ದು (ಪ್ರಾಣ ಬಿಟ್ಟರೂ ಮಾನ ಬಿಡಬಾರದು)

೧೨೮೫೦ ಮಾನವನ್ನೇ ಮರೆತ ಮಹಾತಾಯಿಗೆ ಸೆರಗಿನ ನೆನಪು ಯಾಕೆ ?

೧೨೮೫೧ ಮಾನವಿಲ್ಲದವನು ಶ್ವಾನಕ್ಕೆ ಸಮಾನ

೧೨೮೫೨ ಮಾನ ಹೋದ ಮೇಲೆ ಮರಣವಾದ ಹಾಗೆ

೧೨೮೫೩ ಮೂಗು ಮೇಲು ಮಾಡಿಕೊಂಡು ನಡೆ

೧೨೮೫೪ ಶಾನುಭೋಗರ ಗುಣ ಲೆಕ್ಕದಲ್ಲಿ ನೋಡು, ಮಾನವಂತರ ಗುಣ ನಡತೆಯಲ್ಲಿ ನೋಡು

೧೨೮೫೫ ಬಿಮಾರದ ಗಂಡ್ಸಿಗೇ ಮಾನ ಅನ್ನೋದು ?

೧೨೮೫೬ ಸ್ಥಾನ ತಪ್ಪಿದರೆ ಮಾನ ತಪ್ಪುವುದು

೧೨೮೫೭ ಸ್ಥಾನವಿಲ್ಲದವರಿಗೆ ಮಾನವೆಲ್ಲಿ ?

ತಾನಾಗಿ ಅಪಮಾನಪಡುವಿಕೆ

೧೨೮೫೮ ಅಭಿಮಾನ ಹೀಗಿದೋನಿಗೆ ಅಪಮಾನವಾದಂತೆ

೧೨೮೫೯ ಅಲ್ಲಿ ಬಿಟ್ಟು ಇಲ್ಲಿ ಬಿಟ್ಟು ಈಚಲಮರದ ಬುಡದಲ್ಲಿ ಹೋಗಿ ಕುಳಿತ

೧೨೮೬೦ ಆನೆ ಚರ್ಮ ಹೊದ್ದು ನಾಯಿಯಂತೆ ಬಗುಳೋದೆ ?

೧೨೮೬೧ ಆನೆ ಬಿಟ್ಟು ಕತ್ತೆ ಏರಿದಂತೆ

೧೨೮೬೨ ದೇಶಾವರ ಮಾಡಿ ಭೋಪ ಕಳಕೊಂಡ

೧೨೮೬೩ ನಾಗರಿಕನ ಮಾನ ನಾಡಿನಲ್ಲಿ ಹೋಯಿತು

೧೨೮೬೪ ನಿಷ್ಠುರಕಾತಿಯ ಮನೆಗೆ ಹೋಗಿ ನಿಂತಿದ್ದು ಬಂದೆ

೧೨೮೬೫ ನೂಕಿಸಿಕೊಂಡು ಹೋಗುವುದಕ್ಕಿಂತ ಮುಂಚೆ ಕಾಯೋದು ಲೇಸು

೧೨೮೬೬ ಪೋಷಣಕ್ಕೆ ಹೋಗಿ ಭೂಷಣ ಕಳಕೊಂಡ

೧೨೮೬೭ ಮಾನಿಷ್ಟರ ಮರೀಗೌಡರ ಮಗಳು ಕೋಟೆ ಕೆಳಕ್ಹೋಗಿ ಉಚ್ಚೆಹೊದ್ಲು

೧೨೮೬೮ *ಹರಕೆ ಹೇಳಿ ಕಳುಹಿಸಿದಾಗ ಬರಲಿಲ್ಲ, ಹಜಾಮನ ಕಳಿಸಿದರೆ ಬಂದನಂತೆ

೧೨೮೬೯ ಹಳ್ಳಿ ಹುಡುಗನ ಮಾನ ದಿಳ್ಳೀಲಿ ಹೋಯ್ತು

೧೨೮೭೦ ಹಿರಿಯತನ ಕೊಟ್ಟು ಕಿರಿಯತನ (ತಕೊಂಡ) ಯಾರು ಬಯಸಿಯಾರು ?

ಅವಮಾನಪಡಿಸುವುದು

೧೨೮೭೧ ಅಭಿಮಾನಕ್ಕೆ ಅವಮಾನ ಕೂಡದು, ಅನಿಷ್ಟಕ್ಕೆ ಆಶ್ರಯ ಕೂಡದು

೧೨೮೭೨ ಗರತಿ ಸೀರೆ ಬೀದೀಲಿ ಅಳಿದ ಹಾಗೆ

೧೨೮೭೩ ‘ಬಾ’ ಅನ್ನಲಾರದೆ ಬಾಗಿಲು ಮುಚ್ಚಿದರು, ‘ಹೋಗು’ ಅನ್ನಲಾರದೆ ಹೊಗೆ ಹಾಕಿದರು

೧೨೮೭೪ ಶಾಲಿಸಲ್ಲಿ ಸುತ್ತಿ ಎಕ್ಕಡದಲ್ಲಿ ಹೊಡೆದ ಹಾಗೆ

ಅವಮಾನಿಸಿ ಗೌರವಿಸುವುದು

೧೨೮೭೫ ಅಂಗಳದಾಗೆ ಒದ್ದು ಅಡಿಗೆ ಮನೆಯಲ್ಲಿ ಕಾಲು ಹಿಡಿದ

೧೨೮೭೬ ಊರ ಮುಂದೆ ಎಕ್ಕಡದಲ್ಲಿ ಹೊಡೆದು ಒಲೆ ಮುಂದೆ ಕಾಲು ಕಟ್ಟಿಕೊಂಡ

೧೨೮೭೭ ಊರ ಮುಂದೆ ಒದ್ದು ದೇವರ (ದೈವದಲ್ಲಿ) ಮುಂದೆ ಕೈಕಾಲು ಕಟ್ಟಿಕೊಂಡರಂತೆ

---

* (i) ಛತ್ರ ಚಾಮರ ಒಯ್ದರೆ ಬರಲಿಲ್ಲ, ಕಸಬರಿಗೆ ಒಯ್ದರೆ ಬಂದ

(ii) ಹಲಿಗೆ ಕಾಳೆ ಕೊಟ್ಟು ಕರೆಸಿದರೆ ಬರಲಿಲ್ಲ, ಹೊಲೆಯನನ್ನು ಕಳಿಸಿದರೆ ಬಂದನಂತೆ

೧೨೮೭೮ ಕಿವಿ ಕಿತ್ತು ಕಿರುಬೆರಳಿಗೆ ಉಂಗುರ ಹಾಕಿದಂಗೆ

೧೨೮೭೯ ತುತ್ತು ತುತ್ತಿಗೂ ತುಪ್ಪ ಬಿಟ್ರೆ ಹೊಟ್ಟೆಲಿರೋ ಮರ್ವ ಹೋಗುತ್ಯೆ ?

೧೨೮೮೦ ಬೀದೀಲಿ ಪೊರಕೇಲಿ ಹೊಡೆದು ಮನೆಗೆ ಬಂದಾಗ ಮಣೆ ಹಾಕಿದರು

೧೨೮೮೧ ಬೀದೀಲಿ ಬೈದು ಕೋಣೇಲಿ ಸಂತೈಸಿದ

೧೨೮೮೨ ಮುಂದಲೆ ಕೊಯ್ದು ಮುಡಿಗೆ ಹೂವು ಮುಡಿಸಿದ ಹಾಗೆ

೧೨೮೮೩ ಮೂಗು ಕೊಯ್ದು ಮೊಗ್ಗಿನ ತುರಾಯಿ(ಕನ್ನಡಿ) ಕೊಟ್ಟಹಾಗೆ

೧೨೮೮೪ ಮೋರೆ ಉಗ್ದು ಟೌಕ ಕೊಟ್ರಂತೆ ಒರಸ್ಕೋಂತ

೧೨೮೮೫ ಹಿಂದೆ ಹೇಸರಗತ್ತೆ ಹತ್ತಿಸಿ ಮುಂದೆ ಜಾತಿ ಕುದುರೆ ನಿಲ್ಲಿಸಿದಂಗೆ

ಮಾನಗೇಡಿ

೧೨೮೮೬ ಅಡಿಕೆ (ಆನೆ)ಗೆ ಹೋದ ಮಾನ ಆನೆ ಕೊಟ್ಟರೂ ಬಾರದು

೧೨೮೮೭ ಅತ್ತೆ ಕತ್ತೆ ಏರಿದರೆ ಕೊಡೆ ಹಿಡಿಯುವುದಕ್ಕೆ ಮಾನಬಿಡಬೇಕು

೧೨೮೮೮ ಆಚೆ ಬೀದಿಯಲ್ಲಿ (ಉಗಿದರೆ) ಎಕ್ಕಡವಲ್ಲಿ ಹೊಡೆ (ಅಪಮಾನ) ವಾದರೆ ಈಚೆ ಬೀದಿಯಲ್ಲಿ ಹೊಸ ಆಳು

೧೨೮೮೯ ಇಸವಂದ ಅಡಿ ಇದ್ದ ಗೌರವವೂ ಹೋಯಿತು

೧೨೮೯೦ ಉಗಿದ್ರೂ ನನ್ನ ಉಣ್ಣೋಕೆ ಕರೆದ್ರು ಅಂದಂಗೆ

೧೨೮೯೧ ಊರೆಲ್ಲ ಉಗಿದರೂ ನನ್ನ ಮೂರೇಜನ ಉಗಿದರು ಅಂದಂತೆ

೧೨೮೯೨ ಎಕ್ಕಡದಲ್ಲಿ ಹೊಡೆದರೆ ಬಸವನ ಚಕ್ಕಳ ಅಂದನಂತೆ

೧೨೮೯೩ ಕಿತ್ತು ಹೋದವಳಿಗೆ ಮತ್ತೊಂದು ಬೀದಿ

೧೨೯೯೪ ಪಾಪಾಸಿನಲ್ಲಿ ಹೊಡೆಸಿಕೊಂಡು 'ಆ ಫ್ರೋಶನ ತಕೊಂಡೆ ಹೋಯ್ತು' ಅಂದ

೧೨೯೯೫ ಬಿಟ್ಟ ಹೆಂಡತಿ ಮನೆಗೆ ಹಿಟ್ಟಿಗೆ ಹೋದನಂತೆ

೧೨೯೯೬ ಮಾನಗೇಡಿ ಮುಂದೆ ಏನೂ ಹೇಳಬಾರದಂತೆ

೧೨೯೯೭ ಮಾನಹೀನಗೆ ಬೇರೆ ಮಾನಹಾನಿ ಆಗೋದುಂಟೆ ?

೧೨೯೯೮ ಮಾನಹೀನರ ಮುಖನೋಡೋಕಿಂತ ತನ್ನ ಕಾಲಡಿ ನೋಡಿ ನಡೆಯುವುದು ಸುಳಿಸೂತ್ರ

೧೨೯೯೯ ಮಾನ ಹೋದರೂ ಮರ್ಯಾದೆ ಹೋಗಲಿಲ್ಲ
ಮಾನಹೋದ್ರೆ ಬಳ್ಳ ತಕೊಂಡ್ರಾಯ್ತು ಅಂದ

೧೩೦೦೦ ಮಾನಿಷ್ಠರು ಮಾನಕ್ಕಂಜಿದರೆ, ಮಾನಗೇಡಿ 'ತನಗೆ ಅಂಜಿದರು' ಎಂದನಂತೆ

೧೩೦೦೧ ಮಾನಾವಮಾನ ಶಪ್ಪ ಸಮಾನ

೧೩೦೦೨ *ಮೂಗು ಕೊಯ್ದರೂ 'ಮೂಗಿನ ಸೊಳ್ಳೆ ಉಂಟಲ್ಲ !' ಅಂದಳು

೧೩೦೦೩ ಮೈ ಇದ್ದವರಿಗಷ್ಟೇ ಮಳೆಯ ಭಯ
ಮಾನವಿದ್ದವರಿಗಷ್ಟೇ ಕಳೆಯುವ ಭಯ

೧೩೦೦೪ ಲಂಗು ಲಗಾಮು ಲವಣ (ಲೌಡ) ಫಕೀರ

೧೩೦೦೫ ಲಂಗು ಹೋದ ಮುಕ್ಕನಿಗೆ 'ಲಿಂಗ ಕಟ್ಟಿದೋರ್ಯಾರು ?' ಅಂದರೆ 'ಮಂಗಳವಾರ ದಿನ ಮಸಿ ತಾರಿಸಿಕೊಂಡು ನಾನೇ ಕಟ್ಟಿಕೊಂಡೆ ಹೋಗು' ಅಂದ್ಲಂತೆ

೧೩೦೦೬ ಹಿಂದೆ ಹೇಸವ್ರು ಕಾಣವಂಗಿಲ್ಲ
ಮುಂದೆ ಉಗಿಯವ್ರು ಕಾಣುವಂಗಿಲ್ಲ

---

* ಮೂಗು ಹೋದರೂ 'ಮೂಗಿನ ತೂತಿದೆಯಲ್ಲ' ! ಅಂದ

ಮರ್ಯಾದೆ

೧೨೯೦೭ ಅಗ್ಗಳಿಕೆ ಇಲ್ಲದವ ಹಗ್ಗಕ್ಕಿಂತ ಕಡೆ

೧೨೯೦೮ ಇದ್ದ ಮರ್ಯಾದೆ ಮಧ್ಯಾಹ್ನಕ್ಕೆ ಹೋಯಿತು

೧೨೯೦೯ ಕಿಂಕಾಪಿನ ಬಟ್ಟೆ ಧರಿಸಿದ ಅಂತ ಕನಕಾಭಿಷೇಕ ಮಾಡ್ತಾರ್ಯೆ ?

೧೨೯೧೦ ತನ್ನ ಕಾಲಿಗೆ ತಾನೇ ಶರಣು ಮಾಡಿಕೊಂಡು ಹರಸಿಕೊಂಡ ಹಾಗೆ

೧೨೯೧೧ ತನ್ನ ಮರ್ಯಾದೆ ಕೆಟ್ಟವ ಪರರಿಗೆ ಮರ್ಯಾದೆ ಕೊಟ್ಟಾನೆ ?

೧೨೯೧೨ ತನ್ನ ಬೆನ್ನು ತಾನೇ ತಟ್ಟಿಕೊಂಡು ಮನ್ನಣೆ (ಮುನ್ನಡೆ) ಪಡೆಯುತಾರೆ

೧೨೯೧೩ ಬಹಿಷ್ಕಾರದವನಿಗೆ ನಮಸ್ಕಾರವೇಕೆ ?

೧೨೯೧೪ ಮನ್ನಣೆ ಸಿಕ್ಕದಿದ್ದರೆ ತಲ್ಲಣವೇಕೆ ?

೧೨೯೧೫ ಮನ್ನಿಸಿದವರಿಗೆ ಮನ್ನಣೆ

೧೨೯೧೬ ಮರ್ಯಾದೇನ ತಳಿಗೇಲಿ ಬಡಿಸಿಕೊಂಡು ತಿನ್ನೋಕಾಗೋಲ್ಲ

೧೨೯೧೭ ಮಾನ ಕೊಟ್ಟು ಮರ್ಯಾದೆ ತಗೋಬೇಕು

೧೨೯೧೮ ಮನೆಯವರಿಗೇ ಇಲ್ಲದ ಮರ್ಯಾದೆ ಮನೆಗೆ ಬೇಕೆ ?

೧೨೯೧೯ ಹಂದಿಯನ್ನು ಹಸುವಿನಂತೆ ಯಾರು ಪೂಜಿಸ್ತಾರೆ ?

ಆಶ್ರಯಿಸಿದಷ್ಟೂ ಬಿಗುಮಾನ

೧೨೯೨೦ 'ಅಪ್ಪ ಅಪ್ಪ !' ಅಂದರೆ ಅಪ್ಪನ ಜಂಬ (ಕುಂಡೆ) ಅಟ್ಟಕ್ಕೇರಿತ್ತು

೧೨೯೨೧ [1]'ಔಷಧಿಗೆ' ಅಂದರೆ ಅಗಸಗಿತ್ತಿ ಹೇಸಿಗೆ ಹಿಂಡು ಬಿದಿರೊಳಗೆ ಏರ್‍ತ್ತಂತೆ

೧೨೯೨೨ 'ನೀನೇಗತಿ ಹಣವು (ತಿಮ್ಮ)ಪ್ಪ! ಅಂದ್ರೆ
ಯಾತರ ಮೇಲಿಸದೊ ಪರಸಾದ ಕೊಟ್ಟನಂತೆ

೧೨೯೨೩ 'ನೀನೇ ಹರೇ ನಾರಾಯಣ!'
ಅಂದ್ರೆ ಗೋಪಾಳ ಬುಟ್ಟಿ ಕೈಲಿಟ್ಟ

೧೨೯೨೪ ಬನ್ನಿ ಅಂದ್ರೆ ಪನ್ನಿ ಹೆಚ್ಚು.

೧೨೯೨೫ 'ಸಾಣೆ (ಸಗಣಿ)ಗೆ ಕಾಲು ಮುಟ್ಟಿಸು' ಅಂದ್ರೆ
'ಆಚೆವರ್ಷದ ಹಾಗೆ ನಾಣ್ಯ ಕೂಡಬೇಕು' ಅಂದ ಹಾಗೆ

ತಪ್ಪು

೧೨೯೨೬ ಆನೆಯುಂಥಾದ್ದು ಮುಗ್ಗರಿಸುತ್ತೆ

೧೨೯೨೭ [2]ಆನೆಗೂ ಅಡಿ ತಪ್ಪೀತು

೧೨೯೨೮ ಉಪ್ಪುಂಡ ನಾಲಗೇಲಿ ತಪ್ಪು ಬಾರದೇ ಇರುತ್ಯೆ ?

೧೨೯೨೯ ಕೆಸರು ಕುಳಿದು ಕಾಲು ತೊಳೆದುಕೊಳ್ಳೋಕಿಂತ ತುಳೀದೇ ಇರೋದೇ ಮೇಲು

೧೨೯೩೦ ತನ್ನ ತಪ್ಪು ತಾನು ತಿಳ್ಕಂಡವನು ಇನ್ನೊಬ್ರ ತಪ್ಪು ಹೇಳ್ತಾನಾ?

---

1 (i) ನರಿ ಹಾಲು ಮದ್ದಿಗೆ ಬೇಕು ಅಂದರೆ ಅದು ಹೋಗಿ ಮುಳ್ಳಿನ ಮೇಲೆ ಕೂತಿತಂತೆ

(ii) ನರಿ ಹೇಲು ಪಾವನ ಅಂದರೆ ಅದು ಹೋಗಿ ದಿಂಡಿಗದ ಮೆಳೆ ಮೇಲೆ ಕೂತು ಕೊಂಡಿತಂತೆ

(iii) ಮೊಲದ ಹಾಲು ಮದ್ದಿಗೆ ಬೇಕೆಂದರೆ ಮುಳ್ಳಿನಲ್ಲಿ ಕುಳಿತು ಹಾಲು ಇಳಿಸಿತು

(iv) ಅಗಸಗಿತ್ತೀದು ಔಷ್ತಿಗ್ಬೇಕು ಅಂದ್ರೆ ಹಿಂಡಿಗದ ಮೆಳೆ ಮೇಲದೆ ಅದ್ಲಂತೆ

2 ಅಡಿ ತಪ್ಪಿಸಿ ಜಟ್ಟರೆ ಆನೆಯಾದರೂ ಉರುಳುವುದೇ ಸರಿ

೧೨೯೩೧ ತಪ್ಪಿದವರಿಗೆ (ಚಿಂದ ಕಾಣದು) ಒಪ್ಪು ಇಲ್ಲ

೧೨೯೩೨ ತಪ್ಪು ತೋರದ ಜನರಿಲ್ಲ, ಉಪ್ಪು ಸೇರದ ಪಲ್ಯವಿಲ್ಲ

೧೨೯೩೩ ತಪ್ಪು ಮಾಡದವರಿಲ್ಲ, ತುಪ್ಪ ಉಣದವರಿಲ್ಲ

೧೨೯೩೪ [1]ನಡೆಯೊ ಕಾಲು ಎಡವುತ್ತೆ

ನಡೆವನೆಡಹನಲ್ಲದೆ ಕೂತ ನಡಹುವನೇ–ರಾಘವಾಂಕ–
ಕಾವ್ಯ ಪ್ರಯೋಗ

೧೨೯೩೫ [2]ನಡೆಯುವವನು ಎಡವುತ್ತಾನೆ, ಬರೆಯು(ಓದು, ಆಡು)ವವ
ತಪ್ಪುತ್ತಾನೆ

೧೨೯೩೬ ಹುಡುಕುತಾ ಹೋದ್ರೆ ತಪ್ಪಿಗೆ ಕೊನೆ ಇದೆಯೇ ?

ದೊಡ್ಡವರ ತಪ್ಪು ಗಣನೆಗೆ ಬಾರದು

೧೨೯೩೭ [3]ಅತ್ತೆ ಒಡೆದ ಮಡಕೆ ಅಡಕಲಾಗೆ (ಮಾಳಿಗೇಲೆ) ಸೊಸೆ
ಒಡೆದ ಮಡಕೆ ಅಂಗಳದಾ (ಬಯಲಾ)ಗೆ

೧೨೯೩೮ ಅತ್ತೆ ಒಡೆದರೆ ಹಳೆ ಮಡಕೆ, ಸೊಸೆ ಒಡೆದರೆ (ಹಸಿ)
ಹೊಸ ಮಡಕೆ

೧೨೯೩೯ ಅತ್ತೆ ಮಾಡಿದ್ದು ಹಡದೆಗೆ, ಸೊಸ ಮಾಡಿದ್ದೇಕೆ ?

೧೨೯೪೦ ಅತ್ತೆ ಕತ್ತೆ ಹೋದರೂ ಚಿಂತೆಯಿಲ್ಲ,
ಸೊಸೆ ತಲೆ ಬಾಗಿಲಿಗೆ ಬಂದರೆ ಹೋಯಿತು

೧೨೯೪೧ ಅತ್ತೆ ಮಾಡಿದರೆ ವ್ರತ, ಸೊಸೆ ಮಾಡಿದರೆ ಹಾದರ

೧೨೯೪೨ ಅತ್ತೆ ಮಾಡಿದ್ದು ಉತ್ತಮ, ಸೊಸೆ ಮಾಡಿದ್ದು ಸಪ್ಪೆ

---

1 ನಡೆಯೋದ ಕಲಿತ ಮ್ಯಾಲೆ ಎಡಗೇ ಎಡಗ್ತಾನೆ

2 ಓದುವವಂಗೆ ತಪ್ಪು, ನೆಡಿಯುವಂಗೆ ಎಡವು (ಹವ್ಯಕ)

3 ಅತ್ತೆ ಒಡೆದ ಮಡಕೆ (ಕಂಚಿ, ಪ್ರಾತೆ)ಗೆ ಬೆಲೆಯಿಲ್ಲ

೧೨೯೪೩ ಉಪಾದ್ಯರು ಉಪ್ಪುಕದ್ವರು, ಉಪಾದ್ರ ಹೆಂಡಿತೀನ ಕಳ್ಳ ಕದ್ದ

೧೨೯೪೪ ಯಜಮಾನ ಜೋಳ (ಕೋಳಿ, ಕುರಿ) ಕದ್ದಹಾಗೆ

೧೨೯೪೫ *ಅತ್ತೆಗೆ ಅಗಸನ ಸ್ನೇಹ, ಸೊಸೆಗೆ ಬುದ್ಧಿಮಾತು

ತಿಳಿದೂ ತಪ್ಪು ಮಾಡುವುದು

೧೨೯೪೬ ಆನೆ ತನ್ನಮೇಲೆ ತಾನೇ ಮಣ್ಣು ಹಾಕಿಕೊಂಡ ಹಾಗೆ

೧೨೯೪೭ ಊರ ಮೇಲೆ ಹೋಗುವುದನ್ನು ಮೈಮೇಲೆ ಹಾಕಿಕೊಂಡಂತೆ

೧೨೯೪೮ ಕಾಸು ಕೊಟ್ಟು ರೋಗ ಕೊಂಡುಕೊಂಡಂತೆ

೧೨೯೪೯ ಕಾಸುಕೊಟ್ಟು ಚೇಳಿನಿಂದ ಕುಟುಕಿಸಿ ಕೊಂಡರು

೧೨೯೫೦ ಕಂಡೂ ಕಂಡೂ ಕೈ ಕೆಂಡದೊಳಗಿಡ್ತಾರ್ಯೆ ?

೧೨೯೫೧ ತನ್ನ ಕಾಲ ಮೇಲೆ ತಾನೇ ಕಲ್ಲು ಹಾಕಿ ಕೊಂಡಂತೆ

೧೨೯೫೨ ತನ್ನ ಗೋರಿ ತಾನೇ ಅಗೆದಂತೆ

೧೨೯೫೩ ತನ್ನ ಮನೆಗೆ ತಾನೇ ಬೆಂಕಿ ಹಾಕ್ಕೊಂಡ

೧೨೯೫೪ ತೆಂಗಿನ ಮರ ಏರಿ ಕೈಬಿಟ್ಟ ಹಾಗೆ

೧೨೯೫೫ ದಾರಿಯಲ್ಲಿ ಮನೆ ಮಾಡಿ ಯಾರೊಂದಿಗೆ ಹೇಳೋದು? ·

೧೨೯೫೬ ದಾರೀ ಮೇಲೆ ಹೋಗೋ ನಾಯೀನ ಕರೆದು ಮೈಮೇಲೆ ಹಾಕ್ಕೊಂಡ

೧೨೯೫೭ ದುಡ್ಡು ಕೊಟ್ಟು ದೈವ ಹಿಡಿಸಿಕೊಂಡರು

೧೨೯೫೮ ದುಡ್ಡು ಕೊಟ್ಟು ದುಃಖ ಕೊಂಡರು

---

* ಸೊಸೆಗೆ ಬುದ್ಧಿ ಹೇಳಿ ಅತ್ತೆ ಅಗಸನಲ್ಲಿ ಹೋದಳು

೧೨೯೫೯ ನಡು (ರಾತ್ರಿ) ಮನೆಯಲ್ಲಿ ಹೇಸಿಗೆ ಮಾಡಿ ನಾತ ಬರುತ್ತೆ ಅಂದ

೧೨೯೬೦ ನಡುಮರ ಹತ್ತಿ ಬುಡ ಕಡಿದ ಹಾಗೆ

೧೨೯೬೧ ನರಿ (ಕರಡಿ) ಕಕ್ಕೇ ಕಾಯಿ ತಿಂದ ಹಾಗೆ

೧೨೯೬೨ [1]ಕೂತ ಕೊಂಬೆ ಬುಡ ಕಡಿದ ಹಾಗೆ

೧೨೯೬೩ [2]ಬಲಗೈಲಿ ಹಾಲು ಅನ್ನ ಉಣ್ತಾ, ಎಡಗೈಲಿ
ಮಣ್ಣು ಹಾಕ್ಕೊಂಡ

೧೨೯೬೪ ಬಾಲನಾಗಿರುವಾಗ ಹೇಸಿಗೆ ತಿಂದರೆ ಪ್ರಾಯ ಬಂದ ಮೇಲೆ
ತಿನ್ನಬಹುದೇ?

೧೨೯೬೫ [3]ಬೀ (ಹಾ)ದಿ (ದಾರಿ)ಯಲ್ಲಿ ಹೋಗುವ ಮಾರಿಯನ್ನು
(ಮಗ್ಗುಲಲ್ಲಿ ಮಲಗಿಸಿ ಕೊಂಡ ಹಾಗೆ) ಊರ (ಮನೆ) ಹೊಕ್ಕು
ಹೋಗು ಅಂದಂತೆ

೧೨೯೬೬ [4]ಮರ ಕಡಿದು ಮೇಲೆ ಹಾಕ್ಕೊಂಡು
ಕಲ್ಲು ಕೆಡವಿ ಕಾಲ ಮೈಮೇಲೆ ಹಾಕ್ಕೊಂಡ

೧೨೯೬೭ ಮಾರಿ ಮನೆಗೆ ಹೋತ ಕನ್ನ ಕೊರೆದ ಹಾಗೆ

೧೨೯೬೮ ಮಿಂದು ಮಿಂದು ಬೂದಿಯಲ್ಲಿ ಹೊರಳಿದ ಹಾಗೆ

೧೨೯೬೯ ಮೂಲೇಲಿರೊ ಕೊಡಲಿಯನ್ನು ಕಾಲ ಮೇಲೆ ಹಾಕಿಕೊಂಡಂತೆ

೧೨೯೭೦ ಹಗ್ಗ ಕೊಟ್ಟು ಕೈ ಕಟ್ಟಿಸಿ (ಎಡಕಟ್ಟು ಆಕಿಸಿ)ಕೊಂಡ ಹಾಗೆ

೧೨೯೭೧ ಹಣ್ಣಿಗೆ ಹಾರಿ ಕಣ್ಣಿಗೆ ಮಣ್ಣು ಬಿತ್ತು

---

1 (i) ಕೊನೆ ಮೇಲೆ ನಿಂತು ಕಾಲು ಕಡಿದ ಹಾಗೆ
(ii) ತಲೆ ಹತ್ತಿ ಬುಡ ಕಡಿಯಬೇಡ

2 ಉಂಡು ಎಡಗೈಲಿ ಮಣ್ಣು ಹಾಕಿಕೊಂಡರು

3 ಊರಿಗೆ ಬಂದ ಮಾರಿಯನ್ನು ಮನೆ ಹೊಕ್ಕು ಹೋಗು ಅಂದಹಾಗೆ

4 ಮರ ಕಡಿದು ಮೈಮೇಲೆ ಬೀಳಿಸಿ ಕೊಂಡ ಹಾಗೆ

೧೨೯೭೨ ಹಾದಿಯಲ್ಲಿ ಕುಳಿತವರ ಹಣೆಯುಬರಹ ಒದೆಸಿಕೊಳ್ಳುವುದು

೧೨೯೭೩ ಹೆಬ್ಬಾಗಿಲಲ್ಲಿ ಹೆಂಡತಿ ಮಲಗಿಸಿ ದಾಟಿದವರ ಕೈಲಿ ದಂಡ ಹಾಕಿಸಿದರಂತೆ

ತಪ್ಪು ಒಬ್ಬನದು, ಆರೋಪ ಒಬ್ಬನ ಮೇಲೆ

೧೨೯೭೪ ಈ ಬೆಕ್ಕಲ್ಲ, ಆ ಬೆಕ್ಕು

೧೨೯೭೫ ಈ ಬೆಕ್ಕು ಆ ಹಾಲು ಕುಡಿಯುವುದೇ ?

೧೨೯೭೬ [1]ಕಪಿ ಮೊಸರನ್ನ ತಿಂದು ಮೇಕೆ ಬಾಯಿಗೆ ಒರಿಸಿತು

೧೨೯೭೭ [2]ತನ್ನ ಚಿನ್ನ ಕೆಟ್ಟದ್ದಾಗಿ ಅಕ್ಕಸಾಲೆಯನ್ನು ದೂರಿದ ಹಾಗೆ

೧೨೯೭೮ ತನ್ನ ತಪ್ಪಿಗೆ ಅನ್ಯರನ್ನು ಗುರಿಮಾಡೋದು ಯಾವ ನ್ಯಾಯ?

೧೨೯೭೯ ತನ್ನ ಹಲ್ಲು ತಾನು ಮುರುಕೊಂಡು ಅನ್ಯರ ಮೇಲೆ ದೂರು ಹೇಳಿದ

೧೨೯೮೦ ತಪ್ಪು ಹೊರಿಸಿದವನ ಒಪ್ಪುವರು ಯಾರು ?

೧೨೯೮೧ ತಾನು ಕಳ್ಳತನ ಮಾಡಿ ತಳವಾರ (ಕೊತ್ವಾಲ)ನನ್ನು ಬೈದನಂತೆ

೧೨೯೮೨ ತಾನು ಜಾರಿಬಿದ್ದು ಉಣ್ಣೆಯಂತಹ ನೆಲ ಅಂದ

೧೨೯೮೩ ಬತ್ತ ತಿಂದು ಹಾಕಿದಾತ ಬಲ್ಲಾಳ, ದೂರು ಅಣಿಲಿನ ಮೇಲೆ

---

1 (i) ಜಾಣ ಬೆಲ್ಲ ತಿಂದು ಹೆಡ್ಡನ ಬಾಯಿಗೆ ಒರಿಸಿದನಂತೆ
(ii) ದೊಡ್ಡವನು ತಿಂದು ಬಡವನ ಬಾಯಿಗೆ ಒರಸ್ತಾನೆ
(iii) ಬುದ್ಧಿವಂತ ಬೆಣ್ಣೆ ತಿಂದು ಅಪ್ರಬುದ್ಧ (ನಿದ್ದೆ ಬಂದವ)ನ ಬಾಯಿಗೆ ಒರಿಸಿದ
(iv) ಮಂಗ ಬೆಣ್ಣೆ ತಿಂದು ಆಡಿನ ಬಾಯಿಗೆ ಒರಿಸಿತು
(v) ಮಾಯಕಾತಿ ಮೊಸರು ಕುಡ್ದು ಮನಿಗಿದ್ದೋರ (ಮನಗಿದ್ದ ಗಂಡನ) ತುಟಿಗೆ ಸೀಟಿದಳಂತೆ

2 (i) ತನ್ನ ಚಿನ್ನ ಚೊಕ್ಕಟಪಾದರೆ ಚಿನಿವಾರಗೆ ದೂರೋದು ಯಾಕೆ ?
(ii) ನಮ್ಮ ಚಿನ್ನ ಚೆನ್ನಾಗಿದ್ರೆ ಒಪ್ಪಕ್ಕಾಕೆ ಅಕ್ಕಸಾಲೆ ಬಳಿ ಹೋಗಬೇಕು ?

೧೨೯೮೪ ಮಾಡಿದ ತಪ್ಪು ಕಂಬಳಿಯುವನದು
ದೂರುವುದು ದುಂಬಟಿಯುವನ್ನ

೧೨೯೮೫ ಮಾಡಿ (ದವರ) ರೋದು ನೋಡಿದರೆ ಮಾಡಿದವರು
ಯಾರು ಅಂತ ತಿಳಿಯುದೆ ?

೧೨೯೮೬ [1]ಮಾಡೋದು ಮಾಡಿಬಿಟ್ಟು, 'ನಾನ್ನಲ್ಲ ಗಾಂಧಾರಿ'ಅಂದ ಹಾಗೆ

೧೨೯೮೭ ರೊಟ್ಟಿ ಕೈತಪ್ಪಿ ಬಿದ್ದರೆ ನಾಯ ತಪ್ಪೇ ?

ತಪ್ಪು ಒಬ್ಬನದು, ಸಿಕ್ಕಿಬಿದ್ದವನೊಬ್ಬ

೧೨೯೮೮ ಅಡಕೆ ಕದ್ದವ ಸಿಕ್ಕಿಬಿದ್ದ, ಆನೆ ಕದ್ದವ ಜಾರಿಕೊಂಡ

೧೨೯೮೯ ಹಣ್ಣು ತಿಂದವ (ನುಣ್ಣಗೋದ) ನುಣಿಚಿಕೊಂಡ, ಸಿಪ್ಪೆ
ತಿಂದವ ಸಿಕ್ಕಾಕ್ಕೊಂಡ

೧೨೯೯೦ ಹಣ್ಣು ಬೊಮ್ಮಣ್ಣನಿಗೆ, ಅಪರಾಧ ತಿಮ್ಮಣ್ಣನಿಗೆ

ಯಾರದೋ ತಪ್ಪಿಗೆ ಯಾರಿಗೋ ಶಿಕ್ಷೆ

೧೨೯೯೧ ಆನೆ ಅರಸು ಮದದಿಂದ ಮೆರೆದರೆ ಅಮಾತ್ಯರಿಗೆ ಬೈಗಳು

೧೨೯೯೨ ಎತ್ತಿನ ಹುಣ್ಣಿಗೆ ಹೋರಿಗೆ ಬರೆ

೧೨೯೯೩ [2]ಎತ್ತಿಗೆ ಜ್ವರ (ಬೇನೆ, ರೋಗ) ಬಂದರೆ ಎಮ್ಮೆಗೆ ಬರೆ

---

1 ನಾನಲ್ಲ, ಗಾಂಧಾರಿ

2 (i) ಕೊಟ್ಟಿಗೆಗೆ ಬರೆ ಹಾಕಿದರು
(ii) ಕೋಣವನ್ನೆಳೆದು ಬರೆ ಹಾಕಿದರು
(iii) ಎತ್ತು ಇರಿದ ತಪ್ಪಿಗೆ ಎಮ್ಮೆಗೆ ಬರೆ
(iv) ಕತ್ತೆಗೆ ಜ್ವರ ಬಂದರೆ ಎತ್ತಿ (ಎಮ್ಮೆ)ಗೆ ಬರೆ ಹಾಕಿದರಂತೆ
(v) ಆಲಿಗೆ ಜ್ವರ ಬಂದರೆ (ಸನ್ನಿ ಮಾರಿದರೆ) ಗೈಬೂಗೆ ಸೂಡಿಟ್ಟರು
(vi) ಎಮ್ಮೆಗೆ ನಾಗೇರಾದ್ರೆ ಎತ್ತಿಗೆ ಹಿಡ್ಕೊಂಡು ಬರೆ ಹಾಕಿದ ಹಾಗೆ
(vii) ಎಮ್ಮೆ ಹಿಂಡದಿದ್ರೆ ಕೋಣನಿಗೆ ಬರೆ

೧೨೯೯೪ ಕಬ್ಬಿಣ ಕಾಯುದಿದ್ದರೆ ತಿದಿಯುವನನ್ನು ಗಟ್ಟಿಸಿದರು

೧೨೯೯೫ [1]ಕಬ್ಬು ತಿನ್ನಲಿಲ್ಲ, ಹಾಲುಕುಡಿಯಲಿಲ್ಲ ; ಆಲೆಮನೆ ದೆವ್ವ ಅಟ್ಟಿಸಿಕೊಂಡು ಬಂತು

೧೨೯೯೬ ಕಾಡು ಹಂದಿ ಹೊಲ ಮೇದರೆ ಊರ ಹಂದಿ ಕಿವಿ ಕೊಯ್ದರು

೧೨೯೯೭ ಕುರಿ ತೋಂಡು ಮೇದ ದವಸವನ್ನು ಕುರುಬನಿಂದ ಕಾರಿಸಿದರು

೧೨೯೯೮ [2]ಗೋಕರ್ಣದ (ಬಸರೂರಿನ, ಹಂದ ಕುಂದದ)ವರು ಹಾದರ ಮಾಡಿದರೆ ಕುಮಟೆಯವರು ದಂಡ ತೆರಬೇಕಂತೆ

೧೨೯೯೯ ಮೇಯ್ಕಂಡ ಕತ್ತೆ ಮೇಯ್ಕಿತ್ತು, ಸಿಕ್ಕಂಡ ಕತ್ತೆ ಕಿವಿ ಕೂದರು

೧೩೦೦೦ ಹಣವಿದ್ದವರು ಹಾದರ ಮಾಡಿದರೆ ಹಾದೀಲಿ ಹೋಗುವವರು ದಂಡತೆತ್ತರು

೧೩೦೦೧ ಹಣ್ಣುಕಾಯಿ ಹನುಮಂತಪ್ಪನಿಗೆ, ದೊಣ್ಣೆ ಪೆಟ್ಟು ಪೂಜಾರಪ್ಪನಿಗೆ

೧೩೦೦೨ ತಾಸಿನ ಬಟ್ಟಲು ನೀರು ಕುಡಿದರೆ ತ್ರಾಸಿಗೆ ಕೊಡತಿ ಪೆಟ್ಟು

೧೩೦೦೩ ಪೆಂಡರ ದೋಷಕ್ಕೆ ಮಕ್ಕಳ ಮೂಗು ಕೊಯ್ದರಂತೆ

೧೩೦೦೪ ಸೂಳೆಯ ಪಾಪಕ್ಕೆ ಸನ್ಯಾಸಿಯನ್ನು ಶೂಲಕ್ಕೆ ಹಾಕಿದರು

೧೩೦೦೫ ಹಳ್ಳಿಯವರು ದೊಂಬಿ ಮಾಡಿದರೆ ಪೇಟೆಯವರು ದಂಡತೆತ್ತರು

ತಪ್ಪಿಗೆ ಕ್ಷಮೆ ಕೇಳುವುದು

೧೩೦೦೬ ಅರಿಯದೆ ತಪ್ಪು ಮಾಡಿದೆ ಅನ್ನುವುದು ದೊಡ್ಡಸ್ತನವೆ ?

---

1 ಹಣ್ಣು ತಿನ್ನಲಿಲ್ಲ, ಹಾಲು ಕುಡಿಯಲಿಲ್ಲ ; ಬರಬರನೆ ಅಟ್ಟಾಡಿತು ಆಲೆಮನೆ ದೆವ್ವ

2 (i) ಹಂದಿಯಂಪರ ಹಾದರಕ್ಕೆ ತಮಟೆಯವರು ದಂಡ ತೆತ್ತರು

(ii) ಹಂದಿ ಚಿಕ್ಕರು ಮಾಡಿದ ತಪ್ಪಿಗೆ ತಮಟೆಯವರು ದಂಡ ತೆತ್ತರು

೧೩೦೦೭ [1]ಅರಿಯದೆ ಮರೆತು ನಿನ್ನ ತಿರುಪ್ಪಟ್ಟಿಗೆ ಕೈಹಾಕಿದೆ ಬುಡುಬುಡುಕೆದಾಸಯ್ಯ, ನಿನ್ನ ದಮ್ಮಯ್ಯ ಅಂದ ಹಾಗೆ

೧೩೦೦೮ ಎಡವಟ್ಟು ಮಾಡಿದ್ದಕ್ಕೆ ಎರಡು ಕೈಯನ್ನೂ ಎತ್ತಿ ಮುಗಿದ

೧೩೦೦೯ ಗಂಗೆ ಅಂಥವಳು ಮೂರು ಸಾರಿ ತೇಲಿಸ್ತಾಳೆ, ಮೂರು ಸಾರಿ ಮುಳುಗಿಸ್ತಾಳೆ

೧೩೦೧೦ [2]ತೊಡೆ ಮೇಲೆ ಮಗು ಹೇತರೆ ತೊಡೆ(ಕುಂಡೆ) ಕುಯ್ದಾಕ್ತಾರ್ಯೆ ?

೧೩೦೧೧ ತಪ್ಪು ಹೊಟ್ಟೇಲಿ ಹಾಕ್ಕೋಬೇಕು, ಒಪ್ಪು ಬಾಯಲ್ಲಿ ಹಾಕ್ಕೋಬೇಕು

೧೩೦೧೨ ದಯೆ ತೋರಿದರೆ ಕ್ಷಮಿಸಿದ ಹಾಗಾಯ್ತು?

೧೩೦೧೩ ನಿಂದಿಸುವವರಿಗೆ ವಂದಿಸು, ತಪ್ಪು ಮಾಡಿದವರಿಗೆ ಮನ್ನಿಸು

೧೩೦೧೪ ಶಿಕ್ಷಿಸುವುದಕ್ಕಿಂತ ಕ್ಷಮಿಸುವುದು ಶ್ರೇಷ್ಠ

೧೩೦೧೫ ಹಾಲಿಗಾದರೂ (ಹಾಕು) ಅದ್ದು, ನೀರಿಗಾದರೂ (ಹಾಕು) ಅದ್ದು

ತಪ್ಪುಮಾಡಿ ಪೆಚ್ಚು ಬೀಳುವಿಕೆ

೧೩೦೧೬ ಇಂಗು ತಿಂದ ಮಂಗನಂಗೆ ಕಣ್ಣುಪಟಪಟ, ಬಾಯಿ ಪಿಟಿಪಿಟಿ

೧೩೦೧೭ ಜಿರಳೆ (ಬೆಣ್ಣೆ) ತಿಂದ ಬೆಕ್ಕಿನ ಹಾಗೆ

೧೩೦೧೮ ಬೆಣ್ಣೆ ನುಂಗಿದ ಬೆನಕ

೧೩೦೧೯ ದಾರಿ ತಪ್ಪಿ ಹಾರಿದರೇನು ಫಲ ?

೧೩೦೨೦ ಬಾಲ ಸುಟ್ಟ ಬೆಕ್ಕಿನ ಹಾಗೆ

---

1 ಅರಿಯದೆ ಕೈಯಿಟ್ಟೆ ಬುಟ್ಬುಡು ದಮ್ಮಯ್ಯ

2 ಮಕ್ಕಳು ಹೊಲಸು ಮಾಡಿದರೆ ಯಾರಾದರೂ ತೊಡೆ ಕೊಯ್ದು ಚೆಲ್ಲುವರೆ ?

೧೩೦೨೧ [1]ಮಂಗನಂತೆ ಮಾಡಿ ಮುಸುವನಂತೆ ಕೂತ

೧೩೦೨೨ ಮುಖ ಹೊಂಗೆ (ಹರಳು) ಎಣ್ಣೆ ಕುಡಿದ ಹಾಗೆ

೧೩೦೨೩ ಸುಣ್ಣ ತಿಂದ ಮಂಗಣ್ಣನ ಹಾಗೆ

ತಪ್ಪು ಮಾಡಿದವನಿಗೆ ಶಂಕೆ

೧೩೦೨೪ 'ಅರಳಿಯು ಕಳ್ಳ !' ಅಂದ್ರೆ ಗಡ್ಡ ಹಿಡಿದುಕೊಂಡ

೧೩೦೨೫ 'ಉರ್ವಾರು ಕಮಿವ ಬಂಧನಾತ್' ಅಂದರೆ ಸವತೆಕಾಯಿ ತಲೆ ಮುಟ್ಟಿ ನೋಡಿಕೊಂಡ

೧೩೦೨೬ ಉಳ್ಳಿ ತಿಂದವನಿಗೆ ಉಳುಕಿತು, ಬೆಳ್ಳುಳ್ಳಿ ತಿಂದವನಿಗೆ ನಾರಿತು

೧೩೦೨೭ ಎನ್ನ ಮೋರೆ ಬಟ್ಟಲು ಕದ್ದ ಹಾಗಿತ್ತೆ ?

೧೩೦೨೮ ಕಳ್ಳನ (ಜೀವ, ಮುಖ) ಮನಸ್ಸು ಹುಳ್ಳುಳ್ಳಗೆ

೧೩೦೨೯ 'ಕುಂಬಳಕಾಯಿ ಕಳ್ಳ !' ಅಂದರೆ ಹೆಗಲು ಮುಟ್ಟಿನೋಡಿಕೊಂಡ

೧೩೦೩೦ ನಿನ್ನಲ್ಲಿ ತಪ್ಪಿಲ್ದೆ ಇದ್ರೆ ನಿನಗ್ಯಾಕೆ ಉಳುಕಿತು ?

ತಪ್ಪಿಗೆ ಶಿಕ್ಷೆ

೧೩೦೩೧ [2]ಉಪ್ಪು ತಿಂದವ ನೀರು ಕುಡೀತಾನೆ

೧೩೦೩೨ ಕಾಲು ಜಾರಿದರೆ ರೊಂಡಿಗೆ ಮೂಲ

೧೩೦೩೩ ಕೆರೆ ಒಡೆದವನ ಹತ್ತಿರ ಕಂಬಳಿ (ಗೊಂಗಡಿ) ಕಿತ್ತುಕೊಂಡ ಹಾಗೆ

೧೩೦೩೪ ಕೆರೆ ಒಡೆದವನನ್ನು ಕೆರದಲ್ಲಿ ಹೊಡೆದರೆ ಆಯ್ತು ?

---

1 ಮಾಡೋದ ಮಾಡಿ ಮಂಗನಂತೆ ಕೂತ

2 (i) ಉಪ್ಪು ತಿಂದಷ್ಟೂ ದಾಹ
(ii) ದೋಸೆ ತಿಂದರೆ ನೀರು ಕುಡಿಸುತ್ತೆ

೧೩೦೩೫ ಗಳಿಗೆಯಲ್ಲಿ ಮಾಡಿದ ತಪ್ಪು ಸಾವಿನವರೆಗೂ ಮುಪ್ಪು

೧೩೦೩೬ ಚಿಕ್ಕಪ್ಪನಾದರೆ ಮನೆಗೆ ಬಂದು ಕಾಲು ಹಿಡಿದೇನು,
ಅಪರಾಧಕ್ಕೆ ಧೋತ್ರ ಕೊಡಬೇಕು

೧೩೦೩೭ ತಪ್ಪು ನಂದು, ಏಟು ನಿಂದು

೧೩೦೩೮ ತಪ್ಪು ಮಾಡಿದವನನ್ನು ಕೊಪ್ಪಕ್ಕೆ ಹಾಕು

೧೩೦೩೯ [1]ತಲೆಗೆ ಎರೆದ ನೀರು ಕಾಲಿಗೆ ಬಕ್ಕು (ತುಳು)

೧೩೦೪೦ ತಿಮಿರು ಬಂದವನು ತುರಿಸುತ್ತಾನೆ

೧೩೦೪೧ ತುರಿಸಿಕೊಂಡವ ಉರಿಪಟ್ಟಾನು

೧೩೦೪೨ ನಿಲ್ಲಲಾರದೆ ಗುಲ್ಲು ಮಾಡಿ ಕೊಲ್ಲಿಸಿಕೊಂಡ

೧೩೦೪೩ ಬಹಿರಂಗವಾದರೆ ಬಹಿಷ್ಕಾರ

೧೩೦೪೪ [2]ಬುದ್ಧಿಯಿಲ್ಲದೆ ಮಾಡಿದ ಕೆಲಸಕ್ಕೆ ಸದ್ದಿಲ್ಲದೆ ಮೂರು ಗುದ್ದು
ತಿಂದ

೧೩೦೪೫ ಬೆಕ್ಕಿಗೆ ಬೆಣ್ಣೆ ಕಂಡಿತು, ಬಡಿಗೆ ಕಾಣಲಿಲ್ಲ

೧೩೦೪೬ ಮಾಡಿಕೊಂಡ ತಪ್ಪಿಗೆ ಹಾಡಿಕೊಂಡು ಉಣ್ಣೋ ದಾಸಯ್ಯ

೧೩೦೪೭ ಮಾಡಿದ್ದಕ್ಕೆ ಅನುಭವಿಸಿದ್ದೇ ಗುರುತು,
ತೋಡಿದ ಭಾವಿಗೆ ಜಲವೇ ಗುರುತು

ತಪ್ಪು ಮಾಡಿದ ಮೇಲೆ ಬುದ್ಧಿ

೧೩೦೪೮ 'ಉಪಾದ್ರೆ! (ಪುರೋಹಿತರೆ!) ನಿಮ್ಮ ಮಗ ಬೇವಿನಕಾಯಿ
ತಿಂತಾನೆ (ಹಾಗಲ ಮೇಯ್ತಾನೆ) ಅಂದ್ರೆ

---

1 (i) ಮಂಡೆಗೆ ಹಾಕಿದ ನೀರು ಕಾಲಿಗೆ ಬಾರದೆ ?
(ii) ತಲೆಗ್ಬಿಂದ್ರೆ ಕಾಲಿಗ್ಬರ್ತು

2 ತನ್ನ ಬುದ್ಧಿ ತಪ್ಪಿದಾಗ ಸದ್ದಿಲ್ಲದೆ ಮೂರು ಗುದ್ದು ಗುದ್ದಿಸಿಕೊಳ್ಳಬೇಕು

[1]'ಕಹಿಯಾದರೆ ಅವನೇ ಬಿಟ್ಟು ಬಿಡುತ್ತಾನೆ' ಅಂದರು

೧೩೦೪೯ [2]'ಉಪಾದ್ರೇ! ನಿಮ್ಮ ಮಗ ಕುಡುಗೋಲು ನುಂಗುತಾನೆ'
ಅಂದ್ರೆ 'ಕುಂಡೆ ಹರಿದರೆ ತಾನೆ ಬಿಡ್ತಾನೆ' ಅಂದ್ರಂತೆ

೧೩೦೫೦ ಒಂದು ಸಾರಿ ಬಿದ್ದ ಬಾವಿಗೆ ಹಂದಿಯೂ ಬೀಳದು

೧೩೦೫೧ ಕೈ ಸುಟ್ಟುಕೊಂಡ ಮಗು ದೀಪದ ಬಳಿ ಸುಳಿಯಲ್ಲ

೧೩೦೫೨ ಕೈ ಸುಟ್ಟುಕೊಂಡ ಮೇಲೆ ಬುದ್ಧಿ ಬಂತು

೧೩೦೫೩ ತಲೆ ತಾಕಿದರೆ ತಕ್ಕ ಬುದ್ಧಿ ತನ್ನಷ್ಟಕ್ಕೆ ತಾನೇ ಬರುತ್ತೆ

೧೩೦೫೪ ತಲೆ ತಾಗಿದಲ್ಲದೆ ಬುದ್ಧಿ ಬಾರದು, ಉಣ್ಣದೆ ನಿದ್ದೆ ಬಾರದು

೧೩೦೫೫ ತಾಗಿದವ ಬಾಗಿಯಾನು

೧೩೦೫೬ ಪೆಟ್ಟು ಬಿದ್ದ ಮೇಲೆ ಬುದ್ಧಿ ಬಂತು

೧೩೦೫೭ ಬಿಸಿ ತೋರಿದ ಬೆಕ್ಕು ಒಲೆ ಮುಂದೆ ಸುಳಿಯದು

೧೩೦೫೮ ಬಿಸಿ ಪರಮಾನ್ನದಲ್ಲಿ ಬಾಯಿ ಸುಟ್ಕೊಂಡ ಮಗು
ಮೊಸರನ್ನು ಊದಿ ಊದಿ ಕುಡಿಯಿತು

೧೩೦೫೯ [3]ಬಿಸಿ ಹಾಲು ಕುಡಿದ ಬೆಕ್ಕು ಹಸಿ ಹಾಲು ಕುಡಿಯದು

೧೩೦೬೦ ವಿಷದನ್ನ ಉಂಡಲ್ಲದೆ ವಿಷ ತಿಳಿಯದು

೧೩೦೬೧ ಹಿಂದಕ್ಕೆ ತಪ್ಪು. ಮುಂದಕ್ಕೆ ಬುದ್ಧಿ

೧೩೦೬೨ ಹಿಂದಿನ ಅನುಭವ ಮುಂದಿನ ದಾರಿ ದೀಪ

---

1 (i) 'ಸಿಹಿಯಾದರೆ ಮೆಲ್ತಾನೆ, ಕಹಿಯಾದ್ರೆ ಬಿಡ್ತಾನೆ' ಅಂದ್ರು
(ii) 'ಅಗ್ದು ನೋಡಿ ಕಹಿಯಾದ್ರೆ ಉಗ್ದು ಬುಡ್ತಾನೆ' ಅಂದ್ರಂತೆ

2 ಕುಡುಗೋಲಂ ನುಂಗುವವನಿಗೆ ಹೊಟ್ಟೆ ಹರಿಯುವುದು ತಿಳಿಯದೆ ?

3 ಬೆಕ್ಕು (ಕೊತ್ತಿ)ಗೆ ಬಿಸಿ ಹಾಲು ತೋರಿಸಿದ ಹಾಗೆ

೧೩೦೬೩ [1]ಹಿಂದಲ ಗಾದೆ ನೆನಕೊ, ಹಿಮ್ಮಡಿ ಕೊಳೆ ತೊಳ್ಕೊ

೧೩೦೬೪ ಹೇಲಿಂದ ಸಪ್ಪ ಯಾರೊಂದ್ಗೇಳನೆ ?

೧೩೦೬೫ [2]ಹೇಸಿಗೆ ತಿನ್ನಬಾರದಾಗಿತ್ತು, ತಿಂದ ಮೇಲೆ ಚೆನ್ನಾಗಿ ಬಾಯಿ ತೊಳಕಳಗಂಟ ಸುಮ್ಕಿರು ಅಂದಂತೆ

/ ಹಗೆತನ

೧೩೦೬೬ ಅವರವರ ನಡುವೆ ಹುಲ್ಲೂ ಬೇಯುದು

೧೩೦೬೭ ಅವರವರಿಗೆ ಎಣ್ಣೆ ಸೀಗೆ ಇದ್ದ ಹಾಗೆ

೧೩೦೬೮ ಅವರವರಿಗೆ ಎದುರು ಬೆಳ್ಳಿ

೧೩೦೬೯ ಆಗದವರಿಗೆ ಕೇಡು ಮಾಡೋದು ಮೂರ್ಖತನ

೧೩೦೭೦ ಇದ್ದ ಊರಿನ ಹಗೆ ಸಲ್ಲ, ಕದ್ದ ಕೊಂಬರ ನೆರೆ ಸಲ್ಲ

೧೩೦೭೧ ಇಲಿಗೆ ಬೆಕ್ಕು ಶತ್ರು, ಆನೆಗೆ ಸಿಂಹ ಶತ್ರು

೧೩೦೭೨ ಊರು ಹಗೆ, ನೀರು ನಂ(ಟು)ಜು

೧೩೦೭೩ ಒಬ್ಬೊಬ್ಬರಿಗೆ ಹೂದಕ್ಕಿ ಬೇಯಲ್ಲ

೧೩೦೭೪ ಒಳಗಿನ ಹೊಗೆಗಿಂತ ಹೊರಗಿನ ಬಿಸಿಲೇ ಮೇಲು

೧೩೦೭೫ ಕರುಬರ ನೆರೇಲಿರು, ಹಗೆಯುವರ ಹಟ್ಟೀಲಿರು

೧೩೦೭೬ ಕಂಡರೆ ಆಗದವನು ಕೂಡಿಕೊಂಡು ಉಣ್ತಾನ್ಯೆ ?

೧೩೦೭೭ ಕುಲಕ್ಕೆ ಕುಲವೇ ಮೂಲ, ಕುಂಟೆತ್ತು ಹೊಲಕ್ಕೆ ಮೂಲ

---

1 ಸಂದೆಗೆ ಮುಂದೆ ಕೆಡ್ಕೊ

2 ಹೇಸಿಗೆ ಮೂಸೋದ್ಯಾಕೆ, ನಾತ ಅನ್ನೋದೇಕೆ ?

೧೩೦೭೮ [1]ಜಾತಿಗೆ ಜಾತಿ ವೈರಿ, ನೀರಿಗೆ ಪಾಚಿ ವೈರಿ

೧೩೦೭೯ ದುಹಿ ಮಾಡುವವ ಅಹಿ ಹಾಗೆ

೧೩೦೮೦ ನಮ್ಮ ಬಗೆ ನಮಗೆ ಹಗೆ

೧೩೦೮೧ ನಮ್ಮವರು ನಮಗೆ ವೈರಿ, ಕಣ್ಣಿಗೆ ಎಣ್ಣೆ ವೈರಿ

೧೩೦೮೨ ನೀರಿನಲ್ಲಿ ವಾಸ, ಮೊಸಳೆಯೊಡನೆ ದ್ವೇಷ

೧೩೦೮೩ ನೆಸ್ಸಾಟಕ್ಕೆ ಹೋಗಿ ಮಸ್ಸಾಟ ಹೆಚ್ಚಿತು

೧೩೦೮೪ ಬಟ್ಟಂಗೆ ಬ್ಯಾಳಾಗ, ಬಟ್ಟೇಗೆ ಸೊಳೆಯಾಗ

೧೩೦೮೫ ಬರೆಯುವವನ ಸಂಗಡ ದ್ವೇಷ ಸಲ್ಲ, ದಾಯಾದನ ಸಂಗಡ ಸ್ನೇಹ ಸಲ್ಲ

೧೩೦೮೬ [2]ಬ್ರಾಹ್ಮಣನ ಹಗೆಗೂ ಸೆಟ್ಟಿಯ ನಗೆಗೂ ನಿಲ್ಲ ಸಲ್ಲ

೧೩೦೮೭ ಬೆಣ್ಣೆ ಬೆಂಕಿಗೆ ವೈರಿ, ಸುಣ್ಣ ಕಣ್ಣಿಗೆ ವೈರಿ

೧೩೦೮೮ ಬೆಳಕಿಗೆ ಕತ್ತಲೆ ವೈರಿ, ಕತ್ತಲೆಗೆ ಬೆಳಕು ವೈರಿ

೧೩೦೮೯ ಮನುಷ್ಯ ತನಗೆ ತಾನೇ ಹಗೆ, ತನಗೆ ತಾನೇ ಮಿತ್ರ

೧೩೦೯೦ ಮರಕ್ಕೆ ಮರ ವೈರಿ, ದಾಯಾದಿಗೆ ದಾಯಾದಿ ವೈರಿ

೧೩೦೯೧ ವಿಭೂತಿ ಮೇಲೆ ನಾಮ ಬರೆದಂಗೆ

೧೩೦೯೨ ವೇಷದಿಂದ ಇಂದ್ರ ಕೆಟ್ಟ, ದ್ವೇಷದಿಂದ ಕೌರವ ಕೆಟ್ಟ

---

1 (i) ಹಾವಿಗೆ ಮುಂಗಸಿ ವೈರಿ

(ii) ಪಾಯಸಕ್ಕೆ ನೀರು ವೈರಿ

2 (i) ಬ್ರಾಹ್ಮಣನ ಹಗೆಗೆ ನಿಲ್ಲಲಕ್ಕು. ಸೆಟ್ಟಿಯ ನಗೆಗೆ ನಿಲ್ಲೋಕೆ ಎಡೆಯೂ ?

(ii) ಭಟ್ಟರ ಹಗೆಯಲ್ಲಾದರೂ ಇರು, ಸೆಟ್ಟರ ನಗೆಯಲ್ಲಿರಬೇಡ

೧೩೦೯೩ ವೈರವನ್ನು ಕಟ್ಟಿಕೊಂಡು ಬಾಳುವವನು ಸೆರಗಿನಲ್ಲಿ ಬೆಂಕಿ ಕಟ್ಟಿಕೊಂಡು ಬಾಳಿದ ಹಾಗೆ

೧೩೦೯೪ ವೈರ ಹುಟ್ಟಿಸೋಕೆ ಪ್ರಳಯ ಬುದ್ಧಿಯೇಕೆ ?

೧೩೦೯೫ ವೈರಿಯನ್ನು ಇಟ್ಟುಕೊಂಡವನು ಹುಲ್ಲಲ್ಲಿ ಬೆಂಕಿಯಿಟ್ಟು ಗಾಳಿಯ ಕಡೆಗೆ ಮಲಗಿದಂತೆ

೧೩೦೯೬ ಸಣ್ಣದೀಪಕ್ಕೆ ಗಾಳಿ ಶತ್ರು, ದೊಡ್ಡ ಜ್ವಾಲೆಗೆ ಗಾಳಿ ಮಿತ್ರ

೧೩೦೯೭ ಹಗೆಗೆ ಮದ್ದರೀತಿದ್ದೋನಿಗೆ, ಭಗವಂತ ಮದ್ದರೀತಿದ್ದ

೧೩೦೯೮ ಹಗೆಯವನಿದ್ರೆ ಹೋಗ್ತಾ ಮೊಕ ನೋಡಬೈದು, ಬರ್ತಾ ಬೆನ್ನು ನೋಡಬೈದು

೧೩೦೯೯ ಹಗೆಯವನು ಕಂಡಹಾಗೆ ಉಣ್ಣು ಏಳು

೧೩೧೦೦ ಹಗೆಯವರ ಎದೆಯಲ್ಲಿ ನಗುವಂತೆ ಇರಬೇಡ

೧೩೧೦೧ ಹಗೆಯವರ ಎದೆ ಮೆಟ್ಟಿದಂಗಿರು

೧೩೧೦೨ ಹಗೆಯವರ ಮುಂದೆ ಹೊಗೆ ಹಾದಂಗೆ

೧೩೧೦೩ ‘ಹಗೆಯವರು ಬರ್ತಾರೆ ಹಲ್ಲು ಮುಚ್ಚು’ ಅಂದ್ರೆ ‘ನಾನೇನು ಮಾಡಲಿ? ತುಟಿ ತುಂಡ’ ಅಂದ್ಲಂತೆ

೧೩೧೦೪ ಹಳೆ ಗಾಯ ಕೆದರಬೇಡ, ಹಿಂದಿನ ಹಗೆ ಕೆಣಕಬೇಡ

ರೋಗವನ್ನೂ ಶತ್ರುವನ್ನೂ ಅಲಕ್ಷಿಸಬಾರದು

೧೩೧೦೫ [1]ರೋಗದ ಮೂಲ, ವೈರಿಯ ಮೂಲ ಕಿತ್ತು ಹಾಕಬೇಕು

---

1 (i) ವೈರಿಯನ್ನೂ ರೋಗವನ್ನೂ ಅಲಕ್ಷಿಸಬಾರದು
(ii) ಶತ್ರುವನ್ನೂ ರೋಗವನ್ನೂ ಹುಟ್ತಾ ಇದ್ದಂಗೆ ಕಿತ್ತು ಹಾಕಬೇಕು
(iii) ಸಾಲವನ್ನೂ, ರೋಗವನ್ನೂ, ಶತ್ರುವನ್ನೂ ಮೊದಲು (ಬೇಗ) ಕಳೆದುಕೊ

ಹಗೆಯೊಡನೆ ಸುಖದುಃಖವೆ?

೧೩೧೦೬ ಆಗದವರ ಎದುರು ಸುಖದುಃಖ ಹೇಳಿದ ಹಾಗೆ

೧೩೧೦೭ ಉರುಲು ಹಾಕಿ ಕೊಲ್ಲುವವನಿಗೆ ಕೊರಳ ಚೆಂದ ತೋರಿಸಿದನಂತೆ

೧೩೧೦೮ ಕಂಡರೆ ಆಗದವ(ರನ್ನು)ರು ಕೂಡಿಕೊಂಡು ಉಂಡರಂತೆ

೧೩೧೦೯ [1]ತಲೆ ಒಡೆಯುವವ ಹುಣ್ಣಿಗೆ ಔಷಧಿ ಹಾಕ್ತಾನ್ಯೆ ?

೧೩೧೧೦ [2]ಭಂಗ ಪಡಿಸುವವ ಬಂಗಾರ ಕೊಟ್ಟಾನೆ?

೧೩೧೧೧ [3]ಭಾಗಾದಿಯ ಮುಂದೆ ಬಲ (ಬಲಾಚಾರ) ಕೇಳಿದಂತೆ 'ಮುಂದೆ ಮೂರು ತಿಂಗಳಲ್ಲೇ ಮರಣ' ಅಂದ

೧೩೧೧೨ ವೈರವಿದ್ದವನ ಕರೆದು ಕ್ಷೌರ ಮಾಡಿಸಿಕೊಂಡ ಹಾಗೆ

೧೩೧೧೩ ಸಂಜೀವನ ಪರ್ವತಕ್ಕೆ ಆಂಜನೇಯ ಕಾಲನೇಮಿಯನ್ನ ದಾರಿ ಕೇಳಿದ ಹಾಗೆ

೧೩೧೧೪ ಸೇರಲಾರದ ಸವತಿ ಕೂಡ ಶಾವಿಗೆ ತುಪ್ಪ ಉಂಡರು

೧೩೧೧೫ ಹಗೆಯವನ ಅನ್ನಕ್ಕಿಂತ ಹಂಗಿನ ಅಂಬಲಿ ಲೇಸು

೧೩೧೧೬ ಹಗೆಯವನ ಜಗಲಿಗಿಂತ ಜಾಲಿಮರದ ನೆರಳು ಲೇಸು

---

1 ತಲೆ ಒಡೆಯುವವನ ಹತ್ತಿರ ಗಲ್ಲೆ (ಗಳಲೆ) ಹುಣ್ಣಿಗೆ ಮದ್ದು ಕೇಳಿದ ಹಾಗೆ

2 ಭಂಗಪಡಿಸುವವನ ಹತ್ತಿರ ಬಂಗಾರದ ಆಸೆಯೆ ?

3 ಭಾಗಾದಿ ಮುಂದೆ ಬಲ (ಒಳ್ಳೆಯ ಮುಹೂರ್ತ) ಕೇಳಿದರೆ 'ಮುಂದೆ ಮೂರು ತಿಂಗಳು ಇಲ್ಲ' ಅಂದ

(i) ವೈರಿ ಮುಂದೆ ಬೈರೂಪ ಕೇಳಾಕ ಹೋದರ 'ಮುಂದೆ ಮೂರು ತಿಂಗಳು ಬಲ ಇಲ್ಲ' ಅಂದ

(ii) ಹಗೆಯವನ ಗುರು (ಚಂದ್ರತಾರಾ) ಬಲ ಕೇಳಿದರೆ 'ಮಧ್ಯಾಹ್ನಕ್ಕೆ ದುರ್ಮರಣ' ಅಂದನಂತೆ

೧೩೧೧೭ ಹಗೆಯವನ ಹುಸಿಮಾತು ನಂಬ್ಕೊಂಡು ಹಗರಣ ತಂದ್ಕೊಂಡ ಹಾಗೆ

ಹಗೆಗೆ ಪ್ರತೀಕಾರ

೧೩೧೧೮ ಜೇಡಕ್ಕೆ ಜೀರಗೆ (ಮೆಣಸು) ಅರೆದ

೧೩೧೧೯ ತಲೆ ಮೇಲೆ ಕಾರ ಅರೆದರು

೧೩೧೨೦ ತಾವು ಮಾಡುವುದನ್ನು ಗಂಧರ್ವರು ಮಾಡಿದರು

೧೩೧೨೧ ನಾಯಿ ಕಚ್ಚಿತು ಅಂದ್ರೆ 'ಅದ್ನೇ ಕಚ್ಚು' ಅನ್ನಂತೆ

೧೩೧೨೨ ಜೀವಂತ ಸತ್ತು ಪಿಶಾಚಿಯಾಗಿ ಕಾಡುವುದು

೧೩೧೨೩ ಮಾಡಿದವನಿಗೆ ಮಾಡದ ಮೇಲೆ ಕೋಡಗನಾಗಿ ಹುಟ್ಟೇನು ಫಲ ?

೧೩೧೨೪ ಮಾತಿಗೊಂದು ಮಾತು, ಏಟಿಗೊಂದು ಏಟು

೧೩೧೨೫ ಮುಯ್ಯಿಗೆ ಮುಯ್ಯ್, ಸೇಡಿಗೆ ಸೇಡು

೧೩೧೨೬ ಮುಳ್ಳಿನ ಗಿಡವನ್ನು ಮೊಳಕೆಯಲ್ಲೇ ಕೀಳಬೇಕು

೧೩೧೨೭ ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು

೧೩೧೨೮ ಹಗೆ ಮಕ್ಕಳಿಗೆ ಹಸುರೆಲೆ ಕೊಟ್ಟರು

೧೩೧೨೯ ಹಗೆಯವನ ಕೊಲ್ಲುವುದಕ್ಕೆ ಹಗಲೇನು, ಇರುಳೇನು ?

೧೩೧೩೦ ಹಗೆಯವರ ಮಕ್ಕಳನ್ನು ಹೊಗೆಯ (ನೆವದ)ಲ್ಲಿ ಕೊಂದ ಹಾಗೆ

೧೩೧೩೧ ಹಗೆಯವನ ಮನೆ ಬಾಗಿಲಿಗೆ ಹಾರಕ ಬಿತ್ತು

೧೩೧೩೨ ಹಗೆಯವನಿಲ್ಲವೆಂದು ಆಯುಧ ಮರೆಯಬಾರದು

೧೩೧೩೩ ಹೆಣ ಕೊಂದು ಸೇಡು ತೀರಿಸಿಕೊಂಡರು

ಹಗೆ ಸಣ್ಣವನಲ್ಲ

೧೩೧೩೪ ಆಡು ಹತ್ತುವ ದಂಡೆಗೆ ಆನೆ ಹತ್ತಲಾರದು

೧೩೧೩೫ ಆನೆಗೆ ಗುಂಗುರು ಕಾಡಿದಂತೆ

೧೩೧೩೬ ಉಳಿ ಸಣ್ಣದಾದರೂ (ಉಳಿ ತೋಡದೆ ಬಿಟ್ಟೀತೆ ?) ಮರ ಕಡಿಯೋದು ಬಿಡದು

೧೩೧೩೭ ಕಬ್ಬಿಣದ ಉಳಿಯಾದರೂ ಕೈ ಕಡಿಯುತ್ತದೆ

೧೩೧೩೮ ಕಿಡಿಯಿಂದ ಕಾಡು ಸುಡಬಹುದು

೧೩೧೩೯ ಕಿಡಿಯೆಂದು ಕಡೆಗಣಿಸಿದರೆ ಮನೆಯನ್ನೇ ಸುಟ್ಟೀತು

೧೩೧೪೦ ಕೀಟ ಸಣ್ಣದಾದರೂ ಕಾಟ ಬಹಳ

೧೩೧೪೧ ಜಾತಿ ಮರಿ ಸಣ್ಣಕ್ಕಿದ್ದರೇನಂತೆ ?

೧೩೧೪೨ ಬಿಡಿ ಕಟ್ಟಿಗೆಯಾದರೂ ಕಿಡಿ ಹತ್ತಿ ಸುಡದೆ?

೧೩೧೪೩ ಬೀಜ ಸಣ್ಣದಾದರೆ ಮರ ಸಣ್ಣದೆ ?

೧೩೧೪೪ ಬೆಟ್ಟ ಒಡೆಯೋ ಉಳಿ ಬೆಟ್ಟು ಗಾತ್ರ

೧೩೧೪೫ ಸಣ್ಣ ಹಾವಾದರೂ ದೊಡ್ಡ ಕೋಲಿನಿಂದ ಬಡಿಯಬೇಕು

೧೩೧೪೬ ಸೊಳ್ಳೆ ಕಂಡರೆ ಆನೆಗೆ ಹೆದರಿಕೆಯಂತೆ

೧೩೧೪೭ *ಹಾವು ಮರಿಯಾದರೂ, ವಿಷ ಮರಿಯಲ್ಲ

೧೩೧೪೮ ಹುಲ್ಲಿನಿಂದ ತೊಲೆ ಹತ್ತಿತು

---

* ಹಾವು ಸಣ್ಣದಾದರೂ ವಿಷ ಸಣ್ಣದಲ್ಲ

ಅಡಕ್ಕ ಹಗೆಯ ಮೇಲೆ ಬಳಕ್ಕೆಯೋಗ ಕಲ್ಲದು

೧೩೧೯೯ ಅಂಕದ ಪೀಠವಲ್ಲ, ಸುಂಕದ ದಾಸನಲ್ಲ

೧೩೨೦೦ ಅಂಗಾಲಿನ ಮುಳ್ಳು ತೆಗೆಯೋಕೆ ಕೊಡಲಿ ಬೇಕೆ ?

೧೩೨೦೧ ಇರುವೆ ಹೊಡೆಯೋಕೆ ಒನಕೆಯೆ ?

೧೩೨೦೨ ಉಗುರಿನಿಂದ ಹೋಗುವುದಕ್ಕೆ ಕೊಡಲಿ ತಕ್ಕೊಂಡ ಹಾಗೆ

೧೩೨೦೩ ಕರ್ಪೂರದ ಗುಡ್ಡಕ್ಕೆ ಬೆಂಕಿ ಇಟ್ಟರೆ ಇದ್ದಲೂ ಅಲ್ಲ.ಬೂದಿಯು ಅಲ್ಲ

೧೩೨೦೪ ಗುಬ್ಬಿ ಮೇಲೆ ಬ್ರಹ್ಮಾಸ್ತ್ರವೆ ?

೧೩೨೦೫ ಹೇನು ಹೊಡೆಯೋಕೆ ಕೋಲು ಯಾಕೆ ?

೧೩೨೦೬ ನರಿ ಕೊಂದರೆ ಬರಿ (ಹೇಲು, ಮೈಯೆಲ್ಲ ಹೇಸಿಗೆ) ವಾಸನೆ

೧೩೨೦೭ ಮಂಗನನ್ನು ಕೊಂದರೆ (ಬಡಿದರೆ) ಮನೆ ತುಂಬ (ಮೈಗ ಹೊಲಸು)

೧೩೨೦೮ ಬಾಣದ ಗುರಿ ನೊಣದ ಮೇಲೆಯೆ?

೧೩೨೦೯ ಬಾಳೆ ಹಣ್ಣು ಕೊಯ್ಯೋಕೆ ಗರಗಸ ಯಾ(ಬೇ)ಕೆ ?

೧೩೨೧೦ ಮಡಕೆ ಒಡೆಯೋಕೆ ಅಡಕೆ ದೊಣ್ಣೆ (ದಡಿ) ಬೇಕೆ ?

೧೩೨೧೧ [1]ರಾಟ (ಕೂದಲು) ಸುಟ್ಟರೆ ಇದ್ದಲೂ ಅಲ್ಲ, ಬೂದಿಯೂ ಅ

೧೩೨೧೨ [2]ಹಪ್ಪಳ ಮುರಿಯೋಕೆ ದೊಗ್ಗಾಲು ಹಾಕಬೇಕೆ ?

೧೩೨೧೩ ಸಾಸವೆ ಮೇಲೆ ನಾಗರ ಹರಿದ ಹಾಗೆ

---

1 (i) ಕಪ್ಪ ಸುಟ್ಟರೆ ಬೂದಿ ಎಷ್ಟು?
(ii) ರೋಮ ಸುಟ್ಟರೆ ಎಷ್ಟು ಬೂದಿಯಾದೀತು?

2 ಮೊಣಕಾಲಿನಲ್ಲಿ ಹಪ್ಪಳ ಮುರಿಯಬಾರದು

೧೩.೧೬೪ ಹೂವಿನ ಹಂದರ ಮಾಂಗಲ್ಯದ ತೆರೆಯಲ್ಲ

೧೩.೧೬೫ ಮೇಣ ಕರಗಿಸ್ಯಾಕೆ ಆಯಾಸ ಬೇಕೆ ?

ದೊಡ್ಡವರ ಹಗೆ ಸಲ್ಲ

೧೩.೧೬೬ ಅಶ್ವಿನ ಮಿಂಚಿದರೆ ಅರಸುಮಾರ ಅಪ್ಪಣೆ ಬೇಕೆ ?

೧೩.೧೬೭ ಆನೆಗೆ ಸೊಳ್ಳೆ ಕಡಿದ ಹಾಗೆ

೧೩.೧೬೮ ಆನೆಯೊಂದಿಗೆ (ಬೇಟೆಗಾರನೊಂದಿಗೆ) ಮೊಲ ಮತ್ಸರಿಸಿದ ಹಾಗೆ

೧೩.೧೬೯ ಆನೆ ಮೇಲೆ ಹೋಗುವವನನ್ನ, ನಾಯಿ ಕಚ್ಚುತ್ತೆ ?

೧೩.೧೭೦ ಆನೆಯ ಸೊಪ್ಪು ಕಟ್ಟಿಕೊಂಡು ಮೊಲ ಬಿದ್ದ ಹಾಗೆ

೧೩.೧೭೧ ಅಪ್ಪನ ಕಣ್ಣು ಆನೆ ನುಂಗಿತೆ ?

೧೩.೧೭೨ ಆನೆಯೊಡನೆ ಆಟ ಸಲ್ಲದು, ಹಾವಿನೊಡನೆ ಹಾದ ಸಲ್ಲದು

೧೩.೧೭೩ ಕಂಕುಳ ಬಾವು ಕಮ್ಮಾರಿ ಕಡಿದೆ ಹೋಗುವುದು

೧೩.೧೭೪ ಕಾದ ನೀರು ಮನೆ ಸುಡಲಾರದು

೧೩.೧೭೫ ಕೆಂಡದ ಮೇಲೆ ಅರಳಿನ ರಾಶಿಯಲ್ಲಿ ಮಲಗಿದಂತೆ

೧೩.೧೭೬ ಕೆಂಡ ತಲೆಮೇಲೆ ಹೊತ್ತಿಟ್ಟುಕೊಂಡಂತೆ

೧೩.೧೭೭ ಉಡಿಯಲ್ಲಿ ಕೆಂಡ ಧರಿಸಿದ

೧೩.೧೭೮ ಕೊಂಬು ತೋರಿದ್ದೆ, ಬಾಲ ತೋರಿದ್ದೆ?

೧೩.೧೭೯ ಹಂಡಾಗ ಬಾಗಿ ಹೋಗಿ ಸಾರ ಓಡಿಸಿದ

೧೩.೧೮೦ ಗೊಡ್ಡು ಗದ್ದರಿ ಗೊಂಡೆ ಬಿದ್ದ್ರಾ ?

೧೩.೧೮೧ ನೀರಿನ ಸಂಗಡ ಬಾಳುವಾತ ಮೊಸಳೆ ಹಗೆಗೊಂಡಂತೆ

೧೩೧೮೨ ತಬ್ಬಲಿಯಾದವನಃ ಬೊಬ್ಬೆ ಹಾಕಿ ಹೆಬ್ಬುಲಿ ಓಡಿಸಿಯಾನೆ ?

೧೩೧೮೩ ತಮ್ಮಟೆಯುವನ ಮುಂದೆ ಜಾಗಟೆಯುವನೆ?

೧೩೧೮೪ ತಿರೋ ಕಲ್ಲು ಗಾಳಿಗೆ ಹಾರುವುದೇ ?

೧೩೧೮೫ ದೀವಟಿಗೆ ಮುಂದೆ ದೀಪವೆ ?

೧೩೧೮೬ ದೊಡ್ಡವರ ಹಗೆ ಸಲ್ಲ, ಬಡವರ ನೆರೆ ಸಲ್ಲ

೧೩೧೮೭ ನಾಯಿ ಬಾಲ ಅಲ್ಲಾಡಿಸಬಹುದು, ಬಾಲ ನಾಯನ್ನು ಅಲ್ಲಾಡಿಸಲಾರದು

೧೩೧೮೮ ಬಲವಂತನ ಕೂಡೆ ಛಲ ತರವಲ್ಲ

೧೩೧೮೯ ಪಿಂಗಿಲಾದವನ ಹಗೆ ಸಲ್ಲ, ನಗೆಗಾರನ ಮೈತ್ರಿ ಸಲ್ಲ

೧೩೧೯೦ ಪ್ರಳಯಾಗ್ನಿಯ ಮುಂದೆ ಪತಂಗದಾಟವೆ ?

೧೩೧೯೧ ಮೆಟ್ಟಿದರೆ ಘಟ್ಟ ತಗ್ಗೀತೆ ?

೧೩೧೯೨ ರಂಗನ ಮುಂದೆ ಸಿಂಗನೆ ?

೧೩೧೯೩ ಸಿಡಿಲನ್ನು ಪೊಟ್ಟಣ ಕಟ್ಟಿ ಶಾಖ ಕೊಟ್ಟ ಹಾಗೆ

೧೩೧೯೪ ಸಿಂಹಕ್ಕೆ ಗ್ರಾಮಸಿಂಹ ಜೋಡಿಯೇ ?

೧೩೧೯೫ ಸಿಂಹದ ಮುಂದ ಸಿಂಗಳೀಕನೆ ?

೧೩೧೯೬ ಸೀಸದ ಉಳಿಯಲ್ಲಿ ಶೈಲ ಕಡಿಯಬಹುದೆ ?

೧೩೧೯೭ ಸೂರ್ಯನ ಮುಂದೆ ಕೀಟದಾಟವೆ ?

೧೩೧೯೮ [1]ಹನುಮನ ಮುಂದೆ ಹಾರುವ ಗುಬ್ಬಿಯೆ ?

---

1 ಹಣಮಂತನ ಮುಂದೆ ಹಾರುಗುಬ್ಬಿ ಆಟ ?

ಹಿತಶತ್ರು

೧೩೧೯೯ 'ಅಲ್ಲಿ ಇಲ್ಲಿ ತಿರುಗುವುದಕ್ಕಿಂತ ಬೆಲ್ಲ ತಿಂದು ಸಾಯಿ' ಅಂದ

೧೩೨೦೦ ಅಲ್ಲಿ ಇಲ್ಲಿ ಯಾಕೆ ಅಲೆದು ಅತ್ತಿ ಹಣ್ಣು ತಿನ್ನುತ್ತೀ, ಇಲ್ಲಿ ಬಾ ಬಿಸಾಟ ಹಾಗೆ ಸಾಯುವಿಯಂತೆ

೧೩೨೦೧ 'ಅವರಿವರ ಮಾತ ಕೇಳಿ ಕೆಡಬೇಡ, ನನ್ನ ಮಾತ ಕೇಳಿ ಹುಡಿ ಮಣ್ಣು ಮುಕ್ಕೊ' ಅಂದ

೧೩೨೦೨ 'ಎದ್ದು ಹೋಗುವ ಮಾವ ! ಬಿದ್ದು ಹೋಗು' ಅಂದ

೧೩೨೦೩ 'ತೀರಿ ಹೋದರೆ ತಿಥಿ ಮಾಡ್ತೀನಿ, ಹೆದರಬ್ಯಾಡ! ಜೀವ ಬುಡು' ಅಂದ

೧೩೨೦೪ ನನಗೆ ಜೊತೆಗಾರ, ನನ್ನ ಹೆಂಡತಿಗೆ ಮಿಂಡಗಾರ

೧೩೨೦೫ 'ಭಿಕ್ಷೆ ಬೇಡ ನಾಯಿ ಹಿಡೀರಿ' ಅಂದ

೧೩೨೦೬ *ಸಸ್ಸಿನೆ (ಸಸನೆ, ಸಸ್ಸನೆ, ಸೊಸ್ಸನೆ) ಇರಲಾರದ ಬಡ್ಡಿ ನನ್ನ ಕಸವಾದ್ರೂ ಹೊತ್ತು ಸಾಯಲಿ ಅಂದ

ಸ್ವಾರ್ಥ

೧೩೨೦೭ ಅಪ್ಪ ಸತ್ರೆ ಏನಾತು, ಊಟ ಹೇಳಯ್ಯ!

೧೩೨೦೮ ಊರ ಬಡದು, ಉಗಾದಿಹಬ್ಬ!

೧೩೨೦೯ ಊರೆಲ್ಲಾ ಸಾಯಲಿ, ಊರ ಗೋಣಿಹಣ್ಣು ನನಗೊಬ್ಬನಿಗೇ ಇರಲಿ

---

* ಸಾಯೋದು ಹೇಗಿದ್ರೂ ಸಾಯ್ತಿಯೇ, ನನ್ನ ತಿಪ್ಪೆ ಕಸ ಹಾಕಿಯಾದರೂ ಸಾಯಿ

೧೩೨೧೦ ಒಡೆಯನಿಗೆ ಹಾಲಿಲ್ಲವೆಂದು ಎಮ್ಮೆ ಈಯುತ್ತೇ ?

೧೩೨೧೧ ಕತ್ತೆಯ ಕಾಲು ಮುರಿದರೇನು, ನಾಯ ಹಲ್ಲು ಮುರಿದರೇನು ?

೧೩೨೧೨ ಕಂಡ (ಜಡ) ವರ ಮಕ್ಕಳ ಬಾವಿಗಿಳಿಸಿ (ತಳ್ಳಿ, ನೂಕಿ) ಆಳ ನೋಡಿದರು

೧೩೨೧೩ ಕಂಡವರ ಮಕ್ಕಳಿಗೆ ಹುಚ್ಚಾದರೆ ನೋಡವರಿಗೆ ಚಂದ

೧೩೨೧೪ ಗಡ್ಡಕ್ಕೆ ಬೆಂಕಿ ಹತ್ತಿದಾಗ (ಹಪ್ಪಳ ಕಾಸಲಿಕ್ಕೆ ಬಂದ) 'ಬೀಡಿ ಹತ್ತಿಸಿಕೊಳ್ಳಿನಿ, ತಡಿ' ಅಂದ

೧೩೨೧೫ *ತಾನು ಕುಡಿಯುವುದು ಮುಕ್ಕು (ಗುಟುಕು) ನೀರು, ಮಡುವೆಲ್ಲ (ಹಾಳು ಮಾಡಿತು) ಕೆಡಿಸಿದ

೧೩೨೧೬ ತಾ ಬಲವೊ, ಜಗ ಬಲವೊ ?

೧೩೨೧೭ ತಾನುಂಟೊ, ಮೂರು ಲೋಕವುಂಟೊ ?

೧೩೨೧೮ ತಾನುಂಡು ತಾನುಟ್ಟರೆ ಗ್ರಾಮಕ್ಕೆ ಶಾಂತಿಯೇ?

೧೩೨೧೯ ತಿನ್ನೋದು ತಿಂತಾ ನಮ್ಮವರೇ ತಿನ್ನಲಿ

೧೩೨೨೦ ದೋಸೆ ಎರೆದ ಬಳಿ ಕೂಸಿಗೊಂದು ಆರತಿ

೧೩೨೨೧ ನನ್ನ ಬಾಯಿಂದ ತುಪ್ಪ ಸೋರಿದ್ರೆ ನಮ್ಮವರ ಬಾಯ್ಗೇ ಸೋರ್ಲಿ ಅನ್ನೋ ಮನುಷ್ಯ

೧೩೨೨೨ ನರಿ ಹೇಳ್ತಂತೆ : ನಾ ಬದುಕಿದ್ರೆ ಹನ್ನೆರಡು ಲೋಕವೂ ಬದಕಿ ದಂಗೆ

೧೩೨೨೩ ನಾಥನಾಗಬೇಕೆಂದು ಸ್ವಾರ್ಥ ಮಾಡಿದರೆ ವ್ಯರ್ಥವೇ ಸರಿ

೧೩೨೨೪ ನಿಮಗೆ ಶ್ರಮವಾದ್ರೂ ಚಿಂತೆಯಿಲ್ಲ, ನನಗೆ ಭ್ರಮೆ ತೀರಿತು

---

* ಕುಡಿಯೋದು ಒಂದು ಬೊಗಸೆ ನೀರ್ಗೆ ಸಮುದ್ರ ಕಲಕಿದಂಗ

೧೩೨೨೫ ನೆರೆಮನೆ ಶೋಭನದೊಳಗೆ (ನಮ್ಮ ಮನೆಯ ಮುಂಜಿ) ಮಗನ ಮುಂಜಿ ಮಾಡಿದ

೧೩೨೨೬ ನೆರೆ ಮನೆ ಸುಟ್ಟರೆ ಹಪ್ಪಳ ಕಾಯಿಸಿದ ಹಾಗೆ

೧೩೨೨೭ ನೆರೆಮನೆ ಹಾಳಾದರೆ ಕರ ಕಟ್ಟಾಕ ಇಂಬಾತು

೧೩೨೨೮ ಅರ್ಥ ಬಲ್ಲವನಾದ್ರೂ ಸ್ವಾರ್ಥ ಬಿಡಲಿಲ್ಲ

೧೩೨೨೯ ಮದುವೆ ಚಪ್ಪರದಲ್ಲೂ ಮಿಂಡರ ಸನ್ಮಾನ

೧೩೨೩೦ [1]ಮದುವೆ ಮನೆಯಲ್ಲಿ ಅನ್ನ ಇಕ್ಕಿ ಹಿತಪಡಕೊಂಡಂತೆ

೧೩೨೩೧ ಮಂದಿಯ ಮದುವೆಯಲ್ಲಿ ಗಂಡನನ್ನು ಮೇಯಿಸಿ ಉಪಚಾರ ಮಾಡಿದಂತೆ

೧೩೨೩೨ ಮೆದೆಗೆ ಬೆಂಕಿ ಹಾಕಿ ಅರಳು ಆರಿಸಿಕೊಂಡರು

೧೩೨೩೩ [2]ಯಾರ ಹೆಂಡತಿ ಎಲ್ಲಿಯಾದ್ರೂ ಹೋಗ್ಲಿ, ನಮ್ಮ ಹೆಂಡ್ತಿ ನಮ್ಮನೇಲಿರಲಿ

೧೩೨೩೪ ಯಾರದೋ (ದುಡ್ಡು) ರೊಕ್ಕ, ಎಲ್ಲಮ್ಮನ ಜಾತ್ರೆ

೧೩೨೩೫ ಸವಣು ಮನೆ ಸರಕು, ಮದುವೆ ಮನೆ ಬೆಳಕು

೧೩೨೩೬ ಸ್ವಾರ್ಥವಿದ್ದಲ್ಲಿ ಪ್ರೀತಿ ನಿಲ್ಲದು

೧೩೨೩೭ ಸ್ವಾರ್ಥವಿದ್ದವನ ಅರ್ಥ ವ್ಯರ್ಥವೇ ಸರಿ

೧೩೨೩೮ ಹೊರಗಿನ ಮಾರಿ ಹೊರಗೇ ಹೋಗಲಿ, ಮನೆ ಗಂಡನಿಗೆ ಜಯ ವಾಗಲಿ

---

1 ಮದುವೆ ಅನ್ನ ಇಕ್ಕಿ ಮಾನಸ್ಥಾನ ಪಡೆದಂಗೆ

2 ಯಾರ ತಾಯಿ ಏನಾದರೂ ಆಗಲಿ, ನಮ್ಮ ತಾಯಿ ಮನೇಲಿದಾಳೆ

ತನ್ನ ಕ್ಷೇಮ ಮುಖ್ಯ

೧೩೨೩೯ ಊರಿಗೆ ಊರೇ ಹೋಗುತ್ತಿದ್ದಾಗ ಗವರಿಗೆ 'ತನ್ನ ಗಳಿಗೆಗೆ ಹೇಗೆ ?' ಅಂದನಂತೆ

೧೩೨೪೦ ನಾಡೆಲ್ಲ ಓಡಿಹೋಗುವಾಗ ಮೂಡೆ ಅಪೇಕ್ಷಿಸಿದ

೧೩೨೪೧ ಶಾಲು ಸಕಲಾತಿ ಎಲ್ಲ ತೇಲಿ ಹೋಗುವಾಗ ಕವುದಿ 'ನನ್ನ ಗತಿಯೇನು ?' ಅಂತಂತೆ

೧೩೨೪೨ ಹಡಗೇ ಹೋಗುವಾಗ 'ನನ್ನ ಹೆಡಗೆಗೆ ಏನು ಗತಿ?' ಅಂದ ಹಾಗೆ

ಅವಿಧೇಯತೆ

೧೩೨೪೩ ಅಪ್ಪನ ಸಮಕ್ಕೆ ಪಂಚೆ ಉಟ್ಟುಕೊಳ್ಳುವ ಮಗನನ್ನೂ ತಾಯಿ ಸಮಕ್ಕೆ ಸೀರೆ ಉಟ್ಟುಕೊಳ್ಳುವ ಮಗಳನ್ನೂ ಮಾತಾಡಿಸಬೇಡ

೧೩೨೪೪ ಎದೆ ಮೀರಿದ ಹೊಟ್ಟೆ, ತುಟಿ ಮೀರಿದ ಹಲ್ಲು

೧೩೨೪೫ 'ಪತಿ' ಅಂದರೆ 'ಪ್ರೀತಿ', 'ಹಬ್ಬ' ಅಂದರೆ 'ತಿಥಿ'

೧೩೨೪೬ ತುಟಿಮೀರಿದ ಹಲ್ಲು, ವನ ಮೀರಿದ ಪಕ್ಷಿ, ಮತ ಮೀರಿದ ಕಂಬ

೧೩೨೪೭ ತುಟಿ ಮೀರಿದ ಹಲ್ಲು ಕಟವಾಯಿಗೆ ತಗುಲಿತು

೧೩೨೪೮ ತುಟಿ ಸೋಕಿದ ಹಲ್ಲು ಘಟ ಬಲ್ದಾ ?

೧೩೨೪೯ ದೊಡ್ಡವರ ಗಡ್ಡ ಹಾಯಬಾರದು

೧೩೨೫೦ ದೊಡ್ಡವರ ಮಾತಿಗೆ ಅಡ್ಡಲಾಗಿ ಬಂದ

೧೩೨೫೧ ಬದಲು ಮಾತಾಡುವವ ಬೆದರಿಸಿದರೆ ಬಿಟ್ಟಾನೆ ?

ಅತಿವರ್ತನೆ

೧೩೨೫೨ ಅತಿ ಸರ್ವತ್ರ ವರ್ಜಯೇತ್

೧೩೨೫೩ ಅತಿ ಗತಿಗೆಡಿಸಿತು

೧೩೨೫೪ ಅತಿಯಾದರೆ ಅಪಾಯಕರ, ಅಲಕ್ಷ್ಯ ಮಾಡಿದರೆ ಅನಾಹುತ

೧೩೨೫೫ ಅತಿಯಾದರೆ ಅಮೃತವೂ ವಿಷ

೧೩೨೫೬ ಅಮೃತವಾದರೂ ಅಜೀರ್ಣವಾದರೆ ಅಪಾಯಕರ

೧೩೨೫೭ [1]ಕಬ್ಬು ಸಿಹಿ ಅಂತ ಬುಡ (ಮಟ್ಟ) ಸಹಿತ ತಿನ್ನಬಾರದು

೧೩೨೫೮ ಜೇನು ಸವಿ ಅಂತ ಮೇಣದ ಸಮೇತ ತಿಂದ

೧೩೨೫೯ [2]ತಲೆ ಬಲಿಯಿತು ಅಂತ ಕಲ್ಲು ಹಾಯಬಾರದು

೧೩೨೬೦ ದ್ರಾಕ್ಷಿ ಸಿಹಿ ಅಂತ ಬಳ್ಳಿ ಸಮೇತ ತಿನ್ನಬಾರದು

೧೩೨೬೧ ಮಿತವಾದದ್ದು ಬಾಳುವುದು, ಹಿತವಾದದ್ದು ಫಲಿಸುವುದು

೧೩೨೬೨ ಸ್ವಲ್ಪದರಲ್ಲೇ ಇರೋದು ಸ್ವಾರಸ್ಯ

ನಾಚಿಕೆ

೧೩೨೬೩ ಈಚಲ ಹೆಂಡ ಕುಡಿಯುವವನಿಗೆ ನಾಚಿಕೆ ಎಲ್ಲಿ ಬಂತು?

೧೩೨೬೪ ಒಳಗಿನ ನಾಚಿಕೆ ಹೊರಗೆ ಕಾಣದೆ ಇರುತ್ಯೆ ?

೧೩೨೬೫ ಕದ್ದವನ ನಾಚಿಕೆಗಿಂತಲೂ ಬಿದ್ದವನ ನಾಚಿಕೆ ಹೆಚ್ಚಂತೆ

೧೩೨೬೬ ಕೀರೆ ಸೊಪ್ಪಿಗೂ ನಾಚಿಕೆಯಿಲ್ಲ, ಕುಂಡ್ಲಿಗೂ ನಾಚಿಕೆಯಿಲ್ಲ

೧೩೨೬೭ ನಾಚಿಕೆ ಒಂದು ಗುಣ

೧೩೨೬೮ ನಾಚಿಕೆ ಗೀಚಿಕೆ ಹೊಳೆಯಿಂ (ಊರಿಂ, ಊರಬಾಗಿಲಿಂ, ನಾಗಮಂಗಲದಿಂ) ದ ಆಚೆಗೆ

---

1 (i) ಕಬ್ಬು ಸಿಹಿ ಅಂತ ಬೇರಗಿದರೆ ದವಡೆ ಹರಿಯುತ್ತದೆ
(ii) ಕಬ್ಬು ಸಿಹಿಯೆಂದು ಬೇರಗಿಯುವುದೆ ?

2 ಫಣೆ ಗಟ್ಟಿ ಅಂತ ಬಂಡೆಗೆ ಹೊಡೆದುಕೊಳ್ಳಬಾರದು

೧೩೨೬೯ ನಾಚಿಕೆಯಿಲ್ಲದವನು ನಾಯಿಗಿಂತ ಕಡೆ

೧೩೨೭೦ ನಾಚಿಕೆಯಿಲ್ಲದವರ ಕಂಡರೆ ಆಚೆಗೆ ತೊಲಗಬೇಕು

೧೩೨೭೧ ನಾಚಿಕೆಯಿಲ್ಲದವರಿಗೆ ಹೇಸಿಕೆ ಎಲ್ಲಿಯದು?

೧೩೨೭೨ ನಾಚಿಕೆಯುಳ್ಳವನು ಗುಣವಂತ, ನಾಚಿಕೆ ಬಿಟ್ಟವನು ಗುಣಹೀನ

೧೩೨೭೩ ನಾಚಿಸುವವರ ಬಾಗಿಲ ತುಳಿಯಬಾರದು, ನೂಕುನುಗ್ಗಲಲ್ಲಿ
ಮಾತಾಡಬಾರದು

೧೩೨೭೪ ನಾಲಗೆಗೆ ನಾಚಿಕೆ ಇಲ್ಲವಾದರೆ ಹೊಟ್ಟೆಗೆ ಹಸಿವಿಲ್ಲ

೧೩೨೭೫ ಪೇಟೆಯಲ್ಲಿ ಮೂಗು ಕೊಯ್ಸಿಕೊಂಡವನಿಗೆ ಹಳ್ಳಿಯಲ್ಲಿ ನಾ

೧೩೨೭೬ ಮನೆ ಗಂಡನಿಗೆ ಎದೆ ಮರೆಸಿದ ಹಾಗೆ

೧೩೨೭೭ ಲಜ್ಜೆಯಿಲ್ಲದವನು ಕಜ್ಜಾಯ ಕೇಳಿದ

೧೩೨೭೮ ಹೇಸಿ ಮೈಲಿಗೆಗೆ ಅಂಜಳು, ನಾಸಿ ನಾಚಿಕೆಗೆ ಅಂಜಳು

ನಾಚಿಕೆಗೇಡಿ

೧೩೨೭೯ ಕೋಣನಂತಹ ಮಗಳ ಕೋಣೇಲಿ ಕುಳ್ಳಿರಿಸಿ, ಅತ್ತೆ ಬಂದ್ಲು
ಅಳಿಯನಿಗೆ (ಇಕ್ಕೋಕೆ) ಮುತ್ತು ಕೊಡೋಕೆ

೧೩೨೮೦ ನಾಚಿಕೆಯಿಲ್ಲದ ನರಳೆಕುಡಿ, ಬೇಸಗೆಯಲ್ಲಿ ಹೊಡೆ ಕಿತ್ತಿತು

೧೩೨೮೧ ಮಾನಗೆಟ್ಟ ಮನ್ಸ್ಯಾಳನಿಗೆ ಶಾವಿಗೆ ಇಕ್ಕಿದರೆ, ಮೂಲೇಲಿ
ಮುದುರಿಕೊಂಡು ಮೂವತ್ತ್ಮೂರು ತಿಂದ

೧೩೨೮೨ ಮಾನಗೆಟ್ಟ ಮೂದೇವಿ ಅತ್ತೆ ಮನೆಗೆ ಹೋಗ್ತಾ ಹುಚ್ಚೆಳ್ಳು ತಿಂ
ತಿಂದು ಹೋದ

೧೩೨೮೩ ಮಾನಗೆಟ್ಟ ಮುಕ್ಕ ಒದಕೊಂಡು ತಿನ್ನು ಅಂದ್ರೆ, ಒದರಿ
ಕೊಂಡಲ್ಲ ಮುದಕೊಂಡು ತಿಂತೀನಿ ಅಂದ

೧೩.೩೮೪ ಹಾಣೆಗೆಟ್ಟವನಿಗೆ ಓಣಿಯಲ್ಲಿ (ಕೈಧಾರೆ) ಸೋಬಾನ

೧೩.೩೮೫ ಸಿಗ್ಗಿಲ್ಲ ಗೊಬ್ಬಿಲ್ಲ ಗೊಬ್ಬೊಳೆಯ ಅನ್ನೋವತ್ಗೆ, ನನಗೇನು ಸ್ವಾಮಿ ದನ ತಿನ್ನೋನ್ಗೆ ಅಂದ

ಭಂಡ

೧೩.೩೮೬ ಅಂದ್ರೆ ನನ್ನ ಅಂಡಿಗಾಯಿತು, ಕೂದರೆ ನನ್ನ ಕುಂಡ್ಯಾಗಯ್ತು

೧೩.೩೮೭ ಉಂಡವನಿಗೆ ಹಸಿವಿಲ್ಲ, ಭಂಡ (ಮಿಂಡಗಾರ) ನಿಗೆ ನಾಚಿಕೆಯಿಲ್ಲ

೧೩.೩೮೮ ಛಿ ! ಅಂದ್ರೆ 'ನನ್ನ ಛಲಾ (ಬಾ) ಅಂದರು' 'ಮುಕ್ಕ' ಅಂದರೆ ನನ್ನ ಅಕ್ಕ ಅಂದರು (ಅಂದಳಂತೆ)

೧೩.೩೮೯ ಗಂಡ ಹೆಂಡ್ತೀರನ್ನ ದೇವರು ಮಾಡವನೆ ಅಂದರೆ ಭಂಡಾಟಾನೂ ದೇವರು ಮಾಡವ್ನ?

೧೩.೩೯೦ ತನ್ನ ಹೇಸಿಗೆ ತಾನು ತಿಂದು, ಕಂಡೋರ ಹೇಸಿಕೆಗೆ ಕೈಹೊಡ್ಡಿದ ಹಾಗೆ

೧೩.೩೯೧ ಪುಂಡಾಟ ಹತ್ತುವವ ಭಂಡಾಟ ಬಿಟ್ಟಾನೆ ?

೧೩.೩೯೨ ಬೈದರೆ ಬೈಸಾರೆಗಾಯ್ತು, ಹೊಡೆದರೆ ಬೆನ್ನಿಗಾಯ್ತು

೧೩.೩೯೩ ಭಂಡ, ಚಿತ್ರ ಕಂಡ ಪಾಪಕ್ಕೆ ಬರೆದವನ್ನೇ ದಂಡಿಸಲಿ

೧೩.೩೯೪ ಭಂಡ ಬದುಕಿದ, ಛಲಗಾರ ಕೆಟ್ಟ

೧೩.೩೯೫ ಭಂಡ ಬಾಯಿ ಇದ್ದರೆ ಹಿಂಡುವ ಎಮ್ಮೆ ಇದ್ದ ಹಾಗೆ

೧೩.೩೯೬ [1]ಭಂಡನ ಅಂಡು ಕೊಯ್ದರೆ 'ನನ್ನ ಅಂಡಲ್ಲ. ಬದನೆಕಾಯಿ ಅಂಡು' ಅಂದ

---

1 (i) ಚೊಡ್ಡಿ ನಿನ್ನಂಡ್ಯದೋರ್ಯಾರು ಅಂದ್ರೆ 'ನನ್ನ ಅಂಡಲ್ಲ. ಬದನೆಕಾಯಿ ತೊಟ್ಟು' ಅಂದ್ಲಂತೆ

(ii) ಭಂಡ ನಿನ್ನ ಅಂಡು ಕುಯ್ದವರ್ಯಾರು?

೧೩೨೯೭ ಭಂಡನ ಕಂಡರೆ ಕಂಡಿಯಲ್ಲಾದರೂ ಹೋಗಬೇಕು

೧೩೨೯೮ ಭಂಡನ ಲಾಭ ಹೆಂಡವಲ್ಲೋಯ್ತು

೧೩೨೯೯ ಭಂಡನ ಸ್ನೇಹ ಭಂಗ ತಪ್ಪದು

೧೩೩೦೦ ಭಂಡನ ಸ್ನೇಹ ಮಾಡಿ ಇದ್ದ ಬಂಡವಲ ಕಳಕೊಂಡ

೧೩೩೦೧ ಭಂಡನಿಗೆ ಪಿಂಡದ ಯೋಚನೆಯೆ?

೧೩೩೦೨ ಭಂಡನ ಕೋಳಿಗೆ ಬರಗಾಲವಿಲ್ಲ. ತೊಂಡೆ ಹೂವಿಗೆ ಪರಿಮಳ ವಿಲ್ಲ

೧೩೩೦೩ [1]ಭಂಡರನ್ನು ಕೊಂದವರಿಲ್ಲ, ನಾಯನ್ನು ತಿಂದವರಿಲ್ಲ

೧೩೩೦೪ ಭಂಡಾಟ ಬದುಕಿಸಿತು ಕ್ಯಾ(ಕೋ)ಣ (ಕೋಣ್ಸರ, ಕೊಂಡಾಟ) ಕೆಡಿಸಿತು

೧೩೩೦೫ ಭಂಡಾಟ ಮಾಡಿದರೆ ಕಂಬಳಕ್ಕೆ ಕಡಿಮೆಯೆ?

೧೩೩೦೬ ಮಾನ ಬಿಟ್ಟರೆ ಮೊಳಕಾಲುದ್ದ ಅನ್ನ

೧೩೩೦೭ ರಂಡೆಗೆ ಗಂಡನಿಲ್ಲ, ಭಂ(ಮುಂ)ಡೆಗೆ ನೀತಿಯಿ(ಭಯವಿ)ಲ್ಲ

ಅಸಾಧ್ಯ ವ್ಯಕ್ತಿಗಳು

೧೩೩೦೮ [2]ಅವನು ಚಾಪೆ (ಹಸೆ) ಕೆಳಗೆ ನುಸಿದರೆ ಇವನು ರಂಗೋಲೆ ಕೆಳಗೆ ನುಸೀತಾನೆ

೧೩೩೦೯ ಅಂಗುಲ ಸ್ಥಳಕೊಟ್ಟರೆ ಮಠ ಕಟ್ತಾನೆ

---

1 ವಾಯು ಕೊಂದವರಿಲ್ಲ, ನಾಯಿ ತಿಂದವರಿಲ್ಲ

2 ಮಂದಲಿಗೆ ಕೆಳಗೆ ನುಸಿಯುವವರೆಲ್ಲ ನುಸಿಯಲಿ, ನಾವು ರಂಗೋಲೆ ಕೆಳಗೆ ನುಸಿಯುವ

೧೩೩೧೦ ಇರುವೆ ಕಾಲಿಗೆ ಉರುಳು ಹಾಕ್ತಾನೆ

೧೩೩೧೧ 'ಉಂಡು ಊರು ಹಾಳು ಮಾಡೋ ದಾಸಯ್ಯ' ಅಂದರೆ 'ಉಪ ವಾಸವಿದ್ದೇ ಹಾಳುಮಾಡ್ತೀನಿ' ಅಂದ

೧೩೩೧೨ ಎಡೆ ಕೊಟ್ಟರೆ ಇಡೀ ನುಂಗ್ತಾನೆ

೧೩೩೧೩ ಎಲ್ಲರೂ ಎಳ್ಳಿನಲ್ಲಿ ಎಣ್ಣೆ ತೆಗೆದರೆ ಅವ ಮರಳಿನಲ್ಲೇ (ಹುರಿ ಗಡಲೆಯಲ್ಲಿ) ತೆಗೀತಾನೆ

೧೩೩೧೪ ಎಳೆ ಸಿಕ್ಕಿದರೆ ಹಚ್ಚಡ ನುಂಗ್ತಾನೆ

೧೩೩೧೫ ಕಬ್ಬಿಣದ ಗಂಡಾರಿ ನುಂಗೋವನಿಗೆ ಶುಂಠಿ ಕಷಾಯವೆ?

೧೩೩೧೬ [1]ಕಲ್ಲಿನಿಂದ ನಾರು ಎತ್ತು (ತೆಗೀ) ತಾನೆ

೧೩೩೧೭ ಕಲ್ಯಾಣಿಸಿ ಕರಿವಿಾನ್ ಸೆಡೆ ಆಡಿಸ್ತಾರೆ

೧೩೩೧೮ ಕಿಚ್ಚು ನುಂಗುವವ ನುಚ್ಚು ಬಿಟ್ಟಾನೆ ?

೧೩೩೧೯ ಕಿಟಕಿಯಿಂದ ನುಸುಳುವವ ಹೆಬ್ಬಾಗಿಲಿಂದ ಬಾರನೆ ?

೧೩೩೨೦ ಕೊತ್ತಿಗೆ ಕೊಂಬು ಹುಟ್ಟಿಸಿ ನುಚ್ಚಕ್ಕಿಗೆ ಹೊಳೆ ಬರಸ್ತಾನೆ

೧೩೩೨೧ ಗುಡಿ ನುಂಗುವವನಿಗೆ ಲಿಂಗ ಅಡ್ಡಿಯೆ ?

೧೩೩೨೨ ಚಾಟಿ ಇಲ್ಲದೆ ಬುಗುರಿ ಆಡಿಸ್ತಾನೆ

೧೩೩೨೩ ಜಗ ಜಾಲಿಸಿ ಮೊಗೇಲಿ ನೀರು ತಂದ ಹಾಗೆ

೧೩೩೨೪ ಜಗ ಜಾಲಿಸುವ ಬಡ್ಡಿ ಮಗು ತೂಗಲಾರಳೆ ?

೧೩೩೨೫ ಜಗ ಹೊರುವವಳಿಗೆ ಮಗು ಭಾರವೆ ?

---

1 ಬಂಡೆಯ ಮೇಲೆ ನಾರು ಹುಟ್ಟಿಸ್ತಾನೆ

೧೩೩೨೬ *ತೇರು ನುಂಗೋನಿಗೆ ಬಡಿಕೆ ಹಪ್ಪಳ-ಸಂಡಿಗೆ

೧೩೩೨೭ ತೋರಿಸಿದರೆ ಹಾರಿದ್ನಂತೆ

೧೩೩೨೮ 'ನೀನು ಕೆಲ್ಸ ಮಾಡ್ದಂಗೆ ಮಾಡಲಾರದ ಕೆಲಸದ ನಾನು ಕ
ಮುಟ್ಟಿಕೊಂಡು ಮಾಡ್ತೀನಿ' ಅಂದ

೧೩೩೨೯ 'ನೀನು ಗಾಯತ್ರಿ ಮಾಡಿದರೆ ನಾನು ಅಪಸವ್ಯವನ್ನು ಮಾಡ್ತ
ಅಂದ

೧೩೩೩೦ ಭೂಮಿ ಸುತ್ತೋದು ಬಡವನಿಗೆ ದೇಶ ಸುತ್ತೋದು ಕಷ್ಟ

೧೩೩೩೧ ಸೂಳೆ ಕೈನ ಬೆಲ್ಲ ಕೇಳಿದ

೧೩೩೩೨ ಸೋತವರೆ ಸಂತೆ ಸೇರ್ಕೋತ್ತಾನೆ

೧೩೩೩೩ ನಾಯಿ ತಿನ್ನೋದು ಬಿಟ್ಟು ಬಿಡ್ತಾನ ?

೧೩೩೩೪ ತೇರು ನುಂಗುವವ ನೀರು ಬಿಡ್ತಾನೆ ?

ಪರರನ್ನು ಅವಹೇಳಿಸುವಿಕೆ

೧೩೩೩೫ ಆನೆ ಹೋದಾದರ ನಾನೇ ಗತಿ

೧೩೩೩೬ ಈ ಮೊಲೆಗೆ ಏನಾದ ? ಮೊಲೆಗಾಗಿ ತೋರಿಸ
ಹುಣಿಸಿಕ್ಕಾಗ ಕಿರಿ ಬೇಕಾ ?

೧೩೩೩೭ ಈ ಮೊಲೆಗೆ ಗಿಣಿ ಗಂಧವೆ ? ಬಿಟ್ಟಿಕೊಂಡಾಗ ತಂದಿ
ಬಡಿಸುವೆ ?

೧೩೩೩೮ ಈ ಮೊಲೆಗೆ ಹೇಗೆ ನೋಡಿಕೊಂಡೆ ನಾನು

• ಮನೆ (ಬಾಗ್ಲು) ನುಂಗೋನಿಗೆ ಕದ ಹಪ್ಪಳ

೧೩.೨.೩೯ [1]ಈ ಮೊರೆ ಬೆಕ್ಕ (ಹುಟ್ಟಿ)ದ್ದು (ಬಂದು ಕಾಣೆ ?) ದೇವರು ಮಾಡಿದ್ದೆ ?

೧೩.೨.೪೦ ಈ ಮೊರೆಗಳು ಅಂದಾವಾ? ಹುಂಚಿಕಟ್ಟಿಗಳು ಶ್ವಾದಾವಾ?

೧೩.೨.೪೧ ಉದ್ದವಾದರೆ ಬೀಸಣಿ, ಕುಳ್ಳಾದರೆ ನಾಗರ

೧೩.೨.೪೨ ಕಾಡಿಕೆಂಳಗೆ ಮಾರದ ಸಂತ್ಯಾಂತಿಯಾ?

೧೩.೨.೪೩ ಕಾಗೆ ಕೊಂಗಿಲೆಯನ್ನು ಕಪ್ಪು ಅಂತಂತೆ

೧೩.೨.೪೪ ಚೆಂಬಿಗ ಬೆಂದ್ರ. ಗೀಜಗನ್ನ ಬುದ್ಧಿಗಾಣ !

೧೩.೨.೪೫ ತೆಂಕಣೆಂಗಳ ಬೀಜ ಸಂತ್ಯಾಂತಿ ಹುಟ್ಟಿ?

೧೩.೨.೪೬ ನಾಯಿ ಹೇಗಾದರೂ ಇದ್ದೀತು. ಹದ್ದು ಬಾರದು ಹೂಮುಗ್ಗಿದರಾದ್ದ

೧೩.೨.೪೭ ನರಿಕ್ಕೆ ಬೊಂಬಿದ್ರ ಮಾಡಿದ ಬಟ್ಟೆಗೆಟ್ಟು

೧೩.೨.೪೮ ಹಿಡಿಲ ಬಂದು ಗಾಣಾ ? ಹದ್ದಿನಿಲ ಬಂದು ಆಣಾ ?

೧೩.೨.೪೯ ಹಿಡಗಣ್ಣು ಮೊಂದೆ ಆಸೆ ಹಾಳೆಗಾಗಿದೆಂ.

೧೩.೨.೫೦ ಮಂಗ ಮುಂದೆ ಆದಾರ ಬಂದು ಕೀಡ.

೧೩.೨.೫೧ ಮುಂತ್ಯಿನ ಮಂಗೆಗೆ ನಾಗಾಣಿ ಬೇಡ

೧೩.೨.೫೨ ಮಾಡಿದೇವಿ ನೋರೆ ನೋಡು, ಹಾದಿಗೆ ಹಾದ ನೋಡು. ಹಿಂತಿರಿಲ ಬಂದ ನೋಡು

೧೩.೨.೫೩ ಮಾಡಿದು ಕಾಡಿನ ಬತ್ತಿ ಕಾಡಿದಾಗೆಲ. ಬೆಲಿದಾಗೆಲ. ಮಿಲಿದಾಗೆಲ!

---

1 (i) ಈ ಮೊರೆ ಬೆಕ್ಕನ್ನು ದೇವರು ಮಾಡಿದ ಪದ್ಯದ ಮಾಡಿ ಅಂದಾರೆ ?
(ii) ಈ ಮೊರೆ ಬೆಕ್ಕಿನ ದೇವರ ಮಾಡಿ ದೇವರಿಗೆ ನಾನು ಕೆಂಡ್ಯ್ಯಾ ? ಮಡಿಗೆ ಪದ್ಯದ ತಂದಾದಾ ?
(iii) ಈ ಮಾಡಿದ ಬೆಕ್ಕು ಬೆಟ್ಟು ದ್ರವ್ಯ ಮಾಡಾಳೆ ?

೧೩.೩.೫೪ ಹಕ್ಕಿ ಪಕ್ಕಿಗಳಲ್ಲಿ ಕಾಗಿ ಚಂಡಾಲ, ಮಾನವರಲ್ಲಿ ಕುಹಕ ಚಂಡಾ

೧೩.೩.೫೫ ಹಂಪಾಪುರಕ್ಕೆ ಯಾಕೆ ಹಳೆರಾಗಿ, ತಿರುಮಕೂಡ್ಲಿಗ್ಯಾಕೆ ಸ್ಯಾದೊಬಾವಿ

೧೩.೩.೫೬ ಓಂದಾಡೋದೂ ಒಂದೇ, ಹೇಸಿಗೆ ತಿನ್ನೋದೂ ಒಂದೇ

ಆಡಿಕೆಗೆ ತಕ್ಕ ನಡತೆ

೧೩.೩.೫೭ [1]ಆಡುವವರ ಆಡಿಕೆಗೂ ಮಗಳ ಬಾಳಿಕೆಗೂ ಸರಿಹೋಯ್ತು

೧೩.೩.೫೮ [2]ನಗುವವರ ಮುಂದೆ ಎಡವಿ ಬಿದ್ದಹಾಗೆ

ಆಡುವುದು ಆಡಿಕೊಳ್ಳುವುದಕ್ಕೆ

೧೩.೩.೫೯ ಅಗಸ ಮಾಡಿ ಅಪಸ್ವಾರಿ ಎನಿಸಿಕೊಂಡಂತೆ

೧೩.೩.೬೦ ಆಡುವುದು ಆಡಿಕೊಳ್ಳೋಕೆ, ಓಡೋದು ಜಾರಿ ಬೀಳೋಕೆ

೧೩.೩.೬೧ 'ಇವನ್ಯಾರಪ್ಪ ಗೊಪ್ಪ ?' ಅಂದರೆ 'ನಿಂದು ಬಲು ಸುದ್ದವಾ
ಅಂದ

೧೩.೩.೬೨ ಎಮ್ಮೆಕರು ತನ್ನ ಚಂದಕ್ಕೆ ಹಂದಿಮರಿಯನ್ನು ಆಡಿಕೊಂಡಿತು

೧೩.೩.೬೩ ಕಾಗೆ ಚಂದಕ್ಕೆ ಕೋಗಿಲೆ ಜರೀತು

೧೩.೩.೬೪ [3]ಹಂದಿ ತನ್ನ ಚಂದಕ್ಕೆ ವೃಂದಾವನ ಆಡಿತಂತೆ

೧೩.೩.೬೫ ತಾನು ಕೋಡಗ, ಪಳವನವ(ಹರರ)ನ್ನ ಜರಿಯಿತು

---

1 (i) ಹೇಳುವವರ ಹೇಳಿಕೆಗೂ ಮಗನ ಬಾಳಿಕೆಗೂ ಸಮ
(ii) ಮಗಳು ಮಾಡೋದೂ ಹಾಗೆಯೇ, ಜನ (ಅಳಿಯ) ಆಡೋದೂ ಹಾಗೆಯೇ

2 ಆಡುವೋರ ಮುಂದೆ ಜಾರಿ ಬಿದ್ದಹಾಗೆ

3 ಹಂದಿ ತನ್ನ ಚಂದಕ್ಕೆ ನವಿಲನ್ನು ಜರಿಯಿತಂತೆ

೧೩೩೧೬ ತಾನು ಹೆರಲೊಲ್ಲ ಬಂಜೆ, ಹೆರುವವರನ್ನು ಅಣಕಿಸಿದರೆ ಹೇಗೆ ಕಂಡಾಳು ?

೧೩೩೧೭ ನಾಯಿ, ಕಂಡು ಬೊಗಳುತ್ತದೆ, ನರಮನುಷ್ಯ ಕಾಣದೆ ಬೊಗಳುತ್ತಾನೆ

೧೩೩೧೮ ಹಿಂದೆಗೆ ನನ್ನ ಗಂಡ ಹಿಡ್ಕೊಂಡ್ ಇದ್ದೊಂದಕ್ಕೆ ಹೆರವಾಗೆ ಮುಂದೆಗೆ ಹೋಗುಬಾಳು

೧೩೩೧೯ ಮಾದಿಗನ ಹೊಟ್ಟೆ ಕಟ್ಟುತ್ತದೆ, ನಾಯಿಗನ ಕತ್ತೆ ಕಟ್ಟುತ್ತದೆ

೧೩೩೨೦ ಪರರನ್ನ ಆಡಿಕೊಳ್ಳುವ ಬಾಯಿ ಸೋರೆಕಾಯಿ ಹಾಗೆ

ಆಡುವುದನ್ನು ತಡೆಗಟ್ಟಲಾಗುವುದಿಲ್ಲ

೧೩೩೨೧ ಅಂಡೆ ಕಟ್ಟಬಹುದು, ದೊಂಡೆ (ಮುಂದೆ ಬಾಯಿ) ಕಟ್ಟುವುದಕ್ಕೆ ಸಾಧ್ಯವೆ ?

೧೩೩೨೨ ಆಹಾಪ್ ಅನ್ನುವ ಬಾಯಿ, ಓಡೋಪ್ ಅನ್ನುವ ಕಾಲು

೧೩೩೨೩ ಆಡೋವ್ರು ಆಡ್ತಿರ್ಲಿ, ಕೂಗ್ಲಿ ಹಿಮ್ಮೆಪ್ಪನ್ನ !

೧೩೩೨೪ ಉಂಡರೆ ಊರು ಹಾಳು ಅನ್ನೋರು, ಮಿಂದರೆ ಗಂಗೆ ಹಾಳು ಅನ್ನೋರು

೧೩೩೨೫ ಊರ ಬಾಯಿ ಮುಚ್ಚೋದೊ, ಗೆರಸಿ ಬಾಯಿ ಮುಚ್ಚೋದೊ!

೧೩೩೨೬ ಎಲುಬಿಲ್ಲದ ನಾಲಗೆ ಹೇಗಾದ್ರು ತಿರುಗುತ್ತೆ

೧೩೩೨೭ ಒಕ್ಕುವುದು ರೈತನ ಕೆಲಸ, ನೆಕ್ಕುವುದು ನಾಯಿ ಕೆಲಸ

೧೩೩೨೮ ಕಂಡವರ ಮಾತಾಡದೆ ಇದ್ರೆ, ಉಂಡದ್ದು ಅರಗಲ್ಲವಂತೆ

೧೩೩೨೯ ಜನದ ಬಾಯಿಗೆ ಕಟ್ಟಿಲ್ಲ, ನಾಯಿ ಬಾಯಿಗೆ ಬಿಟ್ಟಿಲ್ಲ

೧೩೩೩೦ ನಕ್ಕರೆ ಅವರ ಹಲ್ಲೇ ಕಾಣಿಸುತ್ತೆ

೧೩೩೮೧ ನ್ಯಾಯವಾದ್ದಕ್ಕೆ ನಗೋದೆ ಲೋಕದ ಕೆಲಸ

೧೩೩೮೨ ನೆರೆಯವನ ಹೆಂಡತಿ ಹೇಳಕೊಳ್ಳೋದು ಸಂಗತಿ

೧೩೩೮೩ ಪೀಡೆ ಬಿಟ್ಟರೂ ಆಡೋದು ಬಿಡ

೧೩೩೮೪ ಬದುಕಿದ(ಬಿದ್ದ)ರೆ ಬಾಯ್ಬಿಡಿಕೊಳ್ತಾರೆ. ಕೆಟ್ಟರೆ (ಕೇಕೆ ಹಾಕ್ತಾರೆ) ಅಂದು ಬಡಕೊಳ್ತಾರೆ

೧೩೩೮೫ ಬಾಗಿಲಿಗ ಬಾಯಿಲ್ಲ. ನಾಲಗೆಗೆ ಮೂಳೆಯಿಲ್ಲ

೧೩೩೮೬ ಬಾಯಿ ಯಾರ ಸುದ್ದಿ ಆಡದು. ಕಾಲು ಯಾರ ಎಂಜಲು ತುಳಿಯದು?

೧೩೩೮೭ ಮಡಕೆ ಬಾಯಿ ಕಟ್ಟಬಹುದು, ಮನುಷ್ಯರ ಬಾಯಿ ಕಟ್ಟಲಾಗದು

೧೩೩೮೮ ಸಮುದ್ರದ ಕೂಗು ನಿಲ್ಲಿಸಬಹುದು, ಜನರ (ನಾಲಗೆಯ) ಕೂಗು ನಿಲ್ಲಿಸಲು ಸಾಧ್ಯವಿಲ್ಲ

೧೩೩೮೯ ಹೊಡೆಯುವ್ರ ಕೈತಡೀಬಹುದು, ಮಾತಾಡೋರ ಬಾಯ್ ಹಿಡಿಯಲು ಸಾಧ್ಯವಿಲ್ಲ

ಆಡುವುದು ಒಳ್ಳೆಯದಲ್ಲ

೧೩೩೯೦ ಅಣಕಿಸಿ ಹಾಸ್ಯ ಮಾಡಬೇಡ, ಕೆಣಕಿ ಜಗಳ ತೆಗೀಬೇಡ

೧೩೩೯೧ ಅರಳು ತಿಂದ ಬಾಯೂ, ಆಡಿಕೊಂಡ ಬಾಯೂ ಒಂದೇ

೧೩೩೯೨ ಅವನು ಅವಳಿಗೆ ಗಂಟು ಬಿದ್ದರೆ ನಾವ್ಯಾಕೆ ಗಂಟಲು ಹೊಡೆಯ್ಕೋ ಬೇಕು

೧೩೩೯೩ ಉಂಡದ್ದು ಉಳಿಯದಿದ್ದರೂ ಆಡಿದ್ದು ಉಳಿಯುತ್ತೆ

೧೩೩೯೪ ತೆಪ್ಪಗಿದ್ದವ ಜಾಣ, ಮೂದಲಿಸಿದವ ಮೂರ್ಖ

೧೩೩೯೫ ನೋಡದೆ ಆಡಿದರೆ ಕೇಡು ತಪ್ಪದು

೧೩೩೯೬ ನೋಡದೆ ಆಡಬಾರದು, ಕಾಣದೆ ಹೇಳಬಾರದು

೧೩೩೯೭ ಒರದಲ್ಲಿ ಆಡಿದನ್ನು ಕೆರದಲ್ಲಿ ಹೊಡೆದದನ್ನು ಮರೆಯಲ್ಲ

೧೩೩೯೮ ಬಾಳೆ ಬದುಕೋಳಿಗೆ ಹಾಗೋರು ಸುದ್ದಿ ಯಾಕೆ ?

೧೩೩೯೯ ಬಿದ್ದ ಪೆಟ್ಟಿಗಿಂತ ನಕ್ಕ ಪೆಟ್ಟು ಹೆಚ್ಚು

೧೩೪೦೦ *ಮಾಡಿದವರ ಪಾಪ ಆಡಿದವರ (ತಲೆಯ ಮೇಲೆ) ಬಾಯಲ್ಲಿ

ಆಡುವುದು–ಬಿಡಿಗಾದೆಗಳು

೧೩೪೦೧ ಆಡಿಕೊಳ್ಳೋರಿಗೆ ಒಂದು ಆಡು ಕುಯ್ಯಿ, ನಾಚಿಕೊಳ್ಳೋರಿಗೆ ಒಂದು ನಾಯಿ ಕುಯ್ಯಿ

೧೩೪೦೨ ಆಡಿದವರಿಗೂ ಅಂದವರಿಗೂ ಆಡಿನ ಕೊಟ್ಟಿಗೆ, ನಾನೂ ನನ್ನ ಜೋಗಿತಿಯೂ ನಡುಮನೆಯಲ್ಲಿ

ದೂರುವಿಕೆ

೧೩೪೦೩ ಅನ್ನ ಹಾಕಿದವರನ್ನು ಅತ್ತ ದೂರಿದರು, ಅಡಕೆ ಕೊಟ್ಟವನನ್ನು ಇತ್ತ ದೂರಿದರು

೧೩೪೦೪ ಅ (ರಿ)ನಿಷ್ಟಕ್ಕೆಲ್ಲ ಶನೀಶ್ವರ (ಅಂಗಾರಕನೇ) ಗುರಿ

೧೩೪೦೫ ಇಲ್ಲಸಲ್ಲದ್ದೆಲ್ಲ ಪಾಪಿಯ ತಲೆ ಮೇಲೆ

೧೩೪೦೬ ಊರಬಾಗಿಲನ್ನು ಮುಚ್ಚಬಹುದು, ದೂರುವ ಬಾಯನ್ನು ಮುಚ್ಚಿಸುವುದು ಅಸಾಧ್ಯ

೧೩೪೦೭ ಕೆಟ್ಟದ್ದೆಲ್ಲ ಕೆಡಕಿ ಮೇಲೆ

---

* ಮಾಡಿದವರ ಪಾಪ ಅಪ್ಪನ್ನು ಹೊಕ್ಕಾಗ

೧೩೪೦೮ ಕೊಂಬಿನಲ್ಲಿ ದೂರೋರು, ಕೊಳಗದಲ್ಲಿ ಅಳೆಯೋರು

೧೩೪೦೯ ತೊತ್ತು ಮಾಡಿದ್ದು ಯಾರೂ ಅರಿಯರು, ತೊತ್ತಿನ ತಲೆ ಒಡೆದದ್ದು ಊರೆಲ್ಲ ಬಲ್ಲರು

೧೩೪೧೦ ತೋರನಾದವ ಹಾರನು, ಧೀರನಾದವ ದೂರನು

೧೩೪೧೧ ನೀನನಾದರೂ, ದಾನಿಯಾದರೂ ಮಾತುಮಾತಿಗೆ ದೂರ ಬಾರದು

೧೩೪೧೨ ದೂರು ಹೊರುವುದಕ್ಕಿಂತ ಮಾರಿ ಹೊರುವುದು ಲೇಸು

೧೩೪೧೩ ನನ್ನ ಹಂಗೆ ಇಕ್ಕ್ಯೋರಿಲ್ಲ, ನಿನ್ನ ಹಂಗೆ ದೂರೋರಿಲ್ಲ

೧೩೪೧೪ ಬಾಗಿಲು ಹೆಟ್ಟಿದರೆ ಒಂದು ದೂರು, ಬಾಗಿಲು ತೆಗೆದರೆ ಸಾವಿರ ದೂರು

೧೩೪೧೫ ಬೆಕ್ಕು ತನ್ನನ್ನು ಬಡಿದದ್ದು ಹೇಳುವುದಲ್ಲದೆ ಹಾಲಗಡಿಗೆ ಒಡೆದದ್ದು ಹೇಳುವುದಿಲ್ಲ

ಬೈಗಳ

೧೩೪೧೬ ಅತಿಯಾಗಿ ಬಗುಳಿ ಅಡವಿ ಪಾಲಾದರು

೧೩೪೧೭ ಅನ್ಯಾಯದ ಬೈಗುಳು ಹೊನ್ನು ಕೊಟ್ಟರೂ ಬಾರದು

೧೩೪೧೮ ಅವಹೇಳನಕ್ಕೆ ರಾಹು ಕಾಲವಿಲ್ಲ, ಅಭಿಮಾನಕ್ಕೆ ಗುಳಿಕ ಕಾಲವಿಲ್ಲ

೧೩೪೧೯ ಇಲಿಗೆ ಹೊಡೆದ ಬಾಣ ಗಣಪತಿಗೆ ತಗುಲಿತು

೧೩೪೨೦ ಈದು ಈದು ಹಸು ಮುಪ್ಪಾಯ್ತು, ಬೈದು ಬೈದು ಬಾಯಿ ಸಪ್ಪಗಾಯಿತು

೧೩೪೨೧ ‘ಈರಾರು ಹನ್ನೆರಡು’ ಅಂದರೆ ‘ನಾರೊ ಮುಂಡೆ ಹೋಗು’ ಅಂದ

೧೩೪೨೨ ಒಳ್ಳೇದಕ್ಕೂ ಬಂಚೋತ್, ಕೆಟ್ಟದ್ದಕ್ಕೂ ಬಂಚೋತ್

೧೩೪೨೩ ಕಾಣದ ಹಾಗೆ ಮಾಡೋದೂ ಬೇಡ, ಕಂಡ ಹಾಗೆ ಬೈಸಿಕೊಳ್ಳೋದೂ ಬೇಡ

೧೩೪೨೪ ಕೋಳಿ ಜಗಳ, ದೊಡ್ಡವರ ಬೈಗಳ

೧೩೪೨೫ ಗಟ್ಟಿಯಾಗಿ ಅಂದದ್ದು ಗಾಳಿಗೆ, ಮೆಲ್ಲಗೆ ಅಂದದ್ದು ತನಗೆ

೧೩೪೨೬ 'ಚೀ' ಅನ್ನಿಸಿಕೊಂಡು ಬತ್ತೀನಿ ಬುತ್ತಿ ಕಟ್ಟು ಅಂದ

೧೩೪೨೭ ಜುಟ್ಟಿನ ಮೇಲೆ ವಿಷವಿಲ್ಲ, ರಂಡೆಯ ಮೇಲೆ ಬೈಗುಳವಿಲ್ಲ

೧೩೪೨೮ ತಾ ಬಗುಳೋಕೆ ನಾಯಿ ಯಾಕೆ ಸಾಕಬೇಕು

೧೩೪೨೯ ದೂಷಣೆ ಮಾಡೋದು ಕೇಳೋಕೆ ಚೆಂದ, ಹೊರೋದು ಕಷ್ಟ

೧೩೪೩೦ ದೇವರನ್ನು ಬಯ್ಯುವವ ಅರ್ಚಕನನ್ನು ಬಿಟ್ಟಾನೆ ?

೧೩೪೩೧ 'ನಾಮರ್ದ' ಅಂದ್ರೆ 'ನನಗರ್ಧ' ಅಂದ

೧೩೪೩೨ ನಿನ್ನ ಮನೆಯಲ್ಲಿ ಎಂಟು ಎಮ್ಮೆ ಕರೆಯ, ಕುಂಟೆಮ್ಮೆ ಸಾಯ

೧೩೪೩೩ ನಿಂದೆ ಆಡುವವ ಹಂದಿಗಿಂತ ಕಡೆ

೧೩೪೩೪ ನಿಂದೆಯ ಎದೆ ಕೆಡಕು, ಹುಸಿಯ ನಾಲಗೆ ಕೆಡಕು

೧೩೪೩೫ ನಿಂದೆಯಿಲ್ಲದೆ ಬೊಂದಿಹೋಗದು

೧೩೪೩೬ ನೆಕ್ಕುವ ನಾಯಿಗೆ ಲಿಂಗವೇನು, ಪೀಠವೇನು? ಪಾನಬಟ್ಟಲೇನು ಪಾಣಿಪಟ್ಟವೇನು ?

೧೩೪೩೭ ಬಗುಳುವವ ಹೊಗಳ, ಪೊಗಳುವವ ಬಗುಳ

೧೩೪೩೮ ಬಗುಳುವವ ಹೊಗಳಿದರೆ ಬಿಟ್ಟಾನೆ?

೧೩೪೩೯ ಬೋದವರುಂಡರೊ, ಗೋದವರುಂಡರೊ ?

೧೩೪೪೦ ಬೋದ್ರೆ ಬೋರೆ ದೇವರಿಗಾಯ್ತು

೧೩೪೪೧ ಮಂದಿ ನಿಂದಿಸವ್ನು ತನ್ನ ನಿಂದಿಸೋದಿಲ್ಲ

೧೩೪೪೨ ಮಾತನಾಡಿ ಬೈಗಳ ತಿನ್ನೋಕಿಂತ, ಮಾತನಾಡದೆ ಬೈಗಳ ಕೇಳೋದು ಲೇಸು

೧೩೪೪೩ ವೇದ (ವೈದಿಕ) ತಿಳಿಯದಿದ್ರೂ ಬೈದಾಡೋದು ಬಲ್ಲ

೧೩೪೪೪ ಹಣ್ಣಿಗಿಟ್ಟ ಗುರಿ ಕಾಯಿಗೆ ಬಿದ್ದಂಗೆ

೧೩೪೪೫ ಹೆತ್ತಯ್ಯನನ್ನು ಬಯ್ಯು (ಹಳಿಯು)ವವ ಮುತ್ತಯ್ಯನನ್ನು ಬಿಟ್ಟಾನೆ

೧೩೪೪೬ ಹೆತ್ತವ್ವೆಯನ್ನು ಬಯ್ಯುವವ ಅತ್ತೆಯನ್ನು ಬಿಟ್ಟಾನೆ ?

ಅಂದು ಅನ್ನಿಸಿಕೊಳ್ಳುವುದು

೧೩೪೪೭ ಅಂದಂತೆ ಅನ್ನುವುದು ಹಂದಿಯು ಹೇಸಿಗೆ ತಿಂದಂತೆ

೧೩೪೪೮ ಅಂದವಗೆ ಅಳಿಗಾಲ, ಅನ್ನಿಸಿಕೊಂಡವಗೆ ಶುಭಗಾಲ

೧೩೪೪೯ [1]ಅಂದು ಅನ್ನಿಸಿಕೊಳ್ಳೋಕೆ, ಅಂದಗೇಡಿ ನಿನ್ನ ಮನೆ ಯಾವುದು?

೧೩೪೫೦ ಅಂದು ಅನಿಸ್ಕೋಬೇಕೆ ಅಂದಗೇಡಿ ! ಕೆಸರಲ್ಲಿ ಕಲ್ಲಿಟ್ಟು ಮೋ ಮೇಲೆ ಸಿಡಿಸಿಕೊಂಡಂಗೆ

೧೩೪೫೧ ‘ಅಂದು ಅನ್ನಿಸಿಕೊಳ್ಳುವ ಅಂದಗೇಡಿ !’ ಅಂದರೆ ‘ಮಂದಿ ಬಂದಾರೆ ಕದ ತೆಗಿ’ ಅಂದ

೧೩೪೫೨ ಅಂದು ಅನ್ನಿಸಿಕೊಂಬುವ ಅಂದಗೇಡಿಗೆ ಮಣೆಯಿಲ್ಲ

---

1 ಅಂದು ಅನ್ನಿಸಿಕೊಳ್ಳುವುದೊಂದು ಚಂದಗೇಡಿ

೧೩೪೫೩ ಕೆಟ್ಟ ಮುಂಡೆ ಸಾಲಗೆ, ಉಪ್ಪುಹಾಕ್ಕೊಂಡು ಸೀಳಬೇಕು

೧೩೪೫೪ 'ಕೆಪ್ಪಾ' ಅಂದ್ರೆ 'ನಿಮ್ಮಪ್ಪ' ಅಂದ

೧೩೪೫೫ 'ಮುಂಡೆ' ಅಂದರೆ 'ಮುಂಡೆಗಂಡ' ಅನ್ನುವುದು ಗೊತ್ತೇ ಇದೆ

೧೩೪೫೬ ಸೇರಿಗೆ ಸವ್ವಾಸೇರು, ನೀನು ಅಂದರೆ ನಿಮ್ಮಪ್ಪ !

ಬೈಸಿಕೊಂಡ ಉತ್ತಮನಿಗೆ ಯಾವ ಕುಂದೂ ಇಲ್ಲ

೧೩೪೫೭ *ಆನೆ ಕಂಡು ಶ್ವಾನ ಬಗುಳಿದ ಹಾಗೆ

೧೩೪೫೮ ಕತ್ತೆ ಕಿರಿಚಿದರೆ ಕರಡಿ ಬಣ್ಣ ಬದಲಾಗುತ್ಯೇ?

೧೩೪೫೯ ಕತ್ತೆ ಮಾತಿಗೆ ಬೆಲೆ (ಯೆ ?) ಯಿಲ್ಲ

೧೩೪೬೦ ಕಾಗೆ ಶಾಪ ದೊರಗೆ ಹತ್ತಲಿಲ್ಲ

೧೩೪೬೧ ಕಾಗೆ ಶಾಪಕ್ಕೆ ಬಡ (ಮುದಿ) ನಾಯಿ ಸಾಯುತ್ಯೆ?

೧೩೪೬೨ ಕೇರಿದ ದೂಳು ಯಾರ ಮೇಲೆ ಅಂದರೆ, ಕೇರಿದವರ ಮೇಲೆಯೇ

೧೩೪೬೩ ಕೊತ್ತಿ ಶಪಿಸಿದರೆ ಮುತ್ತೈದೆ ಮುಂಡೆಯಾದಾಳೆ ?

೧೩೪೬೪ ಗೂಬೆ ಬೈಗಳು ಮನಸಿಗೆ ಹಚ್ಚಿಕೊಂಡು ಸೂರ್ಯ ಹುಟ್ಟೋದು ಬಿಟ್ಟಾನೆ ?

೧೩೪೬೫ ಚಂದ್ರನನ್ನು ನೋಡಿ ನಾಯಿ ಬಗುಳಿದ ಹಾಗೆ

೧೩೪೬೬ ಜನರ ಸ್ವಭಾವ ಮುಂದೆ ಹೊಗಳ್ತಾರೆ, ಹಿಂದೆ ತೆಗಳ್ತಾರೆ

೧೩೪೬೭ ತಿಪ್ಪೆ ಮೇಲೆ ರತ್ನ ಹಾಕಿದರೆ ಅದರ ಯೋಗ್ಯತೆ ಹೋದೀತೆ ?

೧೩೪೬೮ ತೊಳಸಿ ಗಿಡಕ್ಕೆ ನಾಯಿ ಉಚ್ಚೆ ಹೊಯ್ದಂಗೆ

* ಆನೆ ಹೋಗುತ್ತೆ, ಶ್ವಾನ ಬಗಳುತ್ತೆ

೧೩೪೭೯ [1]ನರಿ ಊಳಿಟ್ಟರೆ ನಾಗಲೋಕ ಹಾಳೆ ?

೧೩೪೮೦ ನಾಯಿ ಬಗುಳಿದರೆ ದೇವಲೋಕ ಹಾಳೆ ?

೧೩೪೮೧ ಬೆಕ್ಕಿನ ಶಾಪಕ್ಕೆ ನೆಲವು ಹರಿದು ಬೀಳುತ್ತೆ ?

೧೩೪೮೨ ಬೈದರೆ ಬೈದವನ ಬಾಯೇ ನೋಯ್ತಾದೆ

೧೩೪೮೩ ಬೈದರೆ ಸಾಯ್ತಾನ್ಯೇ ಬಡ ಹಾರುವ ?

೧೩೪೮೪ ಬೈಸಿಕೊಂಡಿರಬೇಕೆ ಹೊರ್ತು ಬೈದು ಇರಬಾರದು

೧೩೪೮೫ ಮಸಿ ಅರಿವೆಯಲ್ಲಿ ಮಾಣಿಕ್ಯ ಕಟ್ಟಿದರೆ ಅದರ ಬೆಲೆ
ಕಡಿಮೆಯಾಗುವುದಿಲ್ಲ

೧೩೪೮೬ ಮಳೆಗೆ ಬಿಸಿಲು ತೋಯುತ್ತೆ ?

೧೩೪೮೭ 'ಮುಂಡೆ ಮುಂಡೆ' ಅಂದರೆ ಅವಳ ಗಂಡ ಎಂದೂ ಸಾಯಲ್ಲ

೧೩೪೮೮ [2]ಸೂರ್ಯನಿಗೆ ಉಗುಳಿದರೆ ತನ್ನ ಮುಖದ ಮೇಲೆ ಬೀಳುವುದು

೧೩೪೮೯ ಸೇರದ ಮುಕ್ಕ ಸೀತುಬಿಟ್ಟರೆ ನಮಗಿರುವ ತೂಕ
ಎಲ್ಲಿಗೂ ಹೋಗುವುದಿಲ್ಲ

೧೩೪೯೦ ಸೇರ ಕಲ್ಲ ಮೇಲೆ ನಾಯಿ ಉಚ್ಚೆ ಹೂವರೆ ಅದರ ತೂಕ
ಕಡಿಮೆಯಾಗೋದಿಲ್ಲ

ನಿಂದಕರಿರಬೇಕು

೧೩೪೯೧ ಊರಿಗೆ ಹಂದಿ ಬೇಕು, ನೆರೆಗೆ ನಿಂದಕಬೇಕು

---

1 ನರಿಗಳು ಕೂಗಿದರೆ ಸ್ವರ್ಗಲೋಕದಲ್ಲಿ ಪ್ರಳಯವಾಗುತ್ತೆ ?

2 (i) ಮೇಲೆ ಉಗುಳಿದರೆ ಬೀಳುವುದು ಮುಖಕ್ಕೆ

(ii) ಮೇಲೆ ನೋಡಿ ತುಪ್ಪಿದರೆ ಯಾರ ಮುಖಕ್ಕೆ ಎಂಜಲು ಬಿದ್ದೀತು ?

(iii) ಸೂರ್ಯನ ಮೇಲೆ ಮಣ್ಣು ತೂರಿದರೆ ನಮ್ಮ ಕಣ್ಣಲ್ಲಿಯೇ ಬೀಳುವುದು

(iv) ಸೂರ್ಯನ ಮೇಲೆ ಸುರೆ ಚೆಲ್ಲಿದರೆ ಮೋರೆ ಮೇಲೆ ಬೀಳುವುದು

೧೩೪೮೨ ಒಂದು ಊರಿಗೆ ನೂರು ಹಂದಿ ಇದ್ದರೆ ಹಸ,
ಪುಣ್ಯವಂತನಿಗೆ ಹತ್ತುಮಂದಿ ನಿಂದಕರಿದ್ದರೆ ಹಸ

೧೩೪೮೩ ನಿಂದಿಸಿದವನಿಗೆ ವಂದಿಸಬೇಕು

೧೩೪೮೪ ಹಂದಿ ಇದ್ದ ಕೇರಿ ಶು(ದ್ಧಿ)ದ್ಧ, ನಿಂದಕರಿದ್ದರೆ ಜಾಣ
(ಪಾಪ ಶುದ್ಧಿ) ಶುದ್ಧ

ಬೈಯುವುದು ಕೆಟ್ಟದ್ದು

೧೩೪೮೫ ನಿಂದೆ ಮಾಡುವವನಿಗೆ ವಂದನೆಯಿಲ್ಲ

೧೩೪೮೬ ಪರನಿಂದೆ ಪರಮ ಪಾಪ

೧೩೪೮೭ ಬಡಗ ಬಾಯಿಂದ ಕೆಟ್ಟ, ಕೊಡಗ ಕೈಯಿಂದ ಕೆಟ್ಟ

೧೩೪೮೮ ಬಾಯಿಂದ ಬಂತು ಬಗದಾಳ (ಭಗಂಧರ, ಭಗಂದಳ),
ಬೆನ್ನಿಗೆ ಬಂತು ಭೇತಾಳ

೧೩೪೮೯ ಬೈದ ಬಾಯಿಗೆ ಹೊಯ್ದ ಪೆಟ್ಟು

೧೩೪೯೦ ಬೊಗಳುವ ನಾಯಿಗೆ ದಡಿ ಸುರಿದ ಹಾಗೆ

ದೋಷ

೧೩೪೯೧ ಘೋಷಯಾತ್ರೆಯಿಂದ ದುರ್ಯೋಧನ ದೋಷಕ್ಕೆ ಪಾತ್ರನಾದ

೧೩೪೯೨ ದುರಾಶೆ ದೋಷದ ತಾಯಿ, ದೋಷ ದುಃಖದ ತಾಯಿ

೧೩೪೯೩ ದೋಷವಿದ್ದವನಿಗೆ ದೂಷಣೆ ತಪ್ಪದು

೧೩೪೯೪ ದೋಸೆ ತಿಂದರೆ ದೋಷ ಹೋದೀತೆ?

೧೩೪೯೫ ಸಾವಿರ (ಹಲವು) ಚಿತ್ತಾರ (ಪಿಲ್ಲಿ ಬಣ್ಣ) ಪಸ್ನು
ಒಂದು ಮುಸಿ ನುಂಗಿತು

ದೋಷವನ್ನು ಮರೆಮಾಡುವುದು

೧೩೪೯೬ *ಕೆಮ್ಮಿನಿಂದ ಹೂಸು ಮರೆಸಿದ ಹಾಗೆ

೧೩೪೯೭ ಕೀವಿಯಿಂದ ನೋವು ಮುಚ್ಚಿಕೊಂಡ

೧೩೪೯೮ ನಮ್ಮದು ಮುಚ್ಚಿಕೊಂಡು ಇನ್ನೊಬ್ಬರದು ಎತ್ತಬಾರದು

೧೩೪೯೯ ಹೂಸಿದರೂ ಹೂಲಿ ಎಬ್ಬಿಸು

೧೩೫೦೦ ಹೂಸುಬುರುಕಿಗೆ ಕೂಸಿನ ನೆವ!

ದೋಷ ಹೊರಬೀಳದಿರದು

೧೩೫೦೧ ಅಂಗಿ ತೊಡಿಸಿದರೆ ಭಂ(ಮಂ)ಗ ಮುಚ್ಚೀತೆ?

೧೩೫೦೨ ದೋಸೆಯ ತೂತನ್ನು ಕಾವಲಿ ಮುಚ್ಚೀತೆ?

೧೩೫೦೩ ನಾತ ಯಾವುದೇ ಆದರೂ ಮೂಗಿಗೆ ಬಡಿಯುತ್ತೆ

೧೩೫೦೪ ಬಂಕಾಪುರಕ್ಕೆ ಹೋದರೆ ಡೊಂಕು ಮುಚ್ಚೀತೆ?

೧೩೫೦೫ ಹೂಸುವುದು ತಡವಾದರೆ ನಾರುವುದು ತಡವೆ?

ದೋಷ ಯಾರಲ್ಲಿಲ್ಲ?

೧೩೫೦೬ ಎಲ್ಲರ ಮನೆಯ ಒಲೆಯಲ್ಲೂ ಹೊಗೆ

೧೩೫೦೭ ಎಲ್ಲರ ಮನೆ ದೋಸೆ ತೂತಾದರೆ ನಮ್ಮ ಮನೆ ಕಾವಲಿ ತೂತು

೧೩೫೦೮ ಓಡೋ ನಾಯಿ ತಿಕ ಓರೆ

೧೩೫೦೯ ಕವಲಿಲ್ಲದ ಕೊಂಬೆಯಿಲ್ಲ, ಕಳೆಯಿಲ್ಲದ ಗದ್ದೆಯಿಲ್ಲ

೧೩೫೧೦ ತನ್ನನ್ನು ಅರಿಯುವುದು ಕೋಟಿಗುಣ,
ಅನ್ಯರನ್ನು ಅರಿಯುವುದು ಅರವತ್ತು ಗುಣ

---

* ಬಾಯಿಂದ ಬೆದರಿಸಿ ಹೂಸು ಮರೆಸಿದ ಹಾಗೆ

೧೩೫೧೧ ನನ್ನ ಮುಂದಿನ ಗೋಣಿನಲ್ಲಿ ಡೊಂಕಿದ್ದರೆ
ನಿನ್ನ ಹಿಂದಿನ ಬಾಲದಲ್ಲಿ ಡೊಂಕಿದೆ

ತನ್ನ ದೋಷ ತನಗೆ ಕಾಣಿಸದು

೧೩೫೧೨ ಕುಂಡ ಕುಂಡೆ ಮುಟ್ನೋಡ್ಕಂಡು 'ತನ್ನ ಕುಂಡೆ ನುಣ್ಣಗದೆ' ಅಂದ

೧೩೫೧೩ ಗುಲಗಂಜಿ ತಪ್ಪು ಗುಲಗಂಜಿಗೆ ತಿಳಿಯದು

೧೩೫೧೪ ತನ್ನ ಬೆನ್ನು ತನಗೆ ಕಾಣಿಸದು, ಗುಲಗಂಜಿಗೆ (ತನ್ನ ಮೂಗು) ಕಪ್ಪು ಕಾಣಿಸದು

೧೩೫೧೫ ತನ್ನಪರ ಒಳ್ಳೇದು ಗ್ರಹಿಸ್ತ, ಪರರ್ಕೇಡು ಗ್ರಹಿಸ್ತ

೧೩೫೧೬ ತಪ್ಪು ಬೆನ್ನು ಇದ್ದಂತೆ

೧೩೫೧೭ ತಮ್ಮ ಕಣ್ಣು ಕಾಡಿಗೆ ನೋಡುತ್ತವೆಯೆ ?

೧೩೫೧೮ [1]ದೀಪದ ಬುಡದಲ್ಲಿ (ನೆರಳು) ಕತ್ತಲೆ

೧೩೫೧೯ ಮಾಸಿದ ಗೋಡೆಯ ಮೇಲೆ ಮಸಿ ಅಸಹ್ಯವೇ ?

೧೩೫೨೦ ಕಂಬಿದಯ್ಯನಿಗೆ ಹೂಸಿನ ಪರಿವೆಯೆ ?

ತನ್ನಂತೆ ಎಲ್ಲರೂ ದೋಷಿಗಳು

೧೩೫೨೧ [2]ಅರಿಶಿನ ಕುತ್ತದವನಿಗೆ ಲೋಕವೇ ಹಳದಿ

---

1 ದೀಪದ ಕೆಳಗೆ ಕತ್ತಲೆ ಗವಿ

2 (i) ಅರಿಶಿನ ಮುಂಡದವನಿಗೆ ಊರೇ ಅರಿಶಿನ
(ii) ಅರಿಶಿನ ಕುತ್ತ ಹಿಡಿದವನಿಗೆ ಊರೆಲ್ಲ ಅರಿಶಿನ
(iii) ಅರಿಶಿನ ಕಾಮಾಲೆ ರೋಗದವನಿಗೆ ಬೆಳ್ಳಗಿರುವ ವಸ್ತುಗಳೆಲ್ಲ ಹಳದಿ
(iv) ಕಾಮಾಲೆ ರೋಗದವರಿಗೆ ಕಾಣೂದೆಲ್ಲ ಅರಿಸ್ಣ
(v) ಮುಂದಿಗೆ ಆದವನಿಗೆ ಕಾಣುವುದೆಲ್ಲ ಅರಿಶಿನ
(vi) ಕಾಮಣಿಯಾದವರಿಗೆ ಲೋಕವೆಲ್ಲ ಹಳದಿ
(vii) ಪಿತ್ತ ತಲೆಗೇರಿದವನಿಗೆ ಶಂಖ ಹಳದಿಯಾಗಿ ಕಂಡರೆ ಅದರ ಬಣ್ಣ ಕೆಟ್ಟೀತೆ?

೧೩,೫೨೨ ಉರಿಮಾರಿ ಕಂಡರೆ ಊರ ಬಾಗಿಲೆಲ್ಲ ನೋಡಿದಂತೆ

೧೩,೫೨೩ ಜನಿಯು ಕಣ್ಣುಗೊಂಡೆ ತಲೆಕೆಳಕ

೧೩,೫೨೪ ತಲೆ ತಿರುಗಿದರೆ ಲೋಕ ತಿರುಗಿತು

೧೩,೫೨೫ ಮಿತ್ರದ್ರೋಹಿಗೆ ಕಾಣುವುದೆಲ್ಲ ಶತ್ರುಗಳೇ

ಪರರ ದೋಷ ಹುಡುಕುವುದು

೧೩,೫೨೬ [1]ತನ್ನ ಬಲೀಲಿ (ಬದಿ ದೊರೆ) ಕತ್ತ (ಹಾವೆ, ಹಗ್ಗ) ಸತ್ತು [illegible]
[illegible]
ನೋಡ

೧೩,೫೨೭ ತನ್ನ ದೋಷ [illegible]

೧೩,೫೨೮ [illegible]
[illegible]

೧೩,೫೨೯ [illegible]
[illegible]

೧೩,೫೩೦ [illegible]

೧೩,೫೩೧ [illegible]

ಕೇಡುಗಾಲಕ್ಕೆ ದುರ್ಬುದ್ಧಿ

೧೩,೫೩೨ ಅವಿವೇಕ ಕೇಡಿಗೆ ಕಾರಣ

೧೩,೫೩೩ [2][illegible] ಧರಿಸಿದ ಹಾನಿ

1 (i) [illegible]
(ii) [illegible]

2 [illegible]

೧೩೫೩೪ ಕೇಡುಗಾಲಕ್ಕೆ ಕೊಡುವುದು ದುರ್ಬುದ್ಧಿ

೧೩೫೩೫ ಕೇಡು ಬರುವ ಕಾಲಕ್ಕೆ ಹುಟ್ಟಿಗೊಂಡಿದ್ದರೂ ತಪ್ಪದು

೧೩೫೩೬ ಕೇಡುಗಾಲ ಬಂದರೆ ಆನೆಮೇಲೆ ಕುಳ್ಳನ ಕಚ್ಚುವುದು ನಾಯಿಯು

೧೩೫೩೭ ಕೇಡುಗಾಲಕ್ಕೆ ಕಪ್ಪೆಗೆ ಬಂದಿತೆ ಮುಖವಿತ್ತಂತೆ

೧೩೫೩೮ [1]ಕೇಡುಗಾಲಕ್ಕೆ ಬುದ್ಧಿಯಿಲ್ಲ, ಮರಣಗಾಲಕ್ಕೆ (ಮಾತಿಯಿಲ್ಲ) ಮದ್ದಿಲ್ಲ

೧೩೫೩೯ [2]ಕೆಡಲು ಕೇಡಿನ ಕಾಲಕ್ಕೆ ಕೊಡಲಿ ಮಾಡಿತೆ (ಬೀಸಿದೆ, ಮಸೆದೆ, ಮುಂಗೆಯೊಡ್ಡಿದೆ) ಕಾಯಿ ಹುಟ್ಟು(ಡಿಕ್ಕೆ)ತು

೧೩೫೪೦ ಹೊತ್ತೆ ತಂದ ರಾವಣ ಮನೆಗೆ ಮಾರಿಯನ್ನೂ ತಂದ

೧೩೫೪೧ ಬೇಕ ಬೇಕ ಅಂಬರಿಂ ಬೆಳಗು ಬಂದೆಯೊಡ್ದಿ ಕಿಡಿ ತನಕ, ಕೇಡುಗಾಲಕ್ಕೆ ಕಿವ್ಟ ಬೆಳಗು ಬರೆ ತನಕ

೧೩೫೪೨ ವಿನಾಶಕಾಲಕ್ಕೆ ವಿಪರೀತ ಬುದ್ಧಿ

ತಾನೂ ಕೆಟ್ಟು ಇತರರನ್ನು ಕೆಡಿಸುವುದು

೧೩೫೪೩ ಇಕ್ಕಿದ ಒಸಗೆಗೆ ಮೂಗು ಕೊಯ್ದ ಬೀಗ ಇಟ್ಟಂಗೆ (ತಿಕ್ಕಿ)

೧೩೫೪೪ ಒಬ್ಬನಿಂದ ಸರ್ವರ್ಕೆಟ್ಟು

೧೩೫೪೫ [3]ಕೆಡುವಾತ ತಾನು ಕೆಡುವುದಲ್ಲದೆ ಬಹು ಜನ ಕೆಡಿಸುವ

೧೩೫೪೬ ನಾನು ಕೆಡಿಸದೆ ಇದ್ರೆ ದಾಸನೇ?

೧೩೫೪೭ ಹೊಂಡಬಾಲದ ಸರಿಕಥೆ ಹಾಗೆ

---

1 ಮರಣಗಾಲಕ್ಕೆ ಸ್ವಾಸ್ಥ್ಯವಿಲ್ಲ. ಕೇಡಿನ ಕಾಲಕ್ಕೆ ದಾರಿಯಿಲ್ಲ

2 ಕೋತಿವಿಗೆ(೨)ರಾಯಿ ಹುಟ್ಟಿ ಕೊಡಲಿ ಮಾಡಾಯಿತು

3 ತಾನು ಕೆಡುವ ಕಾಲಕ್ಕೆ ಜನವೆಲ್ಲ ಕೆಡಲಿ

ಕೆಟ್ಟವನು ಏತಕ್ಕೂ ಹೆದರ

೧೩೫೪೮ [1]ಇಡೀ ಮುಳುಗಿದವನಿಗೆ ಚಳಿ ಉಂಟೇ ?

೧೩೫೪೯ ಕೆಟ್ಟಮೇಲೆ ಲೊಟ್ಟೆ

೧೩೫೫೦ ಕೆಟ್ಟು ಕೆರ ಹಿಡಿದಿದ್ದವರು

೧೩೫೫೧ ಕೆಡೋನು ಕೆಟ್ಟೆ ಬಿಮ್ಮನೆ ತಬ್ಬು

೧೩೫೫೨ [2]ತೋಯಿಸಿಕೊಂಡ ಮೇಲೆ ಮಳೆ ಅಂಜಿಕೆಯೇನು ?

೧೩೫೫೩ ನಾ ಬಿಟ್ಟರೂ ಅದು ಬಿಡದು

೧೩೫೫೪ ಬಿದ್ದವನು ಬಿದ್ದೆ, ಹಿಡಿ ಗಪ್ಪದ ಹುಲಿಯಾ

೧೩೫೫೫ ಅಪಮಾನದ ಮೇಲೆ ಭಯವೇನು ?

೧೩೫೫೬ ಹಂಗೂ ಕೆಟ್ಟೆ ಹಿಂಗೂ ಕೆಟ್ಟೆ ರಂಗಧಾಮ,
ನಿನ್ನ ನಂಬಿದೋರಿಗೆ ಪಂಗನಾಮ

ಕೆಟ್ಟ ಮೇಲೆ ಬುದ್ಧಿ ಬಂತು

೧೩೫೫೭ ಕೆಟ್ಟನಕ ಬುದ್ಧಿ ಬಾರದು, ಅಟ್ಟ(ಹೆಟ್ಟ)ನಕ ಎಣ್ಣೆ ಬಾರದು

೧೩೫೫೮ ಕೆಟ್ಟ ಮೇಲೆ (ಕೇಡು ಬರುವ ಕಾಲಕ್ಕೆ) ಬುದ್ಧಿ ಬಂತು,
[3]ಅಟ್ಟದ ಮೇಲೆ ಒಲೆ ಉರಿಯಿತು

೧೩೫೫೯ ಕೆಟ್ಟವನಿಗೆ ಬೆಟ್ಟ(ದಷ್ಟು)ವೆಲ್ಲಾ ಕಣ್ಣು

೧೩೫೬೦ ನೋಡಿ ನಡೆಯುವವನಿಗೆ ಕೇಡು ಬಾರದು

---

1 (i) ಇಳಿಯು ಮುಳುಗುವವನು ಚಳಿಗಂಜ್ಯಾನೆ ?
(ii) ಇಡೀ (ಇಳಿ, ತೀರ) ಮುಳುಗಿ(ಹೊಳೆಗಿಳಿ)ದವನಿಗೆ ಚಳಿಯೇನು,
ಮಳೆಯೇನು ?
(iii) ಎಲ್ಲ ಮುಳುಗಿದವನಿಗೆ ಚಳಿಯಿಲ್ಲ
(iv) ನೀರಿನಲ್ಲಿ ಮುಳುಗಬಾರದು, ಮುಳುಗಿದ ಮ್ಯಾಲೆ ಚಳಿಮಳೆಗೆ ಹೆದರಬಾರದು

2 ಮೈ ತೋಯುವವರೆಗೆ ಮಳೆ ಅಂಜಿಕೆ

3 ಕೊಟ್ಟ ಮೇಲೆ ಅಳಿಯ ಉರಿದ

೧೩೫೬೧ ಬಾಳವರ ನೋಡಿ ಬದುಕು ರೂಢಿಸು,
ಕೆಟ್ಟವರ ನೋಡಿ ಬುದ್ಧಿ ಕಲಿ

ಕೆಟ್ಟವರ ನೆಲೆ

೧೩೫೬೨ ಕತ್ತೆ ಕೆಟ್ಟ(ಸತ್ತ, ತಪ್ಪಿಸಿಕೊಂಡ)ರೆ ಪಾಳುಗೋಡೆ

೧೩೫೬೩ ಕೆಟ್ಟವಳಿಗೆ ಹಿಟ್ಟಿನ ಮಡಕೆ ಸಿಕ್ಕಿದ ಹಾಗೆ

೧೩೫೬೪ [1]ಕೆಟ್ಟವರಿಗೂ ಅಳಿದವರಿಗೂ ಗೊಟ್ಟಿಗೆರೆ ತವರುಮನೆ

೧೩೫೬೫ [2]ಕೆಟ್ಟು ಮುರಿದೋ(ಅಳಿದವ)ರೆಲ್ಲ ಹುಚ್ಚ(ರಾಯನ ಗುಡಿ)
ಬೀರನ ಮಠಕ್ಕೆ ಸೇರಿದರು

೧೩೫೬೬ ಬಿಟ್ಟು ಕೆಟ್ಟೋರಿಗೆಲ್ಲ ಬೆಟ್ಟಸೋಗೆ ಕಡ

೧೩೫೬೭ ನದೀನಾಂ ಸಾಗರೋ ಗತಿ, ಜಾತಿಗೆಟ್ಟವರಿಗೆ
ಜಾಡಮಾಲಿಯೇ ಗತಿ

ಚಾಡಿಕೋರ

೧೩೫೬೮ ಅರಳು ತಿಂದ ಬಾಯಿ, ತರಳೆ ಹೇಳಿದ ಬಾಯಿ ಚ(ಸ)ಪ್ಪೆ

೧೩೫೬೯ ಅವರೆ ಕೇರಿ ಅಟ್ಟದ ಮೇಲಿಟ್ಟು ನೆರೆಮನೆ ಅಕ್ಕನ ಬಾಳು
ಮುರಿದಳು

೧೩೫೭೦ ಇಲ್ಲಸಲ್ಲದ ಚಾಡಿ ಹೇಳಿ ಬೆಳ್ಳೇಕಾರ ಆಟ ಆಡಿದನಂತೆ

೧೩೫೭೧ ಈತನ ಮಾತಿಗೆ ಆತ ಸೋತ

೧೩೫೭೨ ಒರಳೆ ತರಳೆ ದರಳೆ ಮೂರೂ ಒಳ್ಳೆದಲ್ಲ

---

1 ಕೆಟ್ಟು ಹುಟ್ಟಿದವರಿಗೆಲ್ಲ ಸೆಟ್ಟಿಕೆರೆ(ರ) ತವರುಮನೆ

2 (i) ಕೆಟ್ಮುರಿದವ್ರೆಲ್ಲ ಬಂದು ಸನ್‌ಬೊಪ್ಪೇಗೌಡನಪುರ ಸೇರಿ ಅಂದಂಗೆ

(ii) ಮುಂದುಗೆಟ್ಟೋರೆಲ್ಲ ಹನುಮಂತನ ಗುಡಿ ಸೇರಿದರು

೧೩೫೮೩ ಕ(ಹ)ತ್ತಿ ಬೇಯುತ್ತ ಸಮ್ಮನೆ ಕೊತ್ತಿ ಕಣ್ಣೋಳಿಂದ

೧೩೫೮೪ ಕುದ್ದಲಿಗೇಡಿಗೆ ಕುರ ಏಳುತ್ತವೆ,
ನಾಚಿಗ್ಗೇಡಿಗೆ ನಾರು ಏಳುತ್ತವೆ

೧೩೫೮೫ *ಬಿಂದಿಗೆ ಹಾಲಿಗೆ (ಒಂದೇ ಚೊಟ್ಟು, ತೊಟ್ಟು ವಿಷ)
ಒಂದು ಹನಿ (ಸೊಲಿಗೆ) ಹೆಪ್ಪು

೧೩೫೮೬ ಚಾಡಿಕಾರ್ತಿಗೆ ನೂರೆಂಟು ಬಯ್ಗಳು,
ಹಾಡುಗಾರ್ತಿಗೆ ಗೆರಟೆ ಕಳ್ಳು

೧೩೫೮೭ ಚಾಡಿಕೋರನಿಗೆ ಊರೆಲ್ಲ ನಂಟರು

೧೩೫೮೮ ಚಾಡಿ ಮಾತನಾಡಬೇಡ ಇಲ್ಲಿ, ನಿನ್ನ ಗಾಣಕ್ಕೆ ಹಾಕ್ತಾರೆ ಅಲ್ಲಿ

೧೩೫೮೯ ಚಾಡಿಮಾತಿನಿಂದ ಚಾವಡಿ ಹಾಳಾಯ್ತು

೧೩೫೯೦ ಚಾಡಿಗೆ ಮುಪ್ಪುಂಟೆ ?

೧೩೫೯೧ ಚಾಡಿ ಹೇಳಿ ಸ್ನೇಹ ಕೆಡಿಸಿಕೊಂಡ ಹಾಗೆ

೧೩೫೯೨ ಚಾಡಿ ಹೇಳನ್ನು ಕೊಡ್ಲೀಲಿ ತುಂಡರಿಸಿ,
ಕಾದ ಕಬ್ಬಿಣ ಕಟಿ ಬಾಯಿಗೆ ಮಡಗಿದರೂ
ಚಾಡಿ ಹೇಳೋದ ಬಿಡೊಲ್ಲೆ ಅಂದನಂತೆ

೧೩೫೯೩ ಚಾಡಿ ಹೇಳವನ ಬಾಯಲ್ಲಿ ಬೆಣೆ ಹಾಕಕ್ಯಾದಾತಾ ?

೧೩೫೯೪ ತರಲೆ ಮಾತು ತರಗೆಲೆಗೆ ಸಮಾನ

೧೩೫೯೫ ತರಲೆ ಹೇಳುವವ ಮರುಳಿಗಿಂತ ಕಡೆ

---

* (i) ಕೊಡ ಹಾಲು ಕೆಡಿಸುವುದಕ್ಕೆ (ಅಮ್ಲವೆಷ್ಟು ಬೇಕು ?) ತೊಟ್ಟು ಮಜ್ಜಿಗೆ ಸಾಲದೇ ?

(ii) ಕೊಡ ಹಾಲಿನೊಳಕ್ಕೆ ಹಿಡಿ ಉಪ್ಪು ಹಾಕಿದಂತೆ

(iii) ಹಾಲಿಗೆ ಹುಳಿ ಹಿಂಡಿದಂಗೆ

(iv) ಹೆಪ್ಪು ಹಾಕಲಿಕ್ಕೆ ಮೊಸರೆಷ್ಟು ಬೇಕು?

೧೩೫೮೬ *ತಾನು ಮುಪ್ಪಾದರೂ ತರಳೆ ಮುಗ (ಹವ್ಯಕ)

೧೩೫೮೭ ನೊಚ್ಚಗೆ ಮಾತಾಡುವವನನ್ನು ಮೆಚ್ಚಬಾರದು

೧೩೫೮೮ ಪಟ್ಟಿಗೆ ಬಾಧೆಯೊ, ತಟ್ಟಿಗೆ ಬಾಧೆಯೊ ?

೧೩೫೮೯ ಪಿಸು (ಪಿಸರು) ಣು ಇದ್ದವನ ಹತ್ತಿರ ಉಸುರಬಾರದು

೧೩೫೯೦ ಪಿಸುಣನಿಗೆ ಉಪಕಾರ ಮಾಡಿದರೆ ಕೇಡು ತಪ್ಪದು

೧೩೫೯೧ ಮಾಗಿ ಬಿಸಿಲು, ಚಾಡಿ ಮಾತು ಹಿತ

೧೩೫೯೨ ಮುಂಡೆ ಸ್ನೇಹ, ಕೊಂಡಗನ ಮಾತು ಕೆಂಡ ಮಿಾದಂಗೆ

೧೩೫೯೩ ಪರಲಿ ಹತ್ತಿದ ಮನೆ ಹಾಳು, ತರಲೆ ಹತ್ತಿದ ಊರು ಹಾಳು

೧೩೫೯೪ ಸವಿ ಮಾತಿಗೆ ಕಿವಿಗೊಡಬಾರದು

೧೩೫೯೫ ಸುಳ್ಳುಕೋರನಿಗೂ ಚಾಡಿಕೋರನಿಗೂ ಗಳಸ್ಯ ಕಂಠಸ್ಯ

ಹಿತ್ತಾಳೆ ಕಿವಿಯವ

೧೩೫೯೬ ಅರಸನ ಕಿವಿಗೆ ತರಳೆ ಹಾಳು, ಬಾಗಿಲ ಕಿವಿಗೆ ಒರಲೆ ಹಾಳು

೧೩೫೯೭ ಈ ಕಿವೀಲಿ ಕೇಳಬೇಕು, ಆ ಕಿವೀಲಿ ಬಿಡಬೇಕು

೧೩೫೯೮ ಕಣ್ಣುಗಳು ತನ್ನನ್ನು ನಂಬುತ್ತವೆ,
ಕಿವಿಗಳು ಪರರನ್ನು ನಂಬುತ್ತವೆ

೧೩೫೯೯ ಕಿಸುಬಾಯಿನ ಹತ್ತಿರ ಬಿಡದೆ ವ್ಯವಹಾರ

೧೩೬೦೦ ಕ್ಷುದ್ರಗೇಡಿ ನೆರೆಯಲ್ಲಿದ್ದು ಇದ್ದಷ್ಟು ಬುದ್ಧಿಯೂ ಹೋಯಿತು

೧೩೬೦೧ ಕ್ಷುದ್ರಗೇಡಿ (ಮುಂಡಿ) ಮಾತು ಕೇಳಿ ಮನೆ ಕೆಟ್ಟಿತು,
ಬದನೆಕಾಯಿ ಸುಟ್ಟು ಒಲೆ ಕೆಟ್ಟಿತು

---

* ನಾನು ಮುಪ್ಪಾದರೆ ನನ್ನ ಚಾಡಿ ಮುಪ್ಪೆ ?

೧೩೬೦೨ ಹುಚ್ಚು ಕೇಳೋರಾರು ಸೂರ್ಯನಿಗಿಂತ ಕಡೆ

೧೩೬೦೩ ಗಂಡನ ಕಿವಿ ಬಂದಿತು ಗಾಳಿ

೧೩೬೦೪ ಮಂದಿ ಹೇಳಿದರೂ ಹಾದಿ ಕಿವ್ಯಬರಾದ ?

೧೩೬೦೫ *ಮೆಲ್ಲಮೆಲ್ಲ (ಪುಕ್ಕಟೆ) ಚಿನ್ನ, ಕಿವಿ ಹಿತ್ತಾಳೆ

೧೩೬೦೬ ರೇಷ್ಮೆ ಸೀರೆ, ನಾರಿನ ಉಡು

೧೩೬೦೭ ಹಾಲು ಕುಡಿ ಅಂದವರು ಮನೆ ಕಟ್ಟಿ ಕೊಡ್ತಾರಾ ?

೧೩೬೦೮ ಹಿತ್ತಾಳೆ ಕಿವಿ ಹೊಟ್ಟೆಗಾಗುವುದು ಬೇಗ

೧೩೬೦೯ ಹೇಳಿಕೆ ಮಾತು ಕೇಳಿ ಧರ್ಮರಾಯ ಮುಳಿದ

೧೩೬೧೦ ಹೇಳಿಕೆ ಮಾತು ಕೇಳಿ ಹೆಂಡತಿ ಬಿಟ್ಟಂಗೆ

೧೩೬೧೧ ಹೇಳಿಕೆ ಮಾತು ಕೇಳಿ ಹೆಂಡತಿ ತಲೆ ಬೋಳಿಸಿದ

೧೩೬೧೨ ಹೇಳುವವನಿಗೆ ನಾಚಿಕೆಯಿಲ್ಲದಿದ್ದರೆ
ಕೇಳುವವನಿಗೆ ವಿವೇಕ ಬೇಡವೆ ?

೧೩೬೧೩ ಹೇಳುವವನು ಅಜ್ಞಾನಿ, ಕೇಳುವವನು ಅವಿವೇಕಿ

೧೩೬೧೪ ಹೇಳುವವರು ಹೇಳಿದರೆ ಕೇಳುವವರಿಗೆ ಬುದ್ಧಿಯಿಲ್ಲವೇ ?

೧೩೬೧೫ ಹೇಳೋನು ಹೆಡ್ಡ, ಕೇಳೋನು ಕಿವುಡ

೧೩೬೧೬ ಹೇಳೋನು ಹೆಡ್ಡನಾದರೆ ಕೇಳೋನು ಜಾಣನಾಗಿರಬೇಕು

೧೩೬೧೭ ಹೇಳುವವರು ಮರುಳರಾದರೆ ಕೇಳುವವರೂ ಮರುಳರೇ

* ರಾಮನ ಕಿವಿ ಹಿತ್ತಾಳೆ

೧೩೬೨೯ [1]ಎಣ್ಣೆ ಕಂಡ ಕಡೆ ಮಕ್ಕಳ ಹೆತ್ತರು

೧೩೬೩೦ ಏರಿ ಮೇಲೆ ಹೋಗುವಾಗ 'ಭಾವ' ಅಂದೆ,
ಉಣ್ಣೋಕೆ ಬರೋ ಹೊತ್ತಿಗೆ 'ಗಂಡ' ಅಂದೆ

೧೩೬೩೧ ಒಕ್ಕಣ್ಣನ ರಾಜ್ಯಕ್ಕೆ ಹೋದರೆ ಒಕ್ಕಣ್ಣು ಮುಚ್ಚಿ ನಡೆ

೧೩೬೩೨ ಒದ್ದವನ ಕಾಲಿಗೆ ಬಿದ್ದ, ಬಿದ್ದವನ ಎದೆಗೆ ಒದ್ದ

೧೩೬೩೩ [2]ಕಾರ್ಯವಾಸಿ ಕತ್ತೆಕಾಲು ಕಟ್ಟು

೧೩೬೩೪ ಕಾಲಕ್ಕೆ ತಕ್ಕ ಕೋಲ

೧೩೬೩೫ ಕಾಲಕ್ಕೆ ಸರಿಯಾಗಿ ಕೋಲ ಕಟ್ಟುವುದು,
ಮಳೆ ಬಂದತ್ತ ಕೊಡೆ ಹಿಡಿಯುವುದು

೧೩೬೩೬ ಕಾಲಿಗೂ ಬಿದ್ದ, ಮೇಲೂ ಬಿದ್ದ

೧೩೬೩೭ ಕಾದಾಗಲೇ ಕಬ್ಬಿಣ ಬಡಿಯಬೇಕು

೧೩೬೩೮ [3]ಕೆಳಗೆ (ನೆಲಕ್ಕೆ) ಬಿದ್ದರೆ ಕಾಲು ಹಿಡಿದ,
ಮೇಲೆದ್ದರೆ ಜುಟ್ಟು ಹಿಡಿದ

---

1 (i) ಎಣ್ಣೆ ಕಂಡ ಕಡೆ ಕೂಸು ಹೆತ್ಲು, ಬೆಂಕಿ ಕಂಡ ಕಡೆ ಕೈ ಕಾಯಿಸಿದೂ
(ii) ಎಣ್ಣೆ ಕಂಡ ತಾವು ಹೊಟ್ಟೆ ನೋವು
(iii) ಕೈಯೆಣ್ಣೆ ಕಂಡಲ್ಲಿ ಮಗು ಹೆರುವುದು
(iv) ಸುಂಟಿ ಸಿಕ್ಕಿದ ಜಾಗದಲ್ಲಿ ಮಗು ಹೆತ್ತಳು

2 (i) ಕಾರ್ಯ ಆಗೋತನಕ ಕತ್ತೆ ಕಾಲಾದರೂ ಹಿಡಿ
(ii) ಕಾರ್ಯ ಬಂದರೆ ಕತ್ತೆ ಕಾಲು ಹಿಡೀಬೇಕು
(iii) ಕಾರೇದ ಕಚ್ಚಿ (ಇಚ್ಛೆ)ಗೆ ಕತ್ತೆ ಕಾಲು ಹಿಡಿ

3 (i) ಎದ್ದಾಗ ಜುಟ್ಟು ಹಿಡಿ, ಬಿದ್ದಾಗ ಕಾಲು ಹಿಡಿ
(ii) ಗೆದ್ದರೆ ಮುಡಿ, ಸೋತರೆ ಅಡಿ
(iii) ತಲೆಗೆ ಹಾರೋದು, ಕಾಲಿಗೆ ಬೀಳೋದು
(iv) ದೊರೆತರೆ ಹಿಡಿ ಜುಟ್ಟು, ಜಾರಿದರೆ ಕಾಲು ಮುಟ್ಟು
(v) ಸಿಕ್ಕಿದರೆ ಜುಟ್ಟು ಹಿಡೀತಾನೆ, ಇಲ್ದಿದ್ರೆ ಕಾಲು ಹಿಡೀತಾನೆ

೧೩೬೩೯ ಕಂಡರೆ ಕಣ್ಮುಚ್ಚು, ಕಾಣದಿದ್ದರೆ ಕಾಯಿ ಹೊಡಿ

೧೩೬೪೦ ಗೆದ್ದರೆ ಕೈಕಾಲು, ಸೋತರೆ ಕಿವಿ ಮೂಗು

೧೩೬೪೧ ಗೆದ್ದರೆ ತಾನು, ಸೋತರೆ ದೈವ

೧೩೬೪೨ ಕೇರೆ ತಿನ್ನುವ ರಾಜ್ಯಕ್ಕೆ ಹೋದರೆ
ನಡುವಣ ತುಂಡಿಗೆ ಕೈಯೊಡ್ಡಬೇಕು

೧೩೬೪೩ ಗಾಳಿ ಬಂದಾಗ ತೂರಿಕೊ, ಧಾರಣೆ ಬಂದಾಗ ಮಾರಿಕೊ

೧೩೬೪೪ "ಗುಬ್ಬಿ ಗುಬ್ಬಿ ! ಸತ್ತೆಯಾ ?" ಅಂದರೆ
"ನಾನೇಕೆ ಸಾಯಲಿ ಹುಚ್ಚು ಹಾರುವ !
ಜೋಕಾಲಿ ಆಡುತ್ತಿದ್ದೇನೆ" ಅಂದಿತಂತೆ

೧೩೬೪೫ ಗೆದ್ದರೆ ಆಡೋಕೆ ಬಂದಿದ್ವಿ, ಸೋತರೆ ನೋಡೋಕೆ ಬಂದಿದ್ವಿ

೧೩೬೪೬ ಗೆದ್ದರೆ ಹಲವ (ಹಲ್ಲ)ರು ಗೆದ್ದರು,
ಸೋತರೆ ಕೊಂಕಣಿ (ಕೋಮಟಿ)ಗರ ಪೋರ (ಗಂಡು)ಸೋತ

೧೩೬೪೭ ಗೆದ್ದವನ ಕುಂಡೆ ಹೆಗಲ ಮೇಲೆ

೧೩೬೪೮ ಗೆದ್ದವರು ನಮ್ಮ ಕಡೆ

೧೩೬೪೯ [1]ಗೆದ್ದೆತ್ತಿನ ಬಾಲ ಹಿಡಿಯುವುದು

೧೩೬೫೦ [2]ಜಟ್ಟಪ್ಪ (ಎಡವಿದರೂ) ಜಾರಿ ಬಿದ್ದ
ಅದೂ ಒಂದು ವರಸೆ ಅಂದನಂತೆ

೧೩೬೫೧ [3]ಜಾಗವಿದ್ದಲ್ಲಿ ತಾಗಬೇಕು

---

1 ಗೆದ್ದ ಹೋರಿ ಬಾಲ ಎಲ್ಲರೂ ಹಿಡಿಯುವವರೇ

2 (i) ಡೊಂಬ (ಎಡವಿ ಬಿದ್ದರೆ) ಜಾರಿದರೆ ಅದೂ ಒಂದು ಲಾಗ

(ii) ವಸ್ತಾದಿ ಬಿದ್ದರೆ ಅದೂ ಒಂದು ಪಟ್ಟು

3 ಜಾಗ ನೋಡಿ ಪಾ (ಲಾ)ಗ ಹಾಕು

೧೩೬೫೨ ದಾಯ ಬಿದ್ದಾಗ ಹಾಯಬೇಕು

೧೩೬೫೩ ದೇಶದಂತೆ ವೇಷ ಹಾಕು

೧೩೬೫೪ ನಯವಿದ್ದಲ್ಲಿ ಜಾರುವುದು, ಮೃದುವಿದ್ದಲ್ಲಿ ಊರುವುದು

೧೩೬೫೫ [1]ನಿರ್ವಾಣದ ಪಟ್ಟಣದಲ್ಲಿ ಕೌಪೀನವಿದ್ದವನೇ ಹೆಡ್ಡ

೧೩೬೫೬ [2]ನೆಲ ಮೆತ್ತಗಿದ್ದ ಕಡೆ ಮತ್ತೊಂದು ಗುದ್ದಲಿ ಹಾಕು

೧೩೬೫೭ ಬಾವಿಯಲ್ಲಿ ಬಿದ್ರೂ ಬಾಚೋದು ಬಿಡ

೧೩೬೫೮ ಭಾಷೆಗೆ ತಕ್ಕ ನಟನೆ, ನಟನೆಗೆ ತಕ್ಕ ಬಿಗುಮಾನ

೧೩೬೫೯ ಯಾಳ್ಕ ಬಿದ್ದಾಗ, ಎಳಕೊಂಡರಾಯಿತು ಸೀನಯ್ಯನ ಎಮ್ಮೆಯ

೧೩೬೬೦ ರಾಘವಾಯ ಸ್ವಸ್ತಿ, ರಾವಣಾಯ ಸ್ವಸ್ತಿ

೧೩೬೬೧ ಸರಿವರೆ ಒತ್ತಣ್ಣ, ಒತ್ತಿದರೆ ಸರಿಯಣ್ಣ

೧೩೬೬೨ ಸರ್ತಿ ಬಂದಾಗ ಭರ್ತಿ ತುಂಬು

೧೩೬೬೩ [3]ಸಿಕ್ಕಿದರೆ ಉಚ್ಚೆ ಕುಡಿದೇನು, ಸೊಕ್ಕಿದರೆ ರಕ್ತ ಕುಡಿದೇನು

೧೩೬೬೪ ಸುಡಲು ಕಟ್ಟಿಗೆ ಸಿಕ್ಕಿದಾಗಲೇ ಸಾಯಬೇಕು

೧೩೬೬೫ ಸೋತದ್ದಕ್ಕೊಂದು ಸೊಗಸಿನ ಮಾತು

೧೩೬೬೬ ಹತ್ತರ ಕೂಟೆ ಹನ್ನೊಂದು, ಪರಿಶೆ [4]ಕೂಟೆ ಗೋವಿಂದ

೧೩೬೬೭ ಹಲ್ಲಿರುವಾಗಲೇ ಕಡಲೆ ತಿನ್ನಬೇಕು

---

1 ಬತ್ತಲೆ ಇರೋ ಊರಲ್ಲಿ ಬಟ್ಟೆ ಉಟ್ಟವರೇ ಹುಚ್ಚರು

2 ಪೊಳ್ಳು ಕಂಡರೆ ಮೊಳ ಕೈ ಹಚ್ಚಿದಾ, ಗಟ್ಟಿ ಕಂಡರೆ ಗುದ್ಲಿ ಹಚ್ಚಿದಾ

3 (i) ಸೊಕ್ಕಿದರೆ ರಕ್ತ ಕುಡಿದಾನು, ಮುಗಿ (ಸಿಕ್ಕು ಬಂ)ದರೆ ಮೂತ್ರ ಕುಡಿದಾನು
(ii) ಸಿಕ್ಕು ಬಂದರೆ ಮುಸುರೆ ತಿಂದಾನು, ಮುಕ್ಕಿದರೆ ಮೂತ್ರ ಕುಡಿದಾನು

4 ಗುಂಪಿನಲ್ಲಿ ಗೋವಿಂದ

೧೩೬೬೮ ಹಳ್ಳಕ್ಕೆ ಬಂದರೆ ಹೆಂಡತಿ, ತಿಟ್ಟಿಗೆ ಬಂದರೆ ತಾಯಿ

೧೩೬೬೯ ಹಾಗೂ ಸೈ, ಹೀಗೂ ಸೈ

೧೩೬೭೦ ಹುಲು ಬಿಟ್ಟವರ ಮನೆ (ಚೀಲಿ) ಸೀಬಿ

೧೩೬೭೧ ಹುಚ್ಚುಮುಂಡೆ ಮದುವೇಲಿ ಉಂಡವನೇ ಜಾಣ

೧೩೬೭೨ *ಹೊತ್ತು (ಬಿಸಿಲು) ಬಂದತ್ತ ಕೊಡೆ ಹಿಡಿ

೧೩೬೭೩ ಹೊತ್ತಿಗೆ ತಿರುಗುವ ಹೂ

೧೩೬೭೪ ಹೊರಸು ಕಂಡಲ್ಲಿ ಬಸಿರಾಗು, ಎಣ್ಣೆ ಕಂಡಲ್ಲಿ ಹೆತ್ತುಕೊ

೧೩೬೭೫ ಹೊಲಗೇರಿಗೆ ಹೋದಾಗ ಹೊಲತಿ ಹಂಗೆ,
ಮಾದಿಗ್ಗೇರೀಲಿ ಮಾದಿಗಿತ್ತಿ ಹಂಗೆ

೧೩೬೭೬ ಹೌದಪ್ಪನ ಚಾವಡಿಯಲ್ಲಿ ಹೌದಪ್ಪ,
ಅಲ್ಲಪ್ಪನ ಚಾವಡೀಲಿ ಅಲ್ಲಪ್ಪ

೧೩೬೭೭ ಅಲ್ಲಪ್ಪನಲ್ಲಿ ಅಲ್ಲಪ್ಪ, ಇಲ್ಲಪ್ಪನಲ್ಲಿ ಇಲ್ಲಪ್ಪ

೧೩೬೭೮ ಹೌದು ಬಸವ ಹೌದು, ಅಲ್ಲ ಬಸವ ಅಲ್ಲ

ಮೋಸಗಾರ

೧೩೬೭೯ ಇಕ್ಕೊಂಡು ಉಣ್ಣೋ ಜಾಗದಲ್ಲಿ ಕದ್ದುಕೊಂಡು ತಿಂದರು

೧೩೬೮೦ ಒಬ್ಬರಿಗೆ ಮೋಸ ಮಾಡುವವನು
ತಾನೇ ಮೊದಲು ಮೋಸ ಹೋಗುವವನು

೧೩೬೮೧ ಕಲ್ಲನ್ನಾದರೂ ಕರಗಿಸಬಹುದು, ಕಪಟಿಯ ಎದೆ ಕರಗದು

---

* ನೀರು ಹೋದ ಕಡೆ ಕೋಲು ಬಿಡು, ಬಿಸಿಲು ಬಂದ ಕಡೆ ಕೊಡೆ ಹಿಡಿ

೧೩೬೮೨ [1]ಕಾಲಿನದು ಕುತ್ತಿಗೆಗೆ ಹಾಕ್ತಾನೆ, ಕುತ್ತಿಗೇದು ಕಾಲಿಗೆ ಹಾಕ್ತಾನೆ

೧೩೬೮೩ ಕೆರ ಬಿಟ್ಟು ಕುದುರೆ ಹೊಡೆದಂಗೆ

೧೩೬೮೪ ಕೈಲಿ ಹರಿಯದಿದ್ದರೂ ಕೌಟಿಲ್ಯ ಘನ

೧೩೬೮೫ ಕೋಮಟಿ ನಂಬಿಸಿ ಕೋಳಕ್ಕೆ ಹಾಕಿದಂಗೆ

೧೩೬೮೬ ಠಕ್ಕ ಬಿಟ್ಟರೆ ಸಿಕ್ಕ

೧೩೬೮೭ ಠವಳಿಗಾರನ ಹತ್ತಿರ ಧರ್ಮ ಉಂಟೆ?

೧೩೬೮೮ ತಗಲಿದ್ದವನಿಗೆ ಹಗಲೇನು, ಇರುಳೇನು?

೧೩೬೮೯ ತಗಲುಗಾರನಿಗೆ ಬಗಲು ಮೇಲೇ ಜ್ಞಾನ

೧೩೬೯೦ ತನ್ನವರದು ಬಿಡದವ ಅನ್ನಿಗರದು ಬಿಟ್ಟಾನೆ?

೧೩೬೯೧ 'ತಿರುಪತಿಗೆ ಹೋಗಿ ಮೂರುನಾಮ ಹಾಕ್ಕೊಂಡು
ಬಾ' ಅಂದನಂತೆ

೧೩೬೯೨ [2]ನಡುನೀರಿನಲ್ಲಿ ಬುಂಡೆ ಕೊಯ್ದ ಹಾಗೆ

೧೩೬೯೩ ನೀರಿನೊಳಗಣ ಮುಳ್ಳಿನ ಹಾಗೆ

೧೩೬೯೪ ಬೊಕ್ಕನಾದರೂ ಠಕ್ಕು ಬಿಡಲಿಲ್ಲ

೧೩೬೯೫ ಮುಂಡೆಗೆ ಒಂಬತ್ತು ನಷ್ಟ, ನನಗೆ ಒಂದು ನಷ್ಟ

೧೩೬೯೬ ಮೋಸ ಯಾರ ದಾಸನಲ್ಲ

೧೩೬೯೭ ಮೋಸಗಾರನ ಮನಸ್ಸನ್ನು ಮಹೇಶ್ವರನೇ ಬಲ್ಲ

೧೩೬೯೮ ಲೊಟಪಿಟಿಗಾರನ ಮನೆಯಲ್ಲಿ ಕಪಟವೇ ಜಾಸ್ತಿ

೧೩೬೯೯ ವಂಚಕನಿಗೆ ಸಂಚು ಕೊಟ್ಟ ಹಾಗೆ

---

1 ಕಾಲಿನದು ಕುತ್ತಿಗೆಗೆ, ಕೈಯಿಂದು ಕಾಲಿಗೆ

2 ನಡು ಹೊಳೆಯಲ್ಲಿ (ಹರಗ್ಲ) ಕತ್ತು ಕೂದಂಗೆ

೧೩೭೦೦ ಶಕುನಿ ಸೋದರಮಾವ

೧೩೭೦೧ ಸಗಣಿ ಗಂಟಿನವನೂ, ಮರಳು ಗಂಟಿನವನೂ ಸೇರಿದ ಹಾಗಾಯ್ತು

೧೩೭೦೨ ಸಂಚು ನಡೆಸೋಕೆ ಸಂಚಕಾರ ಕೊಡಬೇಕೆ?

೧೩೭೦೩ ಹಗೇವಿಗೆ ಇಳಿಸ್ತೀನಿ ಅಂತ ಹಗ್ಗ ಕೊಯ್ದ

೧೩೭೦೪ ಹಿರಿದ ಭರ್ಜಿ ತಪ್ಪಿಸ್ಕೋ ಬಹುದು, ಮರೆ ಕತ್ತಿ ತಪ್ಪಿಸ್ಕೊಳ್ಳೋದು ಕಷ್ಟ

೧೩೭೦೫ ಹೊನ್ನು ತೋರಿಸಿ ಮಣ್ಣು ಕೊಡ್ತಾನೆ

ಮೋಸ ಹೋದವನು

೧೩೭೦೬ ಆ ನಾಮ ಈ ನಾಮ; ಮೇಲುಕೋಟೆ ಮೂರು ನಾಮ

೧೩೭೦೭ [1]ಇರುಳು ಕಂಡ ಬಾವಿಗೆ ಹಗಲು ಬಿದ್ದ ಹಾಗೆ

೧೩೭೦೮ ಕತ್ತಲಲ್ಲಿ ಕರೆದು ಕತ್ತು ಹಿಸುಕಿದರು

೧೩೭೦೯ ಕಮ್ಮಗೆ ಉಣ್ಣಿಸಿ ಬಿಮ್ಮಗೆ ಕಟ್ಟಿದ

೧೩೭೧೦ [2]ಕುರಿ ನಂಬುವುದು ಕಟುಕನನ್ನೇ

೧೩೭೧೧ ಕೊಬ್ಬರಿ ತೋರಿಸಿ ಕೈಗೆ ಚಿಪ್ಪು ಕೊಟ್ಟ

೧೩೭೧೨ ಟೋಪಿ ಹಾಕಿದವನು ಹೆಚ್ಚೋ, ಹಾಕಿಸಿಕೊಂಡವನು ಹೆಚ್ಚೋ ?

೧೩೭೧೩ ಠಕ್ಕನಲ್ಲ ಅಂತ ಪಕ್ಕನೆ ಹೋದರೆ ನೆಗಪಿ ನೆಲಕ್ಕೆ ಇಕ್ಕಿದ

---

1 (i) ಕಂಡೂ ಕಂಡೂ ಗುಂಡಿಗೆ ಬಿದ್ದಹಾಗೆ
(ii) ನೋಡಿ ನೋಡಿ ಹಳ್ಳಕ್ಕೆ ಬಿದ್ದಹಾಗೆ

2 ಕುರಿ ಕುರುಬನನ್ನು ನಂಬದೆ ಕಟುಕನನ್ನು ನಂಬುವುದು

೧೩೭೧೪ ಮಂಕೂನ ಗಂಡನಿಗೆ ಕುದುರೆ ಕೊಟ್ಟ ಹಾಗೆ

೧೩೭೧೫ ಸುಚ್ಚಿ ನೋಡಲು ಹಲಸಿನ ಕಾಯಿ

ಮೋಸಕ್ಕೆ ಮೋಸ

೧೩೭೧೬ ತಂತ್ರಗಾರನನ್ನು ಕುತಂತ್ರಗಾರ ಜಯಿಸಿದ

೧೩೭೧೭ ನೀ ಕಪಟಿಯಾದರೆ ನಿನಗೆಲ್ಲರೂ ಕಪಟಿಗಳೇ

೧೩೭೧೮ ವಂಚಕನಿಗೆ ವಂಚನೆಯೇ ಉಪಾಯ, ವೇಷಧಾರಿಗಳಿಗೆ ವೇಷವೇ ದಿವ್ಯೌಷಧ

ಮೋಸಗಾರನನ್ನು ಯಾರೂ ನಂಬರು

೧೩೭೧೯ ಕಟವಾಣಿ (ಗಿತ್ತಿ) ತಂಟೆ ಬೇಡ

೧೩೭೨೦ ತಾರುಮಾರು ಮಾಡುವವನನ್ನು ಯಾರು ನಂಬಿಯಾರು ?

೧೩೭೨೧ ನಕ್ಕರೂ ಠಕ್ಕನನ್ನು ನಂಬಬಾರದು

೧೩೭೨೨ ನಾಟಕ ಪಂಡಿತನ ಕಾಟ ತಡೆಯೋರ್ಯಾರು ?

ಮೋಸದಿಂದ ಕೆಡಕು

೧೩೭೨೩ ಟವುಳಿಗಾರನ ಮೇಲೆ ಗವುಳಿ ಬಿತ್ತು

೧೩೭೨೪ ಠಕ್ಕು ಮಾಡಿ ಠಿಕಾಣಿ ಕಳಕೊಂಡ

೧೩೭೨೫ ಠಕ್ಕಿರುವವನಿಗೆ ಠಿಕಾಣಿ ಸಿಕ್ಕದು

೧೩೭೨೬ ತಟಕಿನಿಂದ ತಟಪಟವಾಯಿತು

ಕೊಲೆ

೧೩೭೨೭ ಆಳು ಕೊಂದ ಪಾಪ ಆರು ತಿಂಗಳಲ್ಲೇ ಕಾಣ್ತದೆ

೧೩೭೨೮ ಉಂಡ ಊಟ, ಕೊಂದ ಕೊಲೆ ಮರೆಯಲಾಗದು

೧೩೭೨೯ ಕಾಗೆ ಕೊಂದವನಿಗೆ ಕಾಮಾಲೆ

೧೩೭೩೦ ಕುತೂಹಲ ಕೊತ್ತಿಯನ್ನು ಕೊಂದಿತಂತೆ

೧೩೭೩೧ ಕೊಲ್ಲುವವನಿಗಿಂತ ಕಾಯುವವ ದೊಡ್ಡವನು

೧೩೭೩೨ *ಕೊಂದವನಿಗೆ ಕೊಲೆ ತಪ್ಪದು

೧೩೭೩೩ ನರಹತ್ಯಕ್ಕೆ ಹೆದರದವ ಕುರಿಹತ್ಯಕ್ಕೆ ಹೆದರಿಯಾನೆ ?

೧೩೭೩೪ ಮದ್ದಿಕ್ಕಿ ಮಸಣಕ್ಕೆ ಕಳುಹಿಸಿದರು

೧೩೭೩೫ ಮನೆಯಲ್ಲಿ ಹುಟ್ಟಿದ ಇಲಿಯನ್ನು ಕೊಲ್ಲೋದೇಕೆ, ಎಲ್ಲಿಯೋ ಹುಟ್ಟಿದ ಬೆಕ್ಕನ್ನು ಸಾಕೋದೇಕೆ?

೧೩೭೩೬ ಮುಲ್ಲಾನನ್ನು ಕೊಂದು ಅಲ್ಲಾನನ್ನು ಮೆಚ್ಚಿಸ್ತೇನೆ ಎಂದಂತೆ

೧೩೭೩೭ ಸಂಹಾರ ಮಾಡುವವ ಕಮ್ಮಾರನಿಗೆ ಬಿಟ್ಟಾನೆ ?

೧೩೭೩೮ ಸಂಹಾರ ಮಾಡುವವ ಸಂರಕ್ಷಣೆ ಮಾಡಿಯಾನೆ ?

೧೩೭೩೯ ಸಾರಿ ದೂರಿ ಕೊಂದರೆ ಪಾಪವಿಲ್ಲ

ಹಠವಾದಿ

೧೩೭೪೦ ಕಪಿ ಮುಷ್ಟಿ ಹಿಡಿದ ಹಾಗೆ

೧೩೭೪೧ ಛಲಕ್ಕೆ ಚಕ್ರತನ ಮಾಡಿದಂಗೆ

---

* ಕೊಂದ ಕೊಲೆ ಬೆನ್ನುಬಿಡದು

೧೩೭೪೨ ಛಲದವನಲ್ಲಿ ಹಠವೂ ಸೇರಿದ ಹಾಗೆ

೧೩೭೪೩ ಛಲವಾದಿ ಸಂಗಡ ಹಠವಾದಿ ಸೇರಿದ ಹಾಗೆ

೧೩೭೪೪ ಬಲಗಾರನೊಂದಿಗೆ ಛಲಗಾರ ಸೇರಿದ ಹಾಗೆ

೧೩೭೪೫ ಬಲದಲ್ಲಿ ವಾಲಿ ಮೇಲು, ಛಲದಲ್ಲಿ ಕೌರವ ಮೇಲು

೧೩೭೪೬ ಬಲಿಕೊಡದವ ಛಲಕ್ಕೆ ಬಂದಾನೆ ?

೧೩೭೪೭ ಶಟಗಾರನಿಗೆ ಹಟವ್ಯಾಕೆ ?

೧೩೭೪೮ ಸುಮ್ಮನೆ ಇದ್ದರೆ ಸೋಮಾರಿ, ತಿರುಗಿಬಿದ್ದರೆ ಹಠಮಾರಿ

ಅನುಕರಣ

೧೩೭೪೯ [1]ಊರಿನ ಎತ್ತು ಓಡಾಡುತ್ತೆ ಅಂತ ಉಪ್ಪಿನ ಎತ್ತು (ಹೇರೆತ್ತು) ಓಡಿತಂತೆ

೧೩೭೫೦ ಊರು ಓಡುತ್ತೆ ಅಂತ ಕುರುಡನೂ ಓಡಿದನಂತೆ

೧೩೭೫೧ ಊರೆಲ್ಲ ಒಟ್ಟು ಕುಟ್ಟಿದರು ಹೇಳಿ ಸ್ವಾಡ ತನ್ ಬೆಟ್ ಕುಟ್ಕೊಂಡ (ಹವ್ಯಕ)

೧೩೭೫೨ ಎಲ್ಲರೂ ಆಡ್ತಾರೆ (ಕುಣೀತಾರೆ) ಅಂತ ನಮ್ಮ (ಚೆಲ್ಲೂ ಕುಣೀತು) ಚೆಲ್ಲ ಮಲ್ಲಿಯೂ ಆಡಿತು

೧೩೭೫೩ [2]ಎಲ್ಲರೂ ನಗ್ತಾರೆ ಅಂತ ಕಿವುಡ (ಹುಚ್ಚ) ತಾನೂ ನಕ್ಕ

೧೩೭೫೪ ಒಬ್ರು ಕಂಡು ಒಬ್ರು ಗೊಬ್ಬರ ಹೂಡಿದರು

೧೩೭೫೫ ಕುಣಿಯುವವರನ್ನು ಕಣ್ಣು ಕಂಡಾಗ ಕಾಲು ಗೆಜ್ಜೆ ಬೇಡಿತು

---

1 ಊರ್ ಎದ್ದು ಕುಣೀತು ಹೇಳಿ ಉಪ್ಪೆತ್ತು ಕುಣೀತಡ (ಹವ್ಯಕ)

2 ಎಲ್ಲರೂ ಚಿರಿಚಿದರು, ನಾನೂ ಚಿರಿಚಿದೆ

೧೩೭೫೬ ಕೇರೆ ಹಾವು ಓಡಿತು ಅಂತ ನಕ್ಕಳು ಓಡಿತಂತೆ

೧೩೭೫೭ ನಾಯಿಗೇಕೆ ನವಿಲಾಟ ?

ಅನುಕರಿಸಿದಂತಾಗಲು ಸಾಧ್ಯವಿಲ್ಲ

೧೩೭೫೮ ಅಂಗುಷ್ಟ ಬಾತರೆ ಪರ್ವತವಾದೀತೆ?

೧೩೭೫೯ ಉದು ಉಬ್ಬಿದರೆ ಮದ್ದಳೆಯಾದೀತೆ?

೧೩೭೬೦ ಉದ್ದು ಉರುಳಿದರೆ ಹೆದ್ದಾರಿ ದಾಟುತ್ಯೆ?

೧೩೭೬೧ ಉಂಗುರ ದೊಡ್ಡದಾದರೆ ಗಗ್ಗ (ಗಂಗ)ರ ವಾದೀತೆ?

೧೩೭೬೨ ಕಪ್ಪಗಿದ್ದೋರೆಲ್ಲ ಕೃಷ್ಣರೆ ?

೧೩೭೬೩ ಕಾಗೆ ನಂವನವನದಲ್ಲಿ ಕುಳಿತು ಕೂಗಿದರೆ ಕೋಗಿಲೆಯಾದೀತೆ?

೧೩೭೬೪ ಕಾಗಿಲೆ ಕರಿದಾದರೆ ಕೋಗಿಲೆ ಆದೀತೆ ?

೧೩೭೬೫ ಕಿರುಬೆರಳು ಉಬ್ಬಿದರೆ ಕಬ್ಬಿನ ಕೋಲಾದೀತೆ?

೧೩೭೬೬ ಚಕ್ರ ತಿರುಗಿಸಿದ ಮಾತ್ರಕ್ಕೆ ಕುಂಬಾರ ಚಕ್ರಿಯಾದಾನೆ?

೧೩೭೬೭ ಜೋಳ ಹೊಸದಾದರೆ ಮುತ್ತಾದೀತೆ?

೧೩೭೬೮ ಕಿರಿದುಂಬುವ ಜೋಗಿ ತ್ರಿಶೂಲ ಹಿಡಿದಾಕ್ಷಣ ತಿಸುಳಿಯಾದಾನೆ?

೧೩೭೬೯ ತೊಗಲು ಕೊಳೆ ಆದೀತೆ?

೧೩೭೭೦ ದಾಡಿಮದ ಬೀಜ ರತ್ನವಾದೀತೆ?

೧೩೭೭೧ ದೊಡ್ಡನೂಲು ಸೀರೆಯುಟ್ಟರೆ ದೊಡ್ಡವರ ಮನೆಯವಳೇ ?

೧೩೭೭೨ ದೋಳು ದೊಡ್ಡದಾದರೆ ಗೆರಸೆ ಆದೀತೆ?

೧೩೭೭೩ ಧೂಳು ಧೂಪವಾದೀತೆ, ಮಾಳಿಗೆ ಸ್ವರ್ಗವಾದೀತೆ?

೧೩೭೯೯ ಬೆಕ್ಕು ಕಟ್ಟಿ ಹೋಮ ಮಾಡಿದಂಗೆ

೧೩೮೦೦ ಭಗೀರಥ ಯತ್ನಮಾಡಿ ಭಾಗೀರಥಿ ತಂದ, ನಗರದವ ಯತ್ನ ಮಾಡಿ ನಗ ಕಳಕೊಂಡ

೧೩೮೦೧ ಮೇಘ ನೋಡಿ ನವಿಲು ಕುಣಿದರೆ ಗೂಗೆ ನೋಡಿ ಕೋಳಿ ಕುಣಿಯಿತಂತೆ

೧೩೮೦೨ ಹಕ್ಕಿ ಹಾರಿತು ಅಂತ ಬೆಕ್ಕು ಹಾರಿತು

೧೩೮೦೩ ಹಂಸೆಯ ಹಾಗೆ ನಡೆಯೋಕೆ ಹೋಗಿ ಗುಬ್ಬಿ ಕುಪ್ಪಳಿಸಿ ಬಿತ್ತು

೧೩೮೦೪ ಹುಲಿಬಣ್ಣ ನೋಡಿ ನರಿ ಬರೆಹಾಕಿ (ಮೈಸುಟ್ಟು, ಮೈಪರಚಿ) ಕೊಂಡಿತು

ಅತಿ ಬುದ್ಧಿವಂತಿಕೆ

೧೩೮೦೫ ಇದ್ದ ತಂಗುಳು ನನಗಿಕ್ಕು, ನಿನಗೆಂದಿಗೂ ಹಸಿವಿಲ್ಲದ ಹಾಗೆ ಮಾಡ್ತೇನೆ

೧೩೮೦೬ ಜಾಣನ ಗೋಣಿ ಬರಿದು

೧೩೮೦೭ *ನನ್ನ ಗಂಡ ದಡ್ಡ, ನಿನ್ನ ಗಂಡ ಜಾಣ, ತುಂಬೆಸೊಪ್ಪು ಕೊಟ್ಟೇನು ತೊಗರಿಬೇಳೆ ಕೊಟ್ಟೇಯಾ?

೧೩೮೦೮ ನನ್ನ ಅಲ್ಲ ಅಂದು ಪಲ್ಲಕ್ಕ್ಯಾಗ ಕುಂದರಸ್ಲಿ, ನಿನ್ನ ಸೈ ಅಂದು ಚಾವಡಿ ಕಂಬಕ್ಕೆ ಬಿಗೀಲಿ

೧೩೮೦೯ ನಿನ್ನ ಸಾಲಕ್ಕೆ ನನ್ನ ಹಲಸಿನ ಹಣ್ಣೆ?

೧೩೮೧೦ ನಿನ್ನ ಹೊರೆಗೆ ನನ್ನ ಮೆಟ್ಟೆ?

---

* 'ಬೆಳ್ಳೇವು ಮಾತಿನೋರೆ, ಬ್ಯಾಳೆ ಸಾರ್ನೋರೆ! ತುಂಬೆ ಸೊಪ್ಪು ಕೊಟ್ಟೇನು, ತೊಗರಿ ಬ್ಯಾಳೆ ಕೊಟ್ಟೇರ ?' ಅಂದಂತೆ

೧೩೮೧೧ ನಿಮ್ಮನೆ ಎಮ್ಮೆ ನಮ್ಮನೆ ಕರು ; ತಾ ತಿಮ್ಮಕ್ಕ ಪಂಚೇರು ತುಪ್ಪವ

೧೩೮೧೨ ನಿಮ್ಮನೆ ಕಾಟಕ್ಕೆ ನಮ್ಮನೆ ಬಟ್ಟೆಯೆ?

೧೩೮೧೩ ಹಸಿವೆಯಾಗದಂತೆ ಗಿಡ ಕೊಡ್ತೇನೆ, ನನಗರ್ಧ ರೊಟ್ಟಿ ಕೊಡು

ದಾಕ್ಷಿಣ್ಯ

೧೩೮೧೪ ಅಪ್ಪನ ಮನೆ ಕೆಲಸಿ ಬಂದ ಅಂತ ತಲೆ ಬೋಳಿಸಿಕೊಂಡಂಗೆ

೧೩೮೧೫ ಗೌಡನ ದಾಕ್ಷಿಣ್ಯಕ್ಕೆ ಬಸಿರಾಗಿ ಹೆರೋಕೆ ತಾವಿಲ್ಲ

೧೩೮೧೬ ದಾಕ್ಷಿಣ್ಯವಂತ ದಕ್ಷಿಣ ದೇಶಕ್ಕೆ ಹೋದರೆ ಭಕ್ಷಣ (ದಕ್ಷಿಣೆ) ಸಿಕ್ಕೀತೆ?

೧೩೮೧೭ [1]ವ್ಯವಹಾರಕ್ಕೂ ಆಹಾರಕ್ಕೂ ದಾಕ್ಷಿಣ್ಯ ಮಾಡಬಾರದು

೧೩೮೧೮ 'ಹುಲ್ಲು ತಿಂತಿಯಾ ಬಸವ !' 'ಹುಂ', 'ನೀರು ಕುಡೀತೀಯಾ ಬಸವ !' 'ಹುಂ'

೧೩೮೧೯ ದಾಕ್ಷಿಣ್ಯಕ್ಕೆ ಬಸುರಾದಂತೆ

ಯಾರ ಹಂಗಿನಿಂದೇನು?

೧೩೮೨೦ [2]ಅಕ್ಕಿ ಕೊಟ್ಟು ಉಣ್ಣೋಕೆ ಅಕ್ಕನ ಹಂಗೇನು?

೧೩೮೨೧ ಅಚ್ಚಕ್ಕಿ ಇದ್ದಾಗ ನುಚ್ಚಕ್ಕಿ ಹಂಗೇನು ?

---

1 ವ್ಯವಹಾರದಲ್ಲಿ ದಾಕ್ಷಿಣ್ಯವೇ ?

2 (i) ಅಕ್ಕಿ ಕೊಟ್ಟ್ಬ ಅಕ್ಕಾ ! ನಿನ್ನ ಪರ್‌ಸಾದ್ವಾ ?

(ii) ಅಕ್ಕಿ ಕೊಟ್ ಉಂಬ್ಲೆ ಅಕ್ಕನ್ ಮನೆಯೇ ಆಗವೇ ? (ಹವ್ಯಕ)

(iii) ಒಮ್ಮೆ ನಮ್ಮನೆ ಅಕ್ಕಿ ಕೊಟ್ಟು (ತಿಮ್ಮಕ್ಕನ ಮನೆ) ಅಮ್ಮಾ, ನಿಮ್ಮನೆ ಪ್ರಸಾದವೆ ?

೧೩೮೨೨ ಅಟ್ಟದ ಮೇಲೆ ನಿದ್ದೆ ಮಾಡುವವನಿಗೆ ಪಟ್ಟಣದ ಹಂಗೇನು?

೧೩೮೨೩ ಅಂಗ ಹರಿದ ಬಳಿಕ ಲಿಂಗದ ಪರವಿಯೇನು?

೧೩೮೨೪ *ಹಂಗು ತೀರಿದ ಮೇಲೆ ಲಿಂಗದ ಗೋಜೇಕೆ?

೧೩೮೨೫ ಆದದ್ದುಂಡ, ಮಾಡಿದ್ದು ಕೊಟ್ಟ

೧೩೮೨೬ ಉಣಲಿಲ್ಲ ಉಡಲಿಲ್ಲ ; ಹಂಗ್ಯಾಣೆ ತಪ್ಪಲಿಲ್ಲ

೧೩೮೨೭ ಕಣ್ಣು ಹೋಗುವಾಗ ಹುಬ್ಬಿನ ಹಂಗೇನು?

೧೩೮೨೮ ಕಾಸಿನ ಕಡಲೆಯೂ ಬೇಡ, ಹೂಸಿನ ನಾತವೂ ಬೇಡ

೧೩೮೨೯ ತೆಪ್ಪ ಹರಿದರೆ ದೋಣಿ

೧೩೮೩೦ ಬಸುರಿಯಾದವಳು ಹೆರಕ್ಕೆ ತಾವು ಕಾಣಳೇ?

೧೩೮೩೧ ಸರಿ ಬಂದರೆ ಬಿಟ್ಟ ಹುರಿದ ಹುರುಳಿ ನೀರ

೧೩೮೩೨ ಹಂಗಿನ ಅಮೃತಾನ್ನಕ್ಕಿಂತ ಹಂಗಿಲ್ಲದ ಹಿಟ್ಟು ಮೇಲು

೧೩೮೩೩ ಹಂಗಿನ ಮನೆಗಿಂತ ಅಂಬಲಿ ಗುಡಿಸಲೇ ಲೇಸು

೧೩೮೩೪ ಹಂಗು ಕೆಟ್ಟವಳ ಆಟ ನೋಡು, ತೀರ ಕೆಟ್ಟವಳ ನೋಟ ನೋಡು

೧೩೮೩೫ ಹಿಂಡಿ ಹೆಡಗ್ಗಾಯ್ತು, ಎಣ್ಣೆ ಗಡಗ್ಗಾಯ್ತು ; ಗಾಣಗಿತ್ತಿ ! ನಿನ್ನ ಹಂಗೇನು?

ಚೇಷ್ಟೆ

೧೩೮೩೬ ಅಲ್ಲಿ ಬಿದ್ದು ಇಲ್ಲಿ ಬಿದ್ದು ಹಲ್ಲು ಮುರ್ಕೊಂಡ

---

*ತಂಗಿಯ ಗೊಡವೆಯೇಕೆ ?

೧೩೮೩೭ ಅಂಗಚೇಷ್ಟೆ ಅಂದವಲ್ಲ, ಮಂಗಚೇಷ್ಟೆ ಮರ್ಯಾದೆಯಲ್ಲ

೧೩೮೩೮ ಕಡಂಮುರು ಗೂಡಿಗೆ ಕಲ್ಲು ಎಸೆದ ಹಾಗೆ

೧೩೮೩೯ ಕಾವು ಕೊಟ್ಟು ನೋವು ಪಡಕೊಂಡ

೧೩೮೪೦ ಕಾಸ್ಯಾಡಿದ್ದಕ್ಕೆ ಹೋಗಿ ಕೈಮುರ್ಕೊಂಡ

೧೩೮೪೧ ಕಿಟ್ಟಿದಿಂದ ಹೊಡೆದು ಲೊಟ್ಟೆ ಹಾಕಿದ

೧೩೮೪೨ ಕೂತಿದ್ದ ಜೇನಿಗೆ ಕಡ್ಡಿ ಚುಚ್ಚಿ ಮೈಕೈನೆಲ್ಲ ಕಡಿಸಿಕೊಂಡ

೧೩೮೪೩ ಕೂತಿರಲಾರದವ ಕಡಜದ ಗೂಡಿಗೆ ಕೈ ಹಾಕಿದ ಹಾಗೆ

೧೩೮೪೪ *ಕೂತುಕೊಂಡ (ಪುರಪಯ್ಯ) ಮುರುವ ಏನು ಮಾಡಿಕೊಂಡ ಅಂದರೆ ಕೆರಕೊಂಡು ಹುಣ್ಣು ಮಾಡಿಕೊಂಡ

೧೩೮೪೫ 'ಗೋಧಿ ಕಾಯೋ ಮಗನೆ !' ಅಂದರೆ ಕಣ್ಣಿಗೆ ಊಬು ಚುಚ್ಚಿಕೊಂಡ

೧೩೮೪೬ ತು (ತ) ಳ್ಳಾಡಿ ತು (ತ) ಳ್ಳಾಡಿ ಮುಳ್ಳಿನ ಮೇಲೆ ಬಿದ್ದ

೧೩೮೪೭ ದೆಬ್ಬೆಕೊಟ್ಟು ಬೊಬ್ಬೆ ಕೊಂಡ

೧೩೮೪೮ ನಾಯಿ ಬಾಯ್ಗೆ ಕೈಹಾಕಿ ಕಚ್ಚಿಸ್ಕೊಂಡ್ನಂತೆ

೧೩೮೪೯ ಪಟ್ಟವೀಳ್ಯಕ್ಕೆ ಅಂತ ಹೋಗಿ ಕುಟ್ಟಿಸಿಕೊಂಡು ಬಂದ

೧೩೮೫೦ ಮರ್ಕಟನ ಚೇಷ್ಟೆ ತರ್ಕ ಮಾಡಿದರೆ ನಿಂತೀತೆ?

೧೩೮೫೧ ಮನೆಯಲ್ಲಿ ಮಂಗ, ನೆರೆಮನೆಯಲ್ಲಿ ಪೆಂಗ

೧೩೮೫೨ ಮಂಗ ಚೇಷ್ಟೆ ಹೋದರೂ ಅಂಗಚೇಷ್ಟೆ ಹೋಗಲಿಲ್ಲ

೧೩೮೫೩ ಮಂಗನ್ನ ನೋಡಿ 'ನಮ್ಮ ತಾತ!' ಅಂದ

---

* ಕುರುಡ ಏನು ಮಾಡಿದ ಅಂದರೆ ಅಂಡು ತುರಿಸಿಕೊಂಡು ಹುಣ್ಣು ಮಾಡಿಕೊಂಡ

೧೩೮೫೪ ಮಂಗನ್ನ ತಂದು ನಡುಮನೇಲಿಟ್ಟುಕೊಂಡರಂತೆ

೧೩೮೫೫ ಶೃಂಗಾರಕ್ಕೆ ಕಡಿಮೆಯಾದರೂ ಮಂಗಾಟಕ್ಕೆ ಕಡಮೆಯಿಲ್ಲ

೧೩೮೫೬ ಸಸಿನಿದ್ದ ತಿಕಕ್ಕೆ ಅಗಸರ ಮಾರಣ್ಣ ದಸಿ ಆನಿಸಿಕೊಂಡಂಗೆ

೧೩೮೫೭ ಸುಖದ ಗೂದಿಗೆ ಮುಳ್ಳು ಚುಚ್ಚಿಕೊಂಡರಂತೆ

೧೩೮೫೮ ಹಲ್ಲು ಕಚ್ಚಿಕೊಂಡು (ಕೈತೋರಿಸಿ) ಅವಲಕ್ಷಣ ಅನಿಸಿಕೊಂಡ

೧೩೮೫೯ ಹುಂಗಿಸಿದರೂ ಮಂಗತನ ಹೋಗಲಿಲ್ಲ

೧೩೮೬೦ ಹೈಲಾಟ ಆಡಿ ಹುಲ್ಲುಃ ಗಿರಿಚ್ಕೊಂಡ್ರು

ಮುಂದಾಲೋಚನೆ

೧೩೮೬೧ [1]ಅರಿತು ಮಾಡುವ ಕೆಲಸಕ್ಕೆ ಅಪಾಯಬಾರದು

೧೩೮೬೨ ಗೇಣು ಬಿಡುವಲ್ಲಿ ಮಾರು ಬಿಡು

೧೩೮೬೩ [2]ಗೋಡೆ ಆಸರು ಮಾಡಿಕೊಂಡು ತಟ್ಟಿ ಒದೆಯಬೇಕು

೧೩೮೬೪ ನೆನೆಯುವ ಮುನ್ನ ಕೊಡೆ ಬಿಡಿಸು

೧೩೮೬೫ ಯೋಚಿಸಿದ ಹಾಗೆ ಸೂಚಿಸುವುದು

ಮುಂದಾಲೋಚನೆಯಿಲ್ಲದಿರುವಿಕೆ

೧೩೮೬೬ ಅಪ್ಪನ ದಪ್ಪಸ್ಥಾನ ನೋಡಿ ಒಪ್ಪಾರು ಕಿತ್ತು ಒಲೆಗಿಟ್ಟಳು

೧೩೮೬೭ ಅಮುಗದಲ್ಲಿ ಪಾತ್ರ ಮಾಡುವಾಗ ಮದ್ದಳೆಯನ್ನು ಎರವು ಬೇಡಿದನಂತೆ

---

1 ಆದಿಯಲ್ಲೇ ಅರಿತು ಮಾಡಿದ ಕೆಲಸಕ್ಕೆ ಬಾಧೆಯಿಲ್ಲ

2 (i) ಗೋಡೆತಟ್ಟಿ (ತಟ್ಟಿ, ಒದೆ) ನೆರಕೆ ಕೀಳು

(ii) ತಟ್ಟಿ ನೆಚ್ಚಿ ಗೋಡೆ ಒದೆಯಬೇಡ

೧೩೮೬೮ ಇವ್ವದ್ದನ್ನೂ ಕೆಡಿಸಿಕೊಂಡ ಕಂಚುಗಾರ ಮುರುವ

೧೩೮೬೯ [1]ಊಟ ಆಯಿತು, ಒಲೆ ಕಿತ್ತಾಕು

೧೩೮೭೦ ಗಂಡ ಪಟ್ಟೆ ಸೀರೆ ತರ್ತಾನೆ ಅಂತ ಇದ್ದ ಬಟ್ಟೆ ಸುಟ್ಟಳು

೧೩೮೭೧ "ಗಂಧ ದ್ವಾರಾಂ" ಅಂದಾಗ ಸಾಣೆ ಕಲ್ಲು ಗಂಧದ ಕೊರಡು ಹುಡುಕಿದ ಹಾಗೆ

೧೩೮೭೨ ಬಣ್ಣದ ನೆರಕೆಗೆ ಮರುಳಾಗಿ (ಚಿನ್ನದ ಗೋಡೆ ನಂಬಿ) ಸುಣ್ಣದ (ಮಣ್ಣಿನ) ಗೋಡೆ ಕೆಡವಿದ

೧೩೮೭೩ ಭಾವನ್ನ ನೆಚ್ಚಿಕೊಂಡು ಗಂಡನ್ನ ತಿಂದುಕೊಂಡಳಂತೆ

೧೩೮೭೪ ಮನೆ ಹತ್ತಿದಾ (ಬಾಯಾರಿದಾ, ಕಿಚ್ಚೆದ್ದಾ, ಗಡ್ಡಕ್ಕೆ ಬೆಂಕಿ ಬಿದ್ದಾ, ಊರಿಗೆ ಬೆಂಕಿ ಬಿದ್ದಾ)ಗ ಬಾವಿ ತೋಡಿದರಂತೆ

೧೩೮೭೫ [2]ಮೋಲಿನ ಮೋಡ (ಆಕಾಶ) ನೋಡಿ ಸೇದುವ ಬಾವಿ (ಒಲೆ)ಗೆ ಉಚ್ಚೆ ಹುಯ್ದನಂತೆ

೧೩೮೭೬ ಮೋಡ ಕಂಡು ಕೆರೆ ಒಡೇ ಹೊಯ್ದ (ಒಡೆದ ಹಾಗೆ)

೧೩೮೭೭ ಹೊಸ ಸೀರೆ ಬರುತ್ತೇಂತ ಹೇಳಿ ಹಳೆ ಸೀರೆ ಸುಟ್ಕಂಡ್ಳು(ಹವ್ಯಕ)

---

1 (i) ಉಂಡ ಹೊಟ್ಟೆ ನಂಬಿ ಒಲೆಗುಂಡು ಕಿತ್ತು ಹಾಕಿದ
(ii) ಒಪ್ಪತ್ತಿಗಿದ್ದರೆ ಒಲೆ ಕಿತ್ತು ಹಾಕಿದ ಹಾಗೆ
(iii) ಒಂದು ಹೊತ್ತಿನ ಅನ್ನ ಇದೆ ಅಂತ ಒಲೆ ಕಿತ್ತು ಮಡಗಿದಂಗೆ
(iv) ತಿಥಿ ತಿಂದ ಭಟ್ಟ ಒಲೆ ಕಿತ್ತಿದ್ದನಡ
(v) ,, ಗೋಣಚಿ ಸುಟ್ಟಿದ್ದ
(vi) ಮಧ್ಯಾಹ್ನಕ್ಕಿದ್ದರೆ ಒಲೆ ಅಗೆದು ಹಾಕಿದಹಾಗೆ

2 ಮೋಡ ಕಂಡು ನಾಯಿ ಬಾವಿಗೆ ಉಚ್ಚೆ ಹುಯ್ತು

ಅವಿಚಾರತೆ

೧೩೮೭೮ [1]ಉಪ್ಪಿನವ ಉರುಳುರುಳಿ ಅತ್ತರೆ ತೆಂಗಿನಕಾಯವನು ಹೊರಹೊರಳಿ ಅತ್ತ

೧೩೮೭೯ [2]ಎಣ್ಣೆ ಚೆಲ್ಲಿದವನೂ ಅತ್ತ, ಕಾಯಿ ಚೆಲ್ಲಿದವನೂ ಅತ್ತ

೧೩೮೮೦ 'ಎತ್ತು ಈಯಿತು' ಅಂದರೆ 'ಕೊಟ್ಟಿಗೇಲಿ ಕಟ್ಟು'

೧೩೮೮೧ ಕನಸಿನಲ್ಲಿ ಚೇಳು ಕಡಿದರೆ ನನಸಿನಲ್ಲಿ ಅತ್ತ

೧೩೮೮೨ ಕಾಡಿನಲ್ಲಿ ಹುಲಿ ಕೂಗಿದರೆ ನಾಡಿನಲ್ಲಿದ್ದವರು ಒಕ್ಕಲು ಕಿತ್ತರು

೧೩೮೮೩ 'ಹುಟ್ಟುತ್ತೈತಿ' ಅಂದರ ಹೂಡು ಎತ್ತಿಗೆ ಸಬರ ಹಾಕಿದ

ಪ್ರಸಿದ್ಧಿಗೆ ಬರುವ ಉಪಾಯ

೧೩೮೮೪ ಅಕ್ಕನ ತಾಳ, ಭಾವನ ಮೇಳ

೧೩೮೮೫ ಕತ್ತೆ ಒಂಟೆ ಹೊಗಳಿಕೆ ; ಅಹೋ ರೂಪ ! ಅಹೋ ಗಾನ !

೧೩೮೮೬ [3]ಕತ್ತೆಯ ಗಾಯನಕ್ಕೆ ಒಳ್ಳು ತಲೆದೂಗಿದಂತೆ

೧೩೮೮೭ ಕತ್ತೆಯ ಮದುವೆಗೆ ಕಾಗೆ (ರವುಡೋಲು) ಓಲಗ

೧೩೮೮೮ ಕುರುಡಿಯ ಕುಣಿತಕ್ಕೆ ತಪರಗಣ್ಣಿ ತಾಳ

---

1 (i) ಉಪ್ಪಿನವ ನರಳುತ್ತಾನೆಂದು ತೆಂಗಿನಕಾಯವ (ಎಲೆ ಹೇರಿನವನೂ) ನರಳಿದನಂತೆ

(ii) ಎಲೆಯವನೊಂದಿಗೆ ಹೊಗಿ ಉಪ್ಪಿನವ ಕೆಟ್ಟಂಗೆ

2 (i) ಎಣ್ಣೆ ಗಡಿಗೆ ಜರಿದವನೂ ಅತ್ತ, ಕಾಯಿ ಹೆಡಿಗೆ ಜರಿದವನೂ ಅತ್ತ

(ii) ಎಣ್ಣೆ ಹಾಡ ಕೆಡೆದುಕೊಂಡವ ಅಳುತ್ತಾನಂತ, ಕಾಯಿ ಕೆಡೆದುಕೊಂಡವನೂ ಅತ್ತ

3 ನಳ್ಳಿ ರಾಗಕ್ಕೆ ನರಿ (ನಾಯಿ) ತಲೆದೂಗಿತು

ಅಶಕ್ತರಿಗೆ ತೊಂದರೆ ಕೊಡುವುದು

೧೩೮೮೯ ಆಯ್ದು ತಿನ್ನುವ ಕೋಳಿ (ಕಾಲು ಮುರಿಚ) ಮೂಗು ಕೊಯ್ದ ಹಾಗೆ

೧೩೮೯೦ ಕುರುಡನ ಕೈಕೋಲು ಕಿತ್ತುಕೊಂಡ ಹಾಗೆ

೧೩೮೯೧ ಕೂಲಿನಾಲಿ ಮಾಡುವವಳನ್ನು ಕೆಡಿಸಿದ ಹಾಗೆ
ಚೀಕ್ರ ಗುಡಿಸಲಿಗೆ ಬೆಂಕಿ ಹೆಟ್ಟಿದಂಗೆ

೧೩೮೯೨ ತಬ್ಬಲಿ ಕೈನ ತಂಗುಳಿಟ್ಟು ಕಿತ್ತುಕೊಂಡ ಹಾಗೆ

೧೩೮೯೩ ತಿರಿದುಣ್ಣುವವನನ್ನು ಹರುಕೊಂಡು ತಿಂದರು

೧೩೮೯೪ ತಿರಿದು ತಿನ್ನುವವಳನ್ನು (ಹೊಡೆದು) ಕೆಡಿಸಿದ ಹಾಗೆ

ನೊಂದವನನ್ನು ನೋಯಿಸುವುದು

೧೩೮೯೫ ಅಟ್ಟದಿಂದ ಬಿದ್ದವನನ್ನು ದಡಿ ತಕ್ಕೊಂಡು ಚಚ್ಚಿದರು

೧೩೮೯೬ ಆಳುವ (ಅಜ್ಜಿ) ರಂಡೆ ತಲೆ ಮೇಲೆ ಗಳು (ಒರಳು) ಎತ್ತಿ ಹಾಕಿದ ಹಾಗೆ

೧೩೮೯೭ ಏಳಲಾರದ ಅಜ್ಜಿಗೆ ಚೇಳು ಕಚ್ಚಿತು

೧೩೮೯೮ ಒರಗುವವಳ ಮೇಲೆ ಸೊರಗುಪವಳು ಬಿದ್ದಳು

೧೩೮೯೯ ನೊಂದವರನ್ನು ನೋಯಿಸಿದರೆ ಕೊಂದಷ್ಟು ಪಾಪ

೧೩೯೦೦ ಬಿದ್ದೆತ್ತಿನ ಬಾಲ ಮುರಿದ ಹಾಗೆ

೧೩೯೦೧ ಮರದ ಮೇಲಿಂದ ಬಿದ್ದವನನ್ನು ಮಟ್ಟೇಲಿ ಕೆಜ್ಜು

೧೩೯೦೨ ಹುಣ್ಣಿನ (ಉರಿಯುವ ಗಾಯದ) ಮೇಲೆ ಬರೆ ಹಾಕಿದರು

ಮೋಜು

೧೩೯೦೩ *ಜೋಕು ಮಾಡುತ್ತಿದ್ದುದು ನಾಕ್ಮಾರುದ್ದ. ಹಾಕು ಅವಳ್ದ ಹಾಳೆ ಮೇಲೆ

೧೩೯೦೪ ಮಾಡೋದು ಖುಷಾಮತ್ತು, ಆಗೋದು ಹಜಾಮತ್ತು, ಇದೆಲ್ಲಿ ಮಲಾಮತ್ತು ?

೧೩೯೦೫ 'ಮೋಜು ಬಂದದೆ ಮೊಗ ಕ್ವಾರೆ' ಅಂದ, 'ನಂಗೂ ಮೋಜು ಬಂದದೆ, ಕದೀನ ಮೂಲ್ಗೆ ಬಿಸ್ಹಾಕಿ' ಅಂದಳು

೧೩೯೦೬ ಸೂಳೆಮುಂದೆ ಜೋಕ್ ಮಾಡೋಕ್ಹೋಗಿ ಕೋಳಿ ಪಿಳ್ಳೆ ಕಾಲಲ್ಲಿ ಒದ್ದ

ಅಯೋಗ್ಯನಲ್ಲಿ ಗುಣವರಸುವುದು

೧೩೯೦೭ ಕಾಡಿನಲ್ಲಿ ಕಸ್ತೂರಿ (ಹೊಂಬಾಳೆ) ಅರಸಿದ ಹಾಗೆ

೧೩೯೦೮ ಕುಂಬಾರ್ರ ಆವಿಗೇಲಿ ತಾಮ್ರದ ಜೆಂಬು ಹುಡುಕಿದಂಗೆ

೧೩೯೦೯ ಬಿದಿರೆಲೆಯಲ್ಲಿ ರಸ ಅರಸಿದಂತೆ

೧೩೯೧೦ ಮರಳುಗಾಡಿನಲ್ಲಿ ನೀರು ಹುಡುಕಿದ ಹಾಗೆ

೧೩೯೧೧ ರಾಗಿಯಲ್ಲಿ ಸಾಸವೆ ಕಾಳು ಹುಡುಕಿದ ಹಾಗೆ

೧೩೯೧೨ ಸಮುದ್ರದಲ್ಲಿ ಸಿಹಿನೀರಿಲ್ಲ ಅಂದ ಹಾಗೆ

೧೩೯೧೩ ಹೂವಿನಲ್ಲಿ ಕಂಪಲ್ಲದೆ ಕಾಯಿನಲ್ಲುಂಟೆ?

ಜನ ಮರುಳು

೧೩೯೧೪ ಇಲಿ ಹೋದರೆ ಹುಲಿ ಹೋಯಿತು

---

* ಜೊಃಕು ಮಾಡೋನ ತಿಕ ನಾಕ್ಮಾರುದ್ದ

೧೩೯೧೫ ಒಂದು ಕುರಿ ಹಳ್ಳಕ್ಕೆ ಬಿದ್ದರೆ ಎಲ್ಲಾ ಬಿದ್ದವು

೧೩೯೧೬ [1]ಕಂಚಿ ಗೋಪುರ ಕಾಗೆ ಎತ್ತಿಕೊಂಡು ಹೋಯ್ತು ಅಂದ ಹಾಗೆ

೧೩೯೧೭ ಕುರಿ ನುಗ್ಗಿದಂಗೆ ಜನ

೧೩೯೧೮ ಚಚ್ಚರವಂತೆ ಉಚ್ಚೆ ಹೂದರೆ ಬಚ್ಚಲು ಕಲ್ಲು
ಮೂರು ಹೋಳಾಯ್ತು ಅಂದ ಹಾಗೆ

೧೩೯೧೯ [2]ಜನ(ಮಳ್ಳೋ) ಮರುಳೋ, ಜಾತ್ರೆ (ಮಳ್ಳೋ) ಮರುಳೋ
(ಕೋಚು ಭಟ್ಟನ ಕೂದಲು ಮರುಳೋ !)

ಜಗದಾರಯ್ಯ (ಶಂಭುಲಿಂಗ)ನ ಶಂಠ ಮರುಳೋ !

೧೩೯೨೦ ಬೆಟ್ಟುದ್ದ ತಕ್ಕೊಂಡು ಹೋಗಿ ಬೆಟ್ಟದುದ್ದ ಮಾಡಿದ ಹಾಗೆ

೧೩೯೨೧ ಮೂರು ಕಾಗೆ ವಾಂತಿ ಮಾಡಿದ ಸಮಾಚಾರ

ಜನವನ್ನು ಮೆಚ್ಚಿಸಲಾಗದು

೧೩೯೨೨ [3]ಊರ ಮುಂದೆ ಕುಂಟೆ ಹೂಡಿದರೆ ಒಬ್ಬ ಕಡದು ಅಂದ,
ಒಬ್ಬ ಬಳಿದು ಅಂದ

೧೩೯೨೩ [4]ಜನ ಮೆಚ್ಚಿಸೋಕೆ ಜನಾರ್ದನನ ಕೈಲೂ ಅಸಾಧ್ಯ

೧೩೯೨೪ ದೇವರನಾದ್ರೂ ಮೆಚ್ಚಿಸಬಹುದು, ಜನ ಮೆಚ್ಚಿಸಲು ಸಾಧ್ಯವಿಲ್ಲ

೧೩೯೨೫ [5]ಮನಮೆಚ್ಚಿ ನಡೀಬಹುದು, ಜನ ಮೆಚ್ಚಿ ನಡೆಯಲಾಸಲ್ಲ

---

1 ರಾಜು ಗೋಪುರವನ್ನು ಹದ್ದು ಕೊಂಡುಹೋಯಿತೊ!

2 ಜನ ಮೆಚ್ಚೊ, ಜಾತ್ರೆ ಮೆಚ್ಚೊ !

3 (i) ಊರ ಮುಂದೆ ನೇಗಿಲು ಹೂಡಿದರೆ ಕಂಡ ಕಂಡವರ ಕೈಲಿ ಒಂದು ಮಾತು
(ii) ನೇಗಿಲಿಕ್ಕಿಸಿಕೊಂಡು ಊರ ಮುಂದೆ ಹೋದರೆ ಒಬ್ಬ ಕಡುದು ಅಂದ
ಒಬ್ಬ ಬಳುದು ಅಂದ

4 ಜನ ಮೆಚ್ಚಿಸೋಕೆ ಜನಮೇಜಯ ರಾಯನ ಕೈಲೂ ಆಗಿಲ್ಲ

5 ಮನ ಮೆಚ್ಚಿಸಿದ್ರೂ ಜನ ಮೆಚ್ಚಿಸಲಾರೆ

೧೩೯೨೬ 'ಯಾಕೆ ಅಳುತ್ತೀ ಮಗಳೇ ?' ಅಂದರೆ
'ಲೋಕ ಮೆಚ್ಚಲಿಕೆ' ಅಂದಳು

೧೩೯೨೭ ಷಣ್ಮುಖ ಲೋಕಕ್ಕೆಲ್ಲ ಒಳ್ಳೆಯವನೇ
ಆದರೂ ಮೋಹಿನಿಗೊಬ್ಬಳಿಗೆ ಕೆಟ್ಟವನೇ

ಬಲವಂತದಿಂದ ಫಲವಿಲ್ಲ

೧೩೯೨೮ ಅಳ್ತಾ ಹೋದ ಮುರುವ ದನ (ಆಡು) ಕಾಯ್ತಾನಾ ?

೧೩೯೨೯ ಎತ್ತಿ ಹಾಕಿದ ನಾಯಿ ಮೊಲ ಹಿಡಿದೀತೆ ?

೧೩೯೩೦ ಜುಲುಂಕೆ ರಾಮ್ ರಾಮ್

೧೩೯೩೧ [1]ಒತ್ತಿ ಹಣ್ಣು ಮಾಡಿದರೆ ಎತ್ತಣ ರುಚಿ ?

೧೩೯೩೨ ಕಡ್ಡಾಯದಿಂದ ಕರಿಮಣಿ ಕಟ್ಟಿಸಿದರು

೧೩೯೩೩ [2]ಕುದುರೆಯ ಕೆರೆಗೆ ಹೊಡೀಬಹುದು, ನೀರ್ನ್ಯಾ ಅಟ್ನ್ಯಾ ಕಾದ್ದ

೧೩೯೩೪ [3]ಕೆಡಪಿಕೊಂಡು ಲಿಂಗ ಕಟ್ಟಿದರೆ ಒದರಿಕೊಂಡು ಕಿತ್ತು ಹಾಕಿದ

೧೩೯೩೫ [4]ತನಗೇ ಬೇಡವಾದ ಹೆಣ್ಣು ಅಪ್ಪ ಯಾರಿಗೆ ಕೇಳ್ತಾನೆ ?

೧೩೯೩೬ ಬಲವಂತ ಮಾಘ ಸ್ನಾನ

೧೩೯೩೭ ಬಲಾತ್ಕಾರವಿದ್ದರೂ ಚಮತ್ಕಾರವಿರಬೇಕು

---

1 (i) ಒತ್ತೆಗೆ ಹಾಕಿದ ಕಸುಗಾಯಿ ಹಣ್ಣಾದರೂ ಹುಳಿಯೇ
(ii) ತಟ್ಟಿ (ಗುದ್ದಿ) ಬಡಿದು ಹಣ್ಣು ಮಾಡಿದ ಹಾಗೆ

2 ಕುದುರೆಯನ್ನು ನೀರಿಗಿಳಿಸುವ ಕೆಲಸ ನಮ್ಮದು, ನೀರು ಕುಡಿಯುವ ಕೆಲಸ ನಮ್ಮದಲ್ಲ

3 ಬಲವಂತಕ್ಕೆ ಲಿಂಗ ಕಟ್ಟಿದ ಹಾಗೆ

4 (i) ಎನಗಂತೂ ಮದುವೆ ಬ್ಯಾಡ, ಅಪ್ಪ ಹೆಣ್ಣು ಯಾರಿಗೆ ಕೇಳ್ತಾ ? (ಹವ್ಯಕ)
(ii) ನಾನೇ ಒಲ್ಲದಿದ್ದರೆ ನಮ್ಮಪ್ಪ ಯಾರಿಗೆ ಮದುವೆ ಮಾಡಿಯಾನು ?
(iii) ಮಗನೇ ಹೆಣ್ಣೊಲ್ಲ, ಅಪ್ಪ ಯಾರಿಗೆ ಮಾಡಾನು ?

೧೩೯೩೮ ಬಲುಮೆಗೆ ಅಭಾವವಾದಾಗ ಜುಲುಮೆಯೇ ಗತಿ

೧೩೯೩೯ ಮೊದಲೇ ಕುಣೀಲಾರದವಳಿಗೆ ಗೆಜ್ಜೆ ಕಟ್ಟಿದ ಹಾಗೆ

೧೩೯೪೦ ಹೊಡೆದು ಭಕ್ತಿ ಕಲಿಸಿದರು, ಕೆಡವಿ ಲಿಂಗ ಕಟ್ಟಿದರು

ದುಶ್ಚಾಳಿ

ಜೂಜು

೧೩೯೪೧ ಅವ್ವ ಜೂಜುಗಾತಿ, ಅಪ್ಪ ಜೂಜುಗಾರ, ಅಂಬಲಿಗೆ ಉಪ್ಪಿಲ್ಲ

೧೩೯೪೨ ಆಡಿ ಮಗ ಕೆಟ್ಟ, ಕೂಡಿ ಮಗಳು ಕೆಟ್ಟಳು

೧೩೯೪೩ ಆಡೋರು ಆರು ತಿಂಗಳಿಗೆ ಹಾಳಾದರೆ,
ನೋಡೋರು ಮೂರು ತಿಂಗಳಿಗೆ

೧೩೯೪೪ ಈಜು ಮರೀ ಬೇಡ, ಜೂಜು ಕಲೀಬೇಡ

೧೩೯೪೫ *ಒಂದು ದುಡ್ಡು ಕೊಟ್ಟು ಹಚ್ಚಿ,
ಎರಡು ದುಡ್ಡು ಕೊಟ್ಟು ಬಿಡಿಸಿದರಂತೆ

೧೩೯೪೬ ಗಂಜೀಪು ಆಡುವವರಿಗೆ ಗಂಜಿಯೂ ಸಿಕ್ಕದು

೧೩೯೪೭ ಜುಗಾರಾಡಿ ಜಯಿಸಿದವರಲ್ಲ

೧೩೯೪೮ ಜೂಜುಕೇರಿಯವರೆಲ್ಲರೂ ಹಲಾಲ್‌ಕೋರರೇ ?

೧೩೯೪೯ ಜೂಜಾಡುವವ ಸಂಜೆಗೆ ಸಾವಿರ ತಂದರೂ ಲಯ

೧೩೯೫೦ ಜೂಜಾಡುವವನಿಗೆ ಜಂಗಮದ ಸುದ್ದಿ ಏಕೆ ?

೧೩೯೫೧ ಜೂಜಾಡುವವನಲ್ಲಿ ಸತ್ಯವೆ ?

---

* (i) ಒಂದು ದುಡ್ಡು ಕೊಡ್ತೇನೆ ಹಾಡೋ ದಾಸಯ್ಯ, ಎರಡು ದುಡ್ಡು ಕೊಡ್ತೇನೆ ಬಿಡೊ ದಾಸಯ್ಯ

(ii) ದುಡ್ಡು ಕೊಟ್ಟು ಹಚ್ಚಬೇಕು, ಎರಡು ದುಡ್ಡು ಕೊಟ್ಟು ಬಿಡಿಸಬೇಕು

೧೩೯೫೨ ತಂಬಾಕು ತಿನ್ನುವನ ಊಟ ಮಂದ, ಸೇದುವವನ ಓಟ ಮಂ
ಮೂಗಿಗೇರಿಸುವವನ ನೋಟ ಮಂದ

೧೩೯೫೩ 'ನಿಮ್ಮಪ್ಪ ಸತ್ತು ಹೋದ ?' ಅಂದರೆ
'ಇಕ್ಕಿಗಾನೇ ಹೊತ್ತುಕೊಂಡು ಬರ್ತಾರೆ'
ಅಂದನಂತೆ ಜೂಜಾಡುವವ

೧೩೯೫೪ ಪಗಡೆ ಆಟ ಕೆಡಿಸದೆ ಬಿಟ್ಟೀತೆ ?

೧೩೯೫೫ ಪಗಡೆ ಆಡಿ ಪಾಂಡವರು ಕೆಟ್ಟರು
(ಕವಡೆ ಆಡಿ ಹೆಣ್ಣು ಮಕ್ಕಳು ಕೆಟ್ಟರು),
ಇಸ್ಪೀಟಾಡಿ ಇದ್ದಬದ್ದವರು ಕೆಟ್ಟರು

೧೩೯೫೬ ಪದ ಬರೆಯುವವರಿಗೇನು ಗೊತ್ತು ಪಗಡೆ ಆಟ ?

೧೩೯೫೭ ಪ್ರಾಯದಲ್ಲಿ ಜೂಜುಗಾರನಾದರೆ,
ಮುದಿತನದಲ್ಲಿ ಭಿಕ್ಷುಗಾರನಾಗಬೇಕಾದೀತು

೧೩೯೫೮ ಲೆತ್ತ (ದಾಳ) ಬಿದ್ದರೆ ಪಟ್ಟ ಗೆದ್ದ

೧೩೯೫೯ ಲೆತ್ತ ಹಾಕಲಿಕ್ಕೆ ಹೋದರೆ ಬೋಕಿ ಬಿತ್ತು

೧೩೯೬೦ ಹಣ ಸೋತರೂ ಮನ ಸೋಲೋದಿಲ್ಲ

೧೩೯೬೧ ಹಾಕಿದ ಪಂಚಕ್ಕೂ ಆಡಿದ ಜೂಗಾರಿಗೂ ಅಂತರವಿಲ್ಲ

ಮದ್ಯಪಾನ

೧೩೯೬೨ ಅಪ್ಪ ಆರು ಬಾರುಡೆ, ಮಗ ಮೂರು ಬಾರುಡೆ

೧೩೯೬೩ ಉಂಡ ರುಚಿ ಕಂಡವನೂ, ಹೆಂಡದ ರುಚಿ ಕಂಡವನೂ ಬಿಡ

೧೩೯೬೪ ಎತ್ತು ಹೋದರೆ ಹೋಗಲಿ, ಕಳ್ಳು ಕುಡಿಯುವ ಚಾನ್ಸು !

೧೩೯೬೫ ಬಂದಕ್ಕೆ ಎರಡು ದಂಡ, ಹೆಂಡಕ್ಕೆ ರಾಗಿ ದಂಡ

೧೩೯೬೬ ಕಳ್ಳಿನ ವಾಸನೆ ನಾಲಗೆಗೆ ಹೇಗೆ ತಿಳಿದೀತು ?

೧೩೯೬೭ ಕುಡಿದವನು ಬಲ್ಲನೆ ಒಸುಮಾತ?

೧೩೯೬೮ ಕುಡುಕನ ದೊರೆತನ ಪಡಕಾಸೀಲಿ

೧೩೯೬೯ ಕುಡುಕನ ಬಾಳು ಒಕ್ಕಿದರೂ ಹಾಳು

೧೩೯೭೦ ಚಾಡಿನಂಗಡೀಲಿ ಬಡಿದಾಡ್ತಾರೆ,
ಹೆಂಡದಂಗಡಿಯಲ್ಲಿ ಹೊಡೆದಾಡ್ತಾರೆ

೧೩೯೭೧ ಮತ್ತು ಹತ್ತಿದವ ಸತ್ತವನಿಗಿಂತ ಕಡೆ

೧೩೯೭೨ ಮಂಡೆಗೆ ಏರಿದ ಹೆಂಡ ಕುಂಡೆ ಒಡಕೊಂಡರೆ ಇಳಿದೀತೆ ?

೧೩೯೭೩ ಸುರೆ ಕುಡಿಯುವವನಿಗೆ ಮರೆ (ಏಕೆ ?) ಅಂಜೋದೇನು ?

೧೩೯೭೪ ಹೊಟ್ಟೆಗೆ ಇಲ್ಲದೆ ಹೆಂಡ ಕುಡಿದು ನಾಚಿಕೆ ಇಲ್ಲದೆ ತೂರಾಡ್ತಿದ್ದಂತೆ

೧೩೯೭೫ ಹೆಂಡ ಕುಡಿದಾಗ ಒಂದು (ಮಾತು) ಜ್ಞಾನ,
ಬುಂದೆ ಇಳಿದಾಗ ಒಂದು (ಮಾತು) ಜ್ಞಾನ

೧೩೯೭೬ ಹೆಂಡ ಕುಡಿದು ಬುಂಡೆ ಉರುಳಿಸಿದ ಹಾಗೆ

೧೩೯೭೭ ಹೆಂಡ ಕುಡಿಯುವವನು. ತುಂಡ ತಿನ್ನುವವನು

೧೩೯೭೮ ಹೆಂಡ ಕುಡಿಯೋನ ಹೆಡ್ಡಾಟ ನೋಡು

೧೩೯೭೯ ಹೆಂಡ ಕುಡಿಯೋನಿಗೆ ಹೆಂಡ್ತೀಕೆ, ಮಕ್ಕಳೇಕೆ ?
ಭಂಗಿ ಸೇದೋನ್ಗೆ ಭಂಗೇಕೆ ?

ಧೂಮಪಾನ-ನಶ್ಯ

೧೩೯೮೦ ಅಂಗಿ (ಮಾರಿ) ಕೊಟ್ಟು ಭಂಗಿ ಸೇದಿ ಮಂಗನಾದ

೧೩೯೮೧ ಅಂಗಿ ಹುಡುಗರಿಗೆ, ಭಂಗಿ ಕುಡುಕರಿಗೆ

೧೩೯೮೨ ಕಾಸು ಕೊಟ್ಟು ಹೊಗೆ ಬಿಟ್ಟ

೧೩೯೮೩ ಕೋಣನೂರ್‍ನ ಬೊಮ್ಮಣ್ಣನ ಹೆಂಡತಿ
ಹೊಗೆಸೊಪ್ಪಿನ ತೆವಲುಗಾತಿ

೧೩೯೮೪ *ಗುಡಿಗುಡಿ ಗುಂಡಿಗೆಗೆ (ಕೆಡುಕು) ಮೂಲ,
ನಶ್ಯದ ಪುಡಿ (ನೆತ್ತಿಗೆ) ನಯನಕ್ಕೆ ಮೂಲ,
ಅಡಕೆ ಅಂಗುಳಿಗೆ ಮೂಲ, ತಾಂಬೂಲ ಪರಮ ಸುಖ

೧೩೯೮೫ ತಂಬಾಕು ಸೇದೋಣ, ಹೊಗೆ ಕುಡಿಯೋಣ

೧೩೯೮೬ ದುಡ್ಡು ಕೊಟ್ಟು, ಭಂಗಿ ಸುಟ್ಟು

೧೩೯೮೭ ನಸಿ ಧ್ರುಮೆಯಿದ್ದವ ಮಸಿಯಾದರೂ ಹಾಕಿಕೊಂಡಾನು

೧೩೯೮೮ ಬಡವನ ಬಾಯ್ಗೆ ಭಂಗಿ ತುರುಕಿದಂಗೆ

೧೩೯೮೯ ಭಂಗಿ ಕುಡಿಯುವವನ ಭಂಗ (ನೋಡು) ಹೇಳತೀರದು

೧೩೯೯೦ ಭಂಗಿ ಕುಡಿಯುವವನಿಗೆ ಇದ್ದ ಅಂಗಿಯೂ ಉಳಿಯದು

೧೩೯೯೧ ಭಂಗಿ ಮುಕ್ಕುವವನಿಗೆ ಹಂಗು ಯಾರದು ?

೧೩೯೯೨ ಭಂಗಿ ಸುಟ್ಟರೂ ಹಂಗು ಹೋಗಲಿಲ್ಲ

೧೩೯೯೩ ಭಂಗಿ ಸೇದೋಪ್ನಿಗೆ ಅಂಗಿ ಬೇಡ,
ನಸೆ ಎಳೆಯೋಳಿಗೆ ಮೂಗುತಿ ಬೇಡ

೧೩೯೯೪ ಭಂಗಿ ಸೇದೋವ್ರ ಭಂಗ ನೋಡು,
ಹೆಂಡ ಕುಡಿಯೋರ ಬುಂಡೆ ನೋಡು

ಕಳವು

೧೩೯೯೫ ಅರಳೆ ಅಂಡಿಗೇನ ಕದ್ದೊಯ್ದರು

೧೩೯೯೬ ಇದ್ದವನೊಬ್ಬ ಮರಿ, ಗದ್ದುಗೆ ಮನೇಲಿ ಕದ್ದವರಾರು?

* ಗುಡಿಗುಡಿ ಸೇದೋವ್ನ ಗುಂಡಿಗೆ ಹಾಳು, ನಶ್ಯ ಏರಿಸೋನ ನೆತ್ತಿ ಹಾಳು

೧೩೯೯೭ ಕದ್ದ ಕೈ ಕದ್ದಲ್ಲದೆ ಬಿಡದು, ಕೊಳ್ಳಿ ಬೀಗಿತ್ತಿ ನಿನ್ ಮುಸಿ
ಅರಿವೆಯಾ !

೧೩೯೯೮ ಕದ್ದರೆ ಕದಿಯಬೇಕು ಬಿಂದಿಗೆ ಹೊನ್ನು,
ಬಿದ್ದರೆ ಬೀಳಬೇಕು ಗಟ್ಟಿಯುಳ್ಳವನ ಬೆನ್ನು

೧೩೯೯೯ *ಕದ್ದು ತಿನ್ನುವ ಕಾಮಧೇನು ಇರಲಿಕ್ಕೆ,
ಬೇಡಿ ತಿನ್ನುವ ಭಂಡ ಜನ್ಮ ಯಾಕೆ ?

೧೪೦೦೦ ಕದ್ದು ನಡೆದರೂ ಗದ್ದಲ ತಪ್ಪಲಿಲ್ಲ

೧೪೦೦೧ ಕನ್ಯೆಯನ್ನು ಕದ್ದೊಯ್ಯದೆ ಕೂಸನ್ನು ಕದ್ದೊಯ್ಯುತ್ತಾರೆಯೆ ?

೧೪೦೦೨ ಕರು ಬಿಟ್ಟು ತುರು ಕದ್ದಂಗೆ

೧೪೦೦೩ ಕರ್ಪೂರ ಯಾರು ಕದ್ದರೂ ದೇವರಿಗೆ ಅರ್ಪಿತ

೧೪೦೦೪ ಕೆಳಕ್ಕೆ ಹೋಗಿ ಕೆಮ್ಮಿದನಂತೆ

೧೪೦೦೫ ಕಳಲ್ಹೋಪಂವ ಡೋಳ್ ಕಟ್ಗ್ಯಂಡ್ಹೋಗಿದ್ನಡ (ಹವ್ಯಕ)

೧೪೦೦೬ ಕಳವು ಕಲಿತು ಮರೆ

೧೪೦೦೭ ಕಾಲಿಗೆ ಬಿದ್ದು ಕಾಲುಂಗುರ ಬಿಚ್ಚಿಕೊಂಡರಂತೆ

೧೪೦೦೮ ಕುಂಬಳಗೌಡನ ಮನೆ ಅಂಡಂಡೆ ಪೋಯಿ,
ಕುಂಡ್ಕುಂಡೆ ಪೋಯ

೧೪೦೦೯ ಚಂದದಿಂದ ಸಾಕಿದ್ನಲ್ಲೋ ಕೆಂದಕೋಳಿಯ !
ಅವರ ಮಕ್ಕಳತಿನ್ನ ಮುರ್ಕಂಡೆರಲ್ಲೋ ಮೊಟ್ಟೆಕೋಳಿಯಾ ?

೧೪೦೧೦ ತುಂಬ್ಯಾಗದ ಕಳವು ಮುಬ್ಬಾದ ಮೇಲೆ ಸಿಕ್ಕೀತೆ ?

೧೪೦೧೧ ದಂಡಿನಾಗೆ ಕೆಟ್ಟದ್ದು ಹಾದರವಲ್ಲ, ಬರದಾಗಿ ಕದ್ದದ್ದು ಕಳವಲ್ಲ

೧೪೦೧೨ ದಾರಿಯಲ್ಲಿ ಹೋಗುವವನನ್ನು ಹರಿದುಕೊಂಡಷ್ಟೇ ಬಂತು

* ಕಾಮಧೇನು ಅಂತ ಕಳ್ಳತನ ಇರೂವಾಗ ಕಂಡ್ಹಾಗೆ ಒಬ್ಬರ ಒಡವೆ ಯಾಕೆ ?

೧೪೦೧೩ ಬಡತನವೇ ಕಳ್ಳತನಕ್ಕೆ ಮೂಲ, ಹೇಡಿತನವೇ ಸುಳ್ಳಿನ ಬೇರು

೧೪೦೧೪ ಹೆಂಗಸಿಗೆ ಹಾದರ ಹೀನ, ಗಂಡಸಿಗೆ ಕಳವು ಹೀನ

೧೪೦೧೫ ಹೊಡೆದರೆ ಆನೆ ಹೊಡೀಬೇಕು, ದೋಚಿದರೆ ಭಂಡಾರ ದೋಚಬೇಕು

ಒಳಗಳ್ಳರು

೧೪೦೧೬ ಊರಿನಲ್ಲೆಲ್ಲ ಮೂರು ಸೇರಾದ್ರೆ, ಗಂಡನ ಕಾಣದ ಹಾಗೆ ಬಾ ಕೊಳಗ ಕೊಟ್ಟೇನು

೧೪೦೧೭ ಒಳಗಳ್ಳನನ್ನು ಹಿಡಿಯುವುದು ಕಷ್ಟ,
ಒಡೆದ ಕೆರೆ ಕಟ್ಟುವುದು ಕಷ್ಟ

೧೪೦೧೮ ತ್ಯಾಜಗಾರನ ಹೆಂಡತಿ ಜೆರಗೆ ಕಳ್ಳಿ

೧೪೦೧೯ ಮನೆ ಮಾಲು ಕದ್ದು ಸೂಳೆಗೆ ಸಿಕ್ಕಿಸಿದಂಗೆ

೧೪೦೨೦ ಹೊರಗಿನ ಕಳ್ಳರನ್ನು ಹಿಡೀಬಹುದು,
ಒಳಗಳ್ಳನನ್ನು ಹಿಡಿಯುವುದು (ಕಷ್ಟ) ಸಲ್ಲ

ಕಳ್ಳ

೧೪೦೨೧ ಅಡಕೆ ಕದ್ದರೂ ಕಳ್ಳ, ಆನೆ ಕದ್ದರೂ ಕಳ್ಳ

೧೪೦೨೨ ಅಡಕೆ ಕದ್ದರೆ ಮುಚ್ಚಿಟ್ಕೊಬಹುದು,
ಆನೆ ಕದ್ದರೆ ಮುಚ್ಚಿಕೊಳ್ಳಲಾದೀತೆ ?

೧೪೦೨೩ ಅಡಕೆ ಕದ್ದವ ಆನೆ ಕದ್ದಾನು

೧೪೦೨೪ ಅರಳಿ ಕಳ್ಳ ! ಅಂದರೆ ಗಡ್ಡ ಹಿಡಿದು ನೋಡಿದಾ

೧೪೦೨೫ ಆವನು ಅಂತಿಂತೋನಲ್ಲ, ಸಂತೆಯಲ್ಲಿ ಮೂರು ಮೆಂತ್ಯ ಕದ್ದೋನು

೧೪೦೨೬ ಅಲ್ಲೂ ಹೋಗಿ ವಲ್ಲಿ ಕದ್ದರೆ ವಲ್ಲ್ಯಾಗ ಮೂರು ಮಳ ಕಮ್ಮಿ ಬಂತಂತೆ

೧೪೦೨೭ ಅಂತ್ಯಜನಲ್ಲಿ ಹೋಗಿ ಮೆಂತ್ಯ ಕದ್ದಹಾಗೆ

೧೪೦೨೮ ಆಕಳ್ಳಗೊಬ್ಬ ಮೂಕಳ್ಳ ಗಂಟು ಬಿದ್ದ

೧೪೦೨೯ ಆ ಕಳ್ಳರ ಮನೆಗೆ ಮಾಕಳ್ಳರು ಹೋದರೆ ಬಾರುಕೋಲು ತಕೊಂಡು ಬೆನ್ನುಹತ್ತಿದ್ರಂತೆ

೧೪೦೩೦ ಈ ಹಳ್ಳ ಆ ಕಳ್ಳನಿಗೆ ಈಡೇ ?

೧೪೦೩೧ ಉಂಡೆ ಕದ್ದವನು ಒಡವೆಗೆ ಕೈಚಾಚನೆ ?

೧೪೦೩೨ ಎತ್ತು ಕದ್ದ ಕಳ್ಳ ಹಗ್ಗ ಮರೆತಾನೆ ?

೧೪೦೩೩ *ಒಳವು (ನೆಲೆ) ಬಲ್ಲ ಕಳ್ಳ ಜೀವದೊರಸೆ ಬಿಡ

೧೪೦೩೪ ಕದ್ದ ಕಳ್ಳನ ಮಾತು ಬದ್ಧವೇ ?

೧೪೦೩೫ ಕದಿಯೋಕೆ ಬಂದವ ಮಡಿಧೋತ್ರ ಬಿಟ್ಟಾನೆ ?

೧೪೦೩೬ ಕಳ್ಳ ಬಂದರೆ ಕೊಳ್ಳಿಯಾದರೂ ಉಳಿಯದು

೧೪೦೩೭ ಕಳ್ಳಿ ಮುತ್ತಿಟ್ಟರೆ ಹಲ್ಲೆಷ್ಟಿವೆ ಎಣಿಸಿಕೊ

೧೪೦೩೮ ಕಳ್ಳ ಸುಳ್ಳಿಗೆ ನಂಟ

೧೪೦೩೯ ಕಳ್ಳ ಹೊಕ್ಕ ಮನೆಗೆ ಎಣ್ಣೆ ಒಂದು ದಂಡ

೧೪೦೪೦ ಕಳ್ಳನ ಕೆಲಸಕ್ಕಿಂತ ಮಾತು ನಯ

೧೪೦೪೧ ಕಳ್ಳನ ಕೈ ಕತ್ತಲೆಯಲ್ಲಿ ಸುಮ್ಮನಿರದು

೧೪೦೪೨ ಕಳ್ಳನ ಕೈಗೆ ಜೀಂಗ (ಒಡವೆ) ಕೊಟ್ಟಹಾಗೆ

---

* (i) ಗುರುತು ಕಂಡ ಕಳ್ಳ ಜೀವಸಹಿತ ಬಿಡ

(ii) ತಿಳಿದ ಕಳ್ಳ ತಿರುಗಿದರೂ ಬಿಡ

೧೪೦೪೩ ಕಳ್ಳನ ದೇವರಾಣೆ, ಹಾದರಗಿತ್ತಿ ಕಣ್ಣೀರು ಎರಡನ್ನೂ ನಂಬಬೇಡ

೧೪೦೪೪ ಕಳ್ಳನ ಹೆಂಡತೀನ (ತಂಗಿಯು, ತಾಯ್ನ) ಕಣಿ ಕೇಳಿ (ದಾರಿ ಯಾವುದು ಅಂತ)ದರೆ 'ಹಳ್ಳಗುಂಟೆ ಹೋಗು' ಅಂದಳು

೧೪೦೪೫ ಕಳ್ಳನಿಗೆ ಅಳ್ಳೆದೆ

೧೪೦೪೬ [1]ಕಳ್ಳನಿಗೆ ಅಳ್ಳೆಯಲ್ಲಿ ಶಂಕೆ

೧೪೦೪೭ [2]ಕಳ್ಳನಿಗೆ ಎಲ್ಲರ ಮೇಲೂ ಅನುಮಾನವೇ

೧೪೦೪೮ ಕಳ್ಳನಿಗೆ ಕಳ್ಳ ಕೂಡಿ ಇರುಳೆಲ್ಲ ಕದ್ದ ಹಾಗೆ

೧೪೦೪೯ [3]ಕಳ್ಳನಿಗೆ ಕಡು(ಬಾಯಿ)ನಾಲಗೆ ಹಾದರಗಿತ್ತಿಗೆ (ಹಲವು) ಹರಿನಾಲಗೆ

೧೪೦೫೦ ಕಳ್ಳನಿಗೆ ಚೇಳು ಕುಟುಕಿದ ಹಾಗೆ (ಬಡಿದ ಹಾಗೆ)

೧೪೦೫೧ ಕಳ್ಳನಿಗ 'ಕಳ್ಳ' ಅಂದರೆ ಕೊಳ್ಳಿ(ಯಂತಾಗುವನು) ಇಟ್ಟ ಹಾಗೆ

೧೪೦೫೨ ಕಳ್ಳನಿಗೆ ಸಂದುಕೊಟ್ಟು (ಒಳಕ್ಕೆ ಕರೆದು) ಒಡವೆಗೆ ಹುಯ್ಲಿಕ್ಕಿದ

೧೪೦೫೩ ಕಳ್ಳತನಕ್ಕೆ ಕಲ್ಲೂ ಸಹಾಯವಾಗುತ್ತೆ

೧೪೦೫೪ ಕಳ್ಳಂಗೆ ಹಾದಿ, ಒಡೆಯಂಗೆ ಹೊಯ್ಲು

೧೪೦೫೫ ಕಳ್ಳಂಗೆ ಬಾಯಿ ದೊಡ್ಡ, ಹೊಳ್ಳೆಗೆ ವಯ್ಯಾಣ (ಸ್ವಾರೆ) ಹೆಚ್ಚು

೧೪೦೫೬ ಕಳ್ಳಂಗೆ ಮುಳ್ಳುಬೇಲಿಯೇ ?

---

1 ಕಳ್ಳನ ಮನಸ್ಸು ಹುಳ್ಳುಹುಳ್ಳಗೆ

2 ತೆ. ದೊಂಗಕು ಅಂದರ ಮೀದ ಅನುಮಾನಮೇ

ತೆ: ದೊಂಗನ್ನು ತೇಲು ಕುಟ್ಟಿನಟ್ಲು

ತ. ತಿರುಡನೈತ್ತೇಳ್ ಕೊಟ್ಟಿನಾಪ್ಪೋಲೆ

3 ಕಳ್ಳಿಗೆ ಕಡುನಾಲಗೆ, ಬೊಡ್ಡಿಗೆ ಒಡ್ಡಾಚಾರ

೧೪೦೫೭ ಕಳ್ಳನ್ಗೆಗಳ್ಬಾಯಿ

೧೪೦೫೮ ಕಳ್ಳರಿಗೆ ಹೊಳುವಿಲ್ಲ, ಸುಳ್ಳರಿಗೆ ತಳವಿಲ್ಲ

೧೪೦೫೯ ಕಳ್ಳರಿಬ್ಬರು ಸೇರಿದರೆ ಕೊಳ್ಳಿ

೧೪೦೬೦ ಕಳ್ಳಿ ಅದರತಾಳ, ತುಡುಗಿ ಬೆದರತಾಳ

೧೪೦೬೧ ಕಳ್ಳುವಾಸನೆ ಕಳ್ಳನಿಗೆ

೧೪೦೬೨ ಕಂಡ(ಕದ್ದ)ಮನೆಗೆ ಕಳ್ಳ ಬಂದ, ಉಂಡ ಮನೆಗೆ ನಂಟ ಬಂದ

೧೪೦೬೩ ಕಂಡರೆ ಕಳ್ಳ, ಕಾಣದಿದ್ದರೆ ಸು(ಸೊ)ಬಗ

೧೪೦೬೪ ಕಾಟಸಾಯ್ಕನ ಮನೆಗೆ ಕಳ್ಳ ನುಗ್ಗಿದರೆ ನೇತಾಡೋದು ಎರಡು ಬೂದಿ ಚೀಲ

೧೪೦೬೫ ಕಾಡಿಗೆ ಹೋದರೆ ಕಳ್ಳ, ಊರಿಗೆ ಬಂದರೆ ಒಡೆಯ

೧೪೦೬೬ ಕಿಟಿಕಿಯಲ್ಲಿ ಕಳ್ಳನ ಕಂಡರೆ ಮನೆಯವ ಗವಾಕ್ಷದಲ್ಲಿ ಅವಿತುಕೊಂಡ

೧೪೦೬೭ *ಕುಸುಮಿಯ ಪೊಲದಲ್ಲಿ ಕಳ್ಳ ಹೊಕ್ಕಹಾಗೆ

೧೪೦೬೮ ಕೈಲಿಲ್ಲದಿದ್ದರೆ ಕಳ್ಳ, ಹೊಟ್ಟೆಗಿಲ್ಲದಿದ್ದರೆ ಬಡವ

೧೪೦೬೯ 'ಕೋ' ಎಂದ ಒಡವೆ ಕಳ್ಳ ಒಲ್ಲ

೧೪೦೭೦ ಕೋಳ್ಮುರುಕಿ ಮನೆ ದೀಪ ಉರಿದ ಹಾಗೆ

೧೪೦೭೧ ಚಂದ್ರನ ಬೆಳಕು, ಕಳ್ಳನಿಗೆ ಅಳುಕು

೧೪೦೭೨ ತಾ ಕಳ್ಳ ಪರರನ್ನು ನಂಬ ; ಮಾ ಕಳ್ಳ ಮನೆ (ಬೆಚ್ಚ) ನಂಬ

---

* (i) ಹುರುಳಿ ಹೊಲದಲ್ಲಿ ಅವಿತುಕೊಂಡ ಹಾಗೆ

(ii) ತೆರೆದ ಬಾಗಿಲಿಂದ ಕಳ್ಳ ಹೊಕ್ಕ ಹಾಗೆ

(iii) ತೆರೆದ ಮನೆಗೆ ನಾಯಿ ಹೊಕ್ಕ ಹಾಗೆ

೧೪೦೭೩ ತಿಪ್ಪಯ್ಯನಿಗೆ ಸೂಜಿ ಮೇಲು. ಕಳ್ಳನಿಗೆ ಬಾಯಿ ಮೇಲು

೧೪೦೭೪ ತೀರ್ಥ ಪ್ರೋಕ್ಷಿಸಿದರೆ ಕಳ್ಳ ಮಡಿ ಹೇಗೆ ಮುಟ್ಟಿಯಾನು ?

೧೪೦೭೫ ತುತ್ತು ಕದ್ದವ ಎತ್ತ (ಕದ್ದಾನು) ಕದಿಯದೆ ಬಿಟ್ಟಾನೆ

೧೪೦೭೬ ತೆರೆದ ಕಿಟಕಿಯಿಂದ ಬೆಕ್ಕು ಹೊಕ್ಕಿತು,
ತೆರೆದ ಬಾಗಿಲಿಂದ ಕಳ್ಳ ಹೊಕ್ಕ

೧೪೦೭೭ 'ತೆಂಗಿನ ಮರ ಯಾಕೆ ಹತ್ತುತೀ ?' ಅಂದರೆ
'ಬೆಕ್ಕಿಗೆ ಹುಲ್ಲು ತರೋಕೆ' ಅಂದ

೧೪೦೭೮ ನಸೆ ಕೊಟ್ಟವ ಹಸೆಮಣೆ ಕದ್ದುಕೊಂಡು ಹೋದ

೧೪೦೭೯ ನಾಯಿಗೆ ನಡೆ ಸನ್ನೆ, ಹೋರಿಗೆ ಹಿಂಡಿ ಸನ್ನೆ,
ಕಳ್ಳನಿಗೆ ಹಲವಾರು ಸನ್ನೆ

೧೪೦೮೦ ನೀರಿನಲ್ಲುಳಿದರೆ ಮೀನು, ಹೊರಗುಳಿದರೆ ಕಳ್ಳ

೧೪೦೮೧ ಪಕ್ಕನೆ ಬಂದು ಗಕ್ಕನೆ ಹಾರಿಸಿಕೊಂಡು ಹೋದ

೧೪೦೮೨ ಪೆಟ್ಟಿಗೆ ಕದ್ದ ಕಳ್ಳ ಬೀಗದ ಕೈ ಬಿಟ್ಟಾನೆ ?

೧೪೦೮೩ ಬಾಗಿಲು ಮುರಿದು ಹೋಗುವವನಿಗೆ ಬೀಗದ ಕೈ ಯಾಕೆ ?

೧೪೦೮೪ ಬೀರಪ್ಪನ ಗೊರಕೆ ನೋಡಿ ತೋಳಪ್ಪ ಕುರಿ ಹೊತ್ನಂತೆ

೧೪೦೮೫ ಬೆಳ್ಳಿಯಾದರೆ ಕಳ್ಳನಿಗಾಗದೆ ?

೧೪೦೮೬ ಬೆಳ್ಸಿದ ಕಳ್ಳ ಬಂದ ಅಂತ 'ಕೋ' ಅನ್ನೋಕಾದೀತೆ ?

೧೪೦೮೭ 'ಮರಕ್ಹತ್ತಿ ಎಳನೀರ್ಯಾಕೆ ಕೆಡವೆ' ಅಂದ್ರೆ 'ಒಂದೇ ಮರದಲ್ಲಿ
ಎರಡು ಕೆಡವೆ, ಮರಕ್ಹತ್ತಿ ಕೆಡೀನಿಲ್ಲ' ಅಂದ್ನಂತೆ

೧೪೦೮೮ ಯಾರು ಕದ್ದರೂ ಸೂರ್ಗೊಳ್ಳಿ ಅಂತು ಕದ್ದ

೧೪೦೮೯ ಶಕುನ ಚೆನ್ನಾಗಿದೆ ಅಂತ ಇರುಳೆಲ್ಲ ಕದ್ದನಂತೆ

೧೪೦೯೦ ಸಗಣಿ ಕದ್ದು ಕೈ ನೋಯಿಸಿಕೊಂಡರಂತೆ

೧೪೦೯೧ ಸಂತೆ ನೆರೆಯೋಕ್ಮುಂಚೆ ಗಂಟುಕಳ್ಳರು (ಗಂಟುಹೊಡೆಯುವರು) ನೆರೆದರು

೧೪೦೯೨ [1]ಜಾತ್ರೆಗ್ಮುಂಚೆ ಕಳ್ಳರು ನೆರೆದರು

೧೪೦೯೩ ಸಂತೆಗಳ್ಳನಾದರೆ ಪಟ್ಟೆ ಪಸಾರೆಯಾವಲ್ಲಿ ?

೧೪೦೯೪ ಸಂತೆಯಲ್ಲಿ ಏನಗ್ಗ ಅಂದರೆ ಕದ್ದವನಿಗೆ ಗುದ್ದು ಅಗ್ಗ

೧೪೦೯೫ ಸಂತೆಯಲ್ಲಿ ಮಂತ್ರ ಕದ್ದವರ್ಯಾರು ? ಅಂದಹಾಗೆ

೧೪೦೯೬ ಹಣ ಕಳ್ಳತನ ಕಲಿಸುತ್ತೆ

೧೪೦೯೭ ಹೇಳುವನಿಗೆ ಭಗೀರಥಿಯೋ, ಕಳುವನಿಗೆ ಅರಮನೆಯೋ ?

೧೪೦೯೮ ಹೊಕ್ಕ ಕೂಡಲೆ ಕಳ್ಳ ಹುಂಗೆಜ್ಜೆ ಕದ್ದನಂತೆ

೧೪೦೯೯ ಹೊಳ್ಳೆಯ ಸೊಳ್ಳೆ ಒಳ್ಳೆಯದು, ಕಳ್ಳಿಯ ಕೆಲಸ ಒಳ್ಳೆಯದು

ಕಳ್ಳ-ತಳವಾರ-ಸೆರೆಮನೆ

೧೪೧೦೦ [2]ಇರುಳು ಎದ್ದ ಕಳ್ಳಗೆ ಹೆಬ್ಬಾಗಿಲಲ್ಲೇ ಬೆಳಗಾಯಿತು

೧೪೧೦೧ ಈರುಳ್ಳಿಯವ್ನ ಒಡೆದ್ರೆ ಬೆಳ್ಳುಳ್ಳಿಯವ ಸಿಕ್ಕಾನೆ

೧೪೧೦೨ ಎಳ್ಳಿನ ಗುಣ ಗಾಣಿಗ ಬಲ್ಲ, ಕಳ್ಳನ ಗುಣ ತಳವಾರ ಬಲ್ಲ

೧೪೧೦೩ ಕತ್ತೆಗೆ ತಿಪ್ಪೆ ತವರುಮನೆ, ಕಳ್ಳಗೆ ಸೆರೆ ಅತ್ತೆಮನೆ

೧೪೧೦೪ ಕದ್ದು ಹೋದರೆ ಗುಪ್ಪಿನಲ್ಲಿ ಕೂಡಿಸಿದರಂತೆ

೧೪೧೦೫ ಕಳ್ಳನೂ ಹಾವರವೂ ಮೂರುದಿನಂತೆ

೧೪೧೦೬ 'ಕಳ್ಳ ಕಳ್ಳ ನಿನ್ನ ಜೋಕೆ !' ಅಂದ್ರೆ, 'ಸೆಟ್ರೆ ಸೆಟ್ರೆ ! ನಿಮ್ಮ ಸಾಮಾನು ಜೋಕೆ ! ಅಂದನಂತೆ

---

1 (i) ಸಂತೆಯಲ್ಲಿ ಕಳ್ಳರು ನೆರೆದ ಹಾಗೆ
(ii) ಸಂತೆ ನೆರೆಯುಕ್ಕೆ ಮುಂಚೆ ಗಂಟುಕಳ್ಳರು ನೆರೆದರು

2 ನಡುಇರುಳಲ್ಲಿ ಹೊರಟವರಿಗೆ ಹೆಬ್ಬಾಗಿಲಲ್ಲೇ ಬೆಳಗಾಯಿತು

೧೪೧೦೭ ಕಳ್ಳತನ ಮಾಡೋವ್ನೂ ಹಾದರ ಮಾಡೋವ್ನೂ ಯಾವಾಗಲಾದರೂ ಸಿಕ್ಕಿಬೀಳ್ತಾನೆ

೧೪೧೦೮ ಕಳ್ಳನನ್ನು ಕಳ್ಳ ಬಲ್ಲ

೧೪೧೦೯ ಕಳ್ಳನ ಸುಳಿವು ಕಳ್ಳ ಬಲ್ಲ

೧೪೧೧೦ ಕಳನ ಹಿಡಿಯೋಕೆ ಕಳ್ಳನೇ ಸರಿ

೧೪೧೧೧ *ಕಳ್ಳನ ಹೆಜ್ಜೆ ಕಳ್ಳ ಬಲ್ಲ, ಹಾವಿನ ಹೆಜ್ಜೆ ಹಾವು ಬಲ್ಲುದು

೧೪೧೧೨ ಕಳ್ಳನಿಗೆ ನಾಲ್ಕು ಕಣ್ಣು, ತಳವಾರ (ಕೊತ್ವಾಲ)ನಿಗೆ ಎರಡೇ ಕಣ್ಣು

೧೪೧೧೩ ಕಳ್ಳೋನೂ ಹೆಚ್ಚೋ, ಕಾಯೋನು ಹೆಚ್ಚೋ ?

೧೪೧೧೪ ಕಾಯುವವರ ಜಾಗ್ರತೆಯೊ, ಕದಿಯುವವರ ಜಾಗ್ರತೆಯೊ ?

೧೪೧೧೫ ಕೇಡಿಯನ್ನೂ ಹೆತ್ತಳು, ಜೈಲಿಗೆ ಕೂಳೂ ಹೊತ್ತಳು

೧೪೧೧೬ ತಬ್ಬಲಿ ತಬಕು ಕದ್ದು ಜಗಲೀಲಿ ಸಿಕ್ಕಿಬಿದ್ದ

೧೪೧೧೭ ಬಿಡುಗಡೆಯಾದರೂ ನಡುರಾತ್ರಿ ಸಂಚಾರ ತಪ್ಪಲಿಲ್ಲ

೧೪೧೧೮ ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದರೆ ಯಾರಿಗೂ ಕಾಣೋಲ್ವೆ ?

೧೪೧೧೯ ಬೇಡಿಯಲ್ಲಿದ್ದವಗೆ ನಾಡಿನ ಯೋಚನೆ ಯಾಕೆ ?

೧೪೧೨೦ ಸೆರೆ ಬಿದ್ದ ಮೇಲೆ ಮರೆ ಏನು

೧೪೧೨೧ ಸೆರೆಮನೆಯಲ್ಲಿ ಅರಮನೆಯೆ ?

---

* ತೆ. ದೊಂಗನು ದೊಂಗಯೇ ಯೆರುಗುನು
ತ. ಕಳ್ಳನುಕ್ಕು ತೆರಿಯುಂ ತಿರುಟ್ಟುಬ್ಬುದ್ಧಿ
ಮ. ಕಳ್ಳನೇ ಅಟಿಯೂ ಕಳ್ಳಂಡೆ ವಟಿ

೧೪೧೨೨ ಓಂದಿರೋನು ಕದ್ದರೆ ಮುಂದೆ ಹೋಗೋವ್ನ ಹಿಟ್ಟಿಸಿಕೊಂಡು ಹೋದ ಹಂಗೆ

೧೪೧೨೩ ಹುತ್ತದ ಡೊಂಕು ಹಾವು ಬಲ್ಲುದು, ಹಾವಿನ ಡೊಂಕು ಹುತ್ತ ಬಲ್ಲದು

೧೪೧೨೪ ಹೇಸಿಕೆ ಕದ್ದು ಕೋಳಕ್ಕೆ ಹಾಕಿಸ್ಕೊಂಡ ಹಾಗೆ

ಕಳ್ಳನ ಬಾಳು

೧೪೧೨೫ ಕದ್ದ ಒಡವೆ ಮಧ್ಯಾಹ್ನಕ್ಕಿಲ್ಲ, ಓರೀ ಮಗನ ಓಂಡೇ ಕೂಳಿಗಿಲ್ಲ

೧೪೧೨೬ ಕದ್ದು ತಿನ್ನೋಕಿಂತ ಬೇಡಿ ತಿನ್ನುವುದು ಲೇಸು

೧೪೧೨೭ *ಬೇಡಿ ತಿಂದರೂ ಕದ್ದು ತಿನ್ನಬಾರದು

೧೪೧೨೮ ಕಳ್ಳ ಒಕ್ಕಲಲ್ಲ, ಕಳ್ಳಿ ಕಟ್ಟಿಗೆಯಲ್ಲ

೧೪೧೨೯ ಕಳ್ಳನ ಬದುಕು ಕ(ಚೆ)ಲ್ಲಾಪಿಲ್ಲಿ

೧೪೧೩೦ *ಕಳ್ಳ (ಸವಲ)ನ ಹೆಂಡತಿ ಎಂದಿದ್ದರೂ ಮುಂಡೆ

೧೪೧೩೧ ಕಳ್ಳನ ಹೆಂಡತಿಗೆ ಕರಿಮಣಿಯೇ ಆಧಾರ

೧೪೧೩೨ ತಾನು ಕದಿಯಲಿಲ್ಲ, ಅರಸನಿಗೆ ಅಂಜಲಿಲ್ಲ

೧೪೧೩೩ ಹಸಿವೆಯಿಂದ ಸತ್ತರೂ ಸಾಯಿ, ಕಳವು ಮಾತ್ರ ಮಾಡಬೇಡ

ಹೆದರಿಕೆ

೧೪೧೩೪ ಅಂಜ್ತಾ ಅಂಜ್ತಾ ಆಕಾಶವೇ ತಲೆ ಮೇಲೆ ಬಿತ್ತು

---

* ತೆ ದೊಂಗವಾನಿ ಪೆಂಡ್ಲಾಮು ಎಪ್ಪುಡೂ ವಿಧವೆ
* ಕದ್ದು ಮದುವೆ ಮಾಡಿಕೋತೀನಿ, ಬಗ್ಗಿ ಓಲಗ ಊದು

೧೪೧೩೫ ಅಂಜಿಕೊಂಡು ಇರೋವೊತ್ಗೆ ಅಗುಳಿಲ್ಲ ಹೋದೋ

೧೪೧೩೬ ಅಂಜಿದವನಿಗೆ ಹಳು ದೆವ್ವ

೧೪೧೩೭ [1]ಅಂಜುವವರ ಮೇಲೆ ಕಪ್ಪೆ ಎಸೆದಂಗೆ

೧೪೧೩೮ ಅಂಜಿಗನಿಗೆ ಹರಿಗೋಲು ಹಿಡಲು ಅಂಜಿಕೆ

೧೪೧೩೯ ಒದ್ದೆ ಬಟ್ಟೇಲಿ ಹೊಡೀತೀನಿ ಅಂತ ಹೆಂಡ್ತೀನ ಹೆದರಿಸಿದನಂತೆ

೧೪೧೪೦ [2]ಅಂಜುವವನಿಗೆ ಹಗ್ಗವೂ ಹಾವು

೧೪೧೪೧ ಅಂಜುವವಳೇ, ಬೆಚ್ಚುವವಳೇ ! ಎಲ್ಲಿದ್ದೀಯೆ ?

೧೪೧೪೨ ಇಣುಕಿ ನೋಡದವ ಕೆಣಕಿ ನೋಡ್ತಾನ್ಯೆ ?

೧೪೧೪೩ ಇಲಿಗೆ ಹೆದರಿ ಹುಲಿ ಬಾಯಿಗೆ ಬಿದ್ದ

೧೪೧೪೪ ಉಳ್ಳವನಿಗೆ ಕಳ್ಳನ ಭಯ

೧೪೧೪೫ [3]ಊರಿನವರಿಗೆ ಸ್ಮಶಾನದ ಭಯ, ಪರ ಊರಿನವರಿಗೆ ಹೊಳೆ ಭಯ

೧೪೧೪೬ ಎದೆಯೇ ಒಡೆದವಳಿಗೆ ತಲೆ ಒಡೆದರೆ ಭಯವೆ ?

೧೪೧೪೭ ಕಗ್ಗಲ್ಲು ಕಂಡವನಿಗೆ ಬೆಣಚುಕಲ್ಲು ಕಂಡರೆ ಭಯ

೧೪೧೪೮ ಕಣ್ಣು ಹೇಡಿ, ಕೈರಥ

೧೪೧೪೯ ಕರಡಿ ಕಂಡು ಗೊಬ್ಬುಳಿ ಏರಿದ ಹಾಗೆ

---

1 (i) ಅಂಜಿದವರ ಮೇಲೆ ಹಂಜಿ ಹಾರಿಬಿಟ್ಟರು
(ii) ನಡುಗುವವನ ಮೇಲೆ ಸತ್ತ ಹಾವು ಎಸೆದ ಹಾಗೆ
(iii) ಹಗ್ಗ ಕಂಡು ಹೆದರುವವನ ಮೇಲೆ ಹಾವು ಇಟ್ಟಹಾಗೆ

2 ಪಿಗ್ಗನಿಗೆ ಹಗ್ಗವೂ ಹಾವು

3 ಊರಿನ ಸ್ಮಶಾನ ಹೆದರಿಸಿತು, ಪರೂರಿನ ಹೊಳೆ ಹೆದರಿಸಿತು

೧೪೧೫೦ [1]ಕರಡಿಗೆ ಹೆದರುವವನು ಕರಿ ಕಂಬಳಿ ಕಂಡ ಹಾಗೆ

೧೪೧೫೧ ಕಳ್ಳನಿಗಂಜಿ ಕಾಡುಹೊಕ್ಕು ಹುಲಿಗಂಜಿ ಹುತ್ತ ಹೊಕ್ಕ ಹಾಗೆ

೧೪೧೫೨ ಕಾಗೆ 'ಕಾ' ಅಂದರೆ ಲಗಳಿ (ಲೋಳೆ)ಯು ಎತ್ತು ಹಾರಿ ಬಿತ್ತಂತೆ

೧೪೧೫೩ ಕೆರೆಯಲ್ಲಿ ಇಳಿದರೆ ಕಪ್ಪೆ ಕಚ್ಚುತ್ತೆ

೧೪೧೫೪ ಕೊಡ್ತೀನಿ ಅಂದ್ರಾಸೆ. ಹೊಡೀತೀನಿ ಅಂದ್ರೆ ಭಯ

೧೪೧೫೫ ಖಂಡುಗ ತಿಂತೇನೆ, ಬಂಡಿ ಮೇಲೆ ಹೇರ್ತೇನೆ ; ಉಫ್
ಅಂದದ್ದಕ್ಕೆ ನನ್ನೆದೆ 'ಧಸ್' ಅಂತಲ್ಲ !

೧೪೧೫೬ ಗಂಡೇನೋ ಗಂಡೆ, ಆದರೆ ಗುಂಡಿಗೆ ಮಾತ್ರ ಸೊನ್ನೆ

೧೪೧೫೭ ಗುಂಚಕ್ಕಿ ಗುರ್ ಅಂತು, ನನ್ ಜೀವ ಬಗ್ಗಂತು

೧೪೧೫೮ ಜೀವ ಎಳ್ಕೊಂಡು ಹೋಗೋ ಯಮನ್ನ ಹೆಣ ಹೆದರಿಸಿದಂಗೆ

೧೪೧೫೯ ತನ್ನ ನೆರಳ ತಾನು ಕಂಡು ಹೆದರುವವನ ಮರುಳನಲ್ಲವೆ ?

೧೪೧೬೦ ತೀರಕ್ಕೆ ಬಂದ ಮೇಲೆ ಕೆರೆ ಭಯವೆ ?

೧೪೧೬೧ ದೂಡಿಸಿಕೊಂಡು ಹೋಗುವ ಮನುಷ್ಯ ಹೇಡಿಗಿಂತ ಕಡೆ

೧೪೧೬೨ ಧೈರ್ಯವಿಲ್ಲದವನಿಗೆ ದೇವರೇನು ಮಾಡೀತು?

೧೪೧೬೩ ನರಿಗೆ ಕೊಂಬಿದ್ದರೂ ನರರಿಗೆ ಹೆದರಬೇಕು

೧೪೧೬೪ 'ನಾಗರ ಹಾವು' ಅಂದರೆ ವಿಷ ತಗುಲಿ ಸಾಯ್ತಾರ್‍ಯೆ ?

೧೪೧೬೫ ಸಾನೇ ಧೀರ! ಮಡಕೆ ಸಂಧೀಲಿ ತೂರ

---

1 (i) ಕಂಬಳಿಗೆ ಹೆದರುವವನು ಕರಡಿ ಕಂಡಹಾಗೆ

(ii) ಹಗಲು ಕರಡಿಯ ಸಂಗಡ ಜಗಳವಾಡಿದವನು, ರಾತ್ರಿ ಕಂಬಳಿಯನ್ನು ಕಂಡರೂ ಹೆದರುವನು

ನಾಯಿ ಓಡಿದ ಹಾಗೆ ಓಡಿದ

೧೪೧೬೭ ನುಚ್ಚಿಗೆ ಬೆಚ್ಚುವವನಿಗೆ ನೊಚ್ಚಗೆ ಮಾಡಿದರೂ ನೆಚ್ಚಿಗೆ ಸಾಲದು

೧೪೧೬೮ ಮುಂದೆ ಬಾಯಿ ನಾರಿ ಹಿಂದೆ

೧೪೧೬೯ ಪುಕ್ಕಲ ರಟ್ಟೆಗಾತ್ರ ಮೀಸೆ ಬೆಳೆಸಿದ ಹಾಗೆ

೧೪೧೭೦ ಪುಕ್ಕಲಾದವ ಮುಕ್ಕಿ ಹೋದಾನೆ ?

೧೪೧೭೧ ಪುಕ್ಕಲಾದರೂ ಮುಕ್ಕೋಕೆ ಕಡಿಮೆಯಿಲ್ಲ

೧೪೧೭೨ ಪ್ರೇತಕ್ಕೆ ಹೆದರುವವ ಭೂತಕ್ಕೆ ಹೆದರನೆ ?

೧೪೧೭೩ ಬಕ ತಪಸ್ಸು ಮಾಡಿದರೆ ಮಕರನಿಗೆ ಭಯವೇನು ?

೧೪೧೭೪ ಬಲವಿದ್ದರೂ ಲಯವಾದರೆ ಭಯಪಡುವುದೇ ಸರಿ

೧೪೧೭೫ ಬಾವಲಿ ಕಂಡು ಬಾಗಿಲು ಹಾಕಿದರು

೧೪೧೭೬ ಬಿಸಿಲಿಗೆ ಹೆದರಿ ಬೆಂಕಿಗೆ ಬಿದ್ದ ಹಾಗೆ

೧೪೧೭೭ ಬೆಚ್ಚುವವನನ್ನು ಕಚ್ಚಿದ ಹಾಗೆ

೧೪೧೭೮ ಬೆದರಿ ಕೆಟ್ಟನೆ ಬಡ ಹಾರುವ ?

೧೪೧೭೯ ಬೆಸ್ತರ ಕೇರಿಯಾದ್ರೆ ಬಾಯಿ ಮುಚ್ಚಿಕೊಂಡು ನಡೀರಿ,
ಹಾರೂಗೇರಿಯಾದ್ರೆ (ಹೊಡೀರಿ ತಮಟೆಯ) ಹಾಕಿ ಗಳ್ಳ

೧೪೧೮೦ ಬೇಡಿಕೊಂಡಷ್ಟೂ ಹೇಡಿತನ ಹೋಗಲಿಲ್ಲ

೧೪೧೮೧ ಭಯವಾದದ್ದು ನಯದಿಂದ ಲಯವಾದೀತೆ ?

೧೪೧೮೨ ಭಯವಿದ್ದವನಿಗೆ ಜಯವಿಲ್ಲ

೧೪೧೮೩ ಭ್ರಾಂತಿ ಹೋಯಿತು, ಭಯ ಹೋಗಲಿಲ್ಲ

೧೪೧೮೪ ಭೀತಿಯೇ ಭೂತ

೧೪೧೮೫ ಮಳೆ ಸನಿಗೆ ಹೆದರಿ ಹೊಳೇಲಿ ಬಿದ್ದ ಹಾಗೆ

೧೪೧೮೬ ಮಳೆಗಾಲ ಬಂತೆಂದು ಬಿಡುವರೇ ರಾಜ್ಯವನು

೧೪೧೮೭ ಮಂದೆ ಬಳಿಗೆ ತೋಳ ಬಂದರೆ ತಂದೆ ಬಳಿಗೆ ಓಡಿಹೋದ

೧೪೧೮೮ ಶಕ್ತಿ ನೋಡದೆ ಶಬ್ದಕ್ಕೆ ಹೆದರಿದರಂತೆ

೧೪೧೮೯ ಶಾಟಕ್ಕಂಜಿ ಶಾಲೆ ಉಡೋದು ಬಿಟ್ಟಳಂತೆ

೧೪೧೯೦ ಸತ್ತರೂ ಇನ್ನೂ ಬಿಡೆಯಾ ಸೀತೆ ರಾವಣನ ಹಂಬಲವಾ ?

೧೪೧೯೧ ಸಾವಿರಾಳು ಬಲ, ಅರೆಯಾಳು (ಆರಾಳು) ಮನಸ್ಸು

೧೪೧೯೨ ಹಬೆಗೆ ತಾಳದೆ ಉರಿಯೊಳಗೆ ಬಿದ್ದಂತೆ

೧೪೧೯೩ ಹಂದಿ ಹಾದವನಿಗೆ ಕಗ್ಗಲ್ಲು ಕಂಡರೂ ಭಯ

೧೪೧೯೪ ಹಾತೆಗಂಜಿ ಅಳಿಯನ ತಬ್ಬಿದಂಗೆ

೧೪೧೯೫ ಹಾವಿನೊಂದಿಗೆ ಸರಸ, ಹಗ್ಗ ಕಂಡರೆ ಭಯ

೧೪೧೯೬ ಹುಚ್ಚಿಗೆ ಬೆಚ್ಚಿ ಕಿಚ್ಚಿಗೆ ಬಿದ್ದ

೧೪೧೯೭ ಹುಲಿ ಕಂಡ ಕರು ಕಗ್ಗಲ್ಲಿಗಂಜಿತ್ತು

೧೪೧೯೮ ಹುಲು ಬೆದರಿಕೆಗೆ ಹುಲ್ಲು ಬಣಿವೆ ಹಾರಿಬಿದ್ದಂತೆ

೧೪೧೯೯ ಹುಳುವಿಗಂಜಿ ಹುತ್ತಿನಲ್ಲಿ ಕೂತಿದ್ದರಂತೆ

೧೪೨೦೦ ಹೂಸಿಗೆ ಹೆದರಿತಂತೆ ಗುಬಲೂರು ಸಂತೆ

೧೪೨೦೧ ಹೊರೆಗೆ ಹೆದರಿದವ ಹಾವಿಗೆ (ಹೆದರಿಯಾನೆ ?) ಹೆದರನೆ ?

೧೪೨೦೨ ಹೇಡಿಗೆ ಹೆಂಡ್ತಿಯಾಗಬಾರದು, ಕೊಜ್ಜೆಗೆ ಗೆಳತಿಯಾಗಬಾರದು

೧೪೨೦೩ ಹೇನಿಗಂಜಿ ತಲೆ ಬೋಳಿಸಿದ ಹಾಗೆ

ಹೆದರಿಸುವುದು

೧೪೨೦೯ [1]ಒಬ್ಬ ಅತ್ತು ಹೆದರಿಸಿದ, ಒಬ್ಬ ಹೇತು ಹೆದರಿಸಿದ

೧೪೨೧೦ [2]ಓಡುವವನ್ನು ಕಂಡರೆ ಅಟ್ಟುವವನಿಗೆ ಸದರ

೧೪೨೧೧ ಹಾದ್ಯಾಗಿಂದ ಹುಗ್ಗಿ ಕುಡ್ಲ ತಕ್ಕೊಂಡು ದೇವರಾಣೆಗೂ ನಿನ್ನ ಮಗು ಕುಯ್ತಾನಿ ಅಂದ

ಧೈರ್ಯಶಾಲಿ

೧೪೨೧೨ ಅಗ್ನಿಗೆ ಭಯಪಡಲಿಲ್ಲ, ಅಗ್ನಿಯಕ್ಕೆ ಭಯಪಟ್ಟಾನೆ ?

೧೪೨೧೩ 'ಅಂಜಬೇಡ' ಅಂದರೆ ಆರಿಯುವುದಿಲ್ಲ ಕಸಾಪ್ಪೆ

೧೪೨೧೪ ಆನೆಗ್ಯಾಕೆ ನಾಯಿಯ ಭಯ ?

೧೪೨೧೫ ಕರಡಿಗೆ ಹೆದರದವ ಕರಿಕಂಬಳಿಗೆ ಹೆದರ್ತಾನ್ಯೆ ?

೧೪೨೧೬ ಹುಲಿಗೆ ಹೆದರದವ ಬೂದಿಗಂಜ್ಯಾನೆ ?

೧೪೨೧೭ ಕೋಡಿಗೆ ಅಂಜಿ ಗುರಿ ಊರಿಟ್ಟಂತೆ

೧೪೨೧೮ ಗುಂಡಿಗೆ ಇದ್ದವ ಗುಂಡಿಗೆ ತಿರುಗಿಸಲಿ

೧೪೨೧೯ ಗರುಡನ ಗೆದ್ದವನಿಗೆ ಉರಗನ ಅಂಜಿಕೆಯೇಕೆ?

೧೪೨೨೦ ಹಂದಿಗೆ ಹೆದರಲಿಲ್ಲ ಹಬಾ (ಹುಲಿ) ನಕ್ಕೆ (ನಾಯಿಗೆ) ಹೆದರಲಿ
ದಾಸಯ್ಯನ ಶಂಖ (ಕೊಂಬು) ದನಿಗೆ ಅಂಜ್ಯಾನೆ ?

೧೪೨೨೧ ದಿಟ್ಟ ಧೀರ ನೆಟ್ಟ ಕಂಬದಂತೆ

---

1 ಅತ್ತು ಹೆದರಿಸಲೊ, ಹೇತು ಹೆದರಿಸಲೊ ?

2 ಓಡುವ ನಾಯನ್ನು ಕಂಡರೆ ಅಟ್ಟುವ ನಾಯಿಗೆ ಹಬ್ಬ

೧೪೩೨೭ ಧೈರ್ಯವಂತನ ಗುಣ ಕಾರ್ಯದಲ್ಲಿ ನೋಡು

೧೪೩೨೮ ಧೈರ್ಯವಿದ್ದವನಿಗೆ (ದೈವಾನುಕೂಲ) ದೈವ ಸಹಾಯ

೧೪೩೨೯ ಧೈರ್ಯವೇ ಬಲ, ಭಯವೇ ಸೋಲು

೧೪೩೩೦ ಧೈರ್ಯಂ ಸರ್ವತ್ರ ಸಾಧನಂ

೧೪೩೩೧ ನಾಕದವಂಗೆ ಲೋಕದ ಭಯವೇನು ?

೧೪೩೩೨ ಪ್ರಳಯಕ್ಕೆ ಹೆದರದವ ಪಾಳ್ಯಕ್ಕಂಜುವನೆ ?

೧೪೩೩೩ ಪುಟ್ಟನಾದರೂ ದಿಟ್ಟ

೧೪೩೩೪ ಪೇಟೆಯಲ್ಲಿ ಮಗು ಕೊಟ್ಟವ ಹಳ್ಳಿಯಲ್ಲಿ ಅಂಜುವನೆ ?

೧೪೩೩೫ ಬಾಬಮ್ಮನ ಗಂಡ ಭೂಪತಿ ಕಿಟ್ಟ !

೧೪೩೩೬ ಬೆಂಕಿಗೆ ಕರಗದ್ದು ಬಿಸಿಲಿಗೆ ಕರಗೀತೆ ?

೧೪೩೩೭ ಜೆತ್ತಲಿರುದ್ದವನಿಗೆ ಎತ್ತಲೂ ಭಯವಿಲ್ಲ

೧೪೩೩೮ ಸಾವಿಗಂಜದವ ನೋವಿಗಂಜ್ಯಾನೆ ?

೧೪೩೩೯ ಹುಲಿಗೆ ತನ್ನ (ಕಾಡಿನ ಬಂದೀ) ಕಾಡೇನು, ಪರರ (ಕಾಡಿನ ಬಂದೀ) ಕಾಡೇನು ?

೧೪೩೪೦ ಹೊಳೆಗೆ ನೆನೆಯದ ಕಲ್ಲು ಮಳೆಗೆ ನೆನದೀತೆ ?

ಪೌರುಷ

೧೪೩೪೧ ಬಳ್ಳಿಗೆ ಹೋದ ನನ್ನ ಗಂಡ ಹುಲಿ ಹೊಡಕೊಂಡು ಬಂದ

೧೪೩೪೨ ಬೆವರು ಸುರಿದರೂ ಬೀರ್ಯ (ಹೋಗಲಿಲ್ಲ) ಹೋದೀತೆ ?

೧೪೩೪೩ ಹುಲಿ ಹಾಲು ಕುಡಿದವ ಗಿಡ್ಡ ಇದ್ದ ಹಾಗೆ

೧೪೨೩೪ [1]ಹುಲಿ ಹೊಡೆಯಬೇಕು, ಚರ್ಮ ಹೊದೆಯಬೇಕು

ಒಣ ಪೌರುಷ

೧೪೨೩೫ ಅಮ್ಮಿಗಂಡ ಹಮ್ಮೀರ, ದೊಣ್ಣೆ ತಕಂಡು ತಿವೀರ

೧೪೨೩೬ 'ಅರಳು ಮೂಟೆ ಹೊತ್ಕೊಂಡು ಒರಳು ದಾಟೇನು' ಅಂದನಂತೆ

೧೪೨೩೭ "ಆನೆ ಕಡಿಯುವೆನೆ ಗಜಲಕ್ಷ್ಮಿ, ಅಶ್ವ ಕಡಿಯುವೆನೆ ಅಶ್ವಲಕ್ಷ್ಮಿ, ಸಿಪಾಯಿಗಳಂತೂ ಸರಿಯೇ ಸರಿ : ತಾನು ಇನ್ನ್ಯಾರ ಕಡಿಯಲಿ ? ಕಡಿಯಲೆ ಬೋಳು ಹಾರುವನನ್ನ ?"

೧೪೨೩೮ 'ಇದೇಕೊ ಮಲ್ಲ ! ಅಂದರೆ ಬೆಣಚುಕಲ್ಲು ಬೋರೆಗೆ ಹೋಗಿ ಗಿಣಚಿಕೊಂಡು ನೋಡಿದ

೧೪೨೩೯ ಊರಣ್ಣ ಬಲು ಶೂರ, ಊರಾಚೆ ಬಹು ಕಾತ

೧೪೨೪೦ [2]ಉತ್ತರನ (ಆವುಟ, ಪಾರುಪತ್ಯ) ಪೌರುಷ ಹೆಂಗಳೆಯರ (ಒಲೆ) ಮುಂದೆ, ಹಾರುವನ ಪೌರುಷ ಎಲೆ ಮುಂದೆ

೧೪೨೪೧ 'ಎದ್ದರೆ ನೀನು ಕೆಟ್ಟೆ' ಅಂದ ಹಾಗೆ ಕುಂಟ

೧೪೨೪೨ "ಕತ್ತಿ ಎತ್ತಿ ಕೈಗೆ ಕೊಡು, ಕಾಗೆಗೊಂದು ತುಂಡು, ಗೂಗೆಗೊಂದು ತುಂಡು ಹಂಚಿ ಬಿಡ್ತೀನಿ" ಅದ್ನಂತೆ

೧೪೨೪೩ ಒಕ್ಕಳ ಪುರಿ ಹೊತ್ತುಕೊಂಡು ಕೊತ್ತಿ ಮೆಳೆ ನೆಗೆದೇನು ಅಂದ

೧೪೨೪೪ ಹತ್ತಿ ಹೊತ್ಕೊಂಡು ನನ್ನ ಗಂಡ ಒಳ್ಳಿ (ದಾಟಲಾರ) ದಾಟಿದ

---

1 ಹುಲಿ ಹೊಡೆಯುವ್ರು, ಚರ್ಮ ಹೊದೆಯುವ್ರು (ಹವ್ಯಕ)

2 ನನ್ನ ಆವುಟ ನನ್ನ ಹೆಂಡ್ತಿ ಮುಂದೆ

3 (i) 'ಎದ್ದರೆ ಅಳಲ್ಲ' ಅಂದ ಹಾಗೆ
(ii) ಕುಂಟ ಎದ್ದರೆ (ಆಳಲ್ಲ) ಎದ್ದರೆ ಕೆಟ್ಟ ಅಂದ ಹಾಗೆ
(iii) ಸುಂಕದ ಕಟ್ಟೆಯಲ್ಲಿ ಸೊಂಟವಿಲ್ಲದ ಕುಂಟ 'ಎದ್ದರೆ ಆಳಲ್ಲ' ಅಂದ ಹಾಗೆ

೧೪೨೪೫ [1]ಕನ್ನಂಬಾಡಿ ಹತ್ತಿರ ಕಂಬಳಿ ಕಿತ್ತುಕೊಂಡರೆ ಬಲಮುರಿ ತಾವು ಹಲ್ಲುಮುರಿ ಕಚ್ಚಿದ

೧೪೨೪೬ ದೋಸೆ ತಿನ್ನುವಾಗ ಮೀಸೆ (ಕಿರುವಿದ) ಮುರಿದನಂತೆ

೧೪೨೪೭ ನಿನ್ನೂರ್ಗೆ ಹ್ಯಾಟೆ, ನನ್ನೂರ್ಗೆ ಹುಂಜ

೧೪೨೪೮ ಪಟ್ಟಣದಲ್ಲಿ ಪೆಟ್ಟು ತಿಂದು ಹಳ್ಳಿಗ್ಬಂದು ಹಲ್ಲು ಕಡೀತಿದ್ನಂತೆ

೧೪೨೪೯ ಬೂದಿ ಮುಡ್ಕೆ ಹೊಡ್ದು 'ಭಲೆ' ಅನ್ನಿಸಿಕೊಂಡ

೧೪೨೫೦ ಬೆಕ್ಕಪ್ಪ ಇಲ್ಲದಲ್ಲಿ ಇಲಿಯಮ್ಮ ಲಾಗಾ ಹೊಡೆಯಿತು

೧೪೨೫೧ ಸತ್ತ ಹಾವು ಬಡಿದ ಹಾಗೆ

೧೪೨೫೨ ಸತ್ತವ್ನ ಬಡಿಯೋಕೆ ಸರದಾರ್ನ ಕರೆ ಅಂದ ಹಾಗೆ

೧೪೨೫೩ ಹಳ್ಳಕ್ಕೆ ಬಿದ್ದು ಹಲ್ಮುರಿ ಕಚ್ಚಿದನಂತೆ

೧೪೨೫೪ ಹುಲಿಯುಗುರು ಕಟ್ಟಿಕೊಂಡು 'ನಾನು ಶೂರ' ಎಂದು ಮೆರೆದ ಹಾಗೆ

ಸ್ವಚ್ಛಂದ ಸ್ವಭಾವ

೧೪೨೫೫ ಅರಿತರೆ ಅರಿತೆ, ಬೆರೆತರೆ ಬೆರೆತೆ

೧೪೨೫೬ ಅವರ ಕೈ, ಅವರ ಬಾಯ್

೧೪೨೫೭ ಆಡಿದ್ದೇ (ಮಾಡಿದ್ದೇ) ಆಟ ಹೂಡಿದ್ದೇ ಲಗ್ಗೆ

---

1 (i) ಕಡಬದ ಏರಿ ಮೇಲೆ ಕಂಬಳಿ ಕಿತ್ತುಕೊಂಡರೆ ಮಾಯ (ಸವಂದ್ರದ) ಸಂದ್ರದ ಹತ್ತಿರ ಮೀಸೆ ತಿರುಗಿಸಿದ

(ii) ಕಲ್ಲೂರ (ತೊಟ್ಲುಕೆರೆ) ಏರಿ ಮೇಲೆ ಕಂಬಳಿ ಕಿತ್ತುಕೊಂಡರೆ ಕಡಬದ (ಕುಣಿಗಲು) ಕೆರೆ ಏರಿ ಮೇಲೆ ಮೀಸೆ ತಿರುಗಿಸಿದ

(iii) ಕನ್ನಂಬಾಡಿ ತವ್ ಕಂಬಳಿ ತೀರಿಸ್ಬಿಟ್ಟು ದೇಶುವಳ್ಳಿ ತವ್ ಬಂದು ಮೀಸೆ ತಿರುಗಿಸಿದಂಗೆ

೧೪೨೫೮ ಕಟ್ಟು ಹರಿದ ಪಂಜಿನ ಹಾಗೆ

೧೪೨೫೯ ಘೋಡಾ ಉಂಟು, ಮೈದಾನ ಉಂಟು

೧೪೨೬೦ ತನ್ನ ಕೈ ಕಾಸು, ಮೇಲುಕೋಟೆ ನಾಮ, ತಿಕ್ಕಪ್ಪ ಮೊಕ್ಕಪ್ಪ ಬಳ್ಕಳ್ಳಿ ಹೇಳು

೧೪೨೬೧ ತನ್ನ ತೋಟದಲ್ಲಿ ತಾನು ಕೈ ಹೇಗೆ ಬೀಸಿದರೇನು ?

೧೪೨೬೨ ತನ್ನ ಹೆಂಡ, ತನ್ನ ಬಂಡೆ

೧೪೨೬೩ ನನ್ನ ದಮ್ಮಡಿ, ನನ್ನ ದಮ್ಮು

೧೪೨೬೪ ನಮ್ಮ ಮನೆಗೆ ನಾವೇ ದಾಸರು, ದೆಕ್ಕಿಗಿಕ್ಕೊ ತಿರುನಾಮವ

೧೪೨೬೫ ನಾಗಪ್ಪ ಉಂಟು, ಜೋಗಪ್ಪ ಉಂಟು

೧೪೨೬೬ ನಿನ್ನ ಬಾಡು ನೀನು ತಿನ್ನೋಕೇನು ಭಾವ !

ಹಗಲುಗನಸು

೧೪೨೬೭ [1]ಅಟ್ಟಕ್ಕೂ ಬೆಟ್ಟಕ್ಕೂ ಏಣಿ ಹಾಕಿದ ಹಾಗೆ

೧೪೨೬೮ ಅಂತರಿಕ್ಷದಲ್ಲಿ ಅರಮನೆ ಕಟ್ಟಿದ ಹಾಗೆ

೧೪೨೬೯ ಗಾಳಿ ಮಂಟಪದ ಜೋಗಿ ಹಾಗೆ

೧೪೨೭೦ ಗಾಳಿ ಗೋಪುರ ಕಟ್ಟಿದ ಹಾಗೆ

೧೪೨೭೧ ಬರಿ ಕೈಲಿ ಮೊಳ ಹಾಕಿದ ಹಾಗೆ

೧೪೨೭೨ [2]ಮನಸ್ಸಿನಲ್ಲೇ ಮಂಡಿಗೆ ತಿಂದಹಾಗೆ

---

1 ಆಕಾಶಕ್ಕೆ ಏಣಿ ಹಾಕಿದ ಹಾಗೆ

2 (i) ಮನಸ್ಸಿನಲ್ಲಿ ಮಂಡಿಗೆ
(ii) ಮನಸ್ಸಿನಲ್ಲಿ ಮಂಡಿಗೆ ತಿಂದರೆ ಗೋಧಿಕಾಸು ಕೊಡುವವರು ಯಾರು?

೧೪೨೭೩ ಹಗಲುಗನಸಿನ ಸವಿ ಇರುಳುಗನಸಿಗೆ ಬಂದೀತೆ ?

೧೪೨೭೪ [1]ಹಾಲಿಲ್ಲಿ ಬಟ್ಟಲಿಲ್ಲ ; ಗುಟುಕರಿಸೋ ಮಗನೇ !

ಕಾಣದ ವಸ್ತುವಿನ ಕನವರಿಕೆ

೧೪೨೭೫ ಓಡಿ ಹೋಗಿ ಹಾಲು ಕುಡಿಯೋಕಿಂತ ಇದ್ದಲ್ಲೆ ನೀರು ಕುಡಿಯುವುದು ಲೇಸು

೧೪೨೭೬ [2]ಕನ್ನಡಿಯೊಳಗಿನ ಗಂಟಿಗಿಂತ ಕೈಯೊಳಗಿನ ದಂ (ಗಂ) ಟೇ ಲೇಸು

೧೪೨೭೭ ಕನಸಿನ ನಂಟು (ದೇಶಾಂತರದ ನೆಂಟು) ಕನ್ನಡಿಯೊಳಗಿನ ಗಂಟು

೧೪೨೭೮ ಕಾಣದ ಹಳ್ಳಕ್ಕಿಂತ ಕಂಡ ಕೆರೆ ಹಾರುವುದು ಲೇಸು

೧೪೨೭೯ ತನ್ನ ಕೈಯಾಗೆ ಗೆರಿಸೆ ಇದ್ದರೆ ತವುಡು ರುಚಿ ತಿಳಿಯಲಕ್ಕು

೧೪೨೮೦ ದೂರದ ನಯುಗಲ್ಲಿಗಿಂತ ಹತ್ತಿರದ ಗೋ(ಹೋ)ರ್ಕಲ್ಲೇ (ಕೋಡುಗಲ್ಲೇ) ಲೇಸು

೧೪೨೮೧ ದೂರದ ಮಾವಿಗಿಂತ ಹತ್ತಿರದ ಅಂಬಟೆ ಲೇಸು

೧೪೨೮೨ ಪೊದೆಯೊಳಗಿನ ಎರಡು ಹಕ್ಕಿಗಿಂತ ಕೈಯಲ್ಲಿರುವ ಒಂದೇ ಲೇಸು

೧೪೨೮೩ [3]ಸತ್ತು ಸ್ವರ್ಗ ಕಾಣೋಕಿಂತ ಇದ್ದ ನರಕವೇ ಲೇಸು

ಜಾಗರೂಕ ವರ್ತನೆ

೧೪೨೮೪ ಅಡಿನೋಡಿ ಮುಡಿ ಹೊರಬೇಕು

---

1 ಹಾಲಿಲ್ಲದೆ ಬಟ್ಟಲಿಲ್ಲದೆ 'ಗುಟುಂಕ್' ಅಂದನಂತೆ

2 ಕನ್ನಡಿಗಂಟಿನ ರೂಪಾಯಿಗಿಂತ ಕೈಯಲ್ಲಿರುವ ಕಾಸೇ ಲೇಸು

3 ಸತ್ತವನ ಸ್ವರ್ಗಕ್ಕಿಂತ ಇರುವವನ ನರಕವೇ ಲೇಸು

೧೪೨೮೫ ಅರಿತು ಮಾತಾಡಿದರೆ ಅರ್ಥ ಕೇಡು, ಅರಿಯದೆ ಮಾತಾಡಿದರೆ ಪ್ರಾಣಗೇಡು

೧೪೨೮೬ ಆಯ ತಪ್ಪಿದರೆ ಪ್ರಾಣ ಹೋಗುವುದು

೧೪೨೮೭ ಊರೊಳಗಿದ್ದರೆ ಜಂಬಗಿ ಇರಬೇಕು, ಊರು ಬಿಟ್ಟರೆ ತಂಬಗಿ ಇರಬೇಕು

೧೪೨೮೮ ಊರಿಗೆ ಬಂದಿರುವುದು ಕೆಟ್ಟಕಾಲ, ಹೆಟ್ಟಿಗೆ ಹಾಕು ನಿನ್ನ ಸೊಟ್ಟಗಾಲ

೧೪೨೮೯ ಕಬ್ಬಿಣವಿದ್ದರೂ ಕತ್ತಿ ಕಂಕುಳಲ್ಲಿರಬೇಕು

೧೪೨೯೦ ಕುಳಿತ ಜಾಗ ಹಿಂದಕ್ಕೆ ನೋಡದೆ ಹೋದವ ಕೆಟ್ಟ

೧೪೨೯೧ ಜತನವಿದ್ದರೆ ಮಥನವಿಲ್ಲ

೧೪೨೯೨ ತನ್ನ ರುಮಾಲು ತನ್ನ ಕೈಯಲ್ಲಿ

೧೪೨೯೩ ನಿತ್ಯ(ಹುಟ್ಟು)ಮುಂಡೆ ಪಟ್ಟಣದಲ್ಲಿ ಎಚ್ಚರಿದ್ದವನೇ ಜಾಣ

೧೪೨೯೪ ನೆರೆಮನೆಯವರೊಂದಿಗೆ ಸ್ನೇಹದಿಂದಿದ್ದರೂ ನಮ್ಮ ಮನೆ ಅಂಗಳ ಭದ್ರವಾಗಿರಬೇಕು

೧೪೨೯೫ ಮೂಗುತಿ ತೆಗೆಕೊಳ್ಳೋಗಿ ಮೂಗು ಕೊಟ್ಟಂತ ಹಾಗೆ

ಅಜಾಗರೂಕ ವರ್ತನೆ

೧೪೨೯೬ *ಆಣಿ ಹಾಕುವುದಕ್ಕೆ ಹೋಗಿ ಬೆರಳು ಸಿಕ್ಕಿಸಿಕೊಂಡ ಹಾಗೆ

೧೪೨೯೭ ಅತ್ತಿ ಹಣ್ಣಿಗೆ ಹೋಗಿ ಪಿಕಳಂಕ ಸಿಗುಬಿಕೊಂಡಿತು

೧೪೨೯೮ ಕಲ್ಲೆಡವಿದರೆ ಕಲ್ಲಿನ ತಪ್ಪು ?

೧೪೨೯೯ ಕಂಬಳಿ ಕಟ್ಟು ಅಂತ ಕರಡಿ ಹಿಡಿದ ಹಾಗೆ

---

* ತಾಳ ತೆಗೆಯಕ್ಕೋಗಿ ಬೆರಳು (ತರಡು) ಸಿಕ್ಕಿಸಿಕೊಂಡ ಹಾಗೆ

೧೪೩೦೦ ತಪ್ಪಿ ಬಿದ್ದವಗೆ ತಪ್ಪು ಏನು ಮಾಡೀತು ?

೧೪೩೦೧ ನೋಟವಿಲ್ಲದೆ ಓಡಿದರೆ ಕಾಟ ತಪ್ಪದು

೧೪೩೦೨ ಹೊತ್ತಲ್ಲದ ಹೊತ್ತಿನಲ್ಲಿ ಹುತ್ತಿನ ಬಾಯಿಗೆ ಕೈಯಿಟ್ಟ

ಒಬ್ಬರ ಮೂಲಕ ಇನ್ನೊಬ್ಬರನ್ನು ಎಚ್ಚರಿಸುವುದು

೧೪೩೦೩ [1]ಎಡಕಿನ ಎತ್ತಿಗೆ ಹೊಡೆದರೆ ಬಲಕಿನೆತ್ತು ಹುಷಾರಾಯಿತು

೧೪೩೦೪ [2]ಕಂಬಳಿಯವನನ್ನು ಹೊಡೆದು ದುಪಟಿಯವ(ಹಚ್ಚಡದವ)ನನ್ನು ಎಚ್ಚರಿಸಬೇಕು

೧೪೩೦೫ ಕಾಳಿಗೆ ಬಿದ್ದ ಬೆತ್ತದೇಟು ಬೆಳ್ಳಿಗೂ (ತಾಳು)

೧೪೩೦೬ ಕೋಣೆಯಲ್ಲಿರೋ ಮಗಳಿಗೆ ಹೇಳಿದರೆ ಕೊಟ್ಟಿಗೇರಿದರೂ ಸೊಸೆಗೆ ಅರಿಕೆಯಾಗಬೇಕು

ಸಂದೇಹ

೧೪೩೦೭ ಇದ್ದವರು ಮೂವರಲ್ಲಿ ಕದ್ದವರು ಯಾರು ?

೧೪೩೦೮ ಒಡವೆ ಒಂದು ಕಡೆ, ಸಂಶಯ ಒಂದು ಕಡೆ

೧೪೩೦೯ ಬಿಲ್ಲಿನದ ಬಾಣ ಕೊಲ್ಲುವುದೋ, ಇಲ್ಲವೋ ?

೧೪೩೧೦ ಹುತ್ತದ ಮೇಲಿನ ಸರಪಿ ಹಾಗೆ

ದುರಿಪ್ಪ

೧೪೩೧೧ [3]ಕಂಕುಳಲ್ಲಿ ಕೂಸಿಟ್ಟುಕೊಂಡು ಊರೆಲ್ಲಾ ಹುಡುಕಿದ ಹಾಗೆ

---

1 ಎಡದ ಎತ್ತಿಗೆ ಹೊಡೆದರೆ ಬಲದ ಎತ್ತಿಗೆ ತಾಕಿತು

2 ಕಂಬಳಿಯವನನ್ನು ಹೊಡೆದರೆ ದುಪಟಿಯವನು ಎಚ್ಚೆತ್ತುಕೊಂಡ

3 ಕಂಕುಳಲ್ಲಿ ಮಗು ಇಟ್ಟುಕೊಂಡು ಊರೆಲ್ಲ ಹುಡುಕಿದ ಹಾಗೆ

೧೪೩೧೨ *ಕುರುಬ ಹೆಗಲಲ್ಲಿ ಕುರಿಹೊತ್ತು (ಬಗಲಾಗಿಟ್ಟು)ಕೊಂಡು ನನ್ನ ಕುರಿ ಎಲ್ಲಿ ? ಅಂತ ಊರ್ನೆಲ್ಲ ಹುಡುಕಿದ

೧೪೩೧೩ ಭುಜದ ಮೇಲೆ ಕೊಡಲಿ ಇಟ್ಕೊಂಡು ಬಡಗಿ ಊರೆಲ್ಲ ಹುಡುಕಿದ ಹಾಗೆ

೧೪೩೧೪ ಕೈಲಿ ಕಡಗ ಇಟ್ಕೊಂಡು ಕಡ ಕೇಳೋಕ್ಕೆ ಹೋಗಿದ್ದಳಂತೆ

೧೪೩೧೫ ಕೂಳ ಕಡ ಅಂದು ಮರೆಯುವುದು

೧೪೩೧೬ ಮನುಷ್ಯನ ಕೆಲಸ ಮರೆತವರೆ ಆದೀತೆ ?

೧೪೩೧೭ ಭೂಮಿ ಮಾಗ್ಗದ ಏಕ ಕಾಕೆ ದಾರಿ ಮರೆತ್ತಂಗೆ

೧೪೩೧೮ ಮರೆಯದೆ ಇದ್ದವನು ಮಾನವನಲ್ಲ. ಕದ್ದಿದೆ ಇದ್ದದ್ದು ಕೆರವ

೧೪೩೧೯ ರಾಗ ನೆನಪಾಗೋ ಹೊತ್ತಿಗೆ ತಾಳ ಮರೆತುಹೋಯಿತು

ನಗು

೧೪೩೨೦ ನಗಾಡುವವರನ್ನು ನಂಬಬಾರದು

೧೪೩೨೧ ನಕ್ಕರೆ ಅದೇ ಸ್ವರ್ಗ

೧೪೩೨೨ ನಕ್ಕರೆ ಮುತ್ತು ಸುರಿಯುತ್ತದೆ

೧೪೩೨೩ ನಕ್ಕಷ್ಟೂ ದುಃಖಕ್ಕೆ ದಾರಿ

೧೪೩೨೪ ನಕ್ಕು ನಕ್ಕು ಮಾತಾಡುವವ ಕೊಕ್ಕರೆಗಿಂತ ಕಡೆ

೧೪೩೨೫ ನಕ್ಕು ನುಡಿಯುವ ಠಕ್ಕ ಬೊಕ್ಕಸ ನೆಕೆದಾನು!

೧೪೩೨೬ ನಗ ಬಂದು ಮೂರು ದಿವ್ಸವಾಯ್ತು. ನಗೂಕೆ ಹೊತ್ತಿಲ್ಲ ಅಂದಂಗೆ

---

* ಕು.ರಿ ಹೆಗಲಲ್ಲಿ. ಹುಡುಕೋದು ಊರು ಸುತ್ತ

೧೪೩.೨೭ ನಗಬೇಡ ಕಣೆ ಬೊಮ್ಮಿ, ನಗೆ ಬಿದ್ದು ಕೆಟ್ಟೀತು

೧೪೩.೨೮ ನಗ್ನದವರ ಹತ್ತಿರ ನಗಾಟವೇ ?

೧೪೩.೨೯ ನಗುವರಿಯದವನಿಗೆ ನಡುಹಗಲೂ ಕಪ್ಪಾಗಿ ಕಾಣುವುದು

೧೪೩.೩೦ [1]ನಗೆ ನಾ ಜಿರಳಗಾಯಿ

೧೪೩.೩೧ ನಸುನಗೆಯಿಲ್ಲದ ಮೋರೆ ಬುಸುಬುಸು ಅನ್ನುವುದು

೧೪೩.೩೨ 'ಹಿಲ್ಲಿ' ಅಂದರೆ ಹಲ್ಲುಕಿರಿದು ಗುಲ್ಲು ಮಾಡಿದ

೧೪೩.೩೩ ನೋವಿನಲ್ಲಿ ನಗು ಕಾಣು, ಸಾವಿನಲ್ಲಿ ಸುಖ ಕಾಣು,
ಬೇವಿನಲ್ಲಿ ರುಚಿ ಕಾಣು

೧೪೩.೩೪ ಫಕ್ಕನೆ ನಗಬೇಡ, ಠಕ್ಕನ ನುಡಿ ಬೇಡ

೧೪೩.೩೫ ಸಂತೋಷವೇ ಯೌವ್ವನ, ದುಮ್ಮಾನವೇ ಮುಪ್ಪು

೧೪೩.೩೬ ಹಾಸ್ಯವಿಲ್ಲದ ನಗು, ಕೋಪಿಲ್ಲದ ಜೀವಿ

೧೪೩.೩೭ ಹುಚ್ಚು ಬೆಪ್ಪರ ಹತ್ತಿರ ನಕ್ಕ ಹಾಗೆ

೧೪೩.೩೮ ಹುಸಿನಗೆ ಊರಿಗೆ ಮಾರಿ, [2]ಕುರುಬಿಸಿಲು ಮನೆಗೆ ಮಾರಿ

ಅಳು

೧೪೩.೩೯ ಅಕ್ಕರೆಯಿಲ್ಲದ ಮನೆಯಲ್ಲಿ ಬಿಕ್ಕಿ ಬಿಕ್ಕಿ ಅಳಬೇಡ

೧೪೩.೪೦ ಅಟ್ಟಿಟ್ಟ ಹಾಳೆ ಬಚ್ಚಿಡಬಹುದು, ಉಕ್ಕಿ ಬರೋ ಸಂಕಟ
ಮುಚ್ಚಿಡಲಾಗದು

೧೪೩.೪೧ ಅತ್ತ ಕಣ್ಣು ಮುತ್ತು ತಂತು

---

1 ನಗೆ ನಾಬಳ್ ಕಾಯಿ

2 ಕನ್ನಪ್ಪು ಮನೆಗೆ ಮಾರಿ

೧೯೩೯೧ ಅತ್ತರೆ ನೆತ್ತಿಯ ಮೇಲಿನ ಸೂರ್ಯ ಮರೆಯಾದಾನೆ?

೧೯೩೯೨ ಅತ್ತರೆ ಮಳೆ(ಸ್ವಾತಿ) ತಪ್ಪ ಸುರಿಯುತ್ತೇ?

೧೯೩೯೩ ಅವನು ನಗುತ್ತ ಕೇಳಿದ, ಇವಳು ಅಳುತ್ತಲೇ ಕೇಳಿದಳು

೧೯೩೯೪ ಅಳುಗಂಡ ಅಂದ್ರೆ ಊರವರಿಗೆಲ್ಲ ಪ್ರೇಮ

೧೯೩೯೫ ಅಳುವುದೂ ಮುಖವೇ, ನಗುವುದೂ ಮುಖವೇ?

೧೯೩೯೬ [1]ಅಳುವವನ ಎಡಕ್ಕೂ, ಹೊಲಿಯುವವನ ಬಲಕ್ಕೂ ಕೂರಬಾರದು

೧೯೩೯೭ ಅಳುವವರ ಮುಂದೆ ಅಂಗಲಾಚಬೇಡ

೧೯೩೯೮ ಅಳುವ ಕಂದನ್ನ ಆರು ತಿಂಗಳು ತಡೆದಂಗೆ

೧೯೩೯೯ ಅಳುವನ ಮಾತೂ ಕೊಳಕು ನೀರೂ ಒಂದೇ

೧೯೪೦೦ ಊರಿಗೇ ದಿಕ್ಕಿಲ್ಲ, ನಾನ್ಯಾರಿಗಳಲಿ?

೧೯೪೦೧ ಕಣ್ಣಲ್ಲಿ ನೀರಿಲ್ಲ, ಮೂಗಲ್ಲಿ ಗೊಣ್ಣೆಯಿಲ್ಲ: ಬತ್ತಿ ಸುಮ್ಮನೆ ಯಾಕಳ್ತೀ?

೧೯೪೦೨ ಕಂಡವರಿಗಿತ್ತು ಕಣ್ಣು ಕಳಕೊಂಡ ಹಾಗಾಯ್ತು

೧೯೪೦೩ ಕಾದಮನೆ ಕಳ್ದಾಯ್ತು, ಅತ್ತ ಮನೆ ಮಿತ್ರಾಯ್ತು

೧೯೪೦೪ ಕೈಲಾಗದೆ ನಾಚಿಕೆಪಟ್ಟು ಅತ್ತಹಾಗೆ

೧೯೪೦೫ ನಕ್ಕು ನಕ್ಕು ಹೊಟ್ಟೆ ಹುಣ್ಣಾಯ್ತು, ಅತ್ತು ಅತ್ತು ಕಣ್ಣು ಇಂಗಿಹೋಯ್ತು

---

1 (i) ಅಳುವವರ ಎಡಕ್ಕಿರಬೇಡ, ಹೊಲಿಯುವವನ ಬಲಕ್ಕಿರಬೇಡ

(ii) ಹೊಲಿವನ ಬಲಕ್ಕೆ ನಿಲ್ಲಬೇಡ, ಅಳುವವನ ಎಡಕ್ಕೆ ನಿಲ್ಲಬೇಡ

(iii) ಹೊಲಿಯುವವರ ಬಲಕ್ಕೂ ಕೂರಬಾರದು, ಅಳುವವರ ಎಡಕ್ಕೂ ಕೂರಬಾರದು (

2 ಕವಡೆ ಅತ್ತು (ಕಾಡಿಗೆ ಅತ್ತು) ಕಣ್ಣು (ಕಳಕೊಂಡಹಾಗೆ) ಹೋಯಿತಾಯ್ತು

೧೪೩.೫೭ ಹಿಟ್ಟುಗಟ್ಟಿ ಹಿಂದುಗಟ್ಟಿ ಇಟ್ಟುಹಾಕಿ (ಹಾಕಿದ್ರು ತಿನ್ನುವು) ನಾಳೆ.

೧೪೩.೫೮ ಹಿಂದುಗಟ್ಟಿನ (ಮುಂದಿನ) ಬಂಗಿ ಬಾರದು. ಹಾಳು ಮನೆಯವರು.

೧೪೩.೫೯ ದೊಂಬರಾಗದ ಹಾಗೆ ದೊಡ್ಡವರೊಡ ಇದೇ ದಿನ ಅತ್ತದೆ

೧೪೩.೬೦ ಮಕಮಕನೆ ನಗುವವರನ್ನು ನೋಡಿ ಬಿಕ್ಕಿಬಿಕ್ಕಿ ಅತ್ತ

೧೪೩.೬೧ ಬಿಕ್ಕಿ ಬಿಕ್ಕಿ ಅತ್ತರೆ ಬಂದೀತೆ ಕಣ್ಣು ತೆರೆದೀತೆ?

೧೪೩.೬೨ ಬಿಟ್ಟು ಬಾಳಲ್ಲಿ ಬೇಯುತ್ತಿ, ಅಂತ ಸಿಟ್ಟು ಅತ್ತರಂತೆ

೧೪೩.೬೩ ಬೇಡಿಕ ನಗಬೇಕಾದ್ದು, ಮನಸಾರಾ, ಅಳಬೇಕು

೧೪೩.೬೪ ಸಾಸವೆ ಕೊಂಡದ ಸಂತೆಯಲ್ಲಿ ಗುಮ್ಮನ (ಗುಮ್ಮಗನ) ಕೊಡದ ಗೋಳಾಟ

೧೪೩.೬೫ ಹಾದಿಯಲ್ಲಿ ಹೋಗುವವನ ನಕ್ಕ, ದನ ಕಾಯುವವ ಅತ್ತ

೧೪೩.೬೬ ಒಂದಲ ಪ್ರಾಯ ನೆನೆದು ಒತ್ತರಿಸಾಗ ಅತ್ತರಂತೆ

೧೪೩.೬೭ ಹಿಂದೊಂ ಸತ್ತವರಿಗೆ ಗೋರಿಯಲ್ಲಿ ಅತ್ತರಂತೆ

ಸರಸ

೧೪೩.೬೮ ಅಲ್ಲಿ ಸರಸ, ಇಲ್ಲಿ ಸರಸ; ಮನುಷ್ಯನಿಗೆ ಎಲ್ಲಿ ಹೋದರೆ ಸರಸ?

೧೪೩.೬೯ ಆನೆ ದೇವಸ್ಥಾನದ ಬಂಡಿದ ಜೊತೆಗಿಂದ ಸರಸವೇ?

೧೪೩.೭೦ ಕುರುಡನ ಮಗನ ಸರಸ ಬಲುತಾಯಿ ಕೊಟ್ಟೆ

೧೪೩.೭೧ ಕಂಬಗೇಡಿ ಕೂಡ ಸರಸವೆ?

೧೪೩.೭೨ ಬೆಂಕಿಯೊಂದಿಗೆ ಸರಸವಾಡಿದ ಹಾಗೆ

೧೪೩.೭೩ *ಸರ್ಪನ ಕೂಡ ಸರಸ, ಸಾವಿನ ಕೂಡ ಸಲ್ಲಾಪ

---

* ಸರ್ಪನ ಕೂಡ ಸರಸವೆ?

೧೪೩೭೪ ಹಾರುವ ಗುಬ್ಬಿಗೆ ಹನುಮಾನೊಡನೆ ಸರಸವೆ?

೧೪೩೭೫ ಹಾವಿನ ಕೂಡ ಕಪ್ಪೆಗೆ ಸರಸವೆ?

೧೪೩೭೬ ಹುಲಿಯ ಕೂಡ ನರಿಗೆ ಸರಸವೆ?

ವಿರಸ

೧೪೩೭೭ ಆಟ ಹೋಗಿ ಗಾಸಿಯಾಯಿತು

೧೪೩೭೮ ದುಂಬಿಗೂ ಹೂವಿಗೂ ವಿರಸವೆ?

೧೪೩೭೯ ನಗೆ ಹೋಗಿ ಹೊಗೆಯಾಯಿತು

೧೪೩೮೦ ಹಾಸಿ ದೀಪವೆಂದು ಮುತ್ತಿಟ್ಟರೆ ಗಡ್ಡ ಮೀಸೆ ಸುಡದೆ?

೧೪೩೮೧ ಮಾಡಿದ್ದು ಮಾಟ, ಆದದ್ದು ಕಾಟ

೧೪೩೮೨ ಮಾಡಿದ್ದು ಹುಡುಗಾಟ, ಆದದ್ದು ದೊಡ್ಡಾಟ

೧೪೩೮೩ [1]ಸರಸ ತಪ್ಪಿದರೆ ವಿರಸ

೧೪೩೮೪ ಸರಸ ಜಿರಸ್ಕೊಂತು, ಹೊಟ್ಟೆ ಬಾತುಕೊಂತು,
ಹಲ್ಲು ಗಿಂಜ್ಕೊಂತು

೧೪೩೮೫ ಸರಸವಾದದ್ದೆಲ್ಲ ವಿರಸಕ್ಕೆ ಹೇತು

೧೪೩೮೬ [2]ಸರಸದ ಗುದ್ದು ಮೈಗೆ ಮಾರಿ

ಚೆಲ್ಲಾಟ

೧೪೩೮೭ ಊರ ಮೇಲೆ ಊಟ, ನೀರ (ನಾಡ) ಮೇಲೆ ಚೆಲ್ಲಾಟ

೧೪೩೮೮ ಚೇಳಿಗೆ ಆಟ, ಕಚ್ಚಿಸಿಕೊಂಡವನಿಗೆ ನೋವು

---

1 ಸರಸ ವಿರಸವಾಗದೆ?

2 ನಗಸಾರದ ಗುದ್ದು ಮೈಗೆ ಊನ

೧೪೩೮೯ [1]ಬೆಕ್ಕಗೆ ಚೆಲ್ಲಾ(ಚಿನ್ನಾ)ಟ, ಇಲಿಗೆ (ಕೊಲ್ಲಾಟ) ಪ್ರಾಣಸಂಕಟ

೧೪೩೯೦ ಮಗುವಿಗೆ ಚೆಲ್ಲಾಟ, ಮುದುಕಿಗೆ ಮರಣಸಂಕಟ

೧೪೩೯೧ ಮುತ್ತಿನ ಕೊಂಡಿಯಿಂದ ಮೊತ್ತಗೆ ಮುಟ್ಟಿದರೆ ಕತ್ತೆ ಹಾಗೆ ಬಾಯಿ ಕಿಸಿದ

೧೪೩೯೨ [2]ಹುಡುಗರಿಗೆ ಚೆಲ್ಲಾಟ, ಕಪ್ಪೆಗೆ ಪ್ರಾಣಸಂಕಟ

ಉಪಾಯ

೧೪೩೯೩ [3]ಅಪಾಯ ಬಂದಾಗ ಉಪಾಯವಿರಬೇಕು

೧೪೩೯೪ ಉಪಾಯವಿದ್ದರೆ ಸಿಪಾಯಿ

೧೪೩೯೫ ಉಪಾಯ ಹೆಚ್ಚೊ, ಊರ ನಾಯಿ ಹೆಚ್ಚೊ

೧೪೩೯೬ ಕಳ್ಳ ಕಳ್ಳ ! ಹುಲಿ ಇರಿ !

೧೪೩೯೭ ಕೋಮಟಿ ಯುಕ್ತಿ

೧೪೩೯೮ ನಯದಿಂದ ಆಗದ್ದು ಭಯದಿಂದ ಆದೀತೆ ?

೧೪೩೯೯ [4]ನರಿ ಯತ್ನ ಮರೆಯತಕ್ಕದ್ದಲ್ಲ

೧೪೪೦೦ ಪಡುವಣ ಮನೆಗೆ ಮೂಡಣ ದೀಪ

೧೪೪೦೧ [5]ಯುಕ್ತಿಯರಿಯದ ಮರುವ ಹೆಂಡತಿ ತಲೆ ಬೋಳಿಸಿದ

---

1 (i) ಕೊತ್ತಿಗೆ ಆಡಗೆಲ್ಸ...
(ii) ಕೊತ್ತಿಗೆ ಚಲ್ಲಾಟ, ಬೆಕ್ಕಿಗೆ ಚಂಗಾಟ

2 ಹುಡುಗರಿಗೆ ಹುಡುಗಾಟ. ಕತ್ತೆಗೆ ಪ್ರಾಣಸಂಕಟ

3 ಉಪಾಯವಿದ್ದರೆ ಅಪಾಯವಿಲ್ಲ

4 ನರಿಯನ್ನ ಮರೆಯೋದೆಲ್ಲಿ ?

5 ಯುಕ್ತಿಗೆಟ್ಟವ್ನ ಹೆಂಡ್ತಿ ತಲೆಬೋಳಿಸಿ, ಯಾಕೊ ನನ್ಹೆಡ್ತಿ ಗಡಪಗತ್ತೆ ಅಂದ್ನಂತೆ

೧೪೪೦೨ ಶಕ್ತಿಗಿಂತ ಯುಕ್ತಿ ಮೇಲು

೧೪೪೦೩ ಶಕ್ತಿಯಿದ್ದವನಾದರೂ ಯುಕ್ತಿ ಇದ್ದವನ ಕೈಕೆಳಗೆ

೧೪೪೦೪ ಶಕ್ತಿಯಿಂದ ಆಗದ್ದು ಯುಕ್ತಿಯಿಂದ ಸಾಧ್ಯ

೧೪೪೦೫ ಹೋಗಬೇಡ ಹೊಗೆ ಹಾಕ್ತೀನಿ

ಉಪಾಯಗಾರ

೧೪೪೦೬ ಉಪಾಯಗಾರನಿಗೆ ಅಪಾಯಗುಣವೇಕೆ ?

೧೪೪೦೭ ಊಟಕ್ಕಿದ್ದೀರೊ ಹಿಂದಿನ ಊರಲ್ಲಿ ಮಾಡಿದ ಹಾಗೆ ಮಾಡಲೊ!

೧೪೪೦೮ ಏಟಿಗೆ ಸಿಕ್ಕ, ಪೋಟಿಗೆ ಸಿಕ್ಕ

೧೪೪೦೯ ಕೈಗೂ ಸಿಕ್ಕುವುದಿಲ್ಲ, ಬಾಯಿಗೂ ಸಿಕ್ಕುವುದಿಲ್ಲ

೧೪೪೧೦ ಗಂಟಿಗೂ ಸಿಕ್ಕುವುದಿಲ್ಲ, ನಂಟಿಗೂ ಸಿಕ್ಕುವುದಿಲ್ಲ

೧೪೪೧೧ ಗಂಡ ಕಿಲಾಡಿ, ಹೆಂಡತಿ ಮಹಾಚತುರೆ

೧೪೪೧೨ ಚಾತುರ್ಯ ಬಲ್ಲವನಿಗೆ ಚಾಚೂ ಚಿಂತಿಲ್ಲ

೧೪೪೧೩ ಬೂದಿಯೊಳಗಿನ ಗಜ್ಜುಗದ ಹಾಗೆ

೧೪೪೧೪ ಯುಕ್ತಿವಂತ ಶುಕ್ರಘುಕ್ತೀಲಿ ಮುಕ್ತಿ ಪಡೆದನಂತೆ

೧೪೪೧೫ ಸೂಳೆ ಕೈಲಿ ಜೋಳ ಕುಟ್ಟಿಸುತ್ತಾನೆ (ಕುಟ್ಟಿಸಿದಂತೆ)

೧೪೪೧೬ 'ಹಿಡಿದ್ಯ ನನ್ನ ಹೊಂಗೇ ಬೇರ' ಅಂತಂತೆ ನರಿ, ಹಾಗೆ

ಸುಲಭೋಪಾಯ

೧೪೪೧೭ ಏವೆ ಮೇಲಾದರೆ ಮೂಗು ಮೇಲಾದೀತು

೧೪೪೧೮ ಕೈ ಎಳೆದರೆ ಮೈ ತಾನಾಗಿ ಬರುತ್ತೆ

೧೪೪೨೯ ಮೂಗು ಒರಸಿದರೆ ಬಾಯಿ ಕೆರೆಯಿತು

೧೪೪೩೦ ಮೋಟು ಮಾಡಿದರೆ ಕೀಳಾಗುವುದು

ಕೊಳಕುತನ

೧೪೪೩೧ ಅಕ್ಕ ಮುಂಬಿ ಕೊಳಕೊಂಡ ಹಾಗೆ

೧೪೪೩೨ ಅಪ್ಪಾರ ಬೊಗಟು, ಅಗಲ ಮುಂದೆ ಗೊಣ್ಣೆ

೧೪೪೩೩ ಊದೋಕಿಲ್ಲದವನು ಮೈಲಿಗೆ ಹೇಸ,
ಉಂಡೋಕಿಲ್ಲದವ ಎಂಜಲಿಗೆ ಹೇಸ

೧೪೪೩೪ ಕಸವಾರಿಗೇಕೆ ದುಮುಕದುಂಡಿ

೧೪೪೩೫ ಕೈಬಿಸ್ಸ ಕಂಟು, ಕೊಳಕು ಮುಕ್ಕನ ನಂಟು

೧೪೪೩೬ ಕೊಳಕು ಮುಚ್ಚಿಗೆ ಕೊಂಗೇರಿ ಮುಡಿ ಕಂಡು ಕೊಂಡೆ ತಾರಿಸು
ಕೊಳಬಡ್ಡಿ

೧೪೪೩೭ ಕೊಳಕಿ ಕೊಂಡೆ ಚಂದ, ಹಾದರಗಿತ್ತಿ ನಡೆ ಚಂದ

೧೪೪೩೮ ಜೊಗಟಿಗಾತಿ ಮನೇಲಿ ಜಗಟು ಮೂಗಂಡುಗ

೧೪೪೩೯ ದೇವರು ಬತ್ತದೆ ಜಾಗಾದ್ರಿ. ಕೊಂಡೆ ತಾರಿಸು ಕೊಳಬಿದ್ರಿ

೧೪೪೪೦ ಬಡತನ ದೇವ್ರು ಕೊಟ್ಟ. ಕೊಳಕುತನ ಯಾರು ಕೊಟ್ರು?

೧೪೪೪೧ ಮೀನು ತಂದರೆ ಮನೆಯೆಲ್ಲ ಹೊಲಸು

೧೪೪೪೨ ಶುಚಿಯಿಲ್ಲ ಕಡಿಮೆಯಾದರೂ ಮಾಡಿ ಹಚ್ಚಿಕೊಳ್ಳುವುದಕ್ಕೆ
ಕಡಿಮೆ ಇಲ್ಲ

೧೪೪೪೩ ಶಾಸ್ತ್ರ ತಿಳಿಯದಿದ್ದರೂ ವಸ್ತ್ರ ಮಡಿ ಆಗಬೇಕೆ?

೧೪೪೪೪ ಶುದ್ಧ ನೋಡಿದರೆ ಸೂಜಾಡೆ,
ಮಚ್ಚಿಗೆ ಕುಡಿಯೋದು ಹಳೆ ಮಡಕೆ

೧೪೪೩೫ ಹಿಂಬಳ ಬುರುಕನಿಗೆ ಕಂಬವೇ ಆಶ್ರಯ

೧೪೪೩೬ ಹತ್ತಿರಕ್ಕೆ ಬಂದರೆ ಹಣಕಿ ನಾತ

೧೪೪೩೭ ಹಲಸು ತಿಂದರೆ ಹೊಲಸು ಹೋದೀತೆ ?

೧೪೪೩೮ 'ಹಲ್ಲುಜ್ಜುವುದು ಯಾವಾಗ ?' 'ಮುಖ ತೊಳೆಯುವಾಗ ?',
'ಮುಖ ತೊಳೆಯುವುದು ಯಾವಾಗ?'
'ಸ್ನಾನ ಮಾಡುವಾಗ?' 'ಸ್ನಾನ ಮಾಡುವುದು ಯಾವಾಗ ?'
'ಅಭ್ಯಂಜನ ಮಾಡುವಾಗ ?' 'ಅಭ್ಯಂಜನ ಯಾವಾಗ?'
'ಉಗಾದಿ ದೀವಳಿಗೆಗೆ'

೧೪೪೩೯ ಹಂದಿ ಮೇಲೆ ಕೂತವ ಹೇಸಿಗೆಗೆ ಅಂಜುತಾನೆ ?

೧೪೪೪೦ ಹಂದಿಗೆ ತನ್ನ ಗಂಜಳದ ಗುಂಡಿಯೇ ಲೋಕ

೧೪೪೪೧ ಹೊಂಚಿಕೆಯಾದ ಕೆಲಸ ಕೆಟ್ಟಹಾಗೆ

೧೪೪೪೨ "ಹೇತು ಬಂದು ಉಣ್ಣಕ್ಕೆ ಕೂತ್ಕಂಡೆಯಾ ?
ಬಟ್ಟಲಲ್ಲಿ ಹೊಟ್ಟಲು ನಾಚಿಕ್ಕೆಂತು ಹೋಗು ನನ್ನ ಕಂ
ಅಂದ್ನಂತೆ

ಪಣ ಕಟ್ಟುವುದು

೧೪೪೪೩ ಪಣ ಕಟ್ಟುವವನ ಹತ್ತಿರ ಹೋಗಬಾರದು,
ಹೆ(ಹ)ಣ ಕಟ್ಟುವವನ ಹತ್ತಿರ ನಿಲ್ಲಬಾರದು

೧೪೪೪೪ ಪಂಚಮ ಕಾಲಿಯುವರ ಕಂಚು ಪಂಥಕ್ಕೆ ಸಿಕ್ಕೀತೆ ?

೧೪೪೪೫ ಪಂಥ ಕಟ್ಟುವವನ ಮುಂದೆ ಶಾಂತವಾಗಿರಬೇಕು

೧೪೪೪೬ ಪಂಥ ಕಟ್ಟಿ ಪಾಂಡವರು ಕೆಟ್ಟರು,
ಹಮ್ಮು ಹಾರಿ ಹರಿ ಬ್ರಹ್ಮರು ಕೆಟ್ಟರು

೧೪೪೪೭ ಪಾಂಡುಪುತ್ರರ ಪ್ರತಿಜ್ಞೆಗೆ ಭಂಗವಾಗಬಾರದು

೧೪೪೪೮ ಹಾಡಿ ಹಾಡಿ ಕೆಟ್ಟಿತು ಕಿವುಡಿ ಕಾಲು ಮುರಿಯಿತು

೧೪೪೪೯ ¹ಊಟಿಗೆ ರಾಟು, ಹೊಳೆ ದಾಟು

೧೪೪೫೦ ಹೊಸಕ್ಕ ಅವ ಹೊತ್ತಿಕೊಂಡ, ಸಕ್ಕರೆ

ದಕ್ಕಿಸಿಕೊಳ್ಳುವುದು

೧೪೪೫೧ ದಕ್ಕ ಹಾಕಿಕೊಳ್ಳುವುದು ಸುಲಭ, ಬಿಚ್ಚಿಕೊಳ್ಳುವುದು ಕಷ್ಟ

೧೪೪೫೨ ದಕ್ಕ ಹಾಕಿಕೊಂಡರೆ ದಕ್ಕೀತೆ ?

೧೪೪೫೩ ದಕ್ಕ ಹಾಕಿಕೊಳ್ಳುವ ದಕ್ಕ ನಡೆಸಬೇಕು

೧೪೪೫೪ ದಕ್ಕಿದ್ದೇ ದಕ್ಷಿಣೆ

೧೪೪೫೫ ದಕ್ಕಿದ್ದೇ ಲಾಭ, ಸಿಕ್ಕಿದ್ದೇ ಊಟ

೧೪೪೫೬ ದಕ್ಕಿಸಿಕೊಳ್ಳುವುದಿದ್ದರೆ ದಕ್ಕಿಸಿ ಮನಸ್ಸು (ಹೆಂಗಸು)

೧೪೪೫೭ ²ಕಟ್ಟಿಗೆ ಕಟ್ಟಿಕೊಳ್ಳುವುದು ಸುಲಭ ದಕ್ಕಿಸಿಕೊಳ್ಳುವುದು ಕಷ್ಟ

ಶುಚಿತ್ವ

೧೪೪೫೮ ಶುಚಿತ್ವವಾಗಿದ್ದವನ ಶುಚಿಗೆ ಯಾವ ಬರಬ್ಬರೆ ?

೧೪೪೫೯ ಶುಚಿತ್ವವಾದವನಿಗೆ ಶುದ್ಧಿ ಏಕೆ ?

೧೪೪೬೦ ನಾಟ್ಯಶ್ಯಕ್ತಿ ನಾಡು ಶುದ್ಧಿ ಮ್ಯಾಗಳು

ಧಾರಣೆಯುಂಟೆ ದೃಷ್ಟಿ

೧೪೪೬೧ ಗಿಡ ಹಾಕಬಾರದಿಗೆ ಕರುಣದ್ದಿಯಾಗ ಬೆಕ್ಕು ಕಾರಿಸುತ್ತದೆ

---

1 ಮಹಾರಾಷ್ಟ್ರದ ಒಂದು ಊರಿನಕೆ ರಾಟು

2 ಕಟ್ಟಿಗೆ ದಕ್ಕಿಸಿಕೊಳ್ಳುವುದು ಕಷ್ಟ

೧೪೪೮೮ ಯಾರೂ ಇಲ್ಲದ, ಊರು ಸೂರೆಯಾದರೇನು ?

೧೪೪೮೯ ಹಾದಿಹೋಕನ ತಲೆ ಒಡೆದು
ಕಟ್ಟೆ ದೇವರಿಗೆ ಪೂಜೆ ಮಾಡಿದರಂತೆ

ನಮ್ಮ ಕೆಲಸಕ್ಕೆ ಯಾರನ್ನೇನು ಕೇಳುವುದು

೧೪೪೯೦ ಅಗ್ನಿಸೊಪ್ಪಿಗೆ ಗೊನ್ನೆ ನಾಯಕನ ಅಪ್ಪಣೆಯೇ ?

೧೪೪೯೧ ಅಂಬಟೆಕಾಯಿ (ಗೊನೆ) ಕೇಳಿ ಉಪ್ಪಿನಕಾಯಿ ಹಾಕ್ತಾರ್ಯೆ ?

೧೪೪೯೨ ಕಂಡದ್ದು ಮಾಡುವುದಕ್ಕೆ ಗುಂಡಪ್ಪನ ಅಪ್ಪಣೆಯೆ ?

೧೪೪೯೩ ಕಚ್ಚೆ ಕಟ್ಟಿದವನು ಉಚ್ಚೆ ಹುಯ್ಯೋಕೆ ತಾವು ಕಾಣ್ನಾ ?

೧೪೪೯೪ ಕುರಿ ಕೇಳಿ ಯಾರೂ ಸಂಭಾರ ಅರೆಯಲ್ಲ

೧೪೪೯೫ ಕೋಳಿ (ಕುರಿ) ಕೇಳಿ (ಮಸಾಲೆ ತೆಗೆಯಬಾರದು)
ಮೆಣಸು (ಮದ್ದು) ಅರೀತ್ಯಾರೆ ?

೧೪೪೯೬ ಕೋಣನ್ನ ಕೇಳಿ ಗದ್ದೆ ಉಳ್ತಾರ್ಯೆ?

೧೪೪೯೭ ದಾರಿ ಮರದ ನೆರಳು ಯಾರದೂ ಅಲ್ಲ

೧೪೪೯೮ ಬಲಿ ಹಾಕುವುದಕ್ಕೆ ಭಕ್ಷಿ ಸಾಹೇಬರ ಅಪ್ಪಣೆಯೇ ?

೧೪೪೯೯ ಬಾಳೆ ಹಣ್ಣು ತಿನ್ನೋಕೆ ಬೋಳಪ್ಪ ನಾಯಕನ ಅಪ್ಪಣೆಯೆ ?

೧೪೫೦೦ ಮೀಸೆ ಹೊತ್ತವನು ದೇಶ ಆಳೋದು ಅರಿಯನಾ ?

೧೪೫೦೧ ಶಾಟ ನೆಚ್ಕೊಂಡು ಹೊಳೆ ಹಾದಾರಾ ?

೧೪೫೦೨ ಹುಡಿ ಹುಯ್ಕೊಳ್ಳೋಕೆ ಹುದ್ದಾರನ ಅಪ್ಪಣೆಯೆ ?

೧೪೫೦೩ [1]ಹೊಳೆ ಕುಡಿಯೋಕೆ ದೋಣೆ ನಾಯಕ
(ದಣ್ಣಾಯಕ, ದೊಣ್ಣಪ್ಪ, ದೊಣೆ ನಾಯಕ, ಡಣಾಯಕ)ನ
ಅಪ್ಪಣೆಯೆ ?

ಬೇಕಾದ್ದು ಪ್ರಿಯ

೧೪೫೦೪ ಪಚ್ಚೆಯನ್ನಾದರೂ ಮೆಚ್ಚಿ ತೆಗೆದುಕೊಳ್ಳಬೇಕು

೧೪೫೦೫ ಬೇಕಾದ್ದುದಕ್ಕೆ ಬೆಲೆ ಹೆಚ್ಚು

೧೪೫೦೬ ಬೇಕಾದದ್ದು ಬೇವಿನಕಾಯಾದ್ರೂ ಬೆಲ್ಲಕ್ಕಿಂತ ಸಿಹಿ

೧೪೫೦೭ [2]ಬೇಕಾದದ್ದೇ ಬೆಲ್ಲ, ಬೇಡವಾದದ್ದೇ ಬೇವು

ಬೇಡಾದ್ದು ಅಪ್ರಿಯ

೧೪೫೦೮ ಅಕ್ಕಿ ಕಂಡರೆ ಬೆಕ್ಕಿಗೆ ಆಸೆಯಿಲ್ಲ,
ಕೆಂಡ ಕಂಡರೆ ನೊಣಕ್ಕೆ ಆಸೆಯಿಲ್ಲ

೧೪೫೦೯ ಅಟ್ಟಕ್ಕೆ ಹಾಕೆ ಅಕ್ಕಿಯಲ್ಲ, ತಿಪ್ಪೆಗೆ ಸುರಿಯೆ ಕಸವಲ್ಲ

೧೪೫೧೦ ಅಡೆ ಮಡಕೆಯಲ್ಲ (ಲ್ಲಿ) ಇಡೆ ಸಟ್ಟುಗವಲ್ಲ (ದಲ್ಲಿ)

೧೪೫೧೧ ಅವಸರಕ್ಕೆ ಒರೋದಲ್ಲ, ಅಡ ಇಡೋದಲ್ಲ,
ಅತ್ತ ನೋಡೋದೇನು ?

೧೪೫೧೨ ಇಷ್ಟವಿಲ್ಲದ ವಸ್ತು ಎಷ್ಟಿದ್ದರೇನು ?

೧೪೫೧೩ ಉಣ್ಣೊ ಮನೆಯಲ್ಲ, ಒರಗೂಗೋದಲ್ಲ

ಬೇಡವಾದ್ದು ಬೇಕಾಯಿತು

೧೪೫೧೪ ಅದೇ ಉಂಡೇನು, ಕದ ತೆಗೇರಿ ಅತ್ತೆಮ್ಮನವರೇ !

---

1 ಕರೆ ನೀರಿಗೆ ದಣಿ ಅಪ್ಪಣೆಯೆ ? ಹೊಳೆ ನೀರಿಗೆ ದೊಣ್ಣೆನಾಯಕನ ಅಪ್ಪಣೆಯೆ ?

2 ಬೇಕಾದುದು ಬೆಲ್ಲದ ಹೇರು, ಬೇಡಾದು ಬೇವು

೧೪೫೧೫ ಹಳೆ (ಗಂಡನ) ಕಂಬಳಿ ಪಾದವೇ ಗತಿ

೧೪೫೧೬ ಹಾಕಿದ್ದ ಹಳೆ ಕಂಬಳಿ ಬೇಕಾಯ್ತು ಚಳಿ (ಹಿಮ) ಗಾಲಕ್ಕೆ

ಏನೂ ಇಲ್ಲದಿರುವುದಕ್ಕಿಂತ ಇದ್ದುದೇ ಲೇಸು

೧೪೫೧೭ ಇಲ್ಲದ್ದಕ್ಕೆ ಹಲ್ಲು ಬೀರ (ಅಲಮಣ್ಣ)ನೇ ಗಂಡ

೧೪೫೧೮ ಕುರುಡುಗಣ್ಣಿಗಿಂತ ಮೆಳ್ಳಗಣ್ಣು ಲೇಸು

೧೪೫೧೯ ಗತಿ ಇಲ್ಲದ್ದಕ್ಕೆ ನೀನೇ ನನ್ನ ಗಂಡ ಅಂದ ಹಾಗೆ

೧೪೫೨೦ ಬರಿ ಕೈಗೆ ಕಡೆಯೋ ಹಿತ್ತಾಳೆ ಕಡಗ

೧೪೫೨೧ ಬಡಿ ಮುಗ್ಗುಲಿಗೆ ಕಡಮೆಯೋ ಬಡವರ ಹುಡು(ಗಿ)ಗ

ಹುಟ್ಟುಗುಣ

೧೪೫೨೨ ಅರೆಯೊ ಕಲ್ಲು ನೆನೆ ಹಾಕಿದ ಹಾಗೆ

೧೪೫೨೩ ಆಲಕ್ಕೆ ಹೂವಿಲ್ಲ, ಬೇವಿಗೆ ಸಿಹಿಯಿಲ್ಲ

೧೪೫೨೪ *ಇದ್ದಲಿನ ಬಣ್ಣ ಕೇಳಿದ ಹಾಗೆ

೧೪೫೨೫ ಉಪ್ಪು ಸಪ್ಪೆಯಾದರೂ ಕ್ಷಾರ (ಖಾರ, ಭಾರ) ಬಿಡದು

೧೪೫೨೬ ಊರೆಲ್ಲ ತೊಳೆದರೂ ಮುಸಿ ಬೆಳ್ಳಗಾಗದು

೧೪೫೨೭ ಎಣ್ಣೆ ಅಳೆದ ಮಾನದಲ್ಲಿ ಜಿಡ್ಡು ಹೋದೀತೆ ?

೧೪೫೨೮ ಕತ್ತೆ ಮರಿ ಅಮ್ಮನ್ನ ಗೀಕನ ಕೇಳಿದ ಹಾಗೆ!

೧೪೫೨೯ ಕಪ್ಪುರ (ಮುಚ್ಚಿಟ್ಟರೆ) ತಿಪ್ಪೆ ಮೇಲಿಟ್ಟರೆ ವಾಸನೆ ಬಿಟ್ಟೀತೆ ?

೧೪೫೩೦ ಕರಿ ನಾಯಿ ಬಿಳಿ ನಾಯಿ ಆದೀತೆ ?

---

* (i) ಇದ್ದಲಿನ ಬಣ್ಣ ಹೇಗಿರುತ್ತೆ ? ಅಂದ ಹಾಗೆ

(ii) ಊರೆಲ್ಲ ಸೇರ್ಕಂಡು ಎತ್ತೆತ್ತಿ ಒಗೆದರೂ ಕಂಬಳಿ ಬೆಳ್ಳಗಾಗದು

೧೪೫೩೧ ಕಲ್ಲನ್ನು ತೇದರೆ ನುಣುಪಾದೀತೆ ಹೊರತು ಮೃದುವಾಗೋದಿಲ್ಲ

೧೪೫೩೨ ಕಸ್ತೂರಿ ಮುಚ್ಚಿಟ್ಟರೂ ಅದರ ವಾಸನೆ ಮುಚ್ಚಿಡೋಕೆ ಆಗುತ್ಯೆ ?

೧೪೫೩೩ ಕೋತಿ ಹೆಂಡ ಕುಡಿಯದಿದ್ದರೂ
ಜಾತಿ ಸ್ವಭಾವದಂತೆ ಕಾರುಬಾರು

೧೪೫೩೪ ಚಿಗುರಾದರೆ ಬೇವು ಸಿಹಿಯೆ ?

೧೪೫೩೫ ಚೆನ್ನಾಗಿ ಕುದಿಸಿದರೂ ಆರಿದ ಮೇಲೆ ನೀರು ತಣ್ಣಗೇ

೧೪೫೩೬ ಜುಟ್ಟು ಕಿತ್ತರೂ ಹುಟ್ಟು ಬಿಡ

೧೪೫೩೭ ಜೊತೆಯಲ್ಲಿ ಹುಟ್ಟಿದ್ದು ಜೋಡಿನಲ್ಲಿ ಹೊಡೆದರೂ ಹೋಗದು

೧೪೫೩೮ ಹುಟ್ಟುಗುಣ ಸುಟ್ಟರೂ ಹೋಗದು

೧೪೫೩೯ ತಿಪ್ಪೆ ಸಾರಿಸಿದರೆ ತೊಪ್ಪೆ ನಾರದೆ ?

೧೪೫೪೦ ತುಂಡು ಮಾಡಿದರೂ ನೀರು ಒಂದಾಗದೆ ಬಿಡದು

೧೪೫೪೧ ತುಂಬೆಯಲ್ಲಿ ಬಿಳುಪಿಲ್ಲ, ಕೊಕ್ಕರೆಯಲ್ಲಿ ತಪ್ಪಿಲ್ಲ

೧೪೫೪೨ ದತ್ತೂರಿ ಹಾಕಿದರೆ ಬಾಳೆಯು ಗಿಡವಾದೀತೆ ?

೧೪೫೪೩ *ನಾಯ ಬಾಲ ಎಂದೂ (ಹೇಗೂ) ಡೊಂಕೇ

---

* (i) ನಾಯಿ ಬಾಲ ನೆಟ್ಟಗೆ ಮಾಡಿದರೆ ನೆಟ್ಟಗಾಗುತ್ಯೆ ?
(ii) ನಾಯಿ ಬಾಲಕ್ಕೆ ಎಣ್ಣೆಯಿಕ್ಕಿದರೆ ನೆಟ್ಟಗಾಗುತ್ಯೆ ?
(iii) ನಾಯಿ ಬಾಲ ನ(ಲ)ಳಿಗೆಯಲ್ಲಿ ಹಾಕಿದರೆ ಡೊಂಕು ಬಿಟ್ಟೀತೆ ?
(iv) ನಾಯಿ ಬಾಲ ಓಟೆಯೊಳಗೆ ಹಾಕಿದರೂ ಡೊಂಕೇ
(v) ನಾಯಿ ಬಾಲಕ್ಕೆ ದೆಬ್ಬೆ ಕಟ್ಟಿದ ಹಾಗೆ

೧೪೫೪೪ ¹ನೀರುಳ್ಳಿ ನೀರಿನಲ್ಲಿ ತೊಳೆದರೆ ನಾರೋದು ಬಿಟ್ಟೀತೆ ?

೧೪೫೪೫ ನೆನೆದ ಕಲ್ಲು ಮೆತ್ತಗಾಗದು

೧೪೫೪೬ ²ಪಂಜರದಲ್ಲಿ ಕಾಗೆ ಇಟ್ಟರೆ ಪಂಚಮ ಸ್ವರ ಬಂದೀ(ಹಾಡೀ)ತೆ ?

೧೪೫೪೭ ಬೇವಿನ ಮರದಲ್ಲಿ ಮಾವಿನ ಫಲ ಬಿಡುತ್ಯೇ ?

೧೪೫೪೮ ಬೇವು ಸಿಹಿಯಾಗದು, ಮಾವು ಕಹಿಯಾಗದು

೧೪೫೪೯ ಮಂಗ ಮುದುಕಾದರೆ ಅಣಕಿಸುವುದು ಬಿಟ್ಟೀತೆ ?

೧೪೫೫೦ ಮೀನಿನ ಮರಿಗೆ ಈಜು ಕಲಿಸಬೇಕೆ?

೧೪೫೫೧ ಮುಡಿವಾ(ಯಾ)ಳ ಮುಪ್ಪಾದರೆ ಪರಿಮಳ ಬಿಡುತ್ಯೆ ?

೧೪೫೫೨ ಸಿಂಹದ ಮರಿಗೆ ಬೇಟೆ ಆಡೋದು ಕಲಿಸಬೇಕೆ ?

೧೪೫೫೩ ಹೀನ ಸುಳಿ ಬೋಳಿಸಿದರೆ ಹೋದೀತೆ ?

೧೪೫೫೪ ³ಹುಟ್ಟಿದಾಗ ಬಂದದ್ದು ಹೂತಾಗ ಹೋದೀತೆ ?

೧೪೫೫೫ ಹುಟ್ಟುಗುಣ ಘ(ಜ)ಟ್ಟ ಹತ್ತಿದರೂ ಹೋಗದು

೧೪೫೫೬ ⁴ಹುಟ್ಟುಗುಣ ಸುಟ್ಟಲ್ಲದೆ ಹೋಗದು

೧೪೫೫೭ ಹುಟ್ಟು(ಬಣ್ಣ)ಗುಣ ಹೋಗಿ ಕಟ್ಟು (ಕೊಟ್ಟ ಬಣ್ಣ) ಗುಣ ಬಂದೀತೆ ?

---

1 ನೀರುಳ್ಳಿಗೆ (ಬೇವಿನಮರಕ್ಕೆ) ಬೆಲ್ಲದ ಕಟ್ಟೆ ಕಟ್ಟಿ, ಹಾಲು, ತುಪ್ಪ ಅಭಿಷೇಕ ಮಾಡಿದರೂ ಅದರ ಪೂರ್ವ ವಾಸನೆ ಹೋಗದು

2 ಕೋಳಿಗೆ ಪಂಚಮಸ್ವರ ಬಂದೀತೆ ?

3 (i) ಹುಟ್ಟುಗುಣ ಹೂಣುವ ತನಕ
(ii) ಹುಟ್ಟುಗುಣ ಹುಗಿದರೂ ಹೋಗದು

4 ಹುಟ್ಟಿನಿಂದ ಬಂದ ಬುದ್ಧಿ ಸುಟ್ಟರೂ ಹೋಗದು

೧೪೫೫೮ ಹುಟ್ಟಿನ ಗುಣವೊ ಹುರುಳಿ ಗುಣವೊ ಕುಂಬಾರ ಮಾಡಿದ ಕುಡಿಕೆ ಗುಣವೊ ?

೧೪೫೫೯ ಹುಟ್ಟು ಗುಣಕ್ಕೆ ಮದ್ದಿಲ್ಲ

೧೪೫೬೦ ಹುಣಿಸೆ ಮುಪ್ಪಾದರೂ ಹುಳಿ ಬಿಡದು, ಮಾವು ಮುಪ್ಪಾದರೂ ಸಿಹಿ ಬಿಡದು

೧೪೫೬೧ ಹೂಸೊ ತಿಕ ದೇಶ ತಿರುಗಿದರೂ (ಕಾಶಿಗೆ ಹೋದ್ರೂ) ಡರ್ರ್ರಾಬುರ್ರ್ರಾನೆ

ಕಲಿತ ಚಾಳಿ

೧೪೫೬೨ 'ಅಲ್ಲ ಮೂಳ' ಅಂದರೆ 'ಗುಡಿ ಓಂದಾವರೂ ಕುಣಿದೇನು' ಅಂದ

೧೪೫೬೩ ಇದ್ದದ್ದು ಕಳಕೊಂಡಲ್ಲದೆ ಕಲಿತ ಬುದ್ಧಿ ಬಿಡದು

೧೪೫೬೪ ಎಂದಿನ ಚಾಳಿ ಎಂದಿನಂತೆ

೧೪೫೬೫ ಕಡೆಗೂ ಬಿಡಲಿಲ್ಲ, ಕಾಲಕ್ಕೂ ಬಿಡಲಿಲ್ಲ, ಕಾಲ ಮೇಲೆ ಉಚ್ಚೆ ಹುಯ್ಕೊಳ್ಳೋದ

೧೪೫೬೬ ಕಲಿತ ಗುಣ ಕಟ್ಟೇಲಿ

೧೪೫೬೭ ಕಲಿತ ಚಾಳಿ ಕಾಡಿಗೆ ಹೋದ(ಕಲ್ಲು ಹಾಕಿದ)ರೂ ಹೋಗದು

೧೪೫೬೮ ಕಲಿತ ಚಾಳಿ ಬಿಟ್ಟರೆ ಹೋಗದು

೧೪೫೬೯ ಕಲಿತ ಬುದ್ಧಿ ಕಳೆಯೋವಿಲ್ಲ

೧೪೫೭೦ ಕಲಿತದ್ದು ಕಟ್ಟಿಗೆಯ ಮೇಲೆ

೧೪೫೭೧ [1]"ಕಲಿತ ಬುದ್ಧಿ ಬಿಡೆ ಕಲ(ಲಿ)ಕೇತಿ" (ಕಳ್ಳಮುಂಡೆ, ಕಳ್ಳಲಿಪ್ಪಡಿ) ಅಂದರೆ "ನಡುಗಾಲ(ಎಡಾಂತರ)ದಲ್ಲಿ ಬುಟ್ಟು ಹುಡಿಮಣ್ಣು ಹುಯ್ಕೊಳ್ಳಾ !" ಅಂದಳು

೧೪೫೭೨ ಕಲಿತ(ಪಟು) ಬಿದ್ದಿ ಹಾಡದೆ ಬಿಡ್ತಾಳ್ಯೇ ?

೧೪೫೭೩ ಚಿಕ್ಕಪ್ರಾಯದಲ್ಲಿ ಕಲಿತ ಚಾಳಿ, ಮುಪ್ಪಿನಲ್ಲಿ ಕಲಿತ ಸೂಳೆ ಬಿಡುವುದುಂಟೆ ?

೧೪೫೭೪ [2]ದುಪಟಿಗೆ ಹತ್ತಿದ್ರೆ ಒಗೆದರೆ ಹೋಗ್ತದೆ, ಕಂಬಳಿಗೆ ಹತ್ತಿದರೆ ಹೆಂಗ್ಹೋದಾತು ?

೧೪೫೭೫ ನೀ ಕಲ್ತಿರೋದು ನಿಂಗೂ ಆಯ್ತದೆ, ನಿನ್ನೂರ್ಗೂ ಆಯ್ತದೆ

೧೪೫೭೬ ಹೇಳಿದ್ದು ಕೇಳಲ್ಲ, ಕಲಿತದ್ದು ಬಿಡಲ್ಲ

೧೪೫೭೭ ಹೊಲೆಯನಿಗೆ ಗೌಡ್ಕೆ ಕೊಟ್ರೆ ಕೊಂಬು ಕಹಳೆ ಊದಿದನಂತೆ

ಹೊಕ್ಕಾದವೆ ಜನರ ಗುಣಸ್ವಭಾವ ತಿಳಿಯದು

೧೪೫೭೮ ಊರೊಳಗೆ ಆಡುವ ತನಕ ಗುಣ ತಿಳಿಯು, ನೀರೊಳಗೆ ಆಡುವತನಕ ನೆಲ ತಿಳಿಯು

೧೪೫೭೯ ನರರ ಸಂಗಡ ಇದ್ದನಕ ತಿಳಿಯು, ನೀರಿಳಿವ ತನಕ ತಿಳಿಯ

---

1 (i) "ಕಲಿತ ಬುದ್ಧಿ ಬಿಡ್ತೀಯಾ ಕಲಿ(ಲ)ಕಾತಿ" ಅಂದರೆ "ಊರಾದ್ರೂ ಬಿಟ್ಟೇನು ಕಲಿತದ್ದು ಬಿಡೋದಿಲ್ಲ" ಅಂದಳು

(ii) ಕಲಿತದ್ದು ಬಿಡಲಾರೆ, ಕೂಡಿದ ಗಂಡನನ್ನಾದರೂ ಬಿಟ್ಟೇನು

(iii) "ಕಲಿತದ್ದು ಬಿಡ್ತೀಯೊ, ಮಾಡಿಕೊಂಡ ಹೆಂಡ್ತಿ ಬಿಡ್ತೀಯೊ ?" ಅಂದರೆ "ಮಾಡಿಕೊಂಡ ಹೆಂಡ್ತೀನಾದ್ರೂ ಬಿಟ್ಟೇನು, ಕಲಿತದ್ದು ಬಿಡಲ್ಲ" ಅಂದನಂತೆ

(iv) "ಗುಣ ಬಿಡೆ (ಗುಂಡುಮುಂಡೆ) ಗುಣಗೇಡಿ" ಅಂದರೆ ನನ್ನ ಮದುವೆ ಗಂಡನ್ನ ಬಿಟ್ಟೇನು, ಗುಣ ಬಿಡೆ" ಅಂದಳಂತೆ

(v) 'ಕಲ್ತದ್ದುಬಿಡೆ ಕಲ್ಕೆಟ್ಟಿ' ಅಂದ್ರೆ 'ಕತ್ತೂದ್ರೂ ಬಿಡದಿಲ್ಲ' ಅಂದ್ಲಂತೆ

2 ಕಂಬಳಿಗೆ ಹತ್ತಿದ್ದನ್ನ ಬಿವರಬಹುದು, ದುಪಟಿಗೆ ಹತ್ತಿದ್ದು ?

೧೪೫೮೦ ಬಾವಿ ಆಳ ಇಳಿದು ನೋಡು, ಮನುಷ್ಯನ ಗುಣ ತಿಳಿದು ನೋಡು

೧೪೫೮೧ [1]ಮಡಕೆ ಅನ್ನಕ್ಕೆ ಒಂದಗುಳು ಪರೀಕ್ಷೆ

೧೪೫೮೨ ಶೀಲ ಒಳ್ಳೇದು ಗುಣ ಕೆಟ್ಟದ್ದು

೧೪೫೮೩ ಸಕಲ ಗುಣ ಸಂಪನ್ನ, ಏಕಗುಣ ಹೀನ, ಅವಗುಣ ಪರಿಪೂರ್ಣ

೧೪೫೮೪ ಸಮುದ್ರದ ಆಳ ತಿಳೀಬಹುದು, ಮನುಷ್ಯನ ಆಳ ತಿಳಿಯಲಿಕ್ಕಾಗಲ್ಲ

೧೪೫೮೫ ಸ್ವಭಾವ ತಿಳಿದರೆ ನಿಭಾಯಿಸಬಹುದು

೧೪೫೮೬ ಸ್ವರೂಪ ತಿಳಿದರೂ ಸ್ವಭಾವ ತಿಳಿಯಲಿಲ್ಲ

ದೂರದಲ್ಲಿ ಎಲ್ಲರೂ ಒಳ್ಳೆಯವರೇ

೧೪೫೮೭ ಅಲ್ಲಲ್ಲಿ ಕಂಡರೆ ಹಲ್ಲೆಲ್ಲ ಬೆಳ್ಳಗೆ

೧೪೫೮೮ ಚಂದ್ರಬಿಂಬ ದೂರಕ್ಕೆ ಚೆನ್ನ

೧೪೫೮೯ ಥಳಥಳಿಸುವುದೆಲ್ಲ ಚಿನ್ನವಲ್ಲ

೧೪೫೯೦ [2]ದೂರದ ಬೆಟ್ಟ ನುಣ್ಣಗೆ, ದೂರದ ಕೆಂಡ ತಣ್ಣಗೆ

---

1 (i) ಅಗುಳು ಹಿಸುಕಿ ಅನ್ನ ನೋಡು
(ii) ಅಗುಳಿನ ಮೇಲೆ ಅನ್ನದ ಪರೀಕ್ಷೆ
(iii) ಒಂದಗುಳು ನೋಡಿವರೆ ತಿಳಿದೀತು ಬೆಂದಿರುವುದು, ಇಲ್ಲದ್ದು
(iv) ಒಂದು ತಪ್ಪಲೆಗೆ ಒಂದೇ ಅಗುಳು
(v) ಹರಿವೆಯ ಅನ್ನದಲ್ಲಿ ಒಂದಗುಳು ನೋಡಿದರೆ ಸರಿ

2 (i) ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ, ಹತ್ತಿರದ ಬೆಟ್ಟ ತರಕಲು
(ii) ದೂರದಲ್ಲೇ ಗುಡ್ಡ ನುಣ್ಣಗೆ, ಹತ್ತಿರಕ್ಕೆ ಹೋದರೆ ಒಡಕಲಾತ
(iii) ದೂರದ ಬೆಟ್ಟ ನುಣ್ಣಗೆ, ಕೋಣೆ ಮಜ್ಜಿಗೆ ಬೆಳ್ಳಗೆ

೧೪೫೯೧ *ಬೆಳ್ಳಗಿರೋದೆಲ್ಲ ಹಾಲಲ್ಲ, ಹೊಳೆಯೋದೆಲ್ಲ (ಹೊನ್ನಲ್ಲ) ಬಂಗಾರವಲ್ಲ

೧೪೫೯೨ ಹತ್ತುವ ಬೆಟ್ಟದ ತುಂಬ ಬಂಡೆ

೧೪೫೯೩ ಹರಿದಾಡುವ ಮುನ್ನ ಹಾವು ನೆಟ್ಟಗೆ

೧೪೫೯೪ ಹತ್ತಿರಕ್ಕೆ ಬರುವವರೆಗೆ ಎಲ್ಲರೂ ಒಳ್ಳೆಯವರೇ

೧೪೫೯೫ ಹೊಳೆಯ ಆಚೆಗಿನ ಹಸುರು, ನೋಟಕ್ಕೆ ಬಲು ಹಸ

---

* (i) ಬೆಳ್ಳಗಿರುವುದೆಲ್ಲ ಹಾಲಲ್ಲ, ತೆಳ್ಳಗಿರುವುದೆಲ್ಲ (ನೀರಲ್ಲ) ಹೆಣ್ಣಲ್ಲ
(ii) ಹೊಳೆಯುವುದೆಲ್ಲ ಹೊನ್ನಲ್ಲ (ಹಸುರಲ್ಲ ಹುಲ್ಲಲ್ಲ), ಬೆಳ್ಳಗಿರುವುದೆಲ್ಲ ಬೆಳ್ಳಿಯಲ್ಲ
(iii) ಬೆಳ್ಳಗಿರುವುದೆಲ್ಲ ಬೆಳ್ಳಿಯಲ್ಲ, ಕಪ್ಪಗಿರುವುದೆಲ್ಲ ವಿಷವಲ್ಲ

೮. ಸಂಕೀರ್ಣ

ಅನುಭವ ವೇದ್ಯ

೧೪೫೯೬ ಒಡಿದವನೇ ಬಲ್ಲ ತೊಡೆ ನೋವ

೧೪೫೯೭ ಬಲ್ಲವನೇ ಬಲ್ಲ ಬೆನ್ನಿನ ಬಿಗಿತವ

೧೪೫೯೮ [1]ಬಲ್ಲವನೇ ಬಲ್ಲ ಬೆಲ್ಲದ ಸವಿಯ

೧೪೫೯೯ ಬಂಜೆ ಬೇನೆಯರಿಯಳು, ಮುಂಡೆ ದುಃಖ ಅರಿಯಳು

೧೪೬೦೦ [2]ಗೊಡ್ಡಿಗೇನು ಗೊತ್ತು ಹೆರಿಗೆ ಸಂಕಟ ?

೧೪೬೦೧ [3]ಮೂಕನ ಸ್ವಪ್ನ ಹೇಳಲಿಕ್ಕೆ ಬಾರದು, ಹೇಳದೆ ತೀರದು

೧೪೬೦೨ ಹೆಡೆ ತುಳಿಸಿಕೊಂಡ ನಾಯಿಗೆ ಆದರ ನೋವು ಗೊತ್ತು

---

1 ಬೆಲ್ಲದ ಸವಿ ತಿಂದ ಹೊರತೂ ತಿಳೀದು

2 (i) ಗೊಡ್ಡಿ ಹೆರ್ಬೇನೆ ಹೇಳ್ದಂಗೆ

(ii) ಬಂಜೆ ಬಲ್ಲಳೆ ಹೆರಿಗೆ ನೋವ ?

(iii) ಬಂಜೆಗೇಕೆ ಹೆರು ದುಃಖ ?

(iv) ಮಕ್ಕಳ ಹೆತ್ತವರಿಗೆ ಗೊತ್ತು ಹೆರಿಗೆ ಬೇನೆ

(v) ಹೆತ್ತವಳೇ ಬಲ್ಲಳು ಹೆರಿಗೆ ನೋವ

(vi) ಹೆರಿಗೆ ದುಃಖ ಬಂಜೆ ಮುಂಡೆ ಬಲ್ಲಳೆ ?

3 (i) ಮೂಕ ಕಂಡ ಕನಸಿನಂತೆ

(ii) ಮೂಗನ ಕನಸು ಮೂಗನೇ ಬಲ್ಲ

(iii) ಮೂಗ ಕಂಡ ಕನಸ ಮೂರು ಲೋಕಕ್ಕೂ ಹೇಳಿದ

(iv) ಮೂಕ ತಿಂದ ಹೋಳಿಗೆಯಂತೆ

ಅಂತರಾಳ ಪರಿಸ್ಥಿತಿ

೧೪೬೦೩ ಅಂತರ ಪಿಶಾಚಿ ಹಾಗೆ

೧೪೬೦೪ ಉಭಯ ಭ್ರಷ್ಟರಾದವರಿಗೆ ತ್ರಿಶಂಕು ಸ್ವರ್ಗವೇ ಗತಿ

೧೪೬೦೫ ಎರಡೂ ಕೆಟ್ಟು ಕರಡಿ ಹೊಲೆಯಾದ

೧೪೬೦೬ ದೋಣಿ ಮೇಲೆ ಒಂದು ಕಾಲು, ದಡದ ಮೇಲೆ ಒಂದು ಕಾಲು ಹಾಕಿದ ಹಾಗಿದೆ ನನ್ನ ಸ್ಥಿತಿ

೧೪೬೦೭ ಜಾಣಂತಿ ಸೂಳೆ ಹಾಗೆ–ಅತ್ತಲೂ ಸುಖವಿಲ್ಲ, ಇತ್ತಲೂ ಸುಖವಿಲ್ಲ

೧೪೬೦೮ ಮನೆಯೂ ಕುಸೀತು, ಹಗೇವೂ ಕುಸೀತು

೧೪೬೦೯ ಸ್ವರ್ಗವೂ ತಪ್ಪಿತು, ದುರ್ಗವೂ ತಪ್ಪಿತು

ಅಸಂಭಾವ್ಯ

೧೪೬೧೦ ಅಟ್ಟಕ್ಕೆ ತಗುಲದ್ದು ಆಕಾಶಕ್ಕೆ ನಿಲುಕೀತೆ ?

೧೪೬೧೧ ಅನ್ನ ಇಲ್ಲದವನು ಹೊನ್ನು ಕೊಟ್ಟಾನೆ ?

೧೪೬೧೨ ಅಟ್ಟಕ್ಕೆ ಹಾರಲಾರದ ಬಡ್ಡಿ ಸ್ವರ್ಗಕ್ಕೆ ಹಾರಿದಳಂತೆ

೧೪೬೧೩ ಅಮೃತಕ್ಕೆ ಹಸಿವುಂಟೆ ? ಜಲಕ್ಕೆ ತೃಷೆಯುಂಟೆ ?

೧೪೬೧೪ ಅಮಾಸೇಲಿ ಚಂದ್ರನೇ ?

೧೪೬೧೫ ಆಕಾಶಕ್ಕೆ ಹಚ್ಚಡ ಹೊದಿಸಲಾದೀತೆ ?

೧೪೬೧೬ ಆನೆಯನ್ನು ತಬ್ಬಿದ ಹಾಗೆ

೧೪೬೧೭ ಆನೆ ಬೆಂಡಾ (ಕೃಶವಾ)ದರೆ ಕೊಟ್ಟಿಗೆ ಹೊಕ್ಕೀತೆ ?

೧೪೬೧೮ ಆನೆ ಸಿಕ್ಕಿದರೆ ಕೊಟ್ಟಿಗೇಲಿ ಕಟ್ಟಬಹುದೆ ?

೧೪೬೧೯ ಇರ್ಚಿ ಎತ್ತಿ ಗಾಡಿ ಮೇಲೆ ಇಟ್ಕೊಂಡು ನಡಿ ಅಂದ ಹಾಗೆ

೧೪೬೨೦ ಈಚೆಯಿಂದ ಆಚೆಗೆ ಹೋಗಬೇಕಾದರೆ ಮೋಚೆಯಿಂದ ಆದೀತೆ?

೧೪೬೨೧ ಈಳಿಗೆ ಮಣೆ ಮೇಲೆಗೋಗರವಾದೀತೆ ?

೧೪೬೨೨ ಉಸುಬಿನಲ್ಲಿ ಓಡಿದ ಹಾಗೆ

೧೪೬೨೩ ಎಣ್ಣೆ ತಣ್ಣಗಾದರೆ ಬೆಣ್ಣೆ ಬಂದೀತೆ ?

೧೪೬೨೪ ಎದುರಿಸೊ ಮರವನ್ನು ಕಿತ್ತೊಗೆಯುವ ಗಾಳಿ
ಮಲಗಿದ ಹುಲ್ಲನ್ನು ಕಿತ್ತೀತೆ ?

೧೪೬೨೫ ಎರಡೂ ಕಪ್ಪುಗಳಾದರೆ ಒಂದು ಬಿಳಿ ಆಗುತ್ಯೇ?

೧೪೬೨೬ ಒನಕೆ ಮುಂಡಿ ಚಿಗುರಿದ ಹಾಗೆ

೧೪೬೨೭ ಒಡೆಯ ಬಂದರೂ ಒಡೆದ ಪಾತ್ರೆ ಕೂಡಲಿಲ್ಲ

೧೪೬೨೮ ಒರಳಲ್ಲಿ (ಮರಳಲ್ಲಿ) ಹರಳು ಹುರಿದರೆ (ಅರಳು) ಆದೀತೆ ?

೧೪೬೨೯ ಓಡಿಗೆ ಹಲ್ಲು ಬಿಟ್ಟರೆ ಮುಖ ಕಾಣುತ್ಯೆ ?

೧೪೬೩೦ ಕಡಲೆ ತಿನ್ನುವ ಯೋಗ್ಯತೆ ಕಲ್ಲು ತಿನ್ನಲು ಬಂದೀತೊ ?

೧೪೬೩೧ ಕತ್ತೆಗೆ ಕುದುರೆ ಸೋದರ ಮಾವನೆ ?

೧೪೬೩೨ ಕನ್ನಡಿಯ ನೋಟ ಓಡಿನೊಳಗುಂಟೊ ?

೧೪೬೩೩ ಕಪ್ಪೆಯ ಚಿಪ್ಪ ಮುತ್ತು ಅಂದ ಹಾಗೆ

೧೪೬೩೪ ಕರೆದರೆ ಬಾರದ್ದು (ಕರೆಯದ ನಾಯಿ) ಕೈಸನ್ನೆಗೆ ಬಂದೀತೇ ?

೧೪೬೩೫ ಕರೆದರೂ ಬಾರದವನು ಕಣ್ಣು ಸನ್ನೆಗೆ ಬಂದ

೧೪೬೩೬ ಕಲ್ಪತರು ಬೇರು ಸಹಿತ ಎದ್ದು ಬರಲು ಸಾಧ್ಯವೆ ?

೧೪೬೩೭ ಕಲ್ಲಿನಲ್ಲಿ ಕಿಡಿ ಹುಟ್ಟೀತಲ್ಲದೆ ನೀರು ಸುಳಿದೀತೆ ?

೧೪೬೩೮ ಕಾಗೆ ಕಪ್ಪಗಿದ್ದರೆ ಕೋಗಿಲೆ ಆದೀತೆ ?

೧೪೬೩೯ ಕಾಡು ಕೋಣದ ಹಿಮ್ಮಡಿ ಓಡಿಯೋ ಕಾದೀತೆ ?

೧೪೬೪೦ ಕಾದ ನೀರು ಮನೆ ಸುಡಲಾರದು

೧೪೬೪೧ ಕಾದ ಹಾಲು ಕಹಿಯಾದೀತೆ ?

೧೪೬೪೨ ಕುಣಿದರೆ ಕೂಳು ಬೆಂದೀತೆ ?

೧೪೬೪೩ ಕುತ್ತರಿಗೆ ಜೇಕಿ ಹತ್ತಲು ಬತ್ತೇರಿಗೆ ಓಡಿ ಹೋದರೆ ನಂದೀತೆ ?

೧೪೬೪೪ ಕುದುರೆಗೆ ಕೊಂಬು ಹುಟ್ಟಿದ ಹಾಗೆ

೧೪೬೪೫ ಕುಪ್ಪಟೆಯೊಳಗೆ ತಾವರೆ ಗಡ್ಡೆ ಹುಟ್ಟುತ್ಯೇ ?

೧೪೬೪೬ ಕೂಗಟೆ ಹಣ್ಣಾದರೆ ಜಾಗಟೆ ಬಾರಿಸುವುದಕ್ಕಾದೀತೆ ?

೧೪೬೪೭ [1]ಕೆಂಡಕ್ಕೆ ಇರುವೆ (ಗೆದ್ದಲು ಹಿಡಿಯುವುದೋ ?)ಮುತ್ತೀತೆ?

೧೪೬೪೮ [2]ಕೊರಡು ಕೊನರಾಗ ಬಲ್ಲುದೆ ? ಬರಡು ಹಯನಾಗ ಬಲ್ಲುದೆ ?

೧೪೬೪೯ ಕೊರಳ ಮಟ್ಟಿಗೂ ಹೂಳಿ
'ಮುಗಿಲ ಮಟ್ಟಿಗೂ ಹಾರು' ಅಂದ ಹಾಗೆ

೧೪೬೫೦ ಗಂಧ ತೇಯುವಲ್ಲಿ ನೊಣದ ಉಪಟಳವೆ ?

೧೪೬೫೧ ಗಾಳಿ ಬೆವರೀತೆ ?

೧೪೬೫೨ ಗಾಳಿಯಿಂದ ಧೂಳು ಹಾರಿದರೆ ಕೋಳಿ ಹೊಟ್ಟೆ ತುಂಬೀತೆ ?

೧೪೬೫೩ ಗುಬ್ಬಿ ಎಣ್ಣೆ (ಕುಡಿದರೆ) ಬೀಸುವ ಕಲ್ಲು ತೋಯಿಸೀತೆ ?

---

1 ಕಿಚ್ಚಿಗೆ ಇರುವೆ ಮುತ್ತೀತೆ ?

2 ಕೊರಡು ಕೊನರಿದ ಹಾಗೆ

೧೪೬೫೪ *ಗುಂಚಕ್ಕಿ ಎಣ್ಣೆ ಕುಡಿದರೆ ಗಾಣ ತೆಗೆಯು ಬಲ್ಲುದೆ ?

೧೪೬೫೫ ಗುಂಪು (ಸೈನ್ಯ) ದಾಟಿಸೋಕೆ ತೆಪ್ಪವೇ ?

೧೪೬೫೬ ಗೊಂಬೆ ಮಾತಾಡದು, ರಂಭೆ ಕಾಣಸಿಕ್ಕಳು

೧೪೬೫೭ ಗೋಡೆ ಇಲ್ಲದೆ ಚಿತ್ರ ಬರೆದಂತೆ

೧೪೬೫೮ 'ಚಂಗ್' ಅಂತ ನೆಗೆದರೆ 'ಮಂಗ' ಅಂತ ಕರೆಯೋಕಾದೀತೆ ?

೧೪೬೫೯ ಚೂರಿ ಹರಿತವಾದರೆ ಮರ ಹರಿಯುಬಲ್ಲದೆ ?

೧೪೬೬೦ ಡಂಗು ಹೊಡೆದರೆ ಹೊಂಗರಕನ ಮರ (ಕೇಳೀತೊ) ಚಿಗುರೀತೆ ?

೧೪೬೬೧ ತಪ್ಪಲೆಯಲ್ಲಿದ್ದದ್ದು ಹೋದರೆ
ಕಪಾಲದಲ್ಲಿ ಇದ್ದದ್ದು ಹೋದೀತೆ ?

೧೪೬೬೨ ತಳ ಬಿಟ್ಟು ಬಂಡಿ ಹಾರದು .

೧೪೬೬೩ ತಂಗಾಳಿ ನೆನೆದರೆ ತಂಗುಳು ಬಿಸಿಯಾಯ್ತೆ ?

೧೪೬೬೪ ತಿಪ್ಪೆ ಮೇಲಿನ ದೀಪ ಉಪ್ಪರಿಗೆ ಮೇಲೆ ಬಂದೀತೆ ?

೧೪೬೬೫ ತುಟಿ ಮೇಲೆ ದೀಪ ಹಚ್ಚಿದ ಹಾಗೆ

೧೪೬೬೬ ತುತ್ತ ತುದಿಗೆ ನೆಗೀತೀನಿ ಅಂದ ಹಾಗೆ

೧೪೬೬೭ ತುತೂರಿ ಊದಿದರೆ ತುಬಟ ಉಮರೀತೆ ?

೧೪೬೬೮ ತೂಗೋ ತೊಟ್ಲು ಬೆಟ್ಟಕ್ಕೆ ಕಟ್ಟೋಕಾಗುತ್ತೇ ?

೧೪೬೬೯ ತೇಜಿ ನೀರ ಓಟಿ ಅಡೀಲಿ ಬಿಟ್ಟರೆ ಕಾಟ ಬಂದೀತೆ ?

೧೪೬೭೦ ತೇಜವಿದ್ದದ್ದು (ಮಾಜ ಕೂಡೀತೆ ?) ಮರೆಮಾಜೀತೆ ?

೧೪೬೭೧ ತೊಟ್ಟು ಮುರಿದಡಿ ಅಟ್ಟಿದರೆ ಹೋಗಿ ತಟ್ಟೀತೆ ?

---

* ಗುಂಚಕ್ಕಿ ಎಂತ ಕುದಿದರೆ ರಾಗಿ ಕಲ್ಲು ಎಳೆಯುತ್ತೇ ?

೧೪೬೭೨ ತೊಪ್ಪೆ ಒರುವುದೇ ಹೆಪ್ಪಿಗೆ ?

೧೪೬೭೩ ತೊಂಡೆ ಬಲಿತರೆ ತೊಡೆ ದಪ್ಪವಾದೀತೆ ?

೧೪೬೭೪ ದಂಟು ಮುರಿದರೆ ಕಂಟವಾದೀತೆ ?

೧೪೬೭೫ ದನದ ವರ್ಣ ಹಾಲಿನಲ್ಲಿ ತಿಳಿದೀತೆ ?

೧೪೬೭೬ ದವನದ ಹೂವೆಂದಾಕ್ಷಣ ಪವನವಾದೀತೆ ?

೧೪೬೭೭ ದಮ್ಮಯ್ಯ ಅಂದರೆ ಕೋಣ ಹಾಲು ಕರೆದೀತೆ ?

೧೪೬೭೮ ದಾಸಾಣದ ಹೂ ಪಾಷಾಣದ ಮೇಲೆ ಬೆಳೆದೀತೆ ?

೧೪೬೭೯ ದಿಂಡು ದಪ್ಪದ ಹಾಗಿದ್ದರೂ ದಂಡಿಗೆಗೆ ಬಂದೀತೆ ?

೧೪೬೮೦ ದೊಣ್ಣೆ ಹಿಂಡಿದರೆ ಎಣ್ಣೆ ಬಂದೀತೆ ?

೧೪೬೮೧ ದೊಬ್ಬಿ ಹಾಕಬಹುದೆ ಹುಬ್ಬನ್ನು ?

೧೪೬೮೨ ಧೂಳಿಯಿಂದ ಹೋಳಿಗೆ ಆದೀತೊ ?

೧೪೬೮೩ ನಡುಕಟ್ಟಿ ಮಡು ಹಾರಲಿಕ್ಕಾದೀತೆ ?

೧೪೬೮೪ ನದಿಯಲ್ಲಿರುವ ಮೀನು ನೀರ ನೋಡುತ್ತ್ಯೆ ?

೧೪೬೮೫ ನರಳಿದರೆ ಅರಳು ಸಿಕ್ಕೀತೆ ?

೧೪೬೮೬ ನಾಗಮಲ್ಲಿಗೆ ಹೂ ಪೂಗವಾದೀತೆ ?

೧೪೬೮೭ ನಾಯಿ ಅಟ್ಟೆ ಕಡಿದರೆ ಹೋಳಿಗೆಯಾದೀತೆ ?

೧೪೬೮೮ ನಾಯಿ ಎಲೆ ತೊಪ್ಪಲು ತಿನ್ನುತ್ಯೇ ?

೧೪೬೮೯ ನಾಯಿ ಮುದಿಯಾದರೆ ರಾಗ ಹಾಡೀತೆ ?

೧೪೬೯೦ ನಾವೆ ದಾಟಿಸಲು ನಾಳದಿಂದ ಆದೀತೆ ?

೧೪೬೯೧ ನಿಮ್ಮ ಚಿತ್ತ ದುಡಿಯಬೇಕಾದರೆ ನಮ್ಮ ಸತ್ತೆಮ್ಮೆ ಬರಬೇಕು

೧೪೬೯೨ ನಿಮಿಷ ತಡೆದರೆ ಅನಿಮಿಷನಾಗ್ತಾನ್ಯೇ ?

೧೪೬೯೩ ನುಚ್ಚಕ್ಕಿಗೆ ಮೊಳೆ ಬಂದ ಹಾಗೆ

೧೪೬೯೪ ನುಲಿಕೆ ಹರಿಯದವ ಚಿಲಕ ಹೆರಿದಾನೇ ?

೧೪೬೯೫ ನೂಲ ಹಿಡಿದು ಬೆಟ್ಟ ಹತ್ತಿದಂತೆ

೧೪೬೯೬ ನೆಗಳಿ ಹಾರಿದರೆ ಮುಗಿಲಿಗೆ ಮುಟ್ಟೀತೆ ?

೧೪೬೯೭ ನೆಗ್ಗಿದ್ದು ಬಗ್ಗೀತೆ ?

೧೪೬೯೮ ನೆಟ್ಟ ಕಲ್ಲು ನಿಟ್ಟೋಟ ಓಡೀತೆ ?

೧೪೬೯೯ ನೆತ್ತಿಯ ವಾಸನಿಸಿದರೆ ಸತ್ತಿಗೆ ಹಿಡಿದ ಹಾಗೆಯೆ ?

೧೪೭೦೦ ನೆಲದಲ್ಲಿದ್ದ ಬೆಕ್ಕು ಮುಗಿಲಿಗೆ ಹಾರೀತೆ ?

೧೪೭೦೧ ನೆಲ್ಲಿಕಾಯಿ ಹುಲ್ಲ್ಗೆ ಆದೀತೆ ?

೧೪೭೦೨ ನೆವದಿಂದ ಹೋದರೆ ನೋವು ತಪ್ಪೀತೆ ?

೧೪೭೦೩ ನೊಣ ಮಣುವಾದೀತೆ ?

೧೪೭೦೪ ನೊರೆ ಕಾರುವಾಗ್ಗೆ 'ಹರ' ಅಂದರೆ ಬಿಟ್ಟೀತೆ ?

೧೪೭೦೫ ನೋಡದ ವಸ್ತು ಆಶಿದರೆ ಬಂದೀತೆ ?

೧೪೭೦೬ ಪಟ ಹಾರಿದರೆ ಮಠ ಹಾರೀತೆ ?

೧೪೭೦೭ ಪತ್ನಿಯಿದ್ದವನು ಯತ್ನ ಮಾಡಿದರೆ ರತ್ನ ಸಿಕ್ಕೀತೆ ?

೧೪೭೦೮ ಪಯಸ್ವಿನಿ (ಪಯಸ್ವಿನ) ನದಿಗೆ ಹೋದರೆ ಪಾಯಸ ಸಿಕ್ಕೀತೆ ?

೧೪೭೦೯ ಪರಕೆ ಕಡ್ಡೀಲಿ ಪರ್ವತ ಮಾಡ್ತೀನಿ ಅಂತ ಅಂದಂಗೆ

೧೪೭೧೦ ಪಂಜು ಸುಟ್ಟರೆ ಮಂಜು ಹೋದೀತೆ ?

೧೪೭೧೧ ಪಾತಾಳದ ನೀರು ಪತ್ರ ಮೊಡೆದರೆ ಬರುತ್ತೆ ?

೧೪೭೧೨ ಪಾತಾಳದವನನ್ನು ಎತ್ತೋಕೆ ಪಾತಾಳ ಗರಡಿಯೇ ?

೧೪೭೧೩ ಪ್ರಾಣಿಗಳ ಸಂರಕ್ಷಣೆಗೆ ಅಂತ ಗೋಣಿ ಉಟ್ಟರೆ ಆದೀತೆ ?

೧೪೭೧೪ ಪುಸುಗು ತೆಗೆಯುವುದಕ್ಕೆ ಚುಸುಗು ಬಿಟ್ಟರೆ ಆದೀತೆ ?

೧೪೭೧೫ ಪುರ್ಕ ಅಂದರೆ ಪರ್ಕ ಮುಚ್ಚುತ್ತ್ಯೇ ?

೧೪೭೧೬ ಬಟ್ಟ ತಲೆಯುವನಾದರೆ ಪೆಟ್ಟಿಗೆ ಹೊತ್ತಾನೇ ?

೧೪೭೧೭ ಬಟ್ಟವೊಗೆ ಬಟ್ಟಲಾದೀತೆ ?

೧೪೭೧೮ ಬಟ್ಟೆಯಿಂದ ಆಗುವಂಥಾದ್ದು ಬೊಟ್ಟಿನಿಂದ ಆದೀತೆ ?

೧೪೭೧೯ ಬರೆಹದಲ್ಲಿದ್ದ ಕರಿ ಮರಿ ಹಾಕೀತೆ ?

೧೪೭೨೦ ಬಾವಿಯ ನೀರನ್ನು ಹೊಳೆಯ ನೀರು ಕೊಂಡೊಯ್ಯುವುದೆ ?

೧೪೭೨೧ ಬಾಳೆಯ ಗಿಡ ನೆಟ್ಟರೆ ಹಾಳು ಹುಲ್ಲು ಆದೀತೆ ?

೧೪೭೨೨ ಬಿರುಗಾಳಿಗೆ ಹಿಡಿದರೆ ಸರಿಗೆ ಆದೀತೆ ?

೧೪೭೨೩ ಬೀಡಿಕೆ ಎತ್ತಾದರೆ ಹಾಡಿಕೆಯಿಂದ ಬಂದೀತೆ ?

೧೪೭೨೪ ಬೆಕ್ಕಿಗೆ ಜ್ವರ ಬರುವ ಮಾತು

೧೪೭೨೫ ಬೆಟ್ಟಕ್ಕೆ ಚಳಿಯಾದರೆ ಹೊಚ್ಚುವುದು ಸಾಧ್ಯವೆ ?

೧೪೭೨೬ ಬೆಣ್ಣೆ ತಿಂದು ಹಲ್ಲು ಬಿದ್ದುಹೋಯ್ತಂತೆ

೧೪೭೨೭ ಬೆನ್ನುಬಿಡದ ಪಿಶಾಚಿ ಹೊನ್ನುಕೊಟ್ಟರೆ ಹೋದೀತೆ ?

೧೪೭೨೮ ಬೆಸ್ತರೆ ಕೂಡದದ್ದು ಸಸ್ತರೆ ಕೂಡೀತೆ ?

೧೪೭೨೯ ಬೆಳಕಿಲ್ಲದೆ ಹೊಳಪು (ಹುಳುಕು) ಕಂಡೀತೆ ?

೧೪೭೩೦ ಬೆಳದಿಂಗಳಿಗೆ ಮೈ ಬೆವರೀತೆ ?

೧೪೭೩೧ ಬೆಳ್ಳಿ ಬೆಸೆಯಲು ಕಳ್ಳಿಹಾಲು ಆದೀತೆ ?

೧೪೭೩೨ ಬೆಂದ ಬತ್ತ ಪೊಳೆಯುವುದೊ ?

೧೪೭೩೩ ಬೇಡವಾದ್ದು ಕೂಡಿಸಿದರೆ ಆದೀತೆ ?

೧೪೭೩೪ ಬೊಕ್ಕೆ ಎದ್ದರೆ ರೊಕ್ಕ ಬಂದೀತೆ ?

೧೪೭೩೫ ಬೊಡಬೊಡನೆ ಸುರಿಯುವವ ಕಡಕಡನೆ ನಡೆದಾನೆ ?

೧೪೭೩೬ ಬೊಂಬು ಹೊರುವವನ ಸಂಗಡ ಹಂಬಲಿಸಿದರೆ ಇಂಬು ಸಿಕ್ಕೀತೆ?

೧೪೭೩೭ ಬೊಂಬೆಯಾದರೆ ಹಂಬಲಿಸಿದ ಹಾಗೆ ಕೊಟ್ಟೀತೆ ?

೧೪೭೩೮ *ಬೋರೆ ಗಿಡದಲ್ಲಿ ಕಾರೆಹಣ್ಣು (ಆದೀತೆ ?) ಸಿಕ್ಕ್ಯಾವೆ ?

೧೪೭೩೯ ಬೋಂದು ಗಿಡದಲ್ಲಿ ಗೋಂದು ಆದೀತೆ ?

೧೪೭೪೦ ಭದ್ರಾಕರಣ ಮಾಡಿಕೊಂಡರೆ ಭದ್ರವಾದೀತೆ ?

೧೪೭೪೧ ಭರಣಿಯಾದರೆ ಕರಣಿಕ ಮಾಡಿಯಾನೆ ?

೧೪೭೪೨ ಭಾರ ಹೊತ್ತು ಹಾರೋಕಾದೀತೆ ?

೧೪೭೪೩ ಭಾವನಾದರೆ ಭಾರವಾದ ಹೊರೆ ಹೊರ್ತ್ಯಾನೇ ?

೧೪೭೪೪ ಮಗ ಹೊದಿಯದ್ದ ಮೊಮ್ಮಗ ಹರಿದಾನೆ ?

೧೪೭೪೫ ಮಣಲಿಂದ ಹಗ್ಗ ಹುರಿ ಮಾಡಿದ ಹಾಗೆ

೧೪೭೪೬ ಮಣಿಸರಕ್ಕೆ ಗತಿಯಿಲ್ಲದ ಮನುಷ್ಯ ಹಣ ದಕ್ಷಿಣೆ ಕೊಟ್ಟಾನೆ ?

೧೪೭೪೭ ಮಣ್ಣು ಮರಗಳು ಬಿಟ್ಟ ಹಣ್ಣು ರುಚಿಯಾದೀತೆ ?

೧೪೭೪೮ ಮಂಚದ ಕಾಲಾದರೆ ಹೆಂಚು ಮಾಡಬಹುದೆ ?

೧೪೭೪೯ ಮಂಜಿನ ನೀರಿನಿಂದ ನೀರಡಿಕೆ ಹೋದೀತೆ ?

೧೪೭೫೦ ಮಂಜು ಸುರಿದರೆ ನಂಜನಗೂಡು ಮುಳುಗುತ್ತೇ ?

---

* ಕಾರೆ ಗಿಡಕ್ಕೆ ಬೋರೆ(ತಾರೆ)ಹಣ್ಣು ಆದೀತೆ ?

೧೪೭೫೧ ಮಂಥನದಿಂದ ಬಾರದ ಬೆಣ್ಣೆ ಕಂತೆಯಿಂದ ಬಂದೀತೆ ?

೧೪೭೫೨ ಮಾನದಲ್ಲಿ ಆನೆ ಹಿಡಿದೀತೆ ?

೧೪೭೫೩ ಮಿಣುಕುಹುಳ ತಿಣಿಕಿದರೆ ಜೇನು ಬಂದೀತೆ ?

೧೪೭೫೪ ಮುಖ ನೋಡಿ ಗುರುತು ತಿಳಿಯದಿದ್ದರೆ ನಖ ನೋಡಿ ತಿಳಿದೀತೆ ?

೧೪೭೫೫ ಮೈ ಬೆಳ್ಳಗಿದ್ದರೆ ನೆರಳೂ ಬೆಳ್ಳಗಿರುತ್ತೆ ?

೧೪೭೫೬ ಮೊಣಕ್ಕೈಗೆ ಬೆಲ್ಲ ತಾಗಿಸಿ (ನೆಕ್ಕು ಅಂದಹಾಗೆ) ನೆಕ್ಕಿದಾತೆ

೧೪೭೫೭ ಮೊರದಿಂದ ಕತ್ತಲೆಯನ್ನು ಹೊರಹಾಕಿದಂತೆ

೧೪೭೫೮ ರೆಪ್ಪೆ ಒಂಟಿದರೆ ಇಪ್ಪೆ ಹಾಕುವುದು ಬಿಟ್ಟೀತೆ ?

೧೪೭೫೯ ರೊಟ್ಟಿಗೆ ಬಂದ ನಾಯಿ ತುಪ್ಪಕ್ಕೆ ಬಂದೀತೆ ?

೧೪೭೬೦ ಲೀಲೆ ಕೇಳಿದಾಕ್ಷಣ ಮೇಲಕ್ಕೆ ಏರಿಯಾನೆ ?

೧೪೭೬೧ ಶಾಲು ಹೊದ್ದವನಾದರೆ ಹಾಲು ಬಿಟ್ಟಾನೆ ?

೧೪೭೬೨ ಸತ್ತ ಹೆಣ ಎಚ್ಚೆತ್ತು ಕೂಗಿದಂತೆ

೧೪೭೬೩ ಸಂಚಿ ದೊಡ್ಡದಾದರೆ ಮಂಚ ಹಿಡಿದೀತೆ ?

೧೪೭೬೪ ಸಂಜೀವನ ಆಗಬೇಕಾದರೆ ಮಂಜು ನೀರು ಆಗುತ್ಯೇ ?

೧೪೭೬೫ ಸಾಲು ಸಲ್ಲದಿದ್ದರೆ ಹಾಲು ಕಹಿಯಾದೀತೆ ?

೧೪೭೬೬ ಸಿಡಿಲು ಕೈದೀವಿಗೆಯಾದೀತೆ ?

೧೪೭೬೭ ಸಿರಿಯಿದ್ದವನಿಗೆ ನರೆ ಬಂದರೆ ಹರನಾದಾನೆ ?

೧೪೭೬೮ ಸಿಂಪಿದ ಹನಿಗೆ ಸಂಪಗೆ ಅರಳೀತೆ ?

೧೪೭೬೯ ಸೀನಿದರೆ ಶ್ವಾನನಾದಾನೆ ?

೧೪೭೭೦ ಸೀನಿದರೆ ಹೇನು ಹೋದೀತೆ ?

೧೪೭೭೧ ಸುಣ್ಣ ಹಚ್ಚಿಕೊಂಡರೆ ತಣ್ಣಗಾದೀತೆ ?

೧೪೭೭೨ ಸೇದಿದ ನೀರು ಹಾದಿಯಲ್ಲಿ ಹಾಕ್ತಾರ್ಯೆ ?

೧೪೭೭೩ ಹಗ್ಗ ಸುಟ್ಟರೆ ಹುರಿಯಾದೀತೆ ?

೧೪೭೭೪ ಹತ್ತಿ ಬೇಯುತ್ತಿದ್ದ ಸಮುದ್ರವನ್ನು ಸಾವೆ ಸೆತ್ತೆಯಲ್ಲಿ ಆರಿಸಿದನಂತೆ

೧೪೭೭೫ ಹಪ್ಪಳ ತಿನ್ನುವನಾದರೆ ಸಪ್ಪಳ ನುಂಗ್ಯಾನೆ ?

೧೪೭೭೬ ಹಲ್ಲಿದ್ದ ಮಾತ್ರಕ್ಕೆ ಕಲ್ಲು ನುರಿದೀತೆ ?

೧೪೭೭೭ ಹಲ್ಲು ಹೋದ ಮೇಲೆ ಕಲ್ಲು ಜಗಿದೇನು ಅಂದ ಹಾಗೆ

೧೪೭೭೮ ಹಂದಿ ಕೊಬ್ಬಿದ ಮಾತ್ರಕ್ಕೆ ಆನೆ ಆದೀತೆ ?

೧೪೭೭೯ ಹಾರಾಡುವ ಕಾಗೆ ಹೋರಾಡಬಲ್ಲುದೆ ?

೧೪೭೮೦ ಹಾರುವ ಹಕ್ಕಿ ಹಾರ ಕೋದೀತೆ ?

೧೪೭೮೧ ಹಾಲಕ್ಕಿಯಾದರೆ ಹಾಲು ಕರೆದೀತೆ ?

೧೪೭೮೨ ಹಾಲಿನ ಮೇಲಿನ ಕೆನೆ ಕಡೆದರೆ ಬೆಣ್ಣೆ ಬಂದೀತೆ ?

೧೪೭೮೩ ಹೆಂಚಿಗೆ ಹಲ್ಲು ಕಿಸಿದರೆ ಕನ್ನಡಿ ಆದೀತೆ ?

೧೪೭೮೪ ಹೊಟ್ಟೀ ಮ್ಯಾಲ ರೊಟ್ಟಿ ಕಟ್ಟಿದರೆ ಹೊಟ್ಟೆ ತುಂಬಬಹುದೆ ?

೧೪೭೮೫ ಹೊತ್ತು ಮೀರಿಬಂದರೆ ತೊತ್ತು ಹೆತ್ತವಳಾದಾಳೆ ?

೧೪೭೮೬ ಹೊಲಿಗೆ ಹಾಕಿದರೆ ನಿಂತೀತಲ್ಲದೆ ಒಗೆದರೆ ನಿಂತೀತೆ ?

೧೪೭೮೭ ಹೊಳೆಗೆ ನೆನೆಯದ ಕಲ್ಲು ಮಳೆಗೆ ನೆನೆದೀತೆ ?

೧೪೭೮೮ ಹೋತಿಗೆ ಗಡ್ಡ ಬಂದರೆ ಆಚ್ಯಾರಿ ಆದೀತೆ ?

ಅಸಾಮಂಜಸ್ಯ

೧೪೭೮೯ ಅಪ್ಪ ದೊಡ್ಡವನೊ, ಮಗ ದೊಡ್ಡವನೊ ?

೧೪೭೯೦ ಅಂಡಿನ (ಪೃಷ್ಠದ, ಕುಂಡೆಯ) ಮೇಲೆ ಹೊಡೆದರೆ
ದವಡೆ ಹಲ್ಲು ಉದುರಿತಂತೆ

೧೪೭೯೧ ಎಲ್ಲಮ್ಮನ ಗುಡ್ಡದಲ್ಲಿ ಮುಲ್ಲಾನದೇನು ?

೧೪೭೯೨ ಕಪಿ ಕುಣಿಸಿ ಕಲ್ಲು ಕರಗಿಸಿದ ಹಾಗೆ

೧೪೭೯೩ ಕಾರಕೂನನ ಕಪಾಳಕ್ಕೆ ಹೊಡೆದರೆ ಸಿಪಾಯಿ ನೆಲಕ್ಕೆ ಬಿದ್ದ

೧೪೭೯೪ ಕಿವುಡ ಕಿಚ್ಚಡಿ ಬೇಡಿದರೆ ಗೌಡ ಹಚ್ಚಡ ಕೊಟ್ಟ

೧೪೭೯೫ ಗಂಜಿ ಬಿಸಿಯಾದರೆ ಉಪ್ಪಿನಕಾಯಿ ಕಚ್ಚಿದನಂತೆ

೧೪೭೯೬ ಬಂಡಿಯಲ್ಲಿ ಮುಳ್ಳು ನಟ್ಟರೆ ಕಾಲಿನಿಂದ ಕುಂಟಿದನಂತೆ

೧೪೭೯೭ 'ಬಸವ ಅಂದರೆ ಪಾಪ ನಶಿಸುತ್ತೆ' ಅಂದರೆ
'ಸೊಸೆಗೆ ಮಜ್ಜಿಗೆ ನೀರು ತಕೊಂಬ' ಅಂದ

೧೪೭೯೮ ವಿಮಾನ ಏರಬೇಕಾದರೆ ಪರಮಾನ್ನ ತಿನ್ನಬೇಕೆ ?

೧೪೭೯೯ 'ಶಿಕ್ಷೆ ಇದ್ದರೆ ಭಕ್ಷ್ಯ ಬೇಯುತ್ತದೆ' ಅಂದ

ಈಜು

೧೪೮೦೦ ಈಜು ಬರದೆ ನೀರಿಗಿಳಿಯಬೇಡ ಅಂದಂಗೆ

೧೪೮೦೧ ಈಜು ಬಲ್ಲವನಿಗೆ ಸಹಜ ಭಯವಿಲ್ಲ

೧೪೮೦೨ ಈಸಾಡುವವಗೆ ಮೀಸೆ ಭಾರವೇ ?

೧೪೮೦೩ ಓಸು ಬರುತ್ತದೆ ಈಸು-ಬರಲ್ಲವೆ ?

೧೪೮೦೪ ಮರ ಹತ್ತೋದು ಮರೀಬೇಕು, ಈಜು ಕಲೀಬೇಕು

೧೪೮೫೮ ಪ್ರಾಣವಿಲ್ಲವೆಂದು ಗೋಣುಕೊಯ್ದು ಫಲವೇನು ?

೧೪೮೫೯ ಬಿಸಿಲಲ್ಲಿ ಹೋಗುವಾಗ ಹಸೆ ಸುದ್ದಿ ಏಕೆ?

೧೪೮೬೦ ಬೇಡರವನಿಗೆ ಗಾಡಿ ಸವಾರಿ ಯಾಕೆ ?

೧೪೮೬೧ ಬಾಡಿದ ಹೂ ನಾಡಿನವರಿಗೇಕೆ ?

೧೪೮೬೨ ಬಾರಿನವರಿಗೆ ಬೇರಿನ ಯೋಚನೆ ಏಕೆ?

೧೪೮೬೩ ಮೇವು ಮೇಯದೆ ಮೆಲುಕು ಹಾಕಿವಂತೆ

೧೪೮೬೪ ಮೊಂಡ ಕೈಲಿ ಎದೆ ಗುದ್ದಿಕೊಂಡ ಹಾಗೆ

೧೪೮೬೫ ಲಿಂಗವಿಲ್ಲದ ಗುಡಿ, ಜಂಗಮರಿಲ್ಲದ ಮಠ ಇದ್ದೇನು ?

೧೪೮೬೬ ಸತ್ತ ಮಗುವಿಗೆ ಚಂದ್ರತಾರಾಬಲ ನೋಡಿಸಿದ ಹಾಗೆ

೧೪೮೬೭ ಹರಿಗೋಲಿಗೆ ಅರಿವೆ ತುರುಕಿದಂತೆ

೧೪೮೬೮ ಹಾವು ಕಚ್ಚಿ ಬರೀ ಬಾಯಿ

ಎಲ್ಲರೂ ತಿಳಿದ ವಿಷಯ

೧೪೮೬೯ ಎಲ್ಲಿಂದೆಲ್ಲಿಗೆ ಹೋದರೂ ಒಲೆಗೆ ಮೂರು ಗುಂಡು,
ತಲೆಗೆ ಎರಡು ಕಣ್ಣು

೧೪೮೭೦ ಕಂಚಿಗೆ ಹೋದರೂ ಮಂಚಕ್ಕೆ ನಾಲ್ಕೇ ಕಾಲು

೧೪೮೭೧ ಡಿಳ್ಳಿತನಕ ಪೋದರೂ ದೊಳ್ಳಿನ ಗತ್ತು ಒಂದೇ

೧೪೮೭೨ ತಲೆಗೆ ಬಿಸಿ ತಾಕಿದರೂ, ಕಾಲಿನಡಿ ನೆರಳೇ

೧೪೮೭೩ ಬತ್ತದೊಳಗೆ ಅಕ್ಕಿ ಇದೆ ಅಂತ ಹೇಳ್ಬೇಕಾ ?

ಎಂದಿದ್ದರೂ ಹೊರಬೀಳುವ ವಿಚಾರ

೧೪೮೭೪ [1]ಅಳಿಯನ ಕುರುಡು(ಮೋರೆ) ಬೆಳಗಾದ ಮೇಲೆ(ಕಾಣಬಹುದು) ಕಂಡೀತು

೧೪೮೭೫ ಊರಿಗೆ ಬಂದದ್ದು ಕೇರಿಗೆ ಬಾರದೆ ಇರುತ್ತ್ಯೆ ?

೧೪೮೭೬ [2]ಊರಿಗೆ ಬಂದವಳು ನೀರಿಗೆ ಬಾರಳೆ

೧೪೮೭೭ ಗೌಡಸಾನಿ ಚೆಲುವೆಯಾದ್ರೆ ಕಸದ ಮಂಕ್ರಿ ಹೊತ್ತು ತಂದಾಗ ತಾನೆ ತಿಳಿದೀತು

೧೪೮೭೮ [3]ನೀರಿನಲ್ಲಿ ಮಾಡಿದ್ದು ಮೇಲೆ ಬಾರದಿರುತ್ತದೆಯೆ ?

೧೪೮೭೯ [4]ಬಂಗಾರಕ್ಕೆ ಅಂಗಾರವೇ ಸಾಕ್ಷಿ

೧೪೮೮೦ ಮಣ್ಣುದೇವರಿಗೆ ಮಜ್ಜನವೇ ಸಾಕ್ಷಿ

೧೪೮೮೧ ಮುಳುಗಿಕೊಂಡು ಏಡಕ್ಕೆ ಹೋದ್ರೆ ತೇಲ್ದೆ ಇರ್ತ್ಯೇ ? (ಹವ್ಯಕ)

೧೪೮೮೨ ಸೀರೆ ಬಣ್ಣ ನೀರಿಗೆ ಹಾಕಿದಾಗ

೧೪೮೮೩ ಹಾರುವಾಗಲೇ ಕಾಣಬಹುದು ಕಾಗೆ ತರಡ

೧೪೮೮೪ ಹಾರಿದಾಗಲಲ್ಲವೆ ಕಾಗೆ ಗುಣ ತಿಳಿಯುವುದು

೧೪೮೮೫ ಹುರುಳಿಬೀಜ ಕೊಟ್ಟು ಕುಲಗೋತ್ರಾನೆಲ್ಲ ಎತ್ತಿಹಾಕಿದರು

ಎಂದೂ ಕಾಣದವನಿಗೆ ಕಂಡದ್ದೇ ಅದ್ಭುತ

೧೪೮೮೬ [5]ಅದನ್ನೂ ಕಾಣ್ದೆ ಅಳ್ತಿದ್ದೆ, ಕದನ್ ಕಿಂಡೀಲಿ ನೋಡಿ ನಗ್ತಿದ್ದೆ ಅಂತ

---

1 ಧೃತರಾಷ್ಟ್ರ-ಗಾಂಧಾರಿ
2 ಊರಿಗೆ ಬಂದ್ ನಾರಿ ನೀರಿಗೆ ಬರದೆ ಇರ್ತಾಳಾ ? (ಹವ್ಯಕ)
3 ಹೇತಿದ್ದು
4 ಬೆಳ್ಳಿಗೆ ಕೊಳ್ಳಿ ಸಾಕ್ಷಿ
5 ಅದನ್ನೂ ಕಾಣದೆ ಕದದ ಮೂಲೇಲಿ ನಿಂತಿದ್ದ

೧೪೮೮೭ ಇರುವೆ ಕಣ್ಣಿಗೆ ಎಮ್ಮೆಗಂಜಳ ಜಲಪ್ರಳಯ

೧೪೮೮೮ ಗೆರಟೆ ನೀರು ಇರುವೆಗೆ ಸಮುದ್ರ

೧೪೮೮೯ [1]ಎಂದೂ ಕಾಣದ ನಾಯಿ ತಂಗಳನ್ನ ಕಂಡರೆ
ಬೆಂಗಳೂರು ತನಕ ಓಡಿಹೋಯ್ತು

೧೪೮೯೦ [2]ಎಂದೂ ಕಾಣದ್ದು ಮಂದನೆ ಮಜ್ಜಿಗೆ ಕಂಡು
ಕಂದಲ ಮುಂದೆ ಕುಣಿದಾಡಿತು

೧೪೮೯೧ ಎಂದೂ ಕಾಣದ್ದನ್ನು ಕಂಡುಕೊಂಡಿತು,
ಕಣ್ಣಿಗೂ ಮೂಗಿಗೂ ಒತ್ತಿಕೊಂಡಿತು

೧೪೮೯೨ ಕಪ್ಪೆಗೆ ಕೊಳಚೆಯೇ ಸಮುದ್ರ

೧೪೮೯೩ ಕಬರಗೇಡಿ ಕೈಯಾಗೆ ಕೊಬರಿ ಕೊಟ್ಟರೆ ಸಬರವಲ್ಲಿಟ್ಟುಕೊಂಡು
ಸರಿರಾತ್ರ್ಯಾಗ (ಹುಡುಕಾಡ್ತಿತ್ತು) ತಿಂತಿತ್ತಂತೆ

೧೪೮೯೪ ಕರಿ ಕಾಣದವ ಕಜ್ಜಾಯ ಕಂಡಂಗೆ

೧೪೮೯೫ ಕಂಡದ್ದೆಲ್ಲ ಕೈಲಾಸ

೧೪೮೯೬ ಕಾಣದ ಮುರುನ(ಮೂಳ)ನಿಗೆ ಕಟ್ಟಂಬಲಿ ಪಾವನ

೧೪೮೯೭ [3]ಕಾಣದ್ದಕ್ಕೆ ಹಕ್ಕಡಕು ಇಕ್ಕೊಂಡು ಓಸಿ ಕೊಳಕ್ಕೆ ಹೋಗಿ
ಬಗ್ಗಿ ಬಗ್ಗಿ ನೋಡ್ತಿದ್ದನಂತೆ

೧೪೮೯೮ ಕಾಣದವನಿಗೆ ಕೋಣೆಯೇ ಪರ್ವತ

೧೪೮೯೯ ಕುರುಡೆಮ್ಮೆಗೆ ಕರಡವೇ ಕೈಲಾಸ

೧೪೯೦೦ ಕುಂಟೆತ್ತಿಗೆ ಕೊಳಕುನೀರೇ ಪಂಚಾಮೃತ

---

1 ಎಂದೂ ಕಾಣದವನಿಗೆ ತಂಗುಳನ್ನ ಹಾಕಿದರೆ ಬೆಂಗಳೂರು ತನಕ ಬೆಳಕಾಯ್ತೆಂದನಂತೆ

2 ಎಂದೂ ಕಾಣದವನಿಗೆ ಮಂದನೆ ಮಜ್ಜಿಗೆ

3 ಕಾಣದ್ದಕ್ಕೆ ಕಡಕಿಕ್ಕಂಗೆ

೧೪೯೦೧ ಕುಂಡನಿಗೆ ಕಂಡದ್ದೇ ಪರ್ವತ

೧೪೯೦೨ [1]ಕೋತಿಯ ಕೈಯಲ್ಲಿ ಗುಲಗಂಜಿ ಕೊಟ್ಟರೆ ಓಣಿಯಾಗೆಲ್ಲ ಹೊತ್ಕೊಂಡು ಓಡ್ತಿತ್ತಂತೆ

೧೪೯೦೩ ಕೋಳಿಯ ಕಣ್ಣಿಗೆ ಜೋಳ ಪರಂಜ್ಯೋತಿ

೧೪೯೦೪ ಗವಿಗೌಡಿ ಮೂರು ಹಣ ಹಾಕಿ ಹೋಗ್ತಾ ಬರ್ತಾ ನೋಡ್ತಿದ್ದನಂತೆ

೧೪೯೦೫ ನಾಯಿಗೆ ತಿಪ್ಪೆಯೇ ಸ್ವರ್ಗ

೧೪೯೦೬ ಬಾವಿಯೊಳಗಿನ ಕಪ್ಪೆ

೧೪೯೦೭ ಬೆತ್ತಲೆ ಬಡವನಿಗೆ ಬೆಳ್ಳಿ ಉಡಿದಾರ ಕಟ್ಟಿದ ಹಾಗೆ

೧೪೯೦೮ ಬೊಗ್ಗಿ ಬಂದ್ಹಣ ಕಂಡ್ರೆ ಮೋಟಿ ಬಿಗ್ಬಿಗ್ಗ ಕಟ್ತಿದ್ಲಂತೆ

೧೪೯೦೯ ಮಂಗನ ಮುಖಕ್ಕೆ ನಿಂತ ನೀರೇ ಕನ್ನಡಿ

೧೪೯೧೦ ಮರ್ಗೌಡಿಗೆ ಪರಸು ಕೊಟ್ಟರೆ ಓಣೆಲ್ಲ ಹೊತ್ಕೊಂಡು ತಿರುಗಾಡಿತಂತೆ

೧೪೯೧೧ ಸನ್ನೇಡಿಯ ಕೈಯಾಗ ಸುಣ್ಣ ಕೊಟ್ಟರೆ ಬೆಣ್ಣೆ ಅಂತ ಬಾಯಿಗೆ ಹಾಕಿತಂತೆ

೧೪೯೧೨ [2]ಹಾತಿಪೆ ಕಾಲು ಬೆಕ್ಕಿಗೆ ಪರ್ವತ

೧೪೯೧೩ ಸೀರೆಗೌಡಿಗೆ ಸೀರೆ ಉಡಿಸಿದರೆ ಹೊಲಗೇರಿಗೆ ಹೇಳಹೋಗಿತ

೧೪೯೧೪ [3]ಹೆಂಚು ಕಾಣದವಳು ಕಂಡುಕಂಡರೆ ದಿನಕ್ಕೆ ಮೂರಾವರ್ತಿ ಬೆಳಗಿ ಉಂಡಳು

---

1 ಕಪಿಯ ಕೈಯಲ್ಲಿ ಗುಲಗಂಜಿ ಕೊಟ್ಟಹಾಗೆ

2 ಇರುವೆ ಕಣ್ಣಿಗೆ ಹಾತಿಪೆ ಕಾಲು ದೊಡ್ಡು (ಪವ್ಯಂ)

3 ಕಂಚು ಪಾತ್ರೆಯನ್ನು ಕಾಣದ ಕಂಡರೆ ಬಹಳ್ತ್ಸಲ ತೊಳೆದ ಹಾಗೆ

೧೪೮೦೫ ಪಿಸಾಸು ಬರಸ ಮೂಳ ಹೊಳೆಗೆ ಹಾರಿದಾಂಗೆ

ಉಭಯ ನಷ್ಟ

೧೪೮೦೬ ಅಟ್ಟದಾಗೆ ಪಿಂಗಲಿಲ್ಲ, ಅಪ್ಪಂಘವರು ಉಣಲಿಲ್ಲ

೧೪೮೦೭ ಅತ್ತ ಗಂಡನಿಗಿಲ್ಲ, ಇತ್ತ ಮಿಂಡನಿಗಿಲ್ಲ

೧೪೮೦೮ ಅದೂ ಕೇಡು, ಇದೂ ಕೇಡು ; ಅಡ್ಡಗೋಡೆ ಪ್ಯಾಗಳ
ಮೂರು ಕಾಸೂ ಕೇಡು

೧೪೮೦೯ ಆರು ಅಷ್ಟಮಿಯಲ್ಲಿ ಹೋತು, ಮೂರು ನವಮಿಯಲ್ಲಿ
ಹೋತು

೧೪೮೧೦ ಉಪ್ಪೂ ಹೋಯ್ತು, ಉಪ್ಪಿನ ಹರಬಿಯೂ ಹೋಯ್ತು

೧೪೮೧೧ ಉಂಡ ಹಾಗಲ್ಲ, ತಿಂದ ಹಾಗಲ್ಲ

೧೪೮೧೨ ಉಂಡೂ ಹೋದ, ಕೊಂಡೂ ಹೋದ

೧೪೮೧೩ ಏಗಟಿ ವಾರವೂ ಇಲ್ಲ, ಪುರದ ಭಿಕ್ಷವೂ ಇಲ್ಲ

೧೪೮೧೪ ಕತ್ತೆ ತಿಂದೂ (ಕೆಡಿಸಿತು) ಹಾಳು,
ಹೊರಳಿಯೂ (ಕೆಡಿಸಿತು) ಹಾಳು

೧೪೮೧೫ *ಕಲ್ಲೂ ಹೋಯ್ತು, ಕಲ್ಲಿಗೆ ಹತ್ತಿದ ಬೆಲ್ಲವೂ ಹೋಯ್ತು

೧೪೮೧೬ ಕಾಸೂ ಕೇಡು, ತಲೆಯೂ ಬೋಳು

೧೪೮೧೭ ಕಾಸೂ ಖರ್ಚು, ಮಂಡೇನೂ ಬೋಳು
ತಂಗಚ್ಚಿ ಕೂಡೆ ಕುದುರೆಯೂ ಪೋಚಿ

೧೪೮೧೮ ನೆಂಟ ಉಂಡ ಹಾಗೂ ಅಲ್ಲ, ಜಂಟ ಉಳ್ಳಂಗೂ ಅಲ್ಲ

* ಬೆಲ್ಲವೂ ಹೋಯಿತು. ಬೆಲ್ಲಕ್ಕೆ ಕಟ್ಟಿದ ಬಟ್ಟೆಯೂ ಹೋಯ್ತು

೧೪೮೧೯ ಭರವಸೆಯುಳ್ಳವ ಬರುತ್ತಾನೆಂದು ಬಾಗಿಲು ತೆರೆದು
ಕೂತರೆ ಪಡಿಸುಚ್ಚಿನ ಗಡಿಗೆ ನಾಯಿ ಒಯ್ಯಿತು

೧೪೮೨೦ ಹಿಂದಿನ ನೂಲೂ ಹೋಯಿತು,
ಮುಂದಿನ ಮೊನೆಯೂ ಮುರಿಯಿತು

೧೪೮೨೧ [1]ಹಿಂದಿನ ಮನೆ ಕೋರಾನ್ನವೂ ಹೋಯಿತು,
ಮುಂದಿನ ಮನೆ ಭಿಕ್ಷವೂ ಹೋಯಿತು

ಉಭಯ ಸಂಕಟ

೧೪೮೨೨ ಅಕ್ಕ ಅಂಬೋಕೂ ಆಗ, ಆಗ ಅಂಬೋಕೂ ಆಗ

೧೪೮೨೩ ಅಟ್ಟದ ಮೇಲೆ ಇಲಿ ಕಾಟ, ಪೆಟ್ಟಿಗೆಯೊಳಗೆ ನುಸಿ ಕಾಟ

೧೪೮೨೪ ಅಡಸಲಿಗೆ ಸಿಕ್ಕಿದ ಹೆಗ್ಗಣದ ಹಾಗೆ

೧೪೮೨೫ ಅಯ್ಯನವರ ಮಾತು ಮೀರುವ ಹಾಗಿಲ್ಲ,
ಗಡಪಾರಿ (ಹಾರೆ) ನುಂಗುವ ಹಾಗಿಲ್ಲ

೧೪೮೨೬ [2]ಅರಳಿ ಮರ (ನೋಡಲೋ) ನೋಡ್ತೀಯೋ,
ಬ್ರಹ್ಮರಾಕ್ಷಸನನ್ನು (ನೋಡಲೋ) ನೋಡ್ತೀಯೊ ?

೧೪೮೨೭ ಆಡೋಕಿಲ್ಲ, ಅನುಬೋವಿಸೋಕಿಲ್ಲ

೧೪೮೨೮ ಇಕ್ಕಳಕ್ಕೆ ಸಿಕ್ಕಿದ ಹಾಗೆ

೧೪೮೨೯ [3]ಇತ್ತ ಪುಲಿ, ಅತ್ತ ದರಿ

೧೪೮೩೦ [4]ಇತ್ತಲಾಗ ಕೆರೆ, ಅತ್ತಲಾಗ ಬಾವಿ

---

1 ಕೋರಾಣ್ಯವೂ ತಪ್ಪಿತು, ಭಿಕ್ಷಾವೂ ತಪ್ಪಿತು

2 ಮರ ನೋಡ್ತೀಯೊ, ಮರದ ಮೇಲಿನ ಮಾರಿ ನೋಡ್ತೀಯೊ ?

3 ಹಿಂದೆ ಹುಲಿ, ಮುಂದೆ ಬಲಿ

4 (i) ಆಚೆ ಹೋದರೆ ಬಾವಿ, ಈಚೆ ಬಂದರೆ ಕೆರೆ
(ii) ಹಿಂದೆ ನೋಡಿದರೆ ಹೊಂಡ, ಮುಂದೆ ನೋಡಿದರೆ ಹೊಳೆ
(iii) ಹಿಂದೆ ಹೋದರೆ ಕೆರೆ, ಮುಂದೆ ಹೋದರೆ ಬಾವಿ

೧೪೮೩೧ ಇರಿದುಕೊಂಡೇನೆ ಹೊಟ್ಟೆ ! ತಿವಿದುಕೊಂಡೇನೇ ಕಣ್ಣು !

೧೪೮೩೨ [1]ಉಗಿದರೆ ತುಪ್ಪ ಕೆಡುತ್ತದೆ, ನುಂಗಿದರೆ ಗಂಟಲು ಸುಡುತ್ತದೆ

೧೪೮೩೩ ಎದ್ದರೆ ಗೋಹತ್ಯೆ ! ಬಿದ್ದರೆ ಬ್ರಹ್ಮಹತ್ಯೆ !

೧೪೮೩೪ ಒಳಗೆ ಬಂದರೆ ಅಮ್ಮನ ಕಾಟ !
ಹೊರಗೆ ಬಂದರೆ ಗುಮ್ಮನ ಕಾಟ !

೧೪೮೩೫ ಒಳಗೆ ಬಂದರೆ ಮಾಯಿಯ ಅಲೆ !
ಹೊರಗೆ ಹೋದರೆ ಚ(ಚಿ)ವುಳಿಯ ಅಲೆ !

೧೪೮೩೬ [2]ಕತ್ತರಿ ಬಾಯಿಗೆ ಸಿಕ್ಕಿದ ಅಡಕೆ

೧೪೮೩೭ ಗರಗಸ ಹರಿದಾಡಿದಂಗೆ, ಇತ್ಲಿಂದ್ಲೂ ಕುಯ್ತು,
ಅತ್ಲಿಂದ್ಲೂ ಕುಯ್ತು

೧೪೮೩೮ ಕೈಯಲ್ಲಿ ಹಾವು ! ಗಂಟಲಲ್ಲಿ ವಿಷ !

೧೪೮೩೯ 'ಕೊಲ್ಲು' ಅಂದರೆ ಕಪ್ಪೆಗೆ ಕೋಪ ! ಬಿಡು ಅಂದರೆ
ಹಾವಿಗೆ ಕೋಪ !

೧೪೮೪೦ ಜಿಗಣೆಯ ಉಪದ್ರವ ನೋಡಲೊ, ಜಡೆಯ ಹಾವಳಿ
ನೋಡಲೊ !

೧೪೮೪೧ ನಂಟನ ಉಚ್ಚೆ ಕುಡಿಯೋ ಹಂಗೂ ಇಲ್ಲ,
ಬಿಡೋ ಹಂಗೂ ಇಲ್ಲ

೧೪೮೪೨ ನುಂಗ ಬಾರದ ತುತ್ತು, ತುಟಿ ಮೀರಿದ ಹಲ್ಲೂ – ಸಮ

೧೪೮೪೩ ನೆಕ್ಕುವ ಸ್ಥಳದಲ್ಲಿ ಹುಣ್ಣಿದ್ದ ಹಾಗೆ

---

1 ಬಿಸಿ ತುಪ್ಪ ಉಗುಳುವ ಹಾಗಿಲ್ಲ, ನುಂಗುವ ಹಾಗಿಲ್ಲ

2 (i) ಅಡಕೆ ಕತ್ತರಿಯಲ್ಲಿ ಸಿಕ್ಕಿದ ಹಾಗೆ

(ii) ಅಡ್ಡಕತ್ತರಿಯೊಳಗಿನ ಅಡಕೆಯಂತೆ

(iii) ಗೋಟಿನಲ್ಲಿ ಸಿಕ್ಕಿಕೊಂಡ ಕತ್ತರಿ

೧೪೮೪೪ ಪ್ರತಿಭಟಿಸಿದರೆ ಸಾವು! ಶರಣಾದರೆ ನೋವು!

೧೪೮೪೫ ಪೇಟೆಗೆ ಹೋದರೆ ಸಾಲಗಾರರ ಕಾಟ!
ಮನೆಗೆ ಬಂದರೆ ಹೆಂಡತಿ ಕಾಟ!

೧೪೮೪೬ ಬಿಡೊ ಹಾಂಗಿಲ್ಲ, ಕಟ್ಟಿಕೊಳ್ಳೊ ಹಾಗೂ ಇಲ್ಲ

೧೪೮೪೭ ಬಿರುಸಾಗಿ ಊದಿದರೆ ಬೆಂಕಿ ಆರೀತು,
ಮೆಲ್ಲಗೆ ಊದಿದರೆ ಹೊಗೆ ತುಂಬೀತು

೧೪೮೪೮ ಮುಂದಕ್ಕೆ ಬಂದ್ರೆ ತಗರ ಕಾಳಗ,
ಹಿಂದಕ್ಕ್ಹೋದ್ರೆ ಸ್ಯಾದೆ ಬಾವಿ

೧೪೮೪೯ ಮುಂದೆ ನೋಡಿದರೆ ಹೆಬ್ಬಾರರ ಮನೆ,
ಹಿಂದೆ ನೋಡಿದರೆ ಹೆಗ್ಗಡೇರ ಮನೆ

೧೪೮೫೦ ಸುಗ್ಗಿ ಬೆಳೆ ಕಾಯಲೊ, ಮನೆ ಹೆಂಡತಿ ಕಾಯಲೊ?

೧೪೮೫೧ ಹೇಳಿದರೆ (ಅವ್ವೆ ಜೀವ ಹೋಯ್ತದೆ) ತಾಯಿ ಸಾಯ್ತಾಳೆ!
ಹೇಳದಿದ್ದರೆ ಅಪ್ಪ (ಜಾತಿಗೆಡ್ತಾನೆ) ನಾಯಿ ಮಾಂಸ ತಿಂತಾನೆ!

ಏನು ಪ್ರಯೋಜನ?

೧೪೮೫೨ ಉಚ್‌ಗ್ಯಂಬವಂಗೇಕೆ ಪಚ್ಚೆಸ್ರ ಪಾಯಸ (ಹವ್ಯಕ)

೧೪೮೫೩ ಒಣಮರವನ್ನು ಗಿಣಿ ಕಾದ ಹಾಗೆ

೧೪೮೫೪ ಕಂಡವರ ಎತ್ತಿಗೆ ಕವುದಿ ಬಿಗಿದರೆ ಕೊಂಡೋಯ್ತು
ತನ್ನ ಒಡೆಯನ ಮನೆಗೆ

೧೪೮೫೫ ಕಂಡವರ ಸೀರೆಗೆ ಅಂಚು ಕಟ್ಟಿದರಂತೆ

೧೪೮೫೬ ಕಂಡವರ ಹೆಣ್ಣಿಗೆ ಬಳೆ ತೊಡಿಸಿ(ಸೀರೆ ಉಡಿಸಿ)ದರೆ ಬಳೆಗೇಡು,
ಬತ್ತಗೇಡು, ಮಾನಗೇಡು, ಮರ್ಯಾದೆಗೇಡು

೧೪೮೫೭ ಪಕ್ಕವಿಲ್ಲದ್ದಕ್ಕೆ ಕೊಕ್ಕು ಇದ್ದರೆ ಪ್ರಯೋಜನವೇನು?

೧೪೯೭೭ ಅಡು ಅನ್ನೋಕೆ ಅವಳೇ ಇಲ್ಲ,
ಬಸಿ ಮೂಗಳಕ್ಕಿ ಬೋನವ ಅಂದನಂತೆ

೧೪೯೭೮ *ಆನೆ ಬರುವುದಕ್ಕೆ ಮುಂಚೆ ಗಂಟೆ ಸದ್ದಾಯಿತು

೧೪೯೭೯ ಎಮ್ಮೆ ಕೊಳ್ಳುವುದಕ್ಕೆ ಮುಂಚೆ (ಹಾಲಿಗೆ, ಮಜ್ಜಿಗೆಗೆ
ಬಡಿದಾಡಿದರಂತೆ) ಮೊನೆ ಕೊಂಡರಂತೆ

೧೪೯೮೦ ಎಮ್ಮೆ ತರೋಕೆ ಮುಂಚೆ 'ಮಜ್ಜಿಗೆಗೆ ಬನ್ನಿ' ಅಂತ
ಮಂದಿಗೆ ಹೇಳಿದಳಂತೆ

೧೪೯೮೧ ಒಂದಿಲ್ಲದೆ ಒಂಬತ್ತು

೧೪೯೮೨ ಕುದುರೆ ಕಾಣದೆ ಹುರುಳಿ ಬೇಯಿಸೋದೇಕೆ ?

೧೪೯೮೩ ಕೂಸು ಹುಟ್ಟುವುದಕ್ಕೆ ಮುಂಚೆ ಕುಲಾವಿ ಹೊಲಿಸಿದರು

೧೪೯೮೪ ಅಗುಳು ಗಂಜಿ ಬೇರೆಯಾದ ಮೇಲೆ ತಾನೇ,
ಕುಂಚಿ (ಕುಂಚೆ)ಗೆ ಹೊಲಿಯುವ ಮಾತು

೧೪೯೮೫ ಗಂಡ ಎಮ್ಮೆ ತರೋಕೆ ಮುಂಚೆ ಹೆಂಡತಿ ಕಡೆಗೋಲು ತಂದಳಂತೆ

೧೪೯೮೬ ಗಾಣಕ್ಕೆ ಎಳ್ಳು ಹಾಕಿ ಹರಿಗೆ ಬುದಲಿಗೆ ಆಸಿಸಿದರಂತೆ

೧೪೯೮೭ ನೆರೆಯುಕ್ಕೆ ಮುಂಚೆ ಹೆರೂಕೆ ಓಡಾಡಿದರಂತೆ

೧೪೯೮೮ ಬಸಿರಾಗುವುದಕ್ಕೆ ಮುಂಚೆಯೇ ಹಸಿರು ಶಾಲೆ ಬಯಸಿದಳು

೧೪೯೮೯ ಬೆಳೆಯೋದೇನು ಬಿಡೋದೇನು
ಹಸರು ನೋಡಿ ಹಗೇವು ತಗದರಂತೆ

೧೪೯೯೦ ಮದ್ದು ತುಂಬುವ ಮೊದಲೇ ಫಿರಂಗಿ ಹಾರಿಸಿದರಂತೆ

೧೪೯೯೧ ಮುಂಜಿ ಮೂರು ತಿಂಗಳು ಅನ್ನುವಾಗಲೇ
ಇಂಗು ನೆನೆ ಹಾಕಿದರಂತೆ

---

* ಆನೆ ಹಿಂದೆ ಇದ್ದರೂ ಗಂಟೆ ಶಬ್ದ ಮುಂದೆ

೧೪೯೯೨ ಮುಂದೆ ಹುಟ್ಟುವ ಕೂಸಿಗೆ ಇಂದೇ ಮೊಲೆ ಕೊಡುವುದೇ ?

೧೪೯೯೩ ಮೊಟ್ಟೆ ಒಡೆಯುವುದಕ್ಕೆ ಮುಂಚೆ ಮರಿ ಎಣಿಸಿದ ಹಾಗೆ

೧೪೯೯೪ ಹುಟ್ಟದ ಮಗುವಿಗೆ ತೊಟ್ಟಿಲು ಕಟ್ಟಿದಂತೆ

೧೪೯೯೫ ಹುಟ್ಟುತ್ತಲೆ ಹೂಡು ಎತ್ತಿಗೆ ಸಬರ ಹಾಕಿದರಂತೆ

೧೪೯೯೬ ಹೊಟ್ಟೆಯೊಳಗಿನ ಕೂಸು ಹೊಟ್ಟೆಯಲ್ಲಿರುವಾಗಲೇ
'ಪುಟ್ಟಪ್ಪ' ಅಂತ ಹೆಸರಿಟ್ಟರಂತೆ

೧೪೯೯೭ ಹೊಟ್ಟ್ಯಾಗಿನ ಕೂಸು ಹೊಟ್ಟ್ಯಾಗಿರಲಿಕ್ಕೆ
ಬಟ್ಟ್ಯಾಸಿಕೊಂಡು ಕುಂತರಂತೆ

೧೪೯೯೮ *ಹೊಳೆ ಮೂರು ಗಾವುದ ಇದ್ದ ಹಾಗೇ
(ಜಲ್ಲಣ ಮಾಡಿಸಿದನಂತೆ, ಈಜಿ ಹೋಗಲು ಕರ ಕಳಚಿ ಬಿಟ್ಟರು)
ಕರ ಕಳಚೋದುಂಟೆ ?

ಕಾಲ ಮಹಿಮೆ

೧೪೯೯೯ ಅಚ್ಚಿನ ಮನುಷ್ಯನಿಗೆ ನುಚ್ಚಿನ ಅನ್ನ

೧೫೦೦೦ ಅಸಲಿಗಿಂತ ನಕಲಿಯೇ ಹೊಳಪು

೧೫೦೦೧ ಆಳು ಅರಸಾಗ್ತಾನೆ, ಅರಸು ಆಳಾಗ್ತಾನೆ

೧೫೦೦೨ ಇಟ್ಟಾಡ್ತಿದ್ದವ ಪಟ್ಟ ಆಳ್ತಾನೆ,
ಪಟ್ಟ ಆಳ್ತಿದ್ದವ ಇಟ್ಟಾಡ್ತಾನೆ

೧೫೦೦೩ ಉಡಿಕೆ ಹೆಣ್ಣಿಗೆ ಉಡಿ ತುಂಬ ವಸ್ತ್ರ

೧೫೦೦೪ ಕಲಿಯುಗ ಬಂದು ಕಲ್ಲಲ್ಲಿ ರಾಗಿ ಬೀಸಿ
ಗಾಮನಹಳ್ಳಿ ಕೋಳಿಗೆ ಜೋಡಿ ಗುಂಡಿಗೆ ಕಾಣೆ ಆತ್ತೆ !

೧೫೦೦೫ ಕಸಬರಿಗೆ ಕೊಂಡ ಕಾಲ ಗುಣ ನೋಡು ಅಂದರಂತೆ

---

* ಹೊಳೆ ಮೂರು ಗಾವುದ ನನ್ನ ಕರ ಕಳಚೋದುಂಟೆ ?

೧೫೦೦೬ [1]ಕಾಲ ಕೆಟ್ಟಿತು, ಕಾಗೆ ರಾಗಿ ತಿಂತು

೧೫೦೦೭ ಕಾಲಾಯ ತಸ್ಮೈ ನಮಃ

೧೫೦೦೮ ಕೀಳು ಮೇಲಾಯ್ತು, ಮೇಲು ಕೀಳಾಯ್ತು

೧೫೦೦೯ ಕೂಸು ಕುಂಚಿಗೆ ತಿಂತು, ಹಾಸಿಗೆ ನೆಲ ತಿಂತು

೧೫೦೧೦ ಗುಂಡೆದ್ದು ಬೆಂಡು ಮುಳುಗಿದ ಹಾಗೆ

೧೫೦೧೧ ಒಡ್ಡಿ ಅನ್ನೋನಿಗೆ ಗೆಡ್ಡೆ ಬೋನ,
ತಾಯಿ ಅಂದವನಿಗೆ ನೀರಂಬಲಿ

೧೫೦೧೨ ಬೆಂಡು ಮುಳುಗಿದರೇನು, ಗುಂಡು ತೇಲಿದರೇನು ?

೧೫೦೧೩ ಧರ್ಮ ಮಾಡೋಕೆ ಹೋದ್ರೆ ದರದಟ್ಟಿ

೧೫೦೧೪ ಧರ್ಮಕ್ಕೆ ದಿನವಿಲ್ಲ, ಅನ್ಯಾಯಕ್ಕೇ ಕಾಲ

೧೫೦೧೫ ನೆಚ್ಚಿದ ಸಿಪಾಯಿಗೆ ಬಚ್ಚಿದ ಕುದುರೆ

೧೫೦೧೬ ಪಾಪ ಮಾಡಿದಂವ್ ದೇಶನೋಡ್ದ,
ಪುಣ್ಯ ಮಾಡಿದವ ತಣ್ಣಗಾದ

೧೫೦೧೭ ಬೇಡದೋರಿಗೆ ಬೆಳ್ಳಿ ಪಾತ್ರೆ, ಹಿತವಂತರಿಗೆ ಓತ್ರಾಳೆ ಪಾತ್ರೆ

೧೫೦೧೮ ಶತದ್ರೋಹಿಗೆ ಶಾಲು ಜೋಡಿ

೧೫೦೧೯ ಸಟೆ ಆಡಿದವರಿಗೆ ಮೆಚ್ಚಿಗೆ, ದಿಟ ಆಡಿದವರಿಗೆ ಶಿಕ್ಷೆ

೧೫೦೨೦ ಸಟೆ ಮುಂದೆ ದಿಟ ಪಟಾಚೂರ್ಣ

೧೫೦೨೧ [2]ಸತ್ಯಕ್ಕೆ ನಡೆವವರ ಮೈ ಬೆತ್ತಲೆ

---

1 ಕಾಲವಲ್ಲದ ಕಾಲದಲ್ಲಿ ಕಾಗೆ ರಾಗಿ ತಿಂತು

2 (i) ಸತ್ಯ (ಧರ್ಮ)ಕ್ಕೆ ಹೋದವನ ಹೆಂಡತಿ ಬೆತ್ತಲೆ
(ii) ಸತ್ಯದ ದೇವರು ಬರಿ ಬೆತ್ತಲೆ

೧೫೦೨೨ ಹಾಕ ಬೆರಣೆ ಹಾಕಿ ಲೋಕ ಹಾಳು

೧೫೦೨೩ ಹಾದರಗಿತ್ತಿ ಕರೀರಿ ಕಳಸದ ತಟ್ಟೆ ಹಿಡಕೊಕೆ

೧೫೦೨೪ ಹಾದರಗಿತ್ತಿ ಮಾತು ಹಸ, ಗರತಿಯ ಮಾತು ಕಸ

೧೫೦೨೫ ಹಾದರಗಿತ್ತಿಗೆ ಅರಮನೆ, ಗರತಿಗೆ ಹುಲ್ಲು ಮನೆ

೧೫೦೨೬ [1]ಹಾದರಗಿತ್ತೀರ್ಗೆ ಹಾಸು ಮಂಚ, ಗರತೀರ್ಗೆ ಬೂದಿ ಗುಂಡಿ

೧೫೦೨೭ ಹಾದರಗಿತ್ತೀನ್ ಕರೆ ಸುಂದರದಾಗೆ,
ಗರತೀನ್ ಕರೆ ಪಕ್ರೋಳಿ ತೊಳೆ(ಎಂಜಲು ಬಳಿ)ಯೋಕೆ

೧೫೦೨೮ ಹಾಳಿಯುವರು ಹರಿವಾಣಕ್ಕೆ ಬಂದರು,
ಹರಿವಾಣದವರು ಹಾಳಿಗೆ ಬಂದರು

೧೫೦೨೯ ಪತಿವ್ರತೆಗೆ ಉಪವಾಸ, ಹಾದರದ ಹೆಣ್ಣಿಗೆ ಹಿರಣ್ಯಾಭಿಷೇಕ

ಕಾಲದ ಬೆಲೆ

೧೫೦೩೦ ಅತ್ತು ಕಾಡಬೇಡ, ಹೊತ್ತು ಕಳೆಯ ಬೇಡ

೧೫೦೩೧ ಕಳೆದು ಹೋದ ಕಾಲ ಮರಳಿಬಾರದು

೧೫೦೩೨ ಆಲೋಚನೆಗೆ ಅಂತ್ಯವಿಲ್ಲ, ಕಾಲಕ್ಕೆ ಪರಿಮಿತಿಯಿಲ್ಲ

೧೫೦೩೩ ಕಾಲವೇ ಹಣ

೧೫೦೩೪ ಕಾಲ ಮತ್ತು ಅಲೆ ಯಾರಿಗೂ ಕಾಯುವುದಿಲ್ಲ

೧೫೦೩೫ ಕಾಲದ ಪ್ರಯೋಜನ ಗೊತ್ತಿಲ್ಲದವರಿಗೆ
ದಿನ ದೀರ್ಘವಾಗಿ ತೋರುತ್ತದೆ

೧೫೦೩೬ [2]ಮುತ್ತಿಗಿಂತಲೂ ಹೊತ್ತು ಉತ್ತಮ

---

1 ಹಾದರಗಿತ್ತಿ ಮಕ್ಕಳ್ಗೆ ಹಾಸ್ಮಂಚ, ಪತವರ್ತೆ ಮಕ್ಕಳಿಗೆ ಪರ್ಲಕ್ಷಣ

2 ಮುತ್ತು ಕಳೆದರೆ ಸಿಕ್ಕೀತು, ಹೊತ್ತು ಕಳೆದರೆ ಸಿಕ್ಕೀತೆ ?

ಒಗಟು

೧೪೯೧೫ ಒಗಟು ಮಾತಿಗೆ (ಸಗಾಟ) ಸಟುಗ ತಂದ

೧೪೯೧೬ ಕತ್ತರಿ ಕಣ ನುಂಗಿತು, ಎತ್ತು ಗಾಣ ನುಂಗಿತು,
ಎತ್ತು ಹೊಡೆಯೋನ್ನ ನೊಣ ನುಂಗಿತು

೧೪೯೧೭ ಮುಚ್ಚಿ ಹೇಳಿದರೆ ಒಗಟು, ಬಿಚ್ಚಿ ಹೇಳಿದರೆ ಒರಟು

೧೪೯೧೮ ಹಸಿರು ಮರದಲ್ಲಿ ಹಲವು ಪಕ್ಷಿಗಳು

ಒಬ್ಬೊಬ್ಬರಿಗೆ ಒಂದೊಂದು ಕಾಟ

೧೪೯೧೯ ಅಡವಿಗೆ ಹೋದರೂ ಚಿಗ(ಡ)ಟನ (ಚಿಕ್ಕಾಟದ, ಚಿಕ್ಕಾಡುವಿನ)
ಕಾಟ ತಪ್ಪಲಿಲ್ಲ

೧೪೯೨೦ ಅತ್ತೆಗೆ ಇರುವೆ ಕಾಟ, ಮಗಳಿಗೆ ಮಿಂಡರ ಕಾಟ

೧೪೯೨೧ ಆಲೆಯು ಮನೆ ದೆವ್ವ

೧೪೯೨೨ ಉಪವಾಸವಿರಬಹುದು, ಉಪದ್ರವ ತಾಳಲು ಕಷ್ಟ

೧೪೯೨೩ ಓಟ ಓಡಿದರೂ ಕಾಟ ತಪ್ಪಲಿಲ್ಲ

೧೪೯೨೪ ಕುಂಭಕೋಣಕ್ಕೆ ಹೋದರೂ ಕುಂಭದ್ರೋಣ ತಪ್ಪಲಿಲ್ಲ

೧೪೯೨೫ ತಿಂದೂ ಉಂಡೂ ತಿಮ್ಮನ ಕಾಟ

೧೪೯೨೬ ಧೂಳಿನಲ್ಲಿ ಬಿದ್ದರೆ ಚೇಳಿನ ಕಾಟ ತಪ್ಪೀತೆ?

೧೪೯೨೭ ನಾಡಿನಲ್ಲಿದ್ದರೂ ಆಡಿನ ಭಯ ತಪ್ಪಲಿಲ್ಲ

೧೪೯೨೮ ನಿಶಾಟನಿಗೆ ಪಿಶಾಚಿ ಕಾಟ

೧೪೯೨೯ ಬೇನಿ ನಿಂತರೂ ಹೇನಿನ ಕಾಟ ತಪ್ಪಲಿಲ್ಲ

೧೪೯೩೦ ಮನೆಗೆ ಬಂದ್ರೆ ಅಮ್ಮನ ಕಾಟ, ಹೊರಗ್ಹೋದ್ರೆ ಗುಮ್ಮನ ಕಾಟ,
ಮಾರಿಗುಡಿಗ್ಹೋದ್ರೆ ತಿಗಣೆ ಕಾಟ

೧೪೯೩೧ ಮಂದನೆ ಮಾಡಿದರೂ ಹಂದಿ ಕಾಟ ತಪ್ಪಲಿಲ್ಲ

೧೪೯೩೨ ಸಮಾಧಿಯಲ್ಲೂ ಸೊಳ್ಳೆಕಾಟ

೧೪೯೩೩ ಸಂಕಟಕ್ಕೆ ನಾರಾಯಣ ಅಂದರೂ ವೆಂಕಟಪ್ಪ ಬೆನ್ನುಬಿಡ

೧೪೯೩೪ ಸುಡುಗಾಡಿಗೆ ಹೋದರೂ ಕಾಗೆ ಕಾಟ ತಪ್ಪಲಿಲ್ಲ

೧೪೯೩೫ ಹೇಲೋಕೆ ಕುಳಿತಲ್ಲಿ ಹಂದಿ ಕಾಟ

ಒಂಟಿತನ

೧೪೯೩೬ ಕಾಗೆ ವನ ಸೇರಿದಂಗೆ

೧೪೯೩೭ ಹಿಂಡು ತೊರೆದ ಕಪಿಯಂಗೆ

ಕತ್ತಲು

೧೪೯೩೮ ಅಪ್ಪಿಕೊಂಡ್ರೆ ಬಿಡುತ್ತೇ ಅಮಾವಾಸ್ಯೆ ಕತ್ತಲೆ ?

೧೪೯೩೯ ಕತ್ತಲೆಯೊಳಗಿನ ಗುದ್ದಾಟ

೧೪೯೪೦ ಕತ್ತಲೆ ಕೋಣೇಲಿ ಕರಿಬೆಕ್ಕು ಕೂಡಿದಂತೆ

೧೪೯೪೧ ಕತ್ತಲೆ ಹೊತ್ತಿನಲ್ಲಿ ಕಲಶಕನ್ನಡಿ ಒಡೆದ ಹಾಗೆ

೧೪೯೪೨ ದೀಪ ಆರಿಸಿದ ಮೇಲೆ ಸರಕೆಲ್ಲ ಒಂದೇ

ಕಂಡುಹಿಡಿಯುವುದು ಹೇಗೆ?

೧೪೯೪೩ ಅಡಾವುಡಿ ಸಂತೇಲಿ ನನ್ನ ಮಗನ್ನ ತುಣದವನು ಯಾರು?

೧೪೯೪೪ ಅಂಬಲಿಯಲ್ಲಿ ಕಂಡ್ಯಾ ತೊಣಚಿನಾಯಕನ್ನ ?

೧೪೯೪೫ ಕುಂಬಳರಾಯನ ಪಟ್ಟಣದಲ್ಲಿ ಸಿಂಬಳಬುರುಕರು ಎಷ್ಟು ಮಂದಿಯೊ ?

೧೪೯೪೬ ಕುಂಬಳಕಾಯಿ ಪಟ್ಟಣದಾಗ ಶಿಂಬಳಬುರುಕೀನ
ಯಾರು ಸೇರಬೇಕಂತೆ ?

೧೪೯೪೭ ಜನಜಂಗುಳಿಯಲ್ಲಿ ಜಂಗಮನನ್ನು ಹುಡುಕಿದ ಹಾಗೆ

೧೪೯೪೮ [1]ಜಾತ್ರೆಯಲ್ಲಿ ಕಂಡ್ಯಾ ಜೋತ್ರದವನ ?

೧೪೯೪೯ ತುಂಬಿದ ಪೇಟೆ (ಸಂತೆ) ಯಲ್ಲಿ ಕಂಡೆಯಾ (ಕಂಡ್ಯಾ)
ತುಂಡಂಗಿ (ಮಗನ್ನ ಅಂದಳಂತೆ) ಯುವನ ?

೧೪೯೫೦ ದೊರೆಗಳ ಹಿಂಡಿನಲ್ಲಿ ನನ್ ಕುರಿ ಕಂಡ್ಯಾ ಅಂದಂಗೆ

೧೪೯೫೧ ನಾಡು ಜಂಗಮರಲ್ಲಿ ನನ್ನ ಬೋ(ಳು)ತು ಜಂಗಮನೆಲ್ಲಿ ?

೧೪೯೫೨ ಮೇಲುಕೋಟೆ ಜಾತ್ರೆಯಲ್ಲಿ ನನ್ನ ಬೋಳು ದಾಸಯ್ಯನ
ಕಂಡ್ಯಾ ಅಂದನಂತೆ

೧೪೯೫೩ ರಾಮರ ಜಾತ್ರೇಲಿ ಸೋಮಾರಿ ಮೊಕದವಳ್ನ ಕಂಡ್ಯಾ ?

೧೪೯೫೪ [2]ವಿಜಾಪುರದಲ್ಲಿ ಇಜಾರದವರಿಗೇನು ಕಡಿಮೆ ?

೧೪೯೫೫ ಸನುವಾರ ಸಂತೇಗೆ ಸಾಟ್ಯಾಪ್ಪ್ರ ಅಂವ್ರೆ ಕಡ್ಬಡೆದೂತ

ಕಾರಣವಿಲ್ಲದೆ ಕಾರ್ಯವಿಲ್ಲ

೧೪೯೫೬ ಉಂಡವ ತೇಗಿದಂತೆ

೧೪೯೫೭ ಊ(ಯಾ)ತರಲ್ಲಿ ಏನೂ ಇಲ್ಲ, ಪಾತ್ರದಲ್ಲಿ ಕಲ್ಲು ಬಿತ್ತು

೧೪೯೫೮ ಒದ್ದೆ ಇಲ್ಲದ ಕಡೆ ಗೆದ್ದಲ ಭಯವಿಲ್ಲ

೧೪೯೫೯ ಕಾರಣವಿಲ್ಲದೆ ಕಾರ್ಯವಿಲ್ಲ, ಮಾರಣವಿಲ್ಲದ ಮಾಟವಿಲ್ಲ

೧೪೯೬೦ ಗಾಳಿಯಿಲ್ಲದೆ ಎಲೆ ಅಲ್ಲಾಡದು

---

1 ಸಂತೇಲಿ ಕಂಡ್ಯಾ ದಟ್ಟಿ ಉಟ್ಟವನಾ ?
2 ಹಜಾರ ವಾಯಕನ ಪೇಟೇಲಿ ಇಜಾರ ನಾಯಕರಿಗೇನು ಕಡಿಮೆ ?

೧೪೯೬೧ ಗಾಳಿಯಿಲ್ಲದೆ ಧೂಳು ಎದ್ದೀತೆ ?

೧೪೯೬೨ ತನು ಇದ್ದ ತಾವು ತಾವರೆ

೧೪೯೬೩ ನಿದ್ದೆಯಿಲ್ಲದೆ ಬಂದಿ ಹೋಗದು

೧೪೯೬೪ ನೀರಿಲ್ಲದೆ ಮೀನಿಲ್ಲ

೧೪೯೬೫ ಬಿಸಿಲಿಲ್ಲದೆ ಬೇಗೆ ಬಂದೀತೆ ?

೧೪೯೬೬ ಬೆಂಕಿ ತಗುಲಿದಲ್ಲದೆ ಕೈ ಸುಡದು

೧೪೯೬೭ ಬೆಂಕಿ ಇದ್ದಲ್ಲಿ ಬೆಳಕು, ನೀರಿದ್ದಲ್ಲಿ ಕೆಸರು

೧೪೯೬೮ ಬೆಂಕಿ ಇಲ್ಲದೆ ಹೊಗೆ ಹೊರಟೀತೆ ?

೧೪೯೬೯ ಮೆಟ್ಟಿದಲ್ಲದೆ (ಮುಟ್ಟಿದಲ್ಲದೆ) ಹಾವು ಕಡಿಯದು

೧೪೯೭೦ ಸೀತೆಯು ಮನೆಯಿಂದ ಲಂಕೆಗೆ ಸೇತುವೆಯಾಯಿತು

೧೪೯೭೧ ಹುಲಿ ಹೊಂಚಿ ಹಾಕುವುದು ಮೇಲೆ ಬೀಳಲಿಕ್ಕೆ

೧೪೯೭೨ ಹೂಸಿದಲ್ಲದೆ ನಾರದು

೧೪೯೭೩ ಹೇತುವಿಲ್ಲದೆ ಮಾತು ಬಾರದು

೧೪೯೭೪ *ಹೊಗೆಯಿದ್ದಲ್ಲಿ ಬೆಂಕಿ, ತಗ್ಗಿದ್ದಲ್ಲಿ ಜಳಿ

ಕಾರಣಕ್ಕೆ ಮೊದಲೇ ಕಾರ್ಯಾತುರತೆ

೧೪೯೭೫ ಅಡಿ (ಏನೇ, ಲೇ, ಎಲೆಗೆ) ಅನ್ನೋಕೆ ಅವಳೇ ಇಲ್ಲ, ಪುಳ್ಳೀಪೇರು (ಮಾಲಿಂಗ, ಮುದ್ದುರಂಗ, ಶಲ್ವಪಿಳ್ಳೆ) ರಾಮಕೃಷ್ಣ

೧೪೯೭೬ ಅಡಿಗೆ ಆಗೋದಕ್ಕೆ ಮುಂಚೆ ಎಲೆ ಹಾಕಿದ ಹಾಗೆ

---

* ಹೊಗೆಯಿದ್ದಲ್ಲಿ ಬೆಂಕಿ, ಹಗೆ ಇದ್ದಲ್ಲಿ ಭಯ

೧೫೦೩೭ ವೇಳೆಗೆ ಬಂದ ವಾಸುದೇವ

೧೫೦೩೮ ಹೊತ್ತು ಹೊನ್ನು

೧೫೦೩೯ ಹೊತ್ತು ಹೋದರೆ ಮುತ್ತು ಕೊಟ್ಟರೂ ಬಾರದು

ಗತಿ

೧೫೦೪೦ ಅತಿರಥನಾದರೂ ಗತಿಗೆಡಬಾರದು

೧೫೦೪೧ ಮಿತಿ ಮೀರಿದರೂ ಗತಿ ಮೀರಬಾರದು

ಗಾಳಿ

೧೫೦೪೨ ಅಮುಕುವ ಗಾಳಿಯ ಮುಂದೆಯೂ
ಧುಮುಕುವ ನೀರ ಮುಂದೆಯೂ ಹೋಗಬೇಡ

೧೫೦೪೩ ನೀಳವಾದರೂ ಗಾಳಿಗೇನು ?

೧೫೦೪೪ ನೀಳದರ ಮೇಲೆ ನಿಂತರೆ ಗಾಳಿಗೇನು ಕಡಮೆ ?

೧೫೦೪೫ ಬಿರುಗಾಳಿ ಬಲ್ಲುದೆ ಬೇವಿನ ಕಹಿಯ ?

ಘಟನೆಗಳು

೧೫೦೪೬ ಎತ್ತನ್ನು ಹುಲಿ ತಿಂದಿತು,
ಸಬರ ಮುರಿಯನ್ನು ಗೆದ್ದಲು ತಿಂದಿತು

೧೫೦೪೭ ಟೊಂಗೆ (ಟಂಗು) ಹರಿಯಿತು, ಕಾಲು ಮುರಿಯಿತು

೧೫೦೪೮ ದೀಪ ದ್ವೀಪಾಂತರಕ್ಕೆ ಹೋಯಿತು,
ಬತ್ತಿ ಪರ್ವತಕ್ಕೆ ಹೋಯಿತು

೧೫೦೪೯ ಮರ ಮುರಿಯಿತು, ಹಕ್ಕಿ ಹಾರಿತು

೧೫೦೫೦ ತಿಪ್ಪಘಟ್ಟದ ದೇವರು ಹಿಂದು ಮುಂದಾಯಿತು

೧೫೦೫೧ ಹಕ್ಕಿ ತನ್ನ ಗೂಡಿಗೆ ಹೋದರೆ ಕಪ್ಪೆ ತನ್ನ ಗೂಡಿಗೆ ಹೋಯಿತು

೧೫೦೫೨ ಹಬ್ಬ ಹಾರಿಯೇ ತೀರಿತು, ಕರಿ ದಿನಾನು ಒಣಗೇ ತೀರಿತು

೧೫೦೫೩ ಹಾಲೂ ಉಕ್ಕಿತು, ಬಾಯೂ ಬೆಂದಿತು

೧೫೦೫೪ ಹಾವೂ (ಆಟವೂ) ಮುಗಿಯಿತು, ತಂತಿಯೂ ಹರಿಯಿತು

ಆಕಸ್ಮಿಕ ಘಟನೆಗಳು

೧೫೦೫೫ ಉದ್ದ ಮರದ ತುದಿಯೇರಿ ಕೈತಪ್ಪಿ ಬಿದ್ದ ಹಾಗೆ

೧೫೦೫೬ ಕಣ್ಣಿಗೆ ಬರುವುದು ಹುಬ್ಬಿಗೆ ಬಂತು

೧೫೦೫೭ [1]ಕಾಗೆ ಕೂರುವುದಕ್ಕೂ ಟೊಂಗೆ
ಮುರಿಯುವುದಕ್ಕೂ ಒಂದಾಯಿತು

೧೫೦೫೮ ಕೂಪಕ್ಕೆ ಇಳಿದೋನಿಗೆ ನೇಣು ಹರಿದ ಹಾಗೆ

೧೫೦೫೯ [2]ಬಾವಿ ತೋಡಲು ಹೋಗಿ ಬೇತಾಳನ ಕೈಲಿ ಸಿಕ್ಕಿದ ಹಾಗೆ

೧೫೦೬೦ ಹದ್ದು ಬಂದು ಹಾರಿಸಿಕೊಂಡು ಹೋದ ಹಾಗೆ

೧೫೦೬೧ ಹೊತ್ತಲ್ಲದ ಹೊತ್ತಿನಲ್ಲಿ ತೊತ್ತು
(ಕೊತ್ತಿ ಮೈನೆರೆಯಿತು) ಮೈ ನೆರೆದಳು

---

1 (i) ಹದ್ದು ಹಾರುವುದಕ್ಕೂ ಕೋಳಿ ಹೂಡಲಿಕ್ಕೂ ಟೊಂಗೆ ಮುರಿಯುವುದಕ
ಸರಿಹೋಯ್ತು

(ii) ಕಾಗೆ ಬಂತು, ಟೊಂಗೆ ಮುರೀತು

2 (i) ಭಾವಿ ತೆಗದರೆ ಬೇ (ಬಗೆದಾ)ಳ ಹೊರಟಿತು

(ii) ಭಾವಿ ತೆಗೆಯಲು ಹೊರಟರೆ ಬೇತಾಳ ಹೊರಟಿತು

ಚಿಂತೆ

೧೫೦೬೨ ಅಮರ ಓದಿದರೆ ಚಿಂತೆ ಶಮನವಾಗುತ್ತೇ?

೧೫೦೬೩ ಆಧಿ ಓಡಿದ ಮನುಷ್ಯನಿಗೆ ಅದೇ ಮುಪ್ಪು

೧೫೦೬೪ ಒಳಗೆ ಮನಸ್ಸು ಉರಿಯಬಾರದು,
ಹೊರಗೆ ಒಲೆ ಉರಿಯಬಾರದು

೧೫೦೬೫ ಚಿಂತೆ ಇದ್ದವನಿಗೆ ಚಿಕಿತ್ಸೆ ಓಡಿಸಲ್ಲ

೧೫೦೬೬ ಚಿಂತೆ ಮಾಡಿದರೆ ಸಂತೆ ಸಾಗೀತೆ ?

೧೫೦೬೭ ಚಿಂತೆಗೆಟ್ಟ ಚಿಕ್ಕಪ್ಪ ಸರಿ ಹೊತ್ತಿನಲ್ಲಿ ದಡಬಡಿಸಿದ

೧೫೦೬೮ ಚಿಂತೆಯಿಲ್ಲದಿರುವ ಗೂಳಿ (ಕೋಣ)
ಸಂತೆಯಲ್ಲಿ ಮೆಲುಕಾಡಿಸಿತಂತೆ

೧೫೦೬೯ ಚಿಂತೆಯಿಲ್ಲದವನಿಗೆ ಸಂತೆಯಲ್ಲೂ ನಿದ್ದೆ ಬಂತು

೧೫೦೭೦ ಚಿಂತೆಯೆ ಮುಪ್ಪು, ಸಂತೋಷವೇ ಯೌವನ

೧೫೦೭೧ ಚಿಂತೆಯೇ ಮುಪ್ಪು, ಚಿತೆಯೇ ಚಿಕಿತ್ಸೆ

೧೫೦೭೨ ಚಿಂತೆಯೇ ಚಿತೆಗೆ ಕಾರಣ

೧೫೦೭೩ ತನುವಿನ ರೋಗಕ್ಕೆ ಮದ್ದು, ಮನದ ರೋಗಕ್ಕೆ ಮೃತ್ಯು

೧೫೦೭೪ ಬೆಂಕಿ ಚಿನ್ನವನ್ನು ಶುದ್ಧ ಮಾಡಿದರೆ
ಚಿಂತೆ ಮನುಷ್ಯನನ್ನು ಶುದ್ಧ ಮಾಡುತ್ತೆ

೧೫೦೭೫ ಮದುವೆಗೆ ಮುಂಚೆ ಹೆಂಡತಿ ಚಿಂತೆ,
ಮದುವೆಯಾದ ಮೇಲೆ ಮಕ್ಕಳ ಚಿಂತೆ

೧೫೦೭೬ ಮನಗುದಿಗೆ ಮದ್ದಿಲ್ಲ

೧೫೦೭೭ ಮನದ ನವೆಗೆ ಮದ್ದು ಯಾವ ಧನ್ವಂತರಿ ಬಳಿ ಇದೆ?

೧೫೦೭೮ ಮನೋರೋಗವೇ ಮಹಾರೋಗ

೧೫೦೭೯ ಮನೋರೋಗಕ್ಕೆ ಮರಣವೇ ಮದ್ದು

೧೫೦೮೦ ಮನೋರೋಗಕ್ಕೆ ಮದ್ದಿಲ್ಲ, ಕೆಡುವ ಕಾಲಕ್ಕೆ ಬುದ್ಧಿಯಿಲ್ಲ

೧೫೦೮೧ ಯಾರ ಚಿಂತೆ ಯಾರಿಗೆ ? ಲಾಳಿಗರಣ್ಣ ಲಾಳಿಗರೊ

೧೫೦೮೨ ವ್ಯಸನವಿದ್ದವ ಹಸನಾಗನು

೧೫೦೮೩ ಸದಾಶಿವನಿಗೆ ಅದೇ ಧ್ಯಾನ, ಮನೆ ಗಂಡನಿಗೆ ಮನೋರೋಗ

೧೫೦೮೪ ಸಂತೋಷ ಮುಖ್ಯೊ, ಚಿಂತೆ ಮುಖ್ಯೊ ?

ಒಬ್ಬೊಬ್ಬರಿಗೆ ಒಂದೊಂದು ಚಿಂತೆ

೧೫೦೮೫ [1]ಅಜ್ಜಿಗೆ ಅರಿವೆ ಚಿಂತೆ, ಮಗಳಿಗೆ ಮಾವನ ಚಿಂತೆ,
ಮೊಮ್ಮಗನಿಗೆ ರೊಟ್ಟಿಯ ಚಿಂತೆ

೧೫೦೮೬ ಅತ್ತೆಗೆ ಅಳಿಯ ಚಿಂತೆ, ಸೊಸೆಗೆ ತುಡುಕಿ ತಿನ್ನೊ ಚಿಂತೆ

೧೫೦೮೭ ಅವ್ವಗೆ ಅಂಬಲಿ ಗ್ಯಾನ, ಮಗಳಿಗೆ ಮಿಂಡನ ಗ್ಯಾನ

೧೫೦೮೮ ಅಪ್ಪನಿಗೆ ಸಂತೆ ಚಿಂತೆ, ಮಕ್ಕಳಿಗೆ ಕಡಲೆ ಚಿಂತೆ

೧೫೦೮೯ ಇದ್ದವನಿಗೆ ಒಂದು ಚಿಂತೆಯಾದರೆ ಇಲ್ಲದವನಿಗೆ ನಾನಾ ಚಿಂತೆ

೧೫೦೯೦ ಊರ ಚಿಂತೆ ಕಟ್ಕೊಂಡು ಮೀರ (ಕೋರಿ)ಶೆಟ್ಟಿ
(ಕೊತ್ವಾಲ, ಖಾಜಿಸಾಬಿ) ಬಡವಾದಂತೆ

೧೫೦೯೧ [2]ಊರಿಗೆ ಊರೇ ಉಡು ಮುತ್ತಿಗೆ,
ಮನೆ ಮುದುಕಿ ಸೀರೆ ಉಡಿಸಿ ಹೋಗು ಅಂದಳಂತೆ

---

1 ಅಜ್ಜಿಗೆ ಅರಿವೆ (ಕೆಮ್ಮಿನ)ಚಿಂತೆ, ಮಗಳಿಗೆ ಮಿಂಡನ ಚಿಂತೆ, ಮೊಮ್ಮಗಳಿಗೆ ಕಜ್ಜಾಯದ (ತಿಂಡಿ) ಚಿಂತೆ

2 (i) ಊರಿಗೆ ದಂಡು ಮುತ್ತಿದಾಗ ಗೌಡನ ಹೆಂಡತಿ ಶಾಲೆ ಉಡಿಸಿ ಹೋಗು ಅಂದಳಂತೆ
(ii) ಊರಿಗೆ ಬೆಂಕಿ ಹತ್ತಿತಂತೆ ಅಜ್ಜಿ ಸೀರೆ ಉಡಿಸಿ ಕೊಡು ಅಂತ ಕೇಳಿದಳಂತೆ

೧೫೮೯೨ ಊರಿಗೆ ರೋಗದ ಚಿಂತೆ, ಮಾರಿಗೆ ಕುರಿ ಚಿಂತೆ

೧೫೮೯೩ ಊರೆಲ್ಲ ಉಪ್ಪಾರಕೊಂಡು ಹೋಗುವಾಗ
ನಮ್ಮತ್ತೆ ಮಿಸಲು ಬತ್ತ ಕುಟ್ಟಿದಳು

೧೫೮೯೪ ಗೀತಗಾರನಿಗೊಂದು ವಾತದ ರೋಗದ ಚಿಂತೆ

೧೫೮೯೫ ನಂದು ನನಗ್ಯಾಕ, ನನ್ಮಗಳಿಗೆ
(ಸೋಸಯ್ಯನ) ಅಂಗಡಿ ತಿಮ್ಮನ ಗ್ಯಾನ

೧೫೮೯೬ ಸೊಪ್ಪು ತಿನ್ನಕ್ಕೆ ಉಪ್ಪಿಲ್ಲದ ಚಿಂತೆ ಕೆಲವರಿಗಾದರೆ,
ಸುಪ್ಪತ್ತಿಗೆ ಮಾಸಿತಲ್ಲ ಎಂದು ಕೆಲವರು

೧೫೮೯೭ ಸನ್ಯಾಸಿಗೆ ಯಾವ ಕಳವಳ ಅಂದ್ರೆ, ಅನ್ನದ್ದೊಂದೇ ಕಳವಳ

೧೫೮೯೮ ಸಂಪತ್ತಿಗೆ ನಿದ್ದೆ ಗನ, ಬಡವು ಗಂಡ್ಸಿಗೆ ಚಿಂತೆ ಗನ

ಒಬ್ಬೊಬ್ಬರಿಗೆ ಒಂದೊಂದು ದುಃಖ

೧೫೮೯೯ ಊರಿಗೆ ಊರ ದುಃಖ, ಕೋರಿಗೆ ಮದುವೆ ದುಃಖ

೧೫೯೦೦ ಎಮ್ಮೆಗೆ ಹರೋ ದುಃಖ, ಕೋಣನಿಗೆ ಬರೋ ದುಃಖ

೧೫೯೦೧ ಕೊಳ್ಳೆಯವರು ಕೊಳ್ಳೆಗತ್ತರು. ಸೂರೆಯವರು ಸೂರೆಗತ್ತರು

೧೫೯೦೨ *ಗಂಡನಿಲ್ಲದ ಮುಂಡೆ, ಮಂಡೆ ನೆನೆಸಿಕೊಂಡು ಅತ್ತಳು

೧೫೯೦೩ ಚಿಂತೆಯುವರು ಚಿಂತೆಗತ್ತರೆ,
ಕೆಂಚ ತನ್ನ ಗಡಿಗೆ (ಗುಡಿಗೆ)ಗೆ ಅತ್ತ

೧೫೯೦೪ ಹೆಣದವರು ಹೆಣಕ್ಕೆ ಅತ್ತರೆ, ಕೊರವ ತನ್ನ ದುಡ್ಡಿಗೆ ಅತ್ತ

---

* (i) ಮುಂಡೆಗೇಕೆ ತುರುಬಿನ ಚಿಂತೆ
(ii) ಬೋಳಿ ತುರುಬು ನೆನೆಸಿಕೊಂಡು ಅತ್ತ ಹಾಗೆ

ಆಗಿ ಹೋದುದಕ್ಕೆ ಚಿಂತೆಯೇಕೆ?

೧೫೧೦೫ ಅಂತು ಕೊಟ್ಟು ಚಿಂತೆ ಮಾಡಿದರೆ ಏನು ಬಂತು ?

೧೫೧೦೬ ಆದದ್ದಕ್ಕೆ ಮರುಕವ್ಯಾಕೆ, ಆಗದ್ದಕ್ಕೆ ಚಿಂತೆಯೇಕೆ ?

೧೫೧೦೭ ಆದೀಲಿ ಹಾದೀಲಿ ಕೂತು ಅತ್ತರೆ ಹೋದ ವಸ್ತು ಬಂದೀತೆ ?

೧೫೧೦೮ ಏರಿ ಕೆಳಕ್ಕೆ ಹೋದ ನೀರು ಏರಿ ಕೆಳಕ್ಕೇನೇ ಹೊರತು ಮೇಲಕ್ಕಲ್ಲ

೧೫೧೦೯ ಒಕ್ಕಲು ಮನೆ ಸುಟ್ಟು ಹೋದ ಮೇಲೆ
ಕಕ್ಕುಲಿತೆ ಪಟ್ಟು ಫಲವೇನು ?

೧೫೧೧೦ [1]ಒಡೆದು ಹೋದ ಹಾಲು ಹೆಪ್ಪಿಗೆ ಬಂದೀತೆ ?

೧೫೧೧೧ ಕಾಸು ಕೊಟ್ಟಾಯ್ತು, ಹೊಗೆ ಸೊಪ್ಪು ಸುಟ್ಟಾಯ್ತು

೧೫೧೧೨ ಕೆಟ್ಟಿದ್ದಕ್ಕೆ ಬಾಯಿ ಬಿಟ್ಟು ಫಲವಿಲ್ಲ

೧೫೧೧೩ ಕೈ ಮೀರಿದ ಮೇಲೆ (ಕಣ್ಣೀರಿಟ್ಟೇನು) ಕೈ ಕೈ ಹಿಸುಕಿ ಫಲವೇನು?

೧೫೧೧೪ ಕೊಂದ್ಬು ಕಾಲ ನಾಯಿ ತಿಂದರೇನು, ನರಿ ತಿಂದರೇನು ?

೧೫೧೧೫ ಗುದ್ದಿದ ಗುದ್ದು ಗಪ್ಪೆಗೆ ಬಿಟ್ಟ ನೀರೂ (ಸರಿ) ಹಿಂದಕ್ಕೆ ಬರದು

೧೫೧೧೬ ತೀರಕ್ಕೆ ಬಂದ ಮೇಲೆ ತೊರೆಯ ಸುದ್ದಿ ಏಕೆ ?

೧೫೧೧೭ ತೀರಿದ ಅಡುಗೆ ತಿರುಗಿ ಬಯಸಿದರೆ ಬಂದೀತೆ ?

೧೫೧೧೮ ದುಡ್ಡು ಕಳಕೊಂಡ ಗಾಣಿಗಿತ್ತಿ ಹಾಗೆ

೧೫೧೧೯ ನಷ್ಟವಾದ ಮೇಲೆ ದೃಷ್ಟಿ ಇಟ್ಟೇನು ?

೧೫೧೨೦ [2]ನುಂಗಿದ ತುತ್ತಿನ ರುಚಿ ಬಯಸಿದರೆ ಬಂದೀತೆ ?

೧೫೧೨೧ ನೆ(ನ)ಗಚಿ ಹೋದದ್ದು ಮಗುಚಿ ಬಂದೀತೆ ?

---

1 ಒಡೆದು ಹೋದ ಹಾಲಿಗೆ ಅತ್ತೇನು ಪ್ರಯೋಜನ ?
2 ನುಂಗಿದ ತುತ್ತಿಗೆ ರುಚಿ ಇಲ್ಲ

೧೫೧೨೨ ನೆನಸಿಕೊಂಡರೆ ಮನಸ್ಸು ಸ್ವಸ್ಥವಾದೀತೆ ?

೧೫೧೨೩ ನೆನ್ನೆ ಉಂಡದ್ದು ಇಂದು ಬಯಸುವುದೇಕೆ ?

೧೫೧೨೪ ಪದಕ ಹೋಯ್ತು ಅಂತ ಬದುಕಲಾರದೆ ಹೋದ

೧೫೧೨೫ ಬೇರು ಹೋದ ಮೇಲೆ ಮರದ ಯೋಚನೆ ಯಾಕೆ ?

೧೫೧೨೬ ಭಿನ್ನವಾದ ಗಡಿಗೆ ಹೊನ್ನು ಕೊಟ್ಟರೂ ಸರಿ ಹೋಗದು

೧೫೧೨೭ [1]ಮಾಡಿದ್ದು ಮರೆಯಲರಿಯದು, ಹೋದದ್ದು ಬರಲರಿಯದು

೧೫೧೨೮ [2]ಮಿಂಚಿ ಹೋದ ಕೆಲಸಕ್ಕೆ ಚಿಂತಿಸಿ ಫಲವೇನು ?

೧೫೧೨೯ ವ್ಯರ್ಥವಾದ ಕೆಲಸಕ್ಕೆ ಸ್ವಾರ್ಥಪಟ್ಟಾರೆ ?

೧೫೧೩೦ ಹಳ್ಳದ ನೀರು ತಿಟ್ಟಿಗೇರೀತಾ ?

೧೫೧೩೧ ಹಾಳಾ(ಪೋಲಾ)ದ ವಸ್ತು ಹಾಲಿನಂತೆ ಇದ್ದರೇನು ?

೧೫೧೩೨ ಒಂದಿನದ ನೆನೆಸಿಕೊಂಡು ಒತ್ತಿಲಾಗ ಅಳುತಿದ್ದನಂತೆ

೧೫೧೩೩ ಹೋದದ್ದಕ್ಕೆ ಅತ್ತೇನು ಫಲ ?

ತಾರತಮ್ಯ

೧೫೧೩೪ ಅಗ್ಗಳನ ಮುಂದೆ ವೆಗ್ಗಳನೆ ?

೧೫೧೩೫ ಅಜಗಜಾಂತರ ನ್ಯಾಯ

೧೫೧೩೬ ಅಡಕೆ ಮರಕ್ಕೂ ತೆಂಗಿನ ಮರಕ್ಕೂ ಒಂದೇ ತಳೆಯೊ ?

೧೫೧೩೭ ಅದ್ಲೆ ಚೆನ್ನಾಗಿದ್ದರೆ ಹಲಗೆಯು ಯೋಗ್ಯತೆ ಬಂದೀತೆ ?

೧೫೧೩೮ ಆನೆ ಎತ್ತ, ಆಡು ಎತ್ತ ?

---

1 ಹೋದ ಒಡವೆ ಮರಳಿ ಬಾರದು

2 (i) ಮೀರಿ ಹೋದ ಕೆಲಸಕ್ಕೆ (ಮಾತಿಗೆ) ಚಿಂತೆ ಏಕೆ ?

(ii) ಮೀರಿ ಹೋದ ಕೆಲಸಕ್ಕೆ ಹೋರಿ ಫಲವೇನು ?

೧೫೧೩೯ [1]ಆನೆ ಭಾರ ಆನೆಗೆ, ಕುದುರೆ ಭಾರ ಕುದುರೆಗೆ

೧೫೧೪೦ ಆನೆ ಆಕಾರದಲ್ಲಿ ದೊಡ್ಡದಾದ್ರೆ
ಸಿಂಹದೊಂದ್ಗೆ ಹೋರಾಡಬಲ್ದಾ ?

೧೫೧೪೧ ಆನೆಯ ಮುಂದೆ ಸೊಳ್ಳೆಯೆ ?

೧೫೧೪೨ ಉಕ್ಕು ಬೆಳ್ಳಗಿದ್ದರೂ ಚೊಕ್ಕ ಬೆಳ್ಳಿಗೆ ಹೋಲಿಸರು

೧೫೧೪೩ ಐದು (ಹತ್ತು) ಬೆರಳೂ ಒಂದೇ ಸಮನಾಗಿರುತ್ತವೆಯೆ ?

೧೫೧೪೪ ಒಂದು ಮಣ ಬೂದಿಗಿಂತ ಒಂದು ಮಣ ಕಿಡಿ ಲೇಸು

೧೫೧೪೫ ಕತ್ತೆಗೂ ಕುದುರೆಗೂ ಹೋಲಿಕೆಯೆ ?

೧೫೧೪೬ ಕಪ್ಪೆ ಈಜುವುದಕ್ಕೂ ಮನುಷ್ಯ ಈಜುವುದಕ್ಕೂ ಭೇದವಿಲ್ಲವೆ ?

೧೫೧೪೭ [2]ಕಾಗೆ ಕೋಗಿಲೆಯಂತಿದ್ದರೂ ರಾಗ ಭೇದವಿಲ್ಲವೆ ?

೧೫೧೪೮ ಕುಂಬಾರ ರಾಮನೂ ರಾಮ, ಕುಮಟಿ ರಾಮನೂ ರಾಮನೆ ?

೧೫೧೪೯ ಗರುಡನ ಮುಂದೆ ಗುಬ್ಬಚ್ಚಿಯೆ ?

೧೫೧೫೦ ಗೋಕುಲಾಷ್ಟಮಿಗೂ ಇಮಾಂಸಾಬಿಗೂ ಏನು ಸಂಬಂಧ ?

೧೫೧೫೧ ಸೇತುರಾವುತ ಎಲ್ಲಿ, ಗೋಕುಲಾಷ್ಟಮಿ ಎಲ್ಲಿ ?

೧೫೧೫೨ ಚಿನ್ನಕ್ಕೂ ಕಬ್ಬಿಣಕ್ಕೂ ವ್ಯತ್ಯಾಸವಿಲ್ಲವೆ ?

೧೫೧೫೩ ತಾಳೆಮರ ದೊಡ್ಡದಾದರೂ ತಾಳೆ ಹೂವಿಗೆ ಸರಿ ಬಂದೀತೆ ?

೧೫೧೫೪ ತುರಂಗಕ್ಕೂ ಕುರಂಗಕ್ಕೂ ಹೋಲಿಕೆಯೆ ?

೧೫೧೫೫ ತುಳಿದ ಧಾನ್ಯ ಮಳಲ ಸಮವೊ ?

---

1 ಆನೆಗೆ ಆನೆಯುಷ್ಟು, ಕುದುರೆಗೆ ಕುದುರೆಯುಷ್ಟು

2 (i) ಕಾಗೆ ಕೋಗಿಲೆಗೆ ಭೇದವಿಲ್ಲವೆ ?

(ii) ಕಾಗೆ ಕಪ್ಪಗಿದ್ದರೆ ಕೋಗಿಲೆ ಆದೀತೆ ?

೧೫೧೫೬ ನರಿ (ನಾಯಿ) ಎತ್ತ, ನಾಗಲೋಕವೆತ್ತ ?

೧೫೧೫೭ ನಾಗಾರ್ಜುನನಿಗೂ ಅರ್ಜುನನಿಗೂ ಏನು ಸಂಬಂಧ ?

೧೫೧೫೮ ಪಚ್ಚೆ ನುಚ್ಚಿಗಿಂತ ಕಡಿಮೆಯೆ ?

೧೫೧೫೯ ಪಾಕಕ್ಕೂ ಪಾಯಿಖಾನೆಗೂ ಸಂಬಂಧವೆ ?

೧೫೧೬೦ ಬೆಟ್ಟು ಬೆಟ್ಟಿಗೆ ವ್ಯತ್ಯಾಸ

೧೫೧೬೧ ಮೈಸೂರು ಮಾರಾಜ್ರೂ ರಾಜರೇ, ಬೇರೆ ರಾಜರೂ ರಾಜರೇ ?

೧೫೧೬೨ ಲಾವಂಚವೂ ಹುಲ್ಲೇ, ಲಕ್ಷ್ಮೀ ಪುತ್ರನೂ ಮನುಷ್ಯನೇ
ಆದರೆ ಭೇದವಿಲ್ಲವೊ ?

೧೫೧೬೩ ವಸಂತಕಾಲ ಬಂದರೆ ಕಾಗೆ ಕಾಗೇನೇ,
ಕೋಗಿಲೆ ಕೋಗಿಲೇನೇ

೧೫೧೬೪ ಸಾವಿರ ಬೆಕ್ಕು ಕೂಡಿದರೆ ಒಂದು ಹುಲಿಯಾದೀತೆ ?

೧೫೧೬೫ ಹಣ ತಿಂದು ಹುಟ್ಟಿದವಳಿಗೂ ಹಾಗದ
ಕಾಸು ತಿಂದವಳಿಗೂ ಸಮವೇ ?

೧೫೧೬೬ ಹತ್ತು ಉಟ್ಟುವಳೂ ಒಂದೇ, ಒಂದು ಉಟ್ಟುವಳೂ ಒಂದೇ?

೧೫೧೬೭ ಹಾಲಿನ ಬೆಲೆ ಮೊಸರಿಗಿದೆಯೇ ?

೧೫೧೬೮ *ಹಿಟ್ಟು ಹಿಟ್ಟೇ, ಬೂದಿ ಬೂದಿಯೇ

೧೫೧೬೯ ಹುಲಿ ಮರಿ ಹುಲಿಮರಿಯೇ, ಕುರಿ ಮರಿ ಕುರಿಮರಿಯೇ

೧೫೧೭೦ ಹೊನ್ನು ಹಣ ಪಾವನ ಅಂದ್ರೆ ಮಣ್ಣು ಸಗಣಿ ಪಾವನವೇ

ದಿಗ್ಭ್ರಮೆ

೧೫೧೭೧ ಕಣ್ಣು ಕಟ್ಟಿ ಕಾಡಿಗೆ ಬಿಟ್ಟಂತೆ

---

*ಹಿಟ್ಟೂ ಬೂದಿಯೂ ಒಂದೇ

೧೫೧೭೨ ಕಣ್ಣು ಕತ್ತಲೆ ಹಿಡಿದ ಹಾಗೆ

೧೫೧೭೩ ತಟಕ್ಕನೆ ದೀಪ ಆರಿಸಿದ ಹಾಗೆ

೧೫೧೭೪ ನೀರಿನಲ್ಲಿ ಕಣ್ಣುಬಿಟ್ಟ ಹಾಗೆ

೧೫೧೭೫ ಭ್ರಾಂತಿ ಹಿಡಿದರೆ, ವಾಂತಿಗೆ ಕೊಟ್ಟರೆ ಹೋದೀತೆ ?

ದೇಹಧರ್ಮ

೧೫೧೭೬ ಅಪ್ಪನ ತಡೀಬಹುದು, ಅಜ್ಜಿ ತಡೀಬಹುದು ; ಉಚ್ಚೆ ತಡಿಯೋನೊಬ್ಬ ಹುಚ್ಚುಸೂಳೀಮಗ

೧೫೧೭೭ ಉಚ್ಚೆ ಬಂದರೆ ಕಚ್ಚೆ ತಡಿಯುತ್ತ್ಯೆ ?

೧೫೧೭೮ ಆಳ್ ತಡೀಬೋದು, ಅರಸನ ತಡೀಬೋದು ; ಹೇಲ್ ತಡಿಯೋನೊಬ್ಬ ಹಡ್ಡಸೂಳೀಮಗ

೧೫೧೭೯ ತಿಳಿದವನಾದರೆ ಮಲಮೂತ್ರ ಬಿಟ್ಟೀತೆ ?

೧೫೧೮೦ ಸರಕಾರ ನಿಂತರೂ ಹೊರಕಡೆಗೆ ನಿಲ್ಲಲಿಲ್ಲ

ನಿದ್ದೆ

೧೫೧೮೧ ಊಟ ಕೆಟ್ಟರೆ ನಡೆದೀತು, ನಿದ್ದೆ ಕೆಡಬಾರದು

೧೫೧೮೨ ಊರೆಲ್ಲ ಉಂಡು ಕೇರಿಯೆಲ್ಲ ಕೆದರವೆ

೧೫೧೮೩ ಕಣ್ಣು ತುಂಬ ನಿದ್ದೆಮಾಡಬೇಕು, ಮನಸ್ಸು ತುಂಬ ಶಾಂತವಾಗಿರಬೇಕು

೧೫೧೮೪ ಕಾವಲುಗಾರನ ನಿದ್ದೆಹಾಗೆ

೧೫೧೮೫ ಗಂಡನಿಗೆ ಆರುಗಂಟೆ, ಹೆಂಗಸಿಗೆ ಏಳುಗಂಟೆ, ಮೂರ್ಖನಿಗೆ ಎಂಟುಗಂಟೆ

೧೫೧೮೬ ಗೊರಕೆ ಹೊಡೆಯುವವರ ಜೊತೇಲಿ ಸುಖನಿದ್ರೆ ಉಂಟೆ ?

೧೫೧೮೭ ಗೊರಕೆಗೆ ಗದ್ದಲವೇ ಮದ್ದು

೧೫೧೮೮ ತಲೆದಿಂಬು ಹೆಂಡತಿ, ನಿದ್ದೆ ಮಕ್ಕಳು

೧೫೧೮೯ ತೂಕಡಿಕೆ ಬರೋವಾಗ ಆಕಳಿಕೆ ಪ್ರಾರಂಭ

೧೫೧೯೦ ನಿದ್ದೆ ಒಂದು ಬಳ, ಗೊರಕೆ ಒಂದು ಬಳ

೧೫೧೯೧ [1]ನಿದ್ದೆ (ಕೆಟ್ಟವನೊ) ಕೆಟ್ಟೆಯೊ, ಬುದ್ಧಿ (ಕೆಟ್ಟವನೊ) ಕೆಟ್ಟೆಯೊ ?

೧೫೧೯೨ ನಿದ್ದೆ ಬಂದವನನ್ನು ಎಬ್ಬಿಸಬಹುದು, ಎಚ್ಚರಿದ್ದವನನ್ನು (ಠಕ್ಕನ್ನ ಎಬ್ಬಿಸಲಾಸಲ್ಲ) ಎಬ್ಬಿಸಕೂಡದು

೧೫೧೯೩ ನಿದ್ದೆ ಮಾಡಿದರೇನು ? ಒದ್ದೆ ಬಟ್ಟೆ ಕೊಡಬಾರದೆ ?

೧೫೧೯೪ ನಿದ್ರೆಗೆ ಮದ್ದಿಲ್ಲ, ವಜ್ರಕ್ಕೆ ಬೆಲೆಯಿಲ್ಲ

೧೫೧೯೫ ನೆಕ್ಕರೆ ಹೊಟ್ಟೆ ತುಂಬೀತೆ, ತೂಕಡಿಸಿದರೆ ನಿದ್ರೆ ಕಳೆದೀತೆ ?

೧೫೧೯೬ ಭದ್ರಮಾಡಿದಷ್ಟೂ ನಿದ್ರೆ ಬಿಡುವುದಿಲ್ಲ

೧೫೧೯೭ ಸಂಪತ್ತಾಗ್ತಿ ಮ್ಯಾಲೆ ಬೊಂತೆ ಕವಚುವ್ರೊತ್ಗೆ ಅಂತೇ ಚಂದಲ್ಲಿ ನಿದ್ಬತ್ತು

೧೫೧೯೮ ಸಿದ್ಧ ಎದ್ದದ್ದೇ ಹೊತ್ತು

೧೫೧೯೯ [2]ಹಸಿವೆಗೆ ಹಾಗರ (ಬಾಯಿಸವಿ, ಜಿಸಿ) ಬೇಡ, ನಿದ್ದೆಗೆ ಹಾಸಿಗೆ ಬೇಡ

---

1 (i) ನಿದ್ದೆ ಕೆಟ್ಟವನಿಗೆ ಬುದ್ಧಿಯಿಲ್ಲ

(ii) ನಿದ್ದೆಗೆಟ್ಟು ಬುದ್ಧಿಗೆಟ್ಟ

2 ಹಾರೋಗರ (?)

ತಗಣೆ

೧೫೨೦೦ ಉಜ್ಜಲಾ ಉರಿ ಮೈಯ್ಯ, ತಿಕ್ಲಾ ತಿಗಣೇಯು

೧೫೨೦೧ ತಗಣೆಯು ಉಪದ್ರವ ಮಗಳಿಗೂ ಬಿಡಲಿಲ್ಲ

೧೫೨೦೨ ತಿಗಣೆ ಕಾಟ, ಬಗನಿ ಗೂಟ

೧೫೨೦೩ ನಿದ್ದೆ ಬರಲ್ಲ. ಅರನಿದ್ದೆಯಲ್ಲಿ ತಿಗಣೆ (ಸೊಳ್ಳೆ) ಕಚ್ಚಿತು

೧೫೨೦೪ ಬಹಿರ್ದೇಶಕ್ಕೆ ಹೋದರೂ ತಿಗಣೆ ಕಾಟ ತಪ್ಪಲಿಲ್ಲ

ಕನಸು

೧೫೨೦೫ ಕತ್ತಲಲ್ಲಿ ಕಂಡರೆ ಕಣ್ಣು ಮಂಜು,
ಕನಸಿನಲ್ಲಿ ಕಂಡರೆ ಮನವೇ ಮಂಜು

೧೫೨೦೬ ಕನಸಿನಲ್ಲಿ ಕಂಡದ್ದು ಪ್ರತ್ಯಕ್ಷವೇ ಆಗೋಣವೇ ?

೧೫೨೦೭ ಕನಸಿನಲ್ಲಿ ಕಾಣದ್ದಿಲ್ಲ. ಆಗದವರು ಆದದ್ದಿಲ್ಲ

೧೫೨೦೮ ಕನಸಿನಲ್ಲಿ ತಿನ್ನುವವನಿಗೆ ಮೊಸರನ್ನಕ್ಕೆ ಕೊರತೆಯೆ ?

೧೫೨೦೯ ದುಸ್ಸ್ವಪ್ನ ಕಂಡಕೂಡಲೇ ಎದ್ದು ನಿಂತುಕೋಬೇಕು

೧೫೨೧೦ ಬೆಕ್ಕಿನ ಕನಸು ಇಲಿ ಹೆಗ್ಗಣ

೧೫೨೧೧ ಸ್ವಪ್ನ ಅನ್ನೋದು ಸಾದೃಷ್ಟ

ಕನಸಿನಲ್ಲಿ ಕಂಡದ್ದು ನಿಜವಲ್ಲ

೧೫೨೧೨ ಇರುಳು ಕನಸಿನಲ್ಲಿ ಕಂಡ ಬತ್ತಕ್ಕೆ ಹಗಲು ಗೋಣಿ ಹಾಸಿದ ಹಾಗೆ

೧೫೨೧೩ ಕನಸಿನ ಮುರುವ ಹೊರಳಿ ಹೊರಳಿ ಅತ್ತ

೧೫೨೧೪ ಕನಸಿನ ಸುಖ ನೆನಸಿದರೆ ಬರಿ ದುಃಖ

೧೫೨೧೫ ಕನಸಿನಲ್ಲಿ ಕಂಡ ಗಂಟನ್ನು ಲೆಕ್ಕಕ್ಕೆ ಸೇರಿಸಿಕೊಂಡ ಹಾಗೆ

೧೫೨೧೬ ಕನಸಿನಲ್ಲಿ ತಾಳಿ ಕಟ್ಟಿ ಬೆಳಗಾದ್ಮೇಲೆ ಹೆಂಡ್ತಿ ಹುಡುಕಿದನಂತೆ

೧೫೨೧೭ ಕನಸಿನಲ್ಲಿ ಬಾಳೆಹಣ್ಣು ತಿಂದದ್ದು ಸುಳ್ಳು,
ಉಚ್ಚೆ ಹುಯ್ದದ್ದು ನಿಜ

೧೫೨೧೮ ಕನಸಿನಲ್ಲಿ ಹಾಲು ಅನ್ನ ಉಂಡು ಉದುರುದುರು ಯಾಕೆ ?

೧೫೨೧೯ ಸತ್ತಗಂಡ ಕನಸಿಗೆ ಬಂದರೆ ಒಟ್ಟುಬಟ್ಟೆ ಕೊಟ್ಟಾನಾ ?

೧೫೨೨೦ ಸ್ವಪ್ನದಲ್ಲಿ ದಂಡಿಗೆ ಏರಿ ಗೊಂಡೆ ಹಿಡಿಸಿಕೊಂಡ ಹಾಗೆ

ನಿಷಿದ್ಧ

೧೫೨೨೧ ಆಕೆವಾಳ ಅಂತ ಈಕೆ ಹೋಗಿ ತಬ್ಬಿಕೊಳ್ಳೋಕಾಗುತ್ಯೆ ?

೧೫೨೨೨ ನಾಯಿ ಮುಟ್ಟಿದ ಮಡಕೆಯನ್ನು ನಾಯಿ ಕೊರಳಿಗೇ
ಕಟ್ಟಿದರಾಯಿತು

೧೫೨೨೩ ನಿಷಿದ್ಧವಾದ ವಸ್ತು ಅಶುದ್ಧವೆಂದರೆ ಕಸೂತಿ ಹಾಕಿದ್ದು
ಯಾಕೆ ?

೧೫೨೨೪ ನೆರೆಮನೆ ಗಂಡಸು ತಬ್ಬಿಬ್ಬಾದ ಅಂತ ಹೋಗಿ
ತಬ್ಬಿಕೊಳ್ಳೋಕಾಗುತ್ಯೆ ?

ಪ್ರಾಣಿಗಳು

ಅರಣೆ

೧೫೨೨೫ ಅರ(ಣೆ)ಣೆ ಕಡಿದರೆ ಭರಣಿ ಮದ್ದು ಸಾಲದು

೧೫೨೨೬ ಅರಣೆ ಮುಟ್ಟಿದರೆ ಧರಣಿ (ನಷ್ಟ) ನಾಶ

೧೫೨೨೭ ಸಾಲೆಯು ಮುಟ್ಟಿದರೆ ಸಾಲೆಯು ನಷ್ಟ,
ಹಲ್ಲಿ ಮುಟ್ಟಿದರೆ ಹಾಗವ ನಷ್ಟ

ಆಡು

೧೫೨೨೮ ಆಡಿಗೆ ಗೊತ್ತಿಲ್ಲವೆ ಹುಲಿಯ ವಾಸನೆ ?

೧೫೨೨೯ [1]ಆಡು ಮೇ(ಹೋ)ದ ಕಾಡು ಹಾಳು

೧೫೨೩೦ ಆಡು ಹೊಕ್ಕ ನಾಡು ಹಾಳು, ಲಾಡು ಇಲ್ಲದ ಔತಣ ಹಾಳು

ಆನೆ

೧೫೨೩೧ [2]ಆನೆ ಸತ್ತರೂ ಸಾವಿರ, ಇದ್ದರೂ ಸಾವಿರ

೧೫೨೩೨ ಆನೆಯಾಗಿ ಕಬ್ಬು ಮೇಯುವುದಕ್ಕಿಂತ,
ಇರುವೆಯಾಗಿ ಸಕ್ಕರೆ ಮೇಯುವುದು ಮೇಲು

೧೫೨೩೩ ಆನೆ ಕೊಟ್ಟು ಐಶ್ವರ್ಯ ಬಂದಂಗೆ

೧೫೨೩೪ [3]ಆನೆಗೆ ಗಂಟೆ ಕಟ್ಟಬೇಕೊ ?

೧೫೨೩೫ ಆನೆ ಬೇಕೆಂದವ ಆಡು ಹಿಡಿದಾನೆ ?

೧೫೨೩೬ ಆನೆಯು (ಎತ್ತಿನ ದನದ) ಮುಂದಿರಬೇಡ,
ಕುದುರೆ (ಕತ್ತೆ) ಹಿಂದಿರಬೇಡ

ಕತ್ತೆ

೧೫೨೩೭ ಕತ್ತೆ ಕಟ್ಟಿ ಮೇಯಿಸಿ ಕುದುರೆ ಕಾಲ್ಕಟ್ಟಿ ಅಟ್ಟಂಗೆ

೧೫೨೩೮ ಕತ್ತೆ ತಪ್ಪಿಸಿಕೊಂಡ ಹಾಗೆ

---

1 ಆಡು ಮೇದ ಕಾಡಿನ ಹಾಗೆ

2 ತೆ. ಏನುಗು ಚಚ್ಚಿನ ಬ್ರದಿಕಿನ ವೆಯಿ
ತ. ಆನೈ ಇರುಂದಾಲುಂ ಆಯಿರಂ ಪೊನ್, ಎರಂದಾಲುಂ ಆಯಿರ ಪೊನ್
ಮ. ಆನ ಇರುನ್ನಾಲುಂ ಆಯಿರಂ, ಚೆತ್ತಾಲುಂ ಆಯಿರಂ

3 ಮ. ಆನಕ್ಕು ಮಣಿ ಕೆಟ್ಟಣಮೊ ?

೧೫೨೩೯ [1]ಕತ್ತೆಗೆ ತಿಪ್ಪೆ ತವರುಮನೆ

೧೫೨೪೦ ಕತ್ತೆ ತಪ್ಪಿಸಿಕೊಂಡರೆ ಹುಡುಕುತಾರ್ಯೆ ?

೧೫೨೪೧ ಕತ್ತೆ ಒ(ಬಿ)ದ್ದರೆ ಕಡವಗೆ ಲಾಭ

೧೫೨೪೨ ಕತ್ತೆ ಮರಿ ಚಂದ, ತೊತ್ತಿನ ಮಾತು ಚಂದ

೧೫೨೪೩ ಕ(ಕೆ)ತ್ತೆ ಮೇ(ಮೊ)ದಲ್ಲಿ ಮತ್ತೆ ಮೇಯದಿಲ್ಲ

೧೫೨೪೪ [2]ಕತ್ತೆ ಬಲ್ಲುದೆ ಕಸ್ತೂರಿ ಪರಿಮಳವ

೧೫೨೪೫ ಕತ್ತೆ ಮೇದ ಗರಿಕೆ ಹಾಗೆ

೧೫೨೪೬ ಕತ್ತೆ ಸತ್ತರೆ ಡೊಂಬಗೇಕೆ ಹೊರೆ

೧೫೨೪೭ ಕತ್ತೆಗೂ ಐದು ಕಾಲಂತೆ

೧೫೨೪೮ ಕತ್ತೆಗೆ ಕೋಡುಂಟೆ, ಎತ್ತಿಗೆ ಮಾತುಂಟೆ ?

೧೫೨೪೯ ಕತ್ತೆಗೆ ಕೊಂಬಿಲ್ಲ. ತೊತ್ತಿಗೆ ಗುಣವಿಲ್ಲ

ಕುದುರೆ

೧೫೨೫೦ ಕುದುರೆಗೆ ಕೋಡಿಲ್ಲ, ಕೋಣಕ್ಕೆ ಡುರುಕಿಲ್ಲ

೧೫೨೫೧ ಗಂಡುಗುದುರೆ ಓಟ ಚಂದ, ಹೆಣ್ಣುಕುದುರೆ ನಡಗೆ ಚಂದ

೧೫೨೫೨ ಬಡ್ಡುಕುದುರೆಗೆ ಬಡತವೇ ಮುದ್ದು

೧೫೨೫೩ ಬಿಟ್ಟರೆ ಸಿಕ್ಕದು ಘಟ್ಟದ (ಸೆಟ್ಟಿ) ಕುದುರೆ

---

1 ತ. ಕಮಿತ್ತೈ ಕಟ್ಟಾಲ್ ಕುಟ್ಟಿಚ್ಚುವರ್

2 ತೆ. ಗಾಡಿದಕೇಮಿ ತೆಲುಸು ಗಂಧಮು ಸೊಂಪು

ತ. ಕಳುದೆಕ್ಕು ತೆರಿಯ ಉಮಾ ಕರ್ಪೂರವಾಸನೈ

ಮ. ಕಳುದ ಅಱಿಯುಮೊ ಕಸ್ತೂರಿ ವಾಸನ

೧೫೨೫೪ ಹಾದಿಯಲ್ಲಿ ಕಂಡ ಕುದುರೆಗೆ ಹುಲ್ಲುಸರವಿ ಕಡಿವಾಣ

ನಾಯಿ

೧೫೨೫೫ ಕೂಸಾಳ ಘೂತ ಕೋಚು, ಕೊರಗರ ನಾಯಿ ಕೋಚು

೧೫೨೫೬ ತಡ ತೋಡರ ನಾಯಿ ಎಡತಾಕಿ ಸತ್ತಿತಂತೆ

೧೫೨೫೭ ಸಂಚಿಕೆ ಇರೋ ಹೊತ್ತಿಗೇ ನಾಯಿ

೧೫೨೫೮ ನಾಯಿ ಕಂಡು ಬೊಗಳುತ್ತದೆ ; ನರಮನುಷ್ಯ ಕಾಣದೆ ಬೊಗಳುತ್ತಾನೆ

೧೫೨೫೯ ನಾಯಿ ತಿರುಗಿತು, ನಾರಾಯಣ ತಿರುಗಿತು

೧೫೨೬೦ ನಾಯಿ ಹುಟ್ಟಿ ಒಡೆಯನ ಭಂಗ ತೊಳೀತು

೧೫೨೬೧ ನಾಯಿಗೆ ಚೆಲ್ಲು, ಕಾಗೆಗೆ ಕಲ್ಲು

೧೫೨೬೨ [1]ನಾಯಿಗೆ ಸಿಪ್ಪೆ ತೆಂಗಿನಕಾಯಿ ಸಿಕ್ಕಿದಂಗೆ (ಹಾಗೆ)

೧೫೨೬೩ ಬಾಲವಿಲ್ಲದ ನಾಯಿ ತನ್ನ ಪ್ರೀತಿಯನ್ನು ತೋರಿಸಲಾರದು

೧೫೨೬೪ [2]ಮಾಣಿ ಕೇಡು ಕಂಡಲ್ಲದೆ ಬೆಳ ಮಾಡ

೧೫೨೬೫ ಸೊಣಕಪ್ಪನಾಯಕರು ಬಂದರು,
ನಡಮೇಲಿ ಕೂಡಿಕೊಂಡು ದಡಿಯಲ್ಲಿ ಚಚ್ಚಿದರು

ಬೆಕ್ಕು

೧೫೨೬೬ ಎಡಕಲಲ್ಲಿದ್ದ ಕೋತಿ ದಡಕ್ಕನೆ ಬಂತು

---

1 ತೆ. ಕೋತಿಕಿ ಕೊಬ್ಬರಿಕಾಯಿ ದೊರಕಿನಟ್ಟು
ತ. ನಾಯಿಕ್ಕು ಮುಟುತ್ತೇಂಗಾಯಿ ಕಿಡೈತ್ತಾಪ್ಪೋಲ್
ಮ. ನಾಯಿಕ್ಕು ಪೊದಿಯಾತ್ತೇಜಕಿತಿಟ್ಟಿಯ ಪೋಲೆ

2 ಮಾಣಿಕ್ಯ ಕೇಡು ಕಂಡಲ್ಲಿ ಬೆಳೆ ಮಾಡ

೧೫೨೬೭ ಬೆಕ್ಕಿನ ಓಟ ಬೇಲಿಯವರೆಗೆ

೧೫೨೬೮ ಬೆಕ್ಕಿನ ಬೆನ್ನ ಸವರಬೇಕು, ಗೀಸು ಮೂಗನ್ನು
ಮುರಿಯಬಾರದು

ಮಂಗ

೧೫೨೬೯ ಗುಡ್ಡದ ಮೇಲೆ ಕಪಿ ಸತ್ತರೆ ಊರಿಗೆಲ್ಲ ಸೂತಕ

೧೫೨೭೦ ಮಂಗನನ್ನು ಕಟ್ಟಿನೋಡು, ಜಾಡನನ್ನು ಬಿಟ್ಟುನೋಡು

೧೫೨೭೧ ಮಂಗನನ್ನು ಒಡಿದು ಮನೇಲಿಟ್ಟುಕೊಂಡ ಹಾಗೆ

ಹಂದಿ

೧೫೨೭೨ *ಹರೆಯದ ಹಂದಿ ಹಣವಡ್ಡ

೧೫೨೭೩ ಹೆರವರ ಹೊಲಸು ತಿಂದು ಒಡೆಯನಿಗೆ ಹಂದಿಯಾಗಿತ್ತಂತೆ

ಹಾವು

೧೫೨೭೪ ಅಪರಂಜಿಗಿಂತ ಮೇಲು ಬಂಗಾರವಿಲ್ಲ,
ಎಲರುಣಿಗಿಂತ ಮಿಗಿಲು ಹಾವಿಲ್ಲ

೧೫೨೭೫ ಕಾಯಿ ಬಲಿತರೆ ಕೊಬ್ಬರಿ, ಹಾವು ಬಲಿತರೆ ಉರುಸಿಂಗಿ

೧೫೨೭೬ ಶಾವಿಗೆ ತಿಂದು ಸತ್ತವನಿಲ್ಲ, ಹಾವಿಗೆ ಸಿಕ್ಕಿ ಬದುಕಿದವನಿಲ್ಲ

೧೫೨೭೭ ಹಾವಿನ ಹೆಡೆ ಚೆಂದ, ಮಾವಿನ ಮಿಡಿ ಚೆಂದ

೧೫೨೭೮ ಹಾವು ಅಂದರೆ ಹರ (ಹಡಗು ನಡುಗಿತು) ನಡುಗಿದ

---

* ಕ. ಹಂದಿಗೆ ಹಲವು ಮರಿ, ಸಿಂಗನಿಗ ಒಂದೇ ಮರಿ
ತೆ. ಪಂದಿ ಪದಿ ಪಿಲ್ಲಲನು ಪೆಟ್ಟೇ, ಸಿಂಗಮು ಒಕ್ಕ ಪಿಲ್ಲನೇ ಪೆಟ್ಟುಂದಿ
ತ. ಪನ್ನಿ ಪಲಕುಟ್ಟಿ, ಸಿಂಗಂ ಒರುಕುಟ್ಟಿ
ಮ. ಪನ್ನಿ ಪತ್ತು ಪೆಱಾಲುಂ ಸಿಂಹಂ ಒನ್ನು ಪೆಱಾಲ್ ಮತಿ

೧೫೨೭೯ ಹಾವು ಕಚ್ಚಿದ ಮೇಲೆ ಹಳೆಯ ಬಟ್ಟೆಯಲ್ಲಿ
ಬರಹವಿದೆ ನೋಡೀತೆ ?

೧೫೨೮೦ ಹಾವು ಕಡಿವಷ್ಟೇ ಚೇಳ್ಳು ನೋಟು

೧೫೨೮೧ ಹಾವು ಕಡಿದು ಸಾಯಬಹುದು,
ಚೇಳು ಕಡಿದು ಬದುಕಲು ಸಲ್ಲ

೧೫೨೮೨ ಹಾವು ಹಗ್ಗವಲ್ಲ, ಹಾವು ದೊಳ್ಳಲ್ಲ

೧೫೨೮೩ ಹುತ್ತಕ್ಕೊಂದು ಹಾವಿರಬೇಕು,
ಕೊರಳಿಗೊಂದು ಮುತ್ತಿನ ಸರವಿರಬೇಕು

ಬಗೆಹರಿಯದ ವಿಷಯ

೧೫೨೮೪ ಕಬ್ಬಿಣದ ಕಡಲೆ ಹಲ್ಲಿಗೆ ಹರಿಯಲ್ಲ, ಕಲ್ಲಿಗೆ ಸವೆಯಲ್ಲ

೧೫೨೮೫ ಸೀರಿಗೆ ಬಿದ್ದ ಹೊರತೂ ಕಾಯಿ ಬರುವುದಿಲ್ಲ,
ಕಾಯಿ ಬಿದ್ದ ಹೊರತೂ ಸೀರಿಗೆ ಬೀಳುವುದಿಲ್ಲ

೧೫೨೮೬ ಬೀಜ ವೃಕ್ಷ ನ್ಯಾಯ

೧೫೨೮೭ [1]ಬೀಜವಿಲ್ಲದೆ ಮರವಿಲ್ಲ, ಮರವಿಲ್ಲದೆ ಬೀಜವಿಲ್ಲ

೧೫೨೮೮ ಹಗ್ಗ ಹರಿಯಲಿಲ್ಲ, ಕೋಲು ಮುರಿಯಲಿಲ್ಲ

೧೫೨೮೯ [2]ಹುಚ್ಚು ಬಿಟ್ಟಲ್ಲದೆ ಮದುವೆಯಾಗದು,
ಮದುವೆಯಾಗದೆ ಹುಚ್ಚು ಬಿಡದು

೧೫೨೯೦ ಹೆಣ್ಣು ಹೆಚ್ಚೋ, ಗಂಡು ಹೆಚ್ಚೋ ?

---

1 ಮರ ಮೊದಲೊ ಬೀಜ ಮೊದಲೊ ?

2 (i) ಹೆಣ್ಣು ಕೊಟ್ಟು ಹೊರತು ಹುಚ್ಚು ಬಿಡದು, ಹುಚ್ಚು ಬಿಟ್ಟು ಹೊರತೂ ಹೆಣ್ಣು ಕೊಡರು

(ii) ಮದುವೆಯಾದ ಹೊರತು ಮರ್ಳ್ ಬಿಡ, ಮಳ್ಳು ಬಿಟ್ಟ ಹೊರತ್ತು ಮದುವೆಯಾಗ (ಹವ್ಯಕ)

ಬರಗಾಲ

೧೫೨೯೧ ಅಧ್ವಾನ ಕಾಲದಲ್ಲಿ ಮಧ್ಯಾಹ್ನದ ಊಟ (ಪ್ರೋ?)

೧೫೨೯೨ ಈ ಅರದಲ್ಲಿ ಇವನೊಬ್ಬ ಗಂಡನೇ ?

೧೫೨೯೩ ಓಮು ತಿಂದರೆ ಕ್ಷಾಮ ಹೋಗುತ್ಯೆ ?

೧೫೨೯೪ ಕಾಸಿಗೆ ಪಡಿಯಾ (ಪಂಚೇರಾ, ಪಡಿಜೋಳವಾ)ದರೂ
ಹೇಸಿಗೆ ಬರ ತಪ್ಪಲಿಲ್ಲ

೧೫೨೯೫ ಕ್ಷಾಮಗಾಲದಲ್ಲಿ ಕ್ಷೋಭೆಗೆ ಕಡಿಮೆಯೇ ?

೧೫೨೯೬ ಕ್ಷಾಮಗಾಲದಲ್ಲಿ ನಾಮ ಮಾತ್ರ (ಕೈ ಲಾಭ) ಫಲ

೧೫೨೯೭ ಕ್ಷಾಮಗಾಲದಲ್ಲೂ ಹೇಮಣ್ಣನ ಬಾಧೆಯೆ ?

೧೫೨೯೮ ಜ್ವರ ಬಂದು ಬರ ಮರೆತು ಹೋಯಿತು

೧೫೨೯೯ ತುರಿಸಿಕೊಂಡರೆ ಬರ(ಇಂಗೀತೇ) ಹೋಗುತ್ಯೇ ?

೧೫೩೦೦ ದನಕ್ಕೆ ಮೇವಿಲ್ಲ, ಜನಕ್ಕೆ ಅನ್ನವಿಲ್ಲ

೧೫೩೦೧ *ದುರ್ಭಿಕ್ಷದಲ್ಲಿ (ಅದೃಷ್ಟಕ್ಕೆ) ಅಧಿಕ ಮಾಸ

೧೫೩೦೨ ಬರಗಾಲಕ್ಕೆ ಹೆಚ್ಚು ದಿನಗಳಂತೆ

೧೫೩೦೩ ಬಂದಿರೂದು ಬರಗಾಲ, ನಾ ಇರೂದು ಸತ್ತಿಗಾಲ,
ಜೋಗಪ್ಪನ್ಗೆ ಬಂತಲ್ಲ ಮೂಗಂಡುಗ ಸಾಲ

೧೫೩೦೪ ದುರ್ಭಿಕ್ಷದಲ್ಲಿ ದವಸಧಾನ್ಯ ಅಭಾವ,
ಸುಭಿಕ್ಷದಲ್ಲಿ ದುಡ್ಡುಕಾಸು ಅಭಾವ

೧೫೩೦೫ ಸಿಜದಲ್ಲೇ ನಿರ್ಭಾಗ್ಯ, ಇನ್ನು ಬರ ಬಂದರೆ ಹೇಗೆ ?

೧೫೩೦೬ ಬಂದಿರೋದು ಬರಗಾಲ, ಬತ್ತ್ಯಾಕು ನಿನ್ನ ಸೊತ್ತುಗಾಲ

---

* (i) ಅಧಿಕ ಮಾಸ ಬರಗಾಲದಲ್ಲಿ ಬಂದ ಹಾಗೆ
(ii) ಅಧಿಕ ಮಾಸದಲ್ಲಿ ಬರ ಬಂದಂತೆ

೧೫೩೦೭ ಬನವಾಸಿಗೆ ಹೋದರೂ ಬರಗಾಲ ತಪ್ಪಲಿಲ್ಲ

೧೫೩೦೮ ಬರ ಬಂತು ಅಂತ ಕಲ್ಲು ಕುದಿಸಲಿಕ್ಕಾದೀತೆ ?

೧೫೩೦೯ ಬರ ಬಂದ ಕಾಲಕ್ಕೆ ಮಗ ಉಂಬೋದು ಕಲಿತ

೧೫೩೧೦ ಬರ ಬಂದರೆ ಬಿದಿರಕ್ಕಿ

೧೫೩೧೧ ಬರಕ್ಕೆ ಬುತ್ತಿ ಕಟ್ಟಿದಂತೆ

೧೫೩೧೨ ಬರದ ಕಾಲಕ್ಕೆ ಹುಳಿ ಮಜ್ಜಿಗೆ ಕಂಡ ಹಾಗೆ

೧೫೩೧೩ ಬರದಾಗ ಬುತ್ತಿ ಬಿಚ್ಚಿದರಂತೆ

೧೫೩೧೪ ಬರದಲ್ಲಿ ಕರ ಮಾರಿ ಹಾಕಿತು

೧೫೩೧೫ *ಬರಗಾಲಕ್ಕೆ ಬೆನ್ನ(ಮೈಯೆ)ಲ್ಲ ಹೊಟ್ಟೆ

೧೫೩೧೬ ಬರಗಾಲದಲ್ಲಿ ಅಂಗೈ ಮಾತ್ರ ಮೋಡ ತೋರಿದ ಹಾಗೆ

೧೫೩೧೭ ಬರಗಾಲದಲ್ಲಿ ನುಚ್ಚೇ ಮಾಣಿಕ್ಯ

೧೫೩೧೮ ಬರಗಾಲದಲ್ಲಿ ಪೊರೆದವನೇ ಗುರುದೇವ

೧೫೩೧೯ ಬರಗಾಲಕ್ಕೆ ರೊಕ್ಕ ಹಿಡಿದು ಬತ್ತಕ್ಕೆ ಅಲೆದರು

೧೫೩೨೦ ಬರಗಾಲದಲ್ಲಿ ಹರಿವೆ ಸೊಪ್ಪು ಚಿನ್ನ

೧೫೩೨೧ ಬರಗಾಲದಲ್ಲಿ ಹರಿವೆ ಸೊಪ್ಪು ತಿಂದರೂ ಸ್ವರ ಹೋಯಿತು

೧೫೩೨೨ ಬರಗೆಟ್ಟು ಬರಿ ಬಾಳೆಗೆಡ್ಡೆ ತಿಂದ ಹಾಗೆ

೧೫೩೨೩ ಬರಿ ಮಾತಿಗೆ ಬೆರಗಾದರೆ ಬರ ತಪ್ಪೀತೆ ?

೧೫೩೨೪ ಬರುವವರ ಸಂಗಡ ಬಂದರೂ ಬರಗಾಲ ತಪ್ಪಲಿಲ್ಲ

---

* ಮನೆಯಲ್ಲಿ ಇಲ್ಲದಾಗ ಮೈಯೆಲ್ಲ ಹೊಟ್ಟೆ

೧೫೩೨೫ ಬಾವಿ ನೀರಿಗೆ ಬಡಿದಾಟ, ಕೆರೆ ನೀರಿಗೆ ಕೆರೆದಾಟ,
ಹೊಳೆ ನೀರಿಗೆ ಹೊಡೆದಾಟ

೧೫೩೨೬ ಬೇಡಿ ಬರ ಕಾಣ

೧೫೩೨೭ ಮಕ್ಕಳುಣ್ಣುವ ಕಾಲಕ್ಕೆ ಬರ ಬಂತು

೧೫೩೨೮ ವಿಷ ತಿಂದು ಬದುಕಬಹುದು,
ವಿಷಮ ಕಾಲದಲ್ಲಿ ಬದುಕಕೂಡದು

೧೫೩೨೯ ಹೊನ್ನಿನಂಥ ಬರದಲ್ಲಿ ತನ್ನ
ಹೆಂಡಿರು ಮಕ್ಕಳನ್ನು ತಾನೇ ಸಾಕಿದನಂತೆ

ಬಿರುದು

೧೫೩೩೦ ಕಾಳೆ ಹೊಲೆಯನದಾದರೆ ಬಿರುದು ಹೊಲೆಯನದೆ ?

೧೫೩೩೧ ತಿಪ್ಪೆ ಮೇಲಿನ ಅರಿವೆಯಾದರೂ ಕಾಲಿಗೆ ಕಟ್ಟಿದರೆ ಬಿರುದು

೧೫೩೩೨ ಚಿಪ್ಪು ತಕ್ಕಡಿಗೆ ಬಿರುದು ಬಂದರೆ ಬಾಯಿ ಬಾಯಿ ಬಿಟ್ಟ

೧೫೩೩೩ ಹೇಡಿ ಬಿರುದು ಕಟ್ಟಿಕೊಂಡ ಹಾಗೆ

ಬೀಳುವಿಕೆ

೧೫೩೩೪ ಅಮಾಸೆ ಕತ್ತಲಲ್ಲಿ ಅಂಗಾತನಾಗಿ ಬಿದ್ದ

೧೫೩೩೫ *ಯಾರ ತೀಟೆಗೆ ಬಿದ್ದೆ ! ಮೆಲ್ಲಗೆ ಕೈ ಊರ್ಕೊಂಡೇಳು

ಬೇಸರ

೧೫೩೩೬ ತಲೆ ಬೇಸರವೊ, ಬಾಯಿ ಬೇಸರವೊ ?

---

* ಯಾರ ನಿಗ್ಗರಕೆ ಬಿದ್ದೆ ! ಹೊಡರಿಕೊಂಡೇಳು

೧೫೩೩೭ ಬೇಕು ಅಂತ ಬಯಸಿದ್ದು ಬೇಸರ (ವಾದೀತೆ ?)ವಾಯ್ತು

೧೫೩೩೮ ಬೇಸತ್ತು ಬೇಲಿ ಒರಗಿದರಂತೆ

೧೫೩೩೯ ಬೇಸರ ಅಂತ ಹೇಸರಗತ್ತೆ (ಆಡಿಸಿದ) ಮೇಲೆ ಸವಾರಿ ಮಾಡಿದ

ಭಿನ್ನರುಚಿ

೧೫೩೪೦ ಒಬ್ಬನ ಅಮೃತ, ಇನ್ನೊಬ್ಬನ ವಿಷ

೧೫೩೪೧ ಕಪ್ಪೆಗೆ ಕೆಸರು ನೀರು ಇಂಪಾಗುವ ಹಾಗೆ ಪನ್ನೀರು ಇಂಪಾದೀತೆ?

೧೫೩೪೨ ಕುರುಡನಿಗೆ ದೀಪ ಬೇಡವಾದರೆ ಮನೆ ಮಂದಿಗೆ ಬೇಡವೆ ?

೧೫೩೪೩ ದಿನ ದಿನಾ ಬಿಡಿಸೋಳಿಗೆ ಮಲ್ಲಿಗೆ ಹೂವಿನ ವಾಸನೆ ಆಗದಂತೆ

೧೫೩೪೪ ಬೇವು ಕಾಗೆಗೆ ಇಂಪು, ಮಾವು ಕೋಗಿಲೆಗೆ ಇಂಪು

೧೫೩೪೫ ಬೇವು ಮೆಚ್ಚಿದ ಕಾಗೆಗೆ ಮಾವು ಕಹಿ

೧೫೩೪೬ ಹಾಲು ಸೇರಲ್ಲ ಅಂದ್ರೆ ಹಾಲಿನ ತಪ್ಪೆ ?

ಯಾರಿಲ್ಲದಿದ್ದರೂ ಜಗತ್ತಿನ ವ್ಯವಹಾರ ನಿಲ್ಲದು

೧೫೩೪೭ ಅಕ್ಕ ಇಲ್ಲದಿದ್ದರೆ ಅಮಾವಾಸ್ಯೆ ಉಳಿಯುತ್ತ್ಯೇ ?
ಮುಕ್ಕು ಸಪ್ಪಟಿಲ್ಲದಿದ್ದರೆ ಒಗ್ಗರಣೆ ಉಳಿಯುತ್ತ್ಯೇ?

೧೫೩೪೮ ಅಕ್ಕ ಸತ್ತರೆ ಅಮಾವಾಸ್ಯೆ ನಿಲ್ಲದು,
ಅಣ್ಣ ಸತ್ತರೆ ಹುಣ್ಣಿಮೆ ನಿಲ್ಲದು

೧೫೩೪೯ ಅಕ್ಕಿ ಇಲ್ದೆ ಇದ್ದರೆ ಮದುವೆ ನಿಲ್ತದೆ,
ಅಕ್ಕ ಬರದಿದ್ದರೆ ಉಳಿದೀತೆ ?

೧೫೩೫೦ ಅಮುಸೀಕಾಯಿ ಇಲ್ಲದೆ ಪಟ್ಟಣ ನಿಲ್ಲುವುದೆ ?

೧೫೩೫೧ [1]ಅಯ್ಯನವರು ಬಾರದಿದ್ದರೆ ಅಮಾವಾಸ್ಯೆ ನಿಂತೀತೆ ?

೧೫೩೫೨ ಅಳಿಯ ಬರಲಿಲ್ಲ ಅಂತ ದೀಪಾವಳಿ ನಿಂತೀತೆ ?

೧೫೩೫೩ ಕುಂಬಾರ ಸತ್ತರೆ ಕುಂಡೇ (ಕುಡಿಕೇ)ಲಿ ಅಟುಂಡಾರಾ ?

೧೫೩೫೪ ಹುಣ್ಣಿಮೆ ಬರುವವರೆಗೆ ಅಮಾವಾಸ್ಯೆ ನಿಲ್ಲದು,
ಅಮಾವಾಸ್ಯೆ ಬರುವ ತನಕ ಹುಣ್ಣಿಮೆ ನಿಲ್ಲದು

೧೫೩೫೫ ನರಿ ಮುಳುಗುವಾಗ ಲೋಕವೇ ಮುಳುಗಿತು ಅಂದ ಹಾಗೆ

೧೫೩೫೬ ಕುದ್ಕ ಬೆಳ್ಳ ಹೋಗುವಾಗ ಊರಿಗೆ ಊರೇ ಬೆಳ್ಳದಲ್ಲಿ
ಹೋಗುತ್ತದೆಂದು ಭಾವಿಸುತ್ತನಂತೆ (ತುಳು)

ರಹಸ್ಯ

೧೫೩೫೭ ಅಗಸನ ಶವ ಹೊರಗೆ ತೆಗೆದ ಮೇಲೆ ಗುಟ್ಟು ಸಿಕ್ಕಿತು

೧೫೩೫೮ ಉಣ್ಣೆ ಹರಿದದ್ದೇ ಕಾಣಲಿಲ್ಲ

೧೫೩೫೯ ಒಳಗೇ ಬಂದ (ಮೋದ)ಗಳಿಗೆ ಸಿದ್ಧ

೧೫೩೬೦ [2]ನಾಯಿ ಬಲ್ಲದು, ತೊಗಲು ಬಲ್ಲದು

೧೫೩೬೧ ನೀರಿನ ಆಳ ಅಳೆಯಬಹುದು,
ಮನುಷ್ಯನ ಆಳ ಅಳೆಯೋಕೆ ಸಾಧ್ವಿಲ್ಲ

೧೫೩೬೨ ಮೋ(ಕೂ)ವ ಮೋಟು, ಹೋದ ಹೆಜ್ಜೆ ಒಂದೂ ಕಾಣಲ್ಲ

೧೫೩೬೩ ಮೇಲಿನಿಂದ ಹದ್ದು ಅರಿಯುದು, ಕೆಳಗಿನಿಂದ ಕಾಗೆ ಅರಿಯುದು

ವ್ಯತ್ಯಾಸವೇನಿಲ್ಲ

೧೫೩೬೪ ಅಪ್ಪನ ಕೂಟೆ ಉಂಡರೂ ಒಂದೇ,
ಅವ್ವನ ಕೂಟೆ ಉಂಡರೂ ಒಂದೇ

---

1 ಅಯ್ಯ ಸತ್ತರೆ ಅಮಾಸೆ ನಿಂದರತೈತೇನು ?

2 ನಾಯುಂಟು, ತೊಗಲುಂಟು

೧೫೩೬೫ ಅಳಿಯನಲ್ಲ, ಮಗಳ ಗಂಡ

೧೫೩೬೬ ಆನೋದೂ ದದ್ದು, ಸೋರೋದೂ ದದ್ದು

೧೫೩೬೭ ಎರಡು ಅಚ್ಚು ಒಂದು ಹಣ

೧೫೩೬೮ ಎರಡೂ ದದ್ದು ಹೊರಗೆ ಹಾಕು

೧೫೩೬೯ ಕತ್ತಲಲ್ಲಿ ಕುಡಿದರೂ ಹಾಲೇ, ಬೆಳಕಿನಲ್ಲಿ ಕುಡಿದರೂ ಹಾಲೇ

೧೫೩೭೦ ಕಬ್ಬನ್ನು ಕೊನೆಯಿಂದ ತಿಂದರೂ ಒಂದೇ,
ಬುಡದಿಂದ ತಿಂದರೂ ಒಂದೇ

೧೫೩೭೧ ಬಡಿಸೋ ಸೌಟಿಗೆ ಸಾರೇನು, ಪಾಯಸವೇನು ?

೧೫೩೭೨ [1]ಬೆಲ್ಲದ ಗೊಂಬೆ ಎಲ್ಲಿ ಚುಂಬಿಸಿದರೂ ಸಿಹಿಯೇ

೧೫೩೭೩ [2]ಎತ್ತ ಕಡಿದರೂ ಬೆಲ್ಲದಚ್ಚು ಸಿಹಿ

೧೫೩೭೪ ವೆಂಕಪ್ಪನಾದರೇನು, ಕಪ್ಪೆಯಾದರೇನು ?

೧೫೩೭೫ ಹೆಂಡ ಹೊತ್ತರೆ ಹಿಂದೂ ನಾತ, ಮುಂದೂ ನಾತ

೧೫೩೭೬ ಹೆಣ ಹೊರೇಕೆ ಹಿಂದೇನು, ಮುಂದೇನು ?

೧೫೩೭೭ ಹೇಲಲ್ಲ, ಭಟ್ಟ ಹೇತಿದ್ದು

೧೫೩೭೮ ಹೊಲಕ್ಕೆ ಹೋದರೆ ಸುಳಿ ಕೆಟ್ಟಿರಬೇಕು,
ಮನೆಗೆ ಬಂದರೆ ಮಗಳ ಗಂಡ ಸತ್ತಿರಬೇಕು

೧೫೩೭೯ ಹೋಳ್ಗೋಲಿಗೆ ಸಿಕ್ಕಿದ ಬೀಜದಂತೆ

೧೫೩೮೦ ಹೌದೆಂದರೆ ಬೈತಾನೆ, ಅಲ್ಲ ಅಂದರೆ ಹೊಡೀತಾನೆ

---

1 ಬೆಲ್ಲದ ಗಣೇಶ ಎಲ್ಲೆಲ್ಲೂ ಸಿಹಿ

2 ಬೆಲ್ಲ ಎಲ್ಲಿ ಕಡಿದರೂ ಸಿಹಿಯೇ

ವ್ಯವಹಾರ ಬಗೆಹರಿದರೂ ಅದರ ಕಿರುಕುಳ ನಿಲ್ಲಲಿಲ್ಲ

೧೫೩೮೧ *ಕೂಸು ಸತ್ತರೂ ನಾತ ಹೋಗದು

೧೫೩೮೨ ಜ್ವರ ಬಿಟ್ಟರೂ ಚಾವಳಿ ಬಿಡ

೧೫೩೮೩ ತಂಟೆ ತೀರಿದರೂ ತಕರಾರ್ ತೀರಲಿಲ್ಲ

೧೫೩೮೪ ತಂಟೆ ತೀರಿಸಿದರೂ ದಂಟಿಕೋಲು ಬಿಡಲಿಲ್ಲ

೧೫೩೮೫ ತಿಕ ತೊಳೆದರೂ ವಾಸನೆ ಹೋಗಲಿಲ್ಲ

೧೫೩೮೬ ಬೆಂಕಿ ಆರಿದರೂ ಸಂಕಟ ಆರಲಿಲ್ಲ

೧೫೩೮೭ ಭ್ರಾಂತಿ ಹೋದರೂ ಭಯ ಹೋಗಲಿಲ್ಲ

೧೫೩೮೮ ಭೂತ ಬಿಟ್ಟರೂ ಹೇತುಕೊಳ್ಳೋದು ತಪ್ಪಲಿಲ್ಲ

೧೫೩೮೯ ಮಳೆ ಬಿಟ್ಟರೂ ಮರದ ಹನಿ ಬಿಡದು

೧೫೩೯೦ ಮಠವೊಪ್ಪಿಸಿದರೂ ದೆಶೆ ಬಿಡುವುದಿಲ್ಲ

೧೫೩೯೧ ಹಗ್ಗ ಸುಟ್ಟರೂ ಹಗ್ಗದ ಹುರಿ ಹೋಗಲಿಲ್ಲ

೧೫೩೯೨ ಹತ್ತು ವರಹ ಕೊಟ್ಟರೂ 'ಹಲ್ಯಾ' ಅನ್ನುವುದು ತಪ್ಪಲಿಲ್ಲ

ವಾಸನೆ

೧೫೩೯೩ ಕೂತರೆ ನಾತ ಹೋದೀತೆ? ಹೇತದ್ದಕ್ಕಿಂತ ಹೆಚ್ಚು

೧೫೩೯೪ ನಾರಲಬಾಯಿ ನಂದಾದೀಪ

೧೫೩೯೫ ನಾರು ಕಟ್ಟಿದರೆ ನಾರೋದು ಬಿಟ್ಟೀತೆ ?

೧೫೩೯೬ ನಾರುವುದರ ಮೇಲೆ ನಾಯಿ ಹೇಸಿಕೆ ಮಾಡಿದ ಹಾಗೆ

---

* ಮಗು ಸತ್ತರೂ ಗೊಡ್ಡಿ ಬಿಟ್ಟಿ ವಾಸನೆ ಹೋಗಲಿಲ್ಲ

೧೫೩೯೭ ನೀರಾದರೂ ನಾರಬಾರದು

೧೫೩೯೮ ನೂತನವಾದದ್ದಕ್ಕೆ ಸೋತವನು ನಾತದ ವಸ್ತುವಿಗೆ ಸೋತಾನೆ ?

೧೫೩೯೯ ಪರೀಕ್ಷೆಗೆಂದು ಏನನು ತಿಂದರೂ ಬಾಯಿ ನಾರದೆ ?

೧೫೪೦೦ ಮುಡಿಯೊಳಗಿಟ್ಟರೂ ಹಡಿಕೆ ನಾತ ತಪ್ಪಲಿಲ್ಲ

೧೫೪೦೧ ಮುಲ್ಲಂಗಿ ತಿಂದು ವಾಸನೆ ಅಂದ

೧೫೪೦೨ ಮೂಗು ಕೊಯ್ದಿದರೆ ಹೂಕಿನ ನಾತ ಹೋದೀತೆ ?

೧೫೪೦೩ ಹತ್ರಕ್ಬಂದ್ರೆ ಹಡಕ್ಕ್ನಾತ

೧೫೪೦೪ ಹೂವಿನ ವಾಸನೆ, ಸಾರಿನ ನಾತ

ವೈಜ್ಞಾನಿಕ ದೃಷ್ಟಿ

೧೫೪೦೫ ಭೂಮಿಯನ್ನು ಆದಿಶೇಷ ಹೊತ್ತಿದ್ದರೆ
ಆದಿಶೇಷನನ್ನು ಹೊತ್ತಿರುವವರು ಯಾರು ?

೧೫೪೦೬ ಬತ್ತಿ ಉರಿಯುತ್ತೊ, ತೈಲ ಉರಿಯುತ್ತೊ

೧೫೪೦೭ ಸಾಲಿಗ್ರಾಮಕ್ಕೆ ಸಂಪಗೆ ಹೂ ಪೂಜೆ ಮಾಡಿದ ಹಾಗೆ

ಶಕ್ತಿಗುಂದಿದ ಮೇಲೆ ಯಾರೂ ಲೆಕ್ಕಿಸರು

೧೫೪೦೮ ಕಾಲು ಮುರಿದು ಬಿದ್ದ ಕೋಳಿ

೧೫೪೦೯ ಕೊತ್ತಿ ಬಡವಾದರೆ ಕೋಳಿ ಕಣ್ಣು ಕುಟುಕಿತಂತೆ

೧೫೪೧೦ ಗೂಳಿ ಬಡವಾದರೆ ಕೇರಿಯ ನಾಯಿಯೆಲ್ಲ ಅಟ್ಟಾಡಿದವು

೧೫೪೧೧ ಬಡವ ಬಗ್ಗ

೧೫೪೧೨ ಬಲವಿಲ್ಲದ ಕಾಲಕ್ಕೆ ನೆಲವೆದ್ದು ಬಡಿಯಿತು,
ವೆಸೆ ಮುರಿದ ಕಾಲಕ್ಕೆ ಕಸವೆದ್ದು ಬಡಿಯಿತು

೧೫೪೧೩ ಬೆಕ್ಕಿಗೆ ಜ್ವರ ಬಂದರೆ ಇಲಿ ಬಂದು ಮೈ ತುರಿಸಿತು

೧೫೪೧೪ ಬೆಕ್ಕು ಬಡವಾದ್ರೆ ಇಲಿ ಹುಬ್ಬು ಹಾರಿಸಿದ ಹಾಗೆ

೧೫೪೧೫ ಹಲ್ಲು ಕಿತ್ತ ಹಾವು

೧೫೪೧೬ ಹಾವು ಬಡವಾಯ್ತು ಅಂತ ಮೈಸವರೋಕೆ ಹೋದನಂತೆ

೧೫೪೧೭ ಹುರುಳಿ ಮುಳಿತುಕೊಂಡದ್ದಕ್ಕೆ ಬೆಲ್ಪತ್ರೆ 'ಬುಸ್' ಅಂತಂತೆ

ಸಣ್ಣ ವಸ್ತುವೂ ಉಪಯೋಗಕ್ಕೆ ಬರುತ್ತದೆ

೧೫೪೧೮ ಕೀಲು ಸಣ್ಣದಾದರೂ ಗಾಲಿ ನಡೆಸುತ್ತೆ

೧೫೪೧೯ ಕೆಲಸಕ್ಕೆ ಬಾರದ ಹುಳುಕು ಬಿದಿರು
ಕೊಳಲಿನ ಗತ್ ಹೇಳಿಕೊಟ್ಟಿತು

೧೫೪೨೦ ಚಿಂದಿಯಾದರೂ ದೊಂದಿಗೆ ಆಗುತ್ತದೆ

೧೫೪೨೧ ತೃಣವಾದರೂ ಹಣ ಕೂಡಿಸುತ್ತದೆ

೧೫೪೨೨ ನುಚ್ಚಾದರೂ ಹೆಚ್ಚು ಅಂತ ಭಾವಿಸಬೇಕು

೧೫೪೨೩ ನುಚ್ಚು ಹುಚ್ಚನಿಗಾದರೂ ಬೇಕು

೧೫೪೨೪ ನುಚ್ಚೊ ಒಂದು ಮಾಣಿಕ

೧೫೪೨೫ ಬಿಡಿ ಹೂವಾದರೂ ಹುಡುಗಿ ಮುಡಿದುಕೊಳ್ಳಬಾರವೆ ?

೧೫೪೨೬ ಬೇಲಿ (ಅಡಿ) ಮೇಲಿನ ಹಣ್ಣೆಸೊಪ್ಪು ಎಡಹೊತ್ತಿನ
ಊಟಕ್ಕೆ ಬೇಕಾಯಿತು

೧೫೪೨೭ ಹುಲ್ಲುಕಡ್ಡಿಯಾದರೂ ಹಲ್ಲು ಚುಚ್ಚೋಕೆ ಬೇಕು

ಸಮಯಕ್ಕೊದಗಿದುದು

೧೫೪೨೮ ಆಪತ್ತಿಗೆ (ಕಾರ್ಯಕ್ಕೆ, ಸಾಹಸಕ್ಕೆ) ಆದವನೇ (ಆಪ್ತ) ಬಂಟ,
ಸಮಯಕ್ಕಾಗದವನೇ ನಂಟ

೧೫೪೨೯ ಮೈಯಲ್ಲಿ ಹುಟ್ಟಿದ ರೋಗಕ್ಕಿಂತ ಕಾಡಿನ ಕಾಷ್ಟ ವಾಸಿ

೧೫೪೩೦ ಸಮಯಕ್ಕೆ ಆದವನೇ ನಂಟ, ಸಾಹಸಕ್ಕೆ ಒದಗಿದವನೇ ಬಂಟ

೧೫೪೩೧ ಸಮಯಕ್ಕಾದ ಹುಲ್ಲು ಸಹಸ್ರ ಹೊನ್ನು

೧೫೪೩೨ ಸಮಯಕ್ಕೊಂದು ಮಾತು ಸಾವಿರವಾಯಿತು

೧೫೪೩೩ ಸರಿಯಾದ ಕಾಲಕ್ಕೆ ಗುರಿಯಾದ ಕಾರ್ಯ

೧೫೪೩೪ ಹೊತ್ತಿಗಾದ ಮಾತು ಬಾಯಿಯಲ್ಲಿ ಬಿದ್ದ ಬುತ್ತಿಯಂತೆ

೧೫೪೩೫ ಹೊತ್ತಿಗೊದಗಿದ ಮಾತು ಸತ್ಪ ಎದ್ದ ಹಾಗೆ

ಸಮಯಕ್ಕೊದಗದುದು

೧೫೪೩೬ ಊಟಕ್ಕಿಲ್ಲದ ಉಪ್ಪಿನಕಾಯಿ ಯಾತಕ್ಕೂ ಬೇಡ

೧೫೪೩೭ ಊಟಕ್ಕಿಲ್ಲದ ಉಪ್ಪಿನಕಾಯಿಯೂ, ಸಮಯಕ್ಕಿಲ್ಲದ ನಂಟನೂ
ಏಕೆ ?

೧೫೪೩೮ ಕುಡಿಯಕ್ಕಿಲ್ಲದ ಬಾವಿ ತುಂಬಿಕೊಂಡಿದ್ದರೇನು ?

೧೫೪೩೯ ಕೆಲಸಕ್ಕೆ ಬಾರದ್ದು ಕೈಯಲ್ಲಿದ್ದರೇನು,
ಮನಸ್ಸಿಗೆ ಬಾರದ್ದು ಮನೇಲಿದ್ದರೇನು ?

೧೫೪೪೦ ಚಳಿಗಿಲ್ಲದ ಕಂಬಳಿ ಮೆಳೆ ಮೇಲಿದ್ದರೇನು,
ಮುಳ್ಳಿನ ಮೇಲಿದ್ದರೇನು ?

೧೫೪೪೧ ತನಗಿಲ್ಲದ ಕಣ್ಣು ಹುಣ್ಣ(ಹೊಟ್ಟಿ)ದರೇನು, ಸೀರಿದರೇನು?

೧೫೪೪೨ ತನಗಿಲ್ಲದ ಸೀರೆ ಉಟ್ಟರೇನು, ಹರಿದರೇನು?

೧೫೪೪೩ ತನಗಿಲ್ಲದ ಬದುಕು ಇದ್ದರೇನು, ಹಾಳಾದರೇನು ?

೧೫೪೪೪ ದೂರದ ನೀರು (ದಾಹಕ್ಕಿಲ್ಲ) ದಾರಿಗೆ ಒದಗೀತೆ ?

೧೫೪೪೫ ಪ್ರಸ್ತಾವ ತಪ್ಪಿ ನುಡಿವರೆ ದೇವಾಂಗ ದುಸ್ತುಬಿದ್ದಂತೆ

೧೫೪೪೬ ಪಾಳ್ಯಕ್ಕೋದ್ರೇನು, ಇಳ್ಯ ಹಿಡಿದಿದ್ದರೇನು,
ಯಾಳ್ಯಕ್ಕಿಲ್ದವ ಎಲ್ಲಿದ್ರೇನು ?

೧೫೪೪೭ ಯಾಳ್ಯಕ್ಕಿಲ್ಲದ ಬೊಡ್ಡಿ ಎಲ್ಲಿದ್ರೂ ಕಡ್ಡಿ

೧೫೪೪೮ [1]ಸಮಯಕ್ಕಿಲ್ಲದ ಅರ್ಥ ಸಹಸ್ರವಿದ್ದರೂ ವ್ಯರ್ಥ

೧೫೪೪೯ ವೆಚ್ಚಕ್ಕಿಲ್ಲದ ಹಣ ವ್ಯರ್ಥವಾದ್ರೇನು?

೧೫೪೫೦ ಸಮಯಕ್ಕಿಲ್ಲದ ಬುದ್ಧಿ ಸಾವಿರವಿದ್ರೂ ಲದ್ದಿ

೧೫೪೫೧ ಸಲವಿಲ್ಲದ್ದು ಸಾವಿರವಿದ್ದರೇನು ?

೧೫೪೫೨ ಹೊತ್ತಿಗಾಗದ ಗೆಳೆತನ ಎಷ್ಟಿದ್ದರೇನು ?

೧೫೪೫೩ ಹೊತ್ತಿಗಾಗದುದು ಮುಗಿಲೆತ್ತರ ಬೆಳೆದಿತ್ತಂತೆ

ಸಂತೋಷ

೧೫೪೫೪ ಆನಂದದಿಂದ ಕೂಗಿವರೆ ಏನೆಂದು ಕೇಳಿದರು

೧೫೪೫೫ ಉತ್ತಮ ಶರೀರವೇ ವೇಣಿಗೆ, ಸಂತೋಷವೇ ಸಿಂತನ

೧೫೪೫೬ ಒಬ್ಬ ಹಾಡೋಕಿಂತ ಇಬ್ಬರು ತೀಡೋದು ಲೇಸು

೧೫೪೫೭ ನೀರು ಕಂಡ ಎಮ್ಮೆ ಹಾಗೆ

೧೫೪೫೮ [2]ಪುರುಷನಾದರೆ ಹರ್ಷ ಬೇಕು

---

1 (i) ಬಚ್ಚಲುದಕಂ ಅದು ಮೀಹಕ್ಕೆ ಯೋಗ್ಯಂ —ಹರಿಶ್ಚಂದ್ರಕಾವ್ಯ-ರಾಘವಾಂಕ
(ii) ನಾಯ ಮೊಲೆಯಲ್ಲಿ ಹಾಲಿದ್ದಂತೆ

2 ಪುರುಷನಾದರೇನು, ಹರ್ಷ ಬೇಡವೆ ?

೧೫೪೫೯ ಸದ್ಗುಣಕ್ಕೆ ಮಿಕ್ಕಿದ ಸಂತೋಷವಿಲ್ಲ

೧೫೪೬೦ ಸುಮ್ಮಗಿರೋದೇ ಒಂದು ಸುಮಾನವಂತೆ

ಸ್ಥಾನ-ಮಾನ

೧೫೪೬೧ [1]ಈಚಲ ಮರದ ಕೆಳಗೆ ಹಾಲು (ಮಜ್ಜಿಗೆ ಕುಡಿದ ಹಾಗೆ) ಕುಡಿದರೆ ನಾಚಿಗ್ಗೇಡು

೧೫೪೬೨ ಉಚ್ಚ ಸ್ಥಾನವೇ ಪೂಜ್ಯ

೧೫೪೬೩ "ಮುರ್ಗೀದಿ ಜಾಪತೀರಿ ಮಾಡಿದ್ದೀರಿ ?" ಅಂದ್ರೆ "ನಾನಪ್ಪ ಮೀಸೆ ತಿರುಕ !" ಅಂದ

೧೫೪೬೪ [2]ತಾಳೆ ಮರದ ಕೆಳಗೆ ಹಾಲಹರವಿ ಇದ್ದರೆ ಅದನ್ನು ಹಾಲಹರವಿ ಅನ್ನುವುದಿಲ್ಲ

೧೫೪೬೫ ಸೂಳೆಗೇರೀಲಿ ಪತಿವ್ರತೆಯೂ ಹಾದರಗಿತ್ತಿ

ಸ್ಥಾನಬಲ

೧೫೪೬೬ ಆನೆಗೆ ನೆಲದಮೇಲೆ ಬಲ ಹೆಚ್ಚು, ಮೊಸಳೆಗೆ ನೀರಲ್ಲಿ ಬಲ ಹೆಚ್ಚು

೧೫೪೬೭ [3]ನಮ್ಮ ನಾಯಿ ನಮ್ಮ (ಮನೇಲಿ) ಓಣಿಯಲ್ಲಿ ಹುಲಿಯಂತೆ

೧೫೪೬೮ ತನ್ನ ಬಿಲದಲ್ಲಿರುವ ಇಲಿಗೆ ಹುಲಿಯಷ್ಟು ಧೈರ್ಯ

ಸುಖವಾಗಿ ಬೆಳೆಯುವಿಕೆ

೧೫೪೬೯ ಉಂಡಮ್ಮನ ಮೈನೋಡು, ಮಿಂದಮ್ಮನ ಮಂಡೆ ನೋಡು

---

1 ಈಚಲ ಮರದ ಕೆಳಗೆ (ಕೂತು ಅಳೆ ಕುಡಿದ ಹಾಗೆ) ಮಜ್ಜಿಗೆ ಕುಡಿದರೆ ಈಚಲ ಹೆಂಡ ಕುಡಿದಂತೆ

2 ತಾಳೆ ಮರದ ಕೆಳಗೆ ಹಾಲು ಕುಡಿದ ಹಾಗೆ – ಈಚಲು ಮರದ ಕೆಳಗೆ ಕೂತು ಮಜ್ಜಿಗೆ ಕುಡಿದ ಹಾಗೆ

3 ಹಮಾರ ಕುತ್ತಾ ಹಮಾರ ಗಲ್ಲಿಮೇ ಶೇರ್ (ಉರ್ದು)

೧೫೪೭೦ ತುಪ್ಪ ತಿಂದ ಮೈ ತುಪ್ಪದಂತೆ ಮೆದು

೧೫೪೭೧ ನಡೆದರೆ ನಡು ಭಾರ, ಪಟ್ಟಿಯು ನೆರಿ ಭಾರ

೧೫೪೭೨ ಬಿದ್ದಕಡೆ ವಿಷ್ಣುಲೋಕ, ಕೂತಕಡೆ ಕೈಲಾಸ

ಸುಲಿಗೆ

೧೫೪೭೩ ಬಲಿ ಮುದ್ರೆ ಕೊಟ್ಟರೂ ಸುಲಿಗೆ ತಪ್ಪಲಿಲ್ಲ

೧೫೪೭೪ ಸುಲಿಸಿಕೊಂಡು ಗುಡ್ಡವನೇರಿದಂತೆ

ಸೋಲು ಗೆಲುವು

೧೫೪೭೫ ಅಡ್ಡ ಏಟು ತಗುಲಿದರೆ ಒಡ್ಡನಾದರೂ ಗೆದ್ದಾನು

೧೫೪೭೬ ಇಂದಿನ ಸೋಲು ನಾಳಿನ ಗೆಲುವು

೧೫೪೭೭ ಎದ್ದವನು ಗೆದ್ದಾನು

೧೫೪೭೮ ಗೆದ್ದರೆ ತಾನು, ಸೋತರೆ ದೈವ

೧೫೪೭೯ ಗೆದ್ದೆ ಗೆದ್ದೆ ಅಂದ್ರೆ ಸೋತವ್ರ್ಯಾರು?

೧೫೪೮೦ ನಯಶಾಲಿಯಾದವನು ಜಯಶಾಲಿಯಾದಾನು

೧೫೪೮೧ ಸೋತಪುರಕಿಗೆ ಸೋರೆಕಾಯಿ, ಗೆದ್ದಪುರಕಿಗೆ (ಮುದ್ದೆ) ಸಕ್ಕರೆಕಾಯಿ

೧೫೪೮೨ ಸೋತು ಕಾಯುವುದು ಸರಿ, ಗೆದ್ದು ಕಾಯುವುದೆ ?

೧೫೪೮೩ *ಸೋತು ಗೆಲ್ಲು ಅಂತ ಗಾದೆ

೧೫೪೮೪ ಸೋತು ನಡೆದವನಿಗೆ ಸುಖಬಾಳು

---

* ಸೋತು ಗೆಲ್ಲುವುದು ಮೇಲು

೧೫೪೮೫ ಸೋಲದೆ ಗೆಲವಾಗದು, ಸೂಲದೆ ಬಟ್ಟೆಯಾಗದು

೧೫೪೮೬ ಸೋಲದವನಿಗೆ ಗೆಲವಿಲ್ಲ

೧೫೪೮೭ ಸೋಲು ವಿಜಯದ ಸೋಪಾನ

೧೫೪೮೮ ಪೇಟೆಯೊ, ಸೋತೆಯೊ ?

ಹಳತು-ಹೊಸತು

೧೫೪೮೯ ಅಪ್ಪ ತೋಡಿದ ಬಾವಿ ಅಂತ ಉಪ್ಪುನೀರು ಕುಡೀತಾರ್ಯೆ ?

೧೫೪೯೦ ಅಪ್ಪ ನಿಂತುಕೊಂಡು ಉಚ್ಚೆ ಹುಯ್ತಾ ಇದ್ದ ಅಂತ
ನಾವೂ ಹಾಗೆಯೇ ಮಾಡಬೇಕೆ ?

೧೫೪೯೧ ಅಪ್ಪ ಮಾಡಿಸಿದ ಚಿನ್ನದ ಕತ್ತಿ ಅಂತ ಕತ್ತು
ಕೊಯ್‌ಕೊಂಡಾರೆ ?

೧೫೪೯೨ *ಅಪ್ಪ ಹಾಕಿದ ಆಲದಮರ ಅಂತ (ಸಾಯುವತನಕ
ಕಾಯ್ಕೊಂಡಿರು) ನೇಣುಹಾಕಿಕೊಳ್ಳಬೇಕೊ ?

೧೫೪೯೩ ಇಂದು ಬೆಳಗಾಗಿದೆ ಅಂವಮಾತ್ರಕ್ಕೆ
ನಿನ್ನೆ ರಾತ್ರಿಯೇ ಇರಲಿಲ್ಲವೆ ?

೧೫೪೯೪ ಪುರಾಣ ಹಳತು ಅಂತ ಎಸೀತಾರ್ಯೆ ?

೧೫೪೯೫ ಹಳತಾದರೆ ಹಾಲು ಹುಳಿಯುಕ್ಕು

೧೫೪೯೬ ಹಳತು ಮೀರಿ ಹೊಸದಿಲ್ಲ, ಬಿಳಿದು ಮೀರಿ ಬಣ್ಣವಿಲ್ಲ

೧೫೪೯೭ ಹಳಿಯ ಕಣ್ಣು, ಹೊಸ ನೋಟ

೧೫೪೯೮ ಹಳೆ ಸ್ಯಾಲೆಗೆ ಹನ್ನೆರಡು ತ್ಯಾಪೆ

---

* ಅಪ್ಪ ನೆಟ್ಟ ಗೋಳೀ ಮರದಂತೆ

೧೫೪೯೯ ಹಳೇದು ಹೋದರೆ ಕೊಳ್ಳೆ ಹೋಯ್ತು

೧೫೫೦೦ ಹೊಸಮಡಿಕೆ ಟಣ್‌ಟಣ್, ಹಳತಾದರೆ ಡಬ್‌ಡಬ್

೧೫೫೦೧ ಹೊಸತನವೇ ಬಾಳು, ಹಳಸಿಕೆಯೇ ಮರಣ

೧೫೫೦೨ [1]ಹೊಸದೆಲ್ಲ ಹೊನ್ನಲ್ಲ, ಹಳೆಯದೆಲ್ಲ ಹೊಲಬಲ್ಲ

೧೫೫೦೩ ಹೊಸತು ಹೊನ್ನಂತೆ, ನಾಳೆ ತನ್ನಂತೆ

ಹಳ್ಳಿ-ಪಟ್ಟಣ

೧೫೫೦೪ ಇರವಾರ ಕೆಟ್ಟು ಪುರವಾರ ಸೇರಿದ

೧೫೫೦೫ ಒಳ್ಳೆಯವರ ಮಾನ ಹಳ್ಳೀಲಿ (ಹೋಯ್ತು) ಹೋದಂಗೆ

೧೫೫೦೬ ದೊಡ್ಡವರ ಮಾನ ದೊಡ್ಡೀಲಿ ಹೋದಂಗೆ

೧೫೫೦೭ [2]ಕೆಟ್ಟು ಪಟ್ಟಣ (ಬಿಡು) ಸೇರು, ಇಟ್ಟು ಹಳ್ಳಿ ಸೇರು

೧೫೫೦೮ [3]ದಿಳ್ಳಿಯು ಮೂಲ ಹಳ್ಳಿ

೧೫೫೦೯ [4]ನಗರ ಕೆರೆ ಗ್ರಾಮ, ಹಿಪ್ಪನೇರಳೆ ಸೊಪ್ಪಿಗೆ ಸಂಭ್ರಮ, ಹಿಟ್ಟು ಬಟ್ಟೆಗೆ ಕುಗ್ರಾಮ

೧೫೫೧೦ ನಗರದ ವಾಸ ಲೇಸು, ಚಿಗುರಿದ ಮರ ಲೇಸು

---

1 ಹೊಸದೆಲ್ಲ ಹೊಲಬಲ್ಲ, ಹಳೆಯದೆಲ್ಲ ಹೊನ್ನಲ್ಲ

2 ಕೆಟ್ಟು ಪಟ್ಟಣ ಸೇರಿದ

3 ಹಳ್ಳಿ ಇದ್ರೆ ದಿಳ್ಳಿ

4 (i) ಚಂದಕ ಚಿಕ್ಕೋಡಿ (ಸಿಂಜರಗಿ) ಗಂಧಾಕ ನೀರಿಲ್ಲ;
(ii) ವಡ್ಡರಗುಡಿಗ್ರಾಮ, ಮುತ್ತುಗದೆಲೆಗೆ ಸಂಭ್ರಮ, ನೀರಿಗೆ ಕುಗ್ರಾಮ.
(iii) ಹೆಸರಿಗೆ ಜವನಹಳ್ಳಿ ಮೊಸರಿಗಿ ನೀರಿಲ್ಲ.
(iv) ಹೆಸರಿಗೆ ರಬಕವಿ (ನರಗುಂದ) ಮೊಸರೀಗಿ ನೀರಿಲ್ಲ.
(v) ಹೆಸರು ಚುಂಚನಗಿರಿ ಕೊಸರಿಗೆ ನೀರಿಲ್ಲ.

೧೫೫೧೧ ನಾಗರಿಕನ ಮಾತು ನಗರದ (ನಾಡಿನ)ಲ್ಲಿ ಚೆಂದ

೧೫೫೧೨ ನಾಗರೀಕ ಪುರುಷನಿಗೆ ಭೋಗವಿಲ್ಲದೆ ಹೋದೀತೆ ?

೧೫೫೧೩ ನಾಡುಂಕೂಡಿ ನಗರಕ್ಕೆ ಕೇಡು

೧೫೫೧೪ ನಾಡುಗಳೆಲ್ಲ ನಾಡಿಯಾದರೆ ನಗರಕ್ಕೆ ಗೂಢ

೧೫೫೧೫ [1]ಬಾಳಗಂಚಿ (ಬಾಲಕಂಚಿ) ಅನ್ನೊ ಊರಿಲ್ಲ,
ಬಾಲನಾಥ ಅನ್ನೊ ದೇವರಿಲ್ಲ

೧೫೫೧೬ ಹಳ್ಳಿ ಊರಾಗ ಹನಮಪ್ಪ ಚಂದ

೧೫೫೧೭ ಹಳ್ಳಿ ಹಡೆದರೆ ಪಟ್ಟಣ

೧೫೫೧೮ ಹಳ್ಳಿ ಬದುಕು ಒಳ್ಳೆ ಬದುಕು

೧೫೫೧೯ ಹಳ್ಳಿಯ ಊರಿಗೆ ಕೊಳ್ಳಿಯ (ದೀಪ) ಬದುಕು

೧೫೫೨೦ ಹಳ್ಳಿಯ ಮಕ್ಕಳಿ (ಮಕ್ಕನಿ)ಗೆ ಹಳ್ಳಿ ಕಜ್ಜಾಯ

೧೫೫೨೧ ಹಳ್ಳೀದಕ್ಕೆ ಹದಿನಾರು ಬಣ್ಣ,
ಎದ್ದೋಡೋ ನನ್ ಸಿದ್ರಾಮಿಮುಂಡಿ ಅಣ್ಣ

೧೫೫೨೨ ಹಳ್ಳೇರು ಒಳ್ಳೇರು, ಪೇಟೇರು ತೀಟೇರು

೧೫೫೨೩ ತಟ್ಟಿಕೆರೆ ಹುಚ್ಚ

೧೫೫೨೪ ತಲೆಗೆ ಹುಚ್ಚು, ಹೊಟ್ಟೆಗೆ ಬುದ್ಧಿವಂತ

೧೫೫೨೫ ತಿಳಿಯಕ್ಕಿಲ್ಲ ನೋಡಕ್ಕಿಲ್ಲ, ಹುಚ್ಚು ಮೂಕನ ಆಟ

೧೫೫೨೬ ದೈತ್ಯನಿಗೆ ಪೈತ್ಯವೂ ಸೇರಿದರೇ ಕೇಳೊದೇನು ?

---

1 (i) ಕುಲಗಾಣದಂಥ ಊರಿಲ್ಲ, ವಾಸುದೇವನಂಥ ದೇವರಿಲ್ಲ.
(ii) ಮರಳೋಗಾಲದಂಥ ಊರಿಲ್ಲ, ಮರಳ ಲಿಂಗೇಶ್ವರನಂಥ ದೇವರಿಲ್ಲ.

೧೫೫೨೭ ದೈತ್ಯನಾದವನಿಗೆ ಪೈತ್ಯವೇನು ?

೧೫೫೨೮ ಬಿಚ್ಚಿ ಹೇಳಿದರೂ ಹುಚ್ಚು ಹೋಗಲಿಲ್ಲ

೧೫೫೨೯ ಮರಳನ್ನು ಕಂಡು ಮರುಳು 'ಠ್ಯಾ ಠ್ಯಾ' ಅಂದಿತಂತೆ .

೧೫೫೩೦ ಮರಳಿಗೆ ಇರುಳಿಲ್ಲ, ಪಿತ್ತದವನಿಗೆ ನಿದ್ರೆಯಿಲ್ಲ

೧೫೫೩೧ ಮರುಳು ಹಿಡಿದವನು ಮದ್ದು ತಿಂದ ಹಾಗೆ

೧೫೫೩೨ ಮುಚ್ಚಿಟ್ಟರೆ ಹುಚ್ಚು ಹೋದೀತೆ ?

೧೫೫೩೩ *ಪಚ್ಚಡ ಹೊದಿಸಿದರೂ ಹುಚ್ಚು ಹೋಗಲಿಲ್ಲ

೧೫೫೩೪ ಹತ್ತು ಅವತಾರಗಳಲ್ಲಿ ಒಂದು ಹುಚ್ಚನವತಾರ

೧೫೫೩೫ ಹುಚ್ಚ ತನ್ನ ತ್ಯಾಟಾ ಕಿತ್ನಾ, ನೆಟ್ನಾ ?

೧೫೫೩೬ ಹುಚ್ಚ ಹೋದದ್ದೇ ದಾರಿ

೧೫೫೩೭ ಹುಚ್ಚನ ಕೈ ಕಲ್ಲು ಹೇಗೆ ಬೀಸುತಾನೊ !

೧೫೫೩೮ ಹುಚ್ಚನನ್ನು ನೆಚ್ಚಬಾರದು, ಪಚ್ಚಕ್ಕೆ ಕೊರತೆ ಬಾರದು

೧೫೫೩೯ ಹುಚ್ಚರ ಕಂಡರೆ ಪೆಚ್ಚರಿಗೆ ನಗು

೧೫೫೪೦ ಹುಚ್ಚರ ನಡುವೆ ಜ್ಞಾನಿಯೂ (ಜಾಣನೂ) ಹುಚ್ಚ

೧೫೫೪೧ ಹುಚ್ಚರಿಗೆ ಹೊಲಸು ಬಹಳ, ದಡ್ಡರಿಗೆ ಮಾತು ಬಹಳ

೧೫೫೪೨ ಹುಚ್ಚಲ್ಲ ಬೆಪ್ಪಲ್ಲ, ಶಿವಲೀಲೆ

೧೫೫೪೩ ಹುಚ್ಚಿ ಕಟ್ಕೊಂಡು ಹುಯ್ಯಲಾ ಡಂಗುರವ

---

* ಪಚ್ಚಡ ಹೊದಿಸಿದರೆ ಹುಚ್ಚು ಹೋದೀತೆ ?

೧೫೫೪೪ ಹುಚ್ಚಿ ಕೊಡೋಕೆ ಉದ್ಯಾನವಾ ?
ಹುಚ್ಚಿ ಬಸಗ್ಹೋಗಿ ಓಲಗದವ್ರು ಸಿದ್ಗೆಟ್ರಂತೆ

೧೫೫೪೫ ಹುಚ್ಚಿ ಕೂಸು ಹೆತ್ತು ಉಚ್ಚಿ ಬಚ್ಚಲಲ್ಲಿ ಮಲಗಿಸಿದಳಂತೆ

೧೫೫೪೬ ಹುಚ್ಚಿ ಬಸರಾದ್ರೆ ಜೊಚ್ಚಲ ಹೆರಿಗೆ ಬಚ್ಚಲಲ್ಲೀ

೧೫೫೪೭ ಹುಚ್ಚಿಯ ಮಾತೊಂದು ನೆಚ್ಚಿಗೆಯೆ ?

೧೫೫೪೮ [1]ಹುಚ್ಚಿಗೆ ತವರು ಮನೆಯೂ ಒಂದೇ, ಅತ್ತೆ ಮನೆಯೂ ಒಂದೇ

೧೫೫೪೯ ಹುಚ್ಚಿಗೆ ದೀಪ (ಧೂಪ ಹಾಕಿದಂತೆ) ತೋರಿಸಿದ ಹಾಗೆ

೧೫೫೫೦ ಹುಚ್ಚು ಒಬ್ಬರ ಇಚ್ಚೆಯೋ ?

೧೫೫೫೧ ಹುಚ್ಚು ಕುದುರೆ ಲಾಯಕ್ಕೆ ಬಿಟ್ಟ ಹಾಗೆ

೧೫೫೫೨ ಹುಚ್ಚು ಕುದುರೆ ಜೂಜಿನ ಹಾಗೆ

೧೫೫೫೩ ಹುಚ್ಚು ಕುದುರೆಗೆ ಕಡಿವಾಣ ಹಾಕಿದಂತೆ

೧೫೫೫೪ [2]ಹುಚ್ಚು ತಿಳೀತು ಒನಕೆ ತಾ

೧೫೫೫೫ ಹುಚ್ಚು ನಾಯನ್ನ ನಂದು ಅನ್ನೋವ್ರ್ಯಾರು ?

೧೫೫೫೬ ಹುಚ್ಚು ನಾಯಿ ಯಾವ ಕೇರೀಲಿದ್ದರೂ ತಲೆ ಒಡೆಸಿಕೊಳ್ಳೇದೇ

೧೫೫೫೭ ಹುಚ್ಚನಾಯಿಗೆ ಕಚ್ಚು ಕಲಿಸಿದರಂತೆ

೧೫೫೫೮ ಹುಚ್ಚು ಹೆಂಗಸಿಗೆ ಇಜ್ಜೋಡು ಕರೀಮಣಿ

೧೫೫೫೯ ಹುಚು ಮಗ, ಉತ್ತರಾಣಿ ಸೌದೆ

---

1 ಹುಚ್ಚಿಯೇ ಹುಚ್ಚಿ ; ಅತ್ತಿ ಮನೆಯೇನು, ತವರು ಮನಿಯೇನು ?

2 (i) ಹುಚ್ಚು ಬಿಟ್ಟ ಅತ್ತೆಯ ಕೈಯಲ್ಲಿನ ಒನಕೆ ಹಾಗೆ
(ii) ಹುಚ್ಚು ಬಿಟ್ಟು ಒನಕೆ ಹಿಡಿ

೧೫೫೬೦ ಹುಚ್ಚುಮುಂಡಿ ಮಾತು ಹರಕ ಪರಕ

೧೫೫೬೧ ಹುಚ್ಚು ಮುಂಡೆ ಹಾಕಿದ ಬೆಂಕಿ ಊರೆಲ್ಲ ಸುಟ್ಟಿತು.

೧೫೫೬೨ ಹುಚ್ಚು ಹುಚ್ಚು ಹೊಳೇ ದಾರೀಲೆಲ್ಲಿ ಕಲ್ಲು

೧೫೫೬೩ ಹೆಣ್ಣೂ ಹುಚ್ಚು, ಗಂಡೂ ಹುಚ್ಚು ; ಎಳವಾರ ತಂದವ್ನಿಗೆ ಮೊದ್ಲೇ ಹುಚ್ಚು

೧೫೫೬೪ ಹೇಕುಳಿ ನಾಯಿ ಒಡೆಯನನ್ನು ಕಂಡು ಬಾಲ ಅಲ್ಲಾಡಿಸೀತೆ ?

ಭ್ರಮೆ-ಭ್ರಾಂತಿ

೧೫೫೬೫ ನಸು ಭ್ರಮೆಯಿದ್ದವ ಮೊಸರಾದರೂ ಕುಡಿದಾನು

೧೫೫೬೬ ಪ್ರಾಂತ್ಯ ಸೇರಿದರೂ ಭ್ರಾಂತಿ ಹೋಗಲಿಲ್ಲ

೧೫೫೬೭ ಭ್ರಮೆಯಿದ್ದವನಿಗೆ ನಿದ್ದೆ ಇಲ್ಲ, ಶ್ರಮೆಯಿದ್ದವನಿಗೆ ಭ್ರಮೆ ಇಲ್ಲ

೧೫೫೬೮ ಶಾಂತಿ ಮಾಡಿದರೂ ಭ್ರಾಂತಿ ಹೋಗಲಿಲ್ಲ

೧೫೫೬೯ ಸುತೆ ಹೋದರೂ ಭ್ರಾಂತಿ ಹೋಗಲಿಲ್ಲ

೧೫೫೭೦ ಹಗ್ಗ ನೋಡಿ ಹಾವು ಅಂದ ಹಾಗೆ

೧೫೫೭೧ ಭ್ರಾಂತಿ ಹಿಡಿದವನಿಗೆ ಪಾಂತಿಗೆ ಕೊಟ್ಟರೆ ಹೋದೀತೆ ?

೧೫೫೭೨ ಪಿತ್ತಭ್ರಮೆಯಾದವನಿಗೆ ಚಿತ್ರಭ್ರಮೆಯಾಗನೇ ?

ಹೂಸು

೧೫೫೭೩ ಉದ್ದು ತಿಂದವನಿಗೆ ಹೂಸು ಬಾರದೆ ?

೧೫೫೭೪ ಒಂಟಿ ಹೂಸು ಇತ್ತ ನೆಲಕ್ಕೂ ಅಲ್ಲ. ಅತ್ತ ಆಕಾಶಕ್ಕೂ ಅಲ್ಲ

೧೫೫೮೫ ದಾಸನಾವರೆ ದೋಸೆ ತಿಂದಾನು, ಹೂಸಿನಿಂದ ಕುಂಡ್ರಕೂಡದು

೧೫೫೮೬ ಹೂಸಿ ವಾಸನೆ ಅಂದ ಹಾಗೆ

೧೫೫೮೭ ಹೂಸಿಗೆ ಮುನಿಯಿತು ಮನೆದೇವರು

೧೫೫೮೮ ಹೂಸಿನ ವಾಸನೆ ಹರಡಿಸಿದ ಹಾಗೆ

೧೫೫೮೯ ಹೂಸಿದವರಿಗೆ ಬೀಸುವವರಿಬ್ಬರು

೧೫೫೯೦ ಹೂಸೆಲ್ಲ ನಾತವಲ್ಲ

೧೫೫೯೧ ಹೇಲುವಾಗ ಹೂಸಿದರೇನು ?

ಹೋದ ಕೆಲಸ ಆಗದಿರುವುದು

೧೫೫೯೨ ಬಂದ ದಾರಿಗೆ ಸುಂಕವಿಲ್ಲ

೧೫೫೯೩ ಬಂದಹಾಗೇ ಹೋಗಪ್ಪ ಸುಬ್ಬರಾಯ

೧೫೫೯೪ ಹೋದುದಕ್ಕೆ ಸುಂಕವಿಲ್ಲ, ಬಂದುದಕ್ಕೆ ಬಾಡಿಗೆ ಇಲ್ಲ

ಅನುಬಂಧ - ೧

ಇಂದಿನ ಕೆಲವು ಗಾದೆಗಳು

[illegible]

೧ [illegible]

೨ [illegible]

೩ [illegible]

೪ [illegible]

೫ [illegible]

೬ [illegible] ?

೭ '[illegible]!' '[illegible]?'
'[illegible]'

೮ [illegible]

೯ [illegible]

೧೦ [illegible]

೧೧ [illegible]

೧೨ [illegible]

೧೩ [illegible]

೧೪ [illegible]

೧೫ [illegible]

೧೬ ಅತ್ತೂ ಕರೆದೂ ಮಂತ್ರಿಯಾದ ಹಾಗೆ

೧೭ ಅಂತು ಇಂತು ಕುಂತಿ ಮಕ್ಕಳಿಗೆ ರಾಜ್ಯ ಬಂತು

೧೮ ಅತ್ತೆ ಮಾಡಿದ ಅಡಿಗೆಗೆ ಬೆಲೆಯಿಲ್ಲ

೧೯ ಅದಿರು ಹೆಚ್ಚಿದ ನಾಡು ಲೇಸು, ಬಿದಿರು ಹೆಚ್ಚಿದ ಕಾಡು ಲೇಸು

೨೦ ಅಧಿಕಾರ ಸಿಕ್ಕೋವರೆಗೆ ಸೇವೆ, ಆಮೇಲೆ ಜಬರ್ದಸ್ತು

೨೧ ಅನ್ನದ ಆಸೆಗೆ ಡಿಪ್ಪೊ ಕೇಸಕ್ಕಿ ಕೊಂಡರು

೨೨ ಅನ್ನಾತುರಾಣಾಂ ನಮತಂ ನ ಜಾತಿ

೨೩ ಅನ್ಯಾಯಕ್ಕೆ ಅನ್ಯಾಯವೇ ಬಹುಮಾನ,
ಅಧರ್ಮಕ್ಕೆ ಅಧರ್ಮವೇ ಬಹುಮಾನ

೨೪ ಅನ್ಯಾಯದಲ್ಲಿ ಗಳಿಸಿದ ಹಣ ಅಸಫ್ ಜಾಳದಲ್ಲಿ ಹೋಯಿತು

೨೫ ಅನುನಾಯಿ ಬಗ್ಗಿದರೆ ಅಧಿಕಾರ ಸಿಕ್ಕೀತೆ ?

೨೬ ಅನಂಗನಿಗೆ ಒಂದು ಚೇಷ್ಟೆ, ಮಂಗ ಮಾನವನಿಗೆ ನಾನಾ ಚೇಷ್ಟೆ

೨೭ ಅಪಮಾನದಿಂದಲೇ ತಪೋವೃದ್ಧಿಯಾಗೋದು

೨೮ ಅಪರೂಪಕ್ಕೆ ಮಂತ್ರಿಯಾಗಿ ಅತ್ತು ಅತ್ತು ಭಾಷಣ ಮಾಡಿದನಂತೆ

೨೯ ಅಪ್ಪನನ್ನು ಆಡಿಗೆಯುವ ಅಂದವನು ಹೆಂಡತಿ ಸೀರೆ ಒಗೆವನಂತೆ

೩೦ ಅಪಾಯಿಂಟ್‌ಮೆಂಟ್ ಇಲ್ಲದ ಅಳಿಯಬೇಡ,
ಮನೆ ಕೆಲಸ ಬಾರದ ಮಡದಿ ಬೇಡ

೩೧ ಅಪ್ಪ ಹಾಕಿದ ಅರ್ಜಿ ಮಂಜೂರಾಗುವುದು
ಮಗ ಮೆಜಾರಿಟಿಗೆ ಬಂದಾಗ

೩೨ ಅಪ್ಪುವ ಕರಡಿಗೆ ಆಳಾಗಬೇಡ, ಒಪ್ಪಿದ ಹದ್ದಿಗೆ ಅಣೆಯಾಗಬೇಡ

೩೩ ಅಭಾವ ಅಭಾವ ಅನ್ನೋದು ಲಾಭ ಹೊಡೆಯುವರ ಸ್ವಭಾವವ

೩೪ ಅಮ್ಮಾವ್ರ ಜೋಗ್ತಿ ಆಳಿಗೊತ್ತು

೩೫ ಅಯ್ಯಣ್ಣನ ಪೋಸ್ಟರಿಗೆ ಮೈಯೆಲ್ಲ ಸಗಣಿ

೩೬ ಅರ್ಧಾಂಗಿಯನ್ನು ನೋಡೋಕೆ ಹೊರಟರೆ
ಅವಳು ನಿದ್ರಾಂಗಿಯಾಗಿರೋದೆ ?

೩೭ ಅರಿಯೆ ಎಂದರೆ ಅರವತ್ತು ಗುಣ
(ಸಾಕ್ಷಿ ಹೇಳುವಾಗ) ಕಾಣೆ ಎಂದರೆ ಕೋಟಿ ಗುಣ

೩೮ ಅಲ್ಪ ವಿದ್ಯಾ ಮಹಾ ಗರ್ವಿ

೩೯ ಅಲ್ಪನಿಗೆ ಅರ್ಥ ಸಿಕ್ಕಿದರೆ ಅರ್ಧ ರಾತ್ರೀಲಿ ಅಣು ಭೇದಿಸ್ತಾನೆ

೪೦ ಅಲ್ಪನಿಗೆ ಅರ್ಥ ಸಿಕ್ಕಿದರೆ ಅರೆ ನಿಮಿಷದಲ್ಲಿ ಕಳ್ಕೊಂಡು ಬಿಡ್ತಾನೆ

೪೧ ಅವರು ದಿಕ್ಕಾ ಪಾಲಾದರು, ಆಸ್ತಿ ದಿಕ್ಕಾ ಪಾಲಾಯ್ತು

೪೨ ಅವಿವೇಕಿ ಮಂತ್ರಿಗಳ ರಾಜ್ಯದಲ್ಲಿರೋಕಿಂತ ಅಡವಿ ಲೇಸು

೪೩ ಅಸಹ್ಯ ಮನುಭೋಕ್ತವ್ಯಂ

೪೪ ಅಸೆಂಬ್ಲಿಗೆ ಸಿಂತವನು ಕೇರಿಗೆ ಬರದೆ ಹೋಗ್ತಾನ್ಯೆ ?

೪೫ ಅಳಿಯ ! ನಿನ್ನ ಕೆಲಸ ಮನೆ ತೊಳೆಯುವುದೇ

೪೬ ಅಳಿಯ ಹಳ್ಳಕ್ಕೆ ಬಿದ್ದರೆ ಆಳಿಗೊಂದು ಉಡುಗೊರೆ

೪೭ ಅಳಿಯನಿಗೆ ದೀಪಾವಳಿ, ಮಾವನಿಗೆ ಕೋಪಾವಳಿ,
ಅತ್ತೆಗೆ ತಾಪಾವಳಿ, ಮನೆಯವರಿಗೆ ಶಾಪಾವಳಿ

೪೮ ಆಂಬಲಿ ಕುಡಿಸೋ ಆಸ್ಪತ್ರೇಲಿ ಮೈ ತಿಕ್ಕೋಳೊಬ್ಬಳು,
ಒರಸೋಳೊಬ್ಬಳು

೪೯ ಆಕೆ ಅಂದ್ರೆ ಈತನಿಗೆ ಇಂದ್ರಲೋಕ

೫೦ ಆತುರಗಾರನಿಗೆ ಬುದ್ಧಿ ಮಟ್ಟ

೫೧ ಆರತಿಗೊಬ್ಬಳು ಮಗಳು, ಕೀರ್ತಿಗೊಬ್ಬ ಮಗ

೫೨ ಆಸೆಯಿಂದ ಅಳಿಯ ಬಂದ್ರೆ ಮಗಳು ಹೊರಗಾಗಿರೋಣ್ವೇ ?

೫೩ ಆಡೋದು ಆಂಗ್ಲರ ಮಾತು, ತೊಳೆಯೋದು ಎಂಜಲ್ಲೋಟ

೫೪ ಇಟ್ಟಲ್ಲೇ ಬಿದ್ದಿರೊ ಇಟ್ಟಿಗೆ ಮಗನೇ

೫೫ ಇಡ್ಲಿ ಹೊಡೆಯೋಕೆ ಕೊಡ್ಲಿ ಕೇಳಿದನಂತೆ

೫೬ ಇತ್ತ ಗಾಡಿ, ಅತ್ತ ಡಬ್ಬಿ

೫೭ ಇತ್ತ ತಿಂಡಿ, ಅತ್ತ ತಿನಿಸು

೫೮ ಇತ್ತತ್ತ ಬನ್ನಿ ಅಂದ್ರೆ ಇಂಗ್ಲಿಷರು ಇದ್ದ ರಾಜ್ಯ ಕಿತ್ತುಕೊಂಡರು

೫೯ ಇಬ್ಬರ ಪ್ರಚಾರ, ಮೂರನೆಯವನಿಗೆ ಗ್ರಹಚಾರ

೬೦ ಇಳಿಯ ಮುಳುಗಿದವನಿಗೆ ಚಳೇನು, ಗೋಳೇನು ?

೬೧ ಇಂದಿನ ಸೊಸೆಯೇ ನಾಳಿನ ಅತ್ತೆ

೬೨ ಉಣ್ಣ ಬೇಕಾದರೆ ಮಂತ್ರಿಯಾಗು, ಉಪವಾಸವಿರಬೇಕಾದರೆ ಉಪಾಧ್ಯಾಯನಾಗು

೬೩ ಉದರ ನಿಮಿತ್ತಂ ಬಹುಪರಿ ವೇಷಂ

೬೪ ಉದರ ನಿಮಿತ್ತಂ ಬಹುಘೃತ ಮಾಷಂ

೬೫ ಉದರ ನಿಮಿತ್ತಂ ಬಹುಕೃತ ರೇಷನ್

೬೬ ಉಪಾಹಾರಕ್ಕೆ ಹೋದರೆ ಉಪದ್ರವ ಬಂತು

೬೭ ಉಮೇದುವಾರ ಮಿತ್ರನಲ್ಲ, ಮ್ಯಾನಿಫೆಸ್ಟೊ ಸತ್ಯವಲ್ಲ

೬೮ ಉಪ್ಪಿಗೂ ದಾರಿದ್ರ್ಯವಿಲ್ಲ. ಉಪನ್ಯಾಸಕ್ಕೂ ದಾರಿದ್ರ್ಯವಿಲ್ಲ

೬೯ ಉಸಿರಿದ್ದ ಮೇಲೆ ಸಾವಂತೂ ಗ್ಯಾರಂಟಿ

೭೦ ಉರುಳುವ ಮಂತ್ರಿಗೆ ಓಡಾಟ ಜಾಸ್ತಿ

೭೧ ಉಂಗುರ ಕೊಡಲಾರದ ಮಾವ ಬಂಗಾರ ಸಿಕ್ಕಲಿಲ್ಲ ಅಂದ

೭೨ ಉಂಡವನು ತೇಗಿದ, ಹಸಿದವನು ರೇಗಿದ

೭೩ ಊಟ ಮಾಡಲಾರದ ಅಳಿಯ ಕಾಟಾಚಾರದ ಅಡಿಗೆ ಅಂದನಂತೆ

೭೪ ಊಟಕ್ಕೆ ಬಂದವನಿಗೆ ಕಾಫಿ ಕೊಟ್ಟು ಸಾಗಹಾಕಿದ ಹಾಗೆ

೭೫ 'ಊಟಕ್ಕೇಳೊ ಗುಂಡ' ಅಂದರೆ 'ಯಾವಕ್ಕ ಬೇಯಿಸಿದ್ದೀ' ಅಂದ

೭೬ ಊರು ಚಿಕ್ಕದಾದಷ್ಟೂ ಊರಲ್ಲಿ ದೊಡ್ಡ ಮನುಷ್ಯರು ಹೆಚ್ಚು

೭೭ ಊರೆಲ್ಲ ಸೂರೆ ಆದಮೇಲೆ ಕೋಟೆ ಬಾಗಿಲು ಕದ್ದರು

೭೮ ಋಷಿಪಂಚಮಿ ಆದೋಳನ್ನ ಉರುಟಣೆ ಹಾಡು ಹೇಳಿ ಅಂದ ಗಂಡ

೭೯ ಎಣ್ಣೆ ಬಂದಾಗ ಎಳ್ಳು ಕೊಟ್ಟವನು ಹಣಕ್ಕೆ ಬಂದ

೮೦ ಎಣ್ಣೆ ಬಂದಾಗ ಟೈರೇ ಬರ್ಸ್ಟ್

೮೧ ಎತ್ತಿಗೆ ಜ್ವರ ಬಂದರೆ ಕೋಣನ್ನ ಎಳೆದು ಕಟ್ಟಿದರು

೮೨ 'ಎಲೆ ಹಾಕೊ ಗುಂಡ' ಅಂದ್ರೆ 'ನಮ್ಮ ಜಾತಿಯವರೆಷ್ಟು ಜನ?' ಅಂದ

೮೩ ಎಲೆಕ್ಟ್ ಆಗೋಕ್ಕೆ ಮೊದಲೇ ಖಾದಿ ಬಟ್ಟೆ ಹೊಲಿಸಿದ ಹಾಗೆ

೮೪ 'ಏನೇ ಬರಲಿ, ಮುಗ್ಗಟ್ಟಿ(ಒಬ್ಬಟ್ಟಿ)ರಲಿ'

೮೫ 'ಏನೋ ಗೋಪಿ' ಅಂದರೆ 'ತಂದುಕೊಡು ಒಂದು ಪೀಪೀನ' ಅಂದ

೮೬ 'ಏನೇ ಗೌರಿ ಓಡಾಟ' ಅಂದ್ರೆ
'ಅಮೃತಸರದಲ್ಲಿ ದೇವರೂಟ' ಅಂದ್ಳು ಸಚಿವೆ

೮೭ 'ಏನೇ ಬೋರಿ ತಾರಾಟ' ಅಂದ್ರೆ
'ಇಸ್ಕ್ಯಾಲ್ನಾಗೆ ಇವತ್ತು ಇಲೆಕ್ಷನ್ನು' ಅಂದಳಂತೆ

೮೮ ಏಸು (ಏಸುಕ್ರಿಸ್ತ) ಹೇಳಿದರೂ ಬುದ್ಧಿ ತಿಳಿಯದು

೮೯ ಒಗ್ಗಟ್ಟೇ ಒಬ್ಬಟ್ಟು

೯೦ ಒಡೆಯನಿಲ್ಲದ ಭೂಮಿ ಕೆಡಕಿಗೆ ಕಾರಣ

೯೧ ಒಪ್ಪತ್ತುಂಡವ ಪುಣ್ಯವಂತ, ಎರಡು ಹೊತ್ತು ಉಂಡವ ನಾಣ್ಯವಂತ, ಮೂರು ಹೊತ್ತು ಉಂಡವನಿಗೆ ಮೂರು ವರ್ಷ ಸಜ (ರೇಷನ್‌ಗಾದೆ)

೯೨ ಒಲಿದರೆ ಚಾಕರಿ, ಮುನಿದರೆ ಪೋಕರಿ

೯೩ ಒಲುಮೆಗೊಬ್ಬ ಮಗಳು, ಉಳುಮೆಗೊಬ್ಬ ಮಗ

೯೪ ಒಂದಲ್ಲ ಮತದಾರನಿಗೆ ಸಂದಿಸಂದೀಲೂ ಬೇಡೋರೇನ

೯೫ ಓಟಿನ ಆಸೆಗೆ ಕೋಟಿ ಮಕ್ಕಳಿಗೆ ಮುತ್ತುಕೊಟ್ಟ

೯೬ 'ಓಟು' ಅಂದರೆ 'ನೋಟು!' ಅನ್ನೋದೆ ?

೯೭ 'ಓಟು ಕೊಡೊ ನಿಂಗ !' ಅಂದರೆ 'ನಿಂತವರೆಷ್ಟು ಮಂದಿ?' ಅಂದ

೯೮ 'ಓಟು ಕೊಡಪ್ಪ !' ಅಂದ್ರೆ 'ಕೌಟು ಹಾಕಲೇ ?' ಅಂದ

೯೯ ಓಟುದಾರ ಕೊಡ, ಉಮೇದುವಾರ ಬಿಡ

೧೦೦ ಓದಿಲ್ಲ ಬರಹವಿಲ್ಲ, ಆದರೂ ಬೋರಣ್ಣ ಚುನಾವಣೇಲಿ ಗೆದ್ದ

೧೦೧ ಓಂಕಾರಕ್ಕಿಂತ ಹೂಂಕಾರವೇ ಪ್ರಭಾವಶಾಲಿ

೧೦೨ ಕಣ್ಣುಕೊಟ್ಟ ದೇವರು ಅದನ್ನು ಕೆಡಿಸಿಕೊ ಅಂದ್ನೇ

೧೦೩ ಕತ್ತು ಹಿಸುಕಿದರೂ ಅತ್ತೆಯ ಮಗಳೇ ಚಂದ

೧೦೪ ಕತೆಗೆ ಕಾಲಿಲ್ಲ, ಕಾನೂನಿಗೆ ಕಣ್ಣಿಲ್ಲ

೧೦೫ ಕತೆಗೆ ಕಾಲಿಲ್ಲ, ಕೇನಿಗೆ ಕಾಲದ ಪರಿಮಿತಿ ಇಲ್ಲ

೧೦೬ ಕನಸಿನಲ್ಲಿ ಮಾವನ ಮನೆ ನೋಡಿ ಬೆಳಿಗ್ಗೆ ಎದ್ದು 'ಆರತಿ ತಟ್ಟೆ ಎಲ್ಲಿ?' ಅಂದನಂತೆ

೧೦೭ ಕನ್ನಡ ಕಲಿತರೆ ಕೈಲಾಸ

೧೦೮ ಕರತಲದ ಕಜ್ಜಿಗೆ ಕನ್ನಡಿ ಏಕೆ ?

೧೦೯ ಕರುಳಲ್ಲಿ ಕತ್ತರಿ, ಬಾಯಲ್ಲಿ ಕಸ್ತೂರಿ

೧೧೦ ಕಲ್ಲಾಗಿ ಇರಬೇಕು ಕಠಿನ ಕಾನೂನೊಳಗೆ

೧೧೧ ಕಲ್ಲಾಗಿ ಇರಬೇಕು ಕೆಳದರ್ಜೆಯವರೊಳಗೆ

೧೧೨ ಕಳ್ಳಭಟ್ಟಿಯ ಕೆಳಗೆ ಒಲೆ ಚಾಚಿದರೆ ಬುದ್ಧಿಗೇಡು

೧೧೩ ಕಳ್ಳರಿಬ್ಬರು ಸೇರಿದರೆ ಕೊಳ್ಳೆ

೧೧೪ ಕಾಗುಣಿತ ಬಾರದವನಿಗೆ ಕಾವ್ಯ ಹೇಳಿದ ಹಾಗೆ

೧೧೫ ಕಾಫಿಗಾದರೆ ಕುಲವಿದೆ, ರೂಪಾಯಿಗೆ ಕುಲವಿಲ್ಲವೆ ?

೧೧೬ ಕಾರಕಾರಕ್ಕೆಲ್ಲ ಸರಕಾರವೇ ಕಾರ

೧೧೭ ಕಾಲಿಗೆ ದೂರವಾದರೆ ಕಾರಿಗೂ ದೂರವೆ ?

೧೧೮ ಕಾಲಿನ ಮೇಲಾಸೆ, ಕ್ರಿಕೆಟ್ ಮೇಲೆ ಪ್ರೀತಿ

೧೧೯ ಕಾವೂ ಸಾಯದು, ಸೋಲೂ ಮುರಿಯದು

೧೨೦ ಕಾಳಸಂತೆ ಬಿಟ್ಟು ಕೌನ್ಸಿಲ್ಲಿಗೆ ನಿಂತ ಹಾಗಾಯ್ತು

೧೨೧ ಕಿತ್ತುಕೊಂಡು ತಿಂದರೂ ಕಿರಿ ಅಳಿಯನೇ ವಾಸಿ

೧೨೨ ಕುರಿಪತ್ತಿಗೆ ತೋಳನೇ ಅಧ್ಯಕ್ಷ

೧೨೩ ಕುಳಿತು ಕುಡಿಯೋನಿಗೆ ಕುಬೇರನ ಹೊನ್ನಾದರೂ ಸಾಲದು

೧೨೪ ಕೂಲಿಗಳಿಗೆ ತೃಪ್ತಿಯಿಲ್ಲ, ಸ್ಟ್ರೈಕಿಗೆ ಕೊನೆಯಿಲ್ಲ

೧೨೫ ಕೂಳು ಚೆಲ್ಲಿದರೆ ಕೃತಘ್ನರಿಗೇನು ಕಮ್ಮಿ ?

೧೨೬ ಕ್ಯೂನಲ್ಲಿ ನಿಂತವನೇ ಕೋಣ

೧೨೭ ಕೆಡೋಕೆ ಪಟ್ಟಣವೇ ಸರಿ

೧೨೮ ಕೆಲಸವಿಲ್ಲದ ಕವಿ ಮಕ್ಕಳ ಕವನ ಬರೆದ

೧೨೯ ಕೇಡು ಬರುವ ಕಾಲಕ್ಕೆ ವಿಮಾನ ಮೊಟ್ಟೆ ಇಟ್ಟಿತು

೧೩೦ ಕೈ ತೋರಿಸಿ ಸೀಟಿಲ್ಲ ಅನ್ನಿಸಿಕೊಂಡ ಹಾಗೆ

೧೩೧ ಕೈಗೆ ಬಂದ ಕ್ಯಾಚು ಬೌಂಡರಿಗೆ ಪ್ರೋಚು

೧೩೨ ಕೈಗೆ ಬಂದ ಕ್ಯಾಚು ಬಾಯಿಗೆ ಬಡಿಯಬೇಕೆ ?

೧೩೩ ಕೈಗೆ ಬಂದದ್ದು ಫೈನಲ್‌ಗಿಲ್ಲ

೧೩೪ ಕೈಗೆ ಬಂದ ಮುತ್ತು ಬಾಯಿ (ಕೆನ್ನೆ)ಗಿಲ್ಲವಾಯಿತು

೧೩೫ ಕೈ ತುಂಬ ಸಂಬಳ, ಕಿಸೆ ತುಂಬ ಸಾರಿಗೆ

೧೩೬ ಕೈಲಾಗದ ಆಫೀಸರು ಕ್ಲಾರ್ಕಿನ ಕಾಲು ಹಿಡಿದ

೧೩೭ ಕೈಲಾದವರು ಮಾಡುತ್ತಾರೆ, ಕೈಲಾಗದವರು ಆಡುತ್ತಾರೆ

೧೩೮ ಕೊಡುವ ದಡ್ಡರಿರುವಾಗ ಬೇಡುವ ಜಾಣರಿಗೆ ಕೊರತೆಯೆ ?

೧೩೯ ಕೋಪಿಷ್ಟ ಹುಡುಗಿಗೆ ಪಾಪಿಷ್ಟ ಗಂಡ

೧೪೦ ಕೋಳಿಗೆ ಜ್ವರ ಬಂದರೆ ಕೊಕ್ಕರೆಗೆ ಇಂಜಕ್ಷನ್ನೇ ?

೧೪೧ ಕಾಂಗಿನೆದುರಿಗೆ ಕುರುಚಲೂ, ಬಸ್ಸಿನೆದುರಿಗೆ
ಟಾಂಗವೂ ಶೋಭಿಸಿಯಾವೆ ?

೧೪೨ ಕ್ರಿಕೆಟ್ ಆಡಿ ಕಿಟ್ಟಿ ಕೆಟ್ಟ, ಪುಟ್‌ಬಾಲ್ ಆಡಿ ಪುಟ್ಟ ಕೆಟ್ಟ

೧೪೩ ಖಜಾಂಚಿಗಿಂತ ಕಂಡಕ್ಟರೇ ವಾಸಿ

೧೪೪ ಖಾದಿ ತೊಟ್ಟೋನು ಖದೀಮ

೧೪೫ ಖಾದಿ ಹಿಡಿದೋನು ಗಾದಿ ಹತ್ತಿದ

೧೪೬ ಖಾಯಂ ಸೂಳೆಯೇ ಹೆಂಡತಿ, ತಾತ್ಪೂರ್ತಿಕ ಹೆಂಡತಿಯೇ ಸೂಳೆ

೧೪೭ ಗಡ್ಡಬಿಟ್ಟ ಮಾತ್ರಕ್ಕೆ ಕ್ಷೌರಿಕ ಉಪವಾಸ ಬೀಳ್ತಾನ್ಯೇ ?

೧೪೮ ಗಣಿ ಕೆಲಸದವರಿಗೆ ಗಣಿ ಗಿಣಿಗಳೇ ಗತಿ

೧೪೯ ಗಣೇಶನ ಹಬ್ಬಕ್ಕೆ ಬಂದ ಗತಿಗೆಟ್ಟ ಅಳಿಯ,
ಉಗಾದಿಗೆ ಬಂದ ಊರು ರೋಸಿದ ಅಳಿಯ,
ದೀಪಾವಳಿಗೆ ಬಂದ ಧೀರ ಅಳಿಯ

೧೫೦ ಗದ್ಯ ಮುರಿದರೆ ಪದ್ಯ ಆಯಿತು

೧೫೧ ಗಂಟು ತೀರಿದ ಮೇಲೆ ನಂಟರೇ ಗಂಟಲಿಗೆ ಗಾಣ

೧೫೨ ಗಂಡ ಅಂದ್ರೆ ದುಡಿಯುವ ಕೂಲಿ,
ಹೆಂಡತಿ ಅಂದ್ರೆ ಹಡೆಯುವ ಯಂತ್ರ

೧೫೩ ಗಂಡ ಮಂತ್ರಿ ಪಟ್ಟಕ್ಕೆ ಬಂದಾಗ
ಹೆಂಡತಿ ಮಹಿಳಾ ಸಮಾಜದ ಉದ್ಘಾಟನೆಗೆ

೧೫೪ ಗಂಡ ಹೆಂಡಿರ ಜಗಳದಲ್ಲಿ ಮಕ್ಕಳೂ ಜಗಳ ಕಲಿತವು

೧೫೫ ಗಂಡ ಹೆಂಡಿರ ಜಗಳದಲ್ಲಿ ಮಾವ ಬಡವಾದ

೧೫೬ ಗಂಡ ಹೆಂಡಿರ ಜಗಳ ಕೊಂಡು ಕೊಡೋ ತನಕ

೧೫೭ ಗಂಡನಿಗಿಂತ ಫ್ರೆಂಡಿನ ಜೊತೇಲಿ ಸಲಿಗೆ ಜಾಸ್ತಿ

೧೫೮ ಗಾಜಿನ ಮನೆಯಲ್ಲಿ ವಾಸಿಸುವವರು ಕಲ್ಲೆಸೆಯಬಾರದು
ಅವರು ಬೆತ್ತಲೆಯೂ ತಿರುಗಬಾರದು

೧೫೯ ಗಾಡಿ ಹೋದ ಮೇಲೆ ನಿಶಾನಿ ಹಿಡಿದ ಹಾಗೆ

೧೬೦ ಗಾಂಧಿ ಟೋಪಿ ಹಾಕ್ಕೊಂಡ್ರೆ ಬಂತೇ ಭಾಗ್ಯ ?

೧೬೧ ಗುಮಾಸ್ತನಿಗೇಕೆ ಮಜ್ಜಿಗೆ ಪಳಿದ್ಯ?

೧೬೨ ಗೃಹಿಣಿಯಿಲ್ಲದ ಮನೆಯಿಲ್ಲ, ಬಾವಿ ಇಲ್ಲದ ಹೊಲವಿಲ್ಲ

೧೬೩ ಗುಂಡಿಗೆ ಇದ್ದವ (ರೇಡಿಯೊ) ಗುಂಡಿ ತಿರುಗಿಸಲಿ

೧೬೪ ಗೆದ್ದ ಮೇಲೆ ಬುದ್ಧಿ ಹೋಯಿತು, ಬಿದ್ದ ಮೇಲೆ ಮಾನ ಉಳಿಯಿತು

೧೬೫ ಗ್ರೋಮೋರ್ ಫುಡ್ಡಿನವರು ಗೋರಿಗೂ ಕೈ ಹಾಕಿದರಂತೆ

೧೬೬ ಚಹ ಕುಡಿಸಿ ಚಾನ್ಸ್ ಹೊಡಕೊಂಡ

೧೬೭ ಚಹ ಕುಡಿದ ಬಾಯಿ ಒಡಕು ಜುಮ್ಮದ ಕಾಯಿ

೧೬೮ ಚಪಲೇ ಚಪಲೋತ್ಪತ್ತಿ

೧೬೯ ಚಪಲಿಗೆ ಪಾಲೀಸು, ಪಾಪಲಿಗೆ ಪಾಲೀಸು

೧೭೦ ಚಂಡಸಿಗೊಬ್ಬ ಪ್ರಚಂಡ ಎದುರಾದ ಹಾಗೆ

೧೭೧ ಚಂದ ಎತ್ತಿನೋಡು, ಚುನಾವಣೆಗೆ ನಿಂತು ನೋಡು

೧೭೨ ಚಿಕ್ಕ ಸಂಸಾರ ಸುಖಕ್ಕೆ ಆಧಾರ

೧೭೩ ಚಿಲ್ಲರೆ ತೋರಿಸಿದರೆ ಪರ್ಸನ್ನೇ ಹಾರಿಸಿದ

೧೭೪ ಚುನಾಯಿತನಾದ ಮಂತ್ರಿ ಮೇಯಿಸುವುದಿಲ್ಲ

೧೭೫ ಚುನಾವಣೆಗೆ ನಿಂತ ಅರಿಕೇಸರಿ ಸೋತಾಗ ಪರಾರಿ

೧೭೬ ಜನ ಮರುಳಾದರೆ ಜಾತ್ರೆ ಮರುಳಾಗದೆ ಇರುತ್ತದೆಯೆ ?

೧೭೭ ಜನಾನ ದನ ಮಾಡೋಕೆ ಜನಾರ್ಧನ ಬೇಕಿಲ್ಲ

೧೭೮ ಜಂಬೂ ಸವಾರಿ ಹೋಯ್ತು, ಬಂಬೂ ಸವಾರಿ ಬಂತು

೧೭೯ ಜಾಣರಿಗೆ ದಡ್ಡರ ತಲೆಯೇ ಸೋಪಾನ

೧೮೦ ಜಾತ್ಯತೀತ ರಾಷ್ಟ್ರದಲ್ಲಿ ನಿತ್ಯಾತೀತ ಕಮಿಟಿ

೧೮೧ ಜೋಗಿ ಜೋಗಿ ಗುದ್ದ್ಯಾಡಿ ಬುರುಡೆ ಒಡೆಯಿತು

೧೮೨ ಟಿಕೇಟು ನನ್ನ ಕೈಲಿರೋವಾಗ ರೈಲು ಹೆಂಗೆ ಬಿಟ್ಟಾನು ?

೧೮೩ ಡಿಗ್ರಿ ಇರುವವರಿಗೆಲ್ಲ ಅಗ,ಪೂಜೆ

೧೮೪ ತಕ್ಕಡಿಗೊಗ್ಗತ್ತೆ ಸಕ್ಕರೆ ಬೆಲೆ ?

೧೮೫ ತಲವಾರ್ ಕಟ್ ವಿಿಾಸೆ ಇದ್ದರೆ ತಲಪಾರಸಾದ ಸೆ ?

೧೮೬ ತಾನೂ ತಿಂದ, ತನ್ನವರಿಗೂ ಕೊಟ್ಟ

೧೮೭ ತಾರೆಯಂತೆ ಮಗಳು, ಮಂತ್ರಿಯಂತೆ ಮಗ

೧೮೮ ತಿಥಿ ಬಂದರೂ ಕಾಫಿ ಬಿಡ

೧೮೯ ತಿರುಪತಿಯಲ್ಲಿ ಕಪಿಗಳ ಹಾವಳಿ, ಧಾರವಾಡದಲ್ಲಿ ಕವಿಗಳ ಹಾವಳಿ

೧೯೦ ತಿಂಗಳಿಗೊಂದು ಬೆಂಗಳೂರು ಸಾಧ್ಯವೆ ?

೧೯೧ ತಿಂದುಂ ತೇಗದವನು ಕೊಟ್ಟು ಕೈಮುಗೀತಾನ್ಯೆ ?

೧೯೨ ತುಂಗೆಯಾದರೇನು, ಗಂಗೆಯಾದರೇನು,
ಇಂಗು ಹಾಕಿದರೆ ಸಾರು ಚೆನ್ನ

೧೯೩ ತುಂಟ ದೇವರಿಗೆ ಗಂಡ ಪೂಜಾರಿ

೧೯೪ ತೆನೆಗೂಡಿದರೆ ಬತ್ತ, ಹನಿಗೂಡಿದರೆ ಪೊಸಸೀರೆ

೧೯೫ ತೋಳ ಹಳ್ಳಕ್ಕೆ ಬಿದ್ದರೆ ಬೇಟೆಗಾರರಲ್ಲೇ ಬೈದಾಟ

೧೯೬ ತೋಳು ಕೊಡು ಅಂದ್ರೆ ತೂಕ ಎಷ್ಟು ಅಂದನಂತೆ

೧೯೭ ದಾಕ್ಷಿಣ್ಯಕ್ಕೆ ಕಾಫಿ ಕುಡಿದು ಹೊಟ್ಟೆ ಕೆಡಿಸಿಕೊಂಡ

೧೯೮ ದಿಳ್ಳಿಗೆ ಹೋದರೂ ಹಳ್ಳಿ ಬುದ್ಧಿ ಬಿಡ

೧೯೯ ದಿಳ್ಳಿಯಲ್ಲಿ ಒಂದು ಪಾರ್ಟಿಯಾದರೆ ಹಳ್ಳಿಯಲ್ಲಿ ನಾನಾ ಪಾರ್ಟಿ

೨೦೦ ದೀಪಾವಳಿಗೆ ಅಳಿಯ ಬಂದರೆ ಇಡ್ಲಿ ಚಟ್ನಿ, ಕಾಫಿ ನದಿ

೨೦೧ ದೀಪಾವಳಿಗೆ ಬಂದ ಅಳಿಯ
ಉಗಾದಿ ಮುಗಿಸ್ಕೊಂಡು ಹೋಗ್ತೀನಿ ಅಂದ

೨೦೨ ದುರ್ಭಿಕ್ಷದಲ್ಲಿ ಅಧಿಕ ಮಾಸ

೨೦೩ ದೊಡ್ಡ ಆಸ್ಪತ್ರೆ ಚಿಕಿತ್ಸೆ ದೊಡ್ಡ ಕುದುರೆ ಚೇಷ್ಟೆ

೨೦೪ ಧೈರ್ಯಂ ಸರು ಹೊತ್ತಿನಲ್ಲಿ ಸಾಧನಂ

೨೦೫ ನನಗೇನೂ ವರದಕ್ಷಿಣೆ ಬೇಡ ಅಂದವ
'ನಾ ಫಾರಿನ್ನಿಗೆ ಹೋಗೋದಕ್ಕೆ ಹತ್ತು ಸಾವಿರ ಕೊಡಿ' ಅಂದ

೨೦೬ ನ ಭೂತೋ, ನ ಪ್ರೇತೋ

೨೦೭ ನಮ್ಮ ರಿಸರ್ಚೂ ಒಂದೇ, ಗೆಣಸು ಕೆರೆಯೋದೂ ಒಂದೇ

೨೦೮ ನಂಜಿ ಕರೆದರೆ ಹೋಗೆನ್ನುವಳು ಹಡೆದವ್ವ

೨೦೯ ನಾಗೋಲಿ ನಿಷ್ಟುರವಿಲ್ಲದೆ ಮದುವೆ ಮುಗಿದೀತೆ ?

೨೧೦ ನಾಡಿದ್ದುಣ್ಣೋ ಮಹಾರಾಯ

೨೧೧ ನಿಜ ಹೇಳಿದರೆ ನಿಷ್ಠುರ, ಕತೆ ಹೇಳಿದರೆ ಕತ್ತುರಿ

೨೧೨ ನಿತ್ಯ ಕ್ಯೂ ನಿಲ್ಲೋರ ನೋಡಿ ಅಳೋರ್ಯಾರು ?

೨೧೩ ನಿದ್ರೆ ಬಾರದ ಕಿಚ್ಚಿಗೆ ಮಕ್ಕಳ ಹಡೆದರು

೨೧೪ ನಿಂತಾಗ ಉಮೇದುವಾರ, ಸೋತಾಗ ನಿರಾಧಾರ

೨೧೫ ನಿಂತಾಗ ಹುರಿಯಾಳು, ಸೋತಾಗ ಬರಿ ಸೊ(ಗೋ)ಳು

೨೧೬ ನೀರ ಹಾವನ್ನು ಮೀನು ಅಂತ ಹಿಡಿದರೆ ಸುಮ್ಮನಿದ್ದೀತೆ ?

೨೧೭ ನೀರುಗಂಟಿ ಕೈಲಿ ಒಂಟಿಯಾಗಿ ಸಿಕ್ಕಿದಂತೆ

೨೧೮ ನುಗ್ಗೇಕಾಯಿ ಕೀಳೋಕೆ ಮರ ಹತ್ತಿದ ಹಾಗೆ

೨೧೯ ನೂರು ಜುಟ್ಟು ಕಲೆತರೂ ಮೂರು ಜಡೆ ಕಲೆಯೋಲ್ಲ

೨೨೦ ನೆಗಡಿ ಹಿಡಿದ ನಾಯಿ ಬೇಟೆಗೆ ಅಪ್ರಯೋಜಕ

೨೨೧ ನೆಟ್ಟಾನೆ ಹೆಣ್ಣು, ನೆಟ್ಟನೆ ಊಟ

೨೨೨ ನೆವರಿಕೊಂಡು ಹೋಗುವವ ಬವರಕ್ಕೆ ಬಂದಾನೆ ?

೨೨೩ ನೇಗೆಯುವನಿಗೇಕೆ ಕೋತಿಮರಿ ?

೨೨೪ ನೊಣ ಹೊಡೆಯೋಕೆ ಲೈಸೆನ್ಸ್ ಬೇಕೆ ?

೨೨೫ ಪಕ್ಕವಿದ್ದರೆ ಸಾಲದು ಪಕ್ಷಿಗೆ, ಕೊಕ್ಕೂ ಇರಬೇಕು

೨೨೬ ಪತ್ರಿಕೆ ನಡೆಸಿ ನೋಡು, ಬಾಡಿಗೆ ಮನೆ ಹುಡುಕಿ ನೋಡು

೨೨೭ 'ಪ್ರಧಾನಿ ಹುದ್ದೆ!' ಅಂದರೆ 'ಯಾರಿಗೆ, ನನಗಾ?' ಅಂದನಂತೆ

೨೨೮ ಪರ ಊರುಗಳಲ್ಲಿ ದೊಡ್ಡ ಮನುಷ್ಯನಾದರೆ
ಹುಟ್ಟೂರಿಗೆ ಎಂದೂ ಹುಡುಗನೇ

೨೨೯ ಪರರ ಹೆಣ್ಣ ಮುಟ್ಟುವವರು
ಪರರ ಅಂಗಿ ಮುಟ್ಟುವುದನ್ನು ಸಹಿಸೋದುಂಟೆ ?

೨೩೦ ಪರಮಾನ್ನ ತಿನ್ನುವಷ್ಟು ವರಮಾನ ಇರಬೇಕು

೨೩೧ ಪರಮಾತ್ಮ ಅಂತ ಕೂತರೆ ಮರ ಬೆಳೆಯುತ್ತೇ ?

೨೩೨ ಪರೀಕ್ಷೇಲಿ ಪಾಸಾದರೂ ಪರಿತಾಪ ತಪ್ಪಲಿಲ್ಲ

೨೩೩ ಪರೀಕ್ಷೇಲಿ ಫೇಲಾದವರಿಗೆ ಕೋಡುಬಳೆ ಹಂಚಿದರು

೨೩೪ ಪಾಠ ಕಾಲು, ಪ್ರಾಕ್ಟೀಸ್ ಮುಕ್ಕಾಲು

೨೩೫ ಪಾತ್ರೆ ತೊಳೆಯುವವನಿಗೇಕೆ ಪ್ರತಿನಿಧಿ ಸಭೆ ಚಿಂತೆ ?

೨೩೬ ಪಾಪಿ ಚುನಾವಣೆಗೆ ನಿಂತರೆ ಮೂರೇ ಓಟು

೨೩೭ ಪಾಪಿ ಪಣ ತೊಟ್ಟರೆ ಕುದುರೆಗೆ ಮೊಣಕಾಲು ಮುರಿಯಿತು
(ಕುದುರೆ ಜೂಜು)

೨೩೮ ಪಾಪಿ ಪತ್ನಿ ಮನೆಗೆ ಹೋದರೂ ಕಾಫಿಗೆ ಸೊನ್ನೆ

೨೩೯ ಪಾಪಿ ಬಸ್ಸಿಗೆ ಹೋದರೆ ಪೆಟ್ರೋಲೇ ನಾಸ್ತಿ

೨೪೦ ಪಾಪಿ ಬಸ್ಸಿನಲ್ಲಿ ಕೂತರೆ ಮೊಣಕಾಲು ಮಡಿಸಲೂ ಜಾಗವಿಲ್ಲ

೨೪೧ ಪಾಪಿ ಸಿನಿಮಾ ಹೊಕ್ಕರೆ ಪವರ್ ಕಟ್ಟಾಯಿತು

೨೪೨ ಪಾಪಿ ಸಮುದ್ರ ಹೊಕ್ಕರೆ ಸಮುದ್ರದ ತುಂಬ ಮೊಸಳೆಗಳು,
ಪುಣ್ಯವಂತ ಹೊಕ್ಕರೆ ಹಾಲು, ಜೇನು

೨೪೩ 'ಪಾಸಾಯ್ತೇನೊ ಮಗನೇ' ಅಂದ್ರೆ
ಪಾರ್ಟ್ ಪಾರ್ಟ್‌ನಲ್ಲೂ ಫೇಲು ಅಂದನಂತೆ

೨೪೪ ಪಾಂಡುವಿಗೆ ಬಿಳಿ ರೋಗ, ಮಾರವಾಡಿಗೆ ಬಿಳಿ ರೂಪಾಯಿ ರೋಗ

೨೪೫ ಪಿಂಚಣಿ ಆದವನಿಗೆ ಪುರಾಣವೇ ಗತಿ

೨೪೬ ಪೂಜಾರಿ ಗಳಿಸಿದ್ದು ಮಗನ ವಿದೇಶ ಯಾತ್ರೆಗೆ

೨೪೭ ಪೂಜಾರಿಗೆ ಕೊಟ್ಟ ದುಡ್ಡು ಕೋರ್ಟಿಗೆ ಹೋದರೂ ಬರೋಲ್ಲ

೨೪೮ ಪೂಜಾರಿಯ ರಾಜ್ಯ ಬಂದರೂ ಪುರಿ ತಿನ್ನೋದು ತಪ್ಪಲಿಲ್ಲ

೨೪೯ ಪುನರಪಿ ಭಾಷಣ, ಕಂಠಶೋಷಣ

೨೫೦ ಪುನರಾಯಣ್ ಮಹಾಲಿಪಿ ವೃಂದಂ

೨೫೧ ಪುರಾಣವಾದ ಪಾತ್ರಕ್ಕೆ ಪೂರ್ತಿ ಕೇಳಬೇಕಾಗಿಲ್ಲ

೨೫೨ ಪೂಜಾರಿ, ಪಾರುಪತ್ತೇಗಾರರ ಜಗಳದಲ್ಲಿ ದೇವರು ಮೆತ್ತಗಾದ

೨೫೩ ಪೆಟ್ಟಿಗೆಯಿಂದ ಪೆಟ್ಟಾದರೂ ಸಿಟ್ಟು ಬಿಡಲಿಲ್ಲ

೨೫೪ ಬಕರಾ ಇದ್ದಲ್ಲಿ ಬಿಟ್ಟಿ ಕುಡುಕರು

೨೫೫ ಬಗ್ಗಿದವನ ಮೇಲೆ ಬೆಡ್ಡಿಂಗ್ ಇಟ್ಟರು

೨೫೬ 'ಬಟ್ಟೆ ಕೊಡಿ ಸ್ವಾಮಿ' ಅಂದರೆ 'ನೀನೇ ನೂತು ಉಟ್ಟುಕೊ'
ಅನ್ನೋದೆ ?

೨೫೭ ಬಡವರ ಕೂಗು ವಿಧಾನಸೌಧ ಮುಟ್ಟೀತೆ ?

೨೫೮ ಬಡವನನ್ನು ಕಂಡರೆ ಬಂದವರೆಲ್ಲ 'ಬಾಸ್' ಅಂತಾರೆ

೨೫೯ ಬರಿಬಾಯಿ ಆಡಿಸೋನಿಗೆ ಸ್ಲೋಗನ್ ಸಿಕ್ಕಿದ ಹಾಗೆ

೨೬೦ ಬಲ್ಲವನೇ ಬಲ್ಲ ಲಲ್ಲೆಯ ಸವಿಯ

೨೬೧ ಬಹಳ ಮಕ್ಕಳಾದರೆ ಬಹು ಕ್ಲೇಶ

೨೬೨ ಬಂಗಲೆ ಕಟ್ಟೋ ಕೂಲಿಗೆ ಜಂಗ್ಲಿಯೇ ಗತಿ

೨೬೩ ಬಾಯಲ್ಲಿ ಪ್ರಜಾತಂತ್ರ, ಕೃತಿಯಲ್ಲಿ ಕಳಿಂಗ ತಂತ್ರ

೨೬೪ ಬಾಯಿ ಇದ್ದವನು ಮಂತ್ರಿಗಳನ್ನು ತದುಕಿದ

೨೬೫ ಬಾಯಿ ಬಿಟ್ಟರೆ ಮಣ್ಣು ತುಂಬುವುದೆ ?

೨೬೬ ಬಾಲ ಇರುವುದೆಲ್ಲ ಕುದುರೆ, ಡಿಗ್ರಿ ಇದ್ದವರಿಗೆಲ್ಲ ಅಗ್ರಪೂಜೆ

೨೬೭ ಬ್ಲ್ಯಾಕಿನಲ್ಲಿ ಬಂದದ್ದು ರೇಸಿನಲ್ಲಿ ಹೋಯಿತು

೨೬೮ ಬಿ.ಎ. ಪ್ಯಾಸು ಮಾಡೋಕ್ಕಿಂತ ಬೀದಿ ಪ್ಯಾಸು ಮಾಡಬೇಕು

೨೬೯ ಬಿಟ್ಟಿ ಕೊಡ್ತೀನಿ ಅಂದರೆ
ಬೆಟ್ಟದ ಮೇಲಕ್ಕಾದರೂ ಹಾರಿ ಬರ್ತೀನಿ ಅಂದ

೨೭೦ ಬೀಗರ ಬಾಯಿಗೆ ಬೀಗವೇ ನಾಸ್ತಿ

೨೭೧ ಬೀರುಗಂಟಿ ತಂಟೆ ಯಾಕೆ ?

೨೭೨ ಬೀಸುವ ಚೆಂಡು ತಪ್ಪಿದರೆ ಸಾವಿರ ರನ್ ಆಯಿತು

೨೭೩ ಬುದ್ಧಿಯೋರು ಆಫೀಸು ಬಿಟ್ರೆ ಕ್ಲಬ್ಬು.
ಅಮ್ಮಾವ್ರು ಮನೆ ಬಿಟ್ರೆ ಸಮಾಜ

೨೭೪ ಬೂದಿ ಮುಚ್ಚಿದ ಭಂಡ

೨೭೫ ಬೆಳ್ಳಗಿರುವವರೆಲ್ಲ ಭಾಗ್ಯವಂತೆಯರಲ್ಲ,
ತೆಳ್ಳಗಿರುವವರೆಲ್ಲ ತಾರಾಮಣಿಗಳಲ್ಲ

೨೭೬ ಬೆಂಗಳೂರಿಗೆ ಹೋದರೂ ತಂಗಳನ್ನವೇ ಗತಿ

೨೭೭ ಬೆಂದ ಬಾಯಿಗೆ ಬಂದದ್ದೇ ಮಂಗಳಾಷ್ಟಕ,
ನೊಂದ ಹೆಂಗಸು ಹೇಳಿದ್ದೇ ಹಾಡು

೨೭೮ ಬೇರೋಜುಗಾರ, ಸರ್ವಮೊಕ್ತಿಯಾರ

೨೭೯ ಬೇಸಾಯದವ ಬೇಗ ಸಾಯು

೨೮೦ ಬೊಗಳಿ ಬೊಗಳಿ ರಾಗ, ಉಗುಳಿ ಉಗುಳಿ ಟಿ.ಬಿ.

೨೮೧ ಬ್ಲೇಡು ಹಿಡಿದ ಕೈಗೆ ಬೇಡಿ ಬೀಳುವುದು ತಡವೇ?

೨೮೨ ಭಂಡರ ರಾಜ್ಯದಲ್ಲಿ ಉಂಡವನೇ ಜಾಣ

೨೮೩ ಭೋಜನಾಂತೇ ಬಿಬೇತ್ ಬ್ರಾಂದಿಂ

೨೮೪ ಭಾವ ಮೈದುನನಿಗೆ ಸುರ್ ಸುರ್ ಬತ್ತಿ ಚಿಂತೆ.
ಹೆಂಡತಿಗೆ ಕಿಸ್ ಮತಾಪಿನ ಚಿಂತೆ

೨೮೫ ಭಾಷಣ ಮಾಡೋನಿಗೆ ನೀರು ಕುಡಿಸೋನೊಬ್ಬ

೨೮೬ ಮಕ್ಕಳುಣ್ಣೋ ಕಾಲಕ್ಕೆ ಅಪ್ಪ ಜೂಜು ಕಲಿತ

೨೮೭ ಮಗ ಮೂದೇವಿ, ಸೊಸೆ ಕ್ಯೂದೇವಿ

೨೮೮ ಮಗನ ಕೇಸಾದ್ರೂ ಲಾಯರ್ ಬಿಡ

೨೮೯ ಮಣ್ಣಿನಿಂದ ಆದವ ವಿನಾಯಕ, ಓಟಿನಿಂದ ಆದವ ಜನನಾಯಕ

೨೯೦ 'ಮತ' ಎಷ್ಟೋ ಗುಂಡ ಅಂದ್ರೆ 'ಉಂಡೋರು ಎಷ್ಟು ಜನ ?'
ಅಂತ ಕೇಳಿದನಂತೆ

೨೯೧ ಮದುವೆಯಾದವರೇನು ಬಲ್ಲರು ಬ್ರಹ್ಮಚಾರಿಯ ಬವಣೆ ?

೨೯೨ ಮನಸಿದ್ದಲ್ಲಿ ದುರ್ಮಾರ್ಗಗಳು ಬಹಳ

೨೯೩ ಮನೆ ಇಲ್ಲದವನಿಗೆ ಫುಟ್‌ಪಾತೇ ಮನೆ

೨೯೪ ಮನೆಯ ಹೆಸರು ‘ಆನಂದವಿಲ್ಲಾ’ ಜೀವನದಲ್ಲಿ ಸುಖವಿಲ್ಲಾ

೨೯೫ ಮರ ಇದ್ದ ಕಡೆ ಬರ ಇಲ್ಲ

೨೯೬ ಮರ ನೆಟ್ಟವನಿಗೆ ವರ ಸಿಕ್ಕೀತು

೨೯೭ ಮರಗಳ ತ್ರಾಣ, ಬಡವರ ಪ್ರಾಣ

೨೯೮ ಮರ ನೆಡು, ಮಳೆ ಬರು

೨೯೯ ಮಳೆ ಬಿದ್ದರೆ ಡ್ಯಾ ಪುಣ್ಯ

೩೦೦ ಮಳೆ ಬಿದ್ದರೆ ಸೊಬಗು, ಇಲ್ಲದಿದ್ದರೆ ಕೊರಗು

೩೦೧ ಮಹಾ ಸಂಕಲ್ಪ ಮಾಡೋದರೊಳಗೆ ಮಹಾ ಚುನಾವಣೆ ಬಂತು

೩೦೨ ಮುಗ್ಧರ ಮದುವೇಲಿ ಮುಟ್ಠಾಳರಿಗೆ ಸುಗ್ಗಿ

೩೦೩ ಮುದ್ದೆ ಕೇಳೊ ಹೊಟ್ಟೆಗೆ ಒದ್ದೆ ಬಟ್ಟೆ ಕೊಟ್ಟ

೩೦೪ ಮಂತ್ರಿ ಕೊಂಡ ಲಂಚ ಹೆಂಡತಿ ಪಾಲಾಯಿತು

೩೦೫ ಮಂತ್ರಿ ಪದವಿ ದೊರಕಿಸಿ ಕೊಳ್ಳಲು
ಹೋಗಿ ಮಕ್ಕಳನ್ನು ತಂದಂತಾಯಿತು

೩೦೬ ಮಂತ್ರಿ ಮಕ್ಕಳು ತರಲೆ ಕೋರ್ಸ್ ಓದುತಾರೆಯೆ ?

೩೦೭ ಮಂತ್ರಿ ಮುಂದೆ ಹರಿಶ್ಚಂದ್ರನ ಕಥೆ ಹೇಳಿದ ಹಾಗಾಯ್ತು

೩೦೮ ಮಂತ್ರಿ ಹತ್ತಿರ ಪ್ರಾಮಾಣಿಕತೆ ಹುಡುಕಿದ ಹಾಗೆ

೩೦೯ ಮಂತ್ರಿ ಹೆಂಡ್ತಿ ಎಂದಿದ್ದರೂ ಬಜಾರಿ

೩೧೦ ಮಂತ್ರಿ ಹೇಳಿದರೆ ದೇಶ ಪಾವನವಾದೀತೆ ?

೩೧೧ ಮಂತ್ರಿಗೆ ಚೆಲ್ಲಾಟ, ಜನತೆಗೆ ಪ್ರಾಣ ಸಂಕಟ

೩೧೨ ಮಂತ್ರಿಯ (ಸ್ವಂತ) ಕಾರು ಷೆಡ್ಡಿನಲ್ಲೇ ತುಕ್ಕಾಯಿತು

೩೧೩ ಮಂತ್ರಿಯ ಭಾಷಣ ನಿಂತಲ್ಲೇ ಆರಂಭ

೩೧೪ ಮಂತ್ರಿಯಾಗಿ ನೋಡು, ಮಹಡಿ ಕಟ್ಟಿ ನೋಡಿ

೩೧೫ ಮಂತ್ರಿವರ್ಯನ ಪೌರುಷ ಸ್ತ್ರೀ ಸಮಾಜದ ಮುಂದೆ

೩೧೬ ಮಂತ್ರಿಶಿವನೆ ಮಂತ್ರಿಮಂಡಲ ಉರುಳೀತೆ ?

೩೧೭ ಮಾಡೋದು ಭಾಷಣ, ಕುಡಿಯೋದು ಹೆಂಡ

೩೧೮ ಮಾತು ಸ್ವದೇಶಿ, ಕೃತಿ ವಿದೇಶಿ

೩೧೯ ಮಾರೋ ಅಮ್ಮನಿಗೆ ಗಂಡನಿಲ್ಲ, ಬೀರೋ ದೇವರಿಗೆ ಹೆಂಡತಿ ಇಲ್ಲ

೩೨೦ ಮಾವಿನ ಸಸಿಯನ್ನು ನೆಟ್ಟು ಬೇವು ಉಣಲು ಸಿದ್ಧನಿರು

೩೨೧ ಮಿಲ್ಲು ಮುಟ್ಟಿ ಮೆಲ್ಲಗೆ ಅಲೆದ

೩೨೨ ಮುಖ ಕಪ್ಪಾದರೆ ಸ್ನೋ–ಪೌಡರು ಕಪ್ಪೇ ?

೩೨೩ ಮುಟ್ಟಿದ್ದಕ್ಕೆ ನೂರು ಪಿಕೆಟ್

೩೨೪ ಮುನಿಸಿಪಾಲ್ಟಿಗೆ ಮುಟ್ಟಿದವನು ಅಸೆಂಬ್ಲಿಗೆ ಕಾಲಿಟ್ಟಾನೆ?

೩೨೫ ಮುಸುಕಿನೊಳಗಣ ಮುದ್ದಾಟ

೩೨೬ ಮುಳ್ಳನ್ನು ಮುಳ್ಳಿನಿಂದಲೇ ತೆಗೀಬೇಕು,
ಸುಳ್ಳನ್ನು ಸುಳ್ಳಿನಿಂದಲೇ ಸಾಧಿಸಬೇಕು

೩೨೭ ಮುಳ್ಳಿಲ್ಲದ ಕಾಡಿಲ್ಲ, ಸೇಡುಗಳಿಲ್ಲದ ಊರಿಲ್ಲ

೩೨೮ ಮೂಗು ಕೊಯ್ದರೆ ನೆಗಡಿ ಹೋಗುತ್ಯೇ ?

೩೨೯ ಮೂರುತಿ ಚಿಕ್ಕದಾದರೂ ಆರತಿ ಬೇಕಂತೆ

೩೩೦ ಮೆಂಬರ್ ಅತ್ತರೆ ಮೂಢನೂ ಅತ್ತ

೩೩೧ ಮೇಲೆ ನೋಡಿದರೆ ಖಾದಿ, ಒಳಗೆ ನೋಡಿದರೆ ಮಿಲ್ಲು

೩೩೨ ಮೈಕಿನ ಮುಂದೆ ಮಂಗನ ಹಾಗೆ ಕಿರುಚಿದ

೩೩೩ ಮೈಯನ್ನು ಬಾಡಿಗೆಗೆ ಕೊಡುವ ಸಮಾಜದಲ್ಲಿ
ಮಕ್ಕಳ ಮಾಡುವವರು ಇರಬಾರದೆ ?

೩೩೪ ಮೊಗೆ ನೀರಿನೊಳಗೊಂದು ನೆಗಳಾಡಿದಂದಿಗೆ, ಗಗುಣಿ ಹೆಬ್ಬುಲಿಯು
ಹಿಡಿದಂದು ಹೆಣ್ಣಿನ ಬಗೆಯು ಸಂಬುವುದು

೩೩೫ ಮೊದಲ ದೀಪಾವಳಿಗೇನೆ ಮಾವ ದಿವಾಳಿ

೩೩೬ ಮೊದಲು ವರ್ಷ ಭಾವ, ಆಮೇಲೆ ಅಭಾವ

೩೩೭ ಮೊದಲೇ ಗರ್ಭಿಣಿ, ಜತೆಗೆ ದುರ್ಗುಣಿ

೩೩೮ ಮೊದಲೇ ಕಪ್ಪು, ಅದರ ಮೇಲೆ ಬೆಪ್ಪು

೩೩೯ ಮೊದಲೇ ರೋಗ, ಮೇಲೆ ನಿರುದ್ಯೋಗ

೩೪೦ ಮೌನೇನ ಕವಳಂ ನಾಸ್ತಿ

೩೪೧ ಮೌನೇನ ಕಡಗಂ ನಾಸ್ತಿ

೩೪೨ ಯಥಾ ಮಂತ್ರಿ, ತಥಾ ಕಂತ್ರಿ

೩೪೩ ಯಾವ ಆಫೀಸಿಗ್ಹೋದರೂ ಅಂಗೈವರೆಗೆ ಲಂಚ

೩೪೪ ಯೋಚನೆಗೂ ಯೋಜನೆಗೂ ಅಜಗಜಾಂತರ

೩೪೫ ರಾಜ್ಯದ ದಾಹವಿದ್ದವರಿಗೆ ಅಶ್ವಮೇಧ,
ರಾಣಿಗಳ ದಾಹವಿದ್ದವರಿಗೆ ಗಾರ್ದಭ ಮೇಧ

೩೪೬ ರಾತ್ರಿಯೆಲ್ಲ ಬ್ರಿಟಿಷ್ ಚರಿತ್ರೆ ಕೇಳಿ ಬೆಳಗೆದ್ದು
'ಫಾಮಿಲಾ-ಕೀಲರ್‌ಗೆ ಏನು (ಸಂಬಂಧ)' ಅಂದ ಹಾಗೆ

೩೪೭ ರಾಮನಿಗೆ ರಾಜ್ಯ ಬಂದರೆ ಬಾದರಾಯನಿಗೂ ಯಃಕಶ್ಚಿತ್

೩೪೮ ರಾಮೇಶ್ವರಕ್ಕೆ ಹೋದರೂ ಭಾಷಾ ಶನಿ ತಪ್ಪಿಲ್ಲ

೩೪೯ ರಾವ್ ಸಾಹೇಬ್ ಏನು ಬಲ್ಲರು ರಾಷ್ಟ್ರಸಭೆ ಪಟ್ಟ ಕಷ್ಟ ?

೩೫೦ ರೂಪಾಯಿ ರೂಪಾಯೇನ ವರ್ಧಯೇತ್

೩೫೧ ರೈತ ದುಡಿದು ಸೋತರೆ ಹೊಲ ಬೆಳೆದು ಸೋತಿತು

೩೫೨ ರೋಗಿ ಬಯಸಿದ್ದೂ ಬ್ರಾಂದಿ, ವೈದ್ಯ ಹೇಳಿದ್ದೂ ಬ್ರಾಂದಿ

೩೫೩ ಲಂಚ ಕೊಳ್ಳುವ ಕೈ ರಾಜ್ಯ ಆಳಬಲ್ಲದು

೩೫೪ 'ಲಂಚ ನಿರ್ಮೂಲ ಮಾಡೋ ರಂಗಾ !' ಅಂದ್ರೆ
'ಕೊಂಡವರೆಷ್ಟು ಮಂದಿ ?' ಅಂದ

೩೫೫ ಲಂಚ ಬಿದ್ದರೆ ಬಾಯಿಗೆ ರುಚಿ

೩೫೬ ಲಾರೀನ ನಂಬಿದರೂ ಆಟೋ ನಂಬಬಾರದು

೩೫೭ ಲೀ ಅನ್ನೋದಕ್ಕೆ ಅವಳೀ ಇಲ್ಲ, ಮಗನ ಹೆಸರು ಮಂತ್ರೀಶ್ವರ

೩೫೮ ಲೋಕಸೇವಾನಿರತ ಹೆಂಡತಿ ಮಕ್ಕಳ ಮರೆತ

೩೫೯ ವಯಸ್ಸು ಆದಂತೆಲ್ಲ ಕೂದಲು ಬೆಳ್ಳಗಾಗುತ್ತದೆ,
ಬುದ್ಧಿ ಹೋದಂತೆಲ್ಲ ತಲೆ ಬೆಳ್ಳಗಾಗುತ್ತವೆ

೩೬೦ ವೃಕ್ಷಾರೋಪಣ ಮೋಕ್ಷಕ್ಕೆ ಸಾಧನ

೩೬೧ ವರ್ಷವೆಲ್ಲ ಕಾದಾಡಿ ಹರ್ಷ ಕಳೆದುಕೊಂಡರು

೩೬೨ ವಾದಿಗೆ ನಷ್ಟ, ಪ್ರತಿವಾದಿಗೆ ಕಷ್ಟ, ಜಡ್ಜಿ ಇಷ್ಟ

೩೬೩ ವ್ಯವಹಾರವಾಗಲಿ, ವ್ಯಭಿಚಾರವಾಗಲಿ ಗುಟ್ಟಾಗಿದ್ದರೆ ಚೆಂದ

೩೬೪ ವಿನಾಶಕಾಲೇ ವಿವಾಹಪೂರ್ತಿಃ

೩೬೫ ವಿಮಾನ ಏರಬೇಕಾದರೆ ಪರಮಾನ್ನ ತಿನ್ನಬೇಕೆ ?

೩೬೬ ವಿರಾಮಕಾಲೇ ವಿಪರೀತ ಬುದ್ಧಿಃ

೩೬೭ ವಿವೇಕವಿಲ್ಲದವನಿಗೆ ವಿಭೂತಿ ಹಚ್ಚಿದರೆ ಇನ್ನಷ್ಟು ಹಚ್ಚು
ಅಂದನಂತೆ

೩೬೮ ಶತದ್ರೋಹಿಗೆ ಶಾಲುಜೋಡಿ

೩೬೯ ಶಾಲೆ ಮಾಸ್ತರಿಗೆ ಬುದ್ಧಿಯಿಲ್ಲ, ಸ್ಟೇಷನ್ ಮಾಸ್ತರಿಗೆ ನಿದ್ದೆಯಿಲ್ಲ

೩೭೦ ಸತ್ಯಕ್ಕೊಂದು ಕಾಲ, ಭತ್ಯಕ್ಕೊಂದು ಕಾಲ

೩೭೧ ಸಹಕಾರದಲ್ಲಿ ಉಂಡವನೇ ಜಾಣ

೩೭೨ ಸಂಕಟ ಬಂದರೆ ಸುಳ್ಳೇ ಗತಿ

೩೭೩ ಸಂಬಳ ಇಪ್ಪತ್ತಾದರೆ ಗಿಂಬಳ ಮೂವತ್ತು

೩೭೪ ಸಂಬಳಕ್ಕಿಂತ ಲಂಚಕ್ಕೇ ರುಚಿ ಹೆಚ್ಚು

೩೭೫ ಸಂಬಳದಲ್ಲಿ, ಸಾರಿಗೆಯಲ್ಲಿ ನನ್ನ ಗಂಡನೂ ಉಮೇದುವಾರ

೩೭೬ ಸ್ವಪ್ನದಲ್ಲಿ ಮಂಡಿಗೆ ಏರಿ ಗೊಂಡೆ ಹಿಡಿದ ಹಾಗೆ

೩೭೭ ಸಾಲ ಎತ್ತಿದವ ಮನೆ ಕಟ್ಟಿದ

೩೭೮ ಸಾಲ ಮಾಡಿ ಸರ್ಜ್ ಸೂಟ್ ಹಾಕಿಕೊಂಡ

೩೭೯ ಸ್ವಾತಂತ್ರ್ಯ ಬಂದರೂ ಸರ್ವಾಧಿಕಾರ ತಪ್ಪಲಿಲ್ಲ

೩೮೦ ಸ್ನಾನ ಮಾಡಿ ಸ್ನೋ ಹಚ್ಚಿದಂತೆ

೩೮೧ ಸ್ಟಾಂಪಿರುವಷ್ಟು ನಾಲಗೆ ಚಾಚಬೇಕು

೩೮೨ ಸಿಟ್ಟು ಬಂದಾಗ ಗುಟ್ಟಾಗಿದ್ದವನೇ ಜಾಣ

೩೮೩ ಸ್ವೀಕರಿಸಿದ ಲಂಚಕ್ಕೆ ಮಂತ್ರಿಯೇ ಸಾಕ್ಷಿ

೩೮೪ ಸೂಟು ಕೇಳೊ ಅಳಿಯನ ಮುಂದೆ ಸುಖದುಃಖ
ಹೇಳಿಕೊಂಡ ಹಾಗೆ

೩೮೫ ಸೈತಾನನ ವೇದ, ಭಂಡರ ಭಾಗವತ

೩೮೬ ಸೋಮಾರಿ ಮದುವೆಯಾದರೆ ಅವನಿಗೆ ದೊರಕುವುದು ಭೀಮಾರಿ

೩೮೭ ಹಗಲು ಕಂಡ ತಾರೆಯನ್ನು ಇರುಳು ಗುರುತಿಸುವುದು ಅಸಾಧ್ಯ

೩೮೮ ಹಗಲೆಲ್ಲ ನಿದ್ದೆಮಾಡಿ ರಾತ್ರಿ ಜಾಗರಣೆ ಮಾಡಿದಳಂತೆ

೩೮೯ ಹಣವಿದ್ದೆಡೆ ಜನ, ಅಧಿಕಾರವಿದ್ದೆಡೆ ಲಂಚ

೩೯೦ ಹನಿಗೂಡಿದರೆ ಹಳ್ಳ, ದನಿಗೂಡಿದರೆ ಗದ್ದಲ

೩೯೧ ಹಳ್ಳಿಗೆ ಲಾಯರ್ ಅಂತ ಕಟ್ಟಿಕೊಂಡ್ರೆ 'ಸಿನಿಮಾ ಇಲ್ದಿದ್ರೆ ಬರೋಲ್ಲ' ಅಂದಳು

೩೯೨ ಹಳ್ಳೀಲಿ ಸದ್ದಿಲ್ಲದೆ ಬಿದ್ದಿದ್ದ ಅವಿವೇಕಿ ದಿಳ್ಳೀಲಿ ಎದ್ದ

೩೯೩ ಹಾಡಲಾರದ ಹುಡುಗಿ ಹಾರ್ಮೋನಿಯಂ ಚೆನ್ನಾಗಿಲ್ಲ ಅಂದಳು

೩೯೪ ಹಾರ ತುರಾಯಿಗೂ ಮಂತ್ರಿಗೂ ಅಜನ್ಮ ಮೈತ್ರಿ

೩೯೫ ಹಾರುವರ ಓದಾಟ ಸಾಲ ಬೋನದ ಊಟ, ಕ್ಷತ್ರಿಯರ ಓದಾಟ ಕತ್ತಿ ಕಡಿದಾಟ, ವೈಶ್ಯರ ಓದಾಟ ಲೆಕ್ಕದಲ್ಲಿ ಕಿತ್ತಾಟ

೩೯೬ ಹಾರ್ಮಣೆ ಒಡಿದ ಕೈ ಹಾಲು ಕಾಸೀತೆ ?

೩೯೭ ಹಾರಾಡುವ ನೋಟಿಗೆ ತೂರಾಡುವ ದನ

೩೯೮ ಹಾಸಿಗೆ ಇದ್ದಷ್ಟು ತಗಣೆ ಕಾಟ

೩೯೯ ಹಾಳಾಗ ಬಲ್ಲವ ಅರಸನ ಮನೆಯಲ್ಲಿ ಹುಟ್ಟಿದ

೪೦೦ ಹಾಳಾಗ ಬಲ್ಲವ ಹೊಡೆದಾಡ ಬಲ್ಲ

೪೦೧ ಹಾಳಾದ್ದು ಪರೀಕ್ಷೆ ಸಮಯದಲ್ಲೇ ಬರೋದೇ ರಾಮನವಮಿ ಉತ್ಸವ !

೪೦೨ 'ಹ್ಯಾಪಿಯಾಗಿರಿ ಅಳಿಯಂದ್ರೆ !' ಅಂದ್ರೆ 'ಮರೀದೆ ಕಾಫಿ ಕಳಿಸಿ' ಅಂದ

೪೦೩ ಹಿಟ್ಟಿಕ್ಕಿದವನ ತಲೆ ನುಣ್ಣಗೆ

೪೦೪ ಹಿಂಗೈ ಹಣಕ್ಕೆ ರಶೀತಿ ಉಂಟೆ ?

೪೦೫ ಹಿಂದೆ ಹೋದರೆ ಎಳೆ, ಮುಂದೆ ಹೋದರೆ ತಳ್ಳು

೪೦೬ ಹುಟ್ಟುತ್ತಾ ಅಣ್ಣತಮ್ಮ, ಬೆಳೆಯುತ್ತಾ ಕರ್ಣಾರ್ಜುನ

೪೦೭ ಹುಸಿ ಹೇಳಿದರೂ ವೇದಿಕೆ ಮೇಲಿಂದ ಹೇಳು

೪೦೮ ಹೆಚ್ಚು ಗಳಿಸಿ, ಸ್ವಲ್ಪ ಉಳಿಸಿ

೪೦೯ ಹೆಣ್ಣಿನ ಚಕ್ಕುಬಂದಿಯೇ ಗಂಡಸ ದಿಗ್ಬಂಧನ

೪೧೦ ಹೆಣ್ಣಿಗೆ ಅವಳ ಮುಖವೇ ಸರ್ಟಿಫಿಕೇಟ್

೪೧೧ ಹೆಣ್ಣು ಇರುವಲ್ಲಿ ಮಂಗಣ್ಣಗಳು, ಅಧಿಕಾರ ಇರುವಲ್ಲಿ ಕೌರವರು

೪೧೨ ಹೆಣ್ಣು ಬಂದಾಗ ಕಣ್ಣು ಮುಚ್ಚಿಕೊಂಡ

೪೧೩ ಹೆಸರಿಟ್ಟೆ ಮನೋಹರ ಅಂತ,
ಅವನು ಸಿಡುಬು ರೋಗ ತಗುಲಿ ಹರೋಹರ

೪೧೪ ಹೆಸರು ಚಿನ್ನಮ್ಮ, ತಾಳಿ ಸ್ಟೈಯಿನ್‌ಲೆಸ್ ಸ್ಟೀಲಿನದು

೪೧೫ ಹೆಸರು ಬ್ರಾಡ್ವೇ, ಇಬ್ಬರು ಹೊರಬಿದ್ದರೆ ಒಬ್ಬರು ಒಳದೂರಲು ಸಾಧ್ಯ

೪೧೬ ಹೆಸರು ರಾಮಚಂದ್ರ, ಇರೋರು ಇಬ್ಬರು ಹೆಂಡಿರು

೪೧೭ ಹೆಸರು ವಿದ್ಯಾರಣ್ಯ, ಅಡುಗೆಗೆ ಸೌದೆ ಇಲ್ಲ

೪೧೮ ಹೆಸರು ಸರಸ್ವತಿ, ಎಡಗೈ ಹೆಬ್ಬೆಟ್ಟಿನ ರುಜು

೪೧೯ ಹೆಸರು ಸಂತಾನಂ ಅಯ್ಯಂಗಾರ್, ಹೆಂಡತಿ ಬಂಜೆ

೪೨೦ ಹೆಸರು ಸಂಪತ್ತು, ಒನ್‌ಬೈಟು ಕಾಫಿಗೂ ಲಾಟರಿ

೪೨೧ ಹೆಸರು ಸುಂದರಿ, ಮುಖ ಒಂದರಿ

೪೨೨ ಹೆಸರು ಸುಂದರಿ, ಆದರೆ ಸಾಕ್ಷಾತ್ ಬೆದರುಗೊಂಬೆ

೪೨೩ ಹೆಸರು ಸೂರ್ಯನಾರಾಯಣ, ಕಣ್ಣು ಮಾತ್ರ ಕುರುಡು

೪೨೪ ಹೆಂಡತಿಗೆ ಅಧಿಕಾರದ ಚಪಲ, ಗಂಡನಿಗೆ ಭಾಷಣದ ತೆವಲು

೪೨೫ ಹೇಳೋನಿಗೆ ಹೆಡ್ ಇಲ್ಲದಿದ್ದರೆ, ಕೇಳೋನ ಹೆಡ್ಡಲ್ಲಿ ಮಡ್ಡೆ ?

೪೨೬ ಹೊಗಳಿಕೆ ಅಂದ್ರೆ ಹೆಣವಂತಿದ್ದರೂ ಹುರುಪುಗೊಂಡು ನಿಲ್ತಾನೆ

೪೨೭ ಹೊಟ್ಟೆ ದೇವರಿಗೆ ಹೋಟೇಲಿನ ನೈವೇದ್ಯ

೪೨೮ ಹೊಟ್ಟೆಗೆ ಒಟ್ಟಿಲ್ಲ, ಜುಟ್ಟಿಗೆ ಜಾಜಿನ ಚೀಟಿ

೪೨೯ ಹೊಟ್ಟೆಗೆ ಹಿಟ್ಟಿಲ್ಲ, ಕೋರ್ಟಿನಲ್ಲಿ ರಿಟ್ ಅಂತೆ

೪೩೦ ಹೊತ್ತು ಹೋಗದವನು ಕತ್ತು ಕಿವಿಚಿಕೊಂಡ

೪೩೧ ಹೊಲಸಿದ್ದಲ್ಲಿ ನೊಣಗಳು, ಹಣ, ಅಧಿಕಾರ, ಗೌರವ ಇದ್ದಲ್ಲಿ ಶಕುನಿಗಳು

೪೩೨ ಹೊಸಪೇಟೆಗೆ ಹೋಗಿ ಹಳೆ ಪೇಟೆ ಹುಡುಕಿದರಂತೆ

೪೩೩ ಹೊಸ ಬಾಳಿಗೆ ಹೊಸ ಮೆರುಗು ಹೆಚ್ಚು, ಆದರೆ ಒಳ ಕುದಿತ ಬಹಳ

೪೩೪ ಹೊಸ ಮಾಸ್ತರಿಗಿಂತ ಹಳೆ ವಿದ್ಯಾರ್ಥಿ ಲೇಸು

೪೩೫ ಹೊಸದರಲ್ಲೇ ಅಗಸ ಹೊಳೆಯಲ್ಲಿ ತೇಲಿಸಿದ

೪೩೬ ಹೊಂಗೆ ಮರ ಕಡಿದು ಮಂಗನಾಗಬೇಡ

೪೩೭ ಹೊಂಗೆಯ ಗೊಬ್ಬರ ಹೊನ್ನಿನ ಅಬ್ಬರ

೪೩೮ ಹೋಟೇಲಿಲ್ಲದ ಊರಿಲ್ಲ, ಪಾರ್ಟಿಯಿಲ್ಲದ ಹಳ್ಳಿಯಿಲ್ಲ

ಅನುಬಂಧ–೨

ಅನ್ಯ ದೇಶೀಯ ಹಾಗೂ ಅನ್ಯ ಭಾಷಾ ಗಾದೆಗಳು

ಇಂಗ್ಲಿಷ್

೧ ಅರ್ಧ ಜ್ಞಾನ ಅಪಾಯಕಾರಿ

೨ ಅರ್ಧ ಜ್ಞಾನಿಯಾದ ಅಹಂಕಾರಿಯನ್ನು ಮೆಚ್ಚಿಸಲು
ಬ್ರಹ್ಮನಿಂದಲೂ ಅಸಾಧ್ಯ

೩ ಅನುಭವದ ಮಾತು ಎಲ್ಲಕ್ಕಿಂತಲೂ ಶ್ರೇಷ್ಠ ಮಾತು

೪ ಅಪರಾಧವು ಎಂದೂ ಫಲ ನೀಡದು

೫ ಆದರೆ ಹಬ್ಬ, ಇಲ್ಲದಿದ್ದರೆ ಬರಗಾಲ

೬ ಆಸೆಯೇ ಜೀವನ, ಜೀವನವೇ ಆಸೆ

೭ ಉರಿಸಲು ಹಳೆ ಸೌದೆ, ಕುಡಿಯಲು ಹಳೆ ಮದ್ಯ,
ಓದಲು ಹಳೆಯ ಪುಸ್ತಕಗಳು ಚೆಂದ

೮ ಎಲ್ಲ ರಸ್ತೆಗಳೂ ಕರೆದೊಯ್ಯುತ್ತವೆ

೯ ಎಲ್ಲರೂ ಹೇಳಿದ ಮಾತು ನಿಜವೇ ಇರಬೇಕು

೧೦ ಎಂದೂ ಇಲ್ಲದೆ ಇರುವುದಕ್ಕಿಂತ ತಡವಾಗಿ ಬಂದರೂ ಒಳ್ಳೆಯದು

೧೧ ಏಳಿಗೆ ಬರುವವನು ಹೆಂಡಿರನ್ನು ಕೇಳುವನು

೧೨ ಒಳ್ಳೆಯ ಉದ್ದೇಶಗಳಿಂದಲೇ ನರಕದ ಹಾದಿ ಸುಗಮವಾಗಿ
ಸಿದ್ಧಗೊಳಿಸಲ್ಪಟ್ಟಿದೆ

೧೩ ಒಂದೇ ಬಗೆಯ ಗರಿಯುಳ್ಳ ಹಕ್ಕಿಗಳು ಗುಂಪುಗೂಡುತ್ತವೆ

೧೪ ಒಂದು ಬಾರಿಯ ಮೋಸ, ಕಿರಿಯ ಮೊತ್ತ, ಕತ್ತೆ – ಎರಡನೇ ಬಾರಿ

೦೫ ಔದಾರ್ಯ ಮನೆಯಲ್ಲಿ ಪ್ರಾರಂಭವಾಗುತ್ತದೆ

೦೬ ಕಳ್ಳನನ್ನು ಹಿಡಿಯಲು ಕಳ್ಳನನ್ನೇ ([illegible]) ನೇಮಿಸು

೦೭ ಕೇಡು ಏಣಿಗಳಲ್ಲಿ ಬಂದು ಅಂಗುಲಂಗುಲವಾಗಿ ತೊಲಗುತ್ತದೆ

೦೮ ಕೆಡಕಿನಿಂದ ಸಹ ಒಮ್ಮೊಮ್ಮೆ ಒಳ್ಳೆಯದು ಸಂಭವಿಸುವುದು

೦೯ ಕೈಕೊಂಡ ಕೆಲಸವನ್ನು ಅರ್ಧಕ್ಕೆ ಬಿಡುವವನನ್ನು ಜಗತ್ತು ಬಿಡು

೧೦ ಕ್ಷೌರಿಕನಿಗೆ, ಡಾಕ್ಟರಿಗೆ, ವಕೀಲನಿಗೆ ಹಾಗೂ ಸೂಳೆಯರಿಗೆ
ಯಾವಾಗಲೂ ನಗದು ಹಣ ಬೇಕಾಗುತ್ತದೆ

೧೧ ಗಂಡ ಹೆಂಡಿರು ಜಗಳವಾಡುವುದು ಒಬ್ಬರನ್ನೊಬ್ಬರು
ತಿಳಿದುಕೊಂಡ ಮೇಲಲ್ಲವೆ ?

೧೨ ಗಂಡಸು ತಲೆ, ಹೆಂಗಸು ಕೊರಳು; ತಲೆಯನ್ನು ತಿರುಗಿಸುವುದು
ಕೊರಳೇ

೧೩ ಗಂಡು ಹೆಣ್ಣನ್ನು ಅಟ್ಟಿಸಿಕೊಂಡು ಹೋಗಿ ಅವಳ ಕೈಗೆ
ಸಿಕ್ಕಿಬೀಳುತ್ತಾನೆ

೧೪ ಗಾಜಿನ ಮನೆಯ ಒಳಗಡೆ ಇರುವವರು ಯಾರ ಮೇಲೂ
ಕಲ್ಲೆಸೆಯಬಾರದು

೧೫ ಗೋಪ್ಯವಾಗಿ ಪ್ರೇಮಿಸುವುದಕ್ಕಿಂತ ಬಹಿರಂಗವಾಗಿ ಬಯ್ಯುವುದು
ಉತ್ತಮ

೧೬ ಚಾರಿತ್ರ್ಯ ಹೋದರೆ ಎಲ್ಲವೂ ಹೋದಂತೆ

೧೭ ಚಿಕಿತ್ಸೆಗಿಂತ ಪ್ರತಿಬಂಧವು ಒಳ್ಳೆಯದು

೧೮ ಜಾಹಿರಾತು ಕೊಡದೆ ವ್ಯಾಪಾರ ಮಾಡುವುದೆಂದರೆ, ಕತ್ತಲೆಯಲ್ಲಿ
ನಿಂತು ಒಬ್ಬ ಹುಡುಗಿಯನ್ನು ಕಂಡು ಕಣ್ಣುಹಾಕಿದಂತೆ. ನೀನು
ಮಾಡುವುದು ನಿನಗೊಬ್ಬನಿಗಲ್ಲದೆ ಬೇರೆಯವರಿಗೂ ತಿಳಿಯದು

೧೯ ಜ್ಞಾನಿಗಳಾದವರಿಗೆ ಒಮ್ಮಾತ ಸಾಕು

೨೦ ಜೇನಿನ ಮೇಲೆ ಸಕ್ಕರೆ ಇಟ್ಟಹಾಗೆ

೩೧ ತರ್ಕ, ಬುದ್ಧಿ, ವಿಚಾರಗಳ ಬೇರುಗಳೇ ತತ್ತ್ವಜ್ಞಾನ

೩೨ ದಿನಕ್ಕೊಂದು ಸೇಬು ತಿಂದರೆ
ವೈದ್ಯರ ಹತ್ತಿರ ಹೋಗುವ ಅಗತ್ಯವೇ ಇಲ್ಲ

೩೩ ದೇವರು ಎಲ್ಲರನ್ನೂ ಸಂತುಷ್ಟಗೊಳಿಸಲಾರ

೩೪ ದೇಹ ಆರೋಗ್ಯದಿಂದಿದ್ದರೆ ಮನಸ್ಸೂ ಆರೋಗ್ಯದಿಂದಿರುವುದು

೩೫ ನನಗೂ ಜಂಬ, ನಿನಗೂ ಜಂಬ, ಒಲೆ ಬೂದಿ ಎತ್ತುವವರ್ಯಾರು ?

೩೬ ನಾಯಿ ತಾನೂ ಹುಲ್ಲು ತಿನ್ನುವುದಿಲ್ಲ, ತಿನ್ನಲೂ ಬಿಡುವುದಿಲ್ಲ

೩೭ ನ್ಯಾಯದ ಕಲ್ಪನೆಯಿಲ್ಲದೆ ಸ್ವಾತಂತ್ರ್ಯವಿಲ್ಲ

೩೮ ನಿಧಾನವಾಗಿ ನ್ಯಾಯ ಕೊಡುವುದೆಂದರೆ
ನ್ಯಾಯ ಕೊಡದಿರುವುದೆಂದೇ

೩೯ ನಿನಗೇನು ಮಾಡಬೇಕೆಂಬುದು ತಿಳಿಯದಿದ್ದಾಗ ಜೋರಾಗಿ ನಗು

೪೦ ನಿಮಗೆ ಸಂಬಂಧಿಸಿದುದನ್ನು ಮಾತ್ರ ನೀವು ನೋಡಿಕೊಳ್ಳಿರಿ,
ಅನ್ಯರ ವ್ಯವಹಾರದಲ್ಲಿ ನಿಮ್ಮ ಪ್ರವೇಶ ಬೇಡ

೪೧ ನೀನು ಬಿತ್ತಿದ್ದನ್ನು ನೀನೇ ಕೊಯ್ಯಬೇಕು

೪೨ ನೀನು ಈ ದಿವಸವನ್ನು ನೋಡಿಕೊ.
ಅದು ನಾಳೆಯನ್ನು ನೋಡಿಕೊಳ್ಳುತ್ತದೆ

೪೩ ನೆಗಡಿಗೆ ಊಟ, ಜ್ವರಕ್ಕೆ ಉಪವಾಸ ಮದ್ದು

೪೪ ನೆಗೆಯುವುದಕ್ಕೆ ಮುಂಚೆ ಮುಂದೆ
ಏನಿದೆಯೆಂಬುದನ್ನು ಸರಿಯಾಗಿ ನೋಡು

೪೫ ನೆರೆಹೊರೆಯವರ ದೋಷಗಳನ್ನು ತಿದ್ದುವುದಕ್ಕಿಂತ
ಸ್ವಂತದ ಒಂದು ದೋಷವನ್ನು ತಿದ್ದಿಕೊಳ್ಳುವುದು ಒಳ್ಳೆಯದು

೪೬ ನೆರೆಹೊರೆಯವರನ್ನು ಪ್ರೀತಿಸು ಆದರೆ ನಿನ್ನ ಬೇಲಿ ತೆಗೆಯದಿರು

೪೭ ಪಥ್ಯಕೊಳ್ಳಪಡದ ರೋಗಿ
ವೈದ್ಯರ ಪ್ರಯತ್ನವನ್ನು ನಿಷ್ಫಲಗೊಳಿಸುತ್ತಾನೆ

೪೮ ಪ್ರಕೃತಿ, ಕಾಲ, ತಾಳ್ಮೆ - ಈ ಮೂರು ಮಾನವನ ಮಹಾ ವೈರಿಗಳು

೪೯ ಪ್ರಾಣಿಗೆ ವಾಕ್ ಶಕ್ತಿ ತನ್ನಿಂದ ತಾನೇ ಬರುತ್ತದೆ

೫೦ ಪ್ರಯತ್ನ ಮಾಡಿ ಅಯಶಸ್ವಿಯಾಗುವುದು
ಪ್ರಯತ್ನ ಮಾಡದೇ ಇರುವುದಕ್ಕಿಂತಲೂ ಉತ್ತಮ

೫೧ ಪೀಟರಿನಲ್ಲಿರುವುದನ್ನು ದೋಚಿ (ಕದ್ದು) ಪಾಲನಿಗೆ ಕೊಡು

೫೨ ಪುಕ್ಕಟೆ ಸಿಕ್ಕಿದ ಕುದುರೆ (ಮುದಿಯಾದರೂ ತಗೊ)
ಬಾಯಿಯನ್ನು ನೋಡಬೇಡ

೫೩ ಬಿತ್ತಿದ್ದನ್ನು ಬೆಳೆದುಕೊ

೫೪ ಬಿಳಿ ಆನೆ ಸಾಕಿದ ಹಾಗೆ

೫೫ ಬೇಗ ಮಲಗಿ ಬೇಗ ಎದ್ದರೆ ಆರೋಗ್ಯಕ್ಕೆ ಒಳ್ಳೆಯದು

೫೬ ಮಗ್ಗುಲ ಹಾಸಿಗೆ ತೀರಿಸದ ಜಗಳ, ನಿಜವಾಗಿಯೂ ಜಗಳವೇ ?

೫೭ ಮಡಕೆ ತಪ್ಪಲೆಯನ್ನು 'ನಿನ್ನ ಮುಖ ಕಪ್ಪು' ಎಂದಿತು

೫೮ ಮದುವೆ ಮಾಡಿಕೊಳ್ಳುವುದು ಸುಲಭ,
ಆದರೆ ಹೊಂದಿಕೊಳ್ಳುವುದು ಕಷ್ಟ

೫೯ ಮದುವೆಯಾಗುವವರೆಗೂ ಗಂಡಸರಿಗೆ ಎಲ್ಲ
ಹುಡುಗಿಯರೂ ಸುಂದರವಾಗಿ ಕಾಣುತ್ತಾರೆ

೬೦ ಮನವಿದ್ದಲ್ಲಿ ದಾರಿಯಿದೆ

೬೧ ಮರ್ಯಾದೆ ಕೊಟ್ಟು ಮರ್ಯಾದೆ ತಗೊ

೬೨ ಮಾಡಿದ ಮಿಠಾಯಿಯ ಮೌಲ್ಯ ಅದನ್ನು ತಿನ್ನುವುದರಲ್ಲಿಯೇ ಇದೆ,

೬೩ ಮಿತಾಹಾರ, ಸಂತೋಷ ಮತ್ತು ನಿಶ್ಚಿಂತೆಗಿಂತ ಉತ್ತಮ ವೈದ್ಯರಿಲ್ಲ

೭೪ ಮೃತ್ಯು ಬಂದ ಮೇಲೆ ವೈದ್ಯ ಬಂದ

೭೫ ಯಾರು ಶ್ರಮಿಸುವರೊ ಅವರು ಎಂದಿಗೂ ನಾಶವಾಗಲಾರರು

೭೬ ರಾಜರು ತಪ್ಪು ಮಾಡುವುದಿಲ್ಲ

೭೭ ರೋಮ್ ನಗರವನ್ನು ಒಂದೇ ದಿನ ಕಟ್ಟಲಿಲ್ಲ

೭೮ ರೋಮಿನಲ್ಲಿದ್ದಾಗ ರೋಮನನಾಗಿರು

೭೯ ವ್ಯಕ್ತಿಯ ಖಾಸಗಿ ಜೀವನದ ಮೇಲೆ ರಾಷ್ಟ್ರದ ಭವಿಷ್ಯ ಅವಲಂಬಿಸಿದೆ

೮೦ ವಿವೇಕವು ಶೌರ್ಯಕ್ಕಿಂತಲೂ ಮೇಲು

೮೧ ವಿಳಂಬ ನೀತಿಯು ಸಮಯವನ್ನು ಕಳವು ಮಾಡಿದಂತೆ

೮೨ ಸತ್ಯವು ಕಟ್ಟು ಕಥೆ

೮೩ ಸತ್ಯವು ಕಲ್ಪನೆಗಿಂತಲೂ ಅದ್ಭುತವಾದದ್ದು

೮೪ ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯ

೮೫ ಸಮಯವು ಯಾರಿಗೂ ಕಾಯುವುದಿಲ್ಲ

೮೬ ಸಮರದಲ್ಲಿ ಮತ್ತು ಪ್ರೇಮದಲ್ಲಿ ಎಲ್ಲವೂ ನ್ಯಾಯವೇ

೮೭ ಸಾಹಿತ್ಯವು ಜನಜೀವನದ ಪ್ರತಿಬಿಂಬ

೮೮ ಸಿಕ್ಕ(ಎಟುಕ)ದ ದ್ರಾಕ್ಷಿಯೆಲ್ಲ ಹುಳಿ

೮೯ ಸೀಜರನ ಪತ್ನಿ ಸಂಶಯಾತೀತಳಾಗಿರಬೇಕು

೯೦ ಸೋಮಾರಿಯ ಬುದ್ಧಿ ಪೈಶಾಚಿಕ ಯೋಜನೆಗಳ ತವರು

೯೧ ಹಣವಿದ್ದರೆ ರಥವು ಸಾಗುತ್ತದೆ

೯೨ ಹುಟ್ಟಿದಾಗ ನಾನು ಅತ್ತೆ,
ದಿನದಿನವೂ ಅದಕ್ಕೆ ಕಾರಣ ಗೊತ್ತಾಗುತ್ತದೆ

೮೩ ಹುಡುಗರ ಪ್ರೇಮ ಹುಲ್ಲು ಬೆಂಕಿಯಂತೆ ಶಾಶ್ವತವಲ್ಲ

೮೪ ಹೆಣ್ಣಿಗೆ ಗುಣ ಮುಖ್ಯ, ಗಂಡಿಗೆ ಸಭ್ಯತೆ ಮುಖ್ಯ

೮೫ ಹೆಂಗಸು ಕೇವಲ ಔಷಧಿಯ ಅಂಶ,
ಅಷ್ಟೇ ಅಲ್ಲದೆ ಅತಿ ಮುಖ್ಯವಾದ ಮೂಲಿಕೆಯೂ ಆಗಿರುತ್ತಾಳೆ

೮೬ *ಹೆಂಗಸು ವರ್ತಕನ ಹಡಗು

೮೭ ಹೆಂಡತಿಗೆ ಎಲ್ಲ ಗುಟ್ಟನ್ನೂ ಹೇಳಿದವನಿಗೆ
ಈಚೀಚೆಗೆ ಮದುವೆಯಾಗಿರಬೇಕು

೮೮ ಹೋಮರನೂ ತೂಕಡಿಸುತ್ತಾನೆ

ಸ್ಕಾಟ್ಲೆಂಡ್

೮೯ ಪಡೆಯುವವ ಸ್ವಲ್ಪ ಕಳೆದುಕೊಳ್ಳಲೂ ಬೇಕು

೯೦ ಮುರಿದು ಹೋಗುವುದಕ್ಕಿಂತ ಬಾಡಿ ಹೋಗುವುದು ಒಳ್ಳೆಯದು

೯೧ ಹಣಕ್ಕಾಗಿಯೇ ಮದುವೆಯಾಗಬೇಡ, ಏಕೆಂದರೆ ಅದನ್ನು
ಸುಲಭ ದರದ ಬಡ್ಡಿಯ ಮೇಲೆ ಯಾರಿಂದಲಾದರೂ
ಪಡೆಯಬಹುದು

೯೨ ಹೂವಿಗೆ ಕಂಪಿದ್ದಂತೆ ಮನುಷ್ಯನಿಗೆ ವ್ಯಕ್ತಿತ್ವ

ಐರ್ಲೆಂಡ್

೯೩ ಉಪ್ಪು ಸಕ್ಕರೆಗಿಂತ ಸಿಹಿ

೯೪ ಗಾದೆಯನ್ನು ಬೇರೆ ಏನೊಂದೂ ಎದುರಿಸಲಾರದು

೯೫ ಪ್ರಪಂಚಕ್ಕೆ ತಿಳಿಸಬೇಕಾದ ವಿಷಯವನ್ನು ಹೆಂಡತಿಗೆ ಹೇಳು

---

* ಒಳ್ಳೆಯ ಮತ್ತು ಕೆಟ್ಟ ಹೆಂಗಸಾಗಲಿ ಬೇಕೆಂದಾಗ ವ್ಯಾಪಾರಕ್ಕೆ ದೊರೆಯುತ್ತಾಳೆ ಎಂದರ್ಥ.

೯೬ ಮೂರು ತೆರದ ಗಂಡಸಿಗೆ ಹೆಣ್ಣು ಅರ್ಥವಾಗುವುದಿಲ್ಲ;
ತರುಣನಿಗೆ, ಮಧ್ಯ ವಯಸ್ಕನಿಗೆ, ಮುದುಕನಿಗೆ

೯೭ ಯಾರು ರಾಜನಾದರೂ ತೇ ಎಲೆಯೇ ರಾಣಿ

೯೮ ಹೆಣ್ಣಿನ ಮೊದಲ ಪ್ರೇಮ ನಿಜವಾಗಿಯೂ ಅವಳ ಎರಡನೆಯದು

೯೯ ಹೆಂಡತಿಗೆ ಪ್ರೀತಿಯನ್ನೂ, ತಾಯಿಗೆ ಗುಟ್ಟನ್ನೂ ಕೊಡು

ವೇಲ್ಸ್

೧೦೦ ಬುದ್ಧಿವಂತ ಗಂಡಸನ್ನು ಅವನಿಲ್ಲದಾಗ ಹೊಗಳು,
ಬುದ್ಧಿವಂತ ಹೆಂಗಸನ್ನು ಅವಳೆದುರು ಹೊಗಳು

ಜರ್ಮನ್

೧೦೧ ಆರೋಗ್ಯವಂತನ ಎಲ್ಲ ಗಾಯಗಳೂ
ತೀವ್ರವಾಗಿ ವಾಸಿಯಾಗುತ್ತವೆ

೧೦೨ ಇಬ್ಬರು ಹೆಂಗಸರು ಒಂದು ಮನೆಯಲ್ಲಿ ಹೊಂದಿಕೊಂಡಿರುವುದೆಂದರೆ
ಒಂದು ಇಲಿಯನ್ನು ಕಂಡ ಎರಡು ಬೆಕ್ಕುಗಳು
ಹೊಂದಿಕೊಂಡಿರುವಂತೆ ಅಥವಾ ಒಂದು ಮೂಳೆಯನ್ನು ಕಂಡ
ಎರಡು ನಾಯಿಗಳು ಹೊಂದಿಕೊಂಡಿರುವಂತೆಯೇ ಸೈ'

೧೦೩ ಈರುಳ್ಳಿ ಮತ್ತು ಬಾಷ್ಪ ಸ್ನಾನ ವಾಸಿ ಮಾಡದ ರೋಗವಿಲ್ಲ

೧೦೪ ಒಂದು ಮರದ ತೊಗಟೆ ಮತ್ತೊಂದಕ್ಕೆ ಅಂಟಲಾರದು

೧೦೫ ಕಣ್ಣುಗಳು ತಮ್ಮನ್ನು ನಂಬುತ್ತವೆ,
ಕಿವಿಗಳು ಇತರರನ್ನು ನಂಬುತ್ತವೆ

೧೦೬ ಗಾದೆಗಳು ಯುಗಯುಗಾಂತರದ ವಿವೇಕ ಸಾರ

೧೦೭ ತರುಣಿಯರು ಹಸಿರು ದ್ರಾಕ್ಷಿ, ವಯಸ್ಕ ರಮಣಿಯರು ಒಣ ದ್ರಾಕ್ಷಿ

೧೦೮ ದೇವರು ಪಾಪಿಗಳನ್ನು ಕ್ಷಮಿಸುತ್ತಾನೆ,
ಇಲ್ಲವಾದರೆ ಸ್ವರ್ಗ ಬರಿದಾದೀತು

೧೦೯ ದೇಶ ಹೇಗೋ ಗಾದೆ ಹಾಗೆ

೧೧೦ ಬಡವನಿಗೆ ನಂದನವನವೇ ವೈದ್ಯ ಶಾಲೆ

೧೧೧ ಬಡತನವೇ ಆರನೆಯ ಇಂದ್ರಿಯ

೧೧೨ ಬರಿದಾದ ಕಾಳ ತೆನೆ ತಲೆ ಎತ್ತಿ ನಿಲ್ಲುತ್ತದೆ,
ತುಂಬಿದ ತೆನೆ ತಲೆ ಬಾಗುತ್ತದೆ

೧೧೩ ಬೆಳೆಯುವ ಬೆಳೆ ಸದ್ದು ಮಾಡುವುದಿಲ್ಲ

೧೧೪ ಮಾತು ಮಾನವತೆ, ಮೌನ ದೈವಿಕತೆ

೧೧೫ ಯುದ್ಧದ ಫಲ ಮೂರು ಸೈನ್ಯಗಳು: ಅಂಗಹೀನರ ಸೈನ್ಯ,
ದುಃಖಿತರ ಸೈನ್ಯ ಹಾಗೂ ಕಳ್ಳರ ಸೈನ್ಯ

೧೧೬ ರಾಜನ ನಾಯಿಗೂ ತೊಣಚಿ ಹೋಗುತ್ತದೆ

೧೧೭ ರೈತನಿಗೆ ಐಶ್ವರ್ಯ ಬಂದರೆ
ಕನ್ನಡಕ ಹಾಕಿಕೊಂಡು ಧಾನ್ಯ ನೋಡುತ್ತಾನೆ

೧೧೮ ಹಲವು ಬಾರಿ ಬರುವ ರೋಗಕ್ಕಿಂತ ಒಮ್ಮೆ ಬರುವ ನೋವೇ ವಾಸಿ

೧೧೯ ಹೆಣ್ಣಿಗೆ ಮನೆಯೊಳಗೂ ಅಧಿಕಾರವಿರಬಾರದು,
ಏಕೆಂದರೆ ಹೆಣ್ಣು ಆಳುವಲ್ಲಿ ದೆವ್ವವೇ (ಆ ಮನೆಯ)
ಮುಖ್ಯ ಸೇವಕನಾಗಿರುತ್ತದೆ

೧೨೦ ಹೆಣ್ಣಿನ ಅಳು, ಕಳ್ಳನ ನಗು

೧೨೧ ಹೆಣ್ಣು ನೋಡುವುದಕ್ಕೆ ಈರುಳ್ಳಿಯಂತೆ ತೆಳ್ಳಗೆ, ಬೆಳ್ಳಗೆ,
ಕತ್ತರಿಸಿದರೆ ತಿರುಳಿಲ್ಲ, ಹೃದಯವಿಲ್ಲ,
ನಮ್ಮ ಕಣ್ಣಿನಲ್ಲಿ ಮಾತ್ರ ನೀರು

ಫ್ರೆಂಚ್

೧೨೨ ಅವಕಾಶ ಒಮ್ಮೆ ತಪ್ಪಿದರೆ ತಪ್ಪಿಯೇ ಹೋಗುತ್ತದೆ

೧೨೩ ಆಶಿಸಿದುದನ್ನು ಪಡೆಯಲಾಗುವುದಿಲ್ಲ,
ಆದ್ದರಿಂದ ಪಡೆಯಲು ಸಾಧ್ಯವಾದುದನ್ನು ಇಚ್ಛಿಸೋಣ

೧೨೪ ಆಳಿನ ಅನುರಾಗವೇ ಆಳುವವನ ವಜ್ರ ಕವಚ

✓೧೨೫ ಉತ್ತಮ ಶಸ್ತ್ರ ಚಿಕಿತ್ಸಕನಿಗೆ ಹದ್ದಿನ ಕಣ್ಣು, ಸಿಂಹದ ಹೃದಯ
ಮತ್ತು ಕೋಮಲೆಯ ಬೆರಳು ಬೇಕು

೧೨೬ ಎಲ್ಲ ವಾಸನೆಗಿಂತ ರೊಟ್ಟಿಯ ವಾಸನೆ,
ಎಲ್ಲ ರುಚಿಗಿಂತ ಉಪ್ಪಿನ ರುಚಿ

೧೨೭ ಒಬ್ಬಳು ಹೊನ್ನು ಹೆಣ್ಣಿಗಿಂತ ಒಬ್ಬಳು ಹುಲ್ಲಾಳು ಮೇಲು

೧೨೮ ಒಳ್ಳೆಯ ಅಳಿಯ ಸಿಕ್ಕಿದವನಿಗೆ ಮಗನೊಬ್ಬನಾದ ಹಾಗೆ,
ಕೆಟ್ಟ ಅಳಿಯ ಸಿಕ್ಕಿದವನಿಗೆ ಮಗಳೊಬ್ಬಳು ಹೋದ ಹಾಗೆ

✓೧೨೯ ಒಂದು ಗ್ರಾಂ ದೂರದೃಷ್ಟಿ ನೂರಾರು ಗ್ರಾಂ
ಔಷಧಿಗಳಿಗಿಂತ ಉತ್ತಮ

೧೩೦ ಕಷ್ಟಗಳು ಔಷಧಿಯಂತೆ ಕಹಿಯಾದರೂ ಶಕ್ತಿದಾಯಕ

೧೩೧ ಕೂಡಲೇ ಉತ್ತರ ಹೇಳುವವನಿಗೆ ಏನೂ ಗೊತ್ತಿರದು

೧೩೨ ದಿನವು ಎಷ್ಟೇ ದಿವ್ಯವಾಗಿದ್ದರೂ
ಅದರ ಅನಂತರ ಅಂಧಕಾರ ತಪ್ಪಿದ್ದಲ್ಲ

೧೩೩ ನಮ್ಮನ್ನು ಹೊಗಳುವವರನ್ನು ಕಂಡರೆ ನಮಗೆ ಇಷ್ಟ
ನಾವು ಹೊಗಳುವವರನ್ನು ಕಂಡರೆ ನಮಗೆ ಕಷ್ಟ

೧೩೪ ಬುದ್ಧಿವಂತ ಮಾತನಾಡುವ ಮೊದಲು ಯೋಚಿಸುವನು,
ದಡ್ಡ ಮೊದಲು ಮಾತನಾಡಿ ಅನಂತರ
ಅದನ್ನು ಕುರಿತು ಯೋಚಿಸುತ್ತಾನೆ

೧೩೫ ಮಾಡಿರುವುದನ್ನು ನೋಡಿದರೆ ಮಾಡಿದವರ್‍ಯಾರು ಎಂದು ತಿಳಿಯದೆ?

೧೩೬ ಮುಳ್ಳನ್ನು ಬಿತ್ತಿದವನು ಬರಿಗಾಲಿಂದ ನಡೆಯಬಾರದು

೧೩೭ ರೋಗಗಳು ಕುದುರೆಯ ಮೇಲೆ
ಬಂದು ಕಾಲ್ನಡಿಗೆಯಿಂದ ಹಿಂದಿರುಗುತ್ತವೆ

೧೩೮ ವೈದ್ಯನನ್ನು ವಾರಸು ಮಾಡಿಕೊಂಡವನೇ ಮೂರ್ಖ

೧೩೯ ಸೂರ್ಯನನ್ನೂ, ಸಾವನ್ನೂ ಬಿಟ್ಟ
ಕಣ್ಣಿಂದ ನೋಡುವವರೂ ಉಂಟೆ ?

೧೪೦ ಹೆಣ್ಣು ಸಾಧ್ಯವಾದಾಗ ಮಾತ್ರ ನಗುತ್ತಾಳೆ,
ಆದರೆ ಸೆನೆಸಿಕೊಂಡಾಗ ಅಳುತ್ತಾಳೆ

ಡಚ್

೧೪೧ ಆರೋಗ್ಯವನ್ನು ಪ್ರೀತಿಸುವವನು ಎಲ್ಲವನ್ನೂ ಪ್ರೀತಿಸುತ್ತಾನೆ

೧೪೨ ಬುಟ್ಟಿ ತುಂಬ ಬುದ್ಧಿಗಿಂತ ಮುಷ್ಟಿಯಷ್ಟು ತಾಳ್ಮೆ ಬೇಕು

೧೪೩ ಮೂರ್ಖನು ಮನಸ್ಸಿಗೆ ಬಂದಿದ್ದನ್ನು ಬೇಡಬಹುದು,
ಆದರೆ ಕೊಡುವುದು ಶತ ಮೂರ್ಖತನ

೧೪೪ ಮೂರ್ಖನು ಹಣ ಗಳಿಸಬಹುದು,
ಅದನ್ನು ವೆಚ್ಚ ಮಾಡುವುದಕ್ಕೆ ಜಾಣತನ ಬೇಕು

೧೪೫ ಮೂರ್ಖರು ಜ್ಞಾನಿಗಳಿಂದ ಏನನ್ನೂ ಕಲಿಯುವುದಿಲ್ಲ,
ಆದರೆ ಜ್ಞಾನಿಗಳು ಮೂರ್ಖರಿಂದ ಬಹಳ ಕಲಿಯುತ್ತಾರೆ

೧೪೬ ಮೊದಲನೆಯ ವಿವಾಹ ಕರ್ತವ್ಯ, ಎರಡನೆಯದು ಪ್ರಮಾದ,
ಮೂರನೆಯದು ಉನ್ಮಾದ

ಲ್ಯಾಟಿನ್

೧೪೭ ಅಗತ್ಯವು ಕಟ್ಟಳೆಯನ್ನು ಅರಿತುಕೊಂಡಿಲ್ಲ

೧೪೮ ಅವಶ್ಯಕತೆಯು ತನ್ನದೊಂದು
ಪ್ರತ್ಯೇಕ ಕಾನೂನು ಮಾಡಿಕೊಳ್ಳುತ್ತದೆ

೧೪೯ *ಒಂದು ಕತ್ತೆ ಇನ್ನೊಂದು ಕತ್ತೆಯನ್ನು ಕೆರೆಯುತ್ತದೆ

೧೫೦ ಕಲೆ, ಕಲೆಯನ್ನು ಮರಸುವುದರಲ್ಲಿದೆ

೧೫೧ ಜನವಾಣಿಯೇ ದೇವವಾಣಿ

೧೫೨ 'ಬೇಡ' ಎಂದುದನ್ನು ಮಾಡುವ ಉತ್ಕಟಾಕಾಂಕ್ಷೆ ಎಲ್ಲರಿಗೂ ಇದೆ

೧೫೩ ಹಾಲಿನ ನಂತರ ಮದ್ದು ಆರೋಗ್ಯ ನೀಡಿದರೆ,
ಮದ್ಯದ ನಂತರ ಹಾಲು ವಿಷ

ಸ್ಪೈಯಿನ್

೧೫೪ ಇಂಡೀಸಿಗೆ ಬರಿಗೈಯಲ್ಲಿ ಹೋದವನು
ಬರಿಗೈಯಲ್ಲಿ ಹಿಂದಿರುಗುತ್ತಾನೆ

೧೫೫ ಐಶ್ವರ್ಯವನ್ನು ಕಳೆದುಕೊಂಡವನು ಬಹಳಷ್ಟು ಕಳೆದುಕೊಳ್ಳುತ್ತಾನೆ
ಸ್ನೇಹಿತರನ್ನು ಕಳೆದುಕೊಳ್ಳುವವನು
ಇನ್ನೂ ಹೆಚ್ಚಾಗಿ ಕಳೆದುಕೊಳ್ಳುತ್ತಾನೆ
ಉತ್ಸಾಹವನ್ನು ಕಳೆದುಕೊಳ್ಳುವವನು
ಎಲ್ಲವನ್ನೂ ಕಳೆದುಕೊಳ್ಳುತ್ತಾನೆ

೧೫೬ ಒಂದು ತೋಟ, ಅದರಲ್ಲೊಂದು ಪಾರಿವಾಳದ ಮಚ್ಚು ಇದ್ದರೆ,
ಭೂಮಿಗೆ ಸ್ವರ್ಗ ಬಂದ ಹಾಗೆ

೧೫೭ ಕೆಲವೇ ಉತ್ತಮ ಪುಸ್ತಕಗಳೂ, ಮಿತ್ರರೂ ಇರಬೇಕು

೧೫೮ ಕೆಲಸ ಇರುವವನನ್ನು ಒಂದು ಭೂತ ಕಾಡಿದರೆ,
ಕೆಲಸ ಇಲ್ಲದವನನ್ನು ಸಾವಿರ ಭೂತ ಕಾಡುತ್ತವೆ

---

* ಉಪಕಾರಕ್ಕೆ ಪ್ರತ್ಯುಪಕಾರವೆಂದು ಅರ್ಥ. ಇದೇ ಅರ್ಥದಲ್ಲಿ ಗ್ರೀಕ್ ಗಾದೆಯೊಂದಿದೆ 'ಒಂದು ಕೈ ಇನ್ನೊಂದು ಕೈಯನ್ನು ತೊಳೆಯುತ್ತದೆ.'

೧೫೯ ಗಾದೆ ದೇವವಾಣಿ

೧೬೦ ಗೌರವವೂ ಹಣವೂ ಒಂದೇ ಕಡೆ ದೊರೆಯುವುದಿಲ್ಲ

೧೬೧ ದಡ್ಡ ಕೊನೆಯಲ್ಲಿ ಮಾಡುವುದನ್ನು ಬುದ್ಧಿವಂತ ಮೊದಲಲ್ಲೇ ಮಾಡುತ್ತಾನೆ

೧೬೨ ನಮಗೆ ಬೇಕಾದುದು ದೊರೆಯದುದರಿಂದ ದೊರೆತುದನ್ನೇ ಪ್ರೀತಿಸೋಣ

೧೬೩ ನಾವೆಲ್ಲ ಆದಮನ ಮಕ್ಕಳು, ವ್ಯತ್ಯಾಸವೆಲ್ಲ ಉಟ್ಟ ರೇಶಿಮೆಯಲ್ಲಿ

೧೬೪ ಮದುವೆಗೆ ಮೊದಲು ನವಿಲು, ಮದುವೆ ನಿಶ್ಚಯವಾದಾಗ ಸಿಂಹ, ಮದುವೆಯಾದಮೇಲೆ (ಕತ್ತೆ) ಕುರಿ

೧೬೫ ಮೊದಲನೆಯ ಸಮುದ್ರಯಾನ ನೋಡುವುದಕ್ಕೆ ; ಎರಡನೆಯದು ಕಲಿಯುವುದಕ್ಕೆ ; ಮೂರನೆಯದು ಹಣ ಸಂಪಾದಿಸುವುದಕ್ಕೆ

೧೬೬ ಸೋಮಾರಿಯಾದವನು ಜೋಯಿಸನಾಗುವನೆ ?

೧೬೭ ಸ್ತ್ರೀ ನಿನ್ನ ಮೈ ನೆರಳಿದ್ದಂತೆ. ನೀನು ಹಿಂಬಾಲಿಸಿದರೆ ಓಡುತ್ತಾಳೆ' ಓಡಿದರೆ ಹಿಂಬಾಲಿಸುತ್ತಾಳೆ

೧೬೮ ಸ್ತ್ರೀಗೆ ಬೇಕಾದ ಹೆಚ್ಚಿನ ಪ್ರೀತಿಯ ವಸ್ತು ಮುಗುಳುನಗೆ

೧೬೯ ಸ್ತ್ರೀಯ ಬೆಲೆ ಅವಳ ಸೌಂದರ್ಯವಿರುವವರೆಗೆ ಮಾತ್ರ

೧೭೦ ಸಂಜೀವಿನಿಯನ್ನು ಹುಡುಕುವುದು ಮೂರ್ಖತನ

೧೭೧ ಹುಟ್ಟುವ ಮೊದಲು ಸೂರ್ಯ ಆಟವಾಡುತ್ತಾನೆ

೧೭೨ ಹೆಣ್ಣಿಗೆ 'ನೀನು ಸುಂದರಿ' ಎಂದರೆ ಸೈತಾನ ಅವಳಿಗದನ್ನು ಹತ್ತುಸಾರಿ ಒತ್ತಿ ಹೇಳುತ್ತಾನೆ

೧೭೩ ಹೆಣ್ಣಿಗೆ ಗಂಡು ಎಂದಿಗೂ ತನ್ನ ಹೃದಯವನ್ನು ಒಪ್ಪಿಸಬಾರದು ; ಹಾಗೊಮ್ಮೆ ಒಪ್ಪಿಸಿದನಾದರೆ, ಆಕೆ ಆತನನ್ನೆಂದಿಗೂ ಸರಿದಾರಿಯಲ್ಲಿ ನಡೆಸುವುದಿಲ್ಲ

೧೭೪ ಹೆಣ್ಣಿನ ಕಣ್ಣಿ ಬೀಳದವನೇ ಭಾಗ್ಯವಂತ

೧೭೫ ಹೆಂಗಸು ನಿನಗೆ ಎರಡು ಮಾತನ್ನು ಹೇಳಿದರೆ ಅವುಗಳಲ್ಲಿ ಒಂದನ್ನು ಮಾತ್ರ ನಂಬಿ, ಮತ್ತೊಂದನ್ನು ಬಿಟ್ಟುಬಿಡಬೇಕು

ದಕ್ಷಿಣ ಆಫ್ರಿಕಾ

೧೭೬ ಎಡವಿದ ಕಾಲಿಗಿಂತ ಎಡವಿದ ನಾಲಗೆ ಹೀನ

೧೭೭ ಗಾದೆ ತಿಳಿದ ವಿವೇಕಿ ಜಗಳ ಬಿಡಿಸುತ್ತಾನೆ

೧೭೮ ಗಿಡದೊಳಗೆ ಬಿಟ್ಟ ಫಲಗಳು ತಾವೇ ದುಡುದುಡು ಬಂದು ಬಾಯೊಳಗೆ ಬೀಳುತ್ತವೆಯೆ ?

೧೭೯ ಜೇನುತುಪ್ಪ ಬೇಕಾದವನು ಜೇನುನೊಣಗಳಿಗೆ ಹೆದರಬಾರದು

೧೮೦ ನಿನ್ನ ಹೆಂಡತಿಗೆ ಕೂಡ ನಿನ್ನ ಗುಟ್ಟುಗಳನ್ನು ಬಿಟ್ಟುಕೊಡಬೇಡ

೧೮೧ ಬೆಂಕಿ ಬೂದಿಯನ್ನು ಹೆತ್ತಿತು

೧೮೨ ಮನುಷ್ಯರೆಲ್ಲ ಒಂದೇ, ಹಿಟ್ಟುಗೂಳಿನಲ್ಲಿ ಮಾಡಿದ ಬೊಂಬೆಗಳು

ರೋಮನಿ ಜಿಪ್ಸಿ

೧೮೩ ಒಂದು ಮರದಲ್ಲಿರುವ ಹಣ್ಣನ್ನೆಣಿಸಬಹುದು, ಒಂದು ಹಣ್ಣಿನಲ್ಲಿರುವ ಮರಗಳನ್ನೆಣಿಸಲಾಗದು

೧೮೪ ಜೀವನ, ಚುಂಬನ ಇದ್ದಹಾಗೆ, ಹಂಚಿಕೊಡದಿದ್ದರೆ ಅದರಿಂದ ಏನೂ ಉಪಯೋಗವಿಲ್ಲ

ಇಟಲಿ

೧೮೫ ಅತಿಥಿ, ಮೀನು – ಎರಡೂ ಮೂರುದಿನಕ್ಕೆ ನಾರುತ್ತವೆ

೧೮೬ ಆಶೆ ಒಂದರಿಂದಲೇ ಬದುಕುವವನು ನಿರಾಶೆಯಿಂದ ಸಾಯುತ್ತಾನೆ

೧೮೭ ಐವತ್ತು ಮಂದಿ ಸ್ನೇಹಿತರಿದ್ದಾರೆಯೆ ? ಸಾಲದು
ಒಬ್ಬ ಶತ್ರು ಇದ್ದಾನೆಯೆ ? ಅದು ಹೆಚ್ಚಾಯಿತು

೧೮೮ ಒಳ್ಳೆಯ ಕುದುರೆ ಮತ್ತು ಕೆಟ್ಟ ಕುದುರೆ ಎರಡಕ್ಕೂ ಕಾಲೊದೆತ ಬೇಕಾಗುವಂತೆ ಒಳ್ಳೆಯ ಹಾಗೂ ಕೆಟ್ಟ ಹೆಣ್ಣುಗಳಿಗೂ ದೊಣ್ಣೆಯ ಸೇವೆ ಬೇಕು

೧೮೯ ಕೆಟ್ಟ ಒಪ್ಪಂದ ಒಳ್ಳೆಯ ಕೋರ್ಟು ವ್ಯವಹಾರಕ್ಕಿಂತ ಲೇಸು

೧೯೦ ಕೇಳುವುದರಿಂದ ಜ್ಞಾನ (ಪ್ರಸಾರ) ಪ್ರಾಪ್ತವಾಗುತ್ತದೆ,
ಮಾತನಾಡುವುದರಿಂದ ಪಶ್ಚಾತ್ತಾಪವುಂಟಾಗುತ್ತದೆ

೧೯೧ ಪಕ್ಕದ ಮನೆ ಉರಿಯುವಾಗ ನಿನ್ನ ಮನೆಗೆ ನೀರು ಹೊರು

ಪರ್ಶಿಯ

೧೯೨ ಹೆಂಗಸರ ಬುದ್ಧಿ ಮೊಳಕಾಲ ಕೆಳಗೆ

ಹೀಬ್ರೂ

೧೯೩ ಒಬ್ಬ ತಂದೆ ಪ್ರೀತಿಯಿಂದ ಹತ್ತು ಮಕ್ಕಳನ್ನಾದರೂ ನೋಡುತ್ತಾನೆ; ಹತ್ತು ಮಂದಿ ಮಕ್ಕಳು ಒಬ್ಬ ತಂದೆಯನ್ನು ಪ್ರೀತಿಯಿಂದ ನೋಡುವುದಿಲ್ಲ

೧೯೪ ಒಬ್ಬ ಮನುಷ್ಯನ ಜೀವನವು ಹಲವೊಮ್ಮೆ ಒಂದು ಗಾದೆಯನ್ನು ಅವಲಂಬಿಸುತ್ತದೆ

೧೯೫ ಮನುಷ್ಯನ ಆತ್ಮ ದೇವರ ದೀಪ

೧೯೬ ಯಾರು ತನ್ನ ಅಂತಸ್ತನ್ನು ಲಘುವಾಗಿ ಪರಿಗಣಿಸುವರೋ
ಅವರ ಘನತೆ ಹೆಚ್ಚುತ್ತದೆ

ಈಜಿಪ್ಟ್

೧೯೭ ನಾನೂ ರಾಜಕುಮಾರ, ನೀನೂ ರಾಜಕುಮಾರ ; ಆದರೆ
ಕತ್ತೆ ಮೇಯಿಸುವವರು ಯಾರಪ್ಪ ?

ಯಹೂದಿ

೧೯೮ ಕತ್ತೆ ಪಾಠ ಹತ್ತಿದಂದು ಹೆಣ್ಣಿಗೆ ವಿವೇಕ ಬಂದೀತು

೧೯೯ ಕಳ್ಳ ಮುತ್ತಿಟ್ಟರೆ ಹಲ್ಲು ಎಷ್ಟಿದೆ ಎಣಿಸಿಕೊ

೨೦೦ ದೇವರು ಹೆಣ್ಣನ್ನು ಮನುಷ್ಯನ ತಲೆಯ ಭಾಗದಿಂದ ಸೃಷ್ಟಿಸಲಿಲ್ಲ; ಕಾರಣ, ಅವಳು ಅವನನ್ನು ಆಳದಿರಲಿ ಎಂದು. ಅವನ ಕಾಲಿನಿಂದಲೂ ಸೃಷ್ಟಿಸಲಿಲ್ಲ ; ಕಾರಣ, ಅವಳು ಅವನ ಸೇವಕಿಯಾಗದಿರಲಿ ಎಂದು. ಅವಳನ್ನು ಅವನ ಪಕ್ಕೆಯಿಂದ ಸೃಷ್ಟಿಸಿದ, ಹೃದಯ ಹತ್ತಿರ ಇರಲೆಂದು

೨೦೧ ಮೂರ್ಖನದೇ ಆದ ಒಂದು ಸೊಗಸಾದ ಪ್ರಪಂಚವುಂಟು

೨೦೨ ಹೆಂಡತಿ ಕುಳ್ಳಿಯಾದರೆ ಮೆಲ್ಲಗೆ ಬಾಗಿ ಕಿವಿಯಲ್ಲಿ ಉಸಿರು

ಎಸ್ಟೋನಿಯಾ

೨೦೩ ರೋಗ ಬರುವಾಗ ದೂತರ ಕುದುರೆಗಳ ಮೇಲೆ ನಾಗಾಲೋಡಿ ಬಂದರೂ ಹೋಗುವಾಗ ದಣಿದ ಎತ್ತುಗಳ ಮೇಲೆ ಹೋಗುತ್ತದೆ

ರುಮಾನಿಯಾ

೨೦೪ ಯಾರಾದರೂ ನಿಮ್ಮನ್ನು ಮೋಸಗೊಳಿಸುವುದಾದರೆ ಅದು ಅವರ ತಪ್ಪು ; ಎರಡು ಸಲ ಮೋಸಗೊಳಿಸುವುದಾದರೆ ನಿಮ್ಮ ತಪ್ಪು

ಜೆಕೋಸ್ಲವೇಕಿಯ

೨೦೫ ಮದುವೆಯಾಗದವನು ದುಃಖಿಯಾಗಬಹುದು ; ಆದರೆ ಮದುವೆಯಾದವ ಖಂಡಿತವಾಗಿಯೂ ದುಃಖಕ್ಕೆ ಸಿಲುಕುತ್ತಾನೆ

ಅರಬ್ಬಿ

೨೦೬ ಅಣ್ಣತಮ್ಮಂದಿರಾಗಿ ಬಾಳಿ, ಆದರೆ ಲೆಕ್ಕ ಮರೆಯಬೇಡಿ

೨೦೭ ಆಗಾಗ ನಾಟಿ ಹಾಕಿದ ಗಿಡ ಬೆಳೆಯುವುದು ಅಪರೂಪ

೨೦೮ ಆರೋಗ್ಯ ಇದ್ದವನಿಗೆ ಆಸೆಯುಂಟು, ಆಸೆಯಿದ್ದವನಿಗೆ ಎಲ್ಲವೂ ಉಂಟು

೨೦೯ ಒಂಟೆ ಕೊಂಬು ಹುಡುಕಲು ಹೋಗಿ ಕಿವಿ ಕಳೆದುಕೊಂಡಿತು

೨೧೦ ಒಂಟೆಗೊಂದು ಯೋಜನೆ, ಮಾವುತನಿಗಿನ್ನೊಂದು ಮರಳುಗಾಡಿನ ಜೀವನ ಅಂದರಂತೆ

೨೧೧ ಒಂದು ಗಂಟೆ ನಲ್ಲೆಗೆ, ಮತ್ತೊಂದು ದೇವರಿಗೆ

೨೧೨ ಕಾಯಿಲೆ ಬೀಳದ ಯಾರೂ ಒಳ್ಳೆಯ ವೈದ್ಯರಲ್ಲ

೨೧೩ ಕಾರಣವಿಲ್ಲದ ಕೋಪ, ಲಾಭವಿಲ್ಲದ ಮಾತು, ಪ್ರಗತಿಯಿಲ್ಲದ ಬದಲಾವಣೆ, ಅಪರಿಚಿತರಲ್ಲಿ ವಿಶ್ವಾಸವಿಡುವಿಕೆ, ಶತ್ರುಗಳನ್ನು ಸ್ನೇಹಿತರೆಂದು ಭ್ರಮಿಸುವಿಕೆ – ಇವು ದಡ್ಡನ ಲಕ್ಷಣಗಳು

೨೧೪ ಕುದುರೆ ಬೆನ್ನಮೇಲೆ, ನಲ್ಲೆಯ ತೋಳಿನಲ್ಲಿ ಸ್ವರ್ಗದರ್ಶನ

೨೧೫ ಖರ್ಜೂರದ ಗಿಡಗಳನ್ನು ಹರಸು, ಅವು ನಿನ್ನ ಸೋದರತ್ತೆಗೆ ಸಮಾನ

೨೧೬ ಗಾದೆಗಳು ಮಾತಿಗೆ ಜ್ಯೋತಿಗಳು

೨೧೭ ಜಾಣನಾದವನು ತನ್ನ ಜಮಖಾನದ ತೂತಿನ ಮೇಲೆ ಕುಳಿತುಕೊಳ್ಳುತ್ತಾನೆ

೨೧೮ ಜ್ಞಾನದ ಶಾಯಿ ವೀರರ ರಕ್ತಕ್ಕಿಂತ ಅಮೂಲ್ಯ

೨೧೯ ದುರದೃಷ್ಟದಿಂದ ಬೇಡುವುದು ನಿನ್ನ ಅದೃಷ್ಟವಾಗಿದ್ದರೆ, ದೊಡ್ಡ ಮನೆಗಳಲ್ಲೇ ಬೇಡು

೨೨೦ ನಾಯಿ ಬಗುಳುತ್ತದೆ, ಕಾರವಾನ್ ಸಾಗುತ್ತದೆ

೨೨೧ ನಿನ್ನ ಶತ್ರುವಿನ ಶತ್ರು ನಿನಗೆ ಮಿತ್ರ

೨೨೨ ಪಂಡಿತನ ತಪ್ಪುಗಳು ಒಡೆದ ಹಡಗಿನಂತೆ, ಅದು ತನ್ನೊಂದಿಗೆ ಇತರರನ್ನೂ ಮುಳುಗಿಸುತ್ತದೆ

೨೨೩ ಪಂಡಿತನ ಭಾಷಣದಿಂದ ಕಲಿಯುವುದಕ್ಕಿಂತ ದಡ್ಡನನ್ನು ನೋಡಿ ಇನ್ನೂ ಹೆಚ್ಚಾಗಿ ಕಲಿಯಬಹುದು

೨೨೪ ಪಾದರಕ್ಷೆ ಇಲ್ಲವೆಂದು ಅಳುತ್ತಿದ್ದೆ, ಪಾದಗಳೇ ಇಲ್ಲದವನನ್ನು ನೋಡುವ ತನಕ

೨೨೫ ಬರೀ ಬಿಸಿಲಾದರೆ ಭೂಮಿ ಮರುಭೂಮಿಯಾಗುವುದು

೨೨೬ ಬಾದಷಹನ ಕುದುರೆಗಳಿಗೆ ಲಾಳ ಹಾಕಲು ಬಂದರೆ, ಗುಂಗೀ ಹುಳ ತನ್ನ ಕಾಲು ನೀಡಿತು

೨೨೭ ಬಾಳಿಗೆರಡು ಭಾಗ : ಮುಗಿದುಹೋದದ್ದು–ಸ್ವಪ್ನ, ಬರಬೇಕಾದ್ದು–ಆಸೆ

೨೨೮ ಬುದ್ಧಿವಂತ ದಡ್ಡನನ್ನು ಅರಿತುಕೊಳ್ಳುತ್ತಾನೆ, ಕಾರಣ ಅವನೇ ಒಮ್ಮೆ ದಡ್ಡನಾಗಿದ್ದದ್ದು. ದಡ್ಡ ಬುದ್ಧಿವಂತನನ್ನು ಎಂದೂ ಅರಿಯಲಾರ ; ಕಾರಣ, ಅವನೆಂದೂ ಬುದ್ಧಿವಂತನಾಗದೆ ಇದ್ದದ್ದು

೨೨೯ ಬುದ್ಧಿವಂತನ ಒಂದು ದಿನ ದಡ್ಡನ ಇಡೀ ಜೀವನಕ್ಕೆ ಸಮ

೨೩೦ ಮಧ್ಯಾಹ್ನ ಉಂಡು ಮಲಗು, ರಾತ್ರಿ ಉಂಡು ನಡೆ

೨೩೧ ಮಾತನಾಡಿದ ನಂತರ ಮಾತು ನಿನ್ನನ್ನಾಳುವುದು, ಆಡದ ಮೊದಲು ನೀನು ಅದನ್ನಾಳುವೆ

೨೩೨ ಸಿಂಹದಿಂದ ತಪ್ಪಿಸಿಕೊಂಡು ಓಡುವುದಕ್ಕಿಂತ ನಿನ್ನಿಂದ ನೀನು ತಪ್ಪಿಸಿಕೊ

೨೩೩ ಸುಲ್ತಾನ ನಡುಹಗಲಲ್ಲಿ 'ಇದು ರಾತ್ರಿ' ಎಂದರೆ ಕತ್ತೆತ್ತಿ ನಕ್ಷತ್ರಗಳನ್ನೀಕ್ಷಿಸು

೨೩೪ ಹಳಿಯುದನ್ನು ಒರೆಸಲು ಒಂದು ಸ್ಪಂಜು, ಇಂದನ್ನು ಸರಿಗೊಳಿಸಲು ಒಂದು ಗುಲಾಬಿ, ಮುಂದಿನದೊಂದು ಕರೆಯಲೊಂದು ಮುತ್ತು

೨೩೫ ಹೆಣ್ಣು ಸೈತಾನನ ಬಲೆ

೨೩೬ ಹೆಣ್ಣು ಹುಟ್ಟಿದಾಗ ಹೊಸ್ತಿಲು ನಲವತ್ತು ದಿನ ಅಳುತ್ತದೆ

೨೩೭ ಹೆಂಗಸರಿಗೆ ಉದ್ದ ಕೂದಲು, ಗಿಡ್ಡ ಬುದ್ದಿ

೨೩೮ ಹೇಳಿದ ಮಾತನ್ನು ಪರೀಕ್ಷಿಸು, ಹೇಳಿದ ಮನುಷ್ಯನನ್ನಲ್ಲ

ತುರ್ಕಿ

೨೩೯ ನಾನೂ ಶ್ರೀಮಂತ, ನೀನೂ ಶ್ರೀಮಂತ ; ಕುದುರೆ ಕಟ್ಟುವವರು ಯಾರಯ್ಯ ?

ರಷ್ಯನ್

೨೪೦ ಅಂಜಿಕೆಯನ್ನು ಜೊತೆಗಾರನನ್ನಾಗಿ ಮಾಡಿಕೊಂಡು ಸಾಗುವುದಕ್ಕಿಂತಲೂ ಆಸೆಯನ್ನು ಜೊತೆಗಾರನನ್ನಾಗಿ ಮಾಡಿಕೊಂಡು ಸಾಗುವುದೇ ಮೇಲು

೨೪೧ ಅಂಜದವನಿಗೆ ಯಾವ ಕಾರ್ಯವೂ ಕಷ್ಟವಲ್ಲ

೨೪೨ ಆರೋಗ್ಯ ಪಡದಲ್ಲಿ ಹೋಗಿ ಜೊಲೊಟಿನಕಗಳಲ್ಲಿ ಹಿಂದಕ್ಕೆ ಬರುತ್ತದೆ

೨೪೩ ಆರೋಗ್ಯಕ್ಕೆ ತಲೆಯನ್ನು ಶಾಂತವಾಗಿಡಿ, ಹೊಟ್ಟೆಯನ್ನು ಖಾಲಿಯಾಗಿಡಿ, ಪಾದಗಳನ್ನು ಬೆಚ್ಚಗಿಡಿ

೨೪೪ ಒಳ್ಳೆಯ ಆರೋಗ್ಯವಿರುವಾಗಲೇ ನಿಮ್ಮ ಬಗ್ಗೆ ಎಚ್ಚರ ವಹಿಸಿರಿ

೨೪೫ ಓಡುವವರಿಗೆ ಒಂದೇ ದಾರಿ, ಬೆನ್ನುಹತ್ತಿದವರಿಗೆ ನೂರುದಾರಿ

೨೪೬ ಕಾಯಿದೆ ಎಂದರೆ ಕತ್ತೆ ಇದ್ದಹಾಗೆ : ಸಿರಿವಂತರು ಅವುಗಳ ಮೇಲೆ ಸವಾರಿ ಮಾಡುತ್ತಾರೆ ; ಬಡವರನ್ನು ಅವು ಕಾಲು ಜಾಡಿಸಿ ಒದೆಯುತ್ತವೆ

೨೪೭ ಕಾರ್ಯತತ್ಪರನಾಗದೆ ಪಟ್ಟಣವನ್ನು ಜಯಿಸಲು ಸಾಧ್ಯವಿಲ್ಲ

೨೪೮ ಕುರೂಪಿಯಾದ ಹುಡುಗಿಗೆ ಯಾವಾಗಲೂ ದೇವರು ಮಧುರಕಂಠವನ್ನು ಕೊಟ್ಟಿರುತ್ತಾನೆ

೨೪೯ ಕಂಠವಿಲ್ಲದವನಿಗೆ ಹಾಡಲು ಇಷ್ಟ

೨೫೦ ಖಡ್ಗದೊಂದಿಗೆ ಬಂದವನು ಖಡ್ಗದಿಂದಲೇ ಸಾಯುತ್ತಾನೆ

೨೫೧ ಚಕ್ರವರ್ತಿಗಳಿಗೆ ನೆಗಡಿಯಾದರೆ ರಷ್ಯವೆಲ್ಲ ಕೆಮ್ಮುತ್ತದೆ

೨೫೨ ತಲೆ ಇದ್ದಷ್ಟು ಮನಸ್ಸುಗಳಿವೆ

೨೫೩ ತುತ್ತಿಗೆ ಮೊದಲು ಇಬ್ಬರೂ ಜಂಭಪಡುತ್ತಾರೆ, ಅನಂತರ ಒಬ್ಬನೇ

೨೫೪ ತೋಟಕ್ಕೆ ಮಳೆ ಬೀಳುವವರೆಗೂ ಕಾದು ಕುಳಿತಿರಬೇಡ

೨೫೫ ದಿನವೂ ಹೊಟ್ಟೆಭಾರವಾಗುವಂತೆ ತಿನ್ನುವವನು ತನ್ನ ಗೋರಿಯನ್ನು ತನ್ನದೇ ಹಲ್ಲುಗಳಿಂದ ಅಗೆದುಕೊಳ್ಳುತ್ತಾನೆ

೨೫೬ ದುಡಿದು ತಿನ್ನುವುದು ಬಡತನಕ್ಕೆ ಮದ್ದು

೨೫೭ ನಷ್ಟ ಎನ್ನುವುದೇ ಆದಾಯದ ಅಣ್ಣ

೨೫೮ ನಾಯಿ ಕನಸೆಲ್ಲ ಮೂಳೆ

೨೫೯ ನಿಮ್ಮ ರೋಗವನ್ನು ನೀವೇ ವಾಸಿಮಾಡಿಕೊಳ್ಳಲೆತ್ನಿಸಿದರೆ ಘಾತ ಖಂಡಿತ

೨೬೦ ಪ್ರತಿ ರೋಗಕ್ಕೂ ಮದ್ದಿದ್ದರೂ ಸಾವಿಗೆ ಮದ್ದಿಲ್ಲ

೨೬೧ ಫ್ರಾನ್ಸಿನವನು ಹಸಿದಾಗ ಕಾಗೆಯನ್ನೂ ಬಿಡುವುದಿಲ್ಲ

೨೬೨ ಪ್ರಾರ್ಥನೆಯಲ್ಲಿ ಜನ ಸಾಮಾನ್ಯವಾಗಿ ದೇವರನ್ನು ಕೇಳುವುದು ಎರಡು, ಎರಡು ನಾಲ್ಕಾಗದಿರಲಿ ಎಂಬುದನ್ನೇ

೨೬೩ ಬಾವಿಯಲ್ಲಿ ಉಗುಳಬೇಡ, ನಾಳೆ ಅದೇ ಬಾವಿಯ ನೀರನ್ನು ಕುಡಿಯುವ ಪ್ರಸಂಗ ಬಂದೀತು

೨೬೪ ಬುದ್ಧಿ ಸ್ಥಿರವಿಲ್ಲದವನು ಪ್ರಸನ್ನನಾದರೂ ಅಪಾಯಕರವೇ ಸೈ

೨೬೫ ಬೆಟ್ಟದ ನೆತ್ತಿಗೆ ಹತ್ತಾರು ದಾರಿ, ದೃಶ್ಯ ಮಾತ್ರ ಒಂದೇ

೨೬೬ ಮಧ್ಯರಾತ್ರಿಯ ನಂತರ ನಿದ್ದೆಗೆಟ್ಟ ಪ್ರತಿಕ್ಷಣವೂ ನಿಮ್ಮ ಶವದ ಪೆಟ್ಟಿಗೆಗೆ ಹೊಡೆದ ಒಂದೊಂದು ಮೊಳೆಯೆಂದು ತಿಳಿಯಿರಿ

೨೬೭ ಮನುಷ್ಯನ ಹತ್ತಿರ ಎಲ್ಲ ಯೋಗ್ಯತೆಗಳಿದ್ದೂ ಕಾರ್ಯಶಕ್ತಿ ಇಲ್ಲದಿದ್ದರೆ ಆತನನ್ನು ಜಗತ್ತು ಮೆಚ್ಚುವುದಿಲ್ಲ

೨೬೮ ಮನುಷ್ಯರು ತಮ್ಮ ಶ್ರೇಷ್ಠತ್ವವನ್ನು ಒಳಗಿಂದ, ಮೃಗಗಳು ಹೊರಗಿಂದ ಪ್ರದರ್ಶಿಸುತ್ತವೆ

೨೬೯ ಮಾತರಿಯದ ಮನುಷ್ಯ ತೂತಿರುವ ಗಡಿಗೆಯಂತೆ

೨೭೦ ಮೂರ್ಖರಿಗೆ ಕಲಿಸುವುದೂ ಶವವನ್ನು ಜೀವಂತಗೊಳಿಸುವುದೂ ಒಂದೇ

೨೭೧ ಮೇಕೆಯನ್ನು ಮುಂಬದಿಯಿಂದ, ಕುದುರೆಗಳನ್ನು ಹಿಂಬದಿಯಿಂದ ದುಷ್ಟನನ್ನು ಎಲ್ಲ ಬದಿಯಿಂದಲೂ ನೋಡು

೨೭೨ ಮೋಳವಿಲ್ಲದೆ ಅನುಭವಗೋಷ್ಠಿ ಇಲ್ಲ

೨೭೩ ಮೊದಲು ಕೆಲಸ ಮುಗಿಸು, ಅನಂತರ ಜಂಭ ಕೊಚ್ಚು

೨೭೪ ಮೋಸವಿಲ್ಲದೆ ವ್ಯಾಪಾರವಿಲ್ಲ

೨೭೫ ಯಾರಿಗೆ ಕತ್ತುಕೊಯ್ಯಲು ಸಾಧ್ಯವಿಲ್ಲವೋ ಅವರು ಚುಂಬಿಸುತ್ತಾರೆ

೨೭೬ ರೊಟ್ಟಿ ಉಪ್ಪು ತಿಂದ ಬಾಯಿ ಸತ್ಯವನ್ನು ನುಡಿಯಬೇಕು

೨೭೭ ರೋಗವನ್ನು ನಿರ್ಮಿಸಿದ ಶಕ್ತಿ ಅದನ್ನು ವಾಸಿಮಾಡಲೂ ಬಲ್ಲುದು

೨೭೮ ವಯಸ್ಸಾದವರನ್ನು ಕೇಳಬೇಡ, ಅನುಭವಿಗಳನ್ನು ಕೇಳು

೨೭೯ ವೈದ್ಯರ ಯತ್ನ ಮುಗಿದ ನಂತರ ದೇವರೇ ಗತಿ

೨೮೦ ಸತ್ಯವನ್ನೂ, ಮೂರ್ಖನನ್ನೂ, ಗಾದೆ ಮಾತನ್ನೂ ಎದುರಿಸುವವರಿಲ್ಲ

೨೮೧ ಸಾಲ ಕೊಟ್ಟು ಸ್ನೇಹಿತರನ್ನು ಕಳೆದುಕೊಳ್ಳಬೇಡ

೨೮೨ ಸಿರಿವಂತಿಕೆ ಮನುಷ್ಯರನ್ನು ಬದಲು ಮಾಡುವುದಿಲ್ಲ,
ಆದರೆ ಅವರ ನಿಜ ಸ್ವರೂಪವನ್ನು ಹೊರಗೆಡಹುತ್ತದೆ

೨೮೩ ಸೈತಾನನಿಗೆ ಕೈಲಾಗದಿದ್ದರೆ ಹೆಣ್ಣನ್ನು ಕಳಿಸುತ್ತಾನೆ

೨೮೪ ಸೋಲದೆ ಗೆಲ್ಲುವುದು ಅಸಾಧ್ಯ

೨೮೫ ಹಣ ಮಾತಾಡಿದಾಗ ಸತ್ಯ ಮೂಕವಾಗುತ್ತದೆ

೨೮೬ ಹರಟೆಗೆ ವಾಹನ ಬೇಕಿಲ್ಲ

೨೮೭ ಹಸುರಿರುವಾಗಲೇ ಕೊಯ್ದರೆ ಕಸುಗಾಯಿಯನ್ನೇ
ತಿನ್ನಬೇಕಾಗುವುದು

೨೮೮ ಹಳೆಯ ಮರ ಬಗ್ಗುತ್ತದೆ, ಎಳೆಯ ಮರ ಬೀಳುತ್ತದೆ

೨೮೯ ಹೆಂಡತಿಯನ್ನು ಪ್ರೀತಿಸು, ಆದರೆ ಹೆಣ್ಣುಗಿಡದಂತೆ ಕುಲುಕು

ಚೀನಾ

೨೯೦ ಅದೃಷ್ಟವಿದ್ದವನಿಗೆ ಸ್ನೇಹಿತ ಸಿಕ್ಕುತ್ತಾನೆ,
ದುರದೃಷ್ಟ ಬಡಿದವನಿಗೆ ಸುಂದರಿಯಾದ ಹೆಂಡತಿ ಸಿಕ್ಕುತ್ತಾಳೆ

೨೯೧ ಅಧಿಕಾರವನ್ನು ಪ್ರಯೋಗಿಸುತ್ತಿರುವಾಗ ಮಾನವನ ನಿಜವಾದ
ಸ್ವಭಾವ ಬಯಲಾಗುತ್ತದೆ

೨೯೨ ಅನುಭವಶೂನ್ಯವಾದ ಜ್ಞಾನವು ಕೊಡ ನಿಲ್ಲದಲ್ಲಿ ನೀರಿದ್ದಂತೆ

೨೯೩ ಅಪ್ಸರೆಯಂತಹ ಹದಿನೆಂಟು ಹೆಣ್ಣುಗಳಿಗಿಂತಲೂ
ಗೂನುಬೆನ್ನಿನ ಒಬ್ಬ ಮಗ ಲೇಸು.

೨೯೪ ಆನೆ ಬೇಕು ಎಂದವ ಆಮೆ ಹಿಡಿದಾನೆಯೇ ?

೨೯೫ ಇದ್ದಾಗ ಕೂಡಿಡದವನು ಅವಶ್ಯಕತೆ ಬಂದಾಗ ಪಶ್ಚಾತ್ತಾಪ ಪಡುತ್ತಾನೆ.

೨೯೬ ಊಹೆಯ ಆಮಿಷವಿದ್ದರೆ ಮಾತ್ರ ನಾವು ಬದುಕಬಹುದು

೨೯೭ ಎದುರಾಳಿಯ ಬಲವನ್ನು ಕಡಿಮೆ ಎಂದು ಎಣಿಸಿದರೆ ಸೋಲಿಗೆ ಆಹ್ವಾನವಿತ್ತಂತೆ

೨೯೮ ಎರಡು ರೊಟ್ಟಿ ಇದ್ದರೆ ಒಂದನ್ನು ಮಾರಿ ಲಿಲಿಹೂವನ್ನು ಕೊಂಡುಕೊ

೨೯೯ ಎಲ್ಲ ಜನರೂ ಬಂಧುಗಳು. ಆದುದರಿಂದ ಅವರಿಂದ ತೊಂದರೆಗಳನ್ನು ನಿರೀಕ್ಷಿಸು.

೩೦೦ ಏನನ್ನಾದರೂ ತಿಳಿದುಕೊಂಡಿರುವುದು ಜ್ಞಾನ, ಅದನ್ನು ಉಪಯೋಗಿಸಿಕೊಳ್ಳುವುದು ಬುದ್ಧಿವಂತಿಕೆ.

೩೦೧ ಒಳ್ಳೆಯವರನ್ನು ಅವರ ಶತ್ರುಗಳು ಯಾರು ಎನ್ನುವುದರಿಂದ ತಿಳಿಯಬಹುದು

೩೦೨ ಕತ್ತಲಾದರೂ ಕಾಮನಬಿಲ್ಲು ಮರೆಯುವುದಿಲ್ಲ

೩೦೩ ಕಸ್ತೂರಿಯ ವಾಸನೆ ಹಬ್ಬಲು ಗಾಳಿಯ ಅವಶ್ಯವಿಲ್ಲ

೩೦೪ ಕೀಳುವವನಿಗೆ ಗುಲಾಬಿ ಮುಳ್ಳು

೩೦೫ ಕೃಷಿ, ಕಾವ್ಯ-ಇವೇ ಮುಖ್ಯವಾದ ವಸ್ತುಗಳು

೩೦೬ ಕಾನೂನಿನ ಸಹಾಯ ಬೇಡಿ ನ್ಯಾಯಾಲಯಕ್ಕೆ ಹೋಗುವುದು ಬೆಕ್ಕಿಗಾಗಿ ಹಸುವನ್ನು ಕಳೆದುಕೊಂಡಂತೆಯೇ

೩೦೭ ಕಾವ್ಯದಲ್ಲಿ ಚಿತ್ರಗಳುಂಟು. ಚಿತ್ರದಲ್ಲಿ ಕಾವ್ಯವುಂಟು

೩೦೮ ಕಾವ್ಯದಲ್ಲಿ ಮಾತಿನ ಸದ್ದು ನಿಂತರೂ ಅರ್ಥ ಮುಂದೆ ಸಾಗುತ್ತದೆ.

೩೦೯ ಕೂಪಮಂಡೂಕಕ್ಕೆ ಆಕಾಶವೇ ಜರಡಿಯಾಗಲಿ

೩೧೦ ಕೋಪವು ಕಂಗೆಡಿಸಿದಾಗ ಸತ್ಯವು ಕಣ್ಮರೆಯಾಗುತ್ತದೆ

೩೧೧ ಗಳಿಗೇಲಿ ಮಾಡಿದ ತಪ್ಪು ಸಾವಿನವರೆಗೂ ಮುಪ್ಪು

೩೧೨ ಚೊಚ್ಚಲು ಮೊದ್ದು

೩೧೩ ಜ್ಞಾನವಂತನಾದವನು ಹೆಚ್ಚು ಮಾತಾಡುವುದಿಲ್ಲ,
ಮಾತಾಡುವವನಿಗೆ ಜ್ಞಾನವಿರುವುದಿಲ್ಲ

೩೧೪ ಜ್ಞಾನಾರ್ಜನೆ ಎದುರು ಪ್ರವಾಹವನ್ನು ಹಾಯ್ದು ಹೋಗುವಂತೆ,
ಮುಂದುವರಿಯದೆ ಇದ್ದರೆ ಹಿಂದಕ್ಕೆ ಸರಿಯುವುದು ಖಂಡಿತ

೩೧೫ ತಾನು ಇತರರಿಗಿಂತ ಬುದ್ಧಿವಂತನೆಂದು ಭಾವಿಸುವುದು
ತಾನೇ ವಂಚಿತನಾಗಲು ಸುಲಭ ದಾರಿ

೩೧೬ ತಾಳ್ಮೆಯಿದ್ದರೆ ಉಪ್ಪುನೇರಳೆ ಎಲೆ ರೇಷ್ಮೆಯಾಗುತ್ತದೆ

೩೧೭ ತಾಳ್ಮೆಯಿದ್ದರೆ ಹುಲ್ಲು ಹಾಲಾಗುತ್ತದೆ

೩೧೮ ತಿನ್ನಬಯಸುವುದಾದರೆ ಸಿಟ್ಟನ್ನು ತಿನ್ನು

೩೧೯ ತಿಂದಷ್ಟೂ ರುಚಿ ಕಡಿಮೆ

೩೨೦ ತುಂಬು ಸಂತೋಷದಲ್ಲಿ ವಾಗ್ದಾನ ಮಾಡಬೇಡ,
ಸಿಟ್ಟಿನಲ್ಲಿ ಕಾಗದ ಬರೆಯಬೇಡ

೩೨೧ ದಡ್ಡ ಮಕ್ಕಳು ಮನೆ ಮುರಿಯುವುದಿಲ್ಲ ;
ಬುದ್ಧಿವಂತರೆ ಹಾಗೆ ಮಾಡುವುದು

✓ ೩೨೨ ದಡಾರಕ್ಕೆ ಉಪವಾಸ, ಸಿಡುಬಿಗೆ ಊಟ ಔಷಧಿ

೩೨೩ ದಿಂಬಿನ ಮೇಲೆ ಉಸಿರಿದ್ದನ್ನು ನಂಬಿ ಬಿಡಬೇಡ

೩೨೪ ದುರದೃಷ್ಟವು ಯಾವಾಗಲೂ ಅಪಾಯವನ್ನು ಮಾಡಲಿಕ್ಕಾಗಿಯೇ
ಬರುತ್ತದೆಂದು ಹೇಳಲಾಗದು

೩೨೫ ದುರ್ದೈವವು ನಿಜವಾದ ಮಿತ್ರರಾರೆಂಬುದನ್ನು ಪರೀಕ್ಷಿಸುವ ಒರೆಗಲ್ಲಾಗಿದೆ

೩೨೬ ದುರ್ಮತಿಗಿಂತ ನಿರ್ಮತಿಯೇ ಲೇಸು

೩೨೭ ದುರ್ಬಲನ ಮೇಲೆ ಸಿಟ್ಟಿಗೇಳುವವನು ತಾನು ಬಲಶಾಲಿಯಲ್ಲ ಎಂಬುದನ್ನು ಖಂಡಿತವಾಗಿ ಒಪ್ಪಿಕೊಂಡಂತೆ ಆಗುತ್ತದೆ

೩೨೮ ದೃಢ ನಿಶ್ಚಯವುಳ್ಳವನನ್ನು ಕಂಡು ಕೆಲಸವೇ ಹೆದರುತ್ತದೆ

೩೨೯ ದೊಡ್ಡವರಿಗೆ ದೃಢವಾದ ಮನಸ್ಸಿರುತ್ತದೆ, ಅಲ್ಪರಿಗೆ ಅನೇಕ ಅಪೇಕ್ಷೆಗಳಿರುತ್ತವೆ

೩೩೦ ನಾಚಿ (ಟಿಕ)ಕೆ ಬಿಟ್ಟು ಬಂದವರು ಹೆಚ್ಚು ಗೊಣಗುತ್ತಾರೆ

೩೩೧ ನಾಲಗೆ ಯಾವಾಗಲೂ ನೋಯಿಸುವ ಹಲ್ಲಿನ ಬಳಿಗೆ ಹೋಗುತ್ತದೆ

೩೩೨ ನಾಲಗೆಯು ಅಡಿಯಲ್ಲಿ ರಾಕ್ಷಸನ ಗುಹೆ ಇದೆ,
ರಕ್ತ ಕಾಣದಿದ್ದರೂ ಜನ ಸಾಯುತ್ತಾರೆ

೩೩೩ ನಾಲ್ಕು ಕುದುರೆಗಳು ವೇಗವಾಗಿ ಓಡಿದರೂ ನಾಲಗೆಯನ್ನು ಮೀರಿಸಲಾರವು

೩೩೪ ನಿನ್ನ ಜಯ ಕುರಿತು ಸೋತವನ ಮುಂದೆ ಆಡಬೇಡ,
ಗೆದ್ದಾಗ ಸೋಲನ್ನು ಮರೆಯಬೇಡ

೩೩೫ ನಿನ್ನ ಬೆನ್ನನ್ನು ನೀನೇ ತಟ್ಟಿಕೊಂಡು ನೀನು ಮುನ್ನಡೆಯಲಾರೆ

೩೩೬ ನಿನ್ನ ಮಾರ್ಗಕ್ರಮಣದ ಗುರಿಯೇ ನಿನಗೆ ಗೊತ್ತಿಲ್ಲವಾದರೆ
ಹೆರವರು ನಿನಗೆ ಮಾರ್ಗದರ್ಶನವನ್ನೆಂತು ಮಾಡಬಲ್ಲರು ?

೩೩೭ ನಿನ್ನ ಯೋಜನೆ ಒಂದು ವರ್ಷದ್ದಾದರೆ ಧಾನ್ಯವನ್ನು ಬಿತ್ತು,
ಹತ್ತು ವರ್ಷದ್ದಾದರೆ ಮರಗಳನ್ನು ನೆಡು,
ನೂರು ವರ್ಷದ್ದಾದರೆ ಮನುಷ್ಯರನ್ನು ಬೆಳೆಸು

೩೩೮ ನಿಮ್ಮ ದೋಷಗಳನ್ನು ನಿಮಗೆ ಏಕಾಂತದಲ್ಲಿ ತಿಳಿಸಿಕೊಡುವವನನ್ನು ಪ್ರೀತಿಸಬೇಕು

೩೩೯ ನೂರು ಮಂದಿ ಒಂದು ಕಡೆ ಇರಬಹುದು,
ಆದರೆ ಮನೆ ಎಂದಾಗಲು ಒಬ್ಬ ಹೆಂಗಸು ಬೇಕು

೩೪೦ ಪರಾವಲಂಬನೆಯು ಶಾಶ್ವತ ನಿರಾಶೆಯೆಂಬುದು ಯಥಾರ್ಥವಾಗಿದೆ

೩೪೧ ಪಿಸುಮಾತು ಬಹುದೂರ ಕೇಳಿಸುತ್ತದೆ

೩೪೨ ಪ್ರಶ್ನೆ ಕೇಳುವವ ಐದು ನಿಮಿಷ ಕಾಲ ದಡ್ಡನೆನಿಸಿಕೊಂಡಾನು,
ಪ್ರಶ್ನೆಯನ್ನೇ ಕೇಳದವ ಸದಾಕಾಲಕ್ಕೂ ದಡ್ಡನಾಗಿಯೇ
ಉಳಿಯುತ್ತಾನೆ

೩೪೩ ಬಗುಳುವುದು ನಾಯಿ ಮಾತ್ರವಲ್ಲ

೩೪೪ ಬಹಳಷ್ಟು ಹಣ ದೈವಯೋಗವುಳ್ಳವನಿಗೆ,
ಮಿತವಾದ ಹಣ ಕಷ್ಟ ಜೀವಿಗೆ ಸಿಗುತ್ತದೆ

೩೪೫ ಬುದ್ಧಿವಂತನು ಕಣ್ಣಿನಿಂದಲೇ ಮಾತಾಡುತ್ತಾನೆ:
ದಡ್ಡನು ಕಿವಿಯಿಂದಲೇ ನುಂಗುತ್ತಾನೆ

೩೪೬ ಬುದ್ಧಿಶಾಲಿಗಳೊಡನೆ ನಡೆಸುವ ಸಂಭಾಷಣೆ ಒಂದು ತಿಂಗಳು
ಗ್ರಂಥಾವಲೋಕನ ಮಾಡುವುದಕ್ಕೆ ಸಮ

೩೪೭ ಮನುಷ್ಯನು ದಿನವೂ ಕೂದಲು ಬಾಚುತ್ತಾನೆ,
ಮನಸ್ಸನ್ನು ಬಾಚಿಕೊಳ್ಳಬಾರದೆ ?

೩೪೮ ಮನುಷ್ಯನಿಗೆ ಆತನು ಅಪೇಕ್ಷಿಸಿದಷ್ಟು ಗೌರವಾದರಗಳನ್ನು
ಸಲ್ಲಿಸುವುದು ಕಠಿಣವಾಗುತ್ತದೆ

೩೪೯ ಮಾಡಿದ್ದನ್ನು ವಿವೇಕಿ ಹೇಳುವುದಿಲ್ಲ,
ಮಾಡಬಾರದ್ದನ್ನು ಮಾಡುವುದಿಲ್ಲ

೩೫೦ ಮಾನವನ ಬುದ್ಧಿಶಕ್ತಿ ಒಂದು ನದಿ ಇದ್ದಂತೆ,
ಆಳವಾಗಿದ್ದಷ್ಟೂ ಅಬ್ಬರ ಕೇಳಿಬರುವುದಿಲ್ಲ

೩೫೧ ಮಿತ್ರರ ದೋಷಗಳನ್ನು ಹುಡುಕುತ್ತಾ ಹೋಗುವವರು
ಕಡೆಗೆ ಮಿತ್ರರನ್ನು ಕಳೆದುಕೊಂಡು ದೋಷಗಳನ್ನೇ ಹೊಂದುತ್ತಾರೆ

೩೫೨ ಯಾವ ಕೆಲಸ ಮಾಡಿದರೂ ನಿನ್ನ ಸ್ನೇಹಿತರು ಪಶ್ಚಾತ್ತಾಪ ಪಡದಂತೆಯೂ, ಶತ್ರುಗಳ ಸಂತೋಷಕ್ಕೆ ಕಾರಣ ಆಗದಂತೆಯೂ ಮಾಡು

೩೫೩ ಯಾವುದಾದರೊಂದು ರೀತಿಯ ನೈಪುಣ್ಯ ಜೀವನೋಪಾಯಕ್ಕೆ ದಾರಿಯಾಗುತ್ತದೆ, ಹಲವು ಬಗೆಯ ಪ್ರಾವೀಣ್ಯ ಗುಲಾಮನನ್ನಾಗಿ ಮಾಡುತ್ತದೆ

೩೫೪ ಯೌವನ ಚಿಟ್ಟೆಯನ್ನು ಅರಸುತ್ತದೆ. ವೃದ್ಧಾಪ್ಯಕ್ಕೆ ಗೊತ್ತು : ಅದು ಹುಳುವಾಗಿ ಗೋಡೆಯಲ್ಲಿ ಮುಗಿಯುತ್ತದೆ ಎಂದು

೩೫೫ ಲಫಂಗರ ವಿಚಾರದಲ್ಲಿ ಎಂದೂ ಭಿನ್ನಾಭಿಪ್ರಾಯ ಹುಟ್ಟುವುದಿಲ್ಲ

೩೫೬ ಪಾಪದಿಂದ ಒಳ್ಳೆಯ ಪ್ರಯೋಜನ ಪಡೆಯಬೇಕಾದರೆ ಅದನ್ನು ಬಿಟ್ಟುಬಿಡಬೇಕು

೩೫೭ ವಿವೇಚನೆ ಇಲ್ಲದೆ ಖರ್ಚು ಮಾಡಬಹುದಾದ ಒಂದೇ ಒಂದಾದ ಅತ್ಯಮೂಲ್ಯ ಪದಾರ್ಥವೆಂದರೆ ಕಾಲ

೩೫೮ ಶಾಂತಿಯ ಕಾಲದಲ್ಲಿ ನಾಯಕನಾಗಿರುವುದು ಅಶಾಂತಿ ಕಾಲದಲ್ಲಿ ಮಾನವನಾಗಿರುವುದಕ್ಕಿಂತ ಲೇಸು

೩೫೯ ಶಿಕ್ಷಣವು ಬುದ್ಧಿಗೆ ಸಹಾಯ ಮಾಡುತ್ತದೆ, ಆದರೆ ಬುದ್ಧಿಶಕ್ತಿಯನ್ನು ಒದಗಿಸುವುದಿಲ್ಲ

೩೬೦ ಸತತ ಉದ್ಯೋಗಿಯಾದ ದುಂಬಿಯನ್ನು ಬಿರಿಬಣ್ಣದ ಹೂವು ಆಕರ್ಷಿಸದು

೩೬೧ ಸಮಾಜವಾದ (ವೆಂದರೆ) ಸಂಪತ್ತನ್ನು ಹಂಚಿಕೊಳ್ಳುವುದಲ್ಲ, ದಾರಿದ್ರ್ಯವನ್ನು ಹಂಚಿಕೊಳ್ಳುವುದು

೩೬೨ ಸಾಣೆಗೆ ಸಿಗದ ವಜ್ರ ವಜ್ರವಲ್ಲ, ಕಷ್ಟಕ್ಕೆ ಸಿಗದ ಮನುಷ್ಯ ಮನುಷ್ಯನಲ್ಲ

೩೬೩ ಸಿರಿತನ ಹೋದರೆ ಬಡತನ ಬಂದಂತೆ, ಬಡತನ ಹೋದರೆ ಸಿರಿತನ ಬಂದೀತೆ ?

೩೬೪ ಸುಖ ದೇಹಕ್ಕೆ ಲಾಭಕರ,
ಆದರೆ ಬುದ್ಧಿ ದುಃಖದಿಂದ ಹೆಚ್ಚುತ್ತದೆ

೩೬೫ ಸುಖದಲ್ಲಿ ಯುಗ ಒಂದು ನಿಮಿಷ:
ದುಃಖದಲ್ಲಿ ನಿಮಿಷವೇ ಒಂದು ಯುಗ

೩೬೬ ಸಂಪೂರ್ಣ ಒಳ್ಳೆಯವರಿಬ್ಬರಿದ್ದಾರೆ : ಒಬ್ಬ ಸತ್ತವನು,
ಇನ್ನೊಬ್ಬ ಹುಟ್ಟದೆ ಇರುವವನು

೩೬೭ ಹಣ ಕೂಡಿ ಹಾಕುವವನು ಮನಸ್ಸಿನಲ್ಲಿ ಬಡವ ;
ತೃಪ್ತನಾದವನು ಹೊರನೋಟಕ್ಕೆ ಬಡವ

೩೬೮ ಹತ್ತು ಮಕ್ಕಳನ್ನು ಹೆತ್ತಿದ್ದರೂ ಹೆಂಡತಿಯನ್ನು ನಂಬಿ ಬಿಡಬೇಡ

೩೬೯ ಹತ್ತು ಸಾವಿರ ಜನ ಸತ್ತರೆ ಒಬ್ಬ ಸೇನಾಪತಿಯ ಕೀರ್ತಿ

೩೭೦ ಹುಲಿ ಸವಾರಿ ಮಾಡುವವನು ಇಳಿ ಸವಾರಿ ಮಾಡಲಾರ

೩೭೧ ಹೂವು ಅರಳಿರುವುದನ್ನು ನೋಡು,
ಇವನು ಸರಿ, ಇವನು ತಪ್ಪು ಎಂದು ಮಾತ್ರ ಹೇಳಬೇಡ

೩೭೨ ಹೆಣ್ಣಿನ ತುಟಿ 'ಸಾಕು' ಎಂದಾಗ, ಅವಳ ಕಣ್ಣುಗಳು 'ಮತ್ತಷ್ಟು'
ಎನ್ನುತ್ತವೆ

೩೭೩ ಹೆಂಡತಿಯನ್ನು ಗುಣಕ್ಕೆ, ಸಖಿಯನ್ನು ಸೌಂದರ್ಯಕ್ಕೆ ಆರಿಸು

೩೭೪ ಹೆಂಡತಿಗೆ ಹೇಳುವುದಿದ್ದರೆ ಮಲಗುವಾಗ ಹೇಳು,
ಮಗನಿಗೆ ಹೇಳುವುದಿದ್ದರೆ ದಿವಾನಖಾನೆಯಲ್ಲಿ ಹೇಳು

ಮಂಗೋಲಿಯಾ

೩೭೫ ಹಿಂದಿನ ತಾಯಿ ಹಾಡನ್ನು ಕಳೆದುಕೊಂಡರೆ,
ಮಂಚದಲ್ಲೂ, ಹೋರಾಟದಲ್ಲೂ ಕಾಣಿಸುವುದು

ಪರ್ಶಿಯಾ

೩೭೬ ಒಂದು ಪೌಂಡು ಪಾಂಡಿತ್ಯವನ್ನು ಉಪಯೋಗಕ್ಕೆ ತರಲು
ಹತ್ತು ಪೌಂಡು ಪರಿಜ್ಞಾನ ಬೇಕು

೩೭೭ ಒಂದು ಲೋಟ ಮೊಸರು ಒಂದು ವರ್ಷ ಆಯುಸ್ಸು

೩೭೮ ಕೂದಲಿಲ್ಲದವಳಿಗೆ ತನ್ನ ಅತ್ತೆಯ ಮಗಳ ಕೇಶರಾಶಿಯ ಜಂಬ

೩೭೯ ಚಿಕ್ಕದು ಎನ್ನುವ ಕೆಲಸಗಳನ್ನು ಈಗಲೇ ಚೆನ್ನಾಗಿ ಮಾಡು,
ಆಗ ದೊಡ್ಡ ಕೆಲಸಗಳು ನಿನ್ನನ್ನು ತಾವಾಗಿಯೇ ಹುಡುಕಿಕೊಂಡು
ಬರುತ್ತವೆ

೩೮೦ ಚೆನ್ನಾಗಿ ಯೋಚನೆ ಮಾಡುವುದು ಒಳ್ಳೆಯದು,
ಚೆನ್ನಾಗಿ ಯೋಜನೆ ಮಾಡುವುದು ಇನ್ನೂ ಒಳ್ಳೆಯದು,
ಚೆನ್ನಾಗಿ ಮಾಡುವುದು ಎಲ್ಲಕ್ಕಿಂತ ಒಳ್ಳೆಯದು

೩೮೧ ಪರಲೋಕವನ್ನು ಈ ಲೋಕ ಕೊಟ್ಟುಕೊಂಡುಕೊ–ಹಾಗೆ
ಮಾಡಿದರೆ ಎರಡೂ ನಿನ್ನದೇ

೩೮೨ ಬಾಳು ಅಮಲಿದ್ದ ಹಾಗೆ, ಸುಖ ಮರೆತು ತಲೆಶೂಲೆ
ಉಳಿಯುತ್ತದೆ.

೩೮೩ ಸ್ನೇಹಿತರೊಡನೆ ಸತ್ತರೆ ಸೋಬಾನ ಮಾಡಿಕೊಂಡ ಹಾಗೆ

೩೮೪ ಹೆಂಗಸರು ಮತ್ತು ಪೆಡಂಭೂತಗಳು ಮಾನವ ಜಗತ್ತಿನ
ಹೊರಗಡೆಯಷ್ಟೆ ಚೆನ್ನಾಗಿ ಶೋಭಿಸಬಹುದು

ಗಲೀಷಿಯಾ

೩೮೫ ನೀನೂ ಯಜಮಾನಿ, ನಾನೂ ಯಜಮಾನಿ ;
ಹಂದಿ ಮಲಗಿಸೋರು ಯಾರು ?

ಲೆಬನೀಸ್

೩೮೬ ಹಗಲು ಊಟವಾದ ಮೇಲೆ ಕೊಂಚ ನಿದ್ದೆ,
ರಾತ್ರಿ ಊಟದ ನಂತರ ಓಡಾಟ–ಆರೋಗ್ಯ ಸಾಧನ

೩೮೭ ಹೇಡಿ ರೋಗಿಯನ್ನು ಯಾವ ವೈದ್ಯನೂ ಬದುಕಿಸಲಾರ

ಸ್ಕ್ಯಾಂಡಿನೇವಿಯನ್

೩೮೮ ಕೊಡುವವನ ಕಣ್ಣಲ್ಲಿ ನೀರಿದ್ದಾಗ ಆದಷ್ಟು ದಕ್ಕಿಸಿಕೊ

ಮೊರಾಕ್ಕೊ

೩೮೯ ಚಳಿಯಾದ ಮೇಲೆ ಬೂದಿ, ಮಳೆಯಾದ ಮೇಲೆ ಗುಲಾಬಿ

ಅಸ್ಸಾಮಿ

೩೯೦ ಕೆಡದ ಸ್ನೇಹಿತನನ್ನು ಹುಡುಕಿದರೆ ದೇವರು ಸಿಕ್ಕುತ್ತಾನೆ

೩೯೧ ಕೈಗೆ ಸಿಕ್ಕದ ಹೂವನ್ನು ದೇವರಿಗೆ ಕೊಡುತ್ತೇವೆ

೩೯೨ ತಣಿಸುವ ಹೃದಯಕ್ಕೆ ಮೂರು ಮದ್ದು :
ನೀರು, ಹುಲ್ಲು ಹಸಿರು, ಹೆಣ್ಣಿನ ಚೆಲುವು

ಸಿಂಹಳ

೩೯೩ ನೆಟ್ಟಗಿರುವ ಹೆಣ್ಣು, ನೆಟ್ಟಗಿರುವ ತೆಂಗು ಕಾಣ ಸಿಕ್ಕದು

ಮಲಯಾ

೩೯೪ ಆನೆ ಸಾವಿರ ಮೊಟ್ಟೆ ಇಟ್ಟರೂ ಯಾರಿಗೂ ತಿಳಿಯುವುದಿಲ್ಲ
ಕೋಳಿ ಒಂದಿಟ್ಟರೂ ಊರಿಗೆಲ್ಲ ತಿಳಿಯುತ್ತದೆ.

೩೯೫ ಕಬ್ಬು ಸೊಟ್ಟಗಾದರೆ ಸಕ್ಕರೆ ಸೊಟ್ಟೆ

೩೯೬ ತಮಿಳನೂ ಸರ್ಪವೂ ಒಟ್ಟಿಗೆ ಬಂದರೆ,
ತಮಿಳನನ್ನು ಮೊದಲು ತೀರಿಸು.

೩೯೭ ಮುಚ್ಚಿದ ಮುಷ್ಟಿ ಸ್ವರ್ಗಕ್ಕೆ ಬೀಗ, ಬಿಚ್ಚುಗೈ ಕೃಪೆಯ ಕೀಲಿ

೩೯೮ ಸುವರ್ಣಗೆಡ್ಡೆ ಸುಮ್ಮನಿದ್ದು ಬೆಳೆಯುತ್ತದೆ,
ಕಬ್ಬಿಣ ಸುಮ್ಮನಿದ್ದು ಸವೆಯುತ್ತದೆ

೩೯೯ ಹುತ್ತದಿಂದ ಸರ್ಪ ಎಳೆಯಬೇಕಾದರೆ ಮತ್ತೊಬ್ಬನ ಕೈಯನ್ನು
ಉಪಯೋಗಿಸು.

ಜಪಾನ್

೪೦೦ ನಾಲಗೆ ಮೂರೇ ಅಂಗುಲದಷ್ಟಿದ್ದರೂ
ಆರಡಿ ಮನುಷ್ಯನನ್ನು ಕೊಲ್ಲಬಲ್ಲದು

೪೦೧ ಪ್ರಯಾಣಕ್ಕೆ ಸ್ನೇಹಿತ, ಪ್ರಪಂಚಕ್ಕೆ ದಯೆ

೪೦೨ ಎರಡರಿಂದ ಎಂದಿಗೂ ಬೇಸರವಿಲ್ಲ,
ಬೆಳದಿಂಗಳ ರಾತ್ರಿ, ಸೊಗಸಾದ ಅಕ್ಕಿ ಅನ್ನ

೪೦೩ ಕಿತ್ತಳೆ ಹೊಂಬಣ್ಣಕ್ಕೆ ತಿರುಗಿದಾಗ
ವೈದ್ಯನ ಮುಖ ಬಿಳುಪೇರುತ್ತದೆ

೪೦೪ ಮನುಷ್ಯನಿಗೂ ಮಂಗನಿಗೂ ಮೂರು ಕೂದಲ ಅಂತರ

೪೦೫ ಯವ್ವನದ ಪ್ರೇಮ ಬೆಳ್ಳಿಬೊಗ್ಗಿನ ಗೊಂಚಲ ಹಾಗೆ ;
ಪ್ರಬುದ್ಧರ ಪ್ರೀತಿ ಅರಳಿದ ಸುವರ್ಣ ಕುಸುಮಗಳ ಹಾಗೆ

೪೦೬ ಸಾವಿರ ಮೈಲಿಗಳ ಪ್ರವಾಸವೂ ಒಂದು ಹೆಜ್ಜೆಯಿಂದಲೇ
ಪ್ರಾರಂಭವಾಗುತ್ತದೆ.

ಕೆಲವು ಅಂತರಭಾರತೀಯ ಭಾಷೆಗಳ ಗಾದೆಗಳು

ಕಾಶ್ಮೀರ

೪೦೭ ಮೊಂಬತ್ತಿಯ ಕೆಳಗೆ ಕತ್ತಲು

ಹಿಂದೂಸ್ತಾನಿ

೪೦೮ ಬರುವಾಗ ಆಸೆ ಬಾಯಲ್ಲಿ, ಹೋಗುವಾಗ ಇರುವೆ ಬಾಯಲ್ಲಿ

ಉರ್ದು

೪೦೯ ಒಂದು ದಿನಕ್ಕೆ ಅತಿಥಿ, ಎರಡು ದಿನಕ್ಕೆ ಅತಿಥಿ,
ಮೂರನೆಯ ದಿನ ಅನಿಷ್ಟ

ಹಿಂದಿ

೪೧೦ ಚಿನ್ನಕ್ಕಿಂತ ಉಕ್ಕು ಮೃದು

೪೧೧ ಪ್ರೀತಿ ಹುಡುಕುತ್ತ ಹೋಗಿ ನನ್ನನ್ನೇ ಕಳೆದುಕೊಂಡೆ

೪೧೨ ಹಸುಗಳ ಬಣ್ಣ ಬೇರೆ–ಹಾಲು ಮಾತ್ರ ಒಂದೇ,
ಹೂಗಳ ಜಾತಿ ಬೇರೆ–ಪೂಜೆ ಒಂದೇ,
ಮತ ಧರ್ಮ ಹಲವು–ದೇವರೊಬ್ಬನೆ

ಪಂಜಾಬಿ

೪೧೩ ಎಲ್ಲ ಕಲೆ ಕಸಬುಗಳಿಗೂ ನೇಗಿಲೇ ಮೂಲ ; ಮಳೆ ನೆಲದ ಗಂಡ

೪೧೪ ಒಂಟಿ ಹಾಸಿಗೆಗಿಂತ ಗುದ್ದುವ ಗೂಳಿ ಲೇಸು

೪೧೫ ನಾನೂ ರಾಣಿ, ನೀನೂ ರಾಣಿ ;ಬೆರಣಿ ತಟ್ಟುವವರು ಯಾರು ?

೯೧೬ ಮಾನವನ್ನರು ಕಿಂಡಿಗಳಲ್ಲಿ ಎಷ್ಟೆತ್ತರದು ರೋಗ ಆವರಿಸಿದೆ

ಬಂಗಾಳಿ

೯೧೭ ಇವನ್ನು ಇತರರಿಗೆ ಹೇಳಬೇಡ : ಐಶ್ವರ್ಯ, ನಿನ್ನ ಮಿತ್ರರುಗಳು, ನಿನ್ನ ಹೆಸರು, ಬಚ್ಚಿಟ್ಟ ನಿಧಿ, ದಾಂಪತ್ಯ, ಮಾನಭಂಗ ಮಾಡಿಕೊಂಡ ಕಾಲ

೯೧೮ ಜರಡಿ ಸೂಜಿಗೆ ಹೇಳಿತು : 'ನಿನ್ನ ಬಾಲದಲ್ಲಿ ತೂತು' ಎಂದು

ಬಿಹಾರಿ

೯೧೯ ಶ್ರಾವಣದಲ್ಲಿ ಕುರುಡನಾದವನಿಗೆ ಎಲ್ಲ ಹಸಿರು

ಮರಾಠಿ

೯೨೦ ಬೀದಿಯ ಕಲ್ಲಿನ ಮುಂದೆ ಕುಳಿತುಕೊಂಡರೆ ಹಾವು ತಾನೇ ಹೊರಬರುತ್ತದೆ

ಮಲೆಯಾಳಂ

೯೨೧ ಗಾದೆ ಸುಳ್ಳಾಗ ಹಾಲು ಕೂಡ ಹುಳಿಯಾದೀತು

ವಿವಿಧ

೯೨೨ ಅನ್ಯರ ಉಪದೇಶದ ಮಾಡುವುದರಲ್ಲಿ ಅರ್ಧ ಜಗತ್ತು ಆನಂದಪಡುತ್ತದೆ; ಉಳಿದರ್ಧ ಅದನ್ನು ನಂಬುತ್ತದೆ

೯೨೩ ಅಲ್ಪರಿಗೆ ತಮ್ಮ ಕುರಿತು ಹೆಚ್ಚಿನ ಅಭಿಪ್ರಾಯವಿರುವುದು; ಮಹಾತ್ಮರಿಗೆ ಅಂಥ ಅಲ್ಪ ವಿಷಯಗಳಲ್ಲಿ ತಲೆಹಾಕಲು ಸಮಯವಿಲ್ಲ

೯೨೪ ಆನೆ ಒಂದೇ ದಿನದಲ್ಲಿ ಬೆಳೆಯುವುದಿಲ್ಲ

೪೨೫ [illegible]
ಕೈ ಹಾಕುವ ಆಸೆಗೆ ಬೀಳಬೇಡ

೪೨೬ ಇಬ್ಬರು [illegible]
[illegible]

೪೨೭ [illegible] ;
[illegible]

೪೨೮ ಒಬ್ಬ [illegible],
ಒಬ್ಬ [illegible]

೪೨೯ ಒಂದು ಸಣ್ಣ ದೀಪದ ಬೆಳಕನ್ನು ಅಡಗಿಸುವಷ್ಟು ಕತ್ತಲೆ
ಈ ಲೋಕದಲ್ಲಿಲ್ಲ

೪೩೦ ಕಲ್ಲಿನೊಡನೆ [illegible]

೪೩೧ ಖಡ್ಗಕ್ಕಿಂತ ಲೇಖನಿ ಶಕ್ತಿ ಹೆಚ್ಚು

೪೩೨ ಗಂಡಸೆಂದರೆ ಮೆಣಸಿನ ಕಾಳಿನ ಸಂತೆ,
ಬಾಯಿಯಲ್ಲಿಟ್ಟು ಜಗಿದಾಗಲೇ ಅದರ ಖಾರ ತಿಳಿಯುತ್ತದೆ

೪೩೩ ಗಂಡಿನ ಕಣ್ಣು ಅದರ ಬುದ್ಧಿಯಲ್ಲಿದೆ,
ಹೆಣ್ಣಿನ ಬುದ್ಧಿ ಅದರ ಹೃದಯದಲ್ಲಿದೆ

೪೩೪ ಗಂಡಿನ ಬುದ್ಧಿ [illegible], ಹೆಣ್ಣಿನ ಹೃದಯ [illegible]

೪೩೫ ಗಂಡು ಬುದ್ಧಿಯಿಂದ ತಿಳಿಯುತ್ತದೆ,
ಹೆಣ್ಣು ಹೃದಯದಿಂದ ಅರ್ಥಮಾಡಿಕೊಳ್ಳುತ್ತದೆ

೪೩೬ [illegible]

೪೩೭ [illegible]
ನಮ್ಮ ಅರ್ಥ [illegible]

೪೩೮ [illegible]

೪೩೯ ತನ್ನ ಕುರಿತು ಒಳ್ಳೆಯ ಮತ್ತು ಪರರ ಕುರಿತು ಕೆಟ್ಟ ಅಭಿಪ್ರಾಯ
ಏರಕೂಡದೆಂದರೆ ಎಷ್ಟು ಜನ ಮೂಕರಾಗುವರು ?

೪೪೦ ತರುಣರು ತಾವು ಮಾಡುವ ಕಾರ್ಯಗಳನ್ನು ಕುರಿತೂ
ಮುದುಕರು ತಾವು ಮಾಡಿದ ಕಾರ್ಯಗಳನ್ನು ಕುರಿತೂ
ಮೂರ್ಖರು ತಾವು ಮಾಡಲಿಚ್ಛಿಸುವ ಕಾರ್ಯಗಳನ್ನು ಕುರಿತೂ
ಮಾತಾಡುತ್ತಾರೆ.

೪೪೧ ಕಾಲಿ ಗಂಜಿಗೆ ಕಾಯಿ ಮಾರಿದ

೪೪೨ ತುಸು ತುಸು ತಿನ್ನುತ್ತಾ ನೋಣ ಒಂದು ನಾಯಿಯ
ಕಿವಿಯನ್ನೇ ತಿಂದುಬಿಟ್ಟಿತು

೪೪೩ ತೊಂಬತ್ತೊಂಬತ್ತು ಸುಳ್ಳು ಹೇಳಿದ ಸ್ತ್ರೀ ನೂರನೆಯ ಸುಳ್ಳು
ಹೇಳಿ ತನಗೆ ತಾನೇ ವಂಚಿಸಿಕೊಳ್ಳುವಳು

೪೪೪ ದೇವತೆಗಳು ಕಾಲಿರಿಸಲು ಭಯಗೊಳ್ಳುವಲ್ಲಿ ಹುಚ್ಚರು
ಧೈರ್ಯವಾಗಿ ಸಾಗುತ್ತಾರೆ

೪೪೫ 'ನನಗೆ ಗೊತ್ತಿಲ್ಲ' ಎಂದು ಹೇಳುವುದು ಎಷ್ಟೊಂದು ಸುಲಭ ?

೪೪೬ ನನಗೆ ದೇವರೂ ಸಿಕ್ಕಲಿಲ್ಲ ನಲ್ಲೆಯೂ ಸಿಕ್ಕಲಿಲ್ಲ :
ಇಹಪರಗಳೆರಡರಲ್ಲಿಯೂ ಸೋತೆ

೪೪೭ ನಾಳೆ ಮಾಡೋಣ ಎಂದು ಮುಂದೂಡಬಾರದು,
ಮನುಷ್ಯನ ಜೀವನದಲ್ಲಿ ನಾಳೆ ಎಂಬುದು ಬಾರದೆ ಇರಬಹುದು

೪೪೮ ನಾಳೆ ಸಾಯುವೆಯೆಂದು ಜೀವಿಸು.
ಎಂದೆಂದಿಗೂ ಜೀವಿಸುವೆನೆಂದು ಕಲಿ

೪೪೯ ನಿನಗೆ ನೋವನ್ನುಂಟುಮಾಡಿದವನು ಬಲವಂತನು ಇಲ್ಲವೇ
ಬಲಹೀನನು. ಅವನು ಬಲಹೀನನಾದರೆ ಅವನನ್ನು ಕಾಪಾಡು.
ಬಲವಂತನಾದರೆ ನಿನ್ನನ್ನು ಕಾಪಾಡಿಕೊ

೪೫೦ ನಿನಗೆ ಎಂದಿಗೂ ಸಿಟ್ಟು ಬರದಿದ್ದರೆ
ನೀನು ಬದುಕಿಲ್ಲವೆಂತಲೇ ತಿಳಿ

೪೫೧ ನಿನ್ನ ಕುದುರೆಯನ್ನು ನಾಳೆ ವರ್ಣಿಸು,
ನಿನ್ನ ಮಗನನ್ನು ಮೀಸೆ ಬಂದ ಮೇಲೆ ವರ್ಣಿಸು,
ನಿನ್ನ ಮಗಳನ್ನು ಮದುವೆಯಾದ ಮೇಲೆ ವರ್ಣಿಸು,
ನಿನ್ನನ್ನು ಮಾತ್ರ ಎಂದೂ ವರ್ಣಿಸಿಕೊಳ್ಳಬೇಡ.

೪೫೨ ನಿನ್ನ ಕುಲ ಯಾವುದು, ಮತ ಯಾವುದು – ಎಂದು ದೇವರು ಕೇಳುವುದಿಲ್ಲ ; ಆದರೆ ಲೋಕದಲ್ಲಿ ಏನು ಮಾಡಿರುವೆಯೆಂದು ಕೇಳುತ್ತಾನೆ

೪೫೩ ನಿರುದ್ಯೋಗ ಕೆಟ್ಟ ನಡತೆಗಳ ತಂದೆ

೪೫೪ ಪರರ ತಪ್ಪನ್ನು ನಿನ್ನ ತಪ್ಪಿನಂತೆ ಕಾಣು

೪೫೫ ಪ್ರಾಮಾಣಿಕ ಜನರು ಬೇಗ ಮದುವೆಯಾಗುತ್ತಾರೆ,
ಬುದ್ಧಿವಂತ ಜನರು ಎಂದೂ ಆಗುವುದಿಲ್ಲ

೪೫೬ ಪ್ರೇಮವು ಕತ್ತೆಗಳಿಗೆ ಕೂಡ ಕುಣಿಯಲು ಕಲಿಸುತ್ತದೆ

೪೫೭ ಬಡವನೇ ಎಲ್ಲರ ಹೊಟ್ಟೆಗೆ ಅನ್ನ ಹಾಕುತ್ತಾನೆ

೪೫೮ ಬಡವರು ಆಸೆಯಿಂದ ಬದುಕಿದರೆ, ಶ್ರೀಮಂತರು ಹೆದರಿಕೆಯಿಂದ ಸಾಯುತ್ತಾರೆ

೪೫೯ ಬಡತನವು ಅಪಮಾನವಲ್ಲ, ಆದರೆ ಅನನುಕೂಲ

೪೬೦ ಬಹಳೇ ಜನರನ್ನು ನಾವು ಗೌರವಿಸುತ್ತೇವೆ ; ಯಾಕೆಂದರೆ ಅವರ ಬಗೆಗೆ ನಮಗೆ ಏನೂ ತಿಳಿದಿರುವುದಿಲ್ಲ

೪೬೧ ಬುದ್ಧಿವಂತರು ಗಾದೆಗಳನ್ನು ಸೃಷ್ಟಿಸುತ್ತಾರೆ,
ದಡ್ಡರು ಅವನ್ನು ಪುನರುಚ್ಚರಿಸುತ್ತಾರೆ

೪೬೨ ಮನುಷ್ಯರು ಸಮಯವನ್ನು ಕಳೆಯುವ ವಿಷಯವಾಗಿ ಮಾತಾಡುತ್ತಾರೆ, ಆದರೆ ಸಮಯ ಮನುಷ್ಯರನ್ನು ಕಳೆಯುತ್ತದೆ

೪೬೩ ಮಾತು ಮನಸ್ಸಿಗೆ ಅಂಟಿಕೊಂಡಿದೆ, ಮಾತು ಹೊರಬೀಳುವುದನ್ನು ಮನಸ್ಸು ಪ್ರಕಟಮಾಡುತ್ತದೆ

೪೬೪ ಮುಂದೋಡುವವರು ಮೊದಲಿಗರಲ್ಲ, ಉದ್ಧಟರಿಗೆ ಗೆಲವಿಲ್ಲ

೪೬೫ ಮೂರ್ಖನ ಹಣ ಬೇಗನೆ ಮಾಯವಾಗುವುದು,
ಮೂರ್ಖ ಮತ್ತು ಹಣ ಒಂದಾದುದೇ ಅವರ ಭಾಗ್ಯ

೪೬೬ ಯಾರೂ ಪಕ್ಕನೆ ಕೆಟ್ಟವನಾಗುವುದಿಲ್ಲ

೪೬೭ ವೈದ್ಯರ ನಗುಮುಖ ದರ್ಶನದಿಂದಲೇ ಅರ್ಧ ರೋಗ ಗುಣವಾಗುತ್ತದೆ

೪೬೮ ಶಾಂತಿ ಬೇಕಿದ್ದರೆ ಹೆಂಡತಿಯ ಮಾತಿಗೆ ಕಿವಿಗೊಡು

೪೬೯ ಶಾಂತಿಯೇ ನಿಜವಾದ ಶೂರರು ಬಯಸುವ ವಿಜಯ

೪೭೦ ಶಾಂತಿಯಲ್ಲಿ ಕೇಡಿಲ್ಲ, ಯುದ್ಧದಲ್ಲಿ ಒಳಿತಿಲ್ಲ

೪೭೧ ಸಮುದ್ರವನ್ನೂ ಜಗಳವನ್ನೂ ದೂರದಿಂದ ಕಾಣಲು ಬಹು ಸೊಗಸು

೪೭೨ ಸಾಲಕ್ಕೆ ಸಮನಾದ ವಿಷ ಇನ್ನಿಲ್ಲ. ವಿಷ ಒಬ್ಬನನ್ನು ಮಾತ್ರ ಕೊಲ್ಲುತ್ತದೆ ; ಸಾಲ ಮಕ್ಕಳು, ಮೊಮ್ಮಕ್ಕಳನ್ನು ಕೊಲ್ಲುತ್ತದೆ

೪೭೩ ಸ್ತ್ರೀಯು ಎಂದೂ ವಾದಿಸುವುದಿಲ್ಲ, ವಸ್ತುಸ್ಥಿತಿಯನ್ನೇ ನುಡಿಯುತ್ತಾಳೆ

೪೭೪ ಸುಮ್ಮನಿರುವುದು ಸುವರ್ಣದ ಸಮಾನ,
ಮಾತಾಡುವುದು ಬೆಳ್ಳಿಯ ಸಮಾನ

೪೭೫ ಸುಂದರ ಸ್ತ್ರೀಯನ್ನು ಲಗ್ನವಾದವನು ಮನಃಕ್ಲೇಶವನ್ನು ಲಗ್ನವಾಗುವನು

೪೭೬ ಹಾದಿ ನಡೆಯುವವನಿಗೆ ಜೊತೆಗಾರರು ಸಿಕ್ಕೇ ಸಿಕ್ಕುತ್ತಾರೆ

೪೭೭ ಹಾವು ಹೋದ ಮೇಲೆ ಬೆತ್ತ ಎಸೆದರೆ ಉಪಯೋಗವೇನು ?

೪೭೮ ಹುಟ್ಟಿದರೆ ರಾಜನಾಗಿ ಹುಟ್ಟು, ಇಲ್ಲವೇ ವೈದ್ಯನಾಗಿ ಹುಟ್ಟು

ಅನುಬಂಧ–೩

ಗಾದೆಗಳ ಕಾವ್ಯ ಪ್ರಯೋಗಗಳು

೧. ಆಧ್ಯಾತ್ಮಿಕ

೧ ಆಪತ್ತಿಗೆ ಪಾಪವಿಲ್ಲ

ಹೋಲಿಸಿ : ಆಪತ್ಕಾಲೇ ನಾಸ್ತಿ ಮರ್ಯಾದಾ (ಆಪದ್ಧರ್ಮ)

ಪಾಪ ಮಾಡಿ ದೀಪ ಬಾಯಲ್ಲಿ ಊದಿದರು

೧. ಪಾಪಿ ನಾನಾದಿ ದೀಪ ಬಾಯಲ್ಲಿ ಊರಬೇಡಿ

—ಜಾನಪ, ಪು. ೮೯

೨ ಮಾಡಿದ ಪಾಪಕ್ಕೆ ಮನವೇ ಸಾಕ್ಷಿ, ತೋಡಿದ ಬಾವಿಗೆ ಜಲವೇ ಸಾಕ್ಷಿ, ತಾ ಮಾಡಿದ್ದು ತನಗೇ ಸಾಕ್ಷಿ

೧ ತೋಡಿರ್ದ ಭಾವಿಗೆ । ಕೂಡಿರ್ದ ಜಲಸಾಕ್ಷಿ
ಮಾಡಿರ್ದಕೆಲ್ಲ – ಮನಸಾಕ್ಷಿ ಸರ್ವಕ್ಕು
ಮೃಡನೆ ತಾ ಸಾಕ್ಷಿ! ಸರ್ವಜ್ಞ —ಸರ್ವ, ಪ. ೧೦೬೬

೨ ಮನಕ್ಕೆ ಮನವೇ ಸಾಕ್ಷಿ —(೯–೩೩) ಅಖಂಡೇಶ್ವರ ವಚನ

೩ ಪಾಪಿಗೆ ಗೊತ್ತೆ ಪರರ ಕಷ್ಟ

೧ ಪಾಪಿ ಬಲ್ಲನೆ ಪರರ ಸುಖದುಃಖದಿಂಗಿತವ? —ಪುರಂದಾ

೪ ಪಾಪಿ ಹೋದಲ್ಲಿ (ಹೋದಬಳಿ ಪಾತಾಳ) ನೀರಿದ್ದ ಬಳಿ ಕೆಸರು

೧ ಪಾತಕಿಗೆ ಪಾತಾಳ, ಸುಕೃತಿಗಂ ಸ್ವರ್ಗಂ

—(ಕಿ.ಕಾಂ. ೧೨–೪೮) ಶ್ರೀಮದ್ರಾಮಾಯಣ

೫ ತನ್ನ ಕೇಡು ತನ್ನ ತಿಂತು, ಅರಗು ಬಂಗಾರ ತಿಂತು

ಹೋಲಿಸಿ: ಅಪರವರ ದೇಹವೇ ತಾನವರವರಂ ತಿಂದು ತೇಗುಗುಂ

—ದಶಮ–ಪ ೩೮-ವೀರಭದ್ರ ವಿಜಯ

,, ತಾನಿಟ್ಟ ಬೇತಾಳ ತನ್ನ ತಿಂದಿತು

—(೧೦೨೦) (೯೬೫) ಪ್ರಭುದೇವರ ವಚನಗಳು

೬ ಅರಿಯದೆ ಮಾಡಿದ ಪಾಪ ಅರಿತಂದು ಪರಿಹಾರ, ಅರಿತು ಮಾಡುವ ಪಾಪ ವಜ್ರಲೇಪ

೧ ಅರಿಯದೆಸಗಿದ ಪಾಪ। ಅರಿತರದು ತನಗೊಳಿತು।
ಅರಿತರಿತು ಮಾಡಿ – ಮರೆತವನು ತನ್ನ ತಾ-।
ನಿರಿದು ಕೊಂಡಂತೆ! ಸರ್ವಜ್ಞ —ಸರ್ವ, ಪ. ೧೦೬೩

೭ ದೇವಲೋಕಕ್ಕೆ ಹೋದರೂ ಭೂಲೋಕ ತಪ್ಪದು

೧ ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ
ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ॥
—(ಅ. ೯, ಶ್ಲೋ. ೨೦) ಶ್ರೀಭ

೮ ವೇದವಲ್ಲಿ ಹುಸಿಯಿಲ್ಲ, ಆದಿಯಲ್ಲಿ ಜಿನನಿಲ್ಲ, ಸ್ವರ್ಗವಲ್ಲಿ ಮಾದಿಗನಿಲ್ಲ

೧ ಆದಿಯಲಿ ಜಿನನಿಲ್ಲ। ವೇದದಲಿ ಹುಸಿಯಿಲ್ಲ।
ವಾದದಿಂದಾದ – ಧನವಿಲ್ಲ, ಸ್ವರ್ಗದಲಿ
ಮಾದಿಗರೆ ಇಲ್ಲ ಸರ್ವಜ್ಞ —ಸರ್ವ, ಪ. ೯೧೯

೯ ಹೊಸಲಕ್ಕರ ತೊಡೆಯಬಹುದೆ?

೧ ಬಿದಿಬರೆದಕ್ಕರಮನೊರಸಿ ಕಳೆವವರೊಳರೆ?
—(೧೫-೨೫) ಧರ್ಮಾಮೃತ

೨ ಬಿದಿ ಬರೆದುದನೇ ಮಾತೇ ದೊರೆಯರಾದೊಡಂ
—ರಾಮಚಂದ್ರಚರಿತಪುರಾಣಂ

೩ ಬಿದಿ ಬರೆದ ಹೊಸಲಕ್ಕರವ ತೊಡೆವಘಟನಾವನೊ
—(೨೮-೩೩) ಸಾಳ್ವಭಾರತ

೪ ಚಂದ್ರಶೇಖರ ಬರೆದ ಬರೆಹವ ತೊಡೆಯಲಾರಳವು?

೫ ಹಣೆಯಕ್ಕರಮಂ ತೊಡೆಯಲಾರ್ಗಾದೊಡಮಳವಲ್ಲ

೧೦ ಹಣೆಯಲ್ಲಿ ಬರೆದದ್ದು ಮೀರುವುದಕ್ಕೆ ಯಾರಿಂದಾದೀತು?

೧ ದೆಯ್ವಮನಾರಯ್ಯ ಮೀಱಿ ಬಾೞಲ್ ನೆಱೆವರ್
—(೪-೩) ವಿಕ್ರಮಾರ್ಜುನ ವಿಜಯ

೨ ನಿಯತಿಃ ಕೇನ ಲಂಘ್ಯತೇ —ಆದಿಪುರಾಣ

೩ ನಿಯತಿಃ ಕೇನ ಲಂಘ್ಯತೇ —ನೇಮಿನಾಥಪುರಾಣಂ

೪ ಮುನ್ನಿನ ಜನ್ಮದ ಕರ್ಮ ಬಂಧಮಂ ಮೀಱುವರಾರ್
—ರಾಮಚಂದ್ರಚರಿತಪುರಾಣಂ

೫ ಆದೇನ ಲಂಘ್ಯವೋ ವಿಧಿವಿಹಿತಂ
—(೧೦-೨೮ ; ೧೧-೫೮) ನೇಮಿನಾಥಪುರಾಣಂ

೬ ಪೂರ್ವ ಭವದಿಂದೊಂದುವ ವಿಧಿವಿಹಿತಂ
ನಿವಾರಿಸುವನಾವಂ (೬-೮೨)

೭ ಬಿದಿಯ ಬಗೆಯನಾವನೊ ಮಿಗುವಂತೆ ?
—(೧೦-೭೪) ಲೀಲಾವತಿ ಪ್ರಬಂಧ

೮ ದೈವಸೂತ್ರಮಂ ಪುರುಷಕಾರಂ ಮೀಱಲೇನಕ್ಕುಮೋ
(೩-೧೯) ಜಗನ್ನಾಥವಿಜಯ

೯ ನಿಯತಿಯಂನಾರ್ ಮೀಱಿದಪರ್ ?
—(೧-೪೯) ಯಶೋಧರ ಕಾವ್ಯ

೧೦ ಪೂರ್ವವಿಧಿಯಂ ಮೀಱಲ್ಕದೇಂ ಬರ್ಕುಮೇ ?
—(೫-೨೬) ಅಭಿನವ ದಶಕುಮಾರ ಚರಿತೆ

೧೧ ವಿಧಿಲಿಖಿತವನುಲ್ಲಂಘಿಸಲ್ಬಲ್ಲನಾವಂ ?
—(೮-೨೧೦) ಅಭಿನವ ದಶಕುಮಾರ ಚರಿತೆ

೧೨ ವಿಧಿಯನೇ ಮಾರು ಮೀರುವರೆ ! —(೫) ಧರ್ಮಪರೀಕ್ಷೆ

೧೩ ವಿಧಿಕೃತವಾರು ಮೀರುವರು ?

೧೪ ವಿಧಿಯಂ ಮೀರುವನಾವನೈ —(ಸೋಮೇಶ್ವರಶತಕ)

೧೫ ಆರು ಮೀರುವರು ವಿಧಿಯ ಬರಹವ
—(೭-೩೬) ಸೊಬಗಿನ ಸೋನೆ

೧೬ ಅರವಿಂದಭವನಳಿಕದೊಳಂದು ಬರೆದಾ ಬರಹವ
ಮೀರುವರಾರು ? —ನೇಮಿಜಿನೇಶ ಸಂಗತಿ

೧೭ ಹಣೆಯ ಬರಹವ ಮೀರಿ ನಡೆವರೆ ಕ್ರಿಣಯು ನಿಂಗಳವಲ್ಲ
—ಲಘುಯೋಗ ವಾಸಿಷ್ಠ

೧೮ ಉಲ್ಲಂಘಿಸುವರುಂಟೆ ವಿಧಿಕೃತವನು
—(೩೦–೨೬) ಕನ್ನಡ ಜೈಮಿನಿ ಭಾರತ

೧೯ ಪುರಾಕೃತ ಮೀರಬಾರಳವು ? —ನಳಚರಿತ್ರೆ

೨೦ ವಿಧಿ ಬೊಮ್ಮ ಬರಹವ ಮೀರುವರಾರು? —ನಳಚರಿತ್ರೆ

೨೧ ಪೂರ್ವ ಕರ್ಮವನದಾರು ಮೀರುವರು
(೨೦-೨೯ ; ೨೦-೨೨) ಪ್ರೌಢರಾಯನ ಕಾವ್ಯ

೨೨ ವಿಧಿಯು ಲಿಖಿತವನಾರು ಬಲ್ಲರು?–(೨೬–೧೨) ಕೌಶಿಕರಾಮಾಯಣ

೨೩ ಆರಾದೊಡಂ ವಿಧಿಯ ಮೀರಲಸದಳ
ಅಯೋ, ಕಾಂ. (೧೭–೨೭) ಶ್ರೀಮದ್ರಾಮಾಯಣಂ

೨೪ ಜಗದೀಶನಾದೊಡಂ ಪ್ರಾರಬ್ಧಮಂ ಮೀರೆ ಜಗತಿಗತಿ
ದುಷ್ಕರಂ ಅಯೋ. ಕಾಂ. (೧೪–೨೩) ,,

೨೫ ಜಲಜಭವ ಲಿಖಿತಮಂ ಮೀರಲಾರ್ಗಳವಹುದು
—ಸುಂ. ಕಾ. (೧೬–೫೨)

೨೬ ವಿಧಿಕೃತವ ಮೀರಲಕ್ಕುಮೇ ? —(ಅಯೋ. ಕಾಂ. ೧೪-೨೭;
೧೬-೨೯; ೯-೯) (ಸುಂ. ಕಾಂ. ೮-೫)

೧೧ ಊರು ಬೇರಾದರೆ ಪ್ರಾರಬ್ಧ ಬೇರೆಯೆ ?

೧ ಊರು ಬಿಟ್ಟು ಪರಪೂರಿಗೆ ಹೋದರೆ ಪ್ರಾರಬ್ಧವು
ಬೇರಾದೀತೆ ? (ಹ,ಕೀ.ತ, ಕೀ. ೨೭೦)

೧೨ ಎಲ್ಲಿ ಹೋದರೂ ವಿಧಿ ಬೆನ್ನ ಬಿಡದು

೧ ಪ್ರಾಯೋ ಗಚ್ಛತಿ ಯತ್ರ ದೈವ ಹತಕಃ ತತ್ರೈವ
ಯಾಂತ್ಯಾಪದಃ —(ಭರ್ತೃಹರಿ ಸು.ಪು, ೬೯)

೨ ಆರೇನ ಮಾಡುವರು ಆರಿಂದಲೇನಹುದು
ಪೂರ್ವ ಜನ್ಮದ ಕರ್ಮವಿಧಿ ಬೆನ್ನಬಿಡದು
—(೨–೬೦) ಪುರಂದಾ. ಕೀರ್ತನೆಗಳು

೩ ಮುನ್ನ ಮಾಡಿದ ಕರ್ಮಫಲವಿದು ಬೆನ್ನಬಿಡುವುದೆ ?
(೬–೧೬) ನಳಚರಿತ್ರೆ

೪ ಪಡೆದಂಥ ವಿಧಿ ಬೆನ್ನಬಿಡಲರಿವುದೇ ?
— (೫೪) ಕನಕದಾಸರ ಕೀರ್ತನೆ

೫ ಪೂರ್ವಭವದಲ್ಲಿ ಮಾಡಿದ ಪಾಪವೆಲ್ಲಾದರೇಂ ಬಿಡುವುದೇ ?
—ಮಲ್ಲಾರಿ ಮಹಾತ್ಮೆ

೬ ಹಿಂದೆ ಮಾಡಿದ ಕರ್ಮ । ಮುಂದಿಗೂ ಬೆಂಬಿಡದು
ಬಂದ ಭೋಗವದು - ತಿಂದು ತೀರಲೇಬೇಕು
—ಸರ್ವ, ಪ. ೭೯೦

೧೩ ಒರಳಿನಲ್ಲಿ ತಲೆ ಇಟ್ಟು ಒನಕೆ ಪೆಟ್ಟಿಗೆ ಹೇಗೆ ಎಂದರೆ ಆಗುವುದೇ ?

೧ ಒರಳೊಳಗೆ ತಲೆಯಿರ್ದೊಡೊನಕೆಯು ಭರದ ಗಾಯುವ ತಪ್ಪಿಸ
ಲ್ಕಾರರಿವರೈ —(೧–೩೮) ಅನುಭವಾಮೃತ

೨ ಇಟ್ಟು ತಲೆ ಒರಳೊಳಗೆ ಒನಕೆಯು ಪೆಟ್ಟು
ತಪ್ಪಿಸಿಕೊಂಬುದೆಂತೈ —(೨೩–೩೧) ಜ್ಞಾನಸಿಂಧು

೧೪ ತಾವು ಬಾಳಲಾರದೆ ವಿಧಿಯ ಬೈದರು

೧ ತಾ ಬಾಳಲಾರದೆ ವಿಧಿಯುಂ ಬೈದಂ
—(೧೦೧೯) ಪ್ರಭುದೇವರ ವಚನಗಳು

೨ ತಾ ಮಾಡಿದ ಕರ್ಮಫಲ ತನಗಲ್ಲದೆ ವಿಧಿಯು
ಬೈದರೆ ವಿಧಿ ಎಲ್ಲಿ ಪೋಪನಯ್ಯ ?
—ಉಗಾಭೋಗ, ಅಚಲಾನಂದ

೧೫ ಬಿತ್ತಿದ ಹಾಗೆ ಬೆಳೆಯೋ ಹೊರತು ಬಯಸಿದ ಹಾಗೆ ಅಲ್ಲ

೧ ಬಿತ್ತಿದನೆ ಬೆಳಸನುಣ್ಬಂದ —(೧೩-೧೯) ಸಮಯಪರೀಕ್ಷೆ

೧೭ ಬೇವು ಬಿತ್ತಿ ಮಾವು ಬರಲಿಲ್ಲ ಅಂದ ಹಾಗೆ

ಹೋಲಿಸಿ: ಒಂದು ಬೀಜವ ಬಿತ್ತಿ ಮೇಣ್ ಮ
ತ್ತೊಂದು ಫಲವನು ಬಯಸಿ ಬಾ ತೊಡೆ
ಬಂದಪುದೆ ತನಗೆ —(೭-೭೭) ಪ್ರಭುಲಿಂಗಲೀಲೆ

,, ಬೇವ ಬಿತ್ತಲು ಬೆಲ್ಲದ ಸವಿ ಬಪ್ಪುದೆ ?
—(೪-೫) ಪದ್ಮಾವತಿ ಚರಿತೆ

೧೭ ಮಾಡಿದ್ದುಣ್ಣೋ ಮಹಾರಾಯ

೧ ತಂತಮ್ಮ ಮಾಡಿದುದಂ ತಾಮುಣಪೇಳ್ಕುಂ
—(೩-೯) ಕರ್ನಾಟಕ ಕಾದಂಬರಿ

೨ ಮಾಡಿದ ಫಲವನುಣಬೇಕು —ಪ್ರಭುಲಿಂಗಲೀಲೆ

೩ ತಾವು ಬಿತ್ತಿದ ಫಲಂಗಳ ತಾವು ಉಣ್ಣದವರುಂಟೆ?
—(೬೦೫) ಬಸವೇಶ್ವರನ ವಚನಗಳು

ನ ಭುಕ್ತಂ ಕ್ಷೀಯತೆ ಕರ್ಮ —(೬೦೦) ,,

೪ ಪಂಡಿತನಾಗಲಿ ಮೂರ್ಖನಾಗಲಿ ಸಂಚಿತ ಕರ್ಮ
ಉಂಡಲ್ಲದೆ ಬಿಡದು ,,

ಪ್ರಾರಬ್ಧ ಕರ್ಮ ಭೋಗಿಸಿದಲ್ಲದೆ ಬಿಡದು ,,

೫ ಮಾಡಿದನುಣ್ ಮಹಾರಾಜಾ
(೪-೩೨) (೧-೫೦) ಯಶೋಧರ ಕಾವ್ಯಂ

ಮಾಡಿದುದಂ ನಾವುಣ್ಣದೆ ಪೋಕುಮೆ? — ಪ್ರ. ೫೦

೬ ಬಿತ್ತಿದಿರಿ ವಿಷಬೀಜವನು ನೆರೆದತ್ತ ಫಲ ಕೈಸಾರ್ದುದು
(ಗ. ಪ. ೮-೧೦) ಕರ್ನಾಟ ಭಾರತ ಕಥಾಮಂಜರಿ

೭ ಮಾಡಿದಗ್ಗದ ಪಾಪಪುಣ್ಯಗಳೂಡಿದಲ್ಲದೆ ಮಾಣವು
—(೬-೨೬-೪) ತೊರವೆ ರಾಮಾಯಣ

೮ ನೀವೆಸಗಿದ ಕಾರ್ಯದ ಫಲವನು ನೀವೆ ನೆರೆಯುಂಬಿರಿ
—ನೇಮಿಜಿನೇಶ ಸಂಗತಿ

೯ ಉಂಡೊಡಲ್ಲದೆ ಬಿಟ್ಟಿದೆ ಪೋಪುದೆ ಕರ್ಮ ಫಲವು
—(ಉತ್ತರ ರಾಮಾಯಣ)

೧೦ ತಾನು ಮಾಡಿದ ಕಾರ್ಯವನು ತಾ । ಸಾನುರಾಗದ
ಲುಂಬುದೇ ಸುಖವಲ್ಲವೇ ? —(ಲಘುಯೋಗ ವಾಸಿಷ್ಠ)

೧೧ ತಾನುಣ್ಣಲೊಲ್ಲೆನೆಂದರೆ ಅಣಕವೇ, ತಮ್ಮಪ್ಪನುಂಬನೆ
—(೨–೩೪) ಅನುಭವಾಮೃತ

೧೨ ಕರ್ಮಫಲ ಮೊತ್ತರಿಸಲನುಭವಿಸದನ್ನ ತೀರದು
—(ಅಯೋ.ಕಾಂ. ೯–೯) ಶ್ರೀಮದ್ರಾಮಾಯಣಂ

೧೩ ನೀನೆಸಗಿದುದ ನೀನುಣ್ಣದುಳಿದಪುದೇ ?
—(ಅಯೋ. ಕಾಂ. ೧೯–೩೨) ಶ್ರೀಮದ್ರಾಮಾಯಣಂ

೧೮ ವಿಧಿಗನುಸಾರ ಮತಿ

೧ ಅಭ್ಯಾಸಾನು ಸಾರಿಣೀ ವಿದ್ಯಾ ಬುದ್ಧಿಃ ಕರ್ಮಾನು ಸಾರಿಣೀ
—(ಸಂ)

೨ ಕರ್ಮಾಯತ್ತಂ ಫಲಂ ಪುಂಸಾಂ ಬುದ್ಧಿಃ ಕರ್ಮಾನು ಸಾರಿಣೀ
—(ಸಂ)

೩ ವಿಧಿಲಿಖಿತಂ ಬುದ್ಧಿರನುಸರತಿ —(ಸಂ)

೪ ಬುದ್ಧಿ ಕರ್ಮವ ಪೊದ್ದಿ ನಡೆವುದಿದು ಸತ್ಯಮಲ್ತೆ ?
—(ಅಯೋ. ಕಾಂ. ೪–೩೭) ಶ್ರೀಮದ್ರಾಮಾಯಣಂ

೫ ವಿಧಿಲಿಖಿತಮಂ ಬುದ್ಧಿಯನುಸರಿಪುದು
—(ಅಯೋ,ಕಾಂ, ೪–೪೧)

೬ ವಿಧಿವಿಹಿತಂ ಬುದ್ಧಿರನುಸರತಿ —(೫) ಮುದ್ರಾಮಂಜೂಷ

೧೯ ಸಿಡಿಲು ಹೊಡೆಯುವಾಗ ಕೊಡೆ ಹಿಡಿದರೆ ತಪ್ಪೀತೆ ?

೧ ಸಿಡಿಲು ಹೊಡೆವಡೆ ಹಿಡಿದ ಕೊಡೆ ಕಾವುದೇ
—(೨–೩೧) ಹರಿಶ್ಚಂದ್ರ ಕಾವ್ಯಂ

೨ ಸಿಡಿಲು ಹೊಡೆಯಲ್ಪಿಡಿ ಕೊಡೆಯುನ್ನ ನಡಸಿ ಕಾಯ್ವುದೆ ?
—(೩೫–೨೦) ಸಿಂಗಿರಾಜ ಪುರಾಣಂ

೩ ಸಿಡಿಲೆಜಿಗಿದೊಡೆ ಕೊಡೆ ತಡೆ ಕಾವುವೆ
—(ಪು ೩೮೫–೨) ಸಾಳ್ವಭಾರತ

೪ ಸಿಡಿಲಿಸುರುಜೆಯು, ತಾಳಿಲೆಯೊಳು ಮಾಡಿದ
ಕೊಡೆ ತಾಳಲಾಪುದೆ ?

೫ ಸಿಡಿಲ ಪೊಡೆತಕೆ ಕೊಡೆಯುು ಮರೆಯುಹುದೆ ?
—(ಸುಂ, ಕಾಂ, ೧೨–೪೧) ಶ್ರೀ ಮದ್ರಾಮಾಯಣಂ

೬ ಪೊಡರ್ವ ಸಿಡಿಲಿನ ರವಕೆ ಕೊಡೆಗಳೇಂ ತಡೆದಪುವೆ ?
(—ಸುಂ.ಕಾಂ. ೧೭–೪೦) ಶ್ರೀಮದ್ರಾಮಾಯಣಂ

೨೦ ಉಗುರು ಸುತ್ತಿನ ಮೇಲೆ ಒನಕೆ ಪೆಟ್ಟು

೧ ಉಗುರಂ ಸುತ್ತುಯಿದ್ದಾವನ ವನಿಕೆಯೊಳಗೆ ಹೊಡೆದಾ ತೆರದಿ
—(ಯನಳ ೧೦೧)

ಹೋಲಿಸಿ : ೧ ಬಡತನದ ಮೇಲೆ ಮಾರಿಗುತ್ತಂ
—(೮–೧೬೧) ಧರ್ಮಾಮೃತ

೨ ಮಾರಿಯು ಮೇಲೆ ಪಸಂ
—(ಪು ೬, ಪ, ೩ರ ಗದ್ಯ) ಜೀವ ಸಂಬೋಧನೆ

೨೧ ಕಷ್ಟ ಬಂದರೆ ಒಂದರ ಹಿಂದುಗುಂಟ ಬಂದು, ಸುಖ ಬಂದರೂ ಅಷ್ಟೆ

ಹೋಲಿಸಿ : ಒಂದಡಸಿದೊಡೇಟಡಸಿತೆಂಬ ನುಡಿ
—(೩-೧೨) ಯಶೋಧರ ಕಾವ್ಯ

೨೨ ಕುರುವಿನ ಮೇಲೆ ಬೊಕ್ಕೆ ಎದ್ದಂತೆ

೧ ಗಂಡಸ್ಯೋಪರಿ ಸ್ಫೋಟಮ್

ಹೋಲಿಸಿ : ಬಾವಟಿದು ಒಲ್ವಣ್ಣಾದುದು
— (೮–ಪು ೩೧) ಅದ್ಭುತ ರಾಮಾಯಣ

೨೩ ಗಾಯದ ಮೇಲೆ ಬರೆ ಹಾಕಿದ ಹಾಗೆ

ಹೋಲಿಸಿ : ಬೆಂದ ಹುಣ್ಣನು ಕೀಸುವರೆ ಕಂಬಿಯಲಿ
—(೭-೬೪) ಪ್ರಭುಲಿಂಗಲೀಲೆ

೨೪ ಮುಳ್ಳು ತೆಗೆದು ದಸಿ (ಕೊಳ್ಳಿ) ಹೆಟ್ಟಿದ ಹಾಗೆ

೧ ಮುಳ್ಳಂ ಕಳೆದು ದಸಿಯುಂ ಸಿಕ್ಕಿದಂತಾಯಿತ್ತಲಾ
—(೫೪-೪೪) ಬಸವ ಪುರಾಣ

೨ ಮುಳ್ಳಂ ಕಳೆದುಪೋಂದು ದಸಿಯುಪೊಂದಿ ಬೆಟ್ಟುವ ತೆರ
—(೧೯-೮) ಶಿವತತ್ವ ಚಿಂತಾಮಣಿ

೨೫ ಆರ್ತಿಯ ವೇಳೆಯಲ್ಲಿ ಆಪತ್ತು ಬಂದಿತು

೧ ಸುಗ್ಗಿಯ ಕೊಟಾರದೊಳು ಮಳೆ ಬಂದಂತೆ
—(೨೮-೩೫) ಸೋಮನಾಥ ಚರಿತ್ರೆ

ಹೋಲಿಸಿ : ಹಸೆಯೊಳು ಹಾವು ಹರಿಯಿತು
—(೩-೫೩) ನೇಮಿ ಜಿನೇಶ ಸಂಗತಿ

೨೬ ಓಕುಳಿಯಲ್ಲಿ ಸಿಡಿಲೆದ್ದಿತು

೧ ನಾಳೆ ವೈವಾಹೋತ್ಸವವ ದೆ । ಬ್ಯಾಳಪಿದು ಪೊದಲೀ ವಸಂತದ
ಬಾಲಿಕೆಯರೋಕುಳಿಯ ಮಳೆಯಲಿ ಸಿಡಿಲು ಸುಳಿದುದೆನೆ
—(ಆದಿ. ಪ, ಪ್ರ ೩೪-೯) ಕರ್ನಾಟ ಭರತ ಕಥಾಮಂಜರಿ

೨೭ ಮಗನ ಮದುವೆ, ಬಕನ ಬಾರಿ

೧ ಇಂದೆನ್ನ ಮಗನ ಮದುವೆ ಬಂದುದು ಮತ್ತಿಂದೇ
ಈ ಬಾಣನ ಬಾರಿ —(೨೩-೧೨೮) ನೇಮಿ ಜಿನೇಶ ಸಂಗತಿ

೨ ನಾಂ ಮಾಣದೆ ಬಕನ ಬಾರಿಗೊರ್ವನ ನೀಪೆಂ
—(ಪಂಪ ಭಾರತ, ಆ : ೩-೨೫ ಗದ್ಯ)

೨೮ ಆಗೋದೆಲ್ಲ ಒಳ್ಳೆಯದಕ್ಕೆ

೧ ಆದದ್ದೆಲ್ಲ ಒಳಿತೇ ಆಯಿತು
—(೧-೯೫) ಪುರಂದ-ದಾ, ಕೀರ್ತನೆಗಳು

೨೯ ತಬ್ಬಲಿ ತಲೆ ಬೋಳಿಸಿಕೊಂಡಾಗ ಆಲಿಕಲ್ಲು ಮಳೆ ಬಿತ್ತು

೧ ತರುವಲಿಯ ತಲೆಯ ಕಿರೀಟಮನಾಲಿಕಲ್ಲ
ಮುಟಿಕೊಂಡುದೆಂಬಂತೆ —(೧–೧೫೭ ಗದ್ಯ) ಧರ್ಮಾಮೃತ

೩೦ ತಾಯಿಯ ಹಾಲೇ ವಿಷವಾದಂತೆ

೧ ದುಗ್ಧಂ ವಿಷಮಾದೊಡೇನನೆಂದ ಪೆನ್
—(೪–೧೩೭) ಗಿರಿಜಾ ಕಲ್ಯಾಣ

೩೧ ದೇವರನ್ನು ನೋಡೋಕೆ ಹೋದರೆ ದೇವಸ್ಥಾನ ಹರಿದು ಬಿತ್ತು

೧ ಪೊಡಮಡಲು ದೇಗುಲಂ ಬಿರ್ದುದು
—(೧–೨೩) ಸಿದ್ಧರಾಮ ಚಾರಿತ್ರ

೨ ಪೊಡೆವಡಲ್ ಪೋಗೆ ದೇಗುಲಂ ಮೇಲ್ಕೆಡೆದುದು
—(೪–೫೩ ವ) ಪಾರ್ಶ್ವನಾಥ ಪುರಾಣಂ

೩ ಪೊಡಮಡಲು ಹಾ ಮೇಲೆ ದೇಗುಲ ಕೆಡೆದವೊಲಾಯ್ತು !
—(೫–೧೯) ಮಹಾಭಾರತಂ

೪ ಶರಣೆಂದು ಹೊಕ್ಕರ ಮೇಲೆ ದೇಗುಲ ಬಿದ್ದ ಪರಿ
—(ಲಕ್ಷ್ಮೀಮತಿ ಯುದ್ವಾಹ ಸಂಧಿ–೬೦) ಭರತೇಶ ವೈಭವಂ

೫ ಶೂಲಿಗೆರಗೆ ಶಿವಾಲ್ಯ ಭಕ್ತನ ಮೇಲೆ ಬಿದ್ದಂತಾಯ್ತು !
—(೨೯–೪೩) ಕೌಶಿಕ ರಾಮಾಯಣ

೩೨ ಮುಟ್ಟಿದ್ದೆಲ್ಲ ಮಣ್ಣು

೧ ಕರ್ಮಮುಳ್ಳಂಗೆ ನೇಣಪಿಡಿದೊಡಂ ಪಾವಾಗಿ ತಿಂಗುಂ
ಪೊನ್ನಂ ಪಿಡಿದೊಡಂ ಮಣ್ಣಾಗಿರ್ಕುಂ
—(೧೩–೮೩ ಗದ್ಯ) ಧರ್ಮಾಮೃತ

೨ ಮುಟ್ಟಿದ ನೆಲ ಮುನಿವುದು,
ಪೊನ್ನು ಹಿಡಿದರೆ ಒಕ್ಕಟ್ಟಿ ಬಯಲಾವುದು

೩೩ ಹಾಸಿಗೆ ಅಂದುಕೊಂಡದ್ದೆಲ್ಲ ಹಾವಾಗಿ ಹರಿಯಿತು

ಹೋಲಿಸಿ : ಹುತ್ತು ಪನ್ನಗವಾಗಿ ಹರಿವುದು ದೈವಹೀನರಿಗೆ
—(೩೦–೨೦) ಕೌಶಿಕ ರಾಮಾಯಣ

೩೪ ದುಃಖದ ಮೇಲೆ ಸುಖ, ಸುಖದ ಮೇಲೆ ದುಃಖ

೧ ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಮ್ ।
ನನಿತ್ಯಂ ಲಭತೇ ದುಃಖಂ ನನಿತ್ಯಂ ಲಭತೇ ಸುಖಮ್ ॥
—(ಪು, ೯೭) ವಡ್ಡಾರಾಧನೆ

೩೫ ರಾತ್ರಿ ಮುಗಿದ ಕೂಡಲೆ ಹಗಲು, ಕಷ್ಟ ಕಳೆದ ಕೂಡಲೆ ಸುಖ

೧ ಇರುಳು ಕಳೆವ ಮೇಲೆ ಹಗಲು ಬರುವುದು
—(ಹಾ ಹುತ್ತ, ೫೪) ಪರಿಪತ್ತಿನ ನಿಘಂಟು

೨ ಸಾಜಂ ಸುಖದುಃಖಂಗಳ್ ಪಗಲಿರುಳಂತೆ ವೋಲ್
ಲೋಕದೊಳ್ ಪರಿವರ್ತಿಸಿರ್ಕುಂ —(ಪು. ೬–೪೦,
೮–೯ನೆಯ ಸಾಲುಗಳು) ಶ್ರೀರಾಮಾಶ್ವಮೇಧಂ

೩ ಸುಖ ದುಃಖವಿಂರದೆ ಪಗಲಿರುಳಂತೆ ಸಹಜಮಿದು
ಪುಟ್ಟಿದರ್ಗೆ —(೪–೩೫) ಶ್ರೀರಾಮ ಪಟ್ಟಾಭಿಷೇಕಂ

೩೬ ವಿಪತ್ತಿನಲ್ಲಿ ಧೈರ್ಯಗೊಂಡವನೇ ಜಾಣ

೧ ಅಡಸಿದಾಪತ್ತಿನಲಿ ಧೈರ್ಯವ ಹಿಡಿವುದೇ ಸುಪ್ರೌಢಿ
—(ದ್ರೋ. ಪ. ೭–೨೩) ಕರ್ನಾಟ ಭರತ ಕಥಾ ಮಂಜರಿ

೨ ಹೋದ ಕಾರ್ಯದೊಳಲಘು ಧೈರ್ಯವೆ ಮುಖ್ಯ
—(೧೬–೧೧೦) ಮಹಾಭಾರತಂ

೩ ಕಷ್ಟದೆಸೆಯೊಳು ಧೈರ್ಯ ಬಿಟ್ಟು ನೀ ಕೆಡಬೇಡ
—(ಕನಕದಾಸರ ಕೀ).

೪ ಆಪತ್ತಿನೊಳು ಧೈರ್ಯ ಕುಂದದಿರಬೇಕು
—(೧೩–೪೫) ಗುರುರಾಜ ಚಾರಿತ್ರ

೫ ಆಪತ್ತಿನ ಕಾಲದಲ್ಲಿ ಬಗೆಗುಂದದಿರೈ
—(ಸಿದ್ಧ ನೀತಿ)

೬ ಆಪತ್ತಿನೊಳು ಧೈರ್ಯವಭ್ಯುದಯಂದಿ ಕ್ಷಮೆ
—(೧೨) ರಂಗಧಾಮ ನೀತಿ ಸಾಂಗತ್ಯ

೭ ವಿಷುರಃ ಬಂದಡಸಿರಲು ಧೈರ್ಯಂಗೆಡುವರೆ ?
—(೨೯-೨೭) ಕೌಶಿಕ ರಾಮಾಯಣ

೮ ಅನಸಿದಾಪತ್ತಿನಲಿ ಧೈರ್ಯಗುಂದಲ್ ಕಾರ್ಯ ಕೆಡುವುದು
(ಅಯೋ, ಕಾಂ, ೧೯-೯) ಶ್ರೀಮದ್ರಾಮಾಯಣಂ

೯ ವಿಪದಿ ಧೈರ್ಯಮಥಾಭ್ಯುದಯೇ ಕ್ಷಮಾ
—(೮) ಮುದ್ರಾಮಂಜೂಷ

೩೭ ಚಿನ್ನ ಪುಟಕ್ಕೆ ಹಾಕಿದ ಹಾಗೆ

೧ ಕನಕಂ ಬಿಟ್ಟಿಂಗೀಗಮ ದೆಸಿತನಿತನೆ ನಿರ್ಮಳಿನ ವೃತಿಯಂ
ತಾಳ್ದುವರ್ಪೋಲ್ —(೧೩೨-೧೬) ಪಾರ್ಶ್ವನಾಥ ಪುರಾಣಂ

೨ ಪುಟವ ಸಿಕ್ಕಿದ ಮಿಸುನಿ —(೧೦-೨) ಪ್ರಭುಲಿಂಗ ಲೀಲೆ

೩೮ ಜೀಸುವ ದೊಣ್ಣೆಗೆ ತಲೆ ತಪ್ಪಿಸಿಕೊಂಡರೆ ಸಾವಿರ ವರ್ಷ ಆಯುಸ್ಸು

೧ ಜೀಸುವ ದೊಣ್ಣೆಗೆ ತಲೆಯು ತಪ್ಪಿಸೆ_ಸಾಸಿರಾಯುಷವೆನಿಪ್ಪುದು
—(ಕೀ, ಕಂ. ಭಾ. ೩)

೩೯ ಘಟ್ಟ (ಸಮುದ್ರ)ದ ಉಪ್ಪು, ಬೆಟ್ಟ (ಘಟ್ಟ)ದ (ಕಾಡಿನ) ನೆಲ್ಲಿಕಾಯಿ

೧ ಬೆಟ್ಟದ ನೆಲ್ಲಿಕಾಯಿ ಸಮುದ್ರದೊಳಗಣ ಉಪ್ಪು,
ಎತ್ತಣಿಂದೆತ್ತಣ ಸಂಬಂಧವಯ್ಯ —ಪ್ರಭುದೇವರ ವಚನಗಳು

೨ ಗಟ್ಟದುಪ್ಪು ಬೆಟ್ಟದ ನೆಲ್ಲಿಕಾಯಿ
—(ಸಂ ೪೨ : ೪೫) ಮೋಹನ ತರಂಗಿಣಿ

೪೦ ತಾನೊಂದು ಎಣಿಸಿದರೆ ದೈವವೊಂದು ಎಣಿಸಿ (ನೆನೆಯಿ)ತು

೧ ನೀನೊಂದಂ ಬಗೆದಿರೆ ತಾನೊಂದಂ ಬಗೆದತ್ತು
—(೭–೪) ಸಾಹಸಭೀಮವಿಜಯ

೨ ಆನೊಂದು ಬಗೆಯಲ್ ಬಿದಿ ತಾನೊಂದು ಬಗೆದು
ವಾರ್ಧಿಗರ್ದಿದುದು —(೧೦–೨೯) ಧರ್ಮಾಮೃತ

೩ ಒಂದ ಮಾಡಹೋದಲ್ಲಿ ಮತ್ತೊಂದಾಯಿತ್ತೆಂಬ ಮಾತು
ದಿಟವಾಯಿತ್ತು (೧೦೬೪) —ಪ್ರಭುದೇವರ ವಚನಗಳು

೪ ಆನೊಂದಂ ನೆನೆದರೆ ತಾನೊಂದಾಯಿತ್ತು
—ಯಶೋಧರಕಾವ್ಯಂ

೫ ಆನೊಂದಂ ನೆಗೆಟ್ದಿಟ್ಟಿರೆ, ತಾನೊಂದಂ ನೆಗಟ್ದಿಳ್
—(೧೨–೧೧೭) ಕುಸುಮಾವಳಿ

೬ ಒಂದುವಂ ನೆನೆಯಲ್ಕೆ ತಾಂ ಬೇಱೊಂದು ಘಟಿಯಿಸಿತು
—(೩೫–೨೧) ಬಸವಪುರಾಣ

೭ ತಾನೊಂದ ನೆನೆದರೆ ದೈವಗತಿ ಬೇರೊಂದ ನೆನೆದುದು
—(ಆ.ಪ. ೮–೮೭) ಕರ್ನಾಟ ಭರತ ಕಥಾಮಂಜರಿ

೮ ಆನೊಂದ ನೆನೆದರೆ ದೈವತಾ ಬೇಱೊಂದ ನೆನೆದುದು !
(೨–೨–೩೪) ತೊರವೆ ರಾಮಾಯಣ

೯ ನಾನೊಂದೆಣಿಕೆ ಮಾಡಿದೊಡೆನ್ನ ದುಷ್ಕೃತ ತಾನೊಂದೆಣಿಸಿದುದು
—(೩–೫೨) ನೇಮಿಜಿ ನೇಶ ಸಂಗತಿ

೧೦ ನಾನೊಂದ ನೆನೆದರೆ ತಾನೊಂದ ನೆನೆವುದು
—(೧–೧೪) ನೇಮಿ ಜಿನೇಶ ಸಂಗತಿ

೧೧ ನಾವೊಂದ ಮಾಡೆ ತಾನೊಂದಾದುದು
—(೧೯–೧೭೧) ನೇಮಿ ಜಿನೇಶ ಸಂಗತಿ

೧೨ ತಾನೊಂದ ನೆನೆದರೆ ವಿಧಿಯೊಂದ ನೆನೆವುದು
—(೭೧–೮೭) ಭರತೇಶವೈಭವ

೧೩ ಒಂದ ನಾ ನೆನೆಯಲ್ಕೆ ವಿಧಿ ಮತ್ತೊಂದ ನೆನೆದಂತಾಯ್ತು
—(೨೯-೧೯) ಕೌಶಿಕ ರಾಮಾಯಣ

೧೪ ಒಂದ ಮಾಡಿವಡೊಂದು ಸಂದುದು
(೨೫-೩೫) ಕೌಶಿಕ ರಾಮಾಯಣ

೧೫ ಮನುಜರ ಯತ್ನದಿಂದ ಲೇನಹುದು ? ದೈವ ಅನುಕೂಲವಾದ
ಕಾರ್ಯವು ನೆನೆದಂತೆ ಅಹುದು (೨-೩೮) —ಚಂದ್ರಹಾಸನ ಕಥೆ

೧೬ ದೇವರಿಚ್ಛೆಯನಾರ್ ಮೀಱಲಾರ್ಪರ್
—(೮-ಪು ೩೧) ಅದ್ಭುತರಾಮಾಯಣಂ

೧೭ ದೈವಸಂಕಲ್ಪವನಾರ್ ಮೀಱ್ವರ್
—(೮-ಪು ೧೨) ಅಧ್ಭುತ ರಾಮಾಯಣಂ

೧೮ ಅನ್ಯಥಾ ಚಿಂತಿತಂ ಕಾರ್ಯಂ ದೈವಮನ್ಯತ್ರ ಚಿಂತಯೇತ್
(ಪ್ರಕರಣ-೧೫) ರಾಯಯ್ಯೂರು ವಿಜಯಂ

೧೯ ತಾನೊಂದ ಬಗೆವರೆ ದೈವವೊಂದು ಬಗೆಯಿತು
(ಪ್ರ-೧೫) ರಾಯಯ್ಯೂರು ವಿಜಯಂ

೨೦ ತನ್ನವಶವೇ ಈಶ್ವರಾಜ್ಞೆಯ ಮೀರಿ ನಡೆವುದಕೆ

೪೧ ಅಂಬಲಿಯ (ಸಿಂಬಳದ)ಲ್ಲಿ ಬಿದ್ದ ನೊಣದ ಹಾಗೆ

ಹೋಲಿಸಿ : ಜೇನಿನೊಳಗೆ ಬಿದ್ದ ನೊಣದಂತೆ
—ಶ್ರೀ ವ್ಯಾಸರಾಯಸ್ವಾಮಿಗಳವರ ಕೃತಿಗಳು

೪೨ ತಾವರೆ ಎಲೆ ಮೇಲಿನ ನೀರಿನಂತೆ

೧ ನೀರೊಳಗಿರ್ದುಂ ಪೊರ್ದದು ನೀರಂ ನೀರೇಜಂ
—(೩-೧೨) ರಾಮಚಂದ್ರಚರಿತ ಪುರಾಣಂ

೨ ತಾವರೆಯ ಜಲದಂತೆ ಪ್ರೇಮವಿರಿಸಿ ಭವದಲ್ಲಿ
—(ಪುರಂದ. ಕೀ.)

೪೩ ಸಂಸಾರವೆಂಬುದು ಸಾಗರ, ಈಸಬಲ್ಲದವನಿಗೆ ಎದೆಯುದ್ದ

೧ ಸಂಸಾರವೆಂಬೂದು ಸಾಗರದ ಹೊಳೆಯುವ್ವ
ಈಸಬಲ್ಲವನ ಎದೆಯುದ್ದ-ಗಿಳಿರಾಮ
ಓದಬಲ್ಲವಗೆ ಕೈಲಾಸ

೨ ಸಂಸಾರ ಸಾಗರದ ತೆರೆಕೊಬ್ಬಿ ಮುಖದ
ಮೇಲೆ ಅಲೆವುತ್ತಿದ್ದುದೇ ? ಸಂಸಾರ
ಸಾಗರ ಉರದುದ್ದವೇ ಹೇಳಾ?
—(೩೨) ಬಸವೇಶ್ವರ ವಚನಗಳು

೩ ಈಸಬೇಕು ಇದ್ದು ಜೈಸಬೇಕು —(೧–೧೨) ಪುರಂದ. ಕೀ

೪೪ ತೆರೆ ತೆಗೆದು ಮೀಯೋದುಂಟೆ ?

೧ ಸಮುದ್ರದೊಳ್ ಮೀಯಲೆಂದು ಪೋಪಾತಂ
ತೆರೆಯಡಂಗಿದಾಗಳ್ ಮಾವೆನೆಂದಿರ್ದೊಡಂ

ಸಂಸಾರದೊಳಗಿರ್ದಾತ ನಾಪತ್ತಿಲ್ಲದೆ ಪದುಳ ಮಾಗಿರ್ದಾಗಳ್
ಧರ್ಮಂ ಗೆಯ್ವೆ

ನೆಂದಿರ್ದೊಡಂ ಆತಂಗೆ ಮಾವುದಿಲ್ಲ ಮಾತಂಗೆ ಧರ್ಮಂ
ಗೆಯ್ವುದಿಲ್ಲಂ —(೫–೨೨ ವ; ಪು ೮೫) ಜೀವ ಸಂಬೋಧನಂ

೪೫ ಮರಹುಟ್ಟಿ ಮರ ಒರಗಿದಂತೆ

೧ ಮರ ಹುಟ್ಟಿ ಮರ ಬೀಳ್ವ ತೆರದಿ ಸಾಯುವ ಮೂಢ ನರನೆ
ಕನಿಷ್ಠನೆಂದೆನಿಪನು —(೫-೨-೧) ಕೈವಲ್ಯ ಕಲ್ಪವಲ್ಲರಿ

೪೬ ಗಾಳಿಗೊಡ್ಡಿದ ಸೊಡರು

೧ ಗಾಳಿಗೊಡ್ಡಿದ ಸೊಡರ್ (ಅಪ್ಪ, ಆಶ್ವಾ : ೧೦೧ ವ)
ವಿಕ್ರಮಾರ್ಜುನ ವಿಜಯ

೨ ಗಾಳಿಗೊಡ್ಡಿದ ದೀಪಾಂಕುರದಂತೆ
—(೪–೧೩) ಕರ್ಣಾಟಕ ಕಾದಂಬರಿ

೩ ಗಾಳಿಗೊಡ್ಡಿದ ಸೊಡರ್
—ರಾಮಾಯಣ, ಚಂಪೂ

೪ ಸಂಸಾರವೆಂಬುದು ಗಾಳಿಯ ಸೊಡರು
—(೭೩) ಬಸವಣ್ಣನವರ ವಚನಗಳ

೫ ಕಾಯವೆ ಬಯಲ ಸೊಡರ್
—(೫-೩೩) ಶಾಂತಿನಾಥ ಪುರಾ

೬ ಘಾಳಿಗೊಡ್ಡಿದ ಸೊಡರು
—(೨-೨೮) ಜಲಾವತಿ, ಕುಮಾರರಾಮ,

೭ ಗಾಳಿಗಿಟ್ಟ ಸೊಡರಂತೆ —(೪-೨೪) ಸಿಂಗಿರಾಜ ಪುರಾ

೮ ಗಾಳಿಗಿಕ್ಕಿದ ದೀಪ ನಾಳೆ ಬದುಕಿಲ್ಲ
—(೨-೧೫೮) ಪುರಂದರದಾಸರ ಕೀರ್ತನೆಗ

೯ ಗಾಳಿಯುಲಿಗೊಡ್ಡಿದ ದೀಪ !
—(೧೨-೩೧) (೧೮-೨೭) ಕಂಠೀರವ ನರಸರಾಜ ವಿಜಯ

೧೦ ಮಾರುತಂಗಿದಿರಾದ ದೀಪಿಕೆಯಂತೆ
— ಶಂಕರ ದಾಸಿಮಯ್ಯ ಪುರಾ

೧೧ ಗಾಳಿಗೊಡ್ಡಿದ ಸೊಡರ ವರಿ
—(೩೮ : ೮) ತೊರವೆ ರಾಮಾಯ

ಟಿಪ್ಪಣಿ : ಆದಿ ಪಂಪನು ಒಬ್ಬ ಮಾತ್ರ 'ಅಗ್ನಿಗ ಮತ್ತೆ
ಸ್ಥೈರ್ಯ, ಧೈರ್ಯದ ಬಲವಿಂಗಳ್ಕೆ...' ಎಂದು ಹೇ
ಹಾಗ 'ಚಂಚಲ' ಎಂಬ ಅರ್ಥದಲ್ಲಿ 'ಗಾಳಿಗೊಡ್ಡಿ
ಸೊಡರ್' ಎಂದು ಹೇಳಿದ್ದಾನೆ. ಉಳಿದ ಕವಿಗ
ಈ ಗಾದೆಯನ್ನು 'ದೀಪ ಅಶಾಶ್ವತ' ಎಂಬರ್ಥ
ಬಳಸಿದ್ದಾರೆ

೧೨ ಎಲ್ಲವನ್ನೂ ಅರಿಯಬಹುದು, ತನ್ನನ್ನು ಅರಿಯಲು ಕಷ್ಟ

೧ ಎಲ್ಲ ಎಲ್ಲವನರಿಯಬಹುದು, ತನ್ನನರಿಯಬಾರದು
—ಪ್ರಭುದೇವರ ವಚನ

೪೮ ನಾಯಿಯ ತಲೆ ಮೇಲಿನ ಬುತ್ತಿ ಹಾಗೆ

೧ ನಾಯ ತಲೆಬೋನವನು ಬುತ್ತಿ ಸ್ವಭಾವ ಕೆಡಬೇಡಾ
— (ಉ.ಪ. ೩-೧೨೯) ಕರ್ನಾಟಕ ಭಾರತ ಕಥಾಮಂಜರಿ

೪೯ ನೀರ ಮೇಲಿನ ಗುಳ್ಳೆ ಹಾಗೆ

೧ ನೀರ ಮೇಲಿನ ಗುಳ್ಳೆ ಸಂಸಾರ ಹ್ಯಾಗೆ
—(೨೯೪) ಹ.ಕೀ.ತ, ಕೀ.

೨ ನೀರ ಮೇಲಿನ ಗುಳ್ಳೆ ನಿಜವಲ್ಲ ಹರಿಯೇ
—(೨೯೫) ಹ.ಕಿ.ತ, ಕೀ.

೩ ನೀರ ಮೇಲಣ ಗುಳ್ಳೆ —(೭೫) ಕನಕದಾಸರ ಕೃತಿಗಳು

೪ ಗುಳ್ಳೆಯಂದದ ದೇಹ ನೆಚ್ಚಿ ನೀ ಕೆಡಬೇಡ, ಉಳ್ಳವರೆ ನುಡಿದರೆ
ಹುರುಳಿಲ್ಲ ಮನವೆ (೫೦) —ಶ್ರೀ ವಿಜಯದಾಸರ ಕೃತಿಗಳು

೫೦ ಮನುಷ್ಯ ಒಂದು ಹುಟ್ಟು ಅಳ್ಳಾಸ್ತ್ರೀ ?

ಹೋಲಿಕೆ : ಮಾನಸರ್ಗೆ ನಿನ್ನಿರ್ದು ದರ್ಶನಮಂ ಬಿಟ್ಟವರೇ
— (೧೨-೭೬) ವಿಕ್ರಮಾರ್ಜುನ ವಿಜಯಂ

೫೧ ಅನ್ನದ ಋಣ, ನೀರಿನ ಋಣ ಹರಿದ ಮೇಲೆ ಈ ಲೋಕದಿಂದ ನಿವೃತ್ತಿ

೧ ಎಗ್ಗ ಬೆಗ್ಗಯ ರಿಣವು । ಅನ್ನ ವಸ್ತ್ರದ ರಿಣವು ।
ಹೊನ್ನು ಹೆಣ್ಣಿನಾ–ರಿಣವು ತೀರಿದ ಕ್ಷಣದಿ
ಮಣ್ಣು ಪಾಲಿಂದ ನರನಿಲ್ಲ —(ಪ. ೩೯೫) ಸರ್ವ,

೫೨ ಈವತ್ತಿನ ಸಾವು ನಾಳೆಗೆ

ಹೋಲಿಕೆ : ಸಾವು ಮಾನ್ಯಮೆ, ನಾಳೆ ಸಾವುದಿಲ್ಲವೆ ?
—(೨೮-೯೮) ನಾಗಕುಮಾರ ಚರಿತಂ

೫೩ ನೋಯಿನ ಕಾಲ ತಪ್ಪಿದರೂ ಸಾವಿನ ಕಾಲ ತಪ್ಪದು

ಹೋಲಿಕೆ : ಸಾವಂ ನೋವುಂ ಪುಣ್ಯಂ ತಪ್ಪಲಾರ್ಗಮರಿದು
—(೭-೭೦೦) ಧರ್ಮಾಮೃತ

೫೪ ಯಾವ ಕಾಲ ತಪ್ಪಿದರೂ ಸಾವ ಕಾಲ ತಪ್ಪದು

೧ ಆವ ಕಾಲವನಾದೊಡೆ ಮೀಟಿ ಬಪ್ಪುದು
ಸಾವ ಕಾಲವ ಮೀಟಿಬಹುದೆ ?
—(ಸಂ ೫) ಮೋಹನತರಂಗಿಣಿ

೨ ಆವಾವ ಕಾಲ ತಪ್ಪಿಃ ಕಾವ ಹರಿ ತಾನು ಸಾವ ಕಾಲವ ಮಾತ್ರ
ತಪ್ಪಿಸನೊ —(೧೨೯) ಶ್ರೀ ವಿಜಯದಾಸರ ಕೃತಿ

೫೫ ಸಾಯದ ಮನೆಯಲ್ಲಿ ಸಾಸವೆ ತರ ಹೇಳಿದ ಹಾಗೆ

೧ ಸತ್ತರಿಯದರ ಮನೆಯ ಪುಲ್ಲಂ ಕಿಚ್ಚುಮಂ ಕೊಂಡು ಬಪ್ಪುದು
—(೧೨-೧೯ವ) ಅಜಿತ ತೀರ್ಥಂಕರ ಪುರಾಣ ತಿಲಕಂ

೨ ಸಾಯದರ ಮನೆಯ ಪುಲ್ಲಂ ಕಿರ್ಚುಮಂ...

೩ ಎಂದುಂ ತಮ್ಮೊಕ್ಕಲೊಳಗಾರುಂ ಸಾಯದರ ಮನೆಯ ಪುಲ್ಲಂ
ಕಿರ್ಚುಮಂ ತರ್ಪುದು
...(೧-೩೮ವ : ಪು೨೧) ಜೀವ ಸಂಬೋಧನಂ

೫೬ ಮಾರಿಯಮ್ಮ ಅರಿಯದ ಕೋ(ಣವೇ)ಣೆಯೋ ?

೧ ಅಬ್ಬೆಯರಿಯದ ಕೋಣೆಯು ಮಾತೃಣನಾಡದೆಡೆಗಳು
ವೊಳವೆ ? —(೨-೪೫) ಲೀಲಾವತಿ ಪ್ರಬಂಧಂ

೫೭ ಮರಣಕ್ಕೆ ಮದ್ದಿಲ್ಲ, ಮರುಳಿಗೆ ನಿದ್ರೆಯಿಲ್ಲ

೧ ಮರಣಕ್ಕೆ ಮದ್ದುಗಳೆ ಇಲ್ಲ ಸರ್ವಜ್ಞ —(೧೦೭೯) ಸರ್ವ, ಪ,

೨ ಮರಣಕ್ಕೆ। ಮದ್ದುಗಳೇ ಇಲ್ಲ ಸರ್ವಜ್ಞ
—(೧೧೯೮) ಸರ್ವ. ಪ.

೫೮ ಯಾರಿಗೆ ಯಾರೂ ಇಲ್ಲ, ದಾರಿಗೆ ಸಂಗಾತಿಯಿಲ್ಲ

೧ ಆರಿಗಾರು ಇಲ್ಲ, ಕೆಟ್ಟವಗೆ ಕೆಳೆಯಿಲ್ಲ
—(೧–೨೫) ಬಸವೇಶ್ವರನ ವಚನಗಳು

೨ ಸಾವಿಂಗೆ ಸಂಗಡವಾರು ಇಲ್ಲ

—ಮೋಳಿಗೆ ಮಾರಯ್ಯನ ವಚನಗಳು

೩ ಸಾವಂಗೆ ಸಂಗಡವೇಕೆ ?

—(೧೦-೯೯ ವ) ಚಂದ್ರಪ್ರಭ ಪುರಾಣಂ

೪ ದಾರಿಗೆ ದಾರು ಮತ್ತಿಲ್ಲ —(೪೪೫) ಹ.ಕೀ.ತ. ಕೀ.

೫ ಒಂಟಿಯಾಗಿ ಪೋಗುವಾಗ ಸಂಗಡ ಒಬ್ಬರ ಕಾಣೆ

—(೩–೨) ಪುರಂದರದಾಸರ ಕೀರ್ತನೆಗಳ

೬ ಯಾರಿಗೆ ಯಾರುಂಟು ಎರವಿನ ಸಂಸಾರ

—(೪–೬೫) ಪುರಂದರದಾಸರ ಕೀರ್ತನೆಗಳು

೭ ಆರಿಗಾರಿಲ್ಲಾ —(ಕಿ,ಕಾಂ. ೮–೩೩) ಶ್ರೀಮದ್ರಾಮಾಯಣಂ

೮ ಯಾರಿಗೆ ಯಾರಿಲ್ಲ ದಾರಿಗೆ ಸಂಗಡಿಲ್ಲ
ನಾನಿದ್ದೆಂಬವರು ನನಗಿಲ್ಲ । ಗೋವಿಂದ
ನಿತ್ತಲ್ಲೆ ಬರಲಿ ಮರಣವು —(ದ.ಕ. ಜಿಲ್ಲೆ ಹಳ್ಳಿ ಹಾ)

೯ ಜೀವ್ಯಕ ಬಂದsರ ತಾಯ್ಯಾರ ತಂದ್ಯಾರ

ಮೈದನರ‍್ಯಾರ ಮಗನ್ಯಾರ–ಸಾವಾಗ
ಕೈಹಿಡಿದ ರಾಯ ಕಡೆಗಾದಾ —(೭೯) ಜಾನಪದ ಗೀತೆಗಳು,

೫೯ ಜೀವಕ್ಕೆ ಸಂಚಕಾರ ಸೀರೆಯು ಸೆರಗು

ಹೋಲಿಸಿ : ಸಾವಲ್ಲಿಗೆ ಕೈದುವಾಯ್ತು ನೆಯ್ದಲ ಕುಸುಮಂ

—(೨–೭೯) ಯಶೋಧರ ಕಾವ್ಯಂ

೬೦ ತಲೆ ಹೋಗುವುದಕ್ಕೆ ಕಾಲು ಹೊಣೆಯಾದ ಹಾಗೆ

೧ ತಲೆ ಪೋಪುದಕೆ ತನ್ನ ಕಾಲ್ಬೊಣೆ

—(೧೭–೫೨) ಜೈಮಿನಿ ಭಾರತ

೨ ತಲೆ ಪೋಪ ಬಳಿಗೆ ಕಾಲೆ ಹೊಣೆಕಾರ

—(ಸಂ. ೩೨–ಪ.೨) ಚೆನ್ನಬಸವ ಪುರಾಣ

೬೧ ನಾನು ಕೊಲ್ಲಲಿಲ್ಲ, ನೇಣು ಕೊಂದಿತು

೧ ನಾನು ಕೊಲ್ಲೆ, ನೇಣು ಕೊಂದಿತು
(ಹೀಗೆ ಒಬ್ಬ ಸೊನೆಗಾರ ಹೇಳಿದನಂತೆ)
—(೨-೫೭೩) ಬಸವೇಶ್ವರನ ವಚನಗಳು

೨ ಆನು ಕೊಲ್ಲೆನು, ನೇಣು ಕೊಂದಿತು
— (೫೬-೭೯) ಬಸವ ಪುರಾಣ

೬೨ ಆರಿ ಹೋಗುವ ದೀಪಕ್ಕೆ ಕಾಂತಿ ಹೆಚ್ಚು

೧ ನಂದುವ ಸೊಡರುದ್ದ ಮುರಿವ ಮಾಳ್ಕೆಯುಂ
—(೨೧-೧೩) ಪಾರ್ಶ್ವನಾಥ ಪುರಾಣಂ

೨ ಮರಣ ಕಾಲಕೆ ಸೊಬಗು ಮೆರೆದುದು
—(೬-೧೫) ಕೌಶಿಕ ರಾಮಾಯಣ

೬೩ ಅರ್ಥರೇಖೆ ಇದ್ದರೇನು, ಆಯುಷ್ಯರೇಖೆ ಇಲ್ಲದ ಮೇಲೆ

೧ ಅರ್ಥರೇಖೆ ಇದ್ದಲ್ಲಿ ಫಲವೇನು, ಆಯುಷ್ಯರೇಖೆ ಇಲ್ಲದನ್ನಕ್ಕ
— (೮೩೯) ಬಸವೇಶ್ವರನ ವಚನಗಳು

೬೪ ಆಯುಸ್ಸು ತೀರಿದಲ್ಲದೆ ಮರಣವಿಲ್ಲ

೧ ಆಯುಸ್ಸು ತೀರಿದಲ್ಲದೆ ಮರಣವಿಲ್ಲ.
ಭಾಷೆ ತೀರಿದಲ್ಲದೆ ದಾರಿದ್ರ್ಯವಿಲ್ಲ
—(೪೦೬) ಬಸವೇಶ್ವರನ ವಚನಗಳು

೬೫ ಯಮರಾಜ ಒಳ್ಳೊಳ್ಳೆಯವರನ್ನೇ ಆರಿಸಿಕೊಂಡು ಹೋಗ್ತಾನೆ

ಹೋಲಿಸಿ : ವನದೊಳಗತ್ಯುನ್ನತವೆನಿಸುವ ಮರಗಳನೆ
ಗಾಳಿ ಪೊಡೆವುದು ಸಾಜಂ
—(೧೨೩) ಕನ್ನಡ ನೀತಿ ಸಾರವು

೬೬ ಸಜ್ಜನರಿಗೆ ಅಲ್ಪಾಯುಸ್ಸು, ದುರ್ಜನರಿಗೆ ಚಿರಾಯುಸ್ಸು

೧ ಪಾಪೀ ಚಿರಾಯುಸ್ಸುಕೃತೀ ಗತಾಯುಃ —(ಸು)

೨ ಪಾತಕಿ ಹಲವು ದಿವಸ ಬಾಳುವನು, ಸುಕೃತಿಯೆ ಬೇಗಳಿವ
—(ಸಂ. ೧೬–೪೧) ಶಂಕರ ದಾಸಿಮಯ್ಯ ಪುರಾಣ

ಹೋಲಿಸಿ : ಕಲಿ ಸತ್ತು ಪಂದೆ ಬದುಕುವ
—(೧೫–೧೦೫) ರಾಮನಾಥ ಚರಿತೆ

ಕಲಿ ಸತ್ತ, ಹಂದೆ ಜೀವಿಸಿದ
—(೧೮-೧೨) ನಾಗಕುಮಾರ ಚರಿತಂ

೬೭ ಕೊಟ್ಟದೇವರು ಕಿತ್ತುಕೊಂಡು ಹೋದರೆ ಕುಟ್ಟಿಕೊಂಡು ಅಳಲೇಕೆ ?

೧ ಕೊಟ್ಟದೇವರು ಕೊಂಡು ಹೋದರೆ ಕುಟ್ಟಿಕೊಂಡು
ಅಳುವುದೇತಕೊ —(೪೩) ಹ.ಕೀ.ತ.ಕೀ.

೬೮ ಸತ್ತ ಸೊಸೆ ಅತ್ತರೆ ಬರ್ತಾಳ್ಯೇ ?

ಹೋಲಿಸಿ ; ೧ ಕಟುದವರ್ಗ ಬ್ವದಬ್ಪೊಡೆ ಅವರೇಟ್ವರೆ
—(೩–೫೩) ಆದಿಪುರಾಣಂ

೨ ಸತ್ತವರೇಟ್ವರೆ ?
—(೧-೧೨೦) ಕರ್ಣಾಟಕ ಕಾದಂಬರಿ

೩ ಸತ್ತವರನೆತ್ತುವರಾರ್
—(೧೦-೫೨) ಅಜಿತ ತೀರ್ಥಂಕರ ಪುರಾಣ ತಿಲಕಂ

೪ ಸತ್ತವರಿಗೆ ದುಃಖಿಸಲವರೇಳ್ವರೆ
—(ಸಂ. ೨೯–೧೭೧) ನೇಮಿ ಜಿನೇಶ ಸಂಗತಿ

೫ ಮರಣನೆಯ್ದಿದರ್ವರಳಿ ಬಹರೇ
—(೧೭-೬೫) ಸೌಂದರ ಪುರಾಣಂ

೬ ಸತ್ತಹೆಣನು ಎತ್ತಬಹುದೆ ?
—(೪೨-೨೫) ಸಿಂಗಿರಾಜ ಪುರಾಣಂ

೬೯ ಸತ್ತವರ ಜೊತೆಯಲ್ಲಿ ಸಾಯಲು ಬಂದೀತೆ ?

೧ ಸತ್ತವರೊಡನೆ ಸಾವವರುಂಟೆ ?
--(ಸಂ. ೧೭) ಮೋಹನ ತರಂಗಿಣಿ

೭೦ ಸತ್ತವರಿಗೆ ಅತ್ತರೆ ಅತ್ತವರು ಸಾಯುವುದಿಲ್ಲವೆ ?

೧ ಸತ್ತವರಿಗತ್ತು ಬೇಸತ್ತರವರುಳಿವರೇ? —(ಸರ್ವ. ಪ. ೧೩೯೩)

೭೧ ಹೆಣಕ್ಕೆ ಅಳ್ತಾರೊ, ಗುಣಕ್ಕೆ ಅಳ್ತಾರೊ ?

೧ ಗುಣವೊಂದ ಕಳುವರಲ್ಲದೆ,
ಹೆಣ ಕಳುವರೆ ಕಳಿದ ಬಳಿಕ ಸುಜನೋತ್ತಂಸಾ

೭೨ ಬಣ್ಣ ಬಂಗಾರಲ್ಲ, ಹೆಣಕ್ಕೆ ಶೃಂಗಾರಲ್ಲ

೧ ಶವಕೆ ಸಿಂಗರ ಮಾಳ್ಪಂತೆ
—(೧-೬೬) ನಾಗಕುಮಾರ ಚರಿತ

೨ ಹೆಣಕೆ ಮಾಡಿದನ ಶೃಂಗಾರದಂತೆ —ಕೈವಲ್ಯಕಲ್ಪವಲ್ಲರಿ

೭೩ ರಾಜರು ಸತ್ತರೂ ಹೆಣ, ನಾಯಿ ಸತ್ತರೂ ಹೆಣ

ಹೋಲಿಸಿ : ಅರಸನೊಡೆಯನು ದಂಡನಾಥನು ।
ಗುರು ಹಿರಿಯನುತ್ತಮನು ದೈವಾ
ಪರನು ಸಾಹಿತ್ಯನು ಸವಸ್ಯನು ಸತ್ಪುರುಷನೆಂದು
ಪರಿಪರಿಯ ನಾಮಂಗಳಲಹಂ
ಕರಿಸುವರು ಜೀವಾತ್ಮ ತೊಲಗಿದ
ಮರುದಿವಸ ಹೆಣನೆನ್ನರೇ ಹೇಳೆಂದನಾ ಮುನಿಪ
—(ಉದ್ಯೋ. ಸಂ. ೪-ಪ. ೨೬)
—ಕರ್ಣಾಟ ಭಾರತ ಕಥಾಮಂಜರಿ

೭೪ ಶರಣರ ಮಹಿಮೆ ಮರಣದಲ್ಲಿ ನೋಡು

೧ ಹರನ ಭಕ್ತರ ಮಹಿಮೆ ಮರಣದಲಿ ನೋಡೆಂದ
—ಕನ್ನಡ ಜಾ, ಪು. ೨೫

೭೫ ಶರಣು ಎಂದವನಿಗೆ ಮರಣವಿಲ್ಲ

೧ ಶರಣೆನೆ ಮರಣವಿಲ್ಲ —(೭-೯೩) ಗುರುರಾಜ ಚಾರಿತ್ರ

೨೬ ಸಾಯುವನಿಗೆ ಸಮುದ್ರ ಮೊಳಕಾಲುದ್ದ

೧ ಸಾವಂಗೆ ಸಮುದ್ರಂ ಮೊಟಕಾಲುದ್ದಂ
—(೧೪೩ ವ) ಪಂಚತಂತ್ರ

೨೭ ಕುರುಡರು ಆನೆ ನೋಡಿದ ಹಾಗೆ

೧ ಕುರುಡರುಗಳೊಂದಾಗಿ ಹೋಗುತ ।
ಕರಿಯು ಕರದಲಿ ಮುಟ್ಟಿ ಕಂಡಾ
ಪರಿಯಲೀ ಕರಿಯಿರವ ಬಣ್ಣಿಸುವಂತೆ
—(ಸಂ ೫-೨೯) ಲಘುಯೋಗ ವಾಸಿಷ್ಠ

೨ ಅಂಧಕರಜಾವರಾನೆ ಗಂಡಬೀಕೆ —(೨೬-೩೪) ಸಾಕ್ಷಭಾರತ

೩ ಕುರುಡರಾನೆಯ ಮುಟ್ಟಿ ಮನಕೆ ಬಂದಂದದಿಂದರಿವಂತೆ
—ಕೈವಲ್ಯ ಕಲ್ಪವಲ್ಲರಿ

೨೮ ದೇವರೊಬ್ಬ ವಿಗ್ರಹ ಹಲವು

೧ ದೇವನೊಬ್ಬ ನಾಮ ಹಲವು
—(೨-೬೧೫) ಬಸವೇಶ್ವರನ ವಚನಗಳು

೨೯ ೧ ತನ್ನ ತಾನರಿದೊಡೆ ತನ್ನರಿವೇ ಗುರು, ತಾನೇ ಲಿಂಗ
—(ಪು ೧೨೧) ಕಾಮೇಶ್ವರಲಿಂಗ, ಕವಿ ಚರಿತ್ರೆ ||

೩೦ ಬಂಗಾರ ಒಂದು, ಒಡವೆ ಹಲವು, ಹಸುವಿನ ಬಣ್ಣ ಬೇರೆಯಾದರೂ
ಹಾಲಿನ ಬಣ್ಣವು ಒಂದೇ, ಮತ ಹಲವಾದರೂ ದೇವರು ಒಬ್ಬನೇ

೧ ಮೃತ್ಪಿಂಡಮೇಕೋ ಬಹು ಭಾಂಡ ರೂಪಃ ಸುವರ್ಣಮೇಕಂ
ಬಹುಭೂಷಣಾತ್ಮ

ಗೋಕ್ಷೀರಮೇಕಂ ಬಹುಧೇನು ಜಾತಮೇಕಃ ಪರಾತ್ಮಾ
ಬಹುದೇಹವರ್ತೀ —(ಸಂ)

೨) ಅಂಧಕನ ಕೈವಿಡಿದು ಅಂಧಕ
ನಿಂದು ನಡೆದಂತೆ —(೩೬-೭೮) ಸ್ವ

೩) ಕುರುಡನಾದವ ಕಂಡಿದವರಿಂದ ಸುಲಿದ ಹಾದಿಯು
ದೊರೆವುದೇ ? —(ಅಯೋ. ಕಾಂ. ೯
ಶ್ರೀಮದ್ರಾಮಾ

೮೩ ಗುರುವಿನಲ್ಲಿ ಗುಣವಿಲ್ಲ, ಶಿಷ್ಯಗೆ ಬುದ್ಧಿಯಿಲ್ಲ, ಶಿಷ್ಯನಲ್ಲಿ ಭಕ್ತಿಯಿಲ್ಲ

ಹೋಲಿಕೆ : ೧ ಗುರುವಿನೊಳು ಗುಣವನುಂ ಲಿಂಗದೊಳು ಲಕ್ಷಣವ
ಅರಸಲಾಕ್ಷಣವೆ ನರಕಂ

೨ ಗುರುವಿನಲ್ಲಿ ಗುಣವನರಸಿದರೆ ಒಂದನೆಯ ಪಾತಕ,
ಲಿಂಗದಲ್ಲಿ ಕುಲವನರಸಿದರೆ ಎರಡನೆಯ ಪಾತಕ
—(೩೩) ಅಖಂಡೇಶ್ವರ

೮೪ ಪೇಚಿ ಗುರುವಿಗೆ ಕವುಂಗಾರ ಶಿಷ್ಯ

ಹೋಲಿಕೆ : ಅನಾಚಾರಿ ಗುರುವಿಗೆ ವ್ರತಗೇಡಿ ಶಿಷ್ಯನು
(೬-೩೦) ಪ್ರಭುದೇವರ ವ

೮೫ ಭಾವನೆಯಿದ್ದಂತೆ ಭವಿಷ್ಯ

೧ ಬಗೆದಂತೆ ಬಗೆಗೆ ಬಪ್ಪುದು ಬೀಜದೇ ?
—(ಅಷ್ಟ, ಪ. ೧೧೯) ಶಾಂತಿ

೨ ಯದ್ಭಾವಂ ತದ್ಭವತಿ —(೪೮ ಪ) ಪು

೮೬ ಮನದಂತೆ ಘನ

೧ ಮನದಂತೆ ಮಂಗಳ —(ಅಯೋ. ಕಾಂ.
ಶ್ರೀರಾಮಾಭ್ಯುದಯ ಕಥಾಕುಸುಮ

೮೭ ಮನಸ್ಸಿನಂತೆ ಮಹಾದೇವ, ನೆನೆದಂತೆ ಕಾರ್ಯ

೧ ಮನಸಿನಂತೆ ಮಹದೇವ ಎಂಬಂತೆ ಜನರಿಗೆ ಆರುವುದು
—(ಗುರುರಾಮ

[illegible]

[illegible] ?

—[illegible]

[illegible]

[illegible]

[illegible] ?

—[illegible]

[illegible] ?

—[illegible]

[illegible]

[illegible]

[illegible]

—[illegible]

ನುಡಿ ಪುರಾತನ, ನಡೆ ನೂತನ

[illegible]

—[illegible]

[illegible]

—[illegible]

೩ ನುಡಿ ಪುರಾತನ, ನಡೆ ನೂತನ

—[illegible]

ಮಾತಿನಲ್ಲಿ ಬೆಲ್ಲ, ಕರುಳಲ್ಲಿ ಕತ್ತರಿ

೧ [illegible]

—[illegible]

೨ [illegible]

—[illegible]

೩ ಏರೋಕನ್ನಡಿ ನಾಲಗೆ ಬೆನ್ನು —[illegible]

೪ [illegible] ಬೆನ್ನು ಏರೆ [illegible]
ಸಂಗ ಬೇಡ ಹೆ.ಶೀ.ತ., ಶೀ.[illegible]

೫ [illegible] ನಾಲಗೆ ಬೆನ್ನು
—[illegible]

೬ [illegible]
—(ಸಂ. ೧೬–೪೫) ಶಂಕರ ದಾಸಿಮಯ್ಯ [illegible]

೭ [illegible] ಕನ್ನಡಿ
—(೨೩) [illegible]

೮ [illegible]
—([illegible]) [illegible]

೯ [illegible]

ಹೋಲಿಕೆ: ೧ [illegible]
—(೧೧–೪೪) ಅನಂತನಾಥ [illegible]

೨ [illegible]
—(ಸ.ವ. ೧–೩೪) ಕರ್ನಾಟಕ ಭರತ ಕಥಾ[illegible]

೩ [illegible]
—(೪–೪–೫೨) ತೊರವೆ ರಾಮ[illegible]

೪ [illegible]
—(೨-೨೦೭) [illegible]

೫ ನುಡಿದಂತೆ ನಡೆಯಂತೆ
—(ಸಂ. ೭-೯೨) ಶಂಕರ ದಾಸಿಮಯ್ಯ

೧೦೩ ಹೊಟ್ಟೆಯಲ್ಲಿ ಒಂದು (ಒಳಗೊಂದು) ಹೊರಗೊಂದು

೧ ಹೃದಯದೊಳೊಂದು, ನಾಲಗೆಯೊಳೊಂದು
—(೬-೨೪) ಚಂದ್ರಪ್ರಭ ಪುರಾಣಂ

೨ ಕೃತಿಗಳ ಮಾರ್ಗವೊಂದು ನಡೆಯೊಂದು
—(೨೭-೧೪೭) ತ್ರಿಷಷ್ಟಿ ಪುರಾತನ ಚಾರಿತ್ರಂ

೩ ಒಡಲೊಳೊಂದಿರಿಸಿ ಮನದೊಳಗೊಂದ
ಮಾತಿನೊಳಗೊಡರಿಸಿ
—(ಸಂ. ೨೨-೪೪) ಸಿದ್ಧೇಶ್ವರ ಪುರಾಣ

೧೦೪ ಬುತ್ತಿಗಳ್ಳನಿಗೆ ಸತ್ಯ ಸದಾಚಾರವೆ ?

೧ ಬುತ್ತಿಗಳ್ಳರಿಗೇಕೆ ಸತ್ಯವ್ರತ ಸದಾಚಾರ
—(೧-೪೧) ಅನುಭವಾಮೃತ

೧೦೫ ಮಿಾನು ನೀರಿನಲ್ಲಿ ಮುಳುಗಿದರೆ ಸ್ನಾನದ ಫಲ ಬಂದೀತೆ ?
ಮಿಾನ ಸ್ನಾನಪರೊ —(ಅನುಭವಾಮೃತ ನೋಡಿ)

೧೦೬ ನಾವೂ ಮಾಡಿದೆವು ಏಕಾದಶಿ, ಬಡಿದು ತಿಂದೆವು ಸಲವತ್ತು ದ್ವಾಸಿ

೧ ಇಂದು ನಮಗೆ ಏಕಾದಶಿ ॥ ಪ ॥
ತಿಂದು ಬಂದೆವು ಸಲವತ್ತು ದೋಶಿ ॥ ಅ ॥ ಮ ॥
—ಪೇಂಗಸರ ಹಾಡು, ಪ್ರ. ೬೬ ಕರ್ನಾಟಕ ಸಂಸ್ಕೃತಿ

೧೦೭ ಹುತ್ತ ಬಡಿದರೆ ಹಾವು ಸಾಯುತ್ತೆ ?

೧ ಉಪ ಸಮಿಾಪೇ ಯೋ ವಾಸಃ ಜೀವಾತ್ಮ ಪರಮಾತ್ಮನೋಃ
ಉಪವಾಸಸ್ಸವಿಜ್ಞೇಯಃ ನತು ಕಾಯಸ ಶೋಷಣಂ ॥
ಕಾಯ ಶೋಷಣ ಮಾತ್ರೇಣ ಕಾ ತತ್ರಹ್ಯ ವಿವೇಕಿನಾಂ
ವಲ್ಮೀಕ ತಾಡನಾದೇವ ಹತಃ ಕಿನ್ನು ಮಹೋರಗಃ ॥ (ಸಂ)

೨ ಹುತ್ತವ ಬಡಿದರೆ ಹಾವು ಸಾಯಬಲ್ಲುದೇ ?
—(೫೪೮) ಬಸವೇಶ್ವರನ ವಚನಗಳ

೩ ಹುತ್ತವ ಬಡಿದರೆ ಸರ್ಪ ಸಾಯು ಬಲ್ಲುದೆ ?
—(೧೫೮) ಮೋಳಿಗೆಯ ಮಾರಯ್ಯನ ವಚನಗಳು

೪ ಹುತ್ತವ ಬಡಿದರೆ ಹಾವು ಸಾವುದೆ ?
(ತೃಸ್ಕಂ.ಸಂ. ೧೫–೩೯) ಕನ್ನಡ ಭಾಗವತ

೫ ಒಡಲ ದಂಡಿಸಿ ಮುಕ್ತಿ । ಪಡೆವೆನೆಂಬುವ ನೆಗ್ಗ
ಬಡಿಗೆಯಲಿ ಹುತ್ತ ಹೊಡೆಯ–ಲಡಗಿಹ ಸರ್ಪ
ಮಡಿದಿಹುದೆ ಹೇಳು ಸರ್ವಜ್ಞ —(ಸ)

೬ ಹುತ್ತ ಬಡಿದರೆ ಹಾವು ಸಾವುದೆ ?
ವ್ಯರ್ಥವಾದುಪವಾಸ ಮೊದಲಾ
ಗುತ್ತಲಿಹ ವ್ರತಗಳಲಿ ದೇಹವ ದಂಡಿಸಲು
— (ಸಂ ೧–೫೦) ಅನುಭವಾಮೃತ

೭ ಹುತ್ತದೊಳಗಣ ಹಾವು ಕೊಲ್ಲುವೆನೆಂದು ಮೇಲೆ
ಹುತ್ತವ ಬಡಿಯುವ ಮರುಳನಂತಾಯ್ತು
—ಅಖಂಡೇಶ್ವರ ವಚನ

೧೦೮ ಹುಲೀನ ಉಪವಾಸ ಇರಿಸಿದರೆ ಹುಲ್ಲು ಮೇದೀತೆ ?

ಹೋಲಿಸಿ : ವ್ಯಾಘ್ರಸ್ಯೋಪವಾಸೇನ ಪಾರಣಂ ಪಶುಮಾರಣಂ

೧೦೯ ಹುಣ್ಣಿಮೆ ಅಮಾಸೆ ಒಪ್ಪತ್ತು

೧ ಹುಣವಿ ಅಮಾಸಿಗೆ ಒಂದ್ಹೊತ್ತು ಮಾಡಃ ।
ಬೆಳ ಬೆಳತನಕ ಭೋಗವ ಮಾಡು
—(ಪು. ೨೯) ಕರ್ನಾಟಕ ಸಂಸ್ಕೃತಿ

೧೧೦ ದೇಹವೇ ದೇವಾಲಯ, ಜೀವವೇ ಶಿವಲಿಂಗ

೧ ದೇಹೋ ದೇವಾಲಯ ಪ್ರೋಕ್ತಃ ಜೀವೋದೇವಸ್ಸದಾಶಿವಃ
ತ್ಯಜೇದ ಜ್ಞಾನ ನಿರ್ಮಾಲ್ಯಂ ಸೋಽಹಂ ಭಾವೇನ
ಪೂಜಯೇತ್ —(ಸಂ)

೨ ತನುವೆ ಜಿನಾಲಯ ಮನವೆ ಸಿಂಹಾಸನ
ವನುಪಮಾತ್ಮನೆ ಜಿನನೆಂದು
ತನಗಾಗಿ ತನ್ನಿಂದ ತನ್ನ ತಾ ನೋಡುತಿ
ದ್ದನು ಸರ್ವ ಚಿಂತೆಯ ನೀಗಿ
—(ಸಂ ೧೧-೧೩೩) ಭರತೇಶ ವೈಭವ

೩ ದೇಹವೆಂಬ ದೇವಾಲಯದೊಳಗೆ ಜೀವನೆಂಬ ಈಶ್ವರನಣ್ಣ ।
ದೇಹವೆಂಬ ನಿರ್ಮಾಲ್ಯವ ಕಳೆಯಲು ಸೋಹಂ ಭಾವದಿ
ಪೂಜಿಗೊಂಬನ ॥ —ಕೀ.ಕಂ. ಭಾಗ-೩

೧೧೦ ಭಕ್ತಿ ಶಿವನ ಮೇಲೆ, ಚಿತ್ತ ಕೆರದ ಮೇಲೆ

ಹೋಲಿಸಿ : ಹಾಗವ ಕೆರಹ ಹೊರಗೆ ಕಳೆದು ದೇಗುಲಕ್ಕೆ ಹೋಗಿ
ನಮಸ್ಕಾರವ
ಮಾಡುವನಂತೆ, ತನ್ನ ಕೆರಹಿನ ಧ್ಯಾನವಲ್ಲದೆ
ದೇವರ ಧ್ಯಾನವಿಲ್ಲ —ಬಸವೇಶ್ವರನ ವಚನಗಳು

೧೧೧ ದೇವರ ಸತ್ಯಕ್ಕೆ ಕಡಿಮೆಯಾದರೂ ಕಂಚಿನ (ವಿಗ್ರಹದ) ಬೆಲೆಗೆ ಕಡಿಮೆಯಿಲ್ಲ

ಹೋಲಿಸಿ : ದೇವರೊಡೆದರು ಲೋಹಕ್ಕೆ ಮೋಸವಿಲ್ಲ
—(೫–೧೫–೩) ಕೈವಲ್ಯ ಕಲ್ಪವಲ್ಲರಿ

೧೧೨ ಗಂಗೆಗೆ ಹೋದರೂ ತಂಬಿಗೆ ಮೇಲೆ ಜ್ಞಾನ

೧ ಗಂಗೆಯೊಳ್ ಮುಳುಗುವಾಗ ತಂಬಿಗೆ ಮೇಲಿನ ಚಿಂತೆ
— ಹ.ಕೀ.ತ, ಕೀ–೪೯೧

೧೧೩ ಪಾಪ ಕ್ಷಯವಾಗಲೆಂದು ಕಾಶಿಗೆ ಹೋದರೆ ಕುಲಕ್ಷಯವಾಗಲೆಂದು
ಮೊಸಳೆ ಎಳಕೊಂಡು ಹೋಯಿತು

೧ ಪಾಪ ಕ್ಷಯಕೆಂದು ಗಂಗೆಯೊಳ್ಮಿಂದರೆ ಪಾಪಿಯ ಮೊಸಳೆ ತಿಂದಂತೆ
—(೮–೩೩) ಮೋಹನ ತರಂಗಿಣಿ

೧೧೪ ಆಳಿಲ ಭಕ್ತಿ ಮಳಲ ಸೇವೆ

೧ ಆಳಿಲ ಸೇವೆಯನೊಪ್ಪಿಕೊಂಡು ಶರಣನ ಸಲಹೊ
—(೧೬೪) ಕನಕದಾಸರ ಕೃತಿಗಳು

೧೧೫ ಭಕ್ತಿಯಿದ್ದರೆ ಮುಕ್ತಿ, ಭುಕ್ತಿಯಿದ್ದರೆ ಶಕ್ತಿ, ಭಕ್ತಿಯಿಲ್ಲದೆ ಮುಕ್ತಿಯಿಲ್ಲ

೧ ಭಾವಭಕ್ತಿಯು ಮುಕ್ತಿಕಾರಣ
ಭಕುತಿಯೇ ವರ ಮುಕುತಿ ಸಾಧನ —ಕನ್ನಡ ಭಾಗವತ

೨ ಭಕ್ತಿ ಮುಕ್ತಿಗೆ ಕಾರಣವು
—(ಅಯೋ.,ಕಾಂ. ೩-೧೮) ಶ್ರೀಮದ್ರಾಮಾಯಣಂ

೧೧೬ ಭಾವಿಸಿದರೆ ದೇವರು

೧ ಭಾವೇನ ದೇವಂ

೨ ಯಥಾ ಭಾವಃ ತಥಾ ದೇವಃ
—(೨೮೪–೭೪೬) ಸಿದ್ಧರಾಮೇಶ್ವರನ ವಚನಗಳು

೧೧೭ ಭಕ್ತನಿಗೊಂದು ಮಾತು, ಬಾಳೆಗೊಂದು ಗೊನೆ

೧ ಭಕ್ತಂಗೊಂದೇ ವಾಕ್ಯ, ಬಾಳೆಗೊಂದೇ ಫಲ

೧೧೮ ಲಕ್ಷ(ಕುಲ)ಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ (ಮುಕ್ತ)

೧ ಸಾವಿರಕ್ಕೊಬ್ಬ ಸತ್ಯ, ಲಕ್ಷಕ್ಕೊಬ್ಬ ಭಕ್ತ,
ಕೋಟಿಗೊಬ್ಬ ಶರಣ —ಚನ್ನಬಸವಣ್ಣನವರ ವಚನಗಳು

೧೧೯ ಸಂಕಟ ಬಂದರೆ ವೆಂಕಟರಮಣ, ಸುಖವಲ್ಲಿ ಸುಮ್ಮನೇ ಇರೋಣ

೧ ಎಡರಡಸಿವಲ್ಲಿ ಮೃಡ ನಿಮ್ಮನೆನೆವರು, ಎಡರಡಸಿದ ವಿಪತ್ತು
ಕಡೆಯಾಗಲೊಡನೆ, ಮೃಡ ನಿಮ್ಮನೆಡಹಿಯೂ ಕಾಣರು
—(೮೫) ದೇವರ ದಾಸಿಮಯ್ಯನ ವಚನಗಳು

೧೨೦ ಕೈಬಿಟ್ಟು ಹೋದದ್ದು ಕೃಷ್ಣಾರ್ಪಣ

೧ ಕೈ ಮೀರಿದ್ದೆಲ್ಲ ಕೃಷ್ಣಾರ್ಪಣ
—ಪುರಂದರದಾಸರ ಕೀರ್ತನೆಗಳ

೨ ಕೈವಿಕಾರಿ ಹೋದದ್ದೆ ಕೃಷ್ಣಾರ್ಪಣ
— (೨೫) ಶ್ರೀ ವಿಜಯದಾಸರ ಕೃತಿಗಳು

೧೨೧ ಪರೆ (ಉಜ್ಜಿದ) ಬಿಟ್ಟ ಹಾವಿನ ಹಾಗೆ

೧ ಪೆರೆ ಸುಲಿದ ಹಾವಿನಂತೆ — (೪–೩೯) ಶಾಂತಿ ಪುರಾಣ

೧೨೨ ಸಲ್ಲಿಯುನೊಲ್ಲ, ಧೋತ್ರವನೊಲ್ಲ, ಬೋನವನೊಲ್ಲ, ಕೆನೆ ಮೊಸರೊಲ್ಲ :
ಯಾಕೊಲ್ಲ ? ಇಲ್ಲದ್ದಕ್ಕೊಲ್ಲ

೧ ಸಲ್ಲ ಒಲ್ಲಿಯುನೊಲ್ಲ । ನೆಲ್ಲಕ್ಕಿ ಬೋನೊಲ್ಲ ।
ಅಲ್ಲವನು ಒಲ್ಲಿ–ಮೊಸರೊಲ್ಲ, ಯಾಕೊಲ್ಲ ?
ಇಲ್ಲದಕೆ ಒಲ್ಲ ! ಸರ್ವಜ್ಞ —(ಸರ್ವ, ಪ. ೧೩೮೧)

೧೨೩ ಪರನಿಂದೆ ಗೃಹಕ್ಷಯು, ಯತಿನಿಂದೆ ಕುಲಕ್ಷಯು

೧ ಯೋಗಿನಿಂದೆ ಕುಲಕ್ಷಯು — (೪೭-೧೮) ಸಿಂಗಿರಾಜ ಪುರಾಣ

೧೨೪ ಭೋಗಿಗೆ ಯೋಗಿ ಮರುಳು, ಯೋಗಿಗೆ ಭೋಗಿ ಮರುಳು

ಹೋಲಿಸಿ : ೧ ಲೋಕದ ಕಣ್ಣಿಗೆ ಶರಣರ ಚಾರಿತ್ರ್ಯ ಮರುಳಾಗಿ
ಕಾಣುವುದು —ಮಹಾದೇವಿಯಕ್ಕನ ವಚನಗಳು

೨ ಲೋಕಕ್ಕೆ ತಾ ಮರುಳು, ತನಗೆ ಲೋಕಂ ಮರುಳು
—ರೇವಣ ಸಿದ್ಧ ರಗಳೆ

೩ ಜ್ಞಾನಿಯ ನಡೆನುಡಿ ಅಜ್ಞಾನಿಗೆ ಸೊಗಸದು,
ಅಜ್ಞಾನಿಯ ನಡೆನುಡಿ ಜ್ಞಾನಿಗೆ ಸೊಗಸದು
—(೩೧೫) ಸ್ವತಂತ್ರ ಸಿದ್ಧಲಿಂಗೇಶ್ವರ ವಚನ

೪ ಮರುಳ ನಂತಿರೆ ಜಗಕೆ ತೋರನೆ ಪರಮ ತತ್ತ್ವ ಜ್ಞಾನಿ
—(ವಿ.ಪ; ಸಂ ೧೦–೧೬)
ಕರ್ಣಾಟ ಭಾರತ ಕಥಾ ಮಂಜರಿ

೫ ಲೋಕವೆಲ್ಲವನಿಗೆ ಹುಚ್ಚನಂತಿಹುದವ
ಲೋಕಕೆ ಹುಚ್ಚನಂತಿಹನು

—(ಸಂ ೬೯-೩೦) ಭರತೇಶ ವೈಭವ

೧೨೫ ಯತಿ(ಋಷಿ)ಗೆ ಕುಲವಿಲ್ಲ. ನದಿಗೆ ನೆಲೆಯಿಲ್ಲ........

೧ ಯೋಗಿಗೆ ಕುಲವಿಲ್ಲ, ಸಾಗರಕೆ ನೆಲೆಯಿಲ್ಲ

—ಸರ್ವ, ಪ. ೫೪೪

೨ ಯೋಗಿಗಂ ಕುಲವೆಂಬುದಿಲ್ಲ ಸರ್ವಜ್ಞ

—ಸರ್ವ ಪ. ೪೧೩

೧೨೬ ಬಕ ತಪಸ್ಸು ಮಾಡಿದ ಹಾಗೆ

೧ ಕೊಳನ ತಡಿಯಲ್ಲೊಂದು ಬಕ ಕುಳಿತಿದ್ದರೇನು
ಕಳಹಂಸ ನಾಗಬಲ್ಲುದೆ ?

—(ಬಸವೇಶ್ವರನ ವಚನಗಳು)

೨ ಬಜಿ಼ ಜಪಂಗಳನೆಯ್ದಣಿ ಸುತ್ತಮಾಪಗಾತಟದೊ
ಳೊಜಿಲ್ದುಮಿರ್ಪ ಬಕನಂತಿರೆ ಜಾನಿಸುತಿರ್ದಂ

—(ಆ ೨೫–೨೦)
ತ್ರಿಷಷ್ಟಿ ಪುರಾತನ ಚರಿತ್ರಂ

೩ ಬೆಳ್ಳಕ್ಕಿಯಂತೆ ಧ್ಯಾನ
ಮೀನದಾಸೆಯು ಬಕನ ಸ್ಥಿತಿ ಧ್ಯಾನವೇ ?

— ಪುರಂದರದಾಸರ ಕೀರ್ತನೆಗಳು

೪ ಧ್ಯಾನವನು ಬಕ ಮಾಡಲೇನು —(೧-೪೯) ಅನುಭವಾಮೃತ

೧೨೭ ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ

೧ ಉಂಡು ಉಪವಾಸಿಗಳು, ಬಳಸಿ ಬ್ರಹ್ಮಚಾರಿಗಳು

—(೧೩೩) ಆದಯ್ಯನ ವಚನಗಳು

೨ ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ

—(೫೫೪) ಪ್ರಭುದೇವರ ವಚನಗಳು

೩ ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ
—(೩.೫) ಮಡಿವಾಳ ಮಾಚಿದೇವನ ವಚನ

೪ ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ
—(ಮನ್ನಣೆ ಸಂಧಿ ೧೧೧) ಭರತೇಶ ವೈಭವ.

೫ ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ
—(೧೭-೧೩) ಪ್ರೌಢರಾಯನ ಕಾವ್ಯ

೧೨೮ ಆಸೆಯಿದ್ದ ಸಂನ್ಯಾಸಿ, ಮೀಸೆಯಿದ್ದ ಹೆಂಗಸು

೧ ಆಸೆ ಬಿಡದಿದ್ದವಗೆ ಸಂನ್ಯಾಸವೇಕೆ?
—(ಹ.ಕೀ.ತ, ಕೀ. ೨೨೫)

೧೨೯ ಬೆತ್ತಲೆ ಇರೋನಿಗೆ ಎತ್ತಲೂ ಭಯವಿಲ್ಲ

೧ ಬತ್ತಲೆ ಪೋಪಂಗೆ ಬಟ್ಟೆಯೊಳ್ ಭಯವುಂಟೆ?
—(ಉದ್ಯೋಗಸಾರ

೨ ಅರ್ತಿಗೆ ಬೆಲೆಯಿಲ್ಲ । ಕತ್ತೆಗೆ ಹೊಲೆಯಿಲ್ಲ
ಬತ್ತಲಿದ್ದವಗೆ-ಭಯವಿಲ್ಲ —(ಸರ್ವ, ಪ. ೪೭೯

೩ ತೊತ್ತಿನಲಿ ಗುಣವಿಲ್ಲ । ಕತ್ತೆಗಂ ಕೋಡಿಲ್ಲ ।
ಬತ್ತಲಿದ್ದವಗೆ-ಭಯವಿಲ್ಲ —(ಸರ್ವ, ಪ. ೧೩೨೪

೪ ಬತ್ತಲೆ ಪೋಪವನಿಗೆ ಚೋರರ ಭಯವೆತ್ತಣದು?
—(ಅನುಭವಮುದ್ರೆ

೧೩೦ ಮಂಡೆ ಬೋಳಾದರೆ ಮನವೂ ಬೋಳಾಯಿತೆ?

೧ ಮಂಡೆ ಬೋಳಾದರೇನು ಮನ ಬೋಳಾಯಿತೆ?
—(೩-೫೧) ಪುರಂದರದಾಸರ ಕೀರ್ತನೆಗ

೧೩೧ ಮಾತಿನ ಜ್ಞಾನ, ತೂತಾದ ಮಡಕೆ

೧ ಮಾತಿನಾ ಮಾಲೆಯುಂ । ತೂತಾದ ದುಡಕೆಯುಂ
ಹಾತೆಯುಂ, ಹುಲ್ಲು-ಸರವೆಯುಂ, ಇವು ನಾಲ್ಕು
ಏತಕ್ಕು ಬೇಡ! ಸರ್ವಜ್ಞ —(ಸರ್ವ. ವ. ೧೩೫೫)

೨ ಮಾತಿನಾ ಬೊಮ್ಮನೂ । ತೂತಿನಾ ದುಡಕೆಯುಂ ।
ಪಾತಕನ ನೆರೆಯು-ಇವು ಮೂರು ಲೋಕದೊಳ-
ಗೇತಕ್ಕು ಬೇಡ! ಸರ್ವಜ್ಞ —(ಸರ್ವ. ವ. ೬೬೫)

೧೩೨ ಮೊಲೆ ಮೇಲಿರ್ದ ಯೋಗಿಯುಂ ಶಿಲೆ ಮೇಲಿದ್ದ ಯೋಗಿಯುಂ ಒಂದೆ ?

೧ ಮೊಲೆಗಳ ಮೇಲಿರ್ದುದಂ ಪೆ । ರ್ಮಲೆಗಳ
ಮೇಲಿರ್ದರಧಿಕ ಗುಣಗಣಯುಕ್ತರ್ ।
ಮಲೆಗಳ ಮೇಲಿರ್ದುದಂ ಪೆ । ರ್ಮೊಲೆಗಳ
ಮೇಲಿರ್ದರಧಿಕ ದುಶ್ಚಾರಿತ್ರರ್
—(ಪ. ಆ. ೭೨), ಧರ್ಮಾಮೃತ

೨ ಶರಣರು ಮಲೆಯೊಳಗಿರ್ದಡೇನು, ಮೊಲೆಯೊಳ
ಗಿರ್ದಡೇನು ? ...ಚನ್ನಬಸವಣ್ಣನವರ ವಚನಗಳು

೩ ಮೊಲೆಯ ಮೇಲಿರ್ದ ಯೋಗಿಗಳುಂಟು, ಬೆಟ್ಟದ ಶಿಲೆಯ
ಮೇಲಿಹ ಮೋಹಿಯುಂಟು
—ರಾಜ್ಯಪಾಲನ ಸಂಧಿ-೨೮, ಭರತೇಶ ವೈಭವ

೧೩೩ ಅದ್ವೈತಿ ತಾನಾಗಿ ಯುದ್ಧ ಯಾರ ಜೊತೆಯಲ್ಲಿ ?

೧ ಅದ್ವಯಿಂತ ತಾನಾಗಿ । ಯುದ್ಧವಿನ್ಯಾರೊಡನೆ ?
—ಸರ್ವ, ವ. ೩೩೨

೧೩೪ ಅರಿತರೆ ಶರಣ, ಮರೆತರೆ ಮಾನವ

೧ ಅರಿತರೆ ಶರಣನು ಮರೆದರೆ ಮಾನವ
—(೭೭೨) ಬಸವೇಶ್ವರನ ವಚನಗಳು

೨ ಅರಿವಲ್ಲಿ ಶರಣ ಮರೆದಲ್ಲಿ ಮಾನವ —[illegible]

೧೪೬ ಹುಲಿಗೆ ಐದುಬಾಯಿ, ಅರಸನಿಗೆ ಆರುಬಾಯಿ

೧ ಅರಸುಗಳಿಗಾರುಬಾಯಿ —(೫-೧೦) ಸೌಂದರ ಪುರಾಣಂ

೨ ಅರಸಿಗಾಱುಬಾಯಿ —(೩೮-೫೭) ರಾಮನಾಥ ಚರಿತ

೩ ಅರಸುಗಳಿಗಾಱು ಬಾಯಿ —(೭-೨೬) ಚೇರಮ ಕಾವ್ಯಂ

೧೪೭ ಅರಸು ರಾಕ್ಷಸನಾದರೆ ಮಂತ್ರಿ ಹೆಬ್ಬುಲಿ

೧ ರಾಜಾ ರಾಕ್ಷಸ ರೂಪೇಣ ವ್ಯಾಘ್ರ ರೂಪೇಣ ಮಂತ್ರಿಣಃ
ಸೇವಕಾಶ್ಶ್ವಾನ ರೂಪೇಣ ಯಥಾ ರಾಜಾ ತಥಾ ಪ್ರಜಾಃ
—(ಸಂ)

೨ ಅರಸ ರಕ್ಕಸನಂತೆ। ವರ ಮಂತ್ರಿ ಹುಲಿಯಂತೆ
ಬರೆವಾತ ನಾಡ-ನರಿಯಂತೆ! ಪರಿವಾರ
ಗರಗಸದಂತೆ ! ಸರ್ವಜ್ಞ —ಸರ್ವ, (ಪ, ೭೦೫)

೩ ಹೋಲಿಸಿ : ಅರಸಂ ಮೂರ್ಖಂ ಸಚಿವರ್ ಸರಸ್ವತೀ
ದ್ರೋಹರ್
—(೩-೮೨-೧೪) ಶಬ್ದಮಣಿ ದರ್ಪಣಂ

೧೪೮ ಎಳೆಯೆಂಬ ರಾಯನಿಗೆ ತುಳಿಯೆಂಬ ಮಂತ್ರಿ

೧ ಎಳೆಯೆಂಬ ರಾಯನಿಗೆ ತುಳಿಯೆಂಬ ಮಂತ್ರಿಯೆಂದಿಳೆ
ಯಾಡುವ ಗಾದೆ
—(ತಾಂಡವ ವಿನಯ ಸಂಧಿ-೮೨) ಭರತೇಶ ವೈಭವ

೧೪೯ ಯಥಾ ರಾಜಾ ತಥಾ ಪ್ರಜಾ

೧ ರಾಜ್ಞಿ ಧರ್ಮಿಣಿ ಧರ್ಮಿಷ್ಟಾ ; ಪಾಪೇ ಪಾಪ ಪರಾಃ, ಸದಾ
ರಾಜಾನ ಮನುವರ್ತನ್ತೇ ಯಥಾ ರಾಜಾ ತಥಾ ಪ್ರಜಾಃ
—ಶ್ರೀ. ರಾ

೨ ಸ್ವಾಮಿಯೆಂತಂತೆ ಪರಿವಾರ —ಭರತೇಶ ವೈಭವ

೧೫೦ ರಾಜ ಕೆಟ್ಟರೆ ರಾಜ್ಯವೂ ಕೆಟ್ಟೀತು, ಅರಸ ಕೆಟ್ಟರೆ ಅರಮನೆಯೂ ಕೆಟ್ಟೀತು

೧ ನಾಡು ಕೆಟ್ಟೊಡೆ ದೇಶಪ್ರನಾಳ್ವರಸು ಕೆಡುಗುವರಸಿನ ಕತದಿಂ
ದೇಶ ಕೆಡುಗುಂ —(೧೬–೧೪) ಶಾಂತೀಶ್ವರಪುರಾಣಂ

೧೫೧ ಅರಸು ಮುನಿದರೆ ನಾಡೊಳಗಿರಬಾರದು

೧ ಅರಸು ಮುನಿದರೆ ನಾಡೊಳಗಿರಬಾರದಯ್ಯ
ಗಂಡ ಮುನಿದರೆ ಹೆಂಡತಿಯಾಗಿರಬಾರದಯ್ಯ
—(೮೮೭) ಬಸವೇಶ್ವರನ ವಚನಗಳು

೧೫೨ ನಾಡಿಗಿಬ್ಬರು ಅರಸರಾದರೆ ಕೇಡು ತಪ್ಪದು

೧ ರಾಜದ್ವಯಂ ರಾಷ್ಟ್ರ ನಿಪಾತ ಹೇತುಃ ಗುರುದ್ವಯಂ
ಶಿಷ್ಯ ನಿಪಾತ ಹೇತುಃ
ವೈದ್ಯದ್ವಯಂ ರೋಗಿ ನಿಪಾತ ಹೇತುಃ ದೇವದ್ವಯಂ
ಲೋಕ ನಿಪಾತ ಹೇತುಃ —(ಸಂ)

೨ ಅರಸಿನ ಮೇಲರಸಾದೊಡೆ ಮೊದಲಾಗೆ ನಾಡೆಲ್ಲಂ ಕೆಟ್ಟು
ಪಾಟಿಪ್ಪುದು (ಸ. ಆ–೩೯ ವ) ಧರ್ಮಾಮೃತ

೩ ಒಂದೊರೆಗೆರಡುಂಟೆ ಸುರಗಿ
—(೧೧–೨೧) ನಾಗಕುಮಾರ ಚರಿತಂ

೪ ಒಂದೊರೆಗೆರಡುಂಟೆ ಸುರಗಿ ಸಿಂಹಾಸನ,
ಒಂದೂರಿಗಿಬ್ಬರೊಡೆಯರೆ —(೪–೧೩೧) ಪದ್ಮಾವತೀ ಚರಿತೆ

೧೫೩ ದೊರೆತನ ಹೋದ ಮಾತ್ರಕ್ಕೆ ಶೌರ್ಯ ಹೋದೀತೆ ?

ಹೋಲಿಸಿ : ರಾಜ್ಯಸಿರಿ ತೊಲಗಿದರೆ ಪೂರ್ವಗುಣವಳಿವುದೇ ?
—(೧೧–೩೩) ಹರಿಶ್ಚಂದ್ರ ಕಾವ್ಯಂ

೧೫೪ ನಾಯಿಯನ್ನು ದಂಡಿಗೆ ಮೇಲೆ ಕೂರಿಸಿದರೆ ತಿಪ್ಪೆ ಕಂಡ ಕಡೆ ಇಳಿಬಿತ್ತು

೧ ಅಂದಣವನೇರಿದ ಸೊಣಗನಂತೆ

೨ ಸುರನದಿಯೊಳ್ಮುಳುಂಗಿ ಸಿಯೊಡಲ್ಗೆ
ಸುಗಂಧಮನಣ್ಪುಗೆಯ್ದು ಭಾ
ಸುರಮಣಿ ಭೂಷಣಂದುಡಿಸಿ ಪಾಲೆರೆದೊಯ್ಯನೆ
ಸಂತವಿಟ್ಟು ಮೇಣ್

ಉರು ಚತುರಂತಯಾನದೊಳ್ ಮುರ್ಚಿದೊಡಂ ಮಲದಾಸೆ
ಪೋಗಿ ಕು
ಕ್ಕುರ ಮಿರದೊಳ್ವುದಂ ಬಿಡುವುದೇ ಕಡುನೇಹದೆ ಬೇಡಿ
ಕೊಂಡೊಡಂ — (ದಿವ್ಯಸೂರಿ ಚರಿತೆ)

೧೫೫ ಅಷಂಗೆ ಮನೆಗೆ ವೊಲ ಹೊಕ್ಕ ಹಾಗೆ

೧ ಬಾಣಸಿನ ಮನೆಯಂ ಸಜಿಸಿ ವೊಲಂ ಪೊಕ್ಕಂತೆ
—(೩೭೯ವ) ಕರ್ನಾಟಕ ಪಂಚತಂತ್ರ

೧೫೬ ಅಂತೆಯೇ ಕುಣಿಯುವವಳು ಚಿಂತಾಕಿದ್ದಗೆ ಬಿಡ್ತಾಳ್ಯೆ ? ಹಾಗೆಯೇ ಕುಣಿಯೋಳಿಗೆ ಗೆಜ್ಜೆ ಕಟ್ಟಿದ ಹಾಗೆ

ಹೋಲಿಸಿ: ೧ ಬಱಿದೆ ಕುಣಿವಂಗೆ ಮತ್ತಂ ಪಱಿಯುವನುಂ ಕೂಡಿದಂತೆ
—(೨–೧೪೮) ಧರ್ಮಾಮೃತ

೨ ದಂಟ ನೂಡುವಂಗೆ ಕೊಳಲ್ ದೊರೆ ಕೊಂಡುದು
—(೧೦–೨೮೨) ಧರ್ಮಾಮೃತ

೩ ಸುಮ್ಮನೆ ಕುಣಿವವರಿಗೆ ಹರೆಯುನು ಹುಯ್ಯೆ ಸುಮ್ಮಾನ
—(೧೯–೧೧೩) ನೇಮಿಜಿನೇಶ ಸಂಗತಿ

೧೫೭ ಇಲಿಯನ್ನು ಹಿಡಿಯುವ ಬೆಕ್ಕಿಗೆ ದೀಪ ಹಿಡಿದ ಹಾಗೆ

ಹೋಲಿಸಿ: ೧ ಅಟ್ಟಿತಿಂಬ ದೈವಕ್ಕೆ ಪಾಱಿಂ ಬಿಟ್ಟಂತೆ
—(೬–೬೨ವ) ಲೀಲಾವತಿ ಪ್ರಬಂಧ

೨ ತಿನಲಱಿಸುವ ದೈವಕ್ಕೆ ಹೋಗಿ ಪಾಟಿಂ ಬಿಡುವಾ ?
—(೧–೧೮; ಪು ೧೧) ಜೀವ ಸಂಬೋಧನ

೩ ಅಱಿಸಿತಿಂಬ ದೈವಕ್ಕೆ ಪಾಳಂ ಬಿಡುವಂತೆ
—(೪-೪೪)ಪಾರ್ಶ್ವನಾಥ ಪುರಾಣ

೪ ಅಟ್ಟಿತಿಂಬ ಮಹಾಂತಕಂ ಗೌತಣವ ಹೇಳ್ವಂತೆ
—(ದ್ರೊ.ಪ. ೧೮–೧೮) ಕರ್ನಾಟಕ ಭರತ ಕಥಮಂಜ

೫ ಪಸಿದ ರಕ್ಕಸನ ಮನೆಗೆ ಪಾಳಂ ಬೀಳ್ವನಂತೆ
—(೨-೬೩ವ) ನಾಗಕುಮಾರ ಚರಿತಂ

೧೫೮ ಕಡಲೆ ಕಾಯಿ ಬಿತ್ತಿ ಕಾಗೆ ಕಾವಲು ಹಾಕಿದ ಹಾಗೆ
ಹೋಲಿಸಿ : ಬಿಡಾಳಕ್ಕಾ ಪಾಲ ಕಾಪನಿತ್ತವೊಲಾಯ್ತು
—(೩-೧೧೨) ಪಾರ್ಶ್ವನಾಥಪುರಾಣಂ

೧೫೯ ತೂಕಡಿಸುವವನಿಗೆ ಹಾಸಿಗೆ ಹಾಕಿ ಕೊಟ್ಟ ಹಾಗೆ

೧ ತೂಂಕಡಿಪ್ಪವರನೊಪ್ಪುವ ಪಾಸಿನ ಮೇಲೆ ನೂಕಿದಂತೆ
—(೩-೧೦೪) ಪಾರ್ಶ್ವನಾಥ ಪುರಾಣಂ

೧೬೦ ಹುಲಿ ಮುಂದಕ್ಕೆ ಹುಲ್ಲೆ ಅರಿಚಿಕ್ಯಂಡು ಹೋದಂಗೆ

ಹೋಲಿಸಿ : ಅರಸಿ ಕೊಲ್ಲಾವೆನೆಂಬ ಬೇಟೆಗಾರನ ಮುಂದ ಕುರುವ ಬೆಳ್ಳಿಗವೆಯುಪ್ಪ ತೆರ!
—(೩೦-೬೮) ನೇಮಿ ಜಿನೇಶ ಸಂಗತಿ

೧೬೧ ತಾಯಿಯು ಹಾಲೇ ವಿಷವಾದರೆ

೧ ಮಾತಾ ಯದಿ ವಿಷಂ ದದ್ಯಾತ್ ವಿಕ್ರೀಣಾತಿ ಪಿತಾಸುತಂ —(ಸು)

ರಾಜಾ ಹರತಿ ಸರ್ವತ್ರಂ ಕಾತತ್ರ ಪರಿದೇವನಾ —(ಸು)

೨ ಆರ್ ಕಾವರ್........ತಾಯ್ವಾಲೆ ನಂಜಾದೊಡಂ
—(೬-೯೩) ಶಾಂತಿ ಪುರಾಣಂ

೩ ಏರಿ ನೀರನುಂಬಡೆ, ಬೇಲಿ ಕೆಯಿ ಮೇದಡೆ......ತಾಯಿ ಮೊಲೆ ಹಾಲು ನಂಜಾಗಿ ಕೊಲುವಡೆ ಇನ್ನಾರಿಗೆ ದೂರುವೆ?
—ಬಸವೇಶ್ವರನ ವಚನಗಳು

೪ ಮೊಲೆವಾಲೆ ನಂಜಪ್ಪೊಡಂ ಕಾವರೆ ಕಣೆಗೊಳ್ವೊಡಂ
ಪೇೞ್ವಡುವಿರೆಂಬುದೇಕೆ ? —(೨-೨ವ:ಪುಟ ೩೦
ಮತ್ತು ೧-೧೦ವ; ಪುಟ ೯) ಜೀವ ಸಂಬೋಧನೆ

೫ ಮಾತೆಯು ಮೊಲೆವಾಲೆಗರಳವಾದಂತೆ

— (೨೯–೩೨) ನೇಮಿ ಜಿನೇಶ ಸಂಗ

೬ ಪೆತ್ತತಾಯಿ ಮಕ್ಕಳಿಗೆ ವಿಷ ಹಾಕಿದರೆ, ಮತ್ತೆ ತಂದೆಯು
ಹೊರಗೆ ಮಾರಿದರೆ? —(ಕೀ.೧೬೧) ಹ.ಕೀ.

೭ ಪೆತ್ತತಾಯಿ ತನ್ನ ಶಿಶುವನ್ನು ಕೊಲ್ಲಲು ಕಾವರಾರೈ

—ವೈಕುಂಠದಾಸರ

೮ ಹಡೆದ ತಾಯೇ ವಿಷವ ನಿಕ್ಕಲು ಬಿಡಿಸುವವರಾರ್?

(೧೦–೩೦) ಶಂಕರ ದಾಸಿಮಯ್ಯ ಪುರಾ

೯ ತಾತ ಮಕ್ಕಳ ಮಾರಿದೊಡೆ ನಿಜ
ಮಾತೆ ವಿಷವಿಕ್ಕಿದೊಡೆ, ನೃಪನು
ನೀತಿಯಿಂ ಸರ್ವಸ್ವದಪಹಾರವನು ಮಾಡಿದೊಡೆ
ಓತು ಬಿಡಿಸುವರುಂಟೆ ?

—(ಅಯೋ. ಕಾಂ ೧–೭೧) ರಾಮಾಭ್ಯುದಯ ಕಥಾ ಕುಸು

೧೦ ತಾಯಿ ಮಕ್ಕಳ ಮಾರಿದು ಕೊಲುವೊಡೆ ಕಾಯಲಾಪವರಾರು ?

(೩೩ ೫೧) ಕೌಶಿಕ ರಾಮಾಯ

೧೬೨ ಬೇಲಿ ಎದ್ದು ಹೊಲ ಮೇದರೆ ಆಳೇಕೆ ಕಾಳೇಕೆ ?

೧ ಬೇಲಿ ಹೊಲನೆಲ್ಲಂ ಮೇದೊಡಂ

—(೨೯) ಸೋಮೇಶ್ವರ ಶ

೨ ಬೇಲಿ ಬೆಳೆಯ ಮೇವಂತೆ —(೨೯-೭೨) ನೇಮಿ ಜೀನೇಶ ಸಂ

೩ ಹೊಲ ಬೇಲಿ ಮೆದ್ದರೆ ಮೊಲವೆದ್ದು ಇರಿದರೆ

--(ಕೀ. ೧೬೧) ಹ,ಕೀ

೪ ಬೇಲಿ ಎದ್ದು ಹೊಲವ ಮೆದ್ದ ಮೇಲಿನ್ನೇನಿನ್ನೇನು

—(೨-೩೭) ಪುರಂದರದಾ.

೫ ಸುತ್ತಿದ್ದ ಬೇಲಿಯು ಎದ್ದು ಪೈರ ಮೇಯೆ
—ವೈಕುಂಠದಾಸರ ಕೀ.

೬ ಬೇಲಿಯು ಹೊಲವಂ ಮೇದರೆ ಬೆಳೆಯುಂ ಕಾವರಾರೊ
ನಿಷ್ಕಂಟಕದಿಂ —(೭೩) ಕನ್ನಡ ನೀತಿಸಾರ

೧೬೩ ಸಮುದ್ರ ಮೇರೆ ತಪ್ಪಿದರೆ ಯಾರು ಏನು ಮಾಡಲಾದೀತು ?

೧ ವಾರಿಧಿ ಮೇರೆದಪ್ಪಲು ನಿಲ್ಲಿಸುವರಾರು? —ಪುರಂಬಾ

೧೬೪ ಹರ ಕೊಂದರೆ ಪರ ಕಾಯ್ವನೆ?

೧ ಹರಕೊಲ್ಲಲ್ ಪರ ಕಾಯ್ವನೇ —(೨೯) ಸೋಮೇಶರ ಶತಕ

ಹೋಲಿಸಿ : ಕಾವ ದೇವನೆ ಮಗುಳೆ ಕೊಲುವಡೆ ಕಾವರಾರ್ಯ?
—( ) ಕನ್ನಡ ಭಾಗವತ

ಸಲಹುವ ದೈವವೇ ಕೆಡಹುವುಡೆ ಭುವನದಲಾವ ತಡೆವನು ?
—(೨೩–೧೫) ಕೌಶಿಕ ರಾಮಾಯಣ

೧೬೫ ಸುಂಕದವನ ಕೂಡ ಸುಖ ದುಃಖವೆ ?

೧ ಸುಂಕದವನೊಡನೆ ಸುಖದುಃಖವನ್ನು ಹೇಳಿಕೊಂಡರೆ
ಕೇಳುವನೆ ?
—(೧೫ನೆಯ ಪ್ರಕರಣ) ರಾಯಚ್ಚೂರು ವಿಜಯ

೧೬೬ ಹೇರು (ಸರಕು) ಒಪ್ಪಿಸಿದ ಮೇಲೆ ಸುಂಕವೇ?

೧ ಹೇಱನೊಪ್ಪಿಸಿದ ಮಂಗೆಲ್ಲಿಯದು ಸುಂಕ
—(೮–೫೪) ಹರಿಶ್ಚಂದ್ರ ಕಾವ್ಯಂ

೨ ಹೇರೊಪ್ಪಿಸಿದ ಮೇಲೆ ಸುಂಕವೆ ?
—(೧೩; ೨ನೆಯ ಭಾಗ) ಕನಕದಾಸರ ಕೃತಿ

೩ ಪೇರನೊಪ್ಪಿಸಿದ ಮೇಲೆ ಸುಂಕ ಯಾವುದೊ ?
—(೧೨೧) ಕನಕದಾಸರ ಕೀ.

೪ ಪೇರಂ ತೆತ್ತವರ್ ಸುಂಕ ವೀವರ್
—(೧೧-೧೫೮) ರಾಜಶೇಖರ ವಿಲಾಸಂ

೧೬೭ ಅಡಿಯು ಮುಂದಿಡೆ ಸ್ವರ್ಗ, ಅಡಿಯು ಹಿಂದಿಡೆ ನರಕ
—ಸರ್ವ, ಪ, ೭೦೬

೧೬೮ ದಂಡಿನಲ್ಲೂ ಸೋದರಮಾವನೆ ?

೧ ಮೆರೆಯಿ ಮದವನು ಮಾವತನವದು ಹೊರಗಿರಲಿ
—(ಶ.ಪ, ೨-೪೬) ಕರ್ಣಾಟ ಭಾರತ ಕಥಾಮಂಜರಿ

ಹೋಲಿಸಿ : ಕಾಳಗದೊಳು ಬಂಧುವುಂಟೆ ?
—(೫-೧೩೭) ಪದ್ಮಾವತೀ ಚರಿತೆ

೧೬೯ ಕತ್ತಿ ಹಿಡಿದವರೆಲ್ಲ ಸಿಪಾಯಿ ಆದಾರೆ ?

೧ ಕೈದುವ ಹಿಡಿದವರೆಲ್ಲ ಮಹಾ ಕಲಿಗಳೇ ?

೨ ಆಜಿಯೊಳುರ್ಜಿ ಕೈದುವಂ ಹಿಡಿದವರೆಲ್ಲ ಮಣ್ಮುಪ್ರೊಡಮೀ
ಯುಗ ಮೇಕೆ ಕನಿಷ್ಠ ಮಪ್ಪುದೋ !
—(೧೭-೪೨೩) ಕಾವ್ಯಸಾರಂ

೧೭೦ ಭಟ್ಟ ಬಂಟನಲ್ಲ, ಬೆಕ್ಕು ಹುಲಿಯಲ್ಲ

೧ ಅಗಸ್ತಿ ತುಲ್ಯಾಶ್ಚ ಘೃತಾಬ್ಧಿಶೋಷಣೇ ।
ದಂಭೋಳಿ ತುಲ್ಯಾ ವಟಕಾದ್ರಿ ಭೇದನೇ ; ।
ಶಾಕಾವಲೀ ಕಾನನ ವಹ್ನಿರೂಪಾ ।
ಸ್ತ ಏವ ಭಟ್ಟಾ ಇತರೇ ಭಟಾಶ್ಚ ॥ —(ಸು)

೧೭೧ ಹೇಡಿಗೆ ಬಿರುದು ಕಟ್ಟಿದ ಹಾಗೆ

೧ ಪುರುಳಿನ ಸಿರಿಯುಂ ಪಂದೆಯ ಬಿರುದುಂ
ಸುಖಮಾಗಲಾಱವೆಂದುಂ ಕಡೆಯೊಳ್
—(೬-೯೯) ಧರ್ಮಾಮೃತ

೨ ಹೇಡಿ ಬಿರುದಂ ಕಟ್ಟಿದಂತಾಯ್ತು
—(೨೮೮) ಬಸವೇಶ್ವರನ ವಚನಗಳು

೧೭೨ ಹೇಡಿಯ ಕೈಲಿ ಚಂದ್ರಾಯುಧ ಕೊಟ್ಟ ಹಾಗೆ

೧ ಹೇಡಿಯ ಕೈಯಲ್ಲಿ ಚಂದ್ರಾಯುಧವಿದ್ದ ಹಾಗೆ
—(೮೩೯) ಬಸವೇಶ್ವರನ ವಚನಗಳು

೧೭೩ ವಾಲಿಗಿಂತ ಬಲವಂತನಿಲ್ಲ, ಹಾಲಿಗಿಂತ ಸವಿಯಿಲ್ಲ

೧ ವಾಲಿಯಿಂದಧಿಕ-ಬಲರಿಲ್ಲ, ಪರದೈವ
ಶೂಲಿಯಿಂದಿಲ್ಲ ! ಸರ್ವಜ್ಞ —(ಸರ್ವ, ಪ. ೧೯೫)

೧೭೪ ಆನೆ ಕಾಲಿಗೆ ಸಿಕ್ಕಿದ ಬಾಳೆ ಹಣ್ಣಿನ ಹಾಗೆ

೧ ಗಜ ತುಳಿದ ಬಾಳೆಯವೊಲ್
—(೬-೮-೧೧) ತೊರವೆ ರಾಮಾಯಣ

೧೭೫ ತೋಳ ಕುರಿ ಮುಂದೆ ಹೊಕ್ಕ ಹಾಗೆ

೧ ಕುಱಿವಿಂಡಂ ತೋಳಂ ಪೊಕ್ಕಂತೆ
—(ದ್ವಿ. ಆ. ೭೧೯) ಧರ್ಮಾಮೃತ

೨ ತೋಳನಂ ಕಂಡ ಕುಱಿವಿಂಡಿನಂತೆ
—(ದ್ವಿ.ಆ.-೩೧೮) ಧರ್ಮಾಮೃತ

೩ ಕುರಿಯ ಮರಿಯ ಹಿಂಡನಾ ತೋಳ ಹೊಕ್ಕಂತೆ
—(೨೮-೧೦೪) ನೇಮಿ ಜಿನೇಶ ಸಂಗತಿ

ಹೋಲಿಸಿ : ೧ ಮೃಗವಿಂಡನು ಹಸಿದ ಹೆಬ್ಬುಲಿ ಹೊಗುವಂತೆ
—(೩೪-೧೩೭) ನೇಮಿ ಜಿನೇಶ ಸಂಗತಿ

೨ ಮಂಡಳಿಸಿದ ಮೋಹರವ ಹೊಕ್ಕನು
ಹಸುವಿಂಡ ಹೆಬ್ಬುಲಿ ಹೊಕ್ಕಂತೆ
—(೧೨-೫೯) ನೇಮಿ ಜಿನೇಶ ಸಂಗತಿ

೩ ಅಜವಿಂಡ ಹೊಕ್ಕ ಹೆಬ್ಬುಲಿಯಂತೆ
—(   ) ಕನಕದಾಸ

೪ ಕರಿವಿಂಡಿನೊಳಗೆ ಪರಿ ಹೊಕ್ಕಂತೆ
—(೧೧-೩೯) ಪ್ರೌಢರಾಯನ ಕಾವ್ಯ

೧೭೬ ನೆಲ್ಲಿಮರಕ್ಕೆ ದೊಣ್ಣೆ (ಗುದಿಗೆ) ಇಟ್ಟಹಾಗೆ

೧ ನೆಲ್ಲಿಯ ಕಾಯ್ಗಳಂ ಬಡಿಗೆ ಕೊಂಡವೊಲ್
—(೨೦೩) ಕಬ್ಬಿಗರ ಕಾವ್ಯಂ

೨ ಕಲ್ಲುತಾಗಿದ ನೆಲ್ಲಿಯಂತೆ
—(೨೫-೫೫) ನೇಮಿ ಜಿನೇಶ ಸಂಗತಿ

೩ ಬಡಿಗೊಂಡ ನೆಲ್ಲಿಯಕಾಯಂತೆ
—(೪೦-೩೫) ರಾಮನಾಥ ಚರಿತ

೪ ನೆಲ್ಲಿಯ ಕಾಯ್ಗಳ ಹೆಗ್ಗಿದಿರೊಳಿಡೆ ಜಲ್ಲವರಿದು ಬೀಳುವಂತೆ
—(೧೪-೭೯) ಕಂಠೀರವ ನರಸರಾಜ ವಿಜಯ

೧೭೭ ಬಾಳೆ ತೋಟಕ್ಕೆ ಆನೆ ನುಗ್ಗಿದ ಹಾಗೆ

೧ ಬಾಳೆಯ......ಬನಮಂ ಕಾಡಾನೆ ಪೊಯ್ವಂತೆ
(ಆ.ಆ.-೮೦) ವಿಕ್ರಮಾರ್ಜುನ ವಿಜಯಂ

೨ ವ್ಯಾಳಗಜಂ ಬೆಳೆದೊಪ್ಪುವ ಬಾಳೆಯ ಬನದೊಳಗೆ
ಪೊಕ್ಕವೊಲ್ —(೧೨-೩೮) ಧರ್ಮಾಮೃತ

೩ ಬಲ್ಲಾನೆ ಬಾಳೆಯ ವನವ ಹೊಕ್ಕಂದು
—(೩೪-೧೩೯) ನೇಮಿ ಜಿನೇಶ ಸಂಗತಿ

೪ ಬಾಳೆಯ ವನದೊಳ್ಮದ ಶುಂಡಾಳಂ ಪೊಕ್ಕಂತೆ
—(ಆಶ್ವಾ-೪, ಪ ೭೪) ಉದ್ಭಟ ಕಾವ್ಯಂ

೫ ಬಾಳೆವನವ ಸೊಕ್ಕಿದೆಕ್ಕಲ ಹೊಕ್ಕಂತು ಕೋಲಾಹಳವ ಮಾಡಿ
—(ಪು ೧೫೬-೮೮) ನಾಗಕುಮಾರ ಚರಿತಂ

೬ ಬಾಳೆಯ ಬನಂ ಬೊಕ್ಕ ಮದದಾನೆ ವಿಂಡೆಸಲ್
—(ಸಂ ೪೪ ; ೩೧) ಚೆನ್ನಬಸವ ಪುರಾಣ

೭ ಕದಳಿಯು ವನವ ಕಾಡಾನೆ ಹೊಕ್ಕಂದ !
—(೧೨-೮೧) (೧೪–೫೨) ಕಂಠೀರವ ನರಸರಾಜ ವಿಜಯ

೮ ಸೊಂಡಿಲು ಕದಳಿಯು ವನವ ಪೊಕ್ಕಂದದಿ
—(೩–೧೮) ಚಂದ್ರಹಾಸನ ಕಥೆ

೧೭೮ ಕಬ್ಬಿನ ತೋಟಕ್ಕೆ ಆನೆ ನುಗ್ಗಿದ ಹಾಗೆ

೧ ಕಾಡಾನೆ ಕರ್ವಿನ ತೋಟಮಂ ಪೊಕ್ಕಂತೆ
—(೧೨-೩೯ ವ) ನೇಮಿನಾಥ ಪುರಾಣಂ

೩. ಶೈಕ್ಷಣಿಕ

೧೭೯ ಎದೆ ಸೀಳಿದರೂ ಎರಡಕ್ಷರವಿಲ್ಲ

೧ ಎರ್ದೆಯುಂ ಸೀೞ್ದೊಡವೊಂದಕ್ಕರಮಿಲ್ಲ
—(೧-೨೫) ಲೀಲಾವತಿ ಪ್ರಬಂಧ

೧೮೦ 'ಓ' ಅಂದರೆ 'ಠೋ' ಅನ್ನುವುದಕ್ಕೆ ಬಾರದು

೧ ಓಮ್ಮೆಂದೊಡೆ ಠೋಂ
—(೯-೧೪) ಧರ್ಮ ಪರೀಕ್ಷೆ

೧೮೧ ಬರೆಯದ ಕೈಯೂ ಕರೆಯದ ಬಾಯೂ ವ್ಯರ್ಥ

ಹೋಲಿಸಿ : ಬರೆಯದ ಕೈ…………
……………………
ಕರೆದು ಬುಧರ್ಗೀಯದ ಕೈ
ಮರಗೈ ಮರುಳ್ಗಳಂತೆ ಜೊಡಾರತ್ನ !

೧೮೨ ವಿದ್ಯೆಯಿಲ್ಲದವ ಹದ್ದಿಗಿಂತ ಕಡೆ

ವಿದ್ಯೆಯುಳ್ಳನ ಮುಖವು । ಮುದ್ದು ಬರುವಂತಕ್ಕು ।
ವಿದ್ಯೆವಿಲ್ಲದನಾ-ಬರಿ ಮುಖವು ಹಾಳೂರ ।
ಹದ್ದಿನಂತಕ್ಕು ! ಸರ್ವಜ್ಞ —ಸರ್ವ, ಪ. (೧೯೯)

೧೮೩ ಒಂದು ಸಾರಿ ಬರೆಯುವುದೂ ಒಂದೇ, ಹತ್ತು ಸಾರಿ ಓದುವುದೂ ಒಂದೇ

೧ ಸವ್ ಬಕ್ನ, ಏಕ್ ಲಿಖ್ನ (ಉರ್ದು)

೧೮೪ ಓದು ಒಕ್ಕಾಲು, ಬುದ್ಧಿ ಮುಕ್ಕಾಲು

೧ ಓದೋ ಕಾಲು, ಬುದ್ಧಿ ಮುಕ್ಕಾಲು

೧೮೫ ಕ್ಷಣ ಕಳೆದರೆ ವಿದ್ಯೆ ಎಲ್ಲಿ, ಕಣ ಕಳೆದರೆ ಹಣವೆಲ್ಲಿ ?

೧ ಕ್ಷಣಶಃ ಕಣಶಶ್ಚೈವ ವಿದ್ಯಾಮರ್ಥಂಚ ಸಾಧಯೇತ್
—(೬೩) ಸಕಲೇಶ ಮಾದರಸನ ವಚನಗಳು

೧೮೬ ವಿದ್ಯೆ ಕಂಠದಲ್ಲಿ, ವಿತ್ತ ಸೊಂಟದಲ್ಲಿ

೧ ಕಂಠಸ್ಥಾ ಯಾ ಭವೇತ್ ವಿದ್ಯಾ । —(ಸಂ)

೧೮೭ ಗಿಣಿ ಬಾಯಿ ಪಾಠ ಮಾಡಿದ ಹಾಗೆ

೧ ಶುಕನ ಓದುಗಳಂತೆ ಎನ್ನ ಓದುಗಳಯ್ಯ
—(೩೬) ಶ್ರೀ ವ್ಯಾಸರಾಯ ಸ್ವಾಮಿಗಳವರ ಕೃತಿಗಳು

೨ ಕಲಿಸಿದಷ್ಟನೆ ನುಡಿವುದು ಪಕ್ಕಿ
—(ಅರಗಿಳಿಯಾಲಾಪ ಸಂಧಿ–೪೫) ಭರತೇಶ ವೈಭವ

೩ ಅರಸುಗಿಳಿ ಕಲಿತಸಿತು ನುಡಿವಂತೆ
—(೧೨-೧೩) ಶಂಕರ ದಾಸಿಮಯ್ಯ ಪುರಾಣ

೪ ಓದಿದೊಡೇನರಗಿಳಿ ಕಲ್ತೋದುವ ಪೋಲ್

೧೮೮ ಉಪಾದ್ರು ನಿಂತ್ಕಂಡ್ ಉಚ್ಚೆ ಊದರೆ
ಉಡುಗ್ರು ಓಡಾಡಿಕಂಡ್ ಊದ್ರು

೧ ತಿಷ್ಠನ್ಮೂತ್ರಸ್ಯ ಪುರುಷಸ್ಯ ಧಾವನ್ಮೂತ್ರಃ ಪುರೋಹಿತಃ
—(ಸಂ)

೧೮೯ ನೀರಿಳಿಯದ ಗಂಟಲಿಗೆ ಕಡುಬು ತುರುಕಿದ ಹಾಗೆ

೧ ನೀರಿೞಿಯದ ಗಂಟಲೊಳ್ ಕಡುಬಂ
ತುಱುಕಿದಂತಾಯ್ತು
—(೧–ಪು ೬, ೮–೯ನೆಯ ಸಾಲು, ಶ್ರೀ ರಾಮಾಶ್ವಮೇಧಂ

೧೯೦ ಆಡುಮುಟ್ಟದ ಸೊಪ್ಪಿಲ್ಲ, ಕೋತಿ ಏರದ ಕೊಂಬೆಯಿಲ್ಲ

೧ ನೋಡದ ಪೆಂಡಿರಿಲ್ಲ. ಆಡು ಮುಟ್ಟದ ಗಿಡವಿಲ್ಲ
—(೩–೪೨) ಧರ್ಮಾಮೃತಂ

೧೯೧ ತುಂಬಿದ ಕೊಡ ತುಳುಕುವುದಿಲ್ಲ, ಅರ್ಧಕೊಡ ನಿಲ್ಲುವುದಿಲ್ಲ

೧ ಸಂಪೂರ್ಣ ಕುಂಭೋ ನ ಕರೋತಿ ಶಬ್ದಂ ॥
ಹ್ಯರ್ಧೋ ಘಟೋ ಘೋಷ ಮುಪೈತಿ ನೂನಂ
ವಿದ್ವಾನ್ ಕುಲೀನೋ ನಕರೋತಿ ಗರ್ವಂ ।
ಗುಣೈರ್ವಿಹೀನೋ ಬಹುಜಲ್ಪಯಂತಿ (ಸಂ)

೨ ಅರೆಗೊಡ ತುಳುಕುವುದಲ್ಲದೆ ತುಂಬಿದ ಸಿರಿಗೊಡ
ಬಿಡಿರ್ವುದೆ ?
—(ಬ್ರಾಹ್ಮಣ ನಾಮ ಸಂಧಿ–೭೭) ಭರತೇಶ ವೈಭವ

೩ ತುಂಬಿದುದು ತುಳುಕದು........
—ಚೆನ್ನಬಸವಣ್ಣನವರು

೧೯೨ ಬೂದಿ ಮುಚ್ಚಿದ ಕೆಂಡದ ಹಾಗೆ

೧ ಬೂದಿ ಪತ್ತಿದ ಕೆಂಡದಂತೆ
—(ಆಶ್ವಾ ೬, ೯೭ವ) ಧರ್ಮಾಮೃತ

೨ ಬೂದಿ ಮುಚ್ಚಿ ವಿರುಗುವನಲಂ
—(ಕಾಂ.೪; ೪೩–೧) ಬಸವ ಪುರಾಣ

೩ ಬೂದಿ ಮುಚ್ಚಿವ ಕೆಂಡದಂತೆ. ಬುದ್ಧೀಲಿರು ನಾ ಹೇಳೇನಂತೆ
—ಹ.ಕೀ.ತ.ಕೀ. (೪೮೭)

೪ ಬೂದಿ ಮುಚ್ಚಿದ ಕೆಂಡ
—(೧೧–೩೧) ಗುರುರಾಜ ಚಾರಿತ್ರ

೫ ಬೂದಿ ಮುಚ್ಚಿದ ಕೆಂಡವಾ ಮಧುಸೂದನನ ನಂಬದಿರು
—(ಪ್ರಹ್ಲಾದ ಚರಿತ್ರೆ) ನರಹರಿ

೧೯೩ ವಿದ್ಯೆ ಇದ್ದರೆ ಸಾಲದು, ವಿನಯವೂ ಬೇಕು

೧ ವಿದ್ಯಾ ದದಾತಿ ವಿನಯಂ —(ಸು)

೧೯೪ ಅಲ್ಪ ವಿದ್ಯೆ, ಮಹಾಗರ್ವಿ

೧ ಅಲ್ಪ ವಿದ್ಯಾ ಮಹಾ ಗರ್ವೀ ಕುರೂಪೀ ಬಹು ಚೇಷ್ಟಕಃ (ಸಂ)

೧೯೫ ಎಲ್ಲ ಬಲ್ಲವರಿಲ್ಲ, ಒಂದೂ ತಿಳಿಯದವರಿಲ್ಲ

೧ ಎಲ್ಲ ಬಲ್ಲವರಿಲ್ಲ। ಬಲ್ಲವರು ಬಹಳಿಲ್ಲ।
ಬಲ್ಲಿದರು ಇದ್ದು ಬಲವಿಲ್ಲ, ಸಾಹಿತ್ಯ-
ವೆಲ್ಲವರಿಗಿಲ್ಲ ಸರ್ವಜ್ಞ —ಸರ್ವ, (ಪ. ೧೩೪೩)

೧೯೬ ಮರಕ್ಕೆ ಮರ ಉದ್ದ

ಹೋಲಿಸಿ : ೧ ನಿಡಿಯರ್ಗುಂ ನಿಡಿಯರೊಳರ್
—(೧೨-೧೦೪) ಆದಿಪುರಾಣ

೨ ಧರೆಯೊಳ್ ನಿಡಿಯರ್ಗಂ ನಿಡಿಯರುಂಟು
—(ಕಂದಪದ್ಯ ೩೭೧) ಕಂತಿ

೧೯೭ ಓದಿ ಮರುಳಾದ ಕೂಸು(ಕೋಚು)ಭಟ್ಟ

೧ ಓದಿದ ಫಲ ಕೂಚಭಟ್ಟನಂತಾಗಬಾರದು
—(೪೬೪) ಸಿದ್ಧರಾಮೇಶ್ವರನ ವಚನಗಳು

೨ ಓದಿ ಮರುಳಾದೆಯೋ ಕೂಚಿ ಭಟ್ಟರೆ
—(೨೧೮) ತೋಂಟದ ಸಿದ್ಧೇಶ್ವರನ ವಚನ

೩ ಓದಿ ಮರುಳಹ ಕೂಸಿ(ಚಿ)ಭಟ್ಟ
—(೧೦-೪೨) ಅನುಭವಾಮೃತ

೪ ಓದಿ ಕೇಕಯನೆಂಬವನು ಮರುಳಾದ
—(೧೪-೩೩) ಕೌಶಿಕ ರಾಮಾಯಣ

೫ ಓದಿ ಮರುಳಾದವನ ತಿಳುಹುವರಾರು?
—(೩೦-೩೯) ಕೌಶಿಕ ರಾಮಾಯಣ

೧೯೮ ಓದಿ ಬೂದಿ ಮುಕ್ಕಿದ

೧ ಕಾದಿ ಬೂದಿಯು ಹೊಯ್ದುಕೊಂಡರು (ಕಾದಿ-ಪಾದವಾಡಿ)
—(೧೦-೪೨) ಅನುಭವಾಮೃತ

೨ ಓದಿ ಕಲಿತವರ ಶಾಸ್ತ್ರಂಗಳಂ ಕಲಿತಲ್ಲಿ।
ಕಾವ ಬೂದಿಯು ಹೊಯ್ದುಕೊಂಡೇನು ಫಲ?
—(ತಿ.ಕಾಂ. ೧-೨೭) ಶ್ರೀಮದ್ರಾಮಾಯಣ

೯೯ ಗಿಣಿ ಓದಿ ಓದಿ ತನ್ನ ಹೇಸಿಗೆ ತಾನೇ ತಿಂದಿತು

೧ ಹಲವನೋದಿದ ಗಿಳಿಯು ತನ್ನ ಮಲಮೂತ್ರಮಂ ತಾನೆ
ಭಕ್ಷಿಸುವ ತೆಱಂ —(೩೭-೭೬) ಶಿವತತ್ತ್ವ ಚಿಂತಾಮ

೨ ಗಿಳಿಯೋದಿ ತನ್ನ ಮಲವ ತಾ ತಿಂದಂತೆ
—(೨೧೮) ತೋಂಟದ ಸಿದ್ಧೇಶ್ವರನ ವ

೩ ಸಾಲು ವೇದವನೋದಿ। ಶೀಲದಲಿ ಶುಚಿಯಾಗಿ
ಮೂಲಿಯಾ ಪದವ-ನರಿಯದೊಡೆ ಗಿಳಿಯೋದಿ
ಹೇಲು ತಿಂದಂತೆ ಸರ್ವಜ್ಞ —ಸರ್ವ, ಪ

೪ ಹಾಲುಂಡು ಹಂಸವನು। ಮೇಲುಬಲ್ಲನೆ ಯೋಗಿ।
ಮೇಲಣಾ ಪಥವನರಿಯದಿರೆ-ಗಿಳಿಯೋದಿ
ಕಾಳಂಗೆಟ್ಟಂತೆ ಸರ್ವಜ್ಞ —ಸರ್ವ, ಪ.

೫ ಬಱಿಯ ಅನುಭವದಲ್ಲಿ ನಿರ್ವಾಣವೊಂದುವಡೆ,
ವೇದಾಧ್ಯಾಯಿಗಳು ಮುಕ್ತರಲ್ಲ;
ಗಿಳಿಯೋದಿ ಅನಿಷ್ಟವ ಭುಂಜಿಸಿದಂತೆ
ಕೂಡಲಸಂಗನನೆತ್ತ ಬಲ್ಲರು, ಮಾಯಾತೊತ್ತುಗಳು
ಪ್ರಭು
—(೪೪೮) ಮುಕ್ತಿಕಂಠಾ

೬ ಓದಿದೊಡೇನೊ ಕೇಳಿದೊಡೇನೊ ಶಿವಪಥವ
ನಱಿಯದನ್ನಕ್ಕ, ಓದಿತ್ತು ಕಾಣಿರೊ ಶುಕನು...
—(೧೬೬) ಮುಕ್ತಿಕಂಠಾ

೧೦೦ ನನ್ನ ಅಕ್ಷರ ನನಗೇ ತಿಳಿಯದು, ನನ್ನ ಮಗನ ಅಕ್ಷರ ಬ್ರಹ್ಮನಿಗೂ ತಿಳಿ

ಹೋಲಿಸಿ : ಚತುರಃ ಖಲು ಮೇ ಭರ್ತಾ ಸ್ವೇನ ಲಿಖಿತಂ
ಪರೋ ನ ಜಾನಾತಿ ।
ಚತುರತರೋ ಮೇ ಭರ್ತಾ ಸ್ವೇನ ಲಿಖಿತಂ
ಸ್ವಯಂ ನ ಜಾನಾತಿ ॥ (ಸಂ)

೩೦೧ ಒತ್ತಲಿಗ ಮುದ್ದಿಲ್ಲ, ಮಕ್ಕಳ ಮಾತು ಲೆಕ್ಕವಿಲ್ಲ

೧ ಒತ್ತಲಿ ಗಿಡವಿದು ಮುದ್ದಿಲ್ಲ —(೧-೨೦) ಮಹಾಭಾರತ ಕಥೆ

೨ ಒತ್ತಿಗೆ ಗಿಡವಿಲ್ಲ, ಒತ್ತಾಲಿ ಗಿಡವು ಮುದ್ದಿಲ್ಲ
—(೩೬) ಜಾನಪದ ಪ್ರೇಮಗೀತೆಗಳು

೩ ಒಳಕೆಗೆ ಒಲ್ಲದ ಮೇಳ್ಳಿತ್ತುಲ ಜೋರುಗಳ್
—(೨೭) ಕನ್ನಡ ನೀತಿಸಾರವು

೪ ಬಗೆ ಬಗೆ ಕಾಟದೆ ಬಗೆಹರಿಸಿದರೂ ಒತ್ತಲಿ ಗಿಡ ಮುದ್ದಾಗಿದೆ
—"ಯುಗಪುರುಷ", ದಸರಾ ಸಂಚಿಕೆ, ೧೯೬೭

೩೦೨ ಅರಸ ಅಧ್ವಾನ, ತೆಲಗು (ಪೋನು) ಕೇಟು, ಕನ್ನಡ ಕಸ್ತೂರಿ

೧ "ಕನ್ನಡಂ ಕತ್ತುರಿ"ಯಲ್ತೆ —(೧-ಪ್ರ. ೬ : ೧೧ನೆಯ ಶತಕ)
ಧರ್ಮಪರೀಕ್ಷೆ, ವೃತ್ತವಿಲಾಸ

೨ "ಕನ್ನಡಂ ಕತ್ತುರಿ"ಯಲ್ತೆ
—(ಪ್ರ. ಆಶ್ವಾ.) ಶ್ರೀ ರಾಮಾಶ್ವಮೇಧ

೩೦೩ ದೇಶಕ್ಕೆ ತಕ್ಕ ಭಾಷೆ, ವೇಷಕ್ಕೆ ತಕ್ಕ ಹಾಸ್ಯ

೧ ದೇಶಮನುಸೃತ್ಯ ಭಾಷಿತವ್ಯ —(ಸಂ)

೩೦೪ ರವಿ ಕಾಣದ್ದು ಕವಿ ಕಂಡ

೧ ರವಿ ಕಾಣದುದಂ ಕವಿ ಕಾಣ್ಬಂ
—(೧-೩೩) ಲೀಲಾವತಿ ಪ್ರಬಂಧಂ

೨ ರವಿ ಕಾಣದುದ ಕವಿ ಕಂಡ — (೩-೩೫) ಹರಿಶ್ಚಂದ್ರ ಕಾವ್

೩ ರವಿ ಕಾಣದುದನ ಕವಿ ಕಂಡಂ — ಸೋಮನಾಥ ಚರಿ

೪ ರವಿ ಕಾಣದಿದ್ದುದಂ ಕವಿ ಕಾಣನೇ ?
— (ಅಧ್ಯ. ೧-೨೯) ಪರಶುರಾಮ ರಾಮಾಯ

೫ ರವಿ ಕಾಣದುದಂ ಕಾಣ್ಬಂ । ಕವಿಯೆಂಬಾ ಗಾದೆ
ನಿಜಮದಾದೊಡವೊಂ
ಕವಿ ಕಾಣದೇನೆನೆ ನಿಜ । ಕವಿತೆಯನೊರೆವರ್ಗೆ
ಪೇಳ್ವುದಲವಡಿಸುವು
— ನೀತಿಸಾರ ಸಂಗ್ರ

೨೦೫ ಕಂದ, ಕೊಂದ, ತಂದ – ಮೂರು ಮಾತಿನಲ್ಲಿ ರಾಮಾಯಣ

೧ ರಾಮ ರಾಮ ರಾಮ ರಾಮ । ನೀಲ ಮೇಘ ಶ್ಯಾಮ ॥ ಪ
ದಶರಥನ ಕಂದ । ರಾವಣನ ಕೊಂದ ॥
ಸೀತೆಯನೆ ತಂದ । ಲೋಕಕೆ ಆನಂದ ॥
— (ರೂಢಿಯ ಒಂದು ಹಾ

೨೦೬ ಕಬ್ಬಿಣದ ಕಡಲೆ ಹಲ್ಲಿಗೆ ಹರಿಯಲ್ಲ

ಹೋಲಿಕೆ : ೧ ಕಲ್ಲ ಕಡಲೆಯ ಮೆಲುವ ಪರಿ
— (೧೧-೧೭) ಪ್ರಭುಲಿಂಗಲೀ

೨ ವಜ್ರದ ಕಡಲೆ ಹಲ್ಲಿಗೆ ಹದನಾಯಬಲ್ಲುದೆ ?
— (ಪ. ೪೬೫-೨೫) ಸಾಳ್ವಭಾ

೨೦೭ ವೇದ ಗಾದೆ(ಹಾದಿ)ಯ ಮಾತು, ಶಾಸ್ತ್ರ ಸಂತೆಯ (ಸುದ್ದಿ) ಗುಲ್ಲು,
ಪುರಾಣ ಪುಂಡರ (ಗೋಷ್ಠಿ) ಪೋಟಿ

೧ ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ
ಸುದ್ದಿ, ಪುರಾಣವೆಂಬುದು ಪುಂಡರಗೋಷ್ಠಿ — (ಪ್ರಸಾದಿ

[ವೇದ, ಶಾಸ್ತ್ರ ಇವು ಸಾಮಾನ್ಯರಿಗೆ ಅರ್ಥವಾಗುವುದಿಲ್ಲ. ಪುರಾಣಗಳಲ್ಲಿನ ಮಾತು ಒಂದಕ್ಕೊಂದು ವಿರೋಧ. ಆದ್ದರಿಂದ ಅಲ್ಲಮಪ್ರಭುವು ಅನುಭವಕ್ಕೆ ಪ್ರಾಶಸ್ತ್ಯ ಕೊಟ್ಟಂತೆ ಕಾಣುತ್ತದೆ.]

೨೦೮ ರಾಗಕ್ಕೆ ಮೂಡಲು, ರೋಗಕ್ಕೆ ಪಡುವಲು, ಭೋಗಕ್ಕೆ ತೆಂಕಲು, ಯೋಗಕ್ಕೆ ಬಡಗಲು

೧ ರಾಗವೇ ಮೂಡಲು । ಯೋಗವೇ ಬಡಗಲು ।
ರೋಗವೇ ಬಪ್ಪ – ಪಡುವಲದು, ತೆಂಕಲೇ
ಭೋಗದಾ ಬೀಡು ! ಸರ್ವಜ್ಞ —ಸರ್ವ, ವ. ೧೪೬೬

೨೦೯ ಆಟಪಾಟಗಳಿಗೆ ನಾಟಿರಾಗವೇ ಮೊದಲು, ಊಟಕ್ಕೆ ಉಪ್ಪಿನಕಾಯಿ ಮೊದಲು —(ಶರಣಲೀಲಾಮೃತ, ಪು. ೨೦೫) ಚೆನ್ನಪ್ಪಕವಿ

೨೧೦ ಒಂದು ದಿನದ ನೇಮಕ್ಕೆ ಮೀಸೆ ಬೋಳಿಸಬೇಕೆ ?

೧ ಮೂರು ದಿನದ ಸಂಸಾರಕ್ಕೆ ಗಡ್ಡಮೀಸೆ ಮಾಡೆಯಾಂ
ಬೋಳಿಸಿಕೊಳ್ವಂತೆ —(೧೦-೬೬) ಧರ್ಮಾಮೃತ

೨ ಮೂರು ದಿನದ ಸಂಸಾರಕೆ ಮೀಸೆಯುಂ ಗಡ್ಡದ
—(೬-೪೬-೧೭) ಕೆರೆಯ ಪದ್ಮರಸ

೨೧೧ ಅರಿದು ಅರಿಯೋದು ಅರಸನ ಗುಣ, ಬಿಟ್ಟು ಅರಿಯೋದು ಅಳಿನ ಗುಣ

೧ ಅರಿದುನೆಂಬುವುದೇಂದು । ಅರಸು ಕೇಳುವ ಬಾಳಿಕೆ
ಅರಿದೆನೆಂದಿಹನು – ಧೊರೆಗಳಾ ಅಳಿಂದು
ಮರೆಯಾದಂತೆಂದ ! ಸರ್ವಜ್ಞ —(ಸರ್ವ, ವ. ೧೧೩೭)

೪. ಸಾಮಾಜಿಕ

[illegible] [illegible]

೧ [illegible]

—(ಸರ್ವ. ಪ. ೧[illegible]

[illegible] [illegible]

೧ [illegible] —

೨೧೫* ತಾಯಿ (ದೇವರು) ಮಾಡಿದ ಹೊಟ್ಟೆ, ಊರು ಮಾಡಿದ ಕೊಳಗ

೧ ಊರು ಮಾಡಿದ ಕೊಳಗ, ತಾಯಿ ಮಾಡಿದ ಹೊಟ್ಟೆ

—(೫-೨೧೮) ಪ್ರ. ೬[illegible]

[illegible] [illegible] ಹಾವು ಸಾಯದು

೧ [illegible] ಹಾವು ಸಾಯದು

—([illegible]) ಕರ್ನಾಟಕ ಭಾರತ ಕಥಾಮ[illegible]

೨ ಹಾವು [illegible] ಸಾಯದು

—([illegible]) ಕರ್ನಾಟಕ ಭಾರತ ಕಥಾಮ[illegible]

೩ ಹತ್ತರೊಳಗೆ ಬಿದ್ದಂಥ ಹಾವು ಸಾಯಲುಂಟೆ?

—([illegible]) ಉದ[illegible]

೪ ಹತ್ತರೊಳಗೆ ಬಿದ್ದ ಹಾವು ಸಾಯುವುದಿಲ್ಲ

—([illegible]) [illegible]

[illegible] [illegible]

೧ [illegible]
[illegible]

—ಸಂ.

೨೧೮ ತ್ರಾಸಿನ ಕೊಡ ಒಂದು ಬಿದ್ದರೆ ಇನ್ನೊಂದು ಉಳಿದೀತೆ ?

೧ ತ್ರಾಸಿನ ಕೊಡನೊಂದು ಬಿದ್ದೊಡೊಂದುಳಿದಪ್ಪುದೇ
—(೫-೧೦೭) ಧರ್ಮಾಮೃತ

೨ ತ್ರಾಸಿನ ಕೊಡನೊಂದು ಬೀೞಲೊಂದಿರ್ದಪ್ಪುದೇ
—(೧೬-೧೪) ಸೂಕ್ತಿ ಸುಧಾರ್ಣವಂ

೨೧೯ ಒಂದರ ಕೆತ್ತೆ ಇನ್ನೊಂದು ಮರಕ್ಕೆ ಅಂಟೀತೆ ?

೧ ಒರ್ವರದ ತಿಗುಡು ಮತ್ತೊಂದು ಮರನನೇಂ ಪತ್ತುಗುಮೋ
—(೧೪-೧೭) ರಾಮಚಂದ್ರ ಚರಿತ ಪುರಾಣಂ

೨೨೦ ಯಾರೂ ಇಲ್ಲದ ಊರಿಗೆ ಅಗಸರ ಮಾಳಿ (ಳಿ)ಯೇ ಮುತ್ತೈದೆ

೧ ಅರಿಯದ ಊರೊಳಗೆ ಅಗಸರ ಮಾಳಿಯೇ ಹಿರಿಯ ಮುತ್ತೈದೆ
—(೭) ಶ್ರೀ ಮೋಹನದಾಸರ ಕೃತಿಗಳು

ಹೋಲಿಸಿ : ೧ ಕಾಲೂರ್ಗೆ ಮೊಲಸುಟ್ಟೆಲ್ಲಂ ನುಗ್ಗಿಯುಬನಕ್ಕೆ
ಗುಬ್ಬಿ ಕೋಗಿಲೆ ಆಗಸೆಯು
ಮರಕ್ಕೆ ತೊನಸೆ ಮಜ್ಜುಂಬಿ ಬೇಡವಳ್ಳಿಗೆ
ಪಂದಿ ಮದ್ದಾನೆ
—(೨-೨೯) ಧರ್ಮಾಮೃತ

೨ ನಿರಸ್ತ ಪಾದವೇ ದೇಶೇ ಏರಂಡಃ
ಸ್ವದ್ರುಮಾಯತೆ ( ) ಕವಿಸಮಯ
—ಮಂ.ಆ. ರಾಮಾನುಜ ಅಯ್ಯಂಗಾರ್

೨೨೧ ಜಗಳವಿಲ್ಲದೆ ಜಾವ ಹೊತ್ತಿದ್ದರೆ ಜಿಗಣೆ ಕಚ್ಚಿದ ಹಾಗಾಗುತ್ತದೆ

೧ ಕದನವಿಲ್ಲದೆ ಹೊತ್ತು ಹೋಗದು
—(ಪ್ರ ೧೨-೩೦) ಸೋಮನಾಥ ಚಾರಿತ್ರ

೨೨೨ ಹಾದಿ ಜಗಳ ಹಣವಟ್ಟಕ್ಕೆ ಕೊಂಡರು

೧ ಹಾದಿ ಹೋಗುವ ನ್ಯಾಯ ಪಣ ಬಡ್ಡಿಯಲಿ ಕೊಂಡ ಗಾದೆ
—(ಯಕ್ಷಗಾನ: ಕೃಷ್ಣಾರ್ಜುನರ ಕಾಳಗ,
ಸಂಕಯ್ಯ ಭಾಗವತ, ೧೮೮೦)

೨ ಬೀದಿಗಲಪಕೊಂಡು ಕೊನರುವ ಮನುಳರಂದ
—(ಕೃಷ್ಣಾರ್ಜುನರ ಕಾಳಗ, ಕೋನಯ್ಯ, ೧೭೫೦)

೨೨೩ ಮಕ್ಕಳ ಮಾತಿಗೆ ತಲೆ ಹಾಕಿ ದೊಡ್ಡವರ ಮಾನ ಹೋಯ್ತು
ಮಕ್ಕಳ ಮಾತಿಗೆ ಒಕ್ಕಲು ಹೋದರು

೧ ಮಕ್ಕಳ ಕಲಹ ಒರಿಯರ ಮುಟ್ಟದಿಹುದೆ ?
—(೩೬–೧೪) ಕೌಶಿಕ ರಾಮಾಯಣ

೨೨೪ ಗುದ್ದಿದವನೂ ಬಲ್ಲ, ಗುದ್ದಿಸಿಕೊಂಡವನೂ ಬಲ್ಲ

೧ ಗುದ್ದಿದವನೆ ಬಲ್ಲ, ಗುದ್ದಿಸಿಕೊಂಡವನೆ ಬಲ್ಲ
—(೪–೧೪) ಪ್ರ,ದಾ,ಕೀ.

೨೨೫ ಅಣ್ಣತಮ್ಮಂದಿರಿಗೆ ಭಿನ್ನಭೇದವುಂಟೆ ? ಬುದ್ಧಿವಂತರಿಗೆ ಜಗಳವುಂಟೆ ?

೧ ಅಣ್ಣ ತಮ್ಮಂದಿರಿಗೆ ಭಿನ್ನಭೇದವುಂಟೆ
ಬುದ್ಧಿವಂತರಿಗೆ ಜಗಳುಂಟೆ । ನಮ್ಮ ಗೌಡರು
ಇದ್ದುತ್ತ ಉಂಟೆ ಬಡಸ್ಯಾನ
—(ನನ್ನೂರು, ಪು. ೬೭)

೨೨೬ ಇಬ್ಬರ ಜಗಳದಲ್ಲಿ ಮೂರನೆಯವನ ಮೂಗು ಹರಿಯಿತು

೧ ಆಡಿವವಳಾಡಿ ಪೋದಳ್ ನೋಡಲ್
ಬಂದವಳ್ಗೆ ಮೂಗು ಹೋಯ್ತು
—(೧೩೦) ಕರ್ಣಾಟಕ ಪಂಚ ತಂತ್ರ

೨೨೭ ಇರಿಸುವುದರಿಸಿ ಗೆರಸಿ ತಕ್ಕೊಂಡು ನೀರಿಗೆ ಹೋದರು

ಹೋಲಿಸಿ : ೧ ಕಿಚ್ಚಿಟ್ಟು ತಾನೆ ಹುಯ್ಯಲುಗೊಡುವರೆ
— (೪೭–೧೭) ಸಿಂಗಿರಾಜ ಪುರಾಣ

೨೨೮ ಒಂದು ನಾಯಿಗೆ ಹಿಟ್ಟು ಹಾಕಿ ಎರಡು ನಾಯಿ ಛೂ ಬಿಟ್ಟಹಾಗೆ

ಹೋಲಿಸಿ : ೧ ಒಂದು ಮೊಲಕ್ಕೆ ಒಂಬತ್ತು ನಾಯಿ ಕರೆದಂಗೆ

೨೨೯ ತೊಟ್ಟಿಲನ್ನೂ ತೂಗುವುದು, ಮಗುವನ್ನೂ ಜಿಗುಟುವುದು

೧ ಕೂಸಂ ಚಿವುಂಟುವೈ ತೊಟ್ಟಿಲಂ ತೂಗುವೈ
—(ನಂಬಿರ ೧೫-೧೪೧)

೨೩೦ ಅವನ ಸಾಕ್ಷಿ ಅಷ್ಟಗೋಡೆ ಮೇಲಿನ ದೀಪ

೧ ದೀವಿಗಡ್ಡಾಗೋಡೆ ಮೇಲಿಡೆ
ದೀವಿಗೆಯು ಬೆಳಗಿದುದು ಹೊರಗೊಳಗೆ
—(೬-೪೮) ಜ್ಞಾನಸಿಂಧು

೨೩೧ ಓತಿಗೆ ಬೇಲಿ ಸಾಕ್ಷಿ, ಬೇಲಿಗೆ ಓತಿ ಸಾಕ್ಷಿ

೧ ಓತಿಗೆ ಬೇಲಿ ಸಾಕ್ಷಿ
—(೫-೯) ಸೌಂದರ ಪುರಾಣ

೨೩೨ ಕಂಡದ್ದು ಕಂಡೆ(ಕಾಣೆ)ಉತ್ತಮ, ಕಂಡದ್ದು ಕಾಣೆ(ಕಂಡೆ)ಮಧ್ಯಮ,
ಕಾಣದ್ದು ಕಂಡೆ ನೀಚ

೧ ಕಂಡುದ ಪೇಳ್ವವ ಮಧ್ಯವ, ಕಾಣದ ಕಂಡೆನೆಂಬುವನತ್ಯಧಮ,
ಪೇಳದೆ ಸುಮ್ಮನಿರುಪಾತನೆ ಭೂಮಂಡಲಕತಿ ಪುಣ್ಯಪುರುಷ
—(೯–೨೧) ನಾಗಕುಮಾರ ಚರಿತ

೨೩೩ ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ

ಹೋಲಿಸಿ : ಬೇವು ತಾ ಪರಿಪಕ್ವವಾದರೆ ಹಾವು ಮೆಕ್ಕೆಕೆ ಸಾಕ್ಷಿಗಡ !
—(ಆ.ಪ, ೧೭-೭೫) ಕರ್ಣಾಟ ಭಾರತ ಕಥಾಮಂಜರಿ

೨೩೪ ಅಂಗೈ ಒಳಗಿನ ನೆಲ್ಲಿಕಾಯಿ

೧ ಕರಸ್ಥಿತಾಮಳಕಂ —(೧೫–೮೫) ಆದಿಪುರಾಣಂ

೨ ಕಯ್ಯೊಳಿರ್ದಾಮಳಕ ಫಳಮ್

—(ಕಥಾವತರಣ-೭೫) ಶಾಂತಿ ಪುರಾಣಂ

೩ ಕಯ್ಯೊಳಿರ್ದಾಮಳಕ ಫಳಮ್

—(ಕಥಾವತರಣ-೭೫) ಕರ್ಣಾಟಕ ಕಾದಂಬರಿ

೪ ಹಸ್ತತಲಾಮಲಕಂ — (೩-೬೮) ಚಂದ್ರಪ್ರಭ ಪುರಾಣಂ

೫ ಅಂಗೈನೆಲ್ಲಿ —(೪-೯೬) ಧರ್ಮನಾಥ ಪುರಾಣಂ

೬ ಅಂಗೈಯ್ಯ ನೆಲ್ಲಿಯಕಾಯಂತೆ

— (೭-೧೧೭) ರಾಮನಾಥ ಚರಿತ

೭ ಕರತಳದಾಮಳಕದಂತೆ —ಕವಿ ಚರಿತ್ರೆ, ಭಾಗ-೩

೮ ನುಡಿಯೊಳ್ ಪುದಿವರ್ಥಮಂಗೈಯ ನೆಲ್ಲಿಯಕಾಯಂತೆ
ತೋರ್ಪವೋಲ್ —ಚಿಕದೇವರಾಜ ವಂಶಾವಳಿ

೯ ಕೈನೆಲ್ಲಿಯ ಪೋಲ್

—(೫-೧೬೯) (೪-೧೦೬) ಚಿಕದೇವರಾಜ ವಂಶಾವಳಿ

೧೦ ಹವಣರಿವುದಂಗೈಯ ನೆಲ್ಲಿಯಕಾಯಿ ಪಾಂಗಿನಲಿ

—(ತಾಮಸ ಪ್ರಭು ಚರಿತಂ)

೨೩೫ ಕೈ (ಅಂಗೈ ಹುಣ್ಣಿಗೆ, ನೆಲ್ಲಿಗೆ ಅಂಗೈನೋಡಲಿಕ್ಕೆ, ಮುಂಗೈ ಕಂಕಣಕ್ಕೆ) ಕನ್ನಡಿ ಯಾಕೆ ; ಕಣ್ಣಿಗೆ ಕಾಣುವುದಕ್ಕೆ ಕನ್ನಡಿಯಾಕೆ, ಕರತಲದ ಕಜ್ಜಿಗೆ ಕನ್ನಡಿ ಯಾಕೆ ?

೧ ಮುಂಗೈಯ ಕಂಕಣಮಂ ಕನ್ನಡಿಯಿಂ ನೋಟ್ಪ ಗಾಂಪರಂತೆ

—(೯-೧೧೫ ಧರ್ಮಾಮೃತ

೨ ಮುಂಗೈಯ್ಯೊಳಿರ್ದ ಕಂಕಣಕೇಂ ಗಟಿ
ಕನ್ನಡಿಯನಱಪ ಬೆಳ್ಪನವಿರಾಗಳ್

—(೧೨-೨೩೫) ನೇಮಿನಾಥ ಪುರಾಣಂ

೩ ಮುಂಗೈಯ ಕಂಕಣಕೆ ಕಂನಡಿಯ ತೋರುವಂತೆ

—(೧೩೬) ಬಸವೇಶ್ವರ ವಚನಗಳು

೪ ಮುಂಗಯ್ಯ ಕಂಕಣಕೆ ಕನ್ನಡಿ ಬೇಡ

—(೨೩) ಉಂಬಲಿಗ ಪೆದ್ದಯ್ಯ ವಚನಗಳ

೫ ಮುಂಗೈಯ ಕಣಕೆ ಮುಕುರವೇತಕೆ?

—(೧೩-೧೪) ಬಸವ ಪುರಾ

೬ ಮುಂಗೈಯ ಕಂಕಣಕೇಕೆ ಕನ್ನಡಿ ?

—(ಕಾಂ, ೫, ಸಂ. ೫, ಪ ೧೩,) ಬಸವ ಪುರಾ

೭ ಕಯ್ಯ ಕಂಕಣಕೇಕೆ ಕನ್ನಡಿಯುಮನರಸುವರ್ ?

—(೧೦-೨೦) ಪದ್ಮರಾಜ ಪುರಾ

೮ ಕೈಯ ಕಂಕಣಕೆ ಕನ್ನಡಿಯೆ

—(೧೩) (೯೬) ಗುರುಮೂರ್ತಿ ಶಂಕರ ಶತ

೯ ಮುಂಗಯ್ಯ ಕಂಕಣಕೆ ಕನ್ನಡಿಯದೇಕೆ ?

—(೧೭-೬೦) ಸೌಂದರ ಪುರಾ

೧೦ ಅಚ್ಚಕೈಗಂಕಣಕೆ ಮುಕುರಮುಮದಕ್ಕೆಗನ್ನಡಿಯೇಕೆ ?

—(೯-೫೧-೯) ತೊರವೆ ರಾಮಾಯ

೧೧ ಉಂಗುರವನು ನೋಡುವೊಡೆ
ಕನ್ನಡಿಯು ಮಾಣಿಗೊಂಡರಸಲದೇಕೆ ?

—(೩೧-೩೮) ನೇಮಿಜಿನೇಶ ಸಂ

೧೨ ಕೈಯ ಕಂಕಣಕೆ ಕನ್ನಡಿಯು ?

— (೨೯-೮), ನೇಮಿಜಿನೇಶ ಸಂ

೧೩ ಕರದಲೊಪ್ಪುವ ಮುತ್ತಿಗೆ ಕನ್ನಡಿಯು ನೋಡಲೇಕೆ ?

—(೬) ಶ್ರೀ ವ್ಯಾಸರಾಯ ಸ್ವಾಮಿಗಳವರ ಕೃತಿಗ

೧೪ ಮುಕುರವೇ ಕೈಗೈವ ವಸ್ತುವಿಗೆ ?

—(ಅಷ್ಟ. ಸ್ಕಂ. ಸಂ-೧೩, ಪ-೩೫) ಕನ್ನಡ ಭಾಗ

೧೫ ಮುಂಗೈ ಕಂಕಣಕೇಕೆ ಕನ್ನಡಿ ?

—(ಪು. ೪೬೫-೨೫) ಸಾಕ್ಷಭಾ

೧೬ ಮುಂಗೈ ಕಂಕಣಕೆ ಕನ್ನಡಿಯೇಕೆ ?

—(೭-೪) ಪಂಚತಂತ್ರ

೧೭ ಮುಂಗೈಯ ಕಂಕಣಕೆ ಕನ್ನಡಿಯ ಹಂಗೇಕೆ ?

—(ಸಂ- ೨೩-ಪ-೨೩) ಸಿದ್ಧೇಶ್ವರ ಪುರಾಣ

೧೮ ಕಂಕಣಕ್ಕೆ ಕನ್ನಡಿಯೇ ?

—(ಸಂ. ೬೦) ಭರತೇಶ ವೈಭವ

೧೯ ಕರದ ಕಂಕಣಕೆ ಕನ್ನಡಿಯದುಂಟೆ ?

—(ಸಂ ೪-ಪ ೧೮) (ಸಂ ೫೦-ಪ ೩೩)

ಚೆನ್ನಬಸವ ಪುರಾಣ

೨೦ ಕೈಯ ಕಂಕಣಕೇಕೆ ಕನ್ನಡಿ ?

—(ಸಂ ೫೦-ಪ ೩೩) ಚೆನ್ನಬಸವ ಪುರಾಣ

೨೧ ಕೈಯೊಳಿಕ್ಕಿದಾಭರಣಕ್ಕೆ ಕನ್ನಡಿಯೇ ?

--(೧೯-೨೦) ಚೆನ್ನಬಸವ ಪುರಾಣ

೨೨ ಕರ ಕಂಕಣ ನಿಷ್ಟಕ್ಕೆ ಬೇಕೆ ಮ ಮುಕುರಂ

—(೩೭-೭೭) ವೃಷಭೇಂದ್ರ ವಿಜಯ

೨೩ ಮುಂಗಯ್ಯ ಕಂಕಣಕೇಂ ಕನ್ನಡಿಯಾವುದೋ ?

—(೨೯-೪೭) (೩೬-೨೦) ವೃಷಭೇಂದ್ರ ವಿಜಯ

೨೪ ಕನ್ನಡಿಯೇ ಮುಂಗಯ್ಯ ಕಂಕಣಕೆ

—(೩-೧೦೭) ಅನುಭವಾಮೃತ

೨೫ ಕರಕಂಕಣಕೆ ಕನ್ನಡಿಯು

—(ಪಾ, ಕಾಂ. ೧೦-೧೫)

ಶ್ರೀರಾಮಾಶ್ವಮೇಧ ಕರ್ಣಾಟಕವಚನ ಮಾಲಿಕೆ

೨೬ ಪ್ರತ್ಯಕ್ಷದ ಕಂಕಣವನೀಕ್ಷಿಪುದೆ ಮುಕುರವೇಕೆ ?

—(ಯು. ಕಾಂ. ೧೮-೩)

ಶ್ರೀರಾಮಾಶ್ವಮೇಧ ಕರ್ಣಾಟಕವಚನ ಮಾಲಿಕೆ

೨೭ ಕರುವ ಹುಣ್ಣಿಗೆ ಕನ್ನಡಿಯೇ ?
—(೭-೯೪) ಪದ್ಮಾವತಿ ಚರಿ

೨೮ ಕರದೊಳಗಿಹ ವಸ್ತುವನ್ನು ಕನ್ನಡಿಯೊಳರಸಲೇಕೆ ?
—(ಅಯೋ.ಕಾಂ, ೩೫-೫೦) ಶ್ರೀಮದ್ರಾಮಾಯಣ

೨೯ ಕಂಕಣವ ನೋಡಲ್ಕೆ ಕನ್ನಡಿಯದೇಕೆ ?
—(ಕಿ.ಕಾಂ. ೨೦-೪೦) ಶ್ರೀಮದ್ರಾಮಾಯಣ

೩೦ ಯಾಕೆ ಮಾಣಿಕ್ಯದ ಕಂಕಣಕ್ಕೆ ಕನ್ನಡಿಯು
—(ಸಂ. ೪-೨೧೩) ಮೋಹನಗಂಗ್ಯನ ಪುರಾ

೩೧ ಅಂಗೈ ಹುಣ್ಣಿಗೆ ಕನ್ನಡಿ ಬೇಕಾದುದಾ
—(ಕೊಡಗು ಗಾ

೨೩೬ ಪ್ರತ್ಯಕ್ಷವೇ ಪ್ರಮಾಣ

೧ ಪ್ರತ್ಯಕ್ಷಕೆ ಪ್ರಮಾಣವದೇಕೆ ?
—(೩-೯-೯) ತೊರವೆ ರಾಮಾಯ

೨ ಪ್ರತ್ಯಕ್ಷಕೇಕೆ ಪ್ರಮಾಣ? —(೧೧-೪೦) ಲಿಂಗರಾಜ ಪುರಾ

೩ ಪ್ರತ್ಯಕ್ಷದಿಂದೆ ಪ್ರಮಾಣಿಸಿ ನೋಡಬೇಕೆಂಬ...
ನಿಃಶಿರಸ್ಕವಾಯಿತು —(೪-೪೭) ಚೆನ್ನಬಸವಪುರಾ

೨೩೭ ಸಾವಿರ ಸುತ್ತಿಗೆ ಒಂದೇ (ಗುದ್ದು) ಕೊಕ್ಕೆ

೧ ಸಾಸಿರ ಸುತ್ತನೊಂದು ಗುಱುಱುಗಂ
—(೭-೫೭) ಸಮಯ ಪರಿ

೨೩೮ ತಾಯಿ ಮಕ್ಕಳ ನಡುವೆ ನ್ಯಾಯ ಮಾಡೋದಕ್ಕಾಗಲ್ಲ

೧ ತಾಯಿ ಮಕ್ಕಳ ನಡುವೆ ನ್ಯಾಯ ಮಾಡುವರ್‍ಯಾರೆ
—ಹಳ್ಳಿಹಾ. ಪು. (೯೩೦)

೨೩೯ ಹಾವೂ ಸಾಯಬಾರದ(ದು), ಕೋಲೂ ಮುರಿಯಬಾರದ(ದು)

೧ ಹಾವು ಸಾಯದು, ಕೋಲು ಮುರಿಯದು
—(೪೫೩) ದೋಣಿಗೆ ಮಾರಯ್ಯನ ವಚನ

೨೪೦ ಜಿಪುಣನಿಗೆ ನ್ಯಾಯ

೧ ಜಿಪುಣನ ಪಾದ —(೫-೭೭-೭) ಕ್ರಿಯಾ ಪದ್ಧತಿ

೨೪೧ ಬ್ರಾಹ್ಮಣ ಗಳಿಸಿದ್ದು ಓಂಕಾರಕ್ಕೆ, ಒಕ್ಕಲಿಗ ಗಳಿಸಿದ್ದು ದಂಡಕ್ಕೆ, ಕುರುಬ ಗಳಿಸಿದ್ದು (ಕುಂಬಳಿ, ಬುತ್ತಿಗೆ) ಬಂದಕ್ಕೆ. ಹೊಲೆಯ ಗಳಿಸಿದ್ದು ಹೆಂಡಕ್ಕೆ. ಭಟ್ಟರ ದುಡ್ಡು ಓಂಕಾರಕ್ಕೆ, ಶೆಟ್ಟಿ ದುಡ್ಡು ದಂಡಕ್ಕೆ.

೧ ಹೆಂಡಕ್ಕೆ ಹೊಲೆಯನ ಹಣ । ಕಂಡಕ್ಕೆ ಕಟುಗ ಹಣ ।
ದಂಡಕ್ಕೆ ಕ್ಷತ್ರಿ – ಹಾರುವನ ಹಣ
ಓಂಕಾರಕ್ಕೆ ಹೋಯಿತು! ಸರ್ವಜ್ಞ —ಸರ್ವ, (ಪ. ೯೧೯)

೨೪೨ ಜಂಗಮ ಜಾತಿ, ಗಂಗಳದಾಗೆ ಜೋತಿ

೧ ಜಂಗಮ ಜಾತಿ । ಗಡಿಗ್ಯಾಗ ಜೋತಿ
ಹುಟ್ಟಿದ ಹೊಟ್ಟೆಯ ಪ್ರಾಣಿ...
—ಜಾನಪದ, (ಪು. ೫೫)

೨೪೩. ಲಿಂಗಕ್ಕೆ ಹೊಲೆಯಿಲ್ಲ, ಗಂಗೆಗೆ ಎಂಜಲಿಲ್ಲ. ಗಂಗೆಗೆ ಹೊಲೆಯಿಲ್ಲ, ಜಂಗಮನಿಗೆ ಕುಲವಿಲ್ಲ

೧ ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ? ಕುಲವುಂಟೆ ಜಂಗಮವಿದ್ದೆಡೆಯಲ್ಲಿ? ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ?...
(೫೮೦)— ಬಸವೇಶ್ವರನ ವಚನಗಳು

೨೪೪ ನಡೆವ ಆಚಾರದ ಒಳಗೆ ಶಿವಾಚಾರ

೧ ಆಚಾರ ಅನಾಚಾರ ಏನುಂಟಿಲ್ಲ. ಶಿವನ ನಿಶ್ಚಯದ ಏನುಂಟಿಲ್ಲ, ಗಮನ ನಿರ್ಗಮನ ಏನುಂಟಿಲ್ಲ. ನಡೆವ ಆಚಾರದ ಒಳಗೆ ಶಿವಾಚಾರ.

[೨೭೭. ವ್ಯಾಸರಾಯ ಚಕ್ರದ ವಚನದಲ್ಲಿ ಈ ಮಾತ ಹೇಳಿದೆ]

—ತೋಂಟದ ಸಿದ್ಧೇಶ್ವರ

೨೪೫ ಆಚಾರವಿಲ್ಲದ ನಾಲಿಗೆ...

೧ ಅಶುಚಿ ಕಾಯದ್ವಾತ್ಸ ನಾಚಾರದೇ ಯಾತ್ರೆ,
—ಕೈವಲ್ಯ ಕಲ್ಪವಲ್ಲರಿ, ನಿಜಗುಣ ಶಿವಯೋ

೨೪೬ ಹಾರುವಯ್ಯನ ಸಂಗ ಹಲವಂಗ...

೧ ದೊರೆತ್ತೋರ ಸಂಗ ನೆಕ್ಕ ನೋಗಲ ರಿಂಗ
ಹಾರುವರ ಸಂಗ ಹಲವಂಗ —(ಜ.ಪದ, ಪು. ೨

೨೪೭ ಮೂರು ಕಾಸಿನವ ಸ್ವರ್ಗಕ್ಕೆ ಹೋದರೆ, ಮೂವತ್ತು ಕಾಸಿನವ ಎಲ್ಲಿ
ಹೋಗ್ತಾನೆ?

ಹೋಲಿಕೆ : ೧ ಮೂರಕ್ಕೊಯ್ವಾತ । ಹಾರುವಡೆ ಸ್ವರ್ಗಕ್ಕೆ
ನೂರೆಂಟು ಕಳೆಯ - ಕದ್ದೊಯ್ವ ಹೊಯ್ವಾತ ।
ಹಾರನೇತಕ್ಕು ? ಸರ್ವಜ್ಞ
—ಸರ್ವ (ಪ. ೮

೨೪೮ ಜಾತಿಹೀನನ ಮನೆ ಜ್ಯೋತಿ ಹೀನವೆ ?

೧ ಜಾತಿಹೀನರ ಮನೆಯ । ಜ್ಯೋತಿ ತಾ ಹೀನವೆ ?
ಜಾತಿ ವಿಜಾತಿ-ಎನಬೇಡ, ದೇವನೊಲಿ
ದಾತನೇ ಜಾತ ! ಸರ್ವಜ್ಞ —ಸರ್ವ (ಪ. ೮

೨೪೯ ಹುಟ್ಟಿದ್ದು ಹೊಲೆಯೂರು, ಬೆಳೆದದ್ದು ಹೊಲೆಯೂರು, ಇದ್ದದ್ದು
ಅ ಊರು. ಹೋಗುವುದು ಹೊಸ ಊರು

೧ ಹುಟ್ಟಿದ್ದು ಹೊಲೆಯೂರು ಬೆಳೆದದ್ದು ಹೊಲೆಯೂರು
ಇಟ್ಟದ್ದು ಎತ್ತಿದ್ದು ಕಾಡೂರಾಯಿತಲ್ಲೋ ಜೀವವೇ
—(ಉಗಾಭೋಗ-೧೫) ಪ.ಕಿ

೨೫೦ ಜಾತಿ ತಪ್ಪಿದರೂ ನೀತಿ ತಪ್ಪಬಾರದು

ಹೋಲಿಕೆ : ನೀತಿಯ ರೀತಿಯುಳ್ಳವನೇತರ ಜಾತಿಯೋ
—(೧೧) ನೀ

೧ ಪಕ್ವಾನ್ನಂ ಶಾಕ ಮಂಡಲಃ

೨೨೭ ಹಣವಿಲ್ಲದವನ ಬದುಕು ಹೆಣದ್ಹಾಂಗೆ

೧ ಹಣವಿಲ್ಲದವ ಸತ್ತ ಹೆಣ
—(೧೦-೧೨೧) ನೇಮಿಚಂದ್ರನ ಸಂಗ

೨ ಹಣದ ಕಿಂಬದ ಬಳಕೆಯಾದವನು ಹೆಣನೆ
—(೭-೩೨) ಸಾಳ್ವಭಾರ

೩ ಹಣವಿಲ್ಲದವನೊಬ್ಬ ಹೆಣಕಿಂತ ಕಡೆಯಪ್ಪುದು
—(೩೫) ಶ್ರೀ ಪಾದರಾಜ ಸ್ವಾಮಿಗಳವರ ಕೃತಿಗ

೪ ಹಣವಿಲ್ಲದ ನರ ಹೆಣಕಿಂತ ಕಡೆ —ಗುರುರಾಯ ವಿ

೨೨೮ ಹಣ ಎಂದರೆ ಹೆಣವೂ ಬಾಯಿಬಿಡುವುದು

೧ ಹಣವ ಕಂಡರೆ ಬಾಯಿ । ಹೆಣ ಬಿಡುವುದೆಂದೆನಲು
—(ಸರ್ವ, ಪ. ೧೨

೨೨೯ ಪುಣ್ಯವಂತ ಮುಟ್ಟಿದ್ದೆಲ್ಲ ಚಿನ್ನ

೧ ಪುಣ್ಯವಂತರ್ಗೆ ಮಣ್ಣುಂ ಪಿಡಿದೊಡಂ ಪೊನ್ನಕ್ಕುಂ
—ಲೀಲಾವತಿ ಪ್ರ

೨ ಪುಣ್ಯಹೀನನ ಕೈಯಲ್ಲಿದ್ದ ಹಿರಣ್ಯವೆಲ್ಲಾ ಗಿಷ್ಟ ಪರಿಯೊಳು
—(ಕಾಂ. ೫, ಸಂ. ೫೪, ಪ. ೨೦) ಬಸವಪು

೩ ಪುಣ್ಯವಂತರು ಮುಟ್ಟೆ ಮಣ್ಣು ಹೊನ್ನಹುದು
—(೭೩-೮) ಭರತೇಶ ವೈ

೪ ನಿರ್ಮಲಮತಿ ಮಣ್ಣಂ ಪಿಡಿದಡೆ ಘಳಿಲನೆ ಪೊನ್ನಪ್ಪುದಲ್ತೆ
—(೪೧-೧೭) ವೃಷಭೇಂದ್ರವಿ

೫ ಪುಣ್ಯಗಳದ ಕಾಲಕ್ಕೆ ಮಣ್ಣು ಹೊನ್ನಹುದು

ಹೋಲಿಕೆ: ಪುಣ್ಯವಿಶ್ವಾ ಕಾಲಕ್ಕೆ ಸಾಹಸ ಪುರುಷವಪ್ಪುದು ತಾ
ಮಣ್ಣು ಹೊನ್ನಪ್ಪುದು —ಪ್ರಭುದೇವರ

೨೨೦ ಪುಣ್ಯವಿಲ್ಲದವರ ಕೈಯಲ್ಲಿ ಬರುವ ಹಣ

೧ ಮಾಡಿದ ಕರ್ಮ ಬರುವ ಕಲ್ಪದಂತೆ
—(೬-೩೭) ಧರ್ಮಾಮೃತ (?)

೨ ಸಿದ್ಧಿಗೆ ಬಂದ ಬಡವನ ಹಣ

೩ ಮಾಡಿದ ಕರ್ಮ ಬರುವ ಕಲ್ಪದಂತೆ
—(೬-೩೭) ಪಾರ್ಥಪರಾಕ್ರಮ ಕಾವ್ಯ

೪ ಪುಣ್ಯವಂತರಿಗೆ ದೊರಕಿದ ಬರುವ ಹಣ
—(೬-೯೩) ಪದ್ಮಾವತಿ ಚರಿತೆ

೫ ಮಾಡಿದ ಕರ್ಮ ಬರುವ ಕಲ್ಪದಂತೆ ಹಾದಿ ಗಾದೆಯ
ಮಾಡಿದ ಕರ್ಮವು —(೨೪-೫೩) ಮಹಲಿಂಗರಂಗ

೨೨೧ ಕೇಡು ಬರುವ ಕಾಲಕ್ಕೆ ಬುದ್ಧಿಲ್ಲ

೨೨೨ ಕೇಡು ಬರುವ ಕಾಲಕ್ಕೆ ವಿಪರೀತ ಬುದ್ಧಿ

೧ ಬರುವ ಕಾಲದ ಪುಣ್ಯವಂತರು ಸುಖಿಸುವರು
—ಪರ, ಕಾಂ, ಸಂ. ೨: ಪ. ೭೩ (ರಾಮಾಯಣ ದರ್ಶನ)

೨೨೩ ಬರೆದ ಭಾಗ್ಯವನ್ನು ಬಾಗಿಸಲು ತಪ್ಪೀತೆ?

ಹೋಲಿಸಿ: ಪ್ರಾಪ್ತವ್ಯಮರ್ಥಂ ಲಭತೇ ಮನುಷ್ಯಃ
ದೇವೋಽಪಿ ತಂ ಲಂಘಯಿತುಂ ನ ಶಕ್ತಃ —(ಸಂ)

೨೨೪ ಬರಿ ಚೀಲಕ್ಕೆ ಕೈ ಹಾಕಿದರೆ ದುಡ್ಡು ಸಿಕ್ಕೀತ್ತೆ?

೧ ಬರಿದು ಚೀಲದೊಳು ಕೈ ಇಕ್ಕಿದೇನಹುದು
—(೩-೨೦-೨) ಕೈವಲ್ಯ ಕಲ್ಪವಲ್ಲರಿ

೨೨೫ ಮಾಡದೇವ ಕೊಟ್ಟರೆ ಮನೆಯಲ್ಲಿ ತಂದುಕೊಡ್ಡ.
ಮಾಡದೇವ ಕೊಟ್ಟರೆ ಮಾಡಲಿಕ್ಕೆ ಏನು

೧ [illegible]
[illegible] | [illegible]
[illegible] ॥ —([illegible]

[illegible] [illegible] ?

೨ [illegible] ? [illegible]
[illegible] ?

—(೯೧) ದೇವರ [illegible]

[illegible] ಹುಟ್ಟಿಸಿದ ದೇವರು ಹುಲ್ಲು ಮೇಯಿಸ್ತಾನ್ಯೆ ?

೧ ಹುಟ್ಟಿಸಿದ ದೇವ ಹುಲ್ಲು ಮೇಯಿಸುವನಲ್ಲ

—ಹ.ಕೀ.ತ, [illegible]

೨ ಹುಟ್ಟಿಸಿದ ದೇವ ಹುಲ್ಲು ಮೇಯಿಸುವನೆ?

—ಹ.ಕೀ.ತ, [illegible]

ಹೋಲಿಸಿ : ಸೃಷ್ಟಿ ಮಾಡಿದ ದೇವ ಸ್ಥಿತಿ ಮಾಡಲರಿಯನೆ

—([illegible]–೧೪, [illegible]

ಹುಟ್ಟಿಸಿದ ದೇವರು ರಕ್ಷಿಸುವನಲ್ಲದೆ ಮಾಣ[illegible]

—(೧೦೭) ಸ್ವತಂತ್ರ ಸಿದ್ಧಲಿಂಗೇಶ್ವ[illegible]

[illegible] ಹುಟ್ಟಿದ ಹುಲ್ಲಿಗೆ ಹುಟ್ಟಿದ್ದಾಂಗ [illegible]

೧ ಹುಟ್ಟಿದ ಹುಲ್ಲಿಗೆ ಹುಟ್ಟಿದಂಗೆ [illegible]

—[illegible]

[illegible] [illegible] ಕಾಲು [illegible]

—([illegible]) ವೃಷಭಲಿಂಗ [illegible]

[illegible] [illegible] [illegible] [illegible] [illegible] [illegible]
[illegible]

೨೨೦ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ

೧ [illegible] ಬಯಸಿದ [illegible] ಕಿತ್ತುದು ಮೇಲೆ
[illegible] ಬಂದು ಕೊಡುವಾಗ | ಕೊಳ | ಎಲೆಗಾಯೆ
ಕೈ ತುತ್ತು ಬಾಯಿಗೆ ಬಾರದಾಗ | ಕೊಳ್ಳೆಲ್ಲ ಕೊಡೆ | [illegible]
—(ಕನ್ನಡ ಜಾ. [illegible]

೨ ಕೈಗೆ ಬಂದ ತುತ್ತು ಬಾಯಿಗೆ ಬಾರದು
—(೨೦ನೆಯ ಪ್ರಕರಣ, [illegible]

ಹೋಲಿಕೆ : [illegible]
[illegible]
—([illegible]

೨೨೧ [illegible] ಬಿಡಬೇಡ, ಬಾರದ್ದು ಬಯಸಬೇಡ

೧ [illegible]
—(೩೨–೭೭) [illegible]

೨ [illegible]
— (೦೭–೪೯) [illegible]

೩ [illegible]
—(ಸಂ ೫ : ೧. [illegible] ಪ್ರಕರಣ, [illegible]

೪ [illegible] ಬಿಡಬೇಡ [illegible], ಇಲ್ಲದಾಗ ಬಯಸಬೇಡ [illegible]

೨೨೨ ಬರುವಾಗ ಹೊತ್ತುಕೊಂಡು ಬರಲ್ಲ, ಹೋಗುವಾಗ ತಕ್ಕೊಂಡು [illegible]
ಹೋಗಲ್ಲ

೧ ಬರುವಾಗ ತರಲಿಲ್ಲ ಹೋಗುವಾಗ ಕೊಂಡೊಯ್ಯಲಿಲ್ಲ [illegible]
ಸುಮ್ಮನೆ [illegible] | [illegible]
—([illegible],

೧ ಪೊನ್ನುಳ್ಳವನೇ ಕುಲೀನಂ
ಚೆನ್ನಂ ಕಲಿ ಸತ್ಯದಾನಿಯೆನಿಸುಗು ಮದಱಿಂ ॥
ದಿನ್ನುಂ ಪೊನ್ನನೆ ಪಡೆವುದು
ಪೊನ್ನಿಂ ಸಮನಿಸುಗು ಮಲ್ತೆ ಪೆಣ್ಣುಂ ಮಣ್ಣುಂ ॥
—(ಶಬ್ದಮಣಿದರ್ಪಣದ ಟೀಕೆಯ ಸೂತ್ರದ ಉದಾಹರಣ

೨೮೪ ಉಂಟಾದ ಕಾಲಕ್ಕೆ ಊರೆಲ್ಲ ನೆಂಟರು

೧ ಉಂಟು ಕಾಲಕೆ ನೆಂಟರಿಪ್ಪರು ಬಂಟರಾಗಿ ಕಾಯ್ವರು
—(ಹ. ಕೀ. ತ. ಕೀ. ೪೮

೨ ಉಂಟಾದ ಕಾಲಕ್ಕೆ ನೆಂಟರು ಇಪ್ಪರು ಬಂಟರಾಗಿ ಬಾಗಿಲ
ಕಾವರು —ಶ್ರೀ ವಾದಿರಾಜ ಸ್ವಾಮಿಗಳ ಕೃತಿಗ

೨೮೫ ....ಬಕ್ಕಳ ಹೊನ್ನಿದ್ದರೆ ಊರೆಲ್ಲ ನೆಂಟರು

೧ ಬಕ್ಕೊಳಗ ಹೊನ್ನಿದ್ದ ವೇಳೆ ಊರೆಲ್ಲ ನೆಂಟರು,
ಜನವೆಲ್ಲ ಬಂಟರು —(ಇಂ ಜಾಪ, ೧೨೨-೮

೨೮೬ ಅದುವಾಗ ಇದ್ದ್ವಾಗ ಊರೆಲ್ಲ ನೆಂಟರು

೧ ಅಪ್ಪಾಗ ಇಕ್ಕುವಾಗ ಅಪ್ಪನ್ನೆಲ್ಲ ನೆಂಟಾರು
ಅಪ್ಪನೇಯು ಸೊಪ್ಪು ಮೆಲುವಾಗ । ನೆಂಟಾರು
ಇಪ್ಪಾರು ಗುರುತ ಮರೆತಾರು —(ಜಗೀ. ಪು.

೨೮೭ ಗಂಟಿದ್ದರೆ ನೆಂಟರ ಕೊರತೆ ಇಲ್ಲ, ಗಂಟರು ಬರಿದಾಯ್ತು,
ನಂಟರು ಇಲ್ಲವಾ

೧ ನಂಟರು ಬಂಟರು ಹಣವಿನ ಗಂಟಿರುವತನಕ ಹೇಳಿದಂತವಿ
ನಡೆ
ಗಂಟೆಲ್ಲ ತೀರ್ದ ಮರುದಿನ ನಂಟರೆ ಗಂಟಲಿಗೆ ಗಾಣ
—(ಕರ್ನಾಟಕ ಕಾವ್ಯಮಂ

ಹೋಲಿಸಿ : ೧ ನಡೆವಾಗ ನುಡಿವಾಗ ಗಿಡವೆಲ್ಲ ನೆಂಟರು (ಪ್ರವಾ)

೨ ಒಡವೆ ಕೈಯೊಳಗಿರೆ ಗಿಡುವೆಲ್ಲ ನೆಂಟರು,
ಅಡವಿಯೋ ಮನೆ —(೬-೧೮) ಪದ್ಮಾವತಿ ಚರಿತೆ

೩ ಅನುವಾಗಿ ಇದ್ದರೆ ಅಪ್ಪ ನಮ್ಮವರೆಲ್ಲ,
ಅನುವ ತಪ್ಪಿದರಿನ್ನು ಆರು ನಮ್ಮವರಿಲ್ಲ
—(ಶ್ರೀ ಗೋಪಾಲದಾಸರ ಕೃತಿಗಳು)

೨೮೮ ದುಡ್ಡಿದ್ದವನೇ ದೊಡ್ಡಪ್ಪ

೧ ದುಡ್ಡು ದೊಡ್ಡ ಪ್ಪೆದು ಗಂಡರಾಗಲು ಬಹುದೆ
—ಕನ್ನಡ ಜಾ. ಪ್ರ. ೩೪೭

೨೮೯ ಬೆಲ್ಲವಿದ್ದಲ್ಲಿ ನೊಣ, ಕೆಂಡವಿದ್ದಲ್ಲಿ ಕಾವು

೧ ಬೆಲ್ಲದ ಚಾಂದದ ಸುತ್ತಂ ಬೆಲ್ಲಾಡದೆ ನೊಣಗಳಾದರೇಂ
ಪಾನ್ಬಪ್ಪವೇ (೪೩) —(ಕನ್ನಡ ನೀತಿ ಸಾರ)

೨೯೦ ಮಾಡುವವರಿದ್ದರೆ ನೋಡು ನನ್ನ ಬಿನ್ನಾಣಿ ಬೆಡಗ।

೧ ನೋಡುವವರಿಲ್ಲದೆ ಮಾಡಿದ ದೇವಾರಿಯ
—(೨೫-೨೦೫) ತ್ರಿಷಷ್ಟಿ ಪುರಾತನರ ಚಾರಿತ್ರಂ

೨೯೧ ಹನಿಗೂಡಿದರೆ ಹಳ್ಳ, ತೆನೆಗೂಡಿದರೆ (ಬೆಟ್ಟ) ರಾಶಿ, ಮನೆಗೂಡಿದರೆ ರಾಗ

೧ ಪನಿವಂ ಪಳ್ಳ ಸಮುದ್ರ ಪ್ಪೈ
—(೭) ಸೋಮೇಶ್ವರ ಶತಕ

೨ ಹನಿಗೂಡಿ ಹಳ್ಳ. ತೆನೆಗೂಡಿ ಬೆಟ್ಟ
—(ಕಾಚುಕಿಸೇವಾ ಸಂಧಿ-೨೭) ಭರತೇಶ ವೈಭವ

೩ ಒಂದೊಂದು ಹನಿಯಿಂದು । ಸಿಂಧುವಾಗುವ ಮಾಡುವಂತೆ
—(ಸರ್ವ. ಪ. ೩೬೨)

೪ ಹನಿಗೂಡಿ ಹಳ್ಳವಾಗಿ ಅಮೇಲೆ ನದಿಯಾಗಿ ಹರಿಯುವ ರೀತಿ ।
—(೧೩) ಮಹಾತ್ಮ ಸಂದಾನದ

೨೯೨ ಎಣ್ಣೆಗೆ ಬತ್ತಿಗೆ ನೇರ

೧ ಬತ್ತಿಗೆಣ್ಣೆಗೆ ಕೂಡಿ ಸರಿಯಾಯಿತು
—(೬–೪೬–೫) ತೊರವೆ ರಾಮಾಯಣ

೨೯೩ ಅನ್ಯಾಯದಲ್ಲಿ ಗಳಿಸಿದ್ದು ಅಪನ್ಯಾಯದಲ್ಲಿ ಹೋಯಿತು

೧ ಅನ್ಯಾಯಾರ್ಜಿತಂ ವಿತ್ತಂ ದಶವರ್ಷಾಣಿ ತಿಷ್ಠತಿ—(ಸಂ)

೨ ಅನ್ಯಾಯದೊಳ್ಪಡೆದರ್ಥಂ ನಡು ನೀರೊಳಗಿಕ್ಕಿದೊಡಂ
ಕಿಡುಗುಂ —(ಆ ೫ ಪದ್ಯ ೧೮೮ ರ ಅನಂತರ) ಧರ್ಮಾಮೃತ

೨೯೪ ಹಾದರಕ್ಕೆ ಹುಟ್ಟಿತು, ಗೋಡೆ ಬಿದ್ದು ಸತ್ತಿತು

೧ ಹಾದರದೊಳ್ಪುಟ್ಟಿ ಕಳವಿನೊಳ್ ಸತ್ತಂ
—(೧೧–೫೧) ಅನಂತ ಪುರಾಣಂ

೨೯೫ ತಾಗಿ ಬಾಗದ ಮುನ್ನ ಬಾಗಿ ನಡೆವುದು ಲೇಸು

೧ ತಾಗುವಾ ಮುನ್ನವೇ ಬಾಗುವಾ ತಲೆ ಲೇಸು
ತಾಗಿ ತಲೆಯೊಡೆದು–ಕೆಲಸಾದ ಬಳಿಕದರ
ಭೋಗವೇನೆಂದ ? ಸರ್ವಜ್ಞ —(ಸರ್ವ. ಪ ೧೪೧೪)

೨೯೬ ಹೆಚ್ಚದೆ ಹಿಗ್ಗದೆ ಇದ್ದರೆ ಲೋಕಕ್ಕೆ ಅಚ್ಚುಮೆಚ್ಚು

೧ ಎಚ್ಚರಿಕೆ ಭಾಗ್ಯ ಯಾರಿಗೂ ಸ್ಥಿರವಿಲ್ಲ ನಿಶ್ಚಯವೆಚ್ಚರಿಕೆ
ಹೆಚ್ಚದೆ ಹಿಗ್ಗದೆ ಇದ್ದರೆ ಲೋಕಕ್ಕೆ ಮೆಚ್ಚು ಕೇಳೆಚ್ಚರಿಕೆ
—(ಹ. ಕೀ. ತ. ಕೀ. ೪೫೩)

೨೯೭ ಆನೆ ನುಂಗಿದ ಬೇಲದ ಹಣ್ಣಿನ ಹಾಗೆ

೧ ಸಮಾಯಾತಿ ಯದಾ ಲಕ್ಷ್ಮೀರ್ನಾರಿಕೇಲ ಫಲಾಂಬುವತ್
ವಿನಿರ್ಯಾತಿ ಯದಾ ಲಕ್ಷ್ಮೀರ್ಗಜ ಭುಕ್ತ ಕಪಿತ್ಥವತ್ —(ಸು)

೨ ಕರಿಯುಂಡ ಕಪಿತ್ಥವಿರಲುಂಟು ನೋಡುವರೆ ಒಳಗೆ ತಿರುಳಿಲ್ಲ
ವೆಂಬ ಮಾಳ್ಕೆಯಿಂ —(ವಾಗದ್ವೈತ ನಿರಸನ ತ್ರಿವಿಧಿ)

೩ ಗಜಭುಕ್ತ ಕಪಿತ್ಥದ ಪೊಲ್ —(೧೦–೬೩) ಶೃಂಗಾರಸಾರ

೪ ಕರಿಯುಂಡ ಬೇಲದ ಪಣ್ಣು
— (೧೧–೫೬) ನಾಗಕುಮಾರ ಚರಿತಂ

೫ ಕರಿಯುಂಡ ಬೆಳಗಾಯಿ —ಸೊಣ್ಣ ಭೈರೇಗೌಡನ ಚರಿತ್ರೆ

೬ ಗಜಭುಕ್ತ ಕಪಿತ್ಥ ! —(೧೪–೩೩) ಅಖಂಡೇಶ್ವರ ವಚನ

೭ ಕರಿಯುಂಡ ಬೆಳವಲ ಹಣ್ಣಿನ ತಿಳಲೆಂದು ಉಳಿವುದೇನೈ
—ಶ್ರೀ ಪ್ರಸನ್ನ ವೆಂಕಟದಾಸರ ಕೃತಿಗಳು

೨೯೮ ಎಣ್ಣೆಯಿರುವತನಕ ದೀಪದ ಪ್ರಕಾಶ, ಪುಣ್ಯವಿರುವ ತನಕ ಮನೆಯ ಪ್ರಕಾಶ

೧ ಎಣ್ಣೆಯಿರುವ ತನಕ ದೀವಿಗೆಯುರಿವವೊಲು ಪೂರ್ವ
ಪುಣ್ಯವಿಹ ಪರಿಯಂತ ಸಿರಿಯಿರ್ಪುದು
—(೨–೭–೧) ಕೈವಲ್ಯ ಕಲ್ಪವಲ್ಲರಿ

೨೯೯ ಕಟ್ಟಿ ಕಲ್ಲು ಸಡಲಿದ ಹಾಗೆ

೧ ಕಟ್ಟಿ ಕಲ್ಲದು ಕಳಚಿದಂದದಿ ಕೆಟ್ಟುಹೋಹುದು
—(ಸಂ ೫ : ೨೯) ಉಪಶಮ ಪ್ರಕರಣ,
ಕನ್ನಡ ಯೋಗವಾಸಿಷ್ಠ

೩೦೦ ಹೊಳೆ ಬಂದು ಹೊಳೆ ತೆಗೆದ ಹಾಗೆ

೧ ಯಾಕಾ ಎಲೆಹೆಣ್ಣೆ ತೂಕದಿಂದಾಡೀಯೆ
ಹೊಳೆ ಬಂದು ಹೊಳೆ ತೆಗೆದಾಗೆ—(ಸಂಪೀಗೆ ಅರಳೀವೆ ಪು.೯೦)

೨ ಹರೆವುದಾಕ್ಷಣ ತುಂಬುವುದು ಗೋಚರಿಪುದು, ಸಿರಿ ನಿತ್ಯವೇನು
—(ನಳ ಚರಿತ್ರೆ)

೩೦೧ ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರಿಯಲ್ಲಿ ಕೊಡೆ ಹಿಡಿಸಿದ

೧ ಇರುಳು ಸತ್ತಿಗೆಯ ಹಿಡಿಸಿಕೊಂಡಂತೆ
—(೨–೨೨೨) ಬಸವೇಶ್ವರರ ವಚನಗಳು

೨ ಎಡೆಯು ನರಸಾದೊಡೆ ಕೊಡೆಯು ಕಾವು ಮೇಗಾಬುದು
—(೨-೧೨೪) ಕುಮುದೇಂದು ರಾಮಾಯಣ

೩೦೨ ಕಪಿಗೆ ಹೆಂಡ ಕುಡಿಸಿ ಚೇಳಿನಿಂದ ಕಡಿಸಿದಂತೆ

೧ ಮರ್ಕಟಸ್ಯ ಸುರಾಪಾನಂ ತಸ್ಯ ವೃಶ್ಚಿಕ ದಂಶನಮ್
ತನ್ಮಧ್ಯೇ ಭೂತ ಸಂಚಾರೋ ಯದ್ವಾ ತದ್ವಾ ಭವಿಷ್ಯತಿ॥ (ಸು)

೨ ಮೊದಲೊಳ್ ಚಪಲಂ ಮರ್ಕಟನದು ವೃಶ್ಚಿಕದಷ್ಟನೆಂಬವೊಲ್
ನವವಯದುನ್ಮದಂ —(೧೯೨) ಕಾವ್ಯಾವಲೋಕನ

೩ ಗ್ರಹ ಹೊಡೆದ ಕೋತಿಯಂತೆ —(೧-೨೩) ಜೇರಮ ಕಾವ

೪ ಸುರೆಯ ಮರ್ಕಟ ಸೇವಿಸಿದ ಪರಿ
—(೧೧-೮೮) ನಾಗಕುಮಾರ ಚರಿತ

೫ ಹಿರಿದಪ್ಪ ದೊರೆತನ ದುಶ್ಚರಿತರಿಗೆ ಬರೆ ಸುರೆಯ ಮರ್ಕಟ
ಸೇವಿಸಿದ ಪರಿಯುಪ್ಪುದು (೯೫-೨೮) — ನಾಗಕುಮಾರ ಚರಿತ

೬ ಮೊದಲೆ ಮರ್ಕಟ ಮೇಲೆ ಮದ್ಯದ। ಮದವದೆಯ ಹಿಡಿದಿರಲ್
ವೃಶ್ಚಿಕ ತುದಿಯ ಕಾಲನು ಕಚ್ಚಿದರೆ ಕುಣಿದಾಡುವಂದದಲಿ
—(ಅಧ್ಯಾ ೧-೩೬) ಅನುಭವಾಮೃ

೩೦೩ ನೀಚನಿಗೆ ಸಂಪತ್ತು ಬಂದರೆ ನೀಚತನ ಬಿಟ್ಟಾನೆ ?

೧ ನೀಚನಿಗೆ ಸಂಪತ್ತು ಬಂದರೆ ನೀಚತನವನು ಬಿಡುವನೇ
—(ಪು. ದಾ

೩೦೪ ಪಲ್ಲಕ್ಕಿಯ ಮೇಲೆ ಕುಳಿತು ಕಲ್ಲು ಆರಿಸಿದನಂತೆ

ಹೋಲಿಸಿ ; ೧ ಆನೆಯನೇರ್ದಲ್ಲಿಯ ಬೇರಂಟಿಯಾಯ್ತಲ್ಲ
—(೬-೧೨೮) ಧರ್ಮಾವ

೨ ಆನೆಯ ನೇರ್ದವನು ಸ್ವಲ್ಪ ಕತ್ತೆಯ ನೇರ್ದ
—(೨೫-೯೯) ಜ್ಞಾನಸಿ

೩೦೫ ನೆಲಕ್ಕೆ ಬಿದ್ದ ಚೆಂಡು ಪುಟನೆಗೆಯುತ್ತೆ

೧ ಪತಿತೋಽಪಿ ಕರಾಘಾತೈರು ತ್ಪತತ್ಯೇವ ಕಂದುಕಃ ।
ಪ್ರಾಯೇಣ ಹಿ ಸುವೃತ್ತಾ ನಾಮ ಸ್ಥಾಯಿನ್ಯೋ ವಿಪತ್ತಯಃ॥
—(ಸು)

೩೦೬ ಮೆಣಸು ಹುಳಿತರೆ ಜೋಳಕ್ಕೆ ಕಡಿಮೆಯೆ ?

೧ ಮೆಣಸು ಹುಳಿತಡೆ ಜೋಳದಿಂ ಕುಂದೆ ?
—(೧೨-೧೯) ಹರಿಶ್ಚಂದ್ರ ಕಾವ್ಯ

೩೦೭ ಹುಲಿ ಬಡವಾದರೆ ಹುಲ್ಲು ಮೇಯುತ್ತೇ ?

೧ ಕಂಠೀರವಂ ಪುಲ್ಮೇವುದೇ?
—(೧೦-೧೧) ಬಸವ ಪುರಾಣ

೩೦೮ ಹುಲಿಮರಿ ಹುಲ್ಲು ಮೇಯುತ್ತೇ?

೧ ಹುಲ್ಲಂ ಹುಲಿಮರಿ ಮೇವುದೆಲ್ಲಾದರು ಪೊಳವೆ ?
—(೮೦) ಕನ್ನಡ ನೀತಿ ಸಾರವು

೩೦೯ ಬಡವನಾದರೆ ಆತ್ಮ ಬಡವನೇ ?

೧ ಬಡವ ತಾನಾದರೆ ಆತ್ಮ ತಾ ಬಡವನೇ ? —(ಪ್ರದಾ)

೩೧೦ ಕಾಡಿನಲ್ಲಿ ಹೊಲ ಇಲ್ಲ, ಊರಿನಲ್ಲಿ ಮನೆಯಿಲ್ಲ

೧ ಅಡಿವ್ಯಾಗ ಹೊಲನಿಲ್ಲ, ಊರಾಗ ಮನಿಯಿಲ್ಲ
—(ಜಾಗೀ, ಪು-೨೮೧)

೩೧೧ ಸಿಕ್ಕದ್ದೇ ಶಿವರಾತ್ರಿ, ಬಂದದ್ದೇ ಭಾರತ ಹುಣ್ಣಿಮೆ, ಹೋದದ್ದೇ ಹೋಳಿ ಹುಣ್ಣಿಮೆ

೧ ಸಿಕ್ಯಾಗ ಶಿವರಾತ್ರಿ ಇದ್ದಾಗ ಯುಗಾದಿ
ಬಂದಾಗ ಭಾರತ ಹುಣ್ಣಿಮೆ । ಕೋ । ಮಾತಾಡಿ ।
ದ್ರೌಪದಿ ಅರಮನಿಗೆ ಬಂದಳು । ಕೋಲೆನ್ನ ಕೋಲ ।
—(ಕನ್ನಡ ಜಾ, ಪು-೨೮೩)

೩೧೨ ದರಿದ್ರಕ್ಕೆ ಮಕ್ಕಳು ಹೆಚ್ಚು, ದಾರಿದ್ರ್ಯಕ್ಕೆ ಕೂರೆ ಹೆಚ್ಚು

೧ ದರಿದ್ರಕ್ಕೆ ಕೂರೆ ಹೆಚ್ಚಿದ ಠಾಗೆ

—(೭) ಮುದ್ರಾಮಂಜೂಷವು

೩೧೩ ಮಳೆ ಬರೋ ಹಾಗಿದೆ, ಮನೆ ನೆನೆಯೋ ಹಾಗಿದೆ, ದಿನವಾದ ಬಸುರಿ ಹೆರುವ ಹಾಗಿದೆ

ಹೋಲಿಸಿ : ೧ ವೃದ್ಧೋಽಂಧಃ ಪತಿರೇಷ ಮಂಚಕಗತಃ
ಸ್ಥೂಣಾವಶೇಷಂ ಗೃಹಮ್
ಕಾಲೇಽಭ್ಯರ್ಣ ಜಲಾಗಮಃ ಕುಶಲಿನೀ
ವತ್ಸಸ್ಯ ವಾರ್ತಾಪಿನ
ಯತ್ನಾತ್ಸಂಚಿತ ತೈಲಬಿಂದು ಘಟಿಕಾ
ಭಗ್ನೇತಿ ಪರ್ಯಾಕುಲಾ
ದೃಷ್ಟ್ವಾಗರ್ಭಭರಾಲಸಾಂ ನಿಜವಧೂಂ
ಶ್ವಶ್ರೂಶ್ಚಿರಂ ರೋದಿತಿ —(ಸಂ)

೩೧೪ ಜೋಗಿ ಜೋಗಿ (ಸನ್ಯಾಸಿಗೆ ತೆಕ್ಕೆ ಬಿದ್ದರೆ) ತಟ್ಟಿದರೆ ಮೈಯೆಲ್ಲ ಬೂದಿ

೧ ಬೋಧ ಬ್ಯೋರ್ಧರ ನಪ್ಪಿದೊಡೆ ಬೂದಿ ಬೂದಿಯೆ
ನಾಱಿತ್ತು —(೪-೮೯) ಸಮಯ ಪರೀಕ್ಷೆ

೩೧೫ ತನಗೇ ಇಲ್ಲದ ದೇವರು ತಮ್ಮಡಿಗೆ ವರ ಕೊಟ್ಟೀತೆ

೧ ತನಗಿಲ್ಲದ ದೆಯ್ವಂ ಮತ್ತಿನ ಮಂಗಿತ್ತಪುದೆ ವರವ ?

—(೮-೨೪೪) ಸಮಯ ಪರೀಕ್ಷೆ

೩೧೬ ಬಡವನ ಮಡದಿಗೆ ಬೆಡಗೇಕೆ ?

೧ ಕಾಳೀಗೆ ಕಪ್ಪೇಕೆ ಬೋಳೀಗೆ ತುರುಬೇಕೆ ?
ಬಡವನ ಮಡದೀಗೆ ಬೆಡಗೇಕೆ

—(ಹಳ್ಳಿ ಹಾ, ಪು. ೧೩೯

೩೧೭ ಬಡವನಿಗೆ ನಾಡ ಮಾತ್ಯಾಕೆ ?

೧ ಅಡಿಗಟ್ಟಣವೇಕೆ ? । ಬೋಡಂಗೆ ಕಟ್ಟೇಕೆ ? ।
ಕೋಡಗನ ಕೈಯ-ಬಳೆಯೇಕೆ ? ಬಡವಂಗೆ
ನಾಡ ಮಾತೇಕೆ ಸರ್ವಜ್ಞ —(ಸರ್ವ, ಪ-೧೨೪೫)

೩೧೮ ಬಡವಿ ಆಡಿದ ಮಾತು ನುಡಿ ನುಡಿಗೂ ಬೇಸರ

೧ ಬಡವಿ ಆಡಿದ ಮಾತು ನುಡಿನುಡಿಗೆ ಬ್ಯಾಸರ
ಒಡವಿ ಇಟ್ಟವ್ವ ಬನಬನದು-ಹೇಳಿದರ
ನುಡಿಗೆ ಬಾಯಿ ಬಿಡತಾರ —(ಜಾಗೀ, ಪು-೭೦)

೩೧೯ ಬಡವನಿಗೇಕೆ ಆನೆ ಮೂದೇವಿ ?

೧ ಬಡವಗೇಕಟಾನೆ ?
—(ಕಿ. ಕಾಂ, ಸಂ. ೨ : ಪ. ೧೦) ರಾಮಾಯಣ ಸಂಗ್ರಹ

೩೨೦ ದೊಡ್ಡವನಾಡಿದ್ದೇ ಆಟ—

೧ ದೊಡ್ಡವರೆಂತಾಡಿದಂತೆ ಸಲುವುದು
—(ನಮಿರಾಜ ವಿನಯ ಸಂಧಿ-೧೦೬) ಭರತೇಶವೈಭವ

೩೨೧ ಚಿನ್ನದ ಕತ್ತಿ ಅಂತ ಕೊರಳು ಕೊಯ್ದು ಕೊಳ್ಳೋಕಾಗುತ್ಯೇ ?

೧ ಚಿನ್ನದ ಕತ್ತಿಯಲ್ಲಿ ತಲೆಯ ಹೊಯಿದರೆ ಸಾಯದಿಪ್ಪರೆ ?
—( ) ಮಹಾದೇವಿಯಕ್ಕನ ವಚನಗಳು

೨ ಪೊನ್ನಸುರಿಗೆಯೆನೆ ಮೂಗನರಿಸಿ ಕೊಳ್ವುದು ಚದುರೇ ?
—(೫-೬೪) ಶಾಂತೀಶ್ವರ ಪುರಾಣಂ

೩೨೨ ಚಿನ್ನದ ಕಠಾರಿ ಅಂತ ಹೊಟ್ಟೆ ತಿವಿದುಕೊಳ್ತಾರ್ಯೇ ?

೧ ಮಿಸುನಿಯ ಅಲಗೆಂದು ಬಸುರೊಳಗಿಡುವೋರೆ ?
ಹೆಳವನಕಟ್ಟೆ ಗಿರಿಯಮ್ಮ

೩೨೩ ನಾ ಬಲ್ಲಿದ ಅಂತ ಬಡವರ ಬಾಯಿ ಹೊಡೀಬಾರದು

೧ ಬಲ್ಲಿದ ನಾನೆಂದು ಬಡವರ ಬಾಯನ್ನು ಹೊಯ್ಯಬಾರದು
—(ಪ್ರವಾ)

೩೨೪ ದೊಡ್ಡವ ಹಗೆ ತೆಗೆಯುವ ಹೊತ್ತಿಗೆ ಬಡವನ ಜೀವ ಹೋಯಿತು

೧ ಉಳ್ಳವರು ಹಗೆಯುವ ತೆಗೆವನ್ನಕ್ಕರ ಇಲ್ಲದವರ ಹರಣ ಹೋಯಿತ್ತು —( ) ಪ್ರಭುದೇವರು

೨ ಬಲ್ಲಿದನ ಹಗೆ ತೆಗೆವನ್ನಬರ ಬಡವನ ಹರಣ ಹೋದ ತೆರನಂತೆ —(೧೭) ಮಹಾದೇವಿಯಕ್ಕನ ವಚನಗಳು

೩೨೫ ಬರಿಕೆರೆಗೆ ಬಾಯಾರಿದ ಹಾಗೆ

೧ ನೀರಡಸಿ ಬರಿಗೆಱೆಯ ಪೊಕ್ಕಂತೆ

—(೨-೧೨೪) ಸೋಮನಾಥ ಚರಿತ್ರೆ

ಮೊಲದ ಕಣ್ಣೀರು ಬೇಟೆಗಾರನಿಗೆ ಮುದ್ದೇ ?

ಹೋಲಿಸಿ ; ಜಿಟ್ಟದ ನವಿಲಿಗೆ ಕಣ್ಣೀರು ಬಂದರೆ ಬೇಟೆಗಾರನಿಗೆ ದಯೆ ಹುಟ್ಟೀತೆ ? —(ಪುದಾ)

೩೨೬ ಅಪಮಾನದ ಊಟಕ್ಕಿಂತ ಉಪವಾಸ ಇರೋದು ಲೇಸು

೧. ಅಪಮಾನದೂಟದಿಂ।ದುಪವಾಸವಿರ ಲೇಸು

—ಸರ್ವ, (ಪ ೬೯೧)

೩೨೭ ಊರೆಲ್ಲ ನಂಟರು ಉಣಬಡಿಸುವರಿಲ್ಲ

೧ ಊರೆಲ್ಲ ನೆಂಟರು ಉಣಬಡಿಸುವರ ಕಾಣೆ

—(೧-೭೮) (ಪುದಾ. ಕೀ ೧-೭೮)

೩೨೮ ತಾವರೆಗೆ ಅಪ್ಪನೇ ವೈರಿ

೧ ವನಮಂ ಸುಡುವಗ್ನಿಗೆ ವಾಯುನಂಟನದೆ ದೀಪನಾಶಮಂ ಮಾಡುವ ಪೋಲ್ —(೪-೨೩) ಪಾರ್ಶ್ವನಾಥ ಪುರಾಣಂ

೨ ಶಕ್ತನಾದರೆ ನೆಂಟರಿಷ್ಟರೆಲ್ಲ ಹಿತರು
ಅಶಕ್ತನಾದರೆ ಆಪ್ತರವರೆ ವೈರಿಗಳು ॥ ಪ ॥

ಕಮಲಾರ್ಕರಿಗೆ ನಿರತ ಕಡುನೆಂಟತನವೆಂದು
ಕಮಲ ತಾ ಜಲದೊಳಗೆ ಅಡಿಕೊಂಡಿರಲು ॥

ಕ್ರಮಗೆಟ್ಟು ನೀರಿಂದ ಹೊರಗೆ ಹಾಕಲು ರವಿಯು
ಅಮಿತ ಕಿರಣಗಳಿಂದ ಕಂದಿಹೋಗುವುದು ॥ ೧ ॥
—(ಪು. ದಾ. ಕೀ)

೨ ಸಲಿಲದಿ ವನರುಹವಿರಲದ
ನಲರಿಸುವಂ ದಿನಪ ತನ್ನ ನಿಜ ಖರ ಕಿರಣದಿ ॥

ಜಲತಪ್ಪಿದರೊಣಗಿಸುವಂ
ನೆಲಗೆಟ್ಟರ್ಗಿಪ್ಪರುಂಟೆ ಚೂಡಾರತ್ನ ॥ — ೫೭೮) ನೀತಿಸಾರ

೩೨೯ ರಾಯರ ಕುದುರೆ ಅಂತ ಕಾಲು ತುಳಿಸಿಕೊಂಡಂಗೆ

ಹೋಲಿಸಿ : ಒಡೆಯ ಮೆಚ್ಚಿ ಕಾಲೊಳೊದೆದ ಗಾದೆ
—(ಸನ್ಮಾನ ಸಂಧಿ–೫೧) ಭರತೇಶ ವೈಭವ

೩೩೦ ದಿಕ್ಕಿಲ್ಲದವರಿಗೆ ದೇವರೇ ಗತಿ

೧ ದಿಕ್ಕಿಲ್ಲದವರಿಗೆ ದೇವರೇ ಗತಿಯಲ್ಲವೆ ?
—(೧೯ನೆಯ ಪ್ರಕರಣ) ರಾಯಣ್ಣರು ವಿಜಯಂ

೩೩೧ ಬಿಸಲಿಗೆ ಕಾಲು, ಬೇಲಿಗೆ ತಲೆ

೧ ಬೇಲಿಗೆ ತಲೆಯಾಕಿ ಬಿಸಲಿಗೆ ಕಾಲಾಕಿ
ನಿನ ಮಂಗ ಪ್ರಾಣವನು ಬಿಟ್ಟನಮ್ಮ
—ಜಾನಪದ ಕಥನ ಗೀತೆ (೪೧೬)

೩೩೨ ಹಿಡಿಯುವುದಕ್ಕೆ ಕೊಂಬೆ ಇಲ್ಲ, ನಿಲ್ಲುವುದಕ್ಕೆ ನೆಲೆಯಿಲ್ಲ

೧ ಅಡಿಗಾಧಾರವಿಲ್ಲ, ಹಿಡಿವುದಕೆ ಕೊಂಬಿಲ್ಲ
—(೭೮) ಶ್ರೀ ವಾದಿರಾಜ ಸ್ವಾಮಿಗಳ ಕೀರ್ತನೆಗಳು

೨ ನಿಲ್ಲುವರೆ ನೆಲನಿಲ್ಲ
— (ಅಯೋ. ಕಾಂ. ೧೯–೬–೭ ಶ್ರೀಮದ್ರಾಮಾಯಣ)

೩ ನಿಂದರೆ ನೆರಳಿಲ್ಲ, ಹಿಡಿಯೆ ಕೊಂಬೆಯಿಲ್ಲ
—(ಉಗಾಭೋಗ, ಅಚಲಾನಂದರು)

೩೩೨ ಆಲಕ್ಕೆ ಹೂವಿಲ್ಲ, ಸಾಲಕ್ಕೆ ಕೊನೆಯಿಲ್ಲ. ಜಾಲಿಗೆ ಗಂಧವಿಲ್ಲ, ಸೂಳೆಗೆ ದೇವರಿಲ್ಲ

೧ ಆಲಕ್ಕೆ ಹೂವಿಲ್ಲ । ಸಾಲಕ್ಕೆ ಕೊನೆಯಿಲ್ಲ
ಜಾಲಿಯಾ ಗಿಡಕೆ—ಗಂಧಿಲ್ಲ, ದೇವನಾ
ಸೂಳೆಗಿಲ್ಲೆಂದ ! ಸರ್ವಜ್ಞ —ಸರ್ವ, (ಪ-೧೬೨೧)

೨ ಆಲಕ್ಕೆ ಹೂವಿಲ್ಲ ಸಾಲಕ್ಕೆ ಕೊನೆಯಿಲ್ಲ
ಮೋಡಬಂದಲ್ಲಿ ಬಿಸಿಲಿಲ್ಲ । ಹೆಣ್ಣಿಗೆ
ಓಡಿಬಂದಲ್ಲಿ ಸುಖವಿಲ್ಲ ॥ —ಆಮು, (ಪು.೨೧)

೩೩೩ ಸಾಲ ಮಾಡಿಟ್ಟ ಅಪ್ಪ ವೈರಿ, ಹಾದರ ಮಾಡುವ ತಾಯಿ ವೈರಿ

೧ ಪಿತಾಚ ಋಣವಾನ್ ಶತ್ರುಃ ಮಾತಾಚ ವ್ಯಭಿಚಾರಿಣೀ ।
ಭಾರ್ಯಾ ರೂಪವತೀ ಶತ್ರುಃ ಪುತ್ರಶ್ಶತ್ರುರ ಪಂಡಿತಃ ॥
—(ಸು)

೩೩೪ ಸಾಲವೇ ಶೂಲ

೧ ಸಾಲವೇ ಶೂಲ ಸರ್ವಜ್ಞ —ಸರ್ವಜ್ಞ

೩೩೫ ನಂಟರೊಳಗಣ ಸಾಲ, ಮೆಟ್ಟಿನೊಳಗಣ ಕಲ್ಲು

ಹೋಲಿಸಿ : ನೆಂಟರೊಳು ಸಾಲವನು ಕೊಡುವಾತ ಮೂರ್ಖ
—ಹ. ಕೀ ತ, ಕೀ–೨೧೯

೩೩೬ ಬಡವನ ಹೆಂಡತಿ ಬಡ್ಡಿಗೆ ನೀರು ಹೊತ್ತಂತೆ

೧ ಬುದ್ಧಿವಂತನ ಮಡದಿ ಇದ್ದ ಗದ್ದುಗಿ ಮ್ಯಾಲೆ
ಬುದ್ಧಿಲ್ದ ಪೆದ್ದ ನಿನ ಮಡದಿ—ಕಂಡವರಿಗೆ
ಬಡ್ಡೀಗೆ ನೀರ ಹೊರುತಾಳ
—ಜಾ. ಗೀತೆಗಳು, (ಪು–೪೫)

೩೩೮ ಸಾಲಿಗ ಬಂದು ಕೇಳುವಾಗ ಕುಂಡಿಗೆ ಚೇಳು ಕಡಿದ ಹಾಗೆ

೧ ಸಾಲವನು ತರುವಾಗ ಹಾಲುಬೋನುಂಡಂತೆ
ಸಾಲಿಗನು ಬಂದು ಕೇಳಿದರೆ–ಕುಂಡಿಗಂ
ಚೇಳು ಕಡಿದಂತೆ । ಸರ್ವಜ್ಞ —(ಸರ್ವ. ೧೨೬೪)

೩೩೯ ತೆರಲಾಪರೆ ಹೊಣೆಯಾಗು, ಹೊರಲಾಪರೆ ಆಳಾಗು

೧ ತೆರಬಲ್ಲ ಪೊರ್ಣೆಯಿಪ್ಪುದೈ —(೩೩) ಸೋ. ಶತಕ

೩೪೦ ಊರಿಗೆ ಒಕ್ಕಲಿಗ ಲೇಸು, ನಕ್ಕುನಗಿಸುವ ನುಡಿಲೇಸು

೧ ಬೆಕ್ಕು ಮನೆಯೊಳು ಲೇಸು। ಮುಕ್ಕು ಕಲ್ಲಿಗೆ ಲೇಸು
ನಕ್ಕುನಗಿಸುವಾ–ನುಡಿಲೇಸು, ಊರಿಂಗೆ
ಒಕ್ಕಲಿಗ ಲೇಸು । ಸರ್ವಜ್ಞ —(ಸರ್ವ, ೧೨೩೭)

೩೪೧ ಪ್ರಸ್ತಾವ ನುಡಿಯಲು ಪ್ರಶಸ್ತವಾಗಿರಬೇಕು

೧ ಪ್ರಸ್ತವನು ನುಡಿಯೆ ಪ್ರ। ಶಸ್ತವಾಗಿರಬೇಕು
ಪ್ರಸ್ತವನು ತಪ್ಪಿ–ನುಡಿದರಾ ದೇವಾಂಗ
ದುಸ್ತು ಬಿದ್ದಂತೆ ! ಸರ್ವಜ್ಞ —(ಸರ್ವ, ೧೨೧೫)

೩೪೨ ಮಾತಿನಿಂದಲೇ ಸ್ವರ್ಗ, ಮಾತಿನಿಂದಲೇ ನರಕ
(ನಾಲಗೆಯೇ ನಾಕ, ನಾಲಗೆಯೇ ನರಕ)

ಹೋಲಿಸಿ : ಅಯ್ಯಾ ಎಂದೊಡೆ ಸ್ವರ್ಗ,
ಎಲವೊ ! ಎಂದೊಡೆ ನರಕ (ಬಸವಣ್ಣನವರು)

೩೪೩ ಮಾತು ಅರಿಯದವ ತೂತುಗಡಿಗೆಯಂತೆ

೧. ಮಾತಿನಾ ಮಾಲೆಯೂ ತೂತಾದ ಮಡಿಕೆಯೂ ..ಏತಕ್ಕುಬೇಡ
(ಸರ್ವ, ೧೩೫೯)

೩೪೪ ಮಾತೇ ಮಾಣಿಕ್ಯ

೧ ಮಾತು ಬಲ್ಲಾತಂಗೆ । ಮಾತೊಂದು ಮಾಣಿಕವು
(ಸರ್ವ, ೧೨೨೫)

೩೪೫ ಯುಕ್ತಿ ಮಾತು ಮಕ್ಕಳಿಂದ ಕಲಿತುಕೊ

೧. ಯುಕ್ತಿ ಯುಕ್ತಂ ವಚೋಗ್ರಾಹ್ಯಂ ಬಾಲಾದಪಿ ಶುಕಾದಪಿ
(ಸು)

೩೪೬ ವಚನಕ್ಕೆ ದರಿದ್ರವೇ ನಿರ್ಭಾಗ್ಯ ಮುರುವ

೧ ಪ್ರಿಯ ವಾಕ್ಯಪ್ರದಾನೇನ ಸರ್ವೇ ತುಷ್ಯಂತಿ ಜಂತವಃ
ತಸ್ಮಾತ್ತದೇವ ವಕ್ತವ್ಯಂ ವಚನೇಕಾ ದರಿದ್ರತಾ (ಸು)

೨ ವಚನಕ್ಕೇನು ದರಿದ್ರವೈ ? (೯೩) ಸೋಮೇಶ್ವರಶತಕ

೩೪೭ ಮಾತು ಬಾರದಿದ್ದರೆ ಸುಮ್ಮನಿರುವನೇ ಜಾಣ

೧ ವಿಭೂಷಣಂ ಮೌನಮಪಂಡಿತಾನಾಂ (ಸು)

೨ ಮೌನವೆ ವಿಭೂಷಣಮು ಪಂಡಿತರ್ಗೆ
—(೧೪–೪) ರಾಘವಾಂಕ ಚರಿತೆ

೩೪೮ ಸುಮ್ಮನಿದ್ದರೆ ಒಡಂಬಟ್ಟ

ಮೌನಂ ಸಮ್ಮತಿ ಲಕ್ಷಣಂ —(ಸಂ)

೩೪೯ ತಾನು ಹಿಡಿದ ಮೊಲಕ್ಕೆ ಮೂರು (ಕೊಂಬು) ಕಾಲು

೧ ನೋಡಿದೆನು ನಾ ಮೊಲಕೆ ನೆತ್ತಿಲಿ
ಮೂಡಿಯಿಹ ಮೂರುದ್ದ ಕೋಡ
—(೯–೩೩) ಜ್ಞಾನಸಿಂಧು

೩೫೦ ಒಬ್ಬರಿಗೆ ಕೊಡೋದು ಬ್ಯಾಡ, ಒಂದು ಒಳ್ಳೆ ಮಾತಾದರೂ ಬ್ಯಾಡ್ವೇ ?

೧ ಅಗನಮರ್ನ್ದೀದಲಿ ನನ್ರೇ ಮುಗನಮರ್
ನ್ದಿನ್ ಶೊಲನಾಗ ಪೆಱಿನ್ —ತಿರುಕ್ಕುಱಳ್

ಮನ ನಲಿದೀವುದಱಿನೊಳ್ಳಿತ್ತು ವೊಗನಲಿದು
ಇನಿನುಡಿಯುನಾಗಪಡೆಯೇ (ಅನು–ಎಲ್. ಗುಂಡಪ್ಪ)

೩೫೧ ಇದ್ದ ಮಾತು ಇದ್ದ ಹಾಗೆ ಹೇಳಿದರೆ ಗುದ್ದಾಟಕ್ಕೆ ಬಂದನಂತೆ

೧ ಉಳ್ಳುದನುಳ್ಳಂತಾಡಿ ಹದಿನಾಱು ಗುದ್ದಂ ಪಡೆದರ್
—(೨–೪೦ ವ) ಧರ್ಮಪರೀಕ್ಷೆ

೩೫೨ ಕಂಡದ್ದು ಕಂಡಹಾಗೆ ಹೇಳಿದರೆ ಕೆಂಡದಂಥ ಕೋಪ

೧ ಕಂಡುದ ನುಡಿದರೆ ಕೋಪವೆ ? —(ಮೋಹನತರಂಗಿಣಿ)

೨ ಉಳ್ಳುದನಾಡೆ ಕೊಳ್ಳಿಗೊಳುವರ್ನೋಡೆಂಬ ನಾಣ್ಣುಡಿಯು
—(ಪ–೩೧। ರತ್ನಾಕರ ಶತಕ

೩ ಕಂಡುದನು ನುಡಿದೊಡನೆ । ಕೆಂಡವಾಗುವುದೇಕೆ ?
—(ಸರ್ವ. ಪ ೧೧೩೮)

೪. ಕಂಡಂತೆ ಹೇಳಿದರೆ । ಕೆಂಡ ಉರಿಯುವುದು ಭೂ ।
ಮಂಡಲದ ಒಳಗೆ–ಖಂಡಿತವ ನಾಡುವರ ।
ಕಂಡಿಹುದೆ ಕಷ್ಟ ! ಸರ್ವಜ್ಞ (ಸರ್ವ, ಪ ೧೧೩೯)

೫ ಕಂಡದ್ದ ನುಡಿದರೆ ಕೋಪವೆಗ್ಗಳಿಸಿದುದಣ್ಣದೇವ
—(ಪು ೫೧) ಭಾರತದ ಜಾನಪದ ನೃತ್ಯಗಳು

೩೫೩ ಇಬ್ಬರಿದ್ದರೆ ಏಕಾಂತ, ಮೂವರಿದ್ದರೆ ಲೋಕಾಂತ

೧ ಒಬ್ಬನರಿದರೆ ಸ್ವಾಂತ । ಇಬ್ಬರಲಿ ಏಕಾಂತ
ಇಬ್ಬರಿಂದೊಬ್ಬ–ನರಿದು ಬೇರೊಬ್ಬನಿಂ
ಹಬ್ಬಿ ಲೋಕಾಂತ । ಸರ್ವಜ್ಞ —(ಸರ್ವ. ಪ. ೧೪೦೦)

೩೫೪ ಏಕಾಂತ ಹೋಗಿ ಲೋಕಾಂತವಾಯಿತು.

೧ ಲೋಕಾಂತ ಹೋದುದೇಕಾಂತವಾದುದು
—(೧೬–೧೨೮) ಭರತೇಶವೈಭವ

೩೫೫ ಮರ್ಮವಿಲ್ಲದವನ ಮಾತು, ಹೊಸ ಮೊಗೆ ತೂತು

೧ ಮರ್ಮವಿಲ್ಲದ ಮಾತು ಒಡಮಡಕೆ ತೂತು

—(೧೪) ಕನಕದಾಕೀ

೩೫೬ ಹಗಲು ಕಾಡಿನಾಗೆ ಮಾತನಾಡಬೇಡ, ಇರುಳು ಮನೆಯಾಗೆ (ಬಯಲಿನಾಗೆ) ಮಾತನಾಡಬೇಡ

ಹೋಲಿಸಿ : ದಿವಾ ನಿರೀಕ್ಷ್ಯ ವಕ್ತವ್ಯಂ ರಾತ್ರೌ ನೈವಚ ನೈವಚ
ಇರುಳು ಪಟ್ಟಿಪಡುವಂಡು, ಪೊವ್ವಲ್ ನೋಡಿ
ಪರೆವಂಡು —(ಕೊಡಗು ಗಾದೆ)

೩೫೭ ಮುಸುಕಿನೊಳಗಣ ಗುದ್ದಾಟ

೧ ಮುಸುಕಿನ ಗುದ್ದಾಟ ಸಲ್ಲದು

—ವಿರೂಪಾಕ್ಷನೀತಿ ಕವಿಚರಿತ್ರೆ -೩

೩೫೮ ನಾಲಗೆಗೆ ಮೂಳೆ ಇಲ್ಲ

೧ ಎಲುಗಳಿಲ್ಲಾ ನಿನ್ನ ನಾಲಗೆಗೆ

—(ಸಂ ೩೭-೪೩) ಕೌಶಿಕ ರಾಮಾಯಣ

೩೫೯ ಕತ್ತಿಯ ಗಾಯ ಮಾಯಬಹುದು, ಮಾತಿನ ಗಾಯ ಮಾಯದು

೧ ಅಂಬಿನಲಿ ಮೋಣೆರಿದದಾ ವ್ರಣ
ತುಂಬಲಾ ವ್ಯಥೆ ಕೆರಳುವುದು ದುರು
ದುಂಬಿ ದುರ್ಜನರೆಂದ ಮಾತಿನ ಬಾಣ ತಾಗಿದರೆ
ಕೆರಳದಾ ವ್ಯಥೆ

— (ಚ.ಸ್ಕಂ.ಸಂ. ೧–ಪ೨೬) ಕನ್ನಡ ಭಾಗವತ

೨ ಕತ್ತಿಲಾದಾ ಘಾಯ । ಮತ್ತಿರದೆ ಮಾಯುವುದು
ಸುತ್ತಲಾಡುತಿಹ–ಜಿಹ್ವೆಯಾ ಘಾಯತಾ
ಸತ್ತುಮಾಯುವುದೆ ? ಸರ್ವಜ್ಞ —(ಸರ್ವ, ಪ, ೧೧೭೪

೩೬೦ ಹುಣ್ಣು ಮಾಡರೂ ಹುಣ್ಣಿನ ಕಲೆ ಹೋಗದು

೧ ಪುಣ್ಕೆಟ್ಟಡೆ ಕಲೆ ಕಿಡದು (೧೦-೩೭) ಮದನತಿಲಕ

೩೬೧ ಬೆಂಕಿಯಿಂದ ಸುಟ್ಟಗಾಯ ಮಾಯಬಹುದು,
ನಾಲಗೆಯಿಂ (ಹಲ್ಲಿನಿಂ)ದ ಸುಟ್ಟಗಾಯ ಮಾಯದು

೧ ತೀಯಿನಾಱ್ ಚುಟ್ಟ ಪುಣ್ಣುಳ್ಳಾಱು ಮಾಱಾದೇ
ನಾವಿನಾಱ್ ಚುಟ್ಟವಡು —ತಿರುಕ್ಕುಱಳ್

ಬೆಂಕಿಯಿಂ ಸುಟ್ಟ ಪುಣ್ಣುಳ್ಳಾಱುಗುಮಾಱದಾ
ನಾಲಗೆಯಿಂ ಸುಟ್ಟಕಲೆ (ಅನು–ಎಲ್. ಗುಂಡಪ್ಪ)

೩೬೨ ಮುರಿದ ಚಿತ್ತ ಪೊಸೆ ಮಾಡಬಹುದೊ ?

೧ ಮುರಿದ ಚಿತ್ತವನಿನ್ನು ಪೊಸೆ ಮಾಡಬಹುದೆ ?
—(ಚಿತ್ತಜನಿರ್ವೇಗ ಸಂಧಿ-೨೬) ಭರತೇಶವೈಭವ

೩೬೩ ಅವನ ಮಾತು ನೀರಿನಲ್ಲಿ ಬರೆದ ಹಾಗೆ

೧ ನೀರಲಿ ಬರೆದ ಲಿಪಿಯಂತೆ
—(ಉ.ಪ. ೮–೪೦) ಕುಮಾರವ್ಯಾಸ

೨ ಜಲರೇಖೆ ಬರೆಯೆ ತೊಡೆಯದೆ ಪೋಕುಂ
—(೫೪–೧೪) ಶಿವತತ್ವ ಚಿಂತಾಮಣಿ

೩೬೪ ನೀಲಿಮಾತು ನಿಜವಲ್ಲ, ನೀರ ಕಡೆದರೆ ಬೆಣ್ಣೆಯಿಲ್ಲ

೧ ನೀರಂ ಪೊಸೆದುಂ ಬೆಣ್ಣೆಯನಾರಾರುಂ ಪಡೆದರೊಳರೆ
—(೯–೨೨೮) ಸಮಯಪರೀಕ್ಷೆ

೨ ನೀರಂ ಕಡೆವಲ್ಲಿ ಬೆಣ್ಣೆಗೊಱಲ್ವಂತೆ ಪೊಲಕ್ಕುಂ
—(೧–೮) ಜಾತಕ ತಿಲಕ

೩೬೫ ಆಸೆ ಮಾತು ಕೊಟ್ಟು ಭಾಷೆ ತಪ್ಪುವವ ಹೊಲೆಯ —ಪ್ರ.ದಾ.)

೩೬೬ ಓಡಿ ಸಿಕ್ಕಬೇಡ, ಆಡಿ ತಪ್ಪಬೇಡ

೧ ಕೂಡಿ ತಪ್ಪಲುಬೇಡ। ಓಡಿ ಸಿಕ್ಕಲುಬೇಡ
—(ಸರ್ವ, ಪ. ೧೩೯೪)

೩೬೭ ಬಡವನಿಗೆ ಆಸೆ ಹೇಳಬೇಡ, ಬಲ್ಲಿದನಿಗೆ ಭಾಷೆ ಕೊಡಬೇಡ

೧ ಬಲ್ಲಿದರ ಭಾಷೆ ಬಡವರ ಆಸೆ
—(೬-೫೪) ಪ್ರೌಢರಾಯನ ಕಾವ

೩೬೮ ಆಡದೆ ಮಾಡುವವ ರೂಢಿಯೊಳಗುತ್ತಮನು, ಆಡಿ ಮಾಡದವ ಅಧಮ

೧ ಬಾಯಿಗೆ ಬಂದವೊಲು ನುಡಿಯಬಹುದಲ್ಲದೆ ನುಡಿದತೆಱದಿ
ಒಂದು ಕಾರ್ಯವ ಮಾಡಿದೊಡೆ ದೇವೇಂದ್ರನವನಾಚೆಯೊಳ
—(ಪ್ರ ೩೦೩-೧೮) ಸಾಳ್ವಭಾರ

೨ ಆಡದೆ ಮಾಡುವನು। ರೂಢಿಯೊಳಗುತ್ತಮನು
ಆಡಿಮಾಡುವನು-ಮಧ್ಯಮನು, ಅಧಮತಾ
ನಾಡಿ ಮಾಡದವನು ! ಸರ್ವಜ್ಞ —(ಸರ್ವ, ಪ ೧೩೪೦

೩ ಆಡದೆ ಮಾಡುವನುತ್ತಮ ನಾಡಿತಾ ।
ಮಾಡುವ ಮಧ್ಯಮನಿನಿಪ
—(೨೯) ರಂಗಧಾಮ ನೀತಿಶತಕ ಸಾಂಗ

೩೬೯ ಮಾಡುವವರು ಆಡುವುದಿಲ್ಲ, ಆಡುವವರು ಮಾಡುವುದಿಲ್ಲ

೧ ನೀಚೋ ವದತಿ ನ ಕುರುತೆ, ನವದತಿ ಸುಜನಃ ಕರೋತ್ಯೇವ
—(ಸ

೩೭೦ ಅಂಗೈಲಿ ಆಕಾಶ (ವೈಕುಂಠ, ಕೈಲಾಸ) ತೋರಿ(ಸ್ವಾನೆ)ಸಿದ ಹಾಗೆ

೧ ಜಗಮನಂಗೈಯೊಳ್ನೋಟ್ಪಡೆ ತೋರ್ಪನ್
—(೬-೧೧೧) ಅಭಿನವ ದಶಕುಮಾರ ಚ

೩೭೧ ಕುಲವನ್ನು ನಾಲಗೆ ಹೇಳಿತು

೧ ಕುಲವ ನಾಲಗೆಯುಟ್ಟಿತೆಂಬ ನಾಣ್ನುಡಿ
—(೨೨) ಹರಿಶ್ಚಂದ್ರಕಾವ್ಯ

೨ ಕುಲವ ನಾಲಗೆ ಹೇಳಿತು

—(ವಿ.ಪ. ೭-೧೫) ಕರ್ಣಾಟ ಭಾರತ ಕಥಾಮಂಜರಿ

೩೭೨ ಅಗಿದಿದ್ದನ್ನೇ ಮೆಲುಕು ಹಾಕುವುದು

೧ ಚರ್ವಿತ ಚರ್ವಣ —(೭-೯೫) ಶಾಂತಿಪುರಾಣ

೨ ಈ ಒಪ್ಪ ಪೇಳ್ವ ಮಿಃ ಚರ್ವಿತಚರ್ವಣಂ ಸುಖಮಾದೇಂ

೩೭೩ ಅಲ್ಲಿಸಲ್ಲದ ಮಾತಾಡಿ ಹಲ್ಲು ಮುರಿಯ ಬಡಿಸಿಕೊಂಡ

ಹೋಲಿಸಿ : ಕೈತಪ್ಪಿ ಕೆತ್ತಲು ಕಾಲಿಗೆ ಮೂಲ,
ಮಾತು ತಪ್ಪಿ ನುಡಿಯಲು ಬಾಯಿಗೆ ಮೂಲ
—(ಕರ್ಮಹರ ಕಾಳೇಶ್ವರ ವಚನ)

೩೭೪ ಮಾತು ಬಂದಾಗ ಸೋತು ಹೋದವನೇ ಜಾಣ

೧ ಸೋತು ನುಡಿದ ಮಾತು ಮಾತೆಯೊಲಿರ್ಪ್ಪುದು ತನ್ನ
—(ನಮಿರಾಜ ವಿನಯಸಂಧಿ-೧೧೦) ಭರತೇಶ ವೈಭವ

೨ ಮಾತು ಬಲ್ಲತ ತಾನು । ಸೋತು ಹೋಹುದು ಲೇಸು ।
—(ಸರ್ವ, ಪ. ೧೨೨೧)

೩೭೫ 'ಸುವ್ವೀ' ಅಂದರೆ ತಿಳಿಯದೆ (ರಾಗವಮಟ್ಟು ?) ಒನಕೆ ರಾಗ ?

೧ ಸುವ್ವಿ ಎಂದೊನಕೆವಾಡ ಹಾಡುತ್ತ
—(೧೩ : ೧೦೦-೧೦೧) ಗುರುರಾಜಚಾರಿತ್ರ

೩೭೬ ಮಾತು ಅರಿಯದ ಮರುಳ ಹಾಗೇ ಕಾಗೆ ಬದ್ದು

ಹೋಲಿಸಿ : ಮಾತನರಿಯದ ಸೂಳೆ ಕುಂಟಣಿಯು ಪೈದಳಿಂಬ
ನಾಗ್ಣಡಿಯಂತೆ
—(ನವ ಆ : ೧೩೧ವ ಧರ್ಮಾಮೃತ)

೩೭೭ ನಂಬಿದವರನ್ನು ನಡುನೀರಿನಲ್ಲಿ ಕೈಬಿಟ್ಟ ಹಾಗೆ

೧ ನಂಬಿದವರಂ ನಡುನೀರೊಳದ್ದುವರೆ ?
—(೧೬ನೆಯ ಸ್ಥಲ-೨೩) ನಂಬಿಯಣ್ಣನ ರಗಳೆ

೨ ಹಗಲೇನೊ ಇರುಳೇನೊ ಕುರುಡಗೆ

—(೭೧) ಶ್ರೀ ವ್ಯಾಸರಾಯರು

೩೮೪ ಊರೆಲ್ಲ ನಕ್ಕರೆ ಕಿವುಡ ನಕ್ಕನಂತೆ

೧ ಕುರುಡ ಸಭೆಯಲ್ಲಿರ್ದು ನಗೆಯ ನಕ್ಕಂತಾಯಿತ್ತು

—ಮೋಳಿಗೆ ಮಾರಯ್ಯನವರು

೩೮೫ ಗೌಡನ ಹಗೆತನ, ಕಿವುಡನ ಏಕಾಂತ

೧ ಗವುಡನೊಳು ಹಗೆತನವು । ಕಿವುಡನೊಳು ಏಕಾಂತ ।
ಪ್ರವುಢನೊಳು ಮೂಢ-ನುಪದೇಶ, ಹಸಿವಿಂಗೆ
ತವುಡ ತಿಂದಂತೆ ! ಸರ್ವಜ್ಞ —(ಸರ್ವ ಪ. ೧೪೦೪)

೨ ಕೇಳಬಲ್ಲನೆ ಕಿವುಡ ಏಕಾಂತ ಮಾತುಗಳ

(ಹ.ಕೀ,ತ, ಕೀ. ೨೨೩)

೩೮೬ ಮನೆಯಲ್ಲಿ ಇರೋದು ಇಲ್ಲದ್ದು ಜೋಗಿಯೇನು ಬಲ್ಲ!

೧ ಜೋಗಿ ಬಲ್ಲನೆ ಮನೆಯೊಳಿಲ್ಲ ಉಂಟೆಂಬುದನು

—(ಹ.ಕೀ, ತ, ಕೀ. ೨೨೩)

೩೮೭ ಇರುವುದು ಇದ್ದಹಾಗೆ ತಿರಿಯುವುದು ಕೈಹಿಡಿದರು

೧ ಮೃಷ್ಟಾನ್ನಮಂ ಬಿಟ್ಟು ತಿರಿವುದರ ಯತನಗೈದಂತಾಯ್ತು

—(ಅಯೋ. ಕಾಂ. ೨೦-೩೭) ಶ್ರೀಮದ್ರಾಮಾಯಣಂ

೩೮೮ ತಿರುಕೊಂಡು ಉಂಡರೂ ಕರಕೊಂಡುಣ್ಣಬೇಕು

೧ ತಿರಿದುಂಬುತೊಬ್ಬರನು । ಕರೆದುಂಬುದತಿಹಿತವು
ಕರೆಯದೊಬ್ಬರನು-ಉಣುತಿಪ್ಪನೂಟ ತಾ
ನರಕದಾ ಊಟ ! ಸರ್ವಜ್ಞ —ಸರ್ವ

೩೮೯ ನಾನಾರಾಯನ ಹತ್ತಿರ ಹೋಗಿ ನಾಲ್ಕು ಕಾಸು ಬೇಡಿದ

ಹೋಲಿಸಿ : ಡಿಲ್ಲಿಯ ರಾಯನ ಕಂಡು ಪುಲ್ಲಿಗೆಯ ಬೇಡುವರೆ ?

—(೭೫. ಶ್ರೀವಾದಿರಾಜಸ್ವಾಮಿಗಳ ಕೃತಿ)

೩೯೦ ಊರಿಗೆ ಹೋಗದವರಿಗೆ ದಾರಿಗೊಡವೆ ಯಾಕೆ ?

೧ ಹೋಗದೂರಿಗೆ ದಾರಿ ಕೇಳಿ ಮಾಡುವುದೇನು

—(ಹ.ಕೀ.ತ, ಕೀ, ೨೪೮)

೩೯೧ ಊರಿಗೆ ಹೋದವರ ಸುದ್ದಿ ದೇವರೇ ಬಲ್ಲ

೧ ಊರಿಗೆ ಹೋದವರ ಬರನ ದೇವರೇ ಬಲ್ಲರ್

—(೧೦೩೮) ನೀತಿಸಾರ

೩೯೨ ಊರ ಬಿಟ್ಟು ಹೊಲಗೇರಿಯಲ್ಲಿ ತಂ(ತಳ)ಗಿದರು

೧ ಪಟ್ಟಣಮಂ ಬಿಟ್ಟು ಪೊಲಗೇರಿಯೊಳ್ ಪಡುವಂತೆ

—(ದ. ಆಶ್ವಾ–೧೬೧ವ) ಧರ್ಮಾಮೃತ

೩೯೩ ಎತ್ತ ಹೋದರೂ ತುತ್ತು ಕೈಲಿರಬೇಕು

೧ ಎತ್ತ ಹೋದರು ಒಂದು । ತುತ್ತು ಕಟ್ಟಿರಬೇಕು
ತುತ್ತೊಂದು ಗಳಿಗೆ–ತಡೆದಿಹರೆ ಕೈಹಿಡಿದು
ಎತ್ತಬೇಕೆಂದ ! ಸರ್ವಜ್ಞ —(ಸರ್ವ.ಪ. ೧೮೩೯)

೩೯೪ ಕಳ್ಳನನ್ನು ನಂಬಿ ಪಯಣ ಹೊರಟ ಹಾಗೆ

೧ ಠಕ್ಕನಂ ನಂಬಿ ಬಟ್ಟೆಪೋಪೊಡಂ. ಸಂಸಾರಮುಂ ನಂಬಿ ಮುಚ್ಚಿ
ದಂತೆ ಪಾಪದೊಳ್ ನೆಗಱ್ವಡಂ

—(ಪು. ೮೫ : ೨೧ ಗದ್ಯ) ಜೀವಸಂಬೋಧನೆ

೩೯೫ ನಡೆಯುವವ ಬಳಲುವನಲ್ಲದೆ ದಾರಿ ಬಳಲೀತೆ,
ಕಸರತ್ ಮಾಡುವವ ಬಳಲುವವನಲ್ಲದೆ ಕೋಲು ಬಳಲೀತೆ

೧ ನಡೆಯುತ್ತ ನಡೆಯುತ್ತ ಬಳಲುವಲ್ಲರದೆ ಬಟ್ಟೆ ಬಳಲುವುದೆ ?
ಆಳೆಯುತ್ತ ಆಳೆಯುತ್ತ ಬಳಲುವರಲ್ಲದೆ ಕೊಳಗ ಬಳಲುವುದೆ ?

—(೧–೧೧೩) ಬಸವೇಶ್ವರರ ವಚನಗಳು

೩೯೬ ಪರಸ್ಥಳದಲ್ಲಿ ಅರ್ಧ ನಿಯಮ, ಪ್ರಯಾಣದಲ್ಲಿ ಕಾಲು ನಿಯಮ

೧ ಸ್ವಗ್ರಾಮೇ ಪೂರ್ಣಮಾಚಾರಂ ಅನ್ಯಗ್ರಾಮೇತದರ್ಧಕಂ
ಪತ್ತನೇ ಪಾದಮಾಚಾರಂ ಪಥಿ ಶೂದ್ರವದಾಚರೇತ್ (ಸಂ)

೩೯೭ ಸಾಯುವವರೆಗೂ ಸಾಮು ಕಲಿತರೆ ಯುದ್ಧ ಮಾಡೋದು ಯಾವಾಗ ?

೧ ಸಾವಲ್ಲಿ ಪರಿಯಂತರವು ಸಾಧನೆ ಮಾಡಿ ಸಮರಕೆ ಗರುವನಹ
ದಿನವಿನ್ನಾವುದು ?
—(ಪು ೨೦೦ : ೪೪), ಪ್ರಭುಲಿಂಗಲೀಲೆ

೨ ಸಾವನ್ನಕ್ಕರ ಸಾಧನೆಯ ಮಾಡಿದಡೆ ಕಾದುವ
ದಿನವಾವುದು —(೧೨೭೨) ಪ್ರಭುದೇವರ ವಚನಗಳು

೩೯೮ ಜೋಯಿಸರ ಮಗಳು ಹಸೆ ಮೇಲೆಯೇ ಮುಂಡೆಯಾದಳು

೧ ಜೋಯಿಸನ ಮಗಳ್ ಪಸೆಯ ಮೇಲೆ ರಂಡೆಯಾದಳ್
— (೧೨-೩೮) ಧರ್ಮಾಮೃತ

೩೯೯ ತಲೆ ಬೋಳಿಸಿಕೊಂಡು ದಿನ ಕೇಳಿದಸಂತೆ

೧ ಮುಂಡಿತ ಮುಂಡ ನಕ್ಷತ್ರಾಣಿ ಪೃಚ್ಛತಿ (ಸಂ)

೪೦೦ ಆಕಾಶ ನೋಡೋಕೆ ನೂಕುನುಗ್ಗಲೇಕೆ ?

೧ ವ್ಯೋಮವನೆ ನೋಡಲು ನೂಕು ನುಗ್ಗೇನು
—(೮-೧೨೭) ಜ್ಞಾನಸಿಂಧು

೪೦೧ ನೀರಿನಲ್ಲಿ ನೋಡಿದವನನ್ನು ಊರಲ್ಲಿಡಬಾರದು. ಎಣ್ಣೆಯಲ್ಲಿ
ನೋಡಿದವನನ್ನು ಕಣ್ಣಲ್ಲಿ ನೋಡಬಾರದು

೧ ಆತ್ಮ ರೂಪಂ ಜಲೇ ದೃಷ್ಟ್ವಾ ಶಕ್ರಸ್ಯಾಪಿ ಶ್ರೀಯಂ ಹರೇತ್
(ಸು)

೪೦೨ ಊರೆಂಜಲು ತಿನ್ನುವ ಸೂಳೆಗೆ ಯಾರೆಂಜಲಾದರೇನು ?

೧ ವಾರಾಂಗನೆಯರಿಂಗೆ | ಯಾರೆಂಜಲೇನಯ್ಯ ।

ಊರೆಂಜಲನ್ನು-ತಿಂಬುವಾ ಶುನಕಂಗೆ
ಯಾರೆಂಜಲೇನು ? ಸರ್ವಜ್ಞ —(ಸರ್ವ, ಪ. ೧೭೬೧)

೪೦೩ ಗರತಿಗೆ ಹಾದರ ಸಲ್ಲ, ಸೂಳೆಗೆ ವ್ರತ ಸಲ್ಲ

೧ ...ಸೂಳೆಗಂ ವ್ರತವೆಂಬುದಿಲ್ಲ ಸರ್ವಜ್ಞ
—(ಸರ್ವ, ಪ. ೧೭೨೧)

೪೦೪ ಸುಳ್ಳು ಮಾತಿಗೂ ಸೂಳೆಗೂ ಹತ್ತಿರದ ನಂಟು

ಹೋಲಿಸಿ : ಪುಸಿಯೆ ಮೂಲಂ ಸೂಳೆಗೆ
—(ಸಂ ೧೦ : ೪೩) ಚೆನ್ನಬಸವ ಪುರಾಣ

೪೦೫ ಸೂಳೆಮಗ ಮಾಳ ಮಾಡಿದರೆ ತಾಯಿ ಹೆಸರಲ್ಲದೆ ತಂದೆ ಹೆಸರಲ್ಲ

೧ ಸೂಳೆಯ ಮಗ ಮಹಳವ ಮಾಡಿದಡೆ, ತಾಯ ಹೆಸರಾಯಿತ್ತು
ತಂದೆಯ ಹೆಸರಿಲ್ಲ (೭೦೮) —ವಚನ(?)

೪೦೬ ಸೂಳೆಗೆ ಕುಲವಿಲ್ಲ, ಶೀಲಕ್ಕೆ ಮಾರ್ಗವಿಲ್ಲ

೧ ಸೂಳೆಗಂ ಶೀಲವಿಲ್ಲೆಂದ ಸರ್ವಜ್ಞ
—(ಸರ್ವ, ಪ. ೧೭೧೫)

೪೦೭ ಸೂಳೆಮನೆ ಸೂರೆಲ್ಲ ಮಲ್ಲಿಗೆ ಹೂ

೧ ಸೂಳೆಯ ಮನೆಯ ಸೂರೆಲ್ಲ ಮಲ್ಲಿಗೆ
—ಜಾನಪ, (ಪು. ३೪೬)

೪೦೮ ಸೂಳೆಗೆ ಕರುಣವಿಲ್ಲ, ಬೋಳಿಗೆ ಸುಂಕವಿಲ್ಲ

೧ ...ಸೂಳೆಗಂ ಕರುಣವೇ ಇಲ್ಲ । ಸರ್ವಜ್ಞ
—(ಸರ್ವ, ಪ ೧೭೨೦)

೪೦೯ ಸೂಳೆಬಲ್ಲಳೆ ವಿಟನ ಬಡತನವ !

೧ ಇತ್ತೊಡೆ ಖೇಟವಿಠಾಯದೊಡೆಕಾಟ ಮದುಂ ಬೆಲೆವೆಣ್ಣ ಬಾಳುಂ
—(೮-೪೮) ಅನಂತನಾಥ ಪುರಾಣಂ

೨ ನಿರ್ದ್ರವ್ಯಂ ಪುರುಷಂ ತ್ಯಜಂತಿ ಗಣಿಕಾಃ
—(೨೨೬) ಕರ್ಣಾಟಕ ಪಂಚತಂತ್ರ

೩ ಸೂಳೆಬಲ್ಲಳೆ ಗೆಳೆಯನಿಗಿಪ ಬಡತನವ
—(೧–೧೨೫) ಪುರಂದಾ ಕೀ

೪ ರೊಕ್ಕವಿದ್ದರೆ ಸೂಳೆಯಿಹಳು, ರೊಕ್ಕತೀರಲು ಸೂಳೆ ಹೋಪಳು
—(೨೧–೧೦೧) ಜ್ಞಾನಸಿಂಧು

೫. ಕೌಟುಂಬಿಕ

೪೧೦ ಒಕ್ಕಲಿದ್ದರೆ ಊರು, ಮಕ್ಕಳಿದ್ದರೆ ಮನೆ, ಅಕ್ಕರಿದ್ದರೆ ತವರು

೧ ಒಕ್ಕಲಿದ್ದರs ಊರು । ಮಕ್ಕಳಿದ್ದರs ಮನಿ
—ಜಾಗೀ, ಪು, ೪೦೨

೪೧೧ ಹಾಲುಕ್ಕಿದ ಮನೇಲಿ ಮೇಲ್‌ಗರೀಲಿ

೧ ಪಾಲುಕ್ಕಿಮ್ಮಡಿಸುವಂತಿಮ್ಮಡಿ ಯಕ್ಕುಂ
—(೧–೧೨೬) ಧರ್ಮಾಮೃತ

೪೧೨ ಒಗ್ಗಿದವನಿಗೆ ಒಲಕಾಡೇ ಲೇಸು–ಮೆಚ್ಚಿದವನಿಗೆ ಮಸಣವೇ ಸುಖ

೧ ಮೆಚ್ಚಿದವರಿಗೆ ಮರಣ ಸುಖ
—(೨–೮೪) ಅನುಭವಾಮೃತ

೨ ಮೆಚ್ಚಿದವರಿಗೆ ಮಸಣ ಸುಖ
—(೪–೫೯) ಪದ್ಮಾವತಿ ಚರಿತೆ

೪೧೩ ತರಬಲ್ಲವನ ಹೆಂಡತಿ ಅಡುಜಾಣೆ

೧ ತರಬಲ್ಲವನ ಕಾಂತೆ ಕಡುಜಾಣೆ
—(೬–೧೫೩) ಪದ್ಮಾವತಿ ಚರಿತೆ

೪೧೪ ಕಂಬಳಿಯ ಮೇಲೆ ಕಣಕ ನಾದಿ ಕೂದಲು ಬಂದುವು ಅಂದರೆ ?

೧ ಕಂಬಳಿಯಲ್ಲಿ ಕಣಕವನಾದಿದಂತೆ
—(೧೫೧) ಬಸವೇಶ್ವರ ವಚನ

೪೧೫ ಹಾಲು ಕುದಿದಷ್ಟೂ ರುಚಿ, ಮಾವು ಮಾಗಿದಷ್ಟೂ ರುಚಿ

೧ ಪಾಲುಂ ಕೂರ್ಮೆಯುಂ ಮಟುಗಿದೊಡಲ್ಲದೆ ಲೇಸಾಗವು
—(?) ಧರ್ಮಾಮೃತ

೪೧೬ ಹಸಿದ ಬೆಕ್ಕು ಹತ್ತಿಗೆ ಜಪ್ಪಿಸಿತು

೧ ಹಸಿವಿಗಾರದೆ ಬೆಕ್ಕು ಹತ್ತಿಯನು ಮೆದ್ದಂತೆ
—(ಕೀ. ೪೭೬) ಹ,ಕೀ,ತ.

೪೧೭ ಅಕ್ಕಿ ಉಂಬುವವನು ಹಕ್ಕಿ. ಜೋಳ ತಿಂಬುವವನ ತೋಳ

೧ ಅಕ್ಕಿಯನು ಉಂಬುವನು ಹಕ್ಕಿಯಂತಾಗುವನು
—ಸರ್ವಜ್ಞ, (೧೮೫೧)

೨ ಜೋಳವನು ತಿಂಬುವನು ತೋಳದಂತಾಗುವನು
—ಸರ್ವಜ್ಞ, (೧೮೫೨)

೪೧೮ ಕಣ್ಣಿಗಿಂಪಾದ್ದು ಕರುಳಿಗಿಂಪು

೧ ಕಣ್ಣಿಚ್ಚೆಯಾವಲ್ಲಿ ಮನಕಿಚ್ಚೆಯಹುದು
—(ತಾಂಡವ ವಿನಯ ಸಂಧಿ–೪೩) ಭರತೇಶ ವೈಭವ

೪೧೯ ಪಾಲುಂಡು ಮೇಲುಂಬರೇ

೧ ಪಾಲುಂಡು ಮೇಲುಂಬುದೇ —(೧–೧೨೮) ಸಮಯ ಪರೀಕ್ಷೆ

೨ ಪಾಲುಂಡು ಮೇಲುಂಬರೇ ? —(೧೪೮) ಪ್ರಭುದೇವ ವಚನ

೩ ಪಾಲುಂಡು ಮೇಲುಂಬುದೇ ?
—ಹರಿಚಾರಿತ್ರ, ಪೋಲಾಳ್ವ ದಂಡನಾಥ

೪ ಪಾಲುಂಡು ಮೇಲುಂಬುದೇ ?
—ದಾವಣಗೆರೆಯ ೨೫ನೆಯ ನಂ–ಶಾಸನ, ಪೋಲಾಳ್ವ ದಂಡನಾಥ

೫ ಗುಣಯುಂತರ್ ಪಾಲುಂಡು ಮೇಲುಂಬರೆ
—(೩) ಸೋಮೇಶ್ವರ ಶತಕ

೬ ಪಾಲುಂಡು ಮೇಲುಂಬುದೇ ?
—(೧–೨೯) ತ್ರಿಷಷ್ಟಿ ಪುರಾಣ

೭ ಪಾಲುಂಡು ಮೇಲುಂಬುದೇ
—ಮೂಡಬಿದರೆಯ ಹೊಸಬದಿಯ ಶಿಲಾಶಾಸನಗಳಲ್ಲಿ ೫ನೆಯ ಶಾಸನ. ಸಾಳ್ವಮಲ್ಲನ ಯಶಸ್ಸನ್ನು ಕುರಿತದ್ದು ಕಾಲ–ಸು. ೧೫೦೦

೪೨೦ ಉಂಡವ ತೇಗುವ —(ಕವಿವಾಕ್ಯಸಂಧಿ-೯೬,) ಭರತೇ ವೈಭವ

೪೨೧ ನೆಲ್ಲು (ಬತ್ತ) ವೊಸರು ಕಲಸಿದ ಹಾಗೆ

೧ ನೆಲ್ಲುಂ ವೊಸರುಂಗುಡಿದಂತೆ —(೨–೪) ಕವಿರಾಜಮಾರ್ಗ

೨ ನೆಲ್ಲುಂ ವೋರುಂಗೋದಂತೆ
—(೧೦-೧೮೨) ಶಾಂತಿಪುರಾಣ

೪೨೨ ಆನೆ ತಿನ್ನೋನಿಗೆ ಹಪ್ಪಳ ಕೊಟ್ಟ ಹಾಗೆ

೧ ಆನೆ ದಿಂಬಂಗಾಡೇ ಏಳಿಗೆ —(೩–೬೬ವ) ಶಾಂತಿಪುರಾಣಂ

೨ ಸೊರ್ಕಾನೆ ದಿಂಬಂಗಾಡೆ ಹೋಟಿಗೆ
—(೬–೬೨ವ) ನೇಮಿನಾಥ ಪುರಾಣಂ

೩ ಆನೆದಿಂಬಂಗಾಡಾವರಿದು —(೮–೯೫) ಜಗನ್ನಾಥ ವಿಜಯ

೪ ಸೊರ್ಕಾನೆ ದಿಂಬಂಗಾಡೆ ಹೋಟಿಗೆ
—(ಪು ೧೫೬–ವೊದಲವಚನ) ನಾಗಕುಮಾರಚರಿತಂ

೪೨೩ ಹಾಲಿದ್ದಾಗ ಹಬ್ಬ

೧ ಹಾಲು ಹಯನುಳ್ಳಲ್ಲಿ ಹಬ್ಬವ ಹೇಳದೆಯು ಕೇಳದೆಯು ಸವೆವುದು —(೧೬–೧೨) ಪ್ರಭುಲಿಂಗಲೀಲೆ

೨ ಹಾಲುಳ್ಳ ಕಾಲದೊಳು ಹಬ್ಬಮಂ ಮಾಳ್ಪುದು
—(ಸಂ ೨೨–೩೨) ಸಿದ್ದೇಶ್ವರ ಪುರಾಣ

೩ ಹಾಲುಳ್ಳ ಕಾಲದೊಳ್ ಹಬ್ಬವಂ ಮಾಡು
—(ಸಂ ೨೧-ಪ ೨೩) ಚೆನ್ನಬಸವಪ್ಪ ಪುರಾಣ

೪ ಹಾಲಿದ್ದ ಕಾಲದಲಿ ಹಬ್ಬ

— (೩–೨೧–೫) ಕೈವಲ್ಯ ಕಲ್ಪವಲ್ಲರಿ

೫ ಹಾಲುಳ್ಳಲ್ಲಿ ಹಬ್ಬಮಾಡು

— ಸ್ವತಂತ್ರ ಕಪಿಲಸಿದ್ಧ ಮಲ್ಲೇಶ್ವರ

೬ ಹಾಲು ಇದ್ದಾಗ ಹಬ್ಬವ ಮಾಡವ್ವ
ನಾವು ನಾಲ್ವರು ಮನೆಯಾಗ–ಇದ್ದಾಗ

—(ಮಲ್ಲಿ, ಪು. ೭೯)

೭ ಹಾಲಿದ್ರೆ ಹಬ್ಬಾನವು । ತಾಯಿದ್ರೆ ಮಕ್ಕಳು

— (ಜಾಗೀ, ಪು ೪೦೩)

೪೨೪ ತಾಯಿ ಬಯಸುವುದು ಒಡವೆ ವಸ್ತ್ರ....ಊಟತಿಂಡಿ

೧ ಕನ್ಯಾವರಯತೇ ರೂಪಂ ಮಾತಾವಿತ್ತಂ ಪಿತಾಶ್ರುತಂ
ಬಾಂಧವಾಃ ಕುಲಮಿಚ್ಛಂತಿ ಮೃಷ್ಟಾನ್ನಮಿತರೇಜನಾಃ

೪೨೫ ಸಾವಿರ ಸುಳ್ಳು ಹೇಳಿ ಒಂದು ಕನ್ಯಾದಾನ ಮಾಡು

೧...ಮದುವೆಯಲಿ ರತಿ ಸಂಪ್ರಯೋಗದಲಿ ಸುಜನ ಸರ್ವಧನಾಪಹಾರ ಸಮಯದಲಿ
ಹುಸಿವಡೆ ದೋಷದೊದಗು ಸಮನಿಸದು

—(೧೪–೧೯) ಸೌಂದರಪುರಾಣ

೪೨೬ ಇದ್ದೂರ ಬೀಗತನ ಬಿದ್ದಗೋಡೆಗೆ ಸಮಾನ

೧ ಇದ್ದೂರ ಬೀಗತನ ಬಿದ್ದ ಗ್ವಾಡೀ ಸಮಾನ
ಇದ್ದೂರಾಗ ಮಗಳಕೊಡ ಬ್ಯಾಡ–ನನಹಡೆದವ್ವ
ಇದ್ದಲ್ಲಿಗೆ ಮಾತ ಬರುತಾವ ॥ —(ಜಾಗೀ, ಪು ೬೭)

೪೨೭ ಶಾರದೆ ಮುಕ್ಕ ಸೀತರೆ ಮದುವೆ ಉಳಿಯುತ್ತ್ಯೇ ?

೧ ಕೂರದರ್ ಸೀತೊಡೆ ಮದುವೆಯು ಕಾರ್ಯಮುಳಿದಪುದೆ ?

—(೨೯–೯೪) ವೃಷಭೇಂದ್ರವಿಜಯ

೪೨೮ ಮದುಮಗನನ್ನು ಬಿಟ್ಟು ಮದುವೆಗೆ ಹೋದಂತೆ, ಅಳಿಯನಿಲ್ಲದೆ ದಿಬ್ಬಣ ತೆರಳಿದರು

೧ ಮದವಣಿಗನಿಲ್ಲದೆ ದಿಬ್ಬಣಂ ಬೋಪೆನೆಂಬಾತೆ
—(ಚ. ಅ : ೪೯ ವ) ಧರ್ಮಾಮೃತ

೪೨೯ ಮೆಂಚ್ಚಿದ ಹುಡುಗಿಗೆ ಬಿಚ್ಚೋಲೆಯೇ ಸಾಕು

೧ ಸೂಳೇಗೆ ಸುತ್ತೋಲೆ ಮಡದಿಗೆ ಮುತ್ತೋಲೆ
ಮೆಚ್ಚಿ ಬಂದವಳಿಗೆ ಬಿಚ್ಚೋಲೆ । ಅಪ್ಪ ಅಣ್ಣಯ್ಯನ
ಪಟ್ಟದಾ ಹೆಂಡತಿಗೆ ಹರಳೋಲೆ —ಪು, ೬೯ (ಕ.ಸಂ.)

೪೩೦ ಸುಣ್ಣವಿಲ್ಲದ ವೀಳ್ಯ, ಬಣ್ಣವಿಲ್ಲದ ಮದುವೆ

೧ ಸುಣ್ಣವಿಲ್ಲದ ವೀಳ್ಯ । ಬಣ್ಣವಿಲ್ಲದ ಮದುವೆ
ಹೆಣ್ಣಿಲ್ಲದವನ ಸಂಸಾರ ಮಳಲೊಳಗೆ
ಎಣ್ಣೆ ಹೋಯಿದಂತೆ ! ಸರ್ವಜ್ಞ —(ಸರ್ವ, ಪು,೨೦೩)

೪೩೧ ಒಂದಡಕೆ ಒಡೆದು ಒಂಬತ್ತು ಮದುವೆ ಮಾಡಿ ಬಲ್‌ಖರ್ಚು ಅಂದನಂತೆ

೧ ಒಂದು ಅಡಿಕೇ ಒಡೆದು ಒಂಬತ್ತು ಮದುವೆ ಮಾಡಿ
ಇಂದಿನ ಖರ್ಚು ಬಲುಖರ್ಚು । ಬೀಗಾ
ಖಂಬದ ತೆಕ್ಕಿ ಬಿಡವೊಲ್ಲ —ಹಳ್ಳಿಯ ಹಾಡುಗಳು (೧೬೮)

೪೩೨ ಗಂಡ ಎನಬಹುದೆ ಈ ಗೆಂಡ್ಡೊಟ್ಟೆ ಮುರುವನ್ನ ?

೧ ಗಂಡಾನ ಕಾಣಿರೊ ಗೆಂಡ್ಡೊಟ್ಟೆ ಮುರುವಾನ
ಉಂಡೇಳು ಮನೆಯು ತಿರುಗೋನ ।
—ಹಳ್ಳಿಯಂ ಹಾಡುಗಳು

೪೩೩ ಗಿಳಿ ಸಾಕಿ ಗಿಡುಗನ ಕೈಗೆ ಕೊಟ್ಟ ಹಾಗೆ

೧ ಬಹುಕಾಲ ಮುದ್ದಿಸಿ ಕಲಿಸಿ ಮಾತುಗಳ ।
ಗಿಳಿಯಂ ಸಾಕಿ ಬಾವುಗಗೆ ಒಪ್ಪಿಸುವುದು
—ಹ.ಕೀ,ತ, ಕೀ, (೫೨೬)

೪೩೪ ನಪುಂಸಕನಿಗೆ ರಂಭೆ ಸಿಕ್ಕಿದ ಹಾಗೆ

೧ ರಾಣಿಯೇಕೆ ನಪುಂಸಕಗೆ ? —(೧-೪೨) ಅನುಭವಾಮೃತ

೪೩೫ ಗುಬ್ಬಿಯ ಕೊರಳಿಗೆ ಗುಂಡು ಕಲ್ಲು ಕಟ್ಟಿದ ಹಾಗೆ

೧ ಗುಬ್ಬಿಯ ಕೊರಲ್ಗೆ ಗೋಧಿಯ ಕಲ್ಲ ಕಟ್ಟಿದೊಡೆ ಉಬ್ಬಿ
ಆಗಸಕೆ ಹಾರುವುದೆ ? —ಬ.ವ.

೨ ಗುಬ್ಬಿಯ ಕೊರಳ್ಗೆ ಗೋಧಿಯ ಕಲ್ಲ ಕಟ್ಟಿದೊಡೆ ಡುಬ್ಬಿ
ಯಾಗಸಕ್ಕೆ ಹಾರುವುದೆ ?
—(ಸಂ ೧-೨೭) ಮೋಸನತರಂಗಿಣಿ

೪೩೬ ಕಂತೆಗೆ ತಕ್ಕ ಬೊಂತೆ, ಬೊಂತೆಗೆ ತಕ್ಕ ಬವನಾಸಿ

೧ ಕಂತೆಗೆ ತಕ್ಕ ಬೊಂತೆ —(೭-೧೦) ನಳಚರಿತ್ರೆ

೪೩೭ ಹಡೆದವ್ವನ ಮುಖ ಕಂಡರೆ ಕಾಶಿ ಕಂಡಷ್ಟು ಸಂತೋಸ

೧ ಕಾಶೀಗಿ ಹೋಗಲಕ ಏಸೊಂದು ದಿನಬೇಕ ।
ತಾಸ್ಹೊತ್ತಿನಾದಿ ತವರೂರ । ಮನಿಯಾಗ ।
ಕಾಸಿ ಕುಂತಾಳ ಹಡೆದವ್ವ —(ಗಹಾ, ಪು. ೫೪)

೨ ಕಾಸಿ ನಿನ ಹೊರತು ತವರಿಲ್ಲ —(ಗಹಾ, ಪು. ೫೫)

೪೩೮ ತಾಯಿ ಇದ್ದರೆ ತವರು, ಗಂಡ ಇದ್ದರೆ ಅತ್ತೆಮನೆ, ನೀರಿದ್ದರೆ ಕೆರೆ ಬಾವಿ

೧ ತಾಯಿದ್ದರೆ ತವರ್ಮನೆ, ನೀರಿದ್ದರೆ ಕೆರೆಬಾವಿ
—(ಜಾ.ಗೀ, ಪು. ೩೪೫)

೪೩೯ ತವರಿಗೆ ಮುಪ್ಪಿಲ್ಲ, ತಂಬಿಟ್ಟಿಗೆ ಉಪ್ಪಿಲ್ಲ

೧ ತಂಬಿಟ್ಟಿಗುಪ್ಪುಂಟೆ, ತೌರೀಗೆ ಮುಪ್ಪುಂಟೆ
ಡೊಂಬನಾ ಮನೆಗೆ ಕದವುಂಟೆ । —(ಹ.ಹಾ, ಪು, ೧೧೯)

೪೪೦ ತಾಯಿ ಇದ್ದರೆ ತವರು ಹೆಚ್ಚು, ತಂದೆ ಇದ್ದರೆ ಬಳಗ ಹೆಚ್ಚು

೧ ತಾಯಿದ್ರ ತವರ್ಹೆಚ್ಚು ತಂದಿದ್ರ ಬಳಗ್ಹೆಚ್ಚು ।
ಸಾವಿರಕೆ ಹೆಚ್ಚು ಪತಿ ಪುರುಷ । ಹೊಟ್ಟೀಯ ।
ಮಾಣಿಕದ ಹರಳು ಮಗ ಹೆಚ್ಚು ॥

—(ಗಹಾ, ಪೃ. ೮೭)

೪೪೧ ಬೆಟ್ಟಕ್ಕೆ ಜಲ್ಲಿ ಆಸೆ, ಅಟ್ಟಕ್ಕೆ ಬಿದಿರಾಸೆ, ಹೆಣ್ಣುಮಕ್ಕಳಿಗೆ ತವರಾಸೆ

೧ ಬೆಟ್ಟಕ್ಕೆ ಬಿದಿರಾಸೆ, ಹೆಣ್ಣಿಗೆ ತೌರಾಸೆ

—(ಜಗೀ, ಪೃ. ೭೭)

೪೪೨ ಅಂದಣದ ಮೇಲೆ ಕೂರಿಸಿದರೂ ಹಂಗಿನ ತವರುಮನೆ

೧ ಗಂಜೀಯ ಕುಡಿದರು ಗಂಡನ ಮನಿ ಲೇಸ
ಅಂದಣದ ಮ್ಯಾಲಿ ಚವುರವ ಸಾರಿದರ ।
ಹಂಗೀನ ತವರಮನೆ ಸಾಕ (ಗ.ಹಾ)

೪೪೩ ಅತ್ತಿಗೆ (ತವರಲ್ಲ) ತಾಯಲ್ಲ, ಹಿತ್ತಾಳೆ ಚಿನ್ನವಲ್ಲ

೧ ಅತ್ತೀಗೆ (ತವರಲ್ಲ) ತಾಯಲ್ಲ ಹಿತ್ತಾಳೆ ಚಿನ್ನವಲ್ಲ
ಮತ್ತೆ ಮದಗುಣಿಕೆ ಮರವಲ್ಲ —(ಜಾಗೀ, ಪು, ೫೯)

೨ ಅತ್ತಿಗೆ ನಂಟಲ್ಲ ಹಿತ್ತಾಳೆ ಕಪ್ಪಲ್ಲ
ಉತ್ತರಾಣಿ ಕಡ್ಡಿ ನೆರಳಲ್ಲ —ಸಂಪಿಗೆ ಅರಳೀವೆ, (ಪೃ..೨೪)

೪೪೪ ತಾಯಿಲ್ದ ತವರಿಗೆ ಹೋಗಬೇಡ, ನೀರಿಲ್ಲದ ಕೆರೆಗೆ ಹೋಗಬೇಡ

೧ ತಾಯಿಲ್ದ ತವರೀಗಿ ಹೋಗದಿರು ನನಮನವ
ನೀರಿಲ್ದ ಕೆರಿಗಿ ಕರ ಬಂಧು । ತಿರುಗ್ಯಾಗ
ಆಗ ನೋಡದರ ದುಃಖಗಳ ॥ —(ಗಹಾ, ಪೃ. ೫೪)

೪೪೫ ತಾಯಿ ಹೋದ ಮೇಲೆ ತವರು ಮನೆಯೇ, ಕಾಯಿ ಹೋದ ಮೇಲೆ
ಬಾಯಿ ರುಚಿಯೆ ?

೧ ತಾಯಿ ತೀರಿದ ಮೇಲೆ ತವರಾಳೆಯೇ !

—(೫೭. ಕ. ದಾ.ಕೀ.)

೪೪೬ ಕೊಟ್ಟ ಹೆಣ್ಣು ಕುಲಕ್ಕೆ ಹೊರಗು...

೧ ಕೊಟ್ಟ ಕೂಸು ಕುಲದಿಂ ಪೊಱಗು
—(೧೮-೯೩) ತ್ರಿಷಷ್ಟಿ ಪುರಾತನ ಚಾರಿತ್ರ

೨ ಕುಲಕೆ ಪೊರಗು ಕೊಟ್ಟ ಪೆಣ್
—(೫-೩೭) ಹದಿಬದೆಯ ಧರ್ಮ

೪೪೭ ಹೆಣ್ಣು ಕೊಟ್ಟೆಯೋ, ಚಿನ್ನ ಕೊಟ್ಟೆಯೋ ?

೧ ಹೆಣ್ಣ ಕೊಟ್ಟೆಯೊ ಚಿನ್ನ ಕೊಟ್ಟೆಯೋ ?
—(ಸೇಸೆಯು ಸಂಧಿ-೧೧೮) ಭರತೇಶವೈಭವ

೪೪೮ ಹೆಣ್ಣ ಹಡೆಯೋದು ಬ್ಯಾಡ, ಹೆರರಿಗೆ ಕೊಡೋದು ಬ್ಯಾಡ

೧ ಹೆಣ್ಣ ಹಡೆಯಲಿ ಬ್ಯಾಡ ಹೆರವರಿಗೆ ಕೊಡಬ್ಯಾಡ
ಹೆಣ್ಣು ಹೋಗಾಗ ಅಳಬ್ಯಾಡ । ಹಡದವ್ವ
ಸಿಟ್ಟಾಗಿ ಶಿವಗ ಬೈಬ್ಯಾಡ ॥ —(ಗಹಾ, ಪು, ೫೧)

೪೪೯ ಹೆಣ್ಣು ಹುಟ್ಟಿದ ಮನೆ ಹೆಗ್ಗಣ ಹತ್ತಿದ ಹಾಗೆ

೧ ಹೆಣ್ಣು ಹುಟ್ಟಿದ ಮನಿ ಹೆಗ್ಗಣ್ಣಹತ್ತಿದಾಂಗ
ಗಂಡಸ ಮಗ ಗಜಭೀಮ । ಹುಟ್ಟಿದರ
ಚಿಲಕಿ ಚಿತ್ತಾರ ನಗತಾವ ॥ —(ಗಹಾ, ಪು. ೮೯)

೪೫೦ ಹೆಣ್ಣು ಹುಟ್ಟಿದರೆ ಹೆರವರಿಗೆ, ಗಂಡು ಹುಟ್ಟಿದರೆ ಮನೆಗೆ

೧ ಹೆಣ್ಮಕ್ಕಳ್ಹುಟ್ಟಿದರ ಹೆರವರಿಗೆ ಸೊಸೆಯುಕ್ಕ
ಗಂಡು ಹುಟ್ಟಿದರ ಮನೆಗಾಗಿ । ಅಪ್ಪಯ್ಯ
ಎಲ್ಹೋದರೂ ನಿನ್ನ ಹೆಸರಾಗಿ —(ಗಹಾ, ಪು. ೧೦೩)

೪೫೧ ಹೆಣ್ಣು ಹುಟ್ಟಿದ ಮನೆಗೆ ಒಂದು ಹುಣ್ಣು ಹುಟ್ಟಿದ ಹಾಗೆ

೧ ಹೆಣ್ಣೆಂಬುದು ತವರಿಗೆ ಹುಣ್ಣಾಗಿ ಮಾಯದ ಗಾಯ
.... । ಗಂಡ ಬಿಟ್ಟ
ಹೆಣ್ಣಿನ ಬವಣೆ ಹೇಳೊದೇನ । ಕೋಲೆನ್ನಕೋಲೆ

೪೫೨ ನಾರಿ ಸ್ವರ್ಗದ ದಾರಿ

೧ ನಾರಿ ಪರರುಪಕಾರಿ । ನಾರಿ ಸ್ವರ್ಗಕೆ ದಾರಿ
—(ಸರ್ವ, ಪು. ೨೧೩)

೪೫೩ ನಾರಿಯಿಲ್ಲದ ಮನೆ, ನೀರಿಲ್ಲದ ಊರು...

೧ ನಗೃಹಂ ಗೃಹಮಿತ್ಯಾಹುಃ ಗೃಹಿಣೀ ಗೃಹಮುಚ್ಯತೇ

೨ ನಾರಿಯಿಲ್ಲದ ಮನೆಯು । ಪಾರಿಯಿಲ್ಲದ ದುರ್ಗ
—(ಸರ್ವ, ಪು. ೨೦೩)

೩ ಗರತಿಯಿಲ್ಲದೆ ಗೃಹಮೆಲ್ಲಿತ್ತು
—(೧೧೦ವ) ನೇಮಿನಾಥಪುರಾಣ

೪ ಪುರುಷಸ್ಯ ಭಾಗ್ಯವೆಂಬುದು ನಿಜಂ
—(ಜೈಮಿನಿ ಭಾರತ,ಪು.೩೯೪೯)

೪೫೪ ಹೆಣ್ಣಿರುವ ಮನೆಗೆ ಕನ್ನಡಿಯಾಕೆ ?

೧ ಹೆಣ್ಣಿದ್ದ ಮನೆಗೆ ಕನ್ನಡಿಯಾತಕ್ಕ
ಹೆಣ್ಣು ಸಣ್ಣವಳು ಒಳಗಿರಲು । ನನ್ನ ಮಗಳು
ಕನ್ನಡಿಯಂಗ ಹೊಳೆಯುವಳು ॥ —(ಗಹಾ, ಪು, ೧೦೩)

೪೫೫ ಒಡಲೆರಡು ಜೀವವೊಂದು

೧ ಮೆಯ್ಗಳೆರಡಾದೊಡಮೇನ್ ಅಸುವೊಂದೆ ನೋಳ್ಪೊಡೆ
—(೩-೫) ಆದಿಪುರಾಣ

೨ ಎರಡೊಡಲೊಂದೆ ಜೀವ

೩ ಒಡಲೆರಡಸುವೊಂದು
—(೪-೬) ರಾಮಚಂದ್ರಚರಿತ ಪುರಾಣಂ

೪ ಒಡಲೆರಡಸುವೊಂದು
—(೪-೮೮) ಶ್ರೀ ಕುಮುದೇಂದು ರಾಮಾಯಣ

೫ ತನುವೆರಡಾದೊಡೇನಸುವೊಂದು
—(೭-೫೧) ರಾಮನಾಥ ಚರಿತ, ನಂಜುಂಡ

೬ ತನುವೆರಡಸುವೊಂದು
—(೧-೪೩) ; (೨೮-೧೨೯) ನಾಗಕುಮಾರ ಚರಿತಂ

೭ ಒಡಲೆರಡಕೆಯೊಂದೇ ಯಸುದಾಗಿ
—(೧೪-೫೬) ನೇಮಿಜಿನೇಶ ಸಂಗತಿ

೮ ಅಂಗವೆರಡಾಗಿ ಪ್ರಾಣವೆ ಒಂದು ಈರ್ವರದು
—(೫-೩೯) ಪ್ರೌಢರಾಯನ ಕಾವ್ಯ

೯ ಎರಡೊಡಲೊಂದೆ ಜೀವಂ
—(ಚ. ಆ-೨) ಅನಂತನಾಥ ಪುರಾಣಂ

೧೦ ತನುವೆರಡಸುವೊಂದೆ
—(೫೨-೭೨) ಭರತೇಶ ವೈಭವ

೧೧ ಮೆಯ್ಯೆರಡು ಮನವೊಂದು
—(೨-ಪು ೪) ಅದ್ಭುತರಾಮಾಯಣ

೪೫೬ ಕಡೆಗಣ್ ನೋಟ ನೋಡಬಾರದು

೧ ಯಾರು ಇದ್ದರೇನೆ ಬೀದೀಲಿ ಇರಬೇಡ
ವಾರೆಗಣ್ಣಿಂವ ನೋಡಬೇಡ —(ಜಾಗೀ, ಪು, ೩೪೦)

೩೫೭ ಜ್ಯೋತಿ ಇಲ್ಲದ ಮನೆ, ನೀತಿ ಇಲ್ಲದ ಹೆಣ್ಣು

೧ ಜ್ಯೋತಿ ಇಲ್ಲದ ಮನೆ । ನೀತಿ ಇಲ್ಲದ ಹೆಣ್ಣು
ಧೋತ್ರ ಹೊದೆದವನು । ಇದ್ದರೇನೋ-ಇಲ್ಲದಿದ್ದರೇನೋ
—ಆಯ್ದುಹ, (ಹಾ ೨೩.ಪು)

೪೫೮ ಹೆಣ್ಣಿನ ಗೋಳು ತಟ್ಟಿ ಬನ್ನಿಮರ ಮುರೀತು

೧ ಹೆಣ್ಣೀನ ಕಿಚ್ಚಟ್ಟಿ ಬನ್ನಿಯು ಮರ ಮುರಿದೋ

ರಾಮಾರ ಮಡದಿ ಸೀತವ್ನ । ಕಿಚ್ಚಟ್ಟಿ
ರಾವಣನ ಪಟ್ಣ ಉರಿದಾವು —ಜಗೀ, ಪು. ೭೦

೪೫೯ ಹೆಂಡತಿ ಹೆಗ್ಗಡೆಯಾದರೆ । ಗಂಡ ಮೂಳ್ನಾಯಿಗಿಂತ ಕಡೆ

೧ ಹೆಂಡತಿಯುಗ್ಗಡೆಯಾದಡೆ । ಗಂಡ ನಾಯಿಂದ ಕಷ್ಟ ಸುಗುಣ
ರತ್ನಕರಂಡಾ —೭೩೬, ನೀತಿಸಾರ

೪೬೦ ಕರಿ ಕಂಬಳಿ ತಂದು ಹೊದಿಲಾರದ ಮೇಲೆ ಯಾಕೆ ತಂದೆ ದರವೇಶಿ

೧ ಕರಿಯ ಕಂಬಳಿ ತಂದು ಹೊದೆಯಲಾರದ ಮೇಲೆ
ಆದನ್ಯಾಕೆ ತಂದ್ಯೋ ದರದೇಸಿ । ಕಂಡೋರ್ಹೆಣ್ಣ
ಮದ್ವ್ಯಾಗಿ ಗೋಳ ಹೊಯ್ಕೊಂಡ ॥
—ಜಗೀ, ಪು. ೮೧

೪೬೧ ಗಂಡನ ಕೂಡಿದ್ರು ಮುಂಡೆ ಬಾಳು....

೧ ಗಂಡನಿದ್ದಂದದಿ ಮುಂಡೆ !
—(೪–೩೩) ಪದ್ಮಾವತಿ ಚರಿತೆ

೪೬೨ ಕೋಣಗಳ ಹೋರಾಟ ಗಿಡಕ್ಕೆ ಮೃತ್ಯು

೧ ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತುಬ ಕ್ಷೋಣಿಯಾಡುವ
ಗಾದೆಯುಂ ದಿಟಂ ಮಾಳ್ಪಂತೆ —ಹ ಕಾಸಂ. ಪು. ೧

೨ ಕೋಣನ ಪೋರ್ಕುಳಿ ಗಿಡುವಿಗೆ ಮಿತ್ತು
—(೩–೬೮) ಯಶೋಧರ ಕಾವ್ಯಂ

೩ ಅಡವಿಗೋಣಗಳೆರಡು ಹೋರಲು ಗಿಡುವು ಹುಡಿಗೆಡೆ
ದಂದವಾಯಿತು —(೨೮–೬೫) ಕೌಶಿಕರಾಮಾ

೪ ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ ।
ಲಿಂಗದ ನೀರು ಹರಿದ್ಹಂಗ । ಹಿರಿ ಹೊಳಿಯು
ಗಂಗವ್ವನ ಕೂಡಿ ನಲಿದ್ಹಾಂಗ ॥ —ಗಹಾ, ಪು ೮೨

೪೬೩ ಗಂಡಹೆಂಡಿರ ಜಗಳ ಗಂಧ ತೀಡೀಧಾಂಗ —(ಗಪ, ಪು. ೭೬)

೪೬೪ ಗೂಳಿಗಳ ಜಗಳದಲ್ಲಿ ಕರು ಕಾಲು ಮುರಿಯಿತು

೧ ವೃಷಭ ಕಲಹೇ ವತ್ಸ ಪಾದಭಂಗಃ —(ಸು)

೪೬೫ ಮುದಿ ಬಡಿಯೋಕೆ ದಡಿಯಾಕೆ ? ಮುದಕೆ ಒಡಿಯೋಕೆ ಅಡಕೆ ಮರ ಯಾಕೆ ?

೧ ದಡಿಗೊಂಡು ಮಣ್ಣ ಬಗ್ಗರೆಯು ನೊಡೆದ ತೆರ !
—(೨೫-೫೨) ನೇಮಿಜಿನೇಶ ಸಂಗತಿ

೪೬೬ ಮನೆ ಮಾನ ಬೀದೀಲಿ ತಂದಿಟ್ಟ ಹಾಗೆ

ಹೋಲಿಸಿ : ತಮ್ಮ ಕೊಜಿತೆಯು ಪೊರಗಿಡುವವರುಂಟೆ ?
—(೧೩-೨೦) ಸೊಬಗಿನ ಸೋನೆ

೪೬೭ ಓಡಿಹೋಗುವ ಜೊಡ್ಡಿ ಹಾಲಿಗೆ ಹೆಪ್ಪು ಹಾಕ್ತಾಳೈ ?

೧ ಒಗೆತನ ಬಿಟ್ಟು ಪೋಪಾಗ ಹಾಲಿಗೆ ಹೆಪ್ಪ ಮೊಗೆದಿಕ್ಕುವ ರಾರುಂಟು? —(ಸಂ ೯-೧೯) ಮೋಹನ ತರಂಗಿಣಿ

೪೬೮ ಗಂಡಗಂಜದ ನಾರಿ ದೇವಸ್ಥಾನದ ಬೀರಿ

೧ ಗಂಡಗಂಜದ ನಾರಿ ಅವಳೆ ಹೆಮ್ಮಾರಿ —(ಕದಾ ಕೀ)
ತಂದರೆ ಬಂದರೆ ತನ್ನಗಂಡ, ತರದೆ ಹೋದ್ರೆ ನನ್ನ ತಂಗಿ ಗಂಡ
ತಂದು ಬಂದರೆ ತನ್ನ ಪುರುಷನ ಬಂದಿರಾ ಬಳಲದಿರ ಎಂಬಳು
—ಕೀ, ೪೮೮, ಹ.ಕೀ.ತ

೪೭೦ ತುಟಿಮೀರಿದ ಹಲ್ಲು, ವನಮೀರಿದ ಪಕ್ಷಿ....

೧ ತುಟಿಮೀರಿದ ಹಲ್ಲಿನಂತೆ —(೧೯೦) ಕದಾ. ಕೀ.

೪೭೧ ಹೊಕ್ಕಮನೆ ಹಾಳು, ಇದ್ದ ಮನೆ ಬೋಳು

೧ ಹೊಕ್ಕ ಮನೆ ಹಾಳು —(೨೨-೫) ಸಿಂಗಿರಾಜ ಪುರಾಣ

೨ ಪುಟ್ಟಿದ ಮನೆ ಪೊಕ್ಕಮನೆಯೆರಡುಂ ಕೇಡನಾಡಿ ತೋರ್ಪಂತೆ
—(೧೯೫-೯೮) ನೇಮಿನಾಥ ಪುರಾಣ

೪೭೨ ಹೆಂಡತಿ ಪ್ರಾಣ ಹಿಂಡುತಿ

೧ ಹೆಂಡತಿ ಪ್ರಾಣ ಹಿಂಡುತಿ, ದೊಡ್ಡ ಕೊಂಡ ಕೋತಿಯಂತೆ
ಕುಣಿ ಕುಣಿಸುತ್ತಿ —(ಕೀ. ೪೭೨) ಹ.ಕೀ.ತ.

೪೭೩ ಹೋರುವ ಹೆಂಡತಿ, ಸೋರುವ ಮನೆ ಯಾರಿಗೂ ಬೇಡ

೧ ಸೋರುವ ಮನೆ....ಹೋರುವ ನೆರೆ...ವರ್ಜಿಸಬೇಕು
—(ಮದನಮೋಹಿನಿಯ ಕಥೆ)

೨ ಸೋರುವಾ ಮನೆಯಿಂದ । ದಾರಿಯಾ ಮರಲೇಸು
ಹೋರುವಾ ಸತಿಯು–ಬದುಕಿಂದ ಹೊಡೆದೊಯ್ವ
ಮಾರಿಯೇ ಲೇಸು ! ಸರ್ವಜ್ಞ —ಸರ್ವ, ಪು. ೨೧೦

೪೭೪ ತನಗಲ್ಲದ ಹೆಂಡತಿ, ಮನೆಗಲ್ಲದ ಮಾಳಿಗೆ

೧ ತನಗನುಕೂಲೆಯಲ್ಲದ ಸತಿಯು...ವರ್ಜಿಸುವುದು
—(ಆ.ಪ. ೮-೯೩) ಕರ್ಣಾಟ ಭಾರತ ಕಥಾಮಂಜರಿ

೪೭೫ ನಡುಬೀದಿಯಲ್ಲಿ ದವನ ಬಿತ್ತಿದರೆ ಮುಡೀದವರಾರು ?

೧ ಬಡವನಾ ಹೆಂಡತಿಯು । ಕಡುಚೆಲುವೆಯಾಗಿಹರೆ
ನಡುಬೀದಿಯೊಳಗೆ–ದವನವನು ಬಿತ್ತಲದ
ಮುಡಿಯುದವರಾರು ? ಸರ್ವಜ್ಞ —ಸರ್ವ, ಪು, ೨೨೪

೪೭೬ ಒಲಿದರೆ ನಾರಿ, ಮುನಿದರೆ ಮಾರಿ

೧ ನಾರಿ ಪರರುಪಕಾರಿ । ನಾರಿ ಸ್ವರ್ಗಕೆ ದಾರಿ
ನಾರಿ ಸಕಲರಿಗೆ–ಹಿತಕಾರಿ, ಮುನಿದರಾ
ನಾರಿಯೇ ಮಾರಿ ! ಸರ್ವಜ್ಞ —(ಸರ್ವ, ಪು, ೨೧೩)

೨ ನಾರಿ ಸಾರ್ದರ ಮಾರಿ ನರಕದ ದಾರಿ ಲಯಕಾರಿ
— (೧೪–೧೫) ಕೌಶಿಕ ರಾಮಾಯಣ

೪೭೭ ಕೊತ್ತಿ ಪಾರುಪತ್ಯ ಒಲೆ ಮುಂದೆ

ನಸ್ತ್ರೀಸ್ವಾತಂತ್ರ್ಯಮರ್ಹತಿ. ನಭಜೇತ್ ಸ್ತ್ರೀ ಸ್ವತಂತ್ರತಾಂ - ಎಂಬ
ಮನುವಿನ ವಚನಕ್ಕೂ ಈ ಗಾದೆಗೂ ವ್ಯತ್ಯಾಸವೇನು?

೪೭೮ ನೀರಿನಲ್ಲಿರೋ ಮೀನಿನ ಹೆಜ್ಜೇನಾದ್ರೂ ತಿಳೀಬಹುದು,
ಹೆಣ್ಣಿನ ಮನಸ್ಸು ತಿಳಿಯಲು ಸಾಧ್ಯವಿಲ್ಲ

೧ ಮತ್ಸ್ಯಪಾದಂ ಜಲೇ ದೃಷ್ಟ್ವಾ ನಾರೀ ಹೃದಯ ನಪಶ್ಯತಿ
—(ಸು)

೨ ಸತಿಯರ ಚಿತ್ತಮನರಿಯಲ್ । ಪಿತಾಮಂಗರಿದು
ಮನುಜರಳವಲ್ತು —(ಅಭಿನವದಶಕುಮಾರ ಚರಿತ್ರೆ)

೪೭೯ ಸ್ತ್ರೀ ಬುದ್ಧಿ ಪ್ರಳಯಾಂತಕ :

೧ ಸ್ತ್ರೀ ಬುದ್ಧಿಯೇ ಪ್ರಳಯಂ
—(ಸಂ ೪೬–೩೧೭) ಚೆನ್ನಬಸವ ಪು.

೪೮೦ ಹೆಣ್ಣ ನೆಲೆ, ಕುದುರೆನಲೆ, ನೀರಿನ ನೆಲೆ ಅರಿತವರಿಲ್ಲ

೧ ಹೆಣ್ಣಿನಾ ಹೃದಯವಾ । ತಣ್ಣಗಿಹ ನೀರಿನಾ
ಬಣ್ಣಿಸುತ ಕುಣಿವ ಕುದುರೆಯಾ ನೆಲೆಯ ಬ
ಲ್ಲಣ್ಣಗಳು ಯಾರು ? ಸರ್ವಜ್ಞ —(ಸರ್ವ, ಪು. ೧೯೯)

೪೮೧ ಇಬ್ಬರು ಹೆಂಡಿರ ಕಾಟ, ಇರುಳು ತಿಗಣೆಯ ಕಾಟ ಕಿಬ್ಬಕ್ಕಿಕಾಟ ಬಲು
ಕಾಟ

೧ ಇಬ್ಬರ್ಹೆಂಡಿರ ಕಾಟ ಇರುಳು ತಿಗಣೇ ಕಾಟ
ಕಬ್ಬಕ್ಕಿ ಕಾಟ ಬಲು ಕಾಟ । ಜವರಾಯ
ಒಬ್ಬ ಬಿಟ್ಟೊಬ್ಬ ಕೊಂಡ್ಹೋಗೊ
—(ಹಹಾ, ಪು. ೧೩೯)

೪೮೨ ಸವತಿ ಅಂದರೆ ಸಾಯುವ ಹೆಣವೂ ಎದ್ದು ಕೂತಿತಂತೆ

೧ ಸವತಿಯರೆಂದರೆ ಹೆಣವೆದ್ದು ಕುಣಿಯೂದ
ದಿಂಗು ದ್ರೌಪದಿಗೆ ಸೆಟಗೊಂಡು । ಕೋ । ಬಡಿಯಲು
ಸಿಡಿಮಿಡಿಗೊಂಡು ನುಡಿದಳಾಗ । ಕೋಲನ್ನ ಕೋಲ ।
—ಕನ್ನಡಜಾ. ಪು. ೩೮೩

೪೮೩ ಸಾವಿರ ವರಹ ಕೊಟ್ಟರೂ ಸವತಿ ಇದ್ದ ಮನೆ ಬೇಡ,
ನೂರು ಕೊಟ್ಟರೂ ಮಲಮಕ್ಕಳಿದ್ದ ಮನೆ ಬೇಡ

೧ ಸಾವಿರ ಕೊಟ್ಟರೂ ಸವತೀಯು ಮನಿಬ್ಯಾಡ
ಸಾವಿರದ ಮ್ಯಾಲ ಐನೂರು । ಕೊಟ್ಟರು ।
ಮಲಮಕ್ಕಳಿರುವ ಮನಿ ಬ್ಯಾಡ ॥ — ಗಹಾ, ಪು ೧೨೯

೪೮೪ ಸಾವುತನಕ ಬಿಡದು ಸವತಿ ಮಕ್ಕಳ ಜಗಳ

೧ ಸಾವುತನಕ ಬಿಡದು ಸವತಿ ಮಕ್ಕಳ ಜಗಳ ।
ಸರಿಮನ್ಯಾಗಿರುವ ನೆಗಿಯೇಣಿ–ನಿನಜಗಳ
ಬ್ಯಾರಾಗುತನಕ ಬಿಡಲಿಲ್ಲ —(ಜಾನಪದ ಗೀ, ಪು. ೧೯೪)

೪೮೫ ಗಂಡ ಸತ್ತ ಮೇಲೆ ಗಂಧ ಕುಂಕುಮ ಯಾಕೆ

೧ ಗಂಡ ಸತ್ತಾರಿನ್ನು ಗಂಧ ಕುಂಕುಮವ್ಯಾಕ
ಬಂಗಾರವ್ಯಾಕ ಬಳೆಯಾಕ । ಕೊರಳೀನ
ಸಿಂಗಾರ ಸಿಪನೆ ಕಸಗೊಂಡ —(ಜಾಗೀ, ಪು. ೧೪೦)

೪೮೬ ಗಂಡುಮಕ್ಕಳಿಲ್ಲದ ಮುಂಡೆಯ ಮನಸ್ಸು ಗುಂಡುಕಲ್ಲಿಗಿಂತ ಗಟ್ಟಿ

ಕಿಂ ಕ್ರೂರಂ ಫಣಿ ಹೃದಯಂ ಪುನರಪಿ ಕಿಂಕ್ರೂರ ಮಂಗನಾ
ಹೃದಯಮ್ ।
ಕ್ರೂರಾತ್ಕ್ರೂರತರಂ ಕಿಂ ಪತಿಸುತ ಧನಹೀನ ಮಂಗನಾ
ಹೃದಯಂಮ್ ॥ —(ಸಂ)

೪೮೭ ಬಂಜೆ ಬಾಳು ಎಂಜಲೆಲೆಗೆ ಸಮಾನ

೧ ಬಾಲಕರಿಲ್ಲದ ಬಾಲಿ ದ್ಯಾತರ ಜನ್ಮ ।
ಬಾಡೀಗಿ ಎತ್ತು ದುಡಿದಂಗ । ಬಾಳೆಲೆಯು
ಹಾಸ್ಯುಂಡು ಬೀಸಿ ಒಗೆದಂಗ ॥ —(ಗಹಾ. ಪು. ೧೧೬)

೪೮೮ ಬಾಲಕರಿಲ್ಲದ ಬಾಲೆ ಜನ್ಮ ಬಾಡಿಗೆ ಎತ್ತಿನಂಗೆ

೧ —(ಗಹಾ, ಪು. ೧೧೬)

೪೮೯ ಬಾಲಕರಿಲ್ಲದ ಬಾಳು, ಬಾಳೆ ಇಲ್ಲದ ತೋಟ

೧ ಬಾಲರಿಲ್ಲದ ಬಾಳ್ವೆ ಬಾಳೆಯಿಲ್ಲದ ತೋಟ
—(ಹಳ್ಳಿಹಾ, ಪು ೧೧೭)

೪೯೦ ಮಕ್ಕಳಿಲ್ಲದ ಮನೆ ಮಸಣ

೧ ಒಕ್ಕಲಿಲ್ಲದ ಊರು ಹಾಳು, ಮಕ್ಕಳಿಲ್ಲದ ಮನೆ ಮಸಣವಟ್ಟಿಗೆ
—(೪೮೨) ತೋಂಟದ ಸಿದ್ಧೇಶ್ವರ ವಚನ, ಹುಬ್ಬಳ್ಳಿಪ್ರತಿ

೪೯೧ ಮಕ್ಕಳಿಲ್ಲದ ಮನೆ, ಒಕ್ಕಲಿಲ್ಲದ ಊರು....

೧ ಒಕ್ಕಲಿಲ್ಲದ ಊರು । ಮಕ್ಕಳಿಲ್ಲದ ಮನೆಯು
—(ಸರ್ವ, ಪು. ೧೭೯)

೪೯೨ ಮಕ್ಕಳಿಲ್ಲದ ಮನೆ ಶೂನ್ಯ, ಒಕ್ಕಲಿಲ್ಲದ ಕೇರಿ ಶೂನ್ಯ

೧ ಅಪುತ್ರಸ್ಯ ಗೃಹಂ ಶೂನ್ಯಂ
—(೨೨೩) ಕರ್ನಾಟಕ ಪಂಚತಂತ್ರ

೪೯೩ ಮಕ್ಕಳಿಲ್ಲದ ಮನೆ, ಮರುಗವಿಲ್ಲದ ತೋಟ

೧ ಮಕ್ಕಳಿಲ್ಲದ ಮನೆ । ಮರುಗವಿಲ್ಲದ ತೋಟ
ದೇವರಿಲ್ಲದ ಗುಡಿ ।
ಇದ್ದರೇನೋ– ಇಲ್ಲದಿದ್ದರೇನೋ
—(ಆಯ್ದುಹಹಾ, ಪು. ೨೨೦)

೨ ಮಕ್ಕಳಿಲ್ಲದ ಮನೆ, ಮರ್ಗವಿಲ್ಲದ ತೋಟ
—(ಜಾನಪದರಸ, ಪು. ೧೧೨)

೪೯೪ ಮಕ್ಕಳಿಲ್ಲದ ಮನೆ ಮನೆಯಲ್ಲ, ಹಕ್ಕಿಯಿಲ್ಲದ ತೋಟ ತೋಟವಲ್ಲ

೧ ಮಕ್ಕಳಿಲ್ಲದ ಮನೆಯು । ಪಕ್ಕಿಯಿಲ್ಲದ ವನವು
—(ಸರ್ವ, ಪು, ೨೦೩)

೪೯೫ ಮಕ್ಕಳಿಲ್ಲದ ಮನೆ, ರೊಕ್ಕವಿಲ್ಲದ ಬಾಳು

೧ ರೊಕ್ಕವಿಲ್ಲದ ಬಾಳ್ವೆ । ಮಕ್ಕಳಿಲ್ಲದ ಮನೆಯು
—(ಸರ್ವ, ಪು. ೨೦೪)

೪೯೬ ಕೂಸಿದ್ದ ಮನೆಗೆ ಬೀಸಣಿಗೆ ಯಾಕೆ ?

೧ ಕೂಸು ಇದ್ದ ಮನೆಗೆ ಬೀಸಣಿಗೆ ಯಾತಕ ।
ಕೂಸು ಕಂದಯ್ಯ ಒಳ ಹೊರಗ । ಆಡಿದರ
ಬೀಸಣಿಕೆ ಗಾಳಿ ಸುಳಿದಾವ —(ಗಹಾ, ಪು. ೮೮)

೪೯೭ ಬಂಜೆ ಮನೆ ಬಾಗಿಲಲ್ಲಿ ಬಂಗಾರದ ಒಳಕಲ್ಲು ಇದ್ದಹಾಗೆ

೧ ಬಂಜೆ ಬಾಗಿಲ ಮುಂದೆ ಬಂಗಾರದೊಳಕಲ್ಲು
ಒಂದು ಕುಟ್ಟ್ಯಾಕ ಸೊಸೆಯಿಲ್ಲ । ಮಾನೋಮಿ
ಬನ್ನಿ ಮುಡಿಯೋಕೆ ಮಗನಿಲ್ಲ —(ಹಳ್ಳಿಹಾ, ಪು. ೧೧೮)

೨ ಬಂಜೆಯು ಮನೆ ಮುಂದೆ ಬಂಗಾರದ ಕಲುಬಾವಿ
—(ಜಾನಪ, ಪು. ೧೦೭)

೪೯೮ ಮಕ್ಕಳಿಲ್ಲದ ಸಿರಿ, ಹೆಣಕ್ಕೆ ಮಾಡಿದ ಶೃಂಗಾರ

೧ ಮಕ್ಕಳಿಲ್ಲದ ಸಕಲಸಿರಿ ಶವಕಿಕ್ಕಿದ ಮಣೌಭರಣ ವಿಭ್ರಮ
—(೧-೪-೩) ತೊರವೆ ರಾಮಾಯಣ

೪೯೯ ಮಕ್ಕಳಿಲ್ಲದವರಿಗೆ ಒಕ್ಕಳ ಹೊನ್ನಿದ್ದೇನು ?

೧ ಸಂತಾನವಿಲ್ಲದ ಸಿರಿಯದೇಕೆ ? —(ನಳಚ, ಕದಾ)

೨ ತನುಭವಸಿಲ್ಲದವನ ಭಾಗ್ಯಮಂತುಮೇಂ ಮೆಚ್ಚಿದಪುದೇ
—(೩-೪೭) ರಾಜಶೇಖರವಿಳಾಸ

೩ ಅಖಿಲ ಸಂಪದಮಿರ್ದೊಡೇನು ಸುತರಿಲ್ಲದಿರೆ ?
—(ಬಾ.ಕಾಂ. ೫-೭೫) ಶ್ರೀಮದ್ರಾಮಾಯಣ

೪ ಎನಿತ್ತೈಸಿರಿಯಿರ್ದೊಡಂ ಮಕ್ಕಳಿಲ್ಲದವನ ಬಾಳ್ಕೆಯದೊಂದು
ಬಾಳ್ಕೆಯೇ ?
—(೪-ಪುಟ ೧೭ ; ೨೧–೨೨ನೆಯ ಸಾಲುಗಳು ಶ್ರೀರಾಮಾಶ್ವ
ಮೇಧ)

೫೦೦ ಮಕ್ಕಳಿಲ್ಲದವರಿಗೆ ಮೋಕ್ಷವಿಲ್ಲ....

೧ ಅಪುತ್ರಸ್ಯಗತಿರ್ನಾಸ್ತಿ (ಸಂ)

೨ ಅಪುತ್ರಸ್ಯಗತಿರ್ನಾಸ್ತಿ, ಸ್ವರ್ಗೋ ನೈವಚ ನೈವಚ (ಸಂ)

೩ ಅಪುತ್ರಾಣಾಂ ಕಿಲ ಗತಿರ್ನಾಸ್ತಿ

— (೩–೮೪) ಕರ್ಣಾಟಕ ಕಾದಂಬರಿ

೪ ಗತಿಗೆ ನಿಮಿತ್ತಂ ಪಡೆವರ್ ಸುತರಂ ಗಡ

—(ಅನಂತನಾಥ ಪುರಾಣ ತ್ರ ೮)

೫ ಇಹಪರಲೋಕ ಸಂಭವಸುಖಂ ಸಮನಿಪ್ಪುದು ಪುತ್ರನಪ್ಪುದುಂ

—(೩–೮೨ ಪುಷ್ಪದಂತ ಪುರಾಣ)

೬ ನಾ ಪುತ್ರಸ್ಯ ಗತಿಃ (ಆ.ಪ, ೪–೨೭) ಕರ್ಣಾಟ ಭಾರತಕಥಾ

೭ ಸುತನೇ ಸದ್ಗತಿದಾತನೈ —(೮) ಸೋಮೇಶ್ವರ

೮ ನಾಪುತ್ರಸ್ಯ ಲೋಕೋಸ್ತಿ

—(೧೭–೮೪) ತ್ರಿಷಷ್ಟಿಪುರಾತನ ಚರಿತ್ರೆ

೯ ನಾಪುತ್ರಸ್ಯ ಲೋಕೋಸ್ತಿ

—(೧–೪–೨) ತೊರವೆ ರಾಮಾಯಣ

೧೦ ಅಪುತ್ರಕಂಗಿಲ್ಲ ಗತಿ

—(೧–೪೭) ರಾಘವಾಂಕಚರಿತ್ರೆ

೧೧ ಗೃಹಸ್ಥಗೆ ಪುತ್ರರೇ ಮೋಕ್ಷಕ್ಕೆ ಸಾಧನ

—(ಸಂ ೧೬ ; ಪ ೧೮) ಶಂಕರದಾಸಿಮಯ್ಯ ಪು

೧೨ ಮಗನಂ ಪೆಱದಂಗೆ ಸಗ್ಗಿಗರ್ ಬಾಗಿಲಂ ತೆಱಿಯರ್

—(೧೨–ಪುಟ ೧೦೪ ; ೨೭ನೆಯ ಸಾಲು ಶ್ರೀರಾಮಾಶ್ವ ಮೇಧ)

೫೦೧ ಕಂಡ ಕಂಡ ದೇವರಿಗೆ ಕೈಮುಗಿದರೂ ಗಂಡನಿಲ್ಲದೆ ಮಕ್ಕಳಿಲ್ಲ

ಹೋಲಿಸಿ : ೧ ಪುರುಷನಿಲ್ಲದ ಬಳಿಕ ಸ್ತ್ರೀಗೆ ಗರ್ಭವಿನ್ನೆಲ್ಲಿಯದೊ ?

—(೧೩–೨೨) ಅಖಂಡೇಶ್ವರ ವಚನ

೨ ರಿತುಮತಿಗೆ ನಿವೇಶನ ಸಂ । ಗತಿಯಿಂ ಸುತರಾಗೆ ದೇವರಿತ್ತಾ ವರದಿಂ ॥

ಸುತರಾದರೆಂಬರಂತಾ । ಸುತರಂ ಬಂಜೆಯರ್ಗೆ ದೇವರೀಯುದರ ದೇನೋ —(ಸಮಯ ಪರೀಕ್ಷೆ)

೫೦೨ ಕುರುಡ ಏನು ಹಾರೈಸುತ್ತಾನೆ ಅಂದರೆ ಎರಡು ಕಣ್ಣು ಬರಲಿ ಅಂತ

೧ ಕಡುಗುರುಡಂ ಕಣ್ಣಂ ಬಯಸುವ ಪರಿ

—(ಸಂ ೨ : ೩೦ ಜಯನೃಪ ಕಾವ್ಯ

೫೦೩ ಬೇಡಿದೋರಿಗೆ ಮಕ್ಕಳಿಲ್ಲ, ಬೇಡದವರಿಗೆ ಮನೆತುಂಬ ಮಕ್ಕಳು

೧ ಮಕ್ಕಳರ್ಥಿ ಉಳ್ಳವಂಗೆ ಮಕ್ಕಳ ಕೊಡ ದೇವ ।

ಮಕ್ಕು ಬೇಡೆಂದು ತಿರಿದುಂಬ–ಬಡವರಿಗೆ ।

ಮಕ್ಕಳ ಕೊಡುಗ ಮನೆತುಂಬ —(ಜಾಗೀ, ಪು. ೩೫೨)

೫೦೪ ಮಕ್ಕಳಿಲ್ಲ ಅಂತ ಮೈಲಾರಕ್ಕೆ ಹೋದರೆ ಇದ್ದ ಮೈಯೆಲ್ಲ ಇಳಿದು ಹೋಯಿತು (ಇದ್ದ ತೂತು ಮುಚ್ಚಿಹೋಯಿತು)

೧ ಪುತ್ರಾರ್ಥಂ ಯಾಚಿತಾ ನಾರೀ ಮೈಲಾರಮಭಿಗಚ್ಛತಿ ।

ತತ್ರ ದೇವ ಪ್ರಸಾದೇನ ಪೂರ್ವದ್ವಾರಂ ವಿನಶ್ಯತಿ ॥ (ಸಂ)

೫೦೫ ಕುಂಬಳದ ಬಳ್ಳಿಗೆ ಕಾಯಿ ಭಾರವೇ ?

೧ ಬಳ್ಳಿಗೆ ಕಾಯಿ ದಿಮ್ಮಿತಲ್ಲ

—(ಅನುಬಂಧ ೪–೨೦) ಸಿಂಗಿರಾಜ ಪುರಾಣ

೨ ಕಿಱುವಳ್ಳಿಗೆ ತನ್ನ ಕಾಯ್ತು ಬಲ್ಗಾಯ್ ಪೊಱೆಯೇ

—(೪–೬) ಚಿಕದೇವರಾಜ ವಿಜಯಂ

೩ ಬಳ್ಳಿಗೆ ಕಾಯಿ ದಿಮ್ಮಿತ್ತೇ

—(ಬಸವೇಶ್ವರ ವ. ಹಳಕಟ್ಟಿ ೩೨೯)

೫೦೬ ಹಂಗಾಮು ಹೋದ ಮೇಲೆ ನಿಂಗವ್ವ ಬಸುರಾದ್ಹಂಗ

೧ ಹಂಗಾಮು ಹೋಗಲು ನಿಂಗವ್ವ ಬಸಿರೇನ
—(ಕನ್ನಡ ಜಾ. ಪು ೩೭೬)

೫೦೭ ಒಂದು ಹೆತ್ತ ಮೇಲೆ ಬಲ ಕಮ್ಮಿ....

೧ ಪ್ರಸೂತಾಂತಂಚ ಯೌವನಂ
(ಹೆಂಗಸಿನ ಯೌವನ ಹೆರಿಗೆಯವರೆಗೆ)

೫೦೮ ನಾಯಿ ಹೆಸರು ಸಂಪಿಗೆ

೧ ಎಮ್ಮೆಯ ಪೆಸರ್ ಮಹಾದೇವಿ
—(೮–೧೭೬) ಧರ್ಮಾಮೃತ

೨ ಓಡಿನ ಪೆಸರ್ ಮಂಗಳಂ —(೮–೧೭೬) ಧರ್ಮಾಮೃತ

೩ ತೊಟ್ಟಿನ ಪೆಸರ್ ಸಿರಿಯದೇವಿ
—(೮–೧೭೬) ಧರ್ಮಾಮೃತ

೪ ಪೊಲೆಯುರಾಡಿನ ಪೆಸರ್ ಮಾಣಿಕದೇವಿ
(೮–೧೭೬) ಧರ್ಮಾಮೃತ

೫ ಮಾಂತಿಯ ಪೆಸರ್ ಮೈಲಾರಂ
—(೮–೧೭೬) ಧರ್ಮಾಮೃತ

೫೦೯ ಹೆಸರು ಹಾಲಯ್ಯ ಕುಡಿಯೋದು ಅಂಬಲಿ

೧ ಹೆಸರು ಹಾಲಯ್ಯ ನೆರೆದುಣ್ಬುದಂಬಿಲವೆಂದುವುಸಿರುವರ
ಗಾದೆಯಂತಲ್ಲ —(ಭಿಕ್ಷಾಟನ ಚರಿತ) ಕವಿಚರಿತ್ರೆ

೫೧೦ ಪಕ್ಷಿಗೆ ಆಕಾಶವೇ ಬಲ, ಮತ್ಸ್ಯಕ್ಕೆ ನೀರೆ ಬಲ, ಮಗುವಿಗೆ ಅಳೋದೇ ಬಲ

೧ ಪಕ್ಷೀಣಾಂ ಬಲಮಾಕಾಶಂ ಮತ್ಸ್ಯಾನಾಮುದಕಂ ಬಲಂ
ದುರ್ಬಲಸ್ಯ ಬಲಂ ರಾಜಾ ಬಾಲಾನಾಂ ರೋದನಂ ಬಲಂ (ಸಂ)

೫೧೧ ಮಕ್ಕಳ ಬಾಯಿಗೆ ಹಣ್ಣು ಕೊಟ್ಟು ಮಣ್ಣು ಬಿಡಿಸಬೇಕು

೧ ಮಣ್ಣು ತಿಂಬಾ ಸಣ್ಣವನಿಗೆಯು ಹಣ್ಣು ಕೊಟ್ಟು ಮಣ್ಣ ಬಿಡಿಸಿದೊಲ್—(೩-೪೧) ಜ್ಞಾನಸಿಂಧು

೫೧೨ ತಾನಿಕ್ಕಿದ ತತ್ತಿಯನ್ನು ಹಾವು ತಾನೇ ತಿನ್ನುತ್ತಂತೆ

೧ ತನ್ನಿಕ್ಕಿದ ತತ್ತಿಯನೆ ಪಾವು ನೊಣೆದಂತೆ
—(೧೦-೧೩) ವಿಕ್ರಮಾರ್ಜುನ, ಪಂಪ

೨ ಕ್ರೂರ ಕರಾಳ ಕಾಳಾಹಿ ತನ್ನ ತತ್ತಿಯಂ ತಾನೆ ತಿನಲಿರ್ಪಂತೆ
—(೭-೭೬ವ) ನೇಮಿನಾಥ ಪುರಾಣ

೫೧೩ ತಾಯಿ ಮಾರಿಯಾದರೆ ತರಳನೆಲ್ಲಿ ಹೋದಾನು ?

೧ ತಾಯೆ ರಕ್ಕಸಿಯಾದಳ್
—(ಪ್ರ. ೧೭೨ ಮೊದಲವಚನ) ನೇಮಿನಾಥಪುರಾಣ

೨ ಜನನಿ ರಕ್ಕಸಿಯಾದೊಡಕ್ಕಟ ತನಯನೇಪರಿಯಿಂದ ಬಾಳ್ವಂ
—(೨೪-೨೩) ಬಸವಪುರಾಣ

೩ ಮಾತೆ ರಕ್ಕಸಿಯಾದ ಬಳಿಕ ಮಕ್ಕಳು ಬದುಕಲೇತೆಜಿನದುಂಟು
—(೪-೪೩) ಸಿಂಗಿರಾಜಪುರಾಣ

೪ ಹಡೆದ ತಾಯೇ ರಕ್ಕಸಿಯಾದಂದ (೧೯-೧೦೫) ?

೫ ಮಾತೆ ವಿಷಮಂ ತೆತ್ತರ್ಭಕಂಗೂಡಿಸಲ್
—(ಸೋಮೇಶ್ವರ ಶತಕ)

೫೧೪ ತಂದೆಯಂಥ ಮಗ, ಬೀಜದಂತೆ ವೃಕ್ಷ

೧ ತಂದೆಯಾಚಾರ ಮಕ್ಕಳದಲ್ಲವೆ ?
—(೧೦-೮೫) ಗುರುರಾಜ ಚಾರಿತ್ರ

೨ ಪಿತನಂತೆ ಸುತ —(೬-೩೧) ಚಿಕದೇವರಾಜವಿಜಯಂ

೨ ಯಥಾ ಬೀಜ ಸ್ತಥಾ ವೃಕ್ಷಃ
—(೧೮೦) ಸ್ವತಂತ್ರ ಸಿದ್ಧಲಿಂಗೇಶ್ವರ ಕಾವ್ಯ

೫೧೫ ತಂದೆಯಂಥ ಮಗ, ರಾಜನಂತೆ ಪ್ರಜೆ

೧ ಯಥಾರಾಜಾ ತಥಾಪ್ರಜಾ (ಸಂ)

೫೧೬ ತಂದೆಯ ಮೋರೆಯೇ ಕಂದಮ್ಮನ ಹಾಗೆ

೧ ತಂದೆಯ ಹೋಲು ಕಂದ
—(ಪ್ರ ೨೮೧–೩೬) ಸಾಳ್ವಭಾರತ

೫೧೭ ಹುಲಿಯ ಹೊಟ್ಟೆಯಲ್ಲಿ ನರಿ ಹುಟ್ಟೀತೆ

೧ ಜಂಬುಕಂ ಜನಿಸುವುದೆ ಸಿಂಗದುದರದೊಳ್
—(೧೭–೫೪) ಕನ್ನಡ ಜೈಮಿನಿಭಾರತ

೫೧೮ ಬಿತ್ತಿಲ್ಲದುದು ಫಲದೋರ್ಕೆ ಬಿತ್ತಂಬ ನಾಣ್ಣುಡಿಯಂತೆ
—(೬–೧೨೮) ಧರ್ಮಾಮೃತ

೫೧೯ ಅಡಿಕೆ ಉಡಿಯಲ್ಲಿ ಸಿಕ್ಕಿಸಬಹುದು, ಮರವಾದ ಮೇಲೆ ಆದೀತೆ ?

೧ ಬೀಜವ ಮಡಿಲೊಳಿಕ್ಕಲು ಬಹುದಲ್ಲದೆ ಭೂಜವ ನಿಕ್ಕಲು
ಬಹುದೆ ? —(೪–೨೬) ಪದ್ಮಾವತೀಚರಿತ್ರೆ

೫೨೦ ಎಳೆತನದಲ್ಲಿ ಕಲಿಯದಿದ್ದುದು ಎಪ್ಪತ್ತರಲ್ಲಿ ಬಂದೀತೆ ?

ಹೋಲಿಸಿ : ೧ ಹರೆಯದ ಮೇಲೆ ಬಪ್ಪುದೇ ಸದ್ವಿವೇಕಂ ?
—(ಪದ್ಮರಾಜ ಪುರಾಣ)

೫೨೧ ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ?

೧ ಎಳೆಯ ಮರಂ ಬಗ್ಗುಗುಮಾ ಬಳೆದ ಮರಂ ಸಾಧ್ಯ ಮಕ್ಕುಮೆ
ಬಗ್ಗಿಸೆ ಪೇಳ್ —(೩೮, ಕನ್ನಡನೀತಿಸಾರ

೫೨೨ ಬರ್‍ತಾ ಬರ್‍ತಾ ರಾಯರ ಕುದುರೆ ಕತ್ತೆಯಾಯಿತು

೧ ದೇವ ನಿಂ ಕೊಟ್ಟ ಕನ್ನೆ ಬೆಳೆವೆಳೆಯ ಗಾದೆಯಾಯ್ತು
—(೫-೪೨) ಧರ್ಮಾಮೃತ

೨ ವಾರುವನ ಮರಿ ಗರ್ದಭಾಕಾರ ಮಾದೊಡಾದಪುದು
—(ಸಂ ೩೧-ಪ ೨೧) ಚೆನ್ನಬಸವ ಪುರಾಣ

೫.೨೩ ಬೆಳೆಯ ಸಿರಿ ಮೊಳೆಯಲ್ಲಿ

೧ ಬೆಳೆಯ ಸಿರಿ ಮೊಳೆಯಲಿ ಕಾಣಬಹುದು
—(೬-೫೮) ನಾಗಕುಮಾರ ಚರಿತಂ

೫.೨೪ ಮುಂದಿನ ಗುಟ್ಟು ಮೊಳೆಯಲ್ಲಿ ಕಾಣಿಸಿತು

೧ ಎಂತಹುದೆ ಬೀಜಂ, ಧಾಪಿ ಅಂತಹುದೆ ಮೊಳೆ
—(೧೪-೧೩೧) ಸಮಯ ಪರೀಕ್ಷೆ

೨ ಯಥಾ ಬೀಜಂ ತಥಾಂಕುರಂ
—(೧-೫೧) ಶಾಂತೀಶ್ವರ ಪುರಾಣ

೩ ಯಥಾ ಬೀಜಂ ತಥಾಂಕುರಂ
—(ಸಂ ೫೨-ಪ೧೨) ಚೆನ್ನಬಸವ ಪುರಾಣ

೪ ಬೀಜದಂತಂಕುರವಹುದು
(೨೬-೫೪) ಭರತೇಶ ವೈಭವ

೫ ಎಂತು ಬೀಜಮದಂತೆ ಮೊಳೆ
—(೧೬-೩೮) ಶಂಕರ ಮಾಹಾತ್ಮ್ಯ ಪುರಾಣ

೫.೨೫ ಶೈಶವದ ಚಾಳಿ ಸ್ಮಶಾನದವರೆಗೆ

ಹೋಲಿಸಿ : ೧ ಎಳವೆಯೊಳೆಳೆಪೆಗೊಂಡ ಸುಗುಣ ದುರ್ಗುಣಂಗಳ
ಕಳೆವುದರಿದು ಕಡೆ ಕಡೆಗೆ
—(೬-೧೮) ಹದಿಬದೆಯ ಧರ್ಮ

೫.೨೬ ತಾಯಿಸತ್ತ ಸೋದರಳಿಯ ಬೇಡ

ಹೋಲಿಸಿ : ೧ ತಾಯಿಯದ ಸೋದರ ಮಾವಾಗ್ರದ ಪ್ರೇಮದಾಯಕ
—(ಸಂ. ೬) ಭರತೇಶ ವೈಭವ

೨ ತಾಯಿ ಸೋದರರರೊಪ್ಪೆ ತಾಯಿಂದ ವೆಗ್ಗಳರಲ್ತೆ
(ನಾಗರಸಲ್ಲಾಪ ಸಂಧಿ–೯೮) ಭರತೇಶ ವೈಭವ

೫೨೭ ಹಿರಿಯಣ್ಣನ ಸಾಲು ಮನೆಗೆಲ್ಲ

೧ ಹಿರಿಯಣ್ಣ ನಡೆದ ಓಜೆ ಮನೆಗೆಲ್ಲ
—(೬೪–೧೫೪) ಭರತೇಶ ವೈಭವ

೫೨೮ ಪಕ್ಷಿಗೆ ಗೂಡು, ಮಕ್ಕಳಿಗೆ ತಾಯಿ

೧ ಮಕ್ಕಳಿಗೆ ತಾಯಾಸೆ ಪಕ್ಷಿಗೆ ಗೂಡಾಸೆ
ಮಕ್ಕೀಯ ಬೆಳೆಗೆ ಮಳೆಯಾಸೆ ।
—(ಹಳ್ಳಿಹಾ, ಪು. ೧೩೭)

೫೨೯ ಸತ್ತು ಹುಟ್ಟಿ ತಾಯಿ ಸಾವು ತಂತಂ

ಹೋಲಿಸಿ : ೧ ತಾವುದಿಸಿ ತಾಯಿಲ್ಲ
—(೬೧) ಶ್ರೀವಾದಿರಾಜರ ಕೃತಿ

೫೩೦ ಒಂದು ಕಣ್ಣು ಕಣ್ಣಲ್ಲ, ಒಬ್ಬ ಮಗ ಮಗನಲ್ಲ

೧ ಅನಪತ್ಯತೈಕ ಪುತ್ರತ್ವಮಿತ್ಯಾಹುರ್ಧರ್ಮವಾದಿನಃ
ಒಬ್ಬ ಮಗನಿರುವುದೆಂಬುದು ಮಕ್ಕಳಿಲ್ಲದಂತೆಯೇ ಎಂದು
ಧರ್ಮಶಾಸ್ತ್ರಜ್ಞರು ಹೇಳುತ್ತಾರೆ —ಸಂ.ಭಾರ

ಹೋಲಿಸಿ :
೨ ಬಗೆಯಲ್ಕೊಂದಪ ಕಣ್ಣುಮೊಂದೆನಿಪ ಕೈಯೊಂದಾದ ಕಾಲುಂಜಗ
ತ್ತಿಗೆ ಲೋಭಾವಹವಪ್ಪುದೇ ಕುಲಕೆ ಪುತ್ರಾನೀಕಮೋ ಭೂಷಣಂ
—ಕೀ.ಕಂ.ಭ (ಭಾ.ಕೆ. ಕಥೆಗಳು)

೫೩೧ ಕುಲಕ್ಕೆ ಮೃತ್ಯು ಕೊಡಲಿ ಕಾವು

೧ ಕುಲಿಶದ ಕಾವು ಕುಲಕ್ಕೆ ಮಿತ್ತಾದಂತೆ
—(ಘಟ್ಟಿವಾಳಯ್ಯ, ವಚನ)

೨ ಕೊಡಲಿಯ ಕಾವು ಕುಲಕ್ಕೆ ಮೃತ್ಯು
—(೪೫) ಮೋಳಿಗೆ ಮಾರಯ್ಯನ ವಚನ

೩ ಕುಲದ ಬೇರ್ಗಕಟ ಕುಡಿಗೋಲ್ವಿಡಿದೆಯಾ
—(೨-೯೧) ಸೋಮನಾಥ ಚರಿತೆ

೪ ಕುಲದ ಬೇರಿಗೆ ನೀನೆ ಗುದ್ದಲಿ ಗೊಳಲದೇಕೆ ?
—(ಸಂ ೩-೫೮) ಬಸವಪುರಾಣ

೫ ಮುನಿದು ಕೊಡಲಿಯು ಕಾವು ವಂಶದ ವನವ ಕಡಿವಂತಾಯ್ತು
—(೨-೮೨) ಮೈರಾವಣನ ಕಾಳಗ

೬ ಕುಲಕೆ ಕೇಡಾಯಿತು ಕೊಡಲಿಯು ಕಾವು
—(೨೫-೩೨) ಸಾಳ್ವಭಾರತ

೭ ಕ್ಷುದ್ರಫಲಂಗಳ ಕೂರೆನು । ಕೂರ್ತು ಕುಲಕೆ ಕೊಡಲಿಯಾಗ
ಲಾಜಿನು —(೧೧-೨-೩) ಶ್ರೀ ಗೀತಗೋಪಾಲ

೮ ಕುಲಕೆ...ಕೊಡಲಿಗಾವು
—(೨೨-೩೪) ಕೌಶಿಕ ರಾಮಾಯಣ

೯ ಮರವೊಂದು ಕೊಂಬೆಯುಂ ಕುಡೆ । ತರಿಯುದೆ ಪೇಳ್ಕೊಡಲಿ
ಯುದರ ಬಲದಿಂ ವನಮುಂ ?
—(೭೫) ಕನ್ನಡ ನೀತಿಸಾರ

೧೦ ಕೊಡಲಿಯು ಕಾವೆ ಕುಲಕ್ಕೆ ಕೇಡು
—(೧೩-ಪು ೧೧೨ ; ೨೬ನೆಯ ಸಾಲು)

ಹೋಲಿಸಿ : ಕೀಲೊಳೆ ಕಿಚ್ಚು ಪುಟ್ಟಿ ಭೋರ್ಗರೆದುರಿದಂತೆ
—(೭-೧೬) ವಿಕ್ರಮಾರ್ಜುನ ವಿಜಯ

೫೩೨ ನಮ್ಮ ಮಕ್ಕಳೇ ನಮಗಾಗಲ್ಲ, ಅನ್ಯರ ಮಕ್ಕಳು ಆದಾರೆ ?

೧ ತನ್ನುದರ ಸಂಭವರ್ತಮಗಾಗರೆಂಬೆಡೆಯಲನ್ನಿಗರು ಪೊರೆದಪರೆ ?
—(ಅಯೋ.ಕಾಂ. ೫-೩) ಶ್ರೀಮದ್ರಾಮಾಯಣ

೫೩೩ ಮಕ್ಕಳಿದ್ದರೆ ಒಂದು ಕಷ್ಟ, ಇಲ್ಲದಿದ್ದರೆ ನಾನಾ ಕಷ್ಟ

೧ ಪುತ್ರರಿಲ್ಲದಿದ್ದರೊಂದು ಕಷ್ಟ, ಪುತ್ರರಿದ್ದರೆ ಒಂಬತ್ತು ಕಷ್ಟ

೫೩೪ ಜೇಳಿಂಗೆ ಬಸರಾಯಿತ್ತೇ ಕಡೆ, ಬಾಳೆಗೆ ಫಲವಾಯಿತ್ತೇ ಕಡೆ

—(ಬಸವೇಶ್ವರ ವಚನ–ಹಳಕಟ್ಟಿ)

೫೩೫ ಲಕ್ಷಣಗೇಡಿ ಹೆತ್ತಳು ಲೆಕ್ಕವಿಲ್ಲದಷ್ಟು ಮಕ್ಕಳ ?

೧ ಲೆಕ್ಕಕ್ಕೆ ಹೆತ್ತ ಲಕ್ಷಣಗೇಡಿ —(ಸಂ ೧೮–೧೮) ಭರತೇಶ ವೈಭವ

೫೩೬ ಸಗಣಿ ಹೊಟ್ಟೆಯಲ್ಲಿ ಸಾವಿರ ಹುಟ್ಟಿ ಮಧ್ಯಾಹ್ನಕ್ಕೇ ಮರಣ

೧ ಸಗಣಿಯೊಳು ತಾವ್ ನೇತು ಸಾಪಿರ ಹುಳುಗಳು

—(೧೬-೯) ಮಹಾಭಾರತಂ

೫೩೭ ಹತ್ತು ಹಡೆಯೋದಕ್ಕಿಂತ ಮುತ್ತೊಂದ ಹಡೆಯೋದು ಲೇಸು

೧ ಹತ್ತು ಹಡಿಯುವುದಕಿಂತ ಮುತ್ತೊಂದ ಹಡದೀನಿ

—(ಜಾಗೀ, ಪು ೧೩೩)

೫೩೮ ಹಾವು ಹಡೆದಮ್ಮ ಬೇಲಿ ಹೊಕ್ಕಳು

೧ ಪಾವಂ ಪೆತ್ತವರ್ಬೇಲಿಯುಂ ಪೊಕ್ಕರ್

—(೬–೨೧೭) ಧರ್ಮಾಮೃತ

೨ ಪಾವಂ ಪೆತ್ತವರ್ಬೇಲಿಯುಂ ಪುಗುವಂತೆ

—(ಅನಂತನಾಥ ಪುರಾಣ)

೫೩೯ ಹಿರಿಯುವನು ಶಕ್ತಿವಂತ, ಕಿರಿಯುವನು ಬುದ್ಧಿವಂತ

೧ ಹಿರಿಯ ಮಕ್ಕಳು ಪುಷ್ಟಕಾಯರು, ಕಿರಿಯವರು ಮೇಧಾವಿ
ಗಳೆನುತ್ತಿರುವ ನಾಳ್ನುಡಿ ಸತ್ಯಮಾದುದು

—(ಅರ.ಕಾಂ. ಸಂ ३) ರಾಮಾಯಣ ಸಂಗ್ರಹ

೫೪೦ ದತ್ತ ಪುತ್ರನಿಗೆ ಉಂಟೆ ಪಿತೃಭಕ್ತಿ ?

೧ ದತ್ತಪುತ್ರನಿಗೇತಕ್ಕೆ ಪಿತೃಭಕ್ತಿ ?

—(೧–೪೧) ಅನುಭವಾಮೃತ

೨ ದತ್ತನಾಗಿಹ ಪುತ್ರಗೇತಕೆ ಅತ್ಯಧಿಕ ಪಿತೃಭಕ್ತಿ

—(೧-೪೦) ಜ್ಞಾನಸಿಂಧು

೫೪೧ ಒಂದೇ ಆವಿಗೇಲಿ ಚೆಂದ ಮಡಕೆಗಳಾದರೂ ಒಂದರ ಹಾಗೆ ಒಂದು ಇರುವುದಿಲ್ಲ

೧ ಜನನ ಸ್ಥಾನಮದೊಂದಾದನಿತಜರ್೦ಳೆ ಸಮಾನ ಶೀಲ ಮುಕ್ಕುಮೆ ಜನಕೇಂ —(೪-೧೬) ಪಾರ್ಶ್ವನಾಥ ಪುರಾಣ

೫೪೨ ಪೆಟ್ಟಿಲ್ಲ ಅವನಿಗೆ, ನೋವು ನನಗೆ

೧ ಪೆಟ್ಟೊಂದೆಡೆಗೆ, ನೋವೊಂದೆಡೆಗೆ —(೧೪-ಪು ೪೬) ಅದ್ಭುತ ರಾಮಾಯಣ

೫೪೩ ಉಪ್ಪಿಗಿಂತ ರುಚಿ ಇಲ್ಲ, ತಾಯಿಗಿಂತ ಬಂಧುವಿಲ್ಲ

೧ ನಹಿ ಮಾತೃ ಸಮೋ ಬಂಧುಃ (ಸು)

೫೪೪ ಐಶ್ವರ್ಯ ಹೆಂಡತಿ, ಮಕ್ಕಳು, ಹೋದರೆ ಪಡೆಯಬಹುದು,
ತಾಯಿ ಹೋದರೆ ಪಡೆಯೋಕಾದೀತೆ ?

೧ ಉಂಗೂರ ಉಡದಾರ ಮುರಿದರ ಮಾಡಿಸಬಹುದು
ಮಡದಿ ಸತ್ತರೆ ತರಬಹುದು । ಹಡೆದಂಥ।
ತಂದೆ ತಾಯೆಲ್ಲಿ ಸಿಕ್ಕಾರ ॥ (ಹ.ಹಾ)

೫೪೫ ತಾಯಿಗಿಂತ ದೇವರಿಲ್ಲ, ಗಾಯಿತ್ರಿಗಿಂತ ಮಂತ್ರವಿಲ್ಲ

೧ ಮಾತೃತೋಽನ್ಯೋ ನ ದೇವೋಽಸ್ತಿ —(ವಿಷ್ಣು ಪುರಾಣ)

೨ ಮಾತೃದೇವೋ ಭವ, ನ ಗಾಯತ್ರ್ಯಾಃ ಪರೋಮಂತ್ರೋ
ನ ಮಾತುಃ ಪರದೇವತಾ ।
ಓಂ ಭೂರ್ಭುವಃ ಸ್ವಃ। ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ
ಧೀಮಹಿ ಧಿಯೋ ಯೋನಃ ಪ್ರಚೋದಯಾತ್ ॥
—(ಯಜು-೩೬-೩)

೫೪೬ ತಾಯೇ ಗುರು, ತಾಯೇ ದೇವ್ರು ; ತಾಯಿಗಿಂತ ಬೇರೆ ಇನ್ನಾರವ್ರು ?

೧ ತ್ರಯಃ ಪುರುಷಸ್ಯಾತಿ ಗುರುವೋ ಭವಂತಿ ಮಾತಾ, ಪಿತಾ,
ಆಚಾರ್ಯಶ್ಚ (ವಿಷ್ಣುಸ್ಮೃತಿ)

೨ ನಾಸ್ತಿ ವೇದಾತ್ಪರಂ ಶಾಸ್ತ್ರಂ । ನಾಸ್ತಿ ಮಾತೃ ಸಮೋ ಗುರುಃ
—(ಮಹಾಭಾರತ)

೫೪೭ ಅರಗಿನಂಥ ತಾಯಿ, ಮರದಂಥ ಮಕ್ಕಳು

೧ ಅರಗಿನಂಥ ತಾಯಿ, ಮರದಂಥ ಮಕ್ಕಳು
ಕರಗಿದರ ಬೆಣ್ಣೆ ತಿಳಿದುಪ್ಪ । ದಂಥಃ
ಕರಗಂಥ ತಾಯಿ ಇರಬೇಕ ॥ —(ಗಹಾ, ಪು. ೫೧)

೫೪೮ ಕಣ್ಣರಿಯದುದು ಅಂದರೆ ಕರುಳರಿಯದೆ ?

೧ ಕಣ್ಣಱಿಯ ದಿದ್ದಡೆಯು ಕರುಳಱಿಯ ಬೇಡವೆ ?
—(೩೦೩) ಚನ್ನಬಸವಣ್ಣನವರ ವಚನಗಳು

೨ ಕಣ್ಣಱಿಯ ದಿರ್ದಡಂ ಕರುಳಱಿಯದೇ ಎಂಬ ಗಾದೆಯಂತೆ
—(ಪ್ರ ೧೦೬ : ೩೧) ಸೋಮನಾಥ ಚರಿತ್ರೆ

೩ ಕಣ್ಣಱಿಯದಿರ್ದೊಡಂ ಕರುಳಿಱಿಯವೇ ?
—(೨–೨೫) ಸಿದ್ಧರಾಮ ಚಾರಿತ್ರ

೪ ಕಣ್ಣಱಿಯದೊಡಂ ಕರುಳಱಿಯದೆ ?
—(೩–೪೪) ಯಶೋಧರ ಕಾವ್ಯಂ

೫ ಮನದ ಮಱುಕದಲಿ ಕರುಳು ಮಱುಗದೆ ಬಿಡುವುದೇ
— (೪-೪-೬೩) ತೊರವೆ ರಾಮಾಯಣ

೬ ಕಣ್ಣಱಿಯದೊಡೆ ಕರುಳಱಿಯದೆ ?
—(೨೨-೧೦) (೪-೫೦) ಸಾಳ್ವಭಾರತ

೭ ಕಣ್ಣಱಿಯದೊಡೇನ ಕರುಳ್ಬಲ್ಲುದೆಂಬಂತೆ
—? (ಮೋಹನ ತರಂಗಿಣಿ)

೮ ಕಣ್ಕಾಣದುದಂ ಕರುಳ್ಕಂಡಿತು (?)

೫೪೯ ಅತ್ತೆ ಸಾಯ್ಲಾಗಿ ಒತ್ತ್ಯಾಳೆ ಕಡಗ ನಂಗಾದೊ

೧ ಅತ್ತೇ ಸತ್ತಾರೆ ಸೊಸೆ ಏನಂತ ಅತ್ತಾಳೊ
ಹಿತ್ತೀಲ ಗಳವ ಹಿಡುಕೊಂಡು–ಸೊಸೆಮುದ್ದೆ
ಅವ್ವ ಹಿತ್ತಾಳೆ ಕಡ ನಮಗಾದೋ
—(ಸಂಪೀಗೆ ಅರಳೀವೆ, ಪು. ೩೩)

೫೫೦ ಅತ್ತೆಗೆ ಸೊಸೆ ಮೂಲ, ಹಿತ್ತಲಕೆ ಕರುಮೂಲ

೧ ಅತ್ತೆಗೆ ಸೊಸೆ ಮೂಲ ಹಿತ್ತಲಕೆ ಕರು ಮೂಲ
ಹೆತ್ತವ್ಗೆ ಮೂಲ ಹಿರಿಮಗ —(ಹಹಾ, ಪು ೧೩೫)

೫೫೧ ಆಕಳಂಥ ಅತ್ತೆ ಬೇಕು, ಗೋಕುಲದಂಥ ಮಾವ ಬೇಕು

೧ ಆಕಳಂಥಾ ಅತ್ತಿ ಗೋಕುಲಂಥಾ ಮಾವ
ಶ್ರೀಕೃಷ್ಣನಂಥ ಪತಿರಾಯ–ನಿದ್ದರ
ಸಾಕೀದ ತವರ ಮರತೇನ —(ಗಹಾ, ಪು. ೭೧)

೫೫೨ ತಾಯಿ ಕೊಟ್ಟರೆ ತವುಡೇ ಪಥ್ಯ, ಅತ್ತೆ ಕೊಟ್ಟರೆ ತವುಡು

೧ ತಾಯಿಯಿಕ್ಕಿದ ನಿರುತ ತವುಡೇ ಪಥ್ಯ
—(೧೨-೧೮, ಕರ್ಣಪರ್ವ) ಕರ್ಣಾಟ ಭಾರತ ಕಥಾಮಂಜರಿ

೫೫೩ ನಡುನೀರಿನ ಇಂಪು ದಡಕ್ಕಿಲ್ಲ

೧ ಗಂಗಿಯಷ್ಟು ಮಾಯ ಗೌರಿಗಿಲ್ಲೇಳು ಸಿವನೆ
ನಡುನೀರ ತಂಪು ಧಡಕಿಲ್ಲ । ಮರ್ತ್ಯದಾಗ
ಮಗಳಷ್ಟು ಮಾಯೆ ಸೊಸೆಗಿಲ್ಲ ॥
—(ಗಹಾ, ಪು. ೧೦೧)

೫೫೪ ಮಾತುಗಾತಿ ಮಗಳಲ್ಲ, ತಾಟಗಿತ್ತಿ ಸೊಸೆಯಲ್ಲ

೧ ಮಾತುಗಂಟಿ ಮಗಳಲ್ಲ ತಾಟಗಿತ್ತಿ ಸೊಸೆಯಲ್ಲ
ತೂಪುರದ ಚೆಕ್ಕೆ ಒಲೆಗಲ್ಲಾ । ತೌರೀಗೆ
ಮಾತು ತಂದವಳು ಮಗಳಲ್ಲ —(ಆಯ್ದುಮು. ಪು. ೧೬)

೫೫೫ ಸೊಸೆ ಬಂದು ಮಗನ್ನ ಕಸ್ಕೊಂಡ್ರೆ ಕಿಸಿಗೊಳ್ಳೆ ಬಾಯಿ ಗಗನಕ್ಕೆ !

೧ ಸೊಸೆಯು ಬರುತಾಳಂತ ಖುಸಿ ಭಾಳ ಮನದಾಗ ।
ಸೊಸಿ ಬಂದು ಮಗನ ಕಸಗೊಂಡು ಬಾಳ್ವಾಗ ।
ಮುಗಿಲೀಗೆ ಬಾಯಿ ತಗ (ಕಿಸಿ)ದಾಳ ॥
—(ಗಹಾ, ಪು. ೧೦೩)

೫೫೬ ಹೆತ್ತ ತಾಯನ್ನೇ ಬಯ್ಯೋಳು ಅತ್ತೇನ್ಬಿಡ್ತಾಳೇ ?

ಹೋಲಿಸಿ : ತುನ್ನಿಯಾರ್ ಕುಱ್ರಮುಮ್ತೂಱ್ರುಮರಬಿನಾ
ರೆನ್ನೈಗೊಲೋ ದಿಲಾರ್ ಮಾಟ್ಟು —ತಿರುಕ್ಕುಱಳ್
ಕೂಡಿದ ಕುಂದುಮಂ ತೂಱಿಡುವ ಗುಣದವರ
ದೇನನೋ ಪೆಱವರೆಡೆಯೊಳ್
(ತಮ್ಮವರನ್ನೇ ದೂರುವವರು ಬೇರೆಯವರನ್ನು
ಬಿಡುವರೆ ?) —(ಅನುವಾದ ಎಲ್. ಗುಂಡಪ್ಪ)

೫೫೭ ಅತ್ತಿಗೆ ತವರಲ್ಲ, ಒತ್ತಾಳಿ ಒಡವೆಯಲ್ಲ

೧ ಅತ್ತಿಗೆ ತಾಯಲ್ಲ, ಒತ್ತಾಳಿ ಚಿನ್ನವಲ್ಲ
—(ಜಾಗೀ, ಪು. ೫೫)

೨ ಅತ್ತಿಗೆ ನೆಂಟಲ್ಲ, ಕೊಂಬಿತ್ತಾಳಿ ಕಪ್ಪಲ್ಲಾ
(ಆಯ್ದಮು. ಪು. ೧೦)

೫೫೮ ಅಜ್ಜಕ್ಕಿ ಅಳಿಯನಿಗೆ, ನುಚ್ಚಕ್ಕಿ ಮಗಳಿಗೆ. ಸಾಲಗಾರನ ಏಟು ಮಗನಿಗೆ

೧ ಅಟ್ಟಡಿಗೆ ಅಳಿಯನಿಗೆ ಬಿಟ್ಟ ನೀರು ಮಾವನಿಗೆ
ಪೆಟ್ಟಿಗೆ ಬಂಗಾರ ಮಗಳಿಗೆ–ಮುಂದೆ ಬರುವ
ಪತ್ರದ ಸಾಲ ಮಗನಿಗೆ

೨ ಅಟ್ಟಡಿಗೆ ಅಳಿಯನಿಗೆ ಚಿಟ್ಟಿತುಪ್ಪ ಮಗಳಿಗೆ
ಸಾಲಾದ ಪತ್ರ ಮಗನಿಗೆ–ತಾಯವ್ವ
ಸಾಲ್ಯಾದ ಸೀರೆ ಮಗಳೀಗೆ —(ಜಾಗೀ, ಪು ೪೬)

೩ ಪಟ್ಟೆಬಣ್ಣ ಮಗಳ್ಗೆ ; ಪೆಟ್ಗೆಲಿರೊ ಸಾಲ್ದ ಪತ್ರ ಮಗನಿಗೆ

೫೫೯ ಜಾಮಾತಾ ದಶಮಗ್ರಹಃ

೧ ಸದಾವಕ್ರಸ್ಸದಾ ರುಷ್ಟಃ ಸದಾ ಪೂಜಾ ಮವೇಕ್ಷತೇ ।
ಕನ್ಯಾರಾಶಿಸ್ಥಿತೋನಿತ್ಯಂ ಜಾಮಾತಾ ದಶಮಗ್ರಹಃ ॥
ದಾರಿದ್ರ್ಯ ರಾಹುಣಾ ಗ್ರಸ್ತೋ ಜಾಮಾತಾ ದಶಮಗ್ರಹಃ ।
ಶ್ವಶ್ರು ಸರ್ವಸ್ವದಾನೇನ ತುಷ್ಟೋಭವತಿ ನಾನ್ಯಥಾ ॥ (ಸು)

೫೬೦ ಕೊಡುವ ತನಕ ಅತ್ತೆ ಉರಿದಳು, ಕೊಟ್ಟಮೇಲೆ ಅಳಿಯ ಉರಿದ

೧ ಕೊಟ್ಟಮೇಲುರಿವ–ನಳಿಯನೆಂಬೀ ಮಾತು
ಕಟ್ಟಿಇಟ್ಟಂತೆ ! ಸರ್ವಜ್ಞ (ಸರ್ವ, ೧೩೩೩)

೫೬೧ ಕಾಯಿ ಒಡೆದರೆ ಕಂಟ, ಮನೆಗೆ ಬಂದರೆ ನಂಟ

೧ ಕಾಯಿ ಒಡೆದರೆ ಕಂಟ । ಮನೆಗೆ ಬಂದರೆ ನಂಟ
ಕಂಡುಕರೆಯದ ನಂಟ ।
ಇದ್ದರೇನೋ–ಇಲ್ಲದಿದ್ದರೇನೋ
—(ಆಯ್ದ ಹ.ಹಾ. ಪು. ೨೨)

೫೬೨ ಹೊಕ್ಕು ಬಳಸಿದರೆ ನಂಟು....

೧ ಹೊಕ್ಕು ನಡೆಯದ ನೆಂಟತನದೊಳೇನು ?

೫೬೩ ಊರೆಲ್ಲ ನಂಟರು ಉಣ್ಣು ಅನ್ನುವರು ಮಾತ್ರ ಇಲ್ಲ

೧ ಊರೆಲ್ಲ ನಂಟರು ಉಣಬಡಿಸುವವರಿಲ್ಲ
—(ಹ.ಕೀ.ಕೀ. ೪೮೨)

೫೬೪ ಕಂಡು ಕರೆಯದ ನಂಟ, ಗಂಡುಗತ್ತೆ ಕಂಟ

೧ ಕಂಡು ಕರೆಯದ ನೆಂಟ ಬಡಕು ಹರಿವೆಯ ಕಂಟ
—(ಕದಾ, ಕೀ. ೧೪)

೫೬೫ ಕಾದನೀರು ಆದ ಅಡಿಗೆ ಬಿಟ್ಟು ಹೋಗೋವ್ನು ಹೆಡ್ಡ

ಹೋಲಿಸಿ : ೧ ಸಿದ್ಧಮನ್ನಂ ಫಲಂಪಕ್ವಂ ನಾರೀಂ ಪ್ರಥಮ ಯೌವನಾಂ।
ಸುಭಾಷಿತಂಚ ತಾಂಬೂಲಂ ಸದ್ಯೋಗೃಹ್ಣಾತಿ
ಬುದ್ಧಿಮಾನ್ ॥ —(ಸಂ)

೫೬೬ ಬಂದ ದಿನ ನಂಟ, ಮಾರುದಿನ ಬಂಟ, ಮೂರನೆಯದಿನ ಕ(ಶಂ)ಟ

೧ ಬಂದ ಮೊದಲು, ಇತ್ತ ಬನ್ನಿ ಕುಳ್ಳಿರೆಂದು ಬಲು
ಉಪಚರಿಸುವರು

ಅಂದಿನ ಮರುದಿನ ಬಂದ ಸ್ನೇಹಿತರನ್ನು ಕಂಡಂತೆ ಕಾಣುವರೊ
ಬಂದ ಮೂರರಲ್ಲಿ ಪರದೇಶಿಯು ಕಂಡಂತೆ ಸದ್ದೆ ಮಾಡದೆ
ಇಹರೊ —(೫-೮೮) ಪುದಾ

೫೬೭ ಹೋಗುವವನ ಕಾಲು ಹೊರಗೆ

೧ ಗಂಡು ಮಕ್ಕಳು ಒಳಗೆ ಹೆಣ್ಣು ಮಕ್ಕಳು ಹೊರಗೆ
ಹೋಗುವವರ ಕಾಲು ಹೊರಗವ್ವ । ಕೋ । ಹೋಗರೆಂದು
ಹರಸಿ ಅಪ್ಪಣೆ ಕೊಟ್ಟನವ್ವ । ಕೋಲೆನ್ನಕೋಲ ।
—ಕನ್ನಡ ಜಾ. (ಪು. ೩೩೩)

ಹೋಗುವವರದು ಕಾಲು ಹೊರಗ ಕೇಳಿರಿ ದೇವ
ಇದೊಂದು ಇರುಳು ಕಳೆಯಿರಿ । ಕೋ । ಪಗಡಿಯಾಡಿ
ಸೋತರ ಹೋಗಂದು ನುಡಿದಳು ।ಕೋ॥
—ಕನ್ನಡ ಜಾ. (ಅರ್ಜುನ ಜೋಗಿ ಹಾಡುಗಬ್ಬ, ಪು. ೩೫೦)

೫೬೮ ಹಾದೀಲಿ ಹೋಗವ್ನ 'ಅಪ್ಪಾ' ಅಂದರೆ 'ನೀನು ಯಾರಿಗೆ ಹುಟ್ಟಿದೆಯೋ ಮಗನೆ !' ಅಂದನಂತೆ

ಹೋಲಿಸಿ : ೧ ಓರ್ವರಿಗೆ ಹುಟ್ಟಿ ಮತ್ತೊರ್ವರಿಗೆ 'ಅಪ್ಪಾ!'
—(೩) ಘನ ಲಿಂಗಿದೇವರ ವಚನ

೫೬೯ ಕೆಟ್ಟಾಗ ನಂಟರ ಮನೆಗೆ ಹೋಗಬೇಡ, ಸ್ನೇಹಿತರ ಮನೆಗೆ ಹೋಗದೆ ಇರಬೇಡ

ಹೋಲಿಸಿ : ೧ ಕೆಟ್ಟು ನೆಂಟರ ಮನೆಯ ಸೇರುವುದು ಬಹು
ಕಠಿಣ —(ಹ.ಕೀ. ಕೀ. ೨೪೧)

೫೭೦ ಬಡತನ ಬಂದಾಗ ನಂಟರ ಮನೆ ಬಾಗಿಲಿಗೆ ಹೋಗಬಾರದು

೧ ಬಡತನ ಬಂದರೆ ನೆಂಟರ ಬಾಗಿಲ ಸೇರಬಾರದು

— (ಕ.ದಾ. ಕೀ. ೩೩)

೨ ಆರಿಗಾರೂ ಇಲ್ಲ ಕೆಟ್ಟನವಗೆ ಕೆಳೆಇಲ್ಲ, ಜಗದ ನೆಂಟ ನೀನೆ,
ಕೂಡಲಸಂಗಮದೇವ (ಬ.ವ.)

೫೭೧ ಅತಿಥಿ ಸತ್ಕಾರವೇ ಕ್ಷಿತಿಯಲ್ಲಿ ದೊಡ್ಡದು

"ಮಾತೃದೇವೋ ಭವ । ಪಿತೃದೇವೋ ಭವ । ಆಚಾರ್ಯದೇವೋ
ಭವ ! ಅತಿಥಿದೇವೋ ಭವ..."
(ಅತಿಥಿ ದೇವರಿಗೆ ಸಮಾನನೆಂದು ಪ್ರಾಚೀನ ಭಾರತೀಯರ ಮತ)

೫೭೨ ಕಪ್ಪುಕಸ್ತೂರಿ, ಕೆಂಪು ಕಿಸುವಾಯ್

೧ ಕಪ್ಪುನೇರಾಳೆ ಸಿಹಿಯುಂಟು । ಅಣ್ಣಯ್ಯ ಕಪ್ಪು ಕಸ್ತೂರಿ
ಕಳೆಯುಂಟು

೫೭೩ ಸ್ತ್ರೀಗೆ ರೂಪೇ ಶತ್ರು....

೧ ಮಾಂಸಂ ಮೃಗಾಣಾಂ ದಶನೌ ಗಜಾನಾಂ ಮೃಗದ್ವಿಪಾಂ ಚರ್ಮ
ಫಲಂ ದ್ರುಮಾಣಾಂ

ಸ್ತ್ರೀಣಾಂ ಸ್ವರೂಪಂಚ ನೃಣಾಂ ಹಿರಣ್ಯಮೇತೇ ಗುಣಾ
ನಾಶಕರಾ ಭವಂತಿ ॥(ಸು)

೫೭೪ ನೇರಿಲ ಹಣ್ಣು ಕಪ್ಪಾಗಿದ್ದರೂ ತಿಂದು ನೋಡಿದರೆ ಬಲು ರುಚಿ

೧ ಕಪ್ಪು ಹೆಂಡತಿಯಂತ ಕರಿಕರಿ ಮಾಡಬ್ಯಾಡ
ನೇರಿಲೆ ಹಣ್ಣು ಬಲು ಕಪ್ಪು । ಆದರೆ
ತಿಂದು ನೋಡಿದರೆ ರುಚಿ ಬಹಳ

—(ಹೊನ್ನಬಿ. ಪು ೬೦೦)

೫೭೫ ಬಿಲ್ಲು ಡೊಂಕಾದರೆ ಬಿಟ್ಟ ಬಾಣ ಡೊಂಕೆ ?

೧ ಬಿಲ್ಲು ಡೊಂಕು ಆದರೇನು । ಬಾಣ ಡೊಂಕೆ ವಿಠಲ

—(ಹ.ಕೀ.ತ, ಕೀ. ೩೪೦)

೨ ಬಿಲ್ಲ ಗಣೆಯಂದು ಡೊಂಕು ಬಿಟ್ಟಬಾಣವು ಡೊಂಕೆ
—(ದ.ರಾ. ಬೇಂದ್ರೆ)

೫೭೬ ಅತ್ತಿ ಹಣ್ಣು ಅಚ್ಚ ಕೆಂಪಾದರೂ ಒಳಗೆ (ಒಡೆದು) ನೋಡಿದರೆ (ಹುಳು) ಹುರುಳಿಲ್ಲ

೧ ಕೆಂಪು ಹೇಡತಿ ಅಂತ ಸಂತೋಷ ಪಡಬ್ಯಾಡ
ಅತ್ತಿಯ ಹಣ್ಣು ಬಲು ಕೆಂಪು । ಆದರೆ
ಒಡೆದು ನೋಡಿದರೆ ಹುಳು ಬಹಳ —(ಹೊನ್ನಬಿ. ೬೦೦)

೨ ಹೆಣ್ಣ ಪಿದುಸಿ ನೋಡಲತ್ತಿಯ ಹಣ್ಣು
—(ಸಂ. ೯, ಪ ೬೧) ಶಂಕರದಾಸಿಮಯ್ಯಪುರಾಣ

೫೭೭ ಆಕಾರವಿದ್ದಮೇಲೆ ಅಲಂಕಾರವೇಕೆ ?

೧ ಕಿಮಿವ ಹಿ ಮಧುರಾಣಾಂ ಮಂಡನಂ ನಾಕೃತೀನಾಂ (ಸಂ)

೫೭೮ ಬೋಳಿಗೇಕೆ ಜಾಜಿಮಲ್ಲಿಗೆ ದಂಡೆ ?

೧ ಕೋಳಿಗೆ ಯಾತಕ್ಕೆ ಹೊನ್ನ ಪಂಜರವು । ಬೋಳಿಗೆ ಯಾತಕ್ಕೆ
ಜಾಜಿಮಲ್ಲಿಗೆ ದಂಡೆ —ಹ.ಕೀ.ತ, (ಪು ೧೭೬)

೫೭೯ ಕಾಳಿಗೆ ಕಪ್ಪ್ಯಾಕೆ, ಬೋಳಿಗೆ ತುರುಬ್ಯಾಕೆ ?

೧ ಕಾಳಿಗ್ಯಾಕೆ ಕಣ್ಣಕಪ್ಪು ಬೋಳಿಗ್ಯಾಕೆ ಎಣ್ಣೆಗಂಟು
ಉಳ ಎತ್ತಿಗ್ಯಾಕೆ ಉರುಗೆಜ್ಜೆ–ಗಾಣಿಗನ
ಮೊಣ್ಣೆತ್ತಿಗ್ಯಾಕೆ ಮೊಖರಂಬೆ —ಜಾನಪ, (ಪು ೪೫)

೨ ಕಾಳಿಗೆ ಕಪ್ಪ್ಯಾಕ, ಬೋಳೀಗೆ ತುರುಬ್ಯಾಕ
ಒಡವ್ನ ಮಡದೀಗೆ ಬೆಡಗ್ಯಾಕೆ। —ಕಜಾ (ಪು ೬೩)

೫೮೦ ಹಂತವಿಲ್ಲದ ಬಾವಿ ಜಂತವಿಲ್ಲದ ಸೀರೆ

೧ ಅಂತವಿಲ್ಲದ ಬಾವಿ ಜಂತ ಇಲ್ಲವ ಸೀರೆ
ಸಂತೋಷಿಲ್ಲಾದ ಸತಿ ಪುರುಷಾನ । ಕೈಹಿಡಿದು
ಚಿಂತೆ ಮಾಡಿದರೆ ಫಲವಿಲ್ಲಾ । ಆದ್ದ ಮು. (ಪು ೯೦)

೫೮೧ ಗಾಣದೆತ್ತಿಗೆ ಗೆಜ್ಜೆಯಾಕೆ, ಗೋಣಿಗೆ ಗವಸಣಿಗೆ

೧ ಗಾಣದೆತ್ತಿಗೆ ಗೆಜ್ಜೆಯೇತಕೆ ಗೋಣಿಗೇತಕೆ ಗವಸಣಿಗೆ
—(೧-೪೦) ಅನುಭವಾಮೃತ

೫೮೨ ಉಂಬಳಿ ಇದ್ದವರು ಕಂಬಳಿ ಹೊದೀತಾರ್ಯೆ ?

೧ ಉಂಬಳಿಯು ಇದ್ದವರು । ಕಂಬಳಿಯು ಹೊದಿಯುವರೆ ?
—(ಸರ್ವ, ಪು. ೨೪)

೫೮೩ ಉಂಡು ನೂರು ಹೆಜ್ಜೆ ನಡಿ

೧ ಭುಕ್ತ್ವಾ ಶತಪದಂ ಗಚ್ಛೇತ್

೫೮೪ ಒಪ್ಪತ್ತುಂಡವ ಯೋಗಿ, ಎರಡ್ಹೊತ್ತುಂಡವ ಭೋಗಿ, ಮೂರ್ಹೊತ್ತುಂಡವ ರೋಗಿ, ನಾಲ್ಕು ಹೊತ್ತುಂಡವನನ್ನು ಹೊತ್ತುಕೊಂಡು ಹೋಗಿ

೧ ಒಮ್ಮೆಯುಂಡವ ತ್ಯಾಗಿ । ಇಮ್ಮೆಯುಂಡವ ಭೋಗಿ ।
ಬಿಮ್ಮಗುಂಡವನು–ನೆರೆರೋಗಿ, ಯೋಗಿ ತಾ ।
ಸುಮ್ಮಗಿರುತಿಹನು ! ಸರ್ವಜ್ಞ —(ಸರ್ವ ಪು. ೨೪೩)

೨ ಏಕಭುಕ್ತಮ್ ಮಹಾಯೋಗೀ ।
ದ್ವಿಭುಕ್ತಮ್ ಮಹಾಭೋಗೀ ।
ತ್ರಿಭುಕ್ತಮ್ ಮಹಾರೋಗೀ । (ಸಂ)

೫೮೫ ಬಾಯಿ ಸವಿ ತಿಂದು ನಾಯಿ ಸಾವು ತತ್ತ

೧ ಬಾವಿ ಸವಿಯ ನುಂಡು ಕಡೆಗೆ ನಾಯಿ ಸಾವು
—(೧೮೯) ಕದಾ ಕೀ

೫೮೬ ಮಾತು ಬಲ್ಲವನಿಗೆ ಜಗಳವಿಲ್ಲ......

೧ ನುಡಿಯ ಬಲ್ಲವನಿಗೆ ಕಲಹವೆಂಬುದುಂಟೆ

೫೮೭ ಹಸಿಯದೆ ಉಣಬೇಡ, ಹಸಿದು ಉಣದಿರಬೇಡ

೧ ಹಸಿವಿಲ್ಲದುಣಬೇಡ । ಹಸಿದು ಮತ್ತಿರಬೇಡ ।
ಬಿಸಿಗೂಡಿ ತಂಗುಳುಣಬೇಡ–ವೈದ್ಯನಾ
ಗಸಣಿಯೋ ಬೇಡ ! ಸರ್ವಜ್ಞ —(ಸರ್ವ, ಪು. ೨೪೨)

೨ ಹಸಿಯದಿರೆ ಉಣಬೇಡ, ಹಸಿದು ಮತ್ತಿರಬೇಡ
—(ಸರ್ವ, ಪು. ೨೪೨)

೫೬೮ ಕುರುಬನ ಕುತ್ತಕ್ಕೆ ಕುರಿ ಪಿತ್ತವೇ ಮದ್ದು

೧ ಕುಱುಂಬನ ಕುತ್ತಕ್ಕೆ ಕುಱಿಯ ಪಿತ್ತಮೆ ಮದ್ದಾಯ್ತು
—(೬–ಪುಟ ೩೭ ; ೫ನೆಯ ಸಾಲು) ಶ್ರೀರಾಮಾಶ್ವಮೇಧಂ

೫೬೯ ತಲೆ ಹಿಡಿತಕ್ಕೆ ಮಲ ಶೋಧನೆ ಕೊಂಡ

೧ ಸುಖ ಶೋಧನೆಗೆ ಮದ್ದ ಕೊಂಡಂತೆ
—(೬೫) ಬಸವೇಶ್ವರ ವಚನಗಳು, ಹಳಕಟ್ಟಿ

೫೭೦ ಮೆಚ್ಚು ಮದ್ದು ಅಂತ ಕೊಟ್ಟದ್ದು ಹುಚ್ಚು ಮದ್ದಾಯ್ತು

೧ ಮೆಚ್ಚಮದ್ದೆಲ್ಹೋತ ಹುಚ್ಚಮದ್ದೆಲ್ಹೋತ
—(ಕನ್ನಡಜಾ, ಪು. ೩೮೩)

೫೭೧ ಯಾವ ಗಿಡದ ಬೇರು ಯಾವುದಕ್ಕೆ ಮದ್ದೋ ?

ಹೋಲಿಸಿ : ೧ ನಾಸ್ತಿ ಮೂಲ ಮನೌಷಧಂ

೫೭೨ ಹೆಗ್ಗಣ ಹುಗ್ಗಿಸಿ ಗುದ್ದು ಬಡಿದರಂತೆ

೧ ಪೆರ್ಗಣಮನಿಕ್ಕಿ ಮನೆ ಮಾಡುವಂದ
—(೨–೧೨೨) ಧರ್ಮಾಮೃತ

೨ ಹೆಗ್ಗಣವನಿಕ್ಕಿ ನೆಲಗಟ್ಟು ಕಟ್ಟಿದಂತೆ
—(೩೩) ಚೆನ್ನಬಸವಣ್ಣನವರ ವಚನ

೩ ಉದರಗತರೋಗಕಂ ಮೇಲೌಷಧಿಯು ತೊಡೆಯುಲಾರೋಗ್ಯ
ಮಪ್ಪುದೆ ?
—(ಕಿಂ, ಕಾಂ. ೮–೨೨) ಶ್ರೀಪಂಪ್ರಾಮಾಯಣ

೫೯೩ ಉದ್ದು ಮದ್ದಿಗೆ ಸಲ್ಲ, ನಿದ್ದೆ ಯೋಗಿಗೆ ಸಲ್ಲ

೧ ಉದ್ದು ಮದ್ದಿಗೆ ಹೊಲ್ಲ । ನಿದ್ದೆ ಯೋಗಿಗೆ ಹೊಲ್ಲ

೫೯೪ ರೋಗಿ ಬಯಸಿದ್ದೂ ಹಾಲೂ ಅನ್ನ, ವೈದ್ಯ ಹೇಳಿದ್ದೂ ಹಾಲೂ ಅನ್ನ

೧ ರೋಗಿ ಬಯಸಿದುದಂ ವೈದ್ಯಂ ಪೇಳ್ದುದುಂ ಪಾಲ್
—(೧–೧೦೯) ಧರ್ಮನಾಥ ಪುರಾಣ

೨ ವೈದ್ಯನೆಂದುದು ಪಾಲು ರುಗ್ಜೀವಿ ಬಯಸಿದುದು ಪಾಲು
—(೮–೮೧) ಸೌಂದರಪುರಾಣ

೩ ರೋಗಿ ಬಯಸಿದುದೂ ಹಾಲೋಗರ, ವೈದ್ಯ ಹೇಳಿದುದೂ
ಹಾಲೋಗರ —(ಪ್ರಕರಣ ೨೨) ರಾಯಶ್ಯರುವಿಜಯ

೫೯೫ ರೋಗಿ ಬಯಸಿದ್ದೇ ವೈದ್ಯ ತರಿಸಿದ

೧ ರೋಗಿ ಬಯಸಿತ್ತ ವೈದ್ಯ ಕೊಡುವಂತೆ
—(೩೫) ಮಡಿವಾಳ ಮಾಚಿದೇವನ ವಚನಗಳು

೨ ರೋಗಿ ಎಳಸಿದುದನು ವೈದ್ಯನಿತ್ತಂತಾದುದು
—(೭೯-೧೮೦) ನೇಮಜಿನೇಶ ಸಂ

೫೯೬ ಉಂಡಮ್ಮನ ಮೈನೋಡು....
೧ ವಪುರಾಖ್ಯಾತಿ ಭೋಜನಂ (ಸಂ)

೫೯೭ ಕಣ್ಣು ಕಾಣುವ ತನಕ, ಬೆನ್ನು ಬಾಗುವ ತನಕ

೧ ಕಣ್ಣು ಕಾಣುವ ತನಕ ಬೆನ್ನು ಬಾಗುವ ತನಕ
ತಾಯಿಯಿರಲಿ ನನಗ ತವರಿರಲಿ ನನ್ನವ್ವ
ಅಣ್ಣಯ್ಯರಿರಲಿ ಕರಿ ಸಾಕ —(ಜಾಗೀ ಪು ೬೩)

೫೯೮ ನರೆ ಬಂದ ಮೇಲೆ ಹುಡುಗಿ ಸಂಗ ಯಾಕೆ ?

೧ ಕುರಿಯು ಕಾಯೋನಿಗೆ ಕಿರುಬಿದಿರು ಕೊಳಲ್ಯಾಕೆ
ನೆರೆ ಬಂದ ಮೇಲೆ ಹುಡುಗ್ಯಾಕೆ–ಜೋಳಾದ
ತೆನೆ ಬಿದ್ದ ಮೇಲೆ ಕವಣ್ಯಾಕೆ —(ಹಳ್ಳಿ ಹಾ. ಪು, ೨೦)

೫೯೯ ಅರವತ್ತು ವರ್ಷಕ್ಕೆ ಅರಳು ಮರುಳು

ಹೋಲಿಸಿ : ೧ ಅಱುವತ್ತು ತುಂಬಿದೊಡೆ ಮಱುಮಾತು ಬೇಡೆಂದು
ನಾಣ್ನುಡಿಗಳುಂಟು
—(೧-೪೫) ಸಿದ್ಧರಾಮಚರಿತ್ರೆ

೨ ಅರವತ್ತು ಪ್ರದಿದರ್ಗೆ ಮಾನ್ನುಡಿಗಳಿಲ್ಲ
—(೪-೩೯) ಸೌಂದರ ಪುರಾಣ

೬೦೦ ಮುದುಕಿ ಸೊಕ್ಕಿ ಮುಂದ್ಲೆ ಬಿಚ್ಚಳು

೧ ಮುದ್ಕಿ ಸೊಕ್ಕಿ ಮುಂದ್ಲೆ ಬಿಚ್ಚಿ ಕಣಿಯ ಕೇಳಿರೋ
(ಜಾಗೀ, ಪು. ೯೮)

೨ ಮುದುಕನಿಗೂ ಮುದುಕಿಗೂ ಎಲ್ಲಿ ಏಕಾಂತ ಅಂದ್ರೆ ಮುತ್ತುಗದ
ಮರದ ಅಂಡಲ್ಲಿ

೧ ಮುದುಕೀಗೆ ಮುದುಕನಿಗೆ ಎಲ್ಲೆಲ್ಲಿ ಮಾತಾಯ್ತು
ಮುತ್ತುಗದ ಮರದ ಗೆಲ್ಲೇಲಿ । ಮುದುಕಯ್ಯ
ಮುದುಕೀಗೆ ಮುತ್ತ ಕೊಡುತಿದ್ದ
—(ಹಳ್ಳಿಹಾ, ಪು. ೧೬೬)

೬೦೧ ಮುದುಕ ಮುದುಕ ಅಂತಾನೆ, ಮೂರು ಮುದ್ದೆ ಉಣ್ತಾನೆ,
ಊರ ಮುಂದಕ್ಕೆ ಹೋಗು ಅಂದ್ರೆ ಊರುಗೋಲು ಕೇಳ್ತಾನೆ

೧ ಮೂರು ಮುದ್ದೆ ಉಣ್ಣುತಾನೆ
ಮೂಲೇಲಿ ಕೂರುತಾನೆ
ಊರು ಮುಂದ್ಕೆ ಹೋಗಂದ್ರೆ
ಊರುಗೋಲು ಬೇಡುತಾನೆ —(ಜಗೀ, ಪು. ೧೦೮

೬೦೨ ಅಜ್ಜಿ ಇಲ್ಲದ ಮನೆ, ಮಜ್ಜಿಗಿಲ್ಲದ ಊಟ

೧ ಅಜ್ಜಿ ಇಲ್ಲದ ಮನೆ । ಮಜ್ಜಿಗಿಲ್ಲದೂಟ
ಲಜ್ಜೆಗೆಟ್ಟನಾಂ ।
ಇದ್ದರೇನೋ–ಇಲ್ಲದಿದ್ದರೇನೊ॥ —(ಅಯ್ದು ಹಹಾ. ಪು. ೨೩

೨ ಅಕ್ಕ ಇಲ್ಲದ ಮನೆಯು । ಮಕ್ಕಳಿಲ್ಲದ ಆಟವು
ಕಿಚ್ಚುಮರು ಇಲ್ಲ-ದರ ಮನೆಯು, ಇಷ್ಟ ಮಿತ್ರರು
ಲಜ್ಜೆಗೇಡೆಂದ । ಸರ್ವಜ್ಞ —ಸರ್ವ

೬೦೩ ಬಾಳುವ ಮನೆಗೊಂದು ಬಗಳುವ ನಾಯಿ

೧ ಬಾಳ್ವಮನೆಗೊಂದು ಬೊಗಳ್ವುದು ವೇಳ್ಕುಂ
—(೧-೪೦) ಅನಂತನಾಥ ಪುರಾಣ

೬೦೪ ಮಂಡೆ ಇರುವಾಗ ಮೊಣಕಾಲಿಗೆ ಪಟ್ಟವೆ ?

೧ ಒರಿಯುಂಡಿರೆ ಕಿರಿಯಂಗೆ ಪಟ್ಟವೆ ?
—(೪-೧೯) ಕೌಶಿಕರಾಮಾಯಣ

೬೦೫ ಮಂತ್ರ (ಗಾಯತ್ರಿ) ಹುಟ್ಟಿದ ಕೊಂಬು (ಕೋಡು)ಗಿಂತ, ಮೊದಲೆ ಹುಟ್ಟಿದ ಕಿವಿ (ಹೆಚ್ಚು ಬೆಲೆ)ಯಾಯ್ತು

೧ ಮುನ್ನ ಬಂದ ಕಿವಿಯಿಂದಂ ಬಳಿಕ ಬಂದ ಕೊಂಬು ಕಠಿಣತ್ತು
—(೨-೧೦೫) ಧರ್ಮಾಮೃತ

೨ ಮುನ್ನೆ ಹುಟ್ಟಿದ ಕಿವಿಗಿಂ ಬಳಿಕಂ ಕೊಂಬಿಕೆ ಕಠಿಣ
(೬-೪೦-೪೯) ತೊರವೆ ರಾಮಾಯಣ

೬೦೬ ಹಾವು ಮುಟ್ಟಿದರೆ ವಿಷ ಮುಟ್ಟೇ?

೧ ಹಾವು ನೋಡಿದರೆ ವಿಷವು ಬಿಡುವುದೇ ? (ಪ್ರಭಾ)

೬೦೭ ಹಿರಿಯರಿಲ್ಲದ ಮನೆ, ಗುರುವಿಲ್ಲದ ಮಠ

೧ ಗುರುವು ಇಲ್ಲದ ಮಠವು । ಹಿರಿಯರಿಲ್ಲದ ಮನೆಯು
ಅರಸಿಲ್ಲದೂರು —ಸರ್ವ.

೬೦೮ ಹುಣಿಸೆ ಮರ ಮುಪ್ಪಾದರೆ ಹುಳಿ ಮುಪ್ಪೆ?

೧ ಹುಣಿಸೆ ಮುಪ್ಪಾದ ಮೇಲೆ ಹುಳಿಯು ತಪ್ಪಿತೇ ರಾಮ
ಜನನ ಬಾಗಿದ ಮೇಲೆ ಗುಣವು ಮುಪ್ಪಾದ ರಾಮ
(ಪ.ಹಾ. ಪು. ೩೧)

೬೦೯ ಬಾವಿಯೊಳಗಿನ ಕಪ್ಪೆ

೧ ಬಾವಿಯ ಕಪ್ಪೆ ಸಮುದ್ರಮಂ ಮೆಚ್ಚದಂತೆ

(೧೮೭-೫ವ) ಜೀವಸ

೬೧೦ ಕೆರೆ (ಸಮುದ್ರದ) ಮುಂದೆ ಅರವಟ್ಟಿಗೆಯೆ ?

೧ ಕೆರೆಯಿರಲಬರೆದುದಿಗೆ ತಾನರವಟ್ಟಿಗೆಯಿಟ್ಟು ಮೆರೆವ ಮಾಳ್ಕೆ

—(೩೫) ಕನ್ನಡ ನೀತಿಸಾರ

೬೧೧ ನಾನು ಹಾಲು ಕುಡಿದಷ್ಟು ನೀನು ನೀರು ಕುಡಿದಿಲ್ಲ

೧ ಎನ್ನುಂಡುಪ್ಪಿನೊಳಾದ ಲೆಕ್ಕದನಿತುಂ ಕೂಳುಂಡುದಿಲ್ಲ

—(ಪು ೧೬೩-೩೦) ಜೀವ

೬೧೨ ಬೇರು ಬಲ್ಲವನಿಗೆ ಎಲೆ ತೋರಿಸಲೇಕೆ ?

೧ ಬೇಱನಱಿವರ್ಗೆಲೆಯಂ ತೋಱುವರ್

— (೮-೪೪) ಧರ್ಮಾಮ

೨ ಬೇರಂ ಬಲ್ಲರ್ಗೆಲೆದೋಱಲೇಕೆ ?

—(೫-೬೫) ಗಿರಿಜಾ ಕಲ್ಯಾ

೩ ಹಾರೈಸುತಂ ಬಂದು ಮುಡಿವಾಳ
ದೊಳ್‌ನಿಂದು ಬೇರಬಲ್ಲವರ್ಗೆ ನೀನೆಲೆ
ದೋಱಲೇಕೆಂದು — (ಪುಷ್ಪರಗಳೆ-ಸಾಲು ೧೦

೪ ಬೇರ ಬಲ್ಲವರಿಗೆ ಎಲೆಯ ತೋರಿ

—(೬೦) ಉರಿಲಿಂಗ ಪೆದ್ದಿಯ ವಚನ

೫ ಬೇರ ಬಲ್ಲವರಿಗೆಲೆದೋಱಲೇಕೆ ?

—(೨-೧೦: ೮-೩೮) ಹರಿಶ್ಚಂದ್ರಕಾ

೬ ಎಲೆಯ ಬಗ್ಗಿಪರೆ ಬೇರಿರಲು

—(೫-೮೫) ಸಿಂಗಿರಾಜ ಪು

೭ ಎಲೆಯನು ತೋಱಬೇಡ

—(೧೦-೮೭-೩೫) ಕ. ಭಾಗವತ, ನಿತ್ಯಾತ್ಮ

೮ [illegible]

—(೧೧-೧೯) [illegible]

೯ [illegible] —ಚೆನ್ನಬಸವ ಪುರಾಣ

೧೦ [illegible]

ದಶಾವತಾರ ಚರಿತೆ (ಕವಿ ಚರಿತೆ)

೧೧ [illegible]

—(ಸಂ.ಕಾಂ. ೮-೩೩) [illegible]

೧೨ [illegible]

—(೬-೫) [illegible] ರಾಮಾಯಣ

೧೩ [illegible] ?

—([illegible])

೬. ಔದ್ಯೋಗಿಕ

೬೧೩ ಆಡಿ ಉಂಡವ ಕೆಟ್ಟ, ಕೇಡು ನೆನೆದವ ಕೆಟ್ಟ

೧ ಆಡಿ ಉಂಬುವ ಕೆಟ್ಟ ಕೇಡ ನೆನೆದವ ಕೆಟ್ಟ
ನೋಡದವ ಕೆಟ್ಟ ಬೆಳೆ ಭೂಮಿ —(ಆಮು, ಪು. ೨೧)

೬೧೪ ಆಲಸ್ಯಮಮೃತಂ ವಿಷಂ

೧ ಆಲಸ್ಯದಿಂದಮೃತವು ಗಟಿಲನೆ ವಿಷವಾಗದಿಹುದೆ ?
—(ಸಂ ೧೧-೧೩) ಮೋಹನತರಂಗಿಣಿ

೬೧೫ ಕಡಲಿಗೆ ಮುಂದೆ, ಕಡಿವಾಣಕ್ಕೆ ಹಿಂದು

೧ ಕಾಣವಾಗೆ ಬಾಯುಂ ತೆರೆದು ಕಡಿವಾಣವಾದೊಡಾನೊಲ್ಲೆನೆನ
ಒಪುದೆ ? —(೨-೮೮) ಸೋಮನಾಥಚರಿತ್ರೆ

ಹೋಲಿಸಿ: ೨ ತುಯ್ಯಲಾದರೆ ಉಂಬೆ, ಹುಯ್ಯಲಾದರೆ ಓಡುವೆ (೨೫೬)

೩ ಒಪ್ಪುವ ಕೊಯ್ಯಲಾವೊಡೊಲ್ದುಂಡುಜಿ
ಪುಯ್ಯಲಾದೊಡೆ ಪಲಾಯನ ಪಂಡಿತರ ಗಾದೆ !
—(೨-೩೪) ಅಭಿನವ ದಶಕುಮಾರ ಚರಿತೆ

೬೧೬ ಕಣ್ಣಿದ್ದೂ ಕುರುಡ, ಕಾಲಿದ್ದೂ ಹೆಳವ

೧ ಕಣ್ಣಿದ್ದೂ ಕುರುಡರು —(ಭರತೇಶವೈಭವ, ವಿರಕ್ತಿ ಸಂಧಿ)

೨ ಕೇಳುತ್ತುಂ ಕಿವುಡರ್, ಕಾಣುತ್ತುಂ ಕುರುಡರ್
—(೩೩-೫೦ವ) ತ್ರಿಷಷ್ಟಿ ಪುರಾತನ ಚರಿತ್ರೆ

೬೧೭ ಕೂತುಣ್ಣುವವನಿಗೆ ಕುಡಿಕೆ ಹಣ ಸಾಲದು

೧ ಕುಂತು ಉಂಡಾರೆ ಕುಡಿಕೆ ಹೊನ್ನು ಸಾಲದು

೬೧೮ ಹೊಟ್ಟೆ ಹೊಲೆಯನ ಮನೆ ಹೊಗಿಸಿತು

೧ ಕುಲವನ್ನು ಕೆಡಿಸುವುದು । ಛಲವನ್ನು ಬಿಡಿಸುವುದು
ಹೊಲೆಯನಾಮನೆಯ–ಹೊಗಿಸುವುದು ಕೂಳಿನಾ
ಬಲವ ನೋಡೆಂದ ! ಸರ್ವಜ್ಞ —(ಸರ್ವ, ೧೮೧೮)

ಹೋಲಿಸಿ: ೨ ಬಡತನವೆ ನೀ ಎನ್ನ ಬಿಡದೆ ಬೆನ್ನಲಿ ಬಂದೆ
ಕಡುಕಷ್ಟಗೊಳಿಸಿ ದಣಿಸೀದೆ - ಹೊನ್ನುಳ್ಳ
ಹೊಲೆಯಂಗೆ ಕೈಯ ಮುಗಿಸೀದೆ —(ನಾಡಗೀ, ೩೫೬)

೬೧೯ ಅನ್ನಗತ ಪ್ರಾಣ, ಚರ್ಮಗತ ದೃಷ್ಟಿ

೧ ಕೃತೇತ್ವಸ್ಥಿಗತಾಃ ಪ್ರಾಣಾಃ ತ್ರೇತಾಯಾಂ ಮಾಂಸಮಾಶ್ರಿತಾಃ
ದ್ವಾಪರೇ ಚಾಶ್ರಿತಾಶ್ಚರ್ಮ ಕಲೌತ್ವನ್ನಂ ಸಮಾಶ್ರಿತಾಃ (ಸಂ)

೬೨೦ ತುತ್ತು ತಪ್ಪಿದರೆ ತೂಕ ತಪ್ಪೀತು

೧ ಅನ್ನಮೂಲಂ ಬಲಂ ಪುಂಸಾಂ (ಸಂ)

೬೨೧ ಕಷ್ಟಪಟ್ಟರೆ ಫಲವುಂಟು

೧ ಕಷ್ಟೇ ಫಲಂ

೨ ಕಷ್ಟಪಡದೇ ಸುಖಬರದು —(೯೫) ಶ್ರೀವಿಜಯದಾಸರ ಕೃತಿ

೬೨೨ ಕಾಯಕವೇ ಕೈಲಾಸ, ದೇಹವೇ ದೇವಾಲಯ

೧ ದೇಹೋ ದೇವಾಲಯ ಪ್ರೋಕ್ತಃ ಜೀವೋದೇವಸ್ಸದಾಶಿವಃ
ತ್ಯಜೇದಜ್ಞಾನ ನಿರ್ಮಾಲ್ಯಂ ಸೋಹಂ ಭಾವೇನ ಪೂಜಯೇತ್
(ಸಂ)

೬೨೩ ಆಳಾಗ ಬಲ್ಲವ ಅರಸಾಗಬಲ್ಲ

೧ ಆಳಾಗ ಬಲ್ಲವನು । ಆಳುವನು ಅರಸಾಗಿ —(ಸರ್ವ, ೧೩೪೯)

೬೨೪ ತನಗೆ ತಾನಾಗಬೇಕು, ಮನೆಗೆ ಮಂದಿಯಾಗಬೇಕು

೧ ಅರಸು, ತಾನೆ ತನಗೀ ನೆರವಪ್ಪರಾರುಂ
—(ಪ ೯೩) ಕಾವ್ಯಾವಲೋಕ

೨ ಪೆಱರ್ಗೆಱೆವೆ, ತಾಂ ತನಗೆ —(೬-೧೩೯) ಧರ್ಮಾಮೃ

೬೨೫ ಒಂಟೆ ತುಟಿಗೆ ನರಿ ಜೋತುಕೊಂಡು ಕಾದಿತ್ತಂತೆ

೧ ಎಳೆ ನರಿಯು ಒಂಟೆಯ ತುಟಿಗೆ ಜೋತಂತೆ
—(ಕೀ. ೪೭೬) ಪ.ಕೀ. ತ

೬೨೬ ನಾಯಿ ಹಿಡಿದು ಕೊಲುವವನ ಕಾಲುಹಿಡಿದು ನೇತಾಡಿದ ಹಾಗೆ

ಹೋಲಿಸಿ : ೧ ನಾರಿ ಬೀಳ್ವನ ಕಾಲುಗಳನೇ ಪೂರಯುದಿ ಬೀಳ್ವವನು
ಹಿಡಿದವೊಲ್ —(೩೯-೭೭) ಜ್ಞಾನಸಿಂ

೨ ಬಾಳಲಾರದು ಜಾರುವಾತನ ಪೆಗಲ ಹಿಡಿದವೋಲ್
—(೨-೧-೭) ಕರ್ನಾಟಕ ಭಾಗವ

೬೨೭ ಕೋಟೆ ಹೋದಮೇಲೆ ಪಹರೆ ಕಾದರೆ ?

೧ ಕೆಡಕು ಬರಗದ ಮುನ್ನ ಕೋಟೆ ರಕ್ಷಿಸಬೇಕು
—(೩) ಶ್ರೀ ವ್ಯಾಸರಾಯಸ್ವಾಮಿಗಳ ಕ

೬೨೮ ಇಂದು ಮಾಡುವುದನ್ನು ನಾಳೆ ಎಂದು ಹೇಳಬೇಡ

ಹೋಲಿಸಿ : ನ ಕಶ್ಚಿದಪಿ ಜಾನಾತಿ ಕಿಂ ಕಸ್ಯ ಶ್ವೋ ಭವಿಷ್ಯತಿ
ಅತಃ ಶ್ವಃ ಕರಣೀಯಾನಿ ಕುರ್ಯಾದದ್ಯೈವ ಬುದ್ಧಿಮಾನ್
—(

ಶ್ವಃ ಕಾರ್ಯಮದ್ಯ ಕರ್ತವ್ಯಂ ಪೂರ್ವಾಹ್ಣೇ ಚಾಪರಾಹ್ಣಿಕ
—(

ನಾಳೆ ಮಾಡುವುದೀಗಲೀಗ ಮಾಡುವುದೀಕ್ಷಣ
—(ಸಂ ೧೯-೨೩) ಶಿವತತ್ವ ಚಿಂತಾ

೬೨೯ ನಾಳೆ ಎಂದವನ ಮನೆ ಹಾಳು

೧ ನಾಳೆ ಎಂಬವನ ಮನೆ ಹಾಳು । ನೀನು। ನಾಳೆತನಕಿರುವುದು
ನಿಜವೇನು ಹೇಳು ॥ —(ಪ್ರದಾ)

೬೩೦ ಆರು ಯತ್ನ ನಮ್ಮದು, ಫಲನೀಡು ದೇವರಿಚ್ಛೆ

೧ ಉದ್ಯಮಂ ಸಾಹಸಂ ಧೈರ್ಯಂ ಬುದ್ಧಿಃ ಶಕ್ತಿಃ ಪರಾಕ್ರಮಃ
ಷಡೇತೇ ಯತ್ರ ವರ್ತನ್ತೇ ತತ್ರ ದೇವಃ ಸಹಾಯಕೃತ್ (ಸಂ)

೬೩೧ ಒಳ್ಳೆ ಕೆಲಸಕ್ಕೆ ನೂರೆಂಟು (ಶತ) ವಿಘ್ನ

೧ ಶ್ರೇಯಾಂಸಿ ಬಹು ವಿಘ್ನಾನಿ (ಸಂ)

೨ ಕಾರ್ಯಸಿದ್ಧಿ ಪ್ರಾದುರ್ಭಾವಕ್ಕೆ ವಿಘ್ನಂ ಪಲವೊಳವು
—(೮. ಆಶ್ವಾಸ ಪ. ೩೦) ವಿಕ್ರಮಾರ್ಜುನವಿಜಯ

೩ ಲೇಸಿಂಗೆ ವಿಘ್ನ ಸಂತತಿಯಾಸುರ ಮೆನಿಸಿರ್ಪುದಲ್ತೆ
—(೬-೯೧) ಅಭಿನವದಶಕುಮಾರ ಚರಿತೆ

೪ ಶ್ರೇಯಸ್ಸಿಗತಿ ವಿಘ್ನಂಗಳೊದಗುವುವು
—(ಅಯೊ. ಕಾ. ೨-೨೨) ಶ್ರೀಮದ್ರಾಮಾಯಣ

೫ ಸತ್ಕಾರ್ಯ ಸಿದ್ಧಿಗನೇಕ ವಿಘ್ನಗಳೆಂಬ ನಾಳ್ನುಡಿಗೇಕೆ ಬರ್ಪುದು
ಕೊರತೆ —(ಸುಂ.ಕಾಂ. ಸ ೧. ಪ. ೧೩) ರಾಮಾಯಣ
ಸಂಗ್ರಹ

೬೩೨ ಮೊದಲ ಚುಂಬನದಲ್ಲೇ ಹಲ್ಲುಬಿದ್ದಂತೆ

೧ ಪ್ರಥಮೇ ಕಬಲೇ ಮಕ್ಷಿಕಾ ಪಾತಃ (ಸಂ)

೨ ಪ್ರಥಮ ಚುಂಬನೇ ದಂತಭಗ್ನಂ ಸಂ)

೩ ಪ್ರಥಮದ ಚುಂಬನದೊಳೆ ದಲ್ ದಂತ ಭಂಗವಾದಂತೆ(೧೩-೫೭)
ಪ್ರಥಮ ಚುಂಬನದೊಳು ಪಲ್ಮುರಿದಂತೆ (೩೨-೬೬)
—ನೇಮಿನಾಥ ಪುರಾಣ

೪ ಮೊದಲ ಚುಂಬನದೊಳಗೆ ಹಲ್ಲುಬಿದ್ದಂತೆ
—(ಏ.ಪ.) ಕ.ಭಾ. ಕಥಾಮಂಜರಿ

ಹೋಲಿಸಿ : ತಿಂಬಗಂಜಿಯು ಮೇಲೆ ಉಗುರು ಬಿದ್ದಂತಾಯಿತ್ತು
—ಪ್ರಭುದೇವರ ವಚನ

೬೩೩ ಆಕಾಶಕ್ಕೆ ಏಣಿ ಹಾಕಿದಂಗೆ

೧ ಗಗನಕ್ಕೆ ನಿಚ್ಚಣಿಗೆಯನಿಕ್ಕಿದವರುಂಟೆ ?
—(೮೮೭) ಪ್ರಭುದೇವರ ವಚನಗಳು

೬೩೪ ಎಳ್ಳಿಲ್ಲದ ಗಾಣವನ್ನು ಎತ್ತು ತಿರುಗಿದಂತೆ

೧ ಎಳ್ಳಿಲ್ಲದ ಗಾಣವನಾಡಿವ ಎತ್ತಿನಂತಾಯಿತ್ತು ಎನ್ನಭಕ್ತಿ
— (೬೨೭, ೩೮೩) ಬಸವೇಶ್ವರರ ವಚನಗಳು

೨ ಎಳ್ಳು ಇಲ್ಲದ ಗಾಣದಲ್ಲಿ ಎಣ್ಣೆಯುಂಟೆ ? ಜೊಳ್ಳು ತೂರಿದಲ್ಲಿ
ಬತ್ತ ಉಂಟೆ ? —(೩೮) ದೇವರ ದಾಸಿಮಯ್ಯ

೬೩೫ ಕಮ್ಮಾರನ ಬೀದಿಯಲ್ಲಿ ಸೂಜಿ ಮಾರಿದ ಹಾಗೆ

೧ ಕಮ್ಮಾರಗೇರಿಲಿ ಕದರು ಮಾರಿಪಗಾವೆ

೬೩೬ ಗಾಳಿ ಗುದ್ದಿ ಮೈ ನೋಯಿಸಿಕೊಂಡ ಹಾಗೆ

೧ ವಾತ ಗುದ್ದಿ ಕೈಗಳೆರಡು ನೋಯಿಸಲೇಕೆ ?
(ಶ್ರೀ ವ್ಯಾಸರಾಯಸ್ವಾಮಿಗಳ ಕೃತಿ–೬)

೬೩೭ ನೀರಿಲ್ಲದ ಬಾವಿಗೆ ರಾಟೆ ಹಾಕಿದ ಹಾಗೆ

೧ ... ... । ನೀರಿಲದ
ಬಾವಿಗೆ ರಾಟಿ ಹಾಕಿದಂಗ । ಕೋ ।
—(ಕನ್ನಡ ಜಾ, ಪು ೩೪೭)

೬೩೮ ಬೆಟ್ಟ ಅಗೆದು ಇಲಿ ಹಿಡಿದ ಹಾಗೆ

೧ ಬೆಟ್ಟಗೆದಹಿಲಿಯು ಒಡಿದೆಸೆವಗೆಲ್ಲ !
—(೭–೨೯)ಶಿಂಗಿರಾಜ ಪುರಾಣ

೨ ಗಿರಿಯನಗುಳಿ ಇಲಿಯ ಹಿಡಿದ ಪರಿ
—(೩-೧)ಸುಬೋಧ ಸಾರ

೩ ಇಲಿಯಂ ಹಿಡಿಯುವುದಕ್ಕೆ ಬೆಟ್ಟವನ್ನಗುಳ್ವಂತೆ
—(೪) ಮುದ್ರಾಮಂಜೂಷ

೪ ಬೆಟ್ಟವನ್ನು ಅಗೆದು ಇಲಿಯನ್ನು ಹಿಡಿದ ಹಾಗೆ
—(ಪ್ರಕರಣ ೨೫) ರಾಯಸ್ಥರು ವಿಜಯ

೬೩೯ ಬೆಟ್ಟ (ಗುಡ್ಡ)ಕ್ಕೆ ಕಲ್ಲು ಹೊತ್ತಹಾಗೆ

೧ ಗುಡ್ಡಕ ಜನ ಕಲ್ಲು ಹೊತ್ತಂಗ । ಕೋಲೆನ್ನ ಕೋಲ ।
—ಕನ್ನಡ ಜಾನಪದ (ಪುಟ ೩೪೬)

೬೪೦ ಬೆಟ್ಟಕ್ಕೆ ನಾಯಿ ಬೊಗಳಿ ಹೊಟ್ಟೆಯುಬ್ಬಿ ಸತ್ತ ಹಾಗೆ

೧ ಬೆಟ್ಟಕ್ಕೆ ಸರಿಯೂಳ್ವಮಾಳ್ಕೆ —(೧೩-೫೦) ಸಮಯ ಪರೀಕ್ಷೆ

೨ ಬೆಟ್ಟವಂ ಕಂಡೂಳಿಡುವುದರ ಛಂದವಾಯ್ತು
—(೨೧-೫೩) ಬಸವ ಪುರಾಣ

೬೪೧ ಮಜ್ಜಿಗೆ ಕಡೆದರೆ ಬೆಣ್ಣೆ ಬರುವುದು, ನೀರು ಕಡೆದರೆ ಏನು ಬರುವುದು ?

೧ ಎರವಿನ ಸಿರಿಗಬ್ಬಿ ಮೈಮರೆವರೆ, ನೀರ ಕಡೆದರುಂಟೆ ಬೆಣ್ಣೆ
—ಅತ್ಮಾ(ಕೀ. ೧೪೭)

೨ ಆರ ಹಾರೈಸಿದರೇನುಂಟು ಬರೀ ನೀರ ಕಡೆದರಲ್ಲೇನುಂಟು
—(ಕೀ. ೧೬೪-ಹ. ಕೀ. ತ.)

೬೪೨ ಹೊಟ್ಟು (ಉಮ್ಮಿ, ಹೊಳ್ಳು) ಕುಟ್ಟಿ ಕೈತುಂಬ ಗುಳ್ಳೆ

೧ ಹೊಳ್ಳ ಕುಟ್ಟಿ ಕೈ ಹೊಟ್ಟಾದಂತೆ
—(೩೮) ದೇವರ ದಾಸಿಮಯ್ಯ

೨ ಹೊಳ್ಳ ಕುಟ್ಟಿ ಕೈ ಹೊಟ್ಟಾದಂತಾಯಿತ್ತು
—(೪೭೩) ಬಸವೇಶ್ವರ ವಚನಗಳು

೩ ಉಪ್ಪಿಗಟ್ಟಿ ಕರ್ಪುರ ಪ್ರಗುಣನಾಂತುದು
—(೨೫-೧೮) ಪಾರ್ಶ್ವನಾಥ ಪುರಾಣಂ

೬೪೩ ನಾಯಿ ಸಂತೆಗೆ ಹೋಗಿ ಪ(ರಿ)ಕೆಗೆಯಿಂದ ಬಡಿಸಿಕೊಂಡಿತು

೧ ಕುನ್ನಿ ಸಂತೆಗೆ ಹೋದಂತೆ
—(೧೦೮) ಶ್ರೀ ಪ್ರಸನ್ನ ವೆಂಕಟದಾಸರ ಕೃತಿ

೬೪೪ ಇರುವೆ ಗೂಡು ಕಟ್ಟಿ ಹಾವಿಗೆ ಹುತ್ತ ಮಾಡಿಕೊಟ್ಟ ಹಾಗೆ

೧ ಗೆದ್ದಲು ಮನೆ ಮಾಡಿ ಸರ್ಪಂಗೀಡಾದಂತೆ
—(ಅಮರೇಶ್ವರಲಿಂಗ, ಕ. ಚರಿತ್ರೆ ಸಂ. ೨)

೨ ಧಾರುಣಿಯೊಳು ಪಿಪೀಲಿಕೆಯು ವಿ
ಸ್ತಾರದಲಿ ಮಾಡಿದ ಮನೆಯ ಕಾ
ಳೋರಗನು ಹೊಗುವಂತೆ
—(ಆದಿ. ಸಂ, ೮, ಪ-೧೯) ಕರ್ಣಾಟ
ಭಾರತ ಕಥಾ ಮಂಜರಿ

೩ ಗೆದ್ದಲ ಮನೆಯು ಕಾಳೋರಗ ಸೇರಿದಂತಹುದು
—(೧೯-೫೯) ನಾಗಕುಮಾರ ಚರಿತಂ

೬೪೫ ಒಬ್ಬನ ಗಳಿಕೆ, ಮತ್ತೊಬ್ಬನ ಬಳಕೆ

೧ ಕೆಲಬರು ಗಳಿಸಿದೊಡೆ ಕೆಲರುಂಡು ಜಾರುವರು
—(ವಿ, ಪ. ೩-೪೫) ಕರ್ಣಾಟ ಭಾರತ ಕಥಾ ಮಂಜರಿ

೬೪೬ ಎಳ್ಳಿಗೆ ಪರಿಮಳ ಕಟ್ಟಿದರೆ ಎಣ್ಣೆಗೆ ಪರಿಮಳ ಬರುವುದು

೧ ಎಳ್ಳಿಂಗೆ ಪರಿಮಳವ ಕಟ್ಟದಲ್ಲದೆ ಎಣ್ಣೆಗೆ ಪರಿಮಳ ವೇಧಿಸದು
—(ಅವಚಂ. ೨೩೯

೬೪೭ ವಿನಾಯಕನನ್ನು ಮಾಡಲಿಕ್ಕೆ ಹೋಗಿ (ವಾನರನಾದ ಹಾಗೆ) ಅವರಪ್ಪನನ್ನು ಮಾಡಿದಂತೆ

೧. ವಿನಾಯಕಂ ಪ್ರಕುರ್ವಾಣೋ ರಚಯಾಮಾಸ ವಾನರಂ ।—(ಸ

೨ ಬರೆಯ ಅಮ್ಮನ ಕೋಟೆ ಮುರಿಯದಂತೆ
—(೧೪-೧೫) ಜ್ಞಾನಸಿಂಧು

೬೪೮ ಕೊರಳಲ್ಲಿ ಸತ್ವವಿಲ್ಲದವನು ಬರಳು ನುಂಗಿದನಂತೆ

೧ ಕೊರಲ ಸತ್ತ್ವಮಿಲ್ಲದೊರಲಂ ನುಂಗಿದರ್
—(೭-೧೭೩) ಧರ್ಮಾಮೃತ

೨ ಸುರಗಿಯು ನಾನುವ ಕೊರಳ ಸತ್ವವೇ ?

೩ ಗಳದ ಸತ್ವವನರಿಯದದ್ರಿಗೆ ತಲೆಯನೊಡ್ಡುವರೆ ?
—(ದ್ರೋ. ಪ. ೨-೫೧) ಕರ್ಣಾಟ ಭಾರತ ಕಥಾ ಮಂಜರಿ

೪ ಕೊರಳಿನ ಬಲುಹನರಿಯದೆ ಗಿರಿಯ ಹೊರಲಂಘೈಸುವರೆ ?
(ದ್ರೋ. ಪ. ೪-೫೪) ಕರ್ಣಾಟಕ ಭಾರತ ಕಥಾ ಮಂಜರಿ

೬೪೯ ಮಳೆಯ ತಡೆಯಲಾರದ ಕೊಡೆ ಸಿಡಿಲು ತಡೆದೀತೆ ?

೧ ಸಿಡಿಲು ಹೊಡೆವಡೆ ಒಡಿದ ಕೊಡೆ ಕಾವುದೇ ?
—(೨-೩೧) ಹರಿಶ್ಚಂದ್ರ ಕಾವ್ಯ

೨ ಸಿಡಿಲಿನಾರುಬಿಯನಾನ ಬಲ್ಲಾವೆ ಕೊಡೆ ?
—(೬-೪-೫೩) ತೊರವೆ ರಾಮಾಯಣ

೩ ಸಿಡಿಲು ಹೊಡೆಯಲ್ಪಿಡಿ ಕೊಡೆಯನ್ನನಡಸಿ ಕಾಯ್ವುದೇ ?
—(೩೫-೨೦) ಸಿಂಗರಾಜ ಪುರಾಣ

೪ ಸಿಡಿಲೆಱಗಿದಡೆ ಕೊಡೆ ತಡೆಕಾವುದೇ ?
—(ಪು. ೩೮೫-೨) ಸಾಳ್ವಭಾರತ

೫ ಸಿಡಿಲಿನುರುಬೆಯ, ತಾಳೆಲೆಯೊಳು ಮಾಡಿದ ಕೊಡೆ
ತಾಳಲಾಪುದೇ —(೧೮-೧೫) ಕಂಠೀರವ ನರಸರಾಜ ವಿಜಯಂ

೬ ಸಿಡಿಲ ಪೊಡೆತಕೆ ಕೊಡೆಯು ಮರೆಯಹುದೆ ?
--(ಸುಂ. ಕಾಂ, ೧೨-೪೧) ಶ್ರೀಮದ್ರಾಮಾಯಣಂ

೬೫೦ ಗೇಣು ಬಿಟ್ಟು ಅಗುಳು ಹಾರಿದ ಹಾಗೆ

೧ ಗೇಣುಕೆವಗಳ ಹಾಟಿದೊಲಾಯ್ತು —(ಯು. ಕಾ ೧೮-೩೨
ಶ್ರೀ ರಾಮಾಭ್ಯುದಯ ಕಥಾ ಕುಸುಮ ಮಂಜ

೬೫೧ ಆಡಲಾರದಾಕೆಗೆ ಒಲೆ ಡೊಂಕು, ಕುಣಿಯಲಾರದಾಕೆಗೆ ಅಂಗಳ (ಓರೆ)
ಡೊಂಕ

೧ ಆಡಲಱಿಯದಂಗಣದ್ದೋಳ್ ಕೃತ್ಯಲ್ಲಿಯಿಪ್ಪೋಲ್
—(೨-೩೮) ಸಮಯ ಪರೀ

೨ ಪರ ನರ್ತನವಿರವನರಿಯದೆ ಪೇರೆವಂಗಳಪ್ಪೋರೆಯೆಂಬ
ನಾಯಕಿಗೆ ಸಮಂ (

೩ ತಾ ಕುಣಿಯಲಾರದೆ ಅಂಗಳ ಡೊಂಕು ।
—(೧೩-೭) ಅಖಂಡೇಶ್ವರ ವಚ

೬೫೨ ಕುಂಬಾರನಿಗೆ ಒಂದು ವರ್ಷ, ದೊಣ್ಣೆಗೆ ಒಂದು ನಿಮಿಷ
(ಸಾವಿರ ಮಡಕೆಗೆ ಒಂದೇ ದೊಣ್ಣೆ

೧ ಇಡೀ ವರುಷದ ಕುಂಬಾರನ ಗಡಿಗೆಯನೊಡೆದಿದೆ ದೊಣ್ಣೆಯು
ನಿಮಿಷದಲೇ —(ಯುಗಪುರುಷ, ದಸರಾ ಸಂಚಿಕೆ ೧೯೬

೨ ಭಾಂಡ ತತಿಗೊಂದು ಗುದುಗೆಯ ಪೆಟ್ಟು ಸಾಲದೇ
—(ಸಂ. ೫೦ ಪ ೪೩) ಚೆನ್ನಬಸವ ಪುರಾ

೬೫೩ ಎಣ್ಣೆ ಬರುವಾಗ ಗಾಣ ಮುರಿಯಿತು

೧ ಎಣ್ಣೆಯು ಬಂದಾಗಲೆ ಗಾಣವೂ ಸಹ ಮುರಿದರೆ....
—(ಯುಗಪುರುಷ, ದ. ಸಂ. ೧೯೬

೬೫೪ ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಲೇಸು

—(ಸರ್ವ, ೧೨.

೬೫೫ ರೋಹಿಣಿಯಾದರೆ ಓಣಿಯಲ್ಲ ಜೋಳ

೧ ರೋಹಿಣಿಯ ಮಳೆಯಾಗಿ ಓಣೆಲ್ಲ ಜೋಳಾಗಿ
ಕಾಣಾದ ಹುಲುಸು ಕುಡಿಯಾಗಿ-ಹೊಲದಾಗ
ಕಣ ತುಂಬಿ ರಾಶಿ ಹೊಳೆಯಾಗಿ

—(ಕನ್ನಡ ಜಾ, ಪು-೨೬)

೬೫೬ ಉತ್ತರ, ಸ್ವಾಮಿ ಉತ್ತರ

೧ ಆಸಾಡಿ ಮುಂದಾಗಿ ಬೀಸ್ಯಾವ ಈ ಗಾಳಿ
ಮೋಸ ಮಾಡ್ಯಾವ ಮಗಿಮಳಿ । ಉತ್ತ್ರಿಸಾತಿ
ಬಾಸೆ ಕೊಟ್ಟಾವ ಬಡವರಿಗೆ

—(ಕನ್ನಡ ಜಾ. ಪು. ೨೬)

೬೫೭ ಉತ್ತರೆ ಬರೆತರೆ, ಹೆತ್ತವ್ವ ತೊರೆದರೆ, ಮುತ್ತು ಮುಣ್ಣಾದರೆ ;
ಲೋಕ ಬೈಗು ಬೆಳಗು ಆಗುವುದು ಹೇಗೆ ?

೧ ಉತ್ತರೆಯು ಬರತಿಹರೆ, ಹೆತ್ತ ತಾಯೆತ್ತರಿಸಿಹರೆ
ಸತ್ಯಕುಂ ತಪ್ಪಿ-ನಡೆದಿಹರೆ ಲೋಕತಾ
ನೆತ್ತ ಸೇರುವುದು ! ಸರ್ವಜ್ಞ

(ಸರ್ವ, ವ. ೧೧೪೯)

೬೫೮ ಕುರುಡು ಚಿತ್ತೆ

೧ ಚಿತ್ತೆಯು ಬಲ್ಲರಿಯುಂತೆ

—(೧೨-೭೮) ನೇಮಿನಾಥ ಪುರಾಣ, ಕರ್ಣ ಪಾರ್ಯ

೬೫೯ ಕೊಟ್ಟ ಸಾಲ ಕೇಳದೆ ಹೋಯಿತು, ಮಾಡಿದ ಆರಂಬ ನೋಡದೆ ಹೋಯಿತು

೧ ಅನವೇಕ್ಷಣಾದಪಿ ಕೃಷಿಃ —(ಸಂ)

೬೬೦ ಎರೆ ನಾಚಿದೆಯೊ, ದೊರೆ ನಾಚಿದೆಯೊ

೧ ಎರೆಯನ್ನು ಉಳುವಂಗೆ । ದೊರೆಯನ್ನು ಓಲಿಸಿದಂಗೆ

ಉರಗ ಭೂಷಣನ–ನೆನೆವಂಗೆ ಭಾಗ್ಯವು
ಅರಿವಿಲ್ಲವೆಂದ ! ಸರ್ವಜ್ಞ

—(ಸರ್ವ. ಪ. ೨೩೯)

೬೬೧ ಹಣಜಿ ಛತ್ರವಿಲ್ಲ, ಅಣಬೆ ಸತ್ತಿಗೆ ಅಲ್ಲ

—(ಸರ್ವ, ಪ. ೧೨೯೨)

೬೬೨ ಕೋಂಕಣೀರ ಎಮ್ಮೆಗೆ ಕೊಡತಿ (ಹೋ ಮದ್ದು) ಪೆಟ್ಟು

೧ ಕೊಂಕಣೀರೆಮ್ಮೆಗೆ ಕೊಡತಿ ಮದ್ದೆಂಬಂತೆ

—(ಹ.ಕೀ.ತ. ಪು ೩೭೧)

೨ ಕೊಂಕಣೀರೆಮ್ಮೆಗೆ ಕೊರಡೇ ಮದ್ದೆಂಬಂತೆ

—(ಹ.ಕೀ.ತ. ಪು ೩೭೮ (ಉಗಾಭೋಗ)

೬೬೩ ಸಂಜೀವನ ತತ್ರ ಅಂದ್ರೆ ಸಂಜೀವನ ಪರ್ವತಾನೇ ತಂದ

೧ ಮದ್ದನಾವ್ ತರಹೇಳಿದರೆ ಕಿತ್ತದ್ರಿಯನು ತಂದ

— (೬–೩೬–೬೨) ತೊರವೆ ರಾಮಾಯಣ

೬೬೪ ಕಬ್ಬು ತಿನ್ನಕ್ಕೆ ಕೂಲಿ ಕೇಳಿದನಂತೆ

ಹೋಲಿಸಿ : ೧ ಕೂಲಿಗೆ ಸಕ್ಕಲೆಯುಂ ಮೆಲ್ಲುವಂದೆ

— (ಆ ೪೯–೫ ಪ) ತ್ರಿಷಷ್ಟಿ ಪುರಾತನ ಚರಿತ್ರಂ

೬೬೫ ಊರ ಗುದ್ದಲಿ ತಂದು ನಾಡ ಕಾಲುವೆ ಅಗೆದ

೧ ಊರ ಗುದ್ದಲಿಯನು ಕೊಂಡು ನಾಡ ಕಾಲುವೆಯ ತಿದ್ದುವರೆ

—(೬–೮) ಮೋಹನ ತರಂಗಿಣಿ

೬೬೬ ತಾನು ಮಾಡುವುದು ಉತ್ತಮ .... ಆಳು ಮಾಡುವುದು ಹಾಳು

೧ ಪೋಳಿಯ ತೆಕ್ಕೊಡು ಕಾಯಿಯ ಕೊಯ್ಕೊಡು
ಈಳಿಯ ನೆಟ್ಕೊಡು ಎಂಬವನೆ–ಬೈಸರಿಗೆ
ಆಳು ಮಾಡಿದ ಕೆಲಸ ಹಾಳು ಎಂಬ !

—(ಹೊನ್ನ, ಪು. ೧೪೦

೬೬೭ ಹಲವು ಸಮ್ಮಗಾರರು ಸೇರಿ ಚರ್ಮ (ತೊಗಲು) ಹದಗೆಡಿಸಿದರು

೧ ಹಲವು ತಲೆ ಬಹು ಬುದ್ಧಿ !

—(೧೦–೭೩) ಕೌಶಿಕ ರಾಮಾಯಣ

೬೬೮ ನಾಯಿ ತನ್ನಿಚ್ಛೆಯಂತೆ, ಸೇವಕ ಒಡೆಯನಿಚ್ಛೆಯಂತೆ

೧ ಸೇವಾ ಶ್ವವೃತ್ತಿಯ್ಯೈರುಕ್ತಾ ತ್ವೈರಸಮ್ಯ ಗುದಾಹೃತಮ್ ।
ಸ್ವಚ್ಛಂದ ಚರಿತಃ ಕ್ವಶ್ವಾ ವಿಕ್ರೀತಾತ್ಮಾ ಕೃಸೇವಕಃ

—(ಸಂ)

೬೬೯ ಸೇವೆ ನಾಯಿ ಪಾಡಿಗಿಂತ ಕಡೆ

೧ ಸೇವೆಯಿಂ ತನ್ನಿಚ್ಛೆಯೊಳ್ ಬರ್ದುಂಕುವ ಶುನಕಂ ಲೇಸು
—(೨೫ನೆಯ ಶ್ಲೋಕದ ತಾತ್ಪರ್ಯ (ಕರ್ಣಾಟಕ ಪಂಚತಂತ್ರ)

೨ ಸೇವಾವೃತ್ತಿ ಧರೆಯುಲಿ ಶ್ವಾನವೃತ್ತಿಯು, ಶ್ವಾನ ನಿಜ ಚಾರಿತ್ರ
ಸೇವಕನ ಸ್ವತಂತ್ರನು

—(೩೮–೫೮) ಕೌಶಿಕ ರಾಮಾಯಣ

೬೭೦ ಸನ್ನಿಗೆ ಸಾವಿರಾನೆ ಬಲ–ಸನ್ನಿಗೆ ಸಾವಿರಾಳು ಶಕ್ತಿ

೧ ಸನ್ನಿಸಾವಿರ ಕಾಲಾಳಿನ ಸತ್ವವೈ

—(೭೬) ಸೋಮೇಶ್ವರ ಶತಕ

೬೭೧ ಹುಟ್ಟಿರೋವಾಗ ಕೈಯಾಕೆ ಸುಟ್ಟುಗೋ ಬೇಕು

೧ ಪುಟ್ಟುಳ್ಳಂತೆ ಕಯ್ ಬೇಗುಮೋ

—(೭-೫೫) (೩–೨೨ ವ) ಶಾಂತಿ ಪುರಾಣ

೨ ಪುಟ್ಟಿರ್ದಂತೆ ಕೆಯ್ ಬೇಯುಲೇಕೆಯೋ ?

—(೩೭–೮) ಪಾರ್ಶ್ವನಾಥ ಪುರಾಣಂ

೩ ಸಟ್ಟುಗವಿರ್ದು ಕಯ್ಯ ಬೇಯಿಸಿ ಕೊಂಬುದನುವೆ ?

—(೨೫–೧೧೬) ರಾಮನಾಥ ಚರಿತ

೬೭೨ ತುಂಬಿದ ಲೆಕ್ಕಕ್ಕೆ ಮತ್ತೊಂದು ಎಂದು ಕಡೆಗಣಿಸುವಂತೆ

೧ ತುಂಬಿದ ಲೆಕ್ಕಕ್ಕೆ ಮತ್ತೊಂದು—(ಪ್ರಭುದೇವ)

೬೭೩ ನಾಣ್ಯದ ನೋಟವಿದ್ದ (ಬಲ್ಲ)ವನೇ ಸೆಟ್ಟಿ

೧ ಚಪ್ಪನ್ನ ದೇಶದ ನಾಣಯಂಗಳ ನೋಟ ತಪ್ಪದ ಚಪಲ
ಸೆಟ್ಟಿಗಳು —(ಕನಕದಾಸ ಪ್ರಶಸ್ತಿ–ಪು. ನ, ೯೩)

೬೭೪ ಸೆಟ್ಟಿ (ಕುಂತಲ್ಲೀ, ಇಳಿದಲ್ಲೀ) ಇದ್ದ ಕಡೆ ಪಟ್ಟಣ

೧ ಶೆಟ್ಟಿ ತಾ ಬೀಡು ಬಿಟ್ಟದ್ದೇ ಪಟ್ಟಣವು
—(ಹ. ಕೀ. ತ, ಕಿ. ೪೬೪)

೨ ಅರಸು ಬಿಟ್ಟಲ್ಲಿ ಪಟ್ಟಣ
—(ಪೂರ್ವ ಸಾಗರ ದರ್ಶನ ಸಂಧಿ–೫೦) ಭರತೇಶ ವೈಭವ

೩ ಸೆಟ್ಟಿ ಬಿಟ್ಟಲ್ಲಿ ಪಟ್ಟಣ—(೬–೪೩) ಪದ್ಮಾವತಿ ಚರಿತ್ರೆ

೬೭೫ ಸಲ್ಲದ ಹೊನ್ನಿಗೆ (ಬಡ್ಡಿ) ಒಟ್ಟವಿಲ್ಲ

೧ ಸಲೆ ಸಂದ ಹೊನ್ನಿಗೆ ಬಟ್ಟೆ ಉಂಟೇ
—(ಮೋಳಿಗೆ ಮಾರಯ್ಯನ ವಚನಗಳು)

೬೭೬ ಅಸಲಿಗೆ ಮೋಸ, ಲಾಭಕ್ಕೆ ಗುದ್ದಾಟ

೧ ಅಸಲು ಕಳೆದ ಬಳಿಕ ಲಾಭವುಂಟೇ ?
—(೧೧–೧೫) ಅಖಂಡೇಶ್ವರ ವಚನ

೬೭೭ ಸೂಜಿ ಚಿನ್ನವಾದರೆ ಹಾಗದ ಕಾಸು

೧ ಸೂಜಿ ಹೊನ್ನವದಾವಡೆ ನದೀ ರಾಜಲಕ್ಷ್ಮಿಯ ಬೆಲೆಯೇ ?
—ಸಾಳ್ವಭಾರತ

೬೭೮ ಬೆಲೆ ಬಿದ್ದ ಸರಕಿನಲಿ ಲಾಭವುಂಟೆ ?

೧ ಬೆಲೆ ಬಿದ್ದ ಸರಕಿನೊಳು ಲಾಭವುಂಟೆ—(ಕದಾ. ಕೀ.)

೬೭೯ ಮಾತೆಲ್ಲ ಹೋಲಿಕೆ, ಕೊಳಗೆ ಮಾತ್ರ (ಕಡಿಮೆ) ಓಚ್ಚಿ
ಮಾತಂ ನೋಡಿದರೆ ಮಾಣಿಕ್ಯ, ಮಾನ ನೋಡಿದರೆ ಓಚ್ಚಿ
ಸೆಟ್ಟಿಯು ಬಳ್ಳ ಕಿರಿದು, ಭಟ್ಟರ ಸೊಲ್ಲು ಕಿರಿದು
ಸೆಟ್ಟಿಯಾ ಬಳ್ಳ ಕಿರಿದೆ ?

೧ ಸೆಟ್ಟಿಯ ಬಳ್ಳಂ ಕಿಱಿದು
—(೧೨–೧೭೫ ವಿಕ್ರಮಾರ್ಜುನ ವಿಜಯಂ

೨ ನಮ್ಮ ಸೆಟ್ಟಿಯ ಮಾತೊಳ್ಳಿದಪ್ಪ ಬಳ್ಳಂ ಕಿಱಿದು
—(೬–೨೩೨) ಧರ್ಮಾಮೃತ

೩ ಮಾತೊಳ್ಳಿತು ನಮ್ಮ ಶೆಟ್ಟಿಯ ಬಳ್ಳಂ ಕಿರಿದು
—(೮–೧೨) ಸಮಯ ಪರೀಕ್ಷೆ

೬೮೦ ಅಕ್ಕಸಾಲೆ ಊರಿಗೊಕ್ಕಲೇ ?

೧ ಅಕ್ಕಸಾಲೆಯುನೂರಿಗೊಕ್ಕಲೆಂದೆನ ಬೇಡ
ಬೆಕ್ಕು ಬಂದಿಲಿಯು–ಒಡಿವಂತೆ ಊರಿಗವ
ರಕ್ಕಸನು ತಾನು । ಸರ್ವಜ್ಞ
— (ಸರ್ವಜ್ಞನ ಪದಗಳು ಪ. ೧೨೮೩)

೬೮೧ ಕುಟ್ಟಿ ಕುಟ್ಟಿ, ಕೊಟ್ಟವನು ಕೆಟ್ಟ

೧ ಕೊಟ್ಟಂ ಕೆಟ್ಟಂ
— ಪ್ರ. ೧೨. ಸಾಲು–೨೧–೧೦೩) ಶ್ರೀ ರಾಮಾಶ್ವಮೇಧ

೬೮೨ ತ್ರಿಣಯನ ಮುಕುಟವಾದರೂ ಅಕ್ಕಸಾಲೆ ಟೊಣೆಯದೆ ಬಿಡ—
ಹಣಕ್ಕೊಂದು ಈಸ, ಇಪ್ಪಣಕ್ಕೊಂದು ಬೇಳೆ

೧ ಪಣವಿಗೊಂದೀ ಸವಿ । ಪ್ಪಣಕೊಂದು ಬೇಳೆಯನು
ತ್ರಿಣಯನಾ ಮುಕುಟ-ವಾದರೂ ಅಕ್ಕಸಾಲೆ
ಟೊಣೆಯದೇ ಬಿಡನು । ಸರ್ವಜ್ಞ
—(ಸರ್ವ ವ. ೧೨೮೪)

೬೮೩ ಆಟಕ್ಕೆ ತಕ್ಕ ವೇಷ, ವೇಷಕ್ಕೆ ತಕ್ಕ ಭಾಷೆ, ಭಾಷೆಗೆ ತಕ್ಕ ಧ್ವನಿ

೧ ಬಹುರೂಪ ತೊಟ್ಟಾಡಿದ ದೇಹವೊಂದೆ
ವೇಷರೂಪಿನ ಪಲ್ಲಟವಲ್ಲದೆ ವೇಷಕ್ಕೆ ತಕ್ಕ
ಭಾಷೆ, ಭಾಷೆಗೆ ತಕ್ಕ ವೇಷ ( )

೭. ಗುಣಶೀಲ ಸ್ವಭಾವಗಳು

೬೮೪ ಅಗಸರ ಕಲ್ಲಾಗಿ ಸಾವಿರ ವರ್ಷ ಇರೋಕಿಂತ ಪೂಜೆಗಲ್ಲಾಗಿ ಮೂರು ದಿವಸ ಬಾಳಿದರೂ ಸಾಕು.

ಹೋಲಿಸಿ : ೧ ಲೋಕಂ ನುತಿಸುವಂದದಿಂ । ದಿನದೊಳಗೆ ಘಳಿಗೆ
ಬಾಳ್ದರೆ ಸಾಕು ಧರ್ಮದಿಂ

೨ ಶುನಿಯಂತೆ ಸರ್ವರಿಂದತಿ ತಿರಸ್ಕೃತರಾಗಿ ಬಾಳ್ದರೇಂ
ಚಿರಜೀವಿಯುಂ
—(ಶ್ರೀಮದ್ರಾಮಾಯಣ, ಅಯೋ.ಕಾಂ. ೯-೫೧)

೩ ಎರಡು ದಿನ ಬದುಕಿದರೆ ಸಾಲದೆ ಜನ್ಮ ಸಫಲತೆಗೆ
—ಕೌಶಿಕ ರಾಮಾಯಣ (೧೩-೪೦)

೪ ಶರಣರಲ್ಲಿ ಲೇಸೆನಿಸಿಕೊಂಡು ಒಂದು ದಿನ ಬಾಳಿದರೆ ಸಾಲದೆ?
—ಬಸವೇಶ್ವರ ವಚನ (೧೮೦-೧೮೧)

೬೮೫ ಎಲ್ಲ ಗುಣವೂ ಏಕತ್ರ ಇರೋದಿಲ್ಲ

೧ ನಹಿ ಸಂತ್ಯೇಕತ್ರ ಸರ್ವೇಗುಣಾಃ
— (ಸು)

೬೮೬ ಮಾಡಿ ಮನೆಗೆ ತಕ್ಕ ಮಡದಿ ಕೂಡು

೧ ಮನಿ ಬಿಚ್ಚಿ ಮೇಲೆ ಮಾಡಿಯು ಮಾಡು ।
ಮಾಡಿಗೆ ತಕ್ಕಂತ ಮಡದಿಯು ಕೂಡನ್ನಾ ಕೇಳೋ ಜಾಣ ।
—(ಕರ್ನಾಟಕ ಸಂಸ್ಕೃತಿ, ಲಾವಣಿ, ಪು, ೩೦)

೬೮೭ ಜೊತೆಗಾರ ಹೋಗಿ ವ್ಯಥೆ ಆರಂಭಿಸಿತು

ಹೋಲಿಸಿ : ೧ ಮಿತ್ರ ವಿಯೋಗಮದೆಂಬುದು
ಧಾತ್ರಿಯೊಳಾರ್ಗೆಯುಮಧಿಕ ದುಃಖೋದಯಮಂ

೬೮೮ ದೊಡ್ಡವರ ಸಂಗ ಗೆಜ್ಜೆ ಮೇಲಿನ ಲಿಂಗ

೧ ದೊಡ್ಡೋರ ಸಂಗ ಗೆಜ್ಜೆ ಮೇಗಳ ಲಿಂಗ

ಹಾರುವರ ಸಂಗ ಆಲವಂಗ । ತಮ್ಮಯ್ಯ
ದೊಡ್ಡೋರ ಸಂಗ ನೀ ಬಿಡಬ್ಯಾಡ
—(ಆವು; ಪು. ೨೮)

೬೮೯ ಮುಗುಳಿಯು ನೆರಳಿಗಿಂತ ನುಂಗುವ ನೆಗಳು ವಾಸಿ

೧ ಮುಗಳಿಯಾ ಮರದ-ನೆರಳಿಂದ ನುಂಗುವಾ
ನೆಗಳು ಲೇಸೆಂದ । ಸರ್ವಜ್ಞ
—(ಸರ್ವ, ಪ, ೧೨೬೦)

೬೯೦ ಹೂವಿನಿಂದ ನಾರು ಸ್ವರ್ಗ ಸೇ (ಮುಡಿಗೇ, ಮುಂಡೆಗೇ) ರಿತು.

೧ ಪುಷ್ಪಮಾಲಾನು ಷಂಗೇಣ ಸೂತ್ರಂ ಶಿರಸಿ ಧರ್ಯತೆ (ಸಂ)

೨ ಪೂವಂ ಕಟ್ಟಿದ ನೂಲುಂ ಮುಡಿಗಾದುದು
—(೮೭೬) ಕಂದಪದ್ಯ, ಬೊಪ್ಪಣ ಪಂಡಿತ

೩ ಹೂವಿಂದ ನಾರುಗತಿ ಪಡೆದಂತೆ
—(೬-೫೨) ಸೌಂದರ ಪುರಾಣಂ

೪ ಹೂವಿಂದ ನಾರೊಪ್ಪು
—(ಮದುವೆಯ ಸಂಭ್ರಮದ ಸಂಧಿ–೬೭) ಭರತೇಶ ವೆ ಭವ

೫ ಸೌರಭ್ಯ ಕುಸುಮ ಸಂಗದಿ । ನಾರುಂ ಸಲುವಂತೆ ಸುಗುಣ
ರತ್ನ ಕರಂಡ

೬೯೧ ತುಂಟ ತುಂಟರಿಗೆ ಗಂಟುಬಿದ್ದರೆ ಗಂ (ಬ) ಟಿ ಆಗತದ ಗಮ್ಮತ

೧ ತುಂಟ ತುಂಟರಿಗೆ ಗಂಟು ಬಿದ್ದರ ಗರದಿ ಆಗತದ ಗಮ್ಮತ
—(ಜನಾಂಗದ ಜೀವಾಳ, ಪು ೫೭)

೬೯೨ ಜನ್ಮ ನಾಯಿಯೂ ಹೊರೆಯುವುದಿಲ್ಲ,

ಹೋಲಿಸಿ : ೧ ಪೊರೆದೇಂ ಬಾಳನೆ ಪಂದಿ ನಾಯ್ಗಳೊಡಲಂ
—(೧೮) ಸೋಮೇಶ್ವರ ಶತಕ

೬೯೩ ಎಕ್ಕಡ ಕಾಲು ಕಚಿ ತು ಅಂತ ಅದನ್ನು ಕಚ್ಚಲಾದೀತೆ ?

ಹೋಲಿಸಿ : ೧ ನಾಯ್ ಕಚ್ಚಿದೊಡೊಡಗಚ್ಚಲ್ ಬೋಗುಟಿ
ಬೊಗುಟಿಲೇ, ಬಂದಪುದೇ
—(೯-೧೮೫, ಧರ್ಮಾಮೃತಂ)

೨ ಕಾಲಂ ಕಚ್ಚಿದ ನಾಯುಂ ಸೋಲವಿದೆಂದದರ ಕಾಲ ಕಚ್ಚಿದ
ರುಂಟೆ ? —(೯೨೫), ನೀತಿಸಾರ

೬೯೪ ಹೇಸಿಕೆ ಮೇಲೆ ಕಲ್ಲು ಹಾಕಿದರೆ ಮೋರೆ ಮೇಲೆ ಸಿಡಿಯುತ್ತೆ

೧ ಕೆತ್ತೆತ್ ಕಲ್ ಕಸಿಚಿತ್ ಮೂಡಕ್ ಪಾರಿಚಿಟ್ಟುವ
— (ಕೊಡಗು ಗಾದೆ)

೬೯೫ ಕೊರಳಿಗೆ ಸುತ್ತಿದ ಹಾವು ಕಚ್ಚದೆ ಬಿಡುತ್ಯೆ ?

೧ ಕೊರಳ ಸುತ್ತಿದ ಹಾವು ಕಚ್ಚದೆ ಮರಳುವುದೆ ?
—(೧-೩೯) ಅನುಭವಾಮೃತಂ

೨ ಕುತ್ತಿಗೆಗೆ ಹಾವ್ ಸುತ್ತಿಯಿದ್ದುದು ಮತ್ತೆ ಕಚ್ಚದೆ ಬಿಡುವುದೇ?
—(೨೩-೨೨) ಜ್ಞಾನಸಿಂಧು

೬೯೬ ದುಷ್ಟನ ಸಂಗ ಕೇಡಿಗೆ ಕಾರಣ

೧ ದುರ್ಜನರನೊಳಕೊಂಡವರ್ಗೆ ಕೇಡಡಸುವುದು ನಿಜ ನಾಣ್ನುಡಿ)
—(ಸಂ. ೪೦ ಪ. ೩೩) ಚನ್ನಬಸವ ಪುರ

೬೯೭ ನಾಯು ಸಂಗ ಶಾಲೆ ಕೇಡು

೧ ನಾಯು ಸರಸ ಸೀರೆಯು ಕೇಡು,
ಮಾಯೆಯು ಸಂಗ ಹರಣದ ಕೇಡು
—(೧೧೩) ತೋಂಟದ ಸಿದ್ದೇಶ್ವರ ವಚನ

೬೯೮ ನೀಚರಿಗಿಂತ ಈಚಲು ವಾಸಿ

೧ ನೀಚರಾ ನೆರೆಯಿಂದ । ಈಚಲದ ಮರ ಲೇಸು
—(ಸರ್ವ. ಪ. ೭೫೧)

೬೯೯ ಸೀಗೆ ಒಳಗಿನ ಬಾಳೆ ಹಾಗೆ

೧ ಸೀಗೆಯೊಳಗಣ ಬಾಳೆ

—(೧೨-೧೩) ಹರಿಶ್ಚಂದ್ರ ಕಾವ್ಯಂ

೨ ಸೀಗೆಯೊಳಗಣ ಬಾಳೆಯಂತೆ

—(ಸಂ. ೩-೧೨) ಚೆನ್ನಬಸವ ಪುರಾಣ

೭೦೦ ಹಲ್ಲುಗಳ ಮಧ್ಯೆ ನಾಲಗೆ ಇದ್ದ ಹಾಗೆ

೧ ದಂತ ಪಂಕ್ತಿಯು ನಡುವೆ । ಎಂತಿಪ್ಪುದದು ಜಿಹ್ವೆ ।
ಅಂತು ದುರ್ಜನರ-ಬಳಸಿನಲಿ ಸಜ್ಜನನು
ನಿಂತಿಹನು ನೋಡ । ಸರ್ವಜ್ಞ

— (ಸರ್ವಜ್ಞನ ಪದಗಳು ೭೩೬)

೭೦೧ ಕಳ್ಳ ಕಳ್ಳನಿಗೆ ನಂಟು, ಹುಳಿ ಮೊಣಸಿಗೆ ನಂಟು

೧ ಕಳ್ಳ ಕಳ್ಳನಿಗೆ ನಂಟು, ಕಪಲೆ ಬೆಕ್ಕಿಕೆ ಜೋಡು,
ಬೆಳ್ಳುಳ್ಳಿ ಜೋಡು ಅಗ್ರಣಿಗೆ —(ಮಹಲಿಂಗಸ್ವಾಮಿ)

೨ ಉಗ್ರಾಗ್ನಿಗಾಳಿಯೊಡಗೂಡಿದವೋಲ್

— (ಪ್ರ. ೧೮೫-೧೦)-ವರ್ಧಮಾನ ಪುರಾಣಂ

೭೦೨ ಡೊಂಕ ಸೌದೆಗೆ ಬೆಂಕಿ ಮದ್ದು

೧ ಪುಳ್ಳಿಯು ಕೊಂಕಂ ಕಿಚ್ಚು ತಿದ್ದುವಂತೆ

೨-೮೦)-ಪಾರ್ಶ್ವನಾಥ ಪುರಾಣಂ

೭೦೩ ತಾಗದೆ ಬಾಗದು, ಬಿಸಿಯಾಗದೆ ಬೆಣ್ಣೆ ಕರಗದು

೧ ಬಿಸಿಯು ಕಂಡರೆ ಬೆಣ್ಣೆ ಕರಗಿವಲ್ಲದೆ ಮಾಣದು

- (೪೭೩) ಸಿದ್ದೇಶ್ವರ ವಚನ

೨ ತಾಗಿದಲ್ಲದೆ ಬಾಗರುಗ್ರರು

—(ರಾಜೇಂದ್ರ ಗುಣವಾಕ್ಯ ಸಂಧಿ-೪) ಭರತೇಶ ವೈಭವ

೩ ಪಾಪಕಗೆ ನವನೀತಂ ಕರಗದಿರ್ಪುದೇ ?

(ಅಯೊ. ಕಾಂ ೯-೯) ಶ್ರೀಮದ್ರಾಮಾಯಣ

೭೦೪ ಮಂತ್ರಕ್ಕೆ ಮಾವಿನ ಕಾಯಿ ಉದುರೀತೆ

ಹೋಲಿಸಿ : ೧ ಪಂಚಾಂಗಮಂ ಪೇಟಿ ಮಾವಿನ ಪಣ್ ಬೀಟ್ಟಿದೆ ?

—(೭-೫೭) ದಿವ್ಯಸೂರಿ ಚರಿತೆ

೭೦೫ ಕಬ್ಬಿಣದ ಜೊತೇಲಿ ಸೇರಿದ ಯಜ್ಞೇಶ್ವರನಿಗೂ ಮೂರು ಪೆಟ್ಟು

೧ ಲೋಹಸಂಗದಿಂದಗ್ನಿ ಬಡಿವಡೆದಂತೆ

— (೧೧೬೯)–ಪ್ರಭುದೇವರ ವಚನಗಳು

೨ ಲೋಹಸಂಗದಿಂ ಕಿಚ್ಚು ಬಡಿಪಡೆದುದು

(೯–೪೧। ಸಿದ್ಧರಾಮ ಚಾರಿತ್ರ

೩ ಬೆಂಕಿ ಕಬ್ಬಿಣ ಸಂಗ ಮಾಡಲು ಬೆಂಕಿಗೆಯು ಕಬ್ಬಿಣಕ್ಕೆ ಪೆಟ್ಟು

—(೫-೮೭)–ಜ್ಞಾನಸಿಂಧು

೪ ಬೆಂಕಿ ಕಾಂತಿ ಪಡೆದಂ ನಿಜ ಭಾವವನಿತ್ತ ಹೇತುವಿಂ
ಕಬ್ಬುನ ಕೊಲ್ಡು ಚಮ್ಮಟಿಕೆ ಪೆಟ್ಟಿಗೆ ಸಿಲ್ಕಿದುದಲ್ತೆ

—ಸನ್ಮತಿ ಶತಕ

೭೦೬ ದುರ್ಜನರ ಸಹವಾಸದಿಂದ ಸಜ್ಜನ ಕೆಟ್ಟ

೧ ದುಷ್ಟಜನ ಸಂಗದಲಿ ಸಜ್ಜನ ಕೆಟ್ಟ

—(೧೬–ಪಲ್ಲವಿ) ಕೌಶಿಕ ರಾಮಾಯಣ

೭೦೭ ಸಂಗತಿ ದೋಷ ಕೊರಳಿಗೆ ದೊಣ್ಣೆ

೧ ಅಸಂಗ (ಅಸತೀ) ಸಂಗ ದೋಷೇಣ ಸತ್ಯಾಶ್ಚ ಮತಿ ವಿಭ್ರಮಃ
ಏಕರಾತ್ರ ಪ್ರಸಂಗೇನ ಕಾಷ್ಠಂ ಕಂಠಾವಲಂಬನಂ (ಸಂ)

ಹೋಲಿಸಿ : ೨ ಸಂಸರ್ಗ ಜಾ ದೋಷಗುಣಾ ಭವಂತಿ

—(೭೪) ಕರ್ಣಾಟಕ ಪಂಚತಂತ್ರ

೭೦೮ ಹಂದಿಯೊಂದಿಗೆ ಆಡಿ ಕೊಂದಗರು ಹೇಲುತಿಂತು

೧ ಮೊದಲಿಂ ಪಂದಿಗಳೊಡನಾಡಿದ ಕಱುವುಂ ಪಂದಿಯಂತೆ ಪೇಲಂ ತಿಂತೆಂಬುದು ನಾಣ್ಣುಡಿ —(೨-೭೬) ಧರ್ಮಾಮೃತಂ

೭೦೯ ಲಂಡ ಅತ್ತಿಗೆ ಭಂಡ ಆಳಿಯ

ಹೋಲಿಸಿ : ಮೂಕೊಜಿತಿ ಮೋಟಕೆ ಮೋಹಿಸುವ ತೆಱಂ
೨೫-೨೭) ಸಾಳ್ವಭಾರತ

೭೧೦ ಸಮಾನತೆ ಇದ್ದ ಬಳಿ ಸ್ನೇಹ

೧ ಸಮಾನ ಶೀಲಾ ವ್ಯಸನೇಷು ಸಖ್ಯಂ—(ಸು)

೨ ಕಳಿಸಮಾನ ಶೀಲರ್ಗಕ್ಕುಂ
—(೯-೨೫) ನೇಮಿನಾಥ ಪುರಾಣಂ

೭೧೧ ತೊಡೆ ನೋಕಿದ ನಾಯಿ ಒಡೆಯನ ಗುರುತರಿಯದು

೧ ಹುಚ್ಚುಗೊಂಡ ನಾಯಿ ಬಲ್ಲುದೇ ಸಾಕಿದೊಡೆಯನನು
—ಕಲಿದೇವಯ್ಯ

೭೧೨ ಅನೆ ಹೋದದ್ದೇ ಬೀದಿ, ಹಾವು ಹರಿದದ್ದೇ ಮಾರ್ಗ

೧ ಶ್ರುತಿರ್ವಿಭಿನ್ನಾ ಸ್ಮೃತಯಶ್ಚ ಭಿನ್ನಾ ನೈಕೋ ಮುನಿರ್ಯಸ್ಯ ವಚೋಽ ಪ್ರಮಾಣಮ್

ಧರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಂ ಮಹಾಜನೋ ಯೇನ ಗತಃ ಸಪಂಥಾ —(ಸಂ)

೨ ಮಹಾಜನಂ ನಡೆದುದು ಸತ್ಪಥಂ
— (೧೫-೬೮) ಸಮಯ ಪರೀಕ್ಷೆ

೩ ಹಲವರು ನಡೆದುದೆ ಮಾರ್ಗ
—(ಭೀ. ಪ ೯-೨೬) ಕರ್ಣಾಟ ಭಾರತ ಕಥಾಮಂಜರಿ

೪ ಐವರು ನಡೆವ ಪಥ ರಾಜಪಥ ।
ಐವರು ನುಡಿದುದೇ ವೇದಾರ್ಥ ।
...ಐವರ ಗೋಷ್ಠಿಯಲ್ಲಿ ಪುರಂದರ ವಿಠಲನಿಪ್ಪ
—(ಪುರಂದರ ಸುಳಾದಿ) ಪು. ೩೮೫ ಹ.ಕೀ. ತ.

೫ ಮದ್ದಾನೆ ಹೋದುದೇ ಬೀದಿ
—(೩–೧೦೬) ಪುರಂದರ ದಾಸರ ಕೀರ್ತನೆಗಳು

೬ ಆನೆ ಹೋದುದು ಬೀದಿಯಲ್ಲವೆ ಜಗದೊಳು
—ನಂದಿ ಮಹಾತ್ಮೆ

೭೧೩ ಹತ್ತು ಜನ ನಡೆದದ್ದೇ ರಾಜಪಥ

೭೧೪ ಹತ್ತರು ತುಳಿದದ್ದೇ ಹಾದಿ, ಮಹಾನುಭಾವರು ಮಾಡಿದ್ದೇ ಪದ್ಧತಿ

೭೧೫ ಸಾವಿರ ಸುಳ್ಳನ ಮಗ ಕೋಟಿ ಸುಳ್ಳ

೧ ಕೋಟಿ ಸುಳ್ಳನ ಮಗ ಅವ ಶತಕೋಟಿ ಸುಳ್ಳ
—(೮-೬೧) ಜ್ಞಾನಸಿಂಧು

೭೧೬ ಸುಳ್ಳು ಮಾತು ಕೆಸರಿನಲ್ಲಿ ಮುಳ್ಳು ತುಳಿದ ಹಾಗೆ

೧ ಒಳ್ಳೆಯನು ಇರದೂರು । ಕಳ್ಳನೊಡನಾಟವೂ
ಸುಳ್ಳನಾ ಮಾತು – ಇವು ಮೂರು, ಕೆಸರೊಳಗೆ
ಮುಳ್ಳು ತುಳಿದಂತೆ । ಸರ್ವಜ್ಞ
—(ಸರ್ವಜ್ಞನ ಪದಗಳು ೧೦೮೧)

೭೧೭ ಮಾತಿಗೆ ಮಲಕಿಲ್ಲ, ನೀತಿಗೆ ತೊಡಕಿಲ್ಲ

೧ ಮಾತಿಗೆ ಮಲಕಿಲ್ಲ ನೀತಿಗೆ ತೊಡಕಿಲ್ಲ
ಸಾಸ್ವಿ ಕಾಳೀಗೆ ಹುಳುಕಿಲ್ಲ–ಅತ್ತಿ ಮನಿ
ಸೋಸಿ ನಡೆದರು ಅರಿಕಿಲ್ಲ —(ಜಾ.ಗೀ, ಪು. ೭೭)

೭೧೮ ಇರುವೆ ಗೂಡಿಗೆ ಕಿಚ್ಚಿಟ್ಟ ಹಾಗೆ

೧ ಇರುವೆಯ ಗೂಡಿಗಿಕ್ಕಿದ ಕಿಚ್ಚಿನಂತೆ
—(೩೪-೧೦೮) ನೇಮಿ ಜಿನೇಶ ಸಂಗತಿ

೭೧೯ ನಂಜು ಮರವಾದರೂ ನಟ್ಟವನು ಕಡಿಯಬಾರದು

೧ ವಿಷವೃಕ್ಷೋಽಪಿ ಸಂವರ್ಧ್ಯ ಸ್ವಯಂ ಛೇತ್ತುಮಸಾಂಪ್ರತಂ

೭೨೦ ಇಕ್ಕಲಾರದ ಕೈ ಎಂಜಲು, ಹುಡಿಗೆ ಮಾಡಿದ ಅನ್ನಗಿಂಜಲು
ಇಕ್ಕಲಾರದ ಕೈನ ಎಂಜಲಾಗ್ಯೆತೆ ಅಂದರಂತೆ

೧ ಇಕ್ಕಲಾರೆ ಕೈ ಎಂಜಲು —(ಪುರಂದ. ೧-೧೩೧-೨)

೨ ಇಕ್ಕಲಾರದ ಕೈ ಎಂಜಲು, ಚಿಕ್ಕಮಕ್ಕಳು ಅಳುತಾವೆ ಹೇಗೊ
ದಾಸಯ್ಯ —(ವೃ.ದಾ. ೨೨೬). ಹ.ಕೀ.ತ.

೭೨೧ ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ

೧ ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ
ಕೊಟ್ಟು ನಾ ಕೆಟ್ಟೆನೆನಬೇಡ-ಅದು ಮುಂದೆ
ಕಟ್ಟಿದಾ ಬುತ್ತಿ ಸರ್ವಜ್ಞ —(ಸರ್ವ, ಪ. ೫೪೦)

೭೨೨ ಕೊಟ್ಟವನಿಗೆ ಬಡತನ ಬರಲ್ಲ, ಕೊಡದೆ ಇದ್ರೆ ಸಿರಿತನವಿಲ್ಲ

೧ ಕೊಟ್ಟಂಗೆ ಬಡತನಂ ಬಂದಪುದೇ
—(೧-೯೭) ರಾಜಶೇಖರ ವಿಳಾಸಂ

೭೨೩ ಕೊಡುವ ಕೈ ಮೇಲೆ, ಕೊಂಬುವ ಕೈ ಕೆಳಗೆ

೧ ಏಕೇನ ತಿಷ್ಠತಾ ಧಸ್ತಾದನ್ಯೇನೋಪರಿ ತಿಷ್ಠತಾ
ದಾತೃಯಾಜಕಯೋರ್ಭೇದಃ ಕರಾಭ್ಯಮೇವ ಸೂಚಿತಃ
—(ಸು)

೨ ಕೊಳ್ವನ ಕೆಯ್ ಕೆಳಗಪ್ಪುದುಂ ಕುಡುವನ ಕೆಯ್
ಮೇಲಪ್ಪುದುಂ —(ಪು. ೧೫೭-೨೫ವ) ಜೀವ ಸಂಬೋಧನಂ

೩ ಕೊಡುವ ಕೈ ಮೇಲು ಕೊಂಬುವ ಕೈ ಕೆಳಗೆ
--(ತೀರ್ಥೇಶ ಪೂಜಾಸಂಧಿ-೧೧೧) ಭರತೇಶ ವೈಭವ

೭೨೪ ಕೊಡುವ ದಾನಕ್ಕೆ ಇಂದು ನಾಳೆ ಎಂದೆನಬೇಡ

೧ ಈಗ ಮಾಡುವ ಧರ್ಮ ನಾಳೆ ಎಂದೆನಬೇಡ

—(೨-೧೮೦) ಪುರಂದರ ದಾಸರ ಕೀರ್ತನೆಗಳು

೭೨೫ ಜೀ (ದೀ) ನನ ಸಿರಿಗಿಂತ ದಾನಿಯ ಬಡತನ ಲೇಸು

೧ ಚಾಗಿಯ ಬಡತನಮುಂ ಖಳನ ಸಿರಿಯಿಂಸಗ್ಗಳ ಮಲ್ತೇ

೨ ಗುಣಹೀನನ ಸಿರಿಯಿಂದಂ ಗುಣಿಗಳ ಬಡತನವೇ ನಾಡೆಯುಂ ಲೇಸಲ್ತೆ (ಹೋ)

—(೯-೧೮೨) ರಾಮಚಂದ್ರ ಚರಿತ ಪುರಾಣಂ

೭೨೬ 'ದೇಹಿ' ಎಂದವನಿಗೆ 'ನಾಸ್ತಿ' ಎನಬಾರದು

೧ ದೇಹಿಯೆಂದವರಿಗೆ ನಾಸ್ತಿಯನಲಾಗದು

—ವಿವೇಕ ಚಿಂತಾಮಣಿ

೨ ದೇಹಿಯೆಂದರೆ ನಾಸ್ತಿಯೆನ್ನ ಬೇಡ

—(೫-೧೦೧) ಪುರಂದ. ಕೀ,

೭೨೭ ಸಮುದ್ರಕ್ಕೆ (ಕೆರೆಗೆ) ನೀರು ಹೊತ್ತ ಹಾಗೆ

೧ ತೊಱೆಗೆ ನೀರಡಕಲುಂ

—(ನವಮ-೧೮೪) ವಿಕ್ರಮಾರ್ಜುನ ವಿಜಯಂ

೨ ಪಾರಾವಾರಕ್ಕೆ ಜಡರ್ ನೀರನಡುಕುವ ತೆಱಂ

—(೮-೧೧೮) ಶಾಂತಿ ಪುರಾಣಂ

೩ ತೊಱೆಗೆ ನೀರನಡುಕಿದರ್ —(೧೦-೬೭) ಧರ್ಮಾಮೃತಂ

೭೨೮ ಮಾಡಿದವರಿಗೆ ಮಾಡಿದಷ್ಟು, ನೀಡಿದವರಿಗೆ ನೀಡಿದಷ್ಟು

೧ ಮಾಡಿದವರಿಗೆ ಮಾಡಿದಷ್ಟು ಎಂಬ ಗಾದೆ

—(೩-೨೦-೭) ಕೈವಲ್ಯ ಕಲ್ಪವಲ್ಲರಿ

೭೨೯ ಇಟ್ಟು ಕುದಿಯ ಬಾರದು, ಕೊಟ್ಟು ಹಂಗಿಸ ಬಾರದು

೧ ಕೊಟ್ಟು ಕುದಿಯಲು ಬೇಡ ಮಾಡಿ ಹಂಗಿಸಬೇಡ
ಇಷ್ಟುಂಡರೆಂದು ಎನಬೇಡ । ಇವು ಮೂರು
ಮುಟ್ಟುವುದು ಶಿವನ ಬಳಿಯಲ್ಲಿ
—(ಹಳ್ಳಿ ಹಾ. ಪು. ೧೪೫)

೨ ಕೊಟ್ಟ ದಾನವನು ಹೇಳಿಕೊಳ್ಳುವುದು ।
ಇಟ್ಟ ಅನ್ನವ ಹಂಗಿಸಿ ನುಡಿವುದು
— (ಗುರುರಾಮ ವಿಠಲ)

೭೩೦ ಅನ್ನದಾನಕ್ಕಿಂತ ಮಿನ್ನದಾನವಿಲ್ಲ

೧ ಅನ್ನದಾನಗಳಿಂದ ॥ ಮಿನ್ನ ದಾನಗಳಿಲ್ಲ ।
ಅನ್ನಕ್ಕೆ ಮಿಗಿಲು ಇನ್ನಿಲ್ಲ, ಜಗದೊಳಗೆ
ಅನ್ನವೇ ಪ್ರಾಣ । ಸರ್ವಜ್ಞ —(ಸರ್ವ. ಪ. ೬೧೭)

೨ ಅನ್ನದಾನದಿಂದುಜ್ಜೀವ ದಾನಗಳಿಲ್ಲ
— (ಸಂ. ೨೪-೫) ಶಿವತತ್ತ್ವ ಚಿಂತಾಮಣಿ

೩ ಅನ್ನದಾನದಿಂ ಮೇಲಾದ ದಾನವುಂಟೆ ?
—(ಸಂ. ೫೨–೪೨) ಚೆನ್ನಬಸವಪುರಾಣ

೭೩೧ ಅನ್ನದಾನಕ್ಕೆ ಸಮಾನವಿಲ್ಲ ...

೧ ಅನ್ನದಾನಂ ಮಹಾದಾನಂ —(ಸಂ)

೨ ಅನ್ನಾತ್ಪರತರಂ ಲೋಕೇ ನ ಭೂತೇ ನ ಭವಿಷ್ಯತಿ —(ಸಂ)

೩ ದಾನದೊಳನ್ನಮೆ ಸಾರಂ ದೀನಾನಾಥರ್ಗೆ ತುಷ್ಟಿದಾನಂ
—(ಕ. ಶಾ. ಸಾಂ, ಅ. ಪು. ೪೫೦)

೪, ದಾನದೊಳನ್ನಮೆ ಸಾರಂ —(ಸೊರಟೂರಿನ ಶಾಸನ,
ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ ೧೧-೧೬೫)

೭೩೨ 'ಸತ್ತೇನು' ಎಂಬುವವರಿಗೆ 'ಉಂಬೇನು' ಅನ್ನುವಷ್ಟು ಅನ್ನ

ಹೋಲಿಸಿ : ೧ ಸಾವ ಕುದುರೆಗೆ ಹುಲ್ಲ ನಡುಕಿದಂತೆ

—(ಗುರುಬಸವ)

೭೩೩ ಅನ್ನ ಹಾಕಿದ ಮನೆ ಹಾಳು, ದೀಪ ಹಚ್ಚಿದ ಮನೆ ಬಾಳು

ಹೋಲಿಸಿ : ೧ ಇಲಿ ಹೆಗ್ಗಣ ಹೆಚ್ಚಿದ ಮನೆಯುಂ ।
ಹಲವರು ಬಂದುಂಡು ಹೋಗುವ ಮನೆಯುಂ ॥
ಕಲಹಂ ಹೆಚ್ಚಿದ ಮನೆಯುಂ ಬಲು ಬೇಗನೆ
ಕೆಟ್ಟು ಪೋಪುದಯ್ಯ ಚೂಡಾರತ್ನ ॥

—(ನೀತಿಸಾರ)

೭೩೪ ತಾಳುವಿಕೆಗಿಂತ ತಪವು ಇಲ್ಲ

೧ ತಾಳುವಿಕೆ ಗಿಂತನ್ಯ ತಪವು ಇಲ್ಲ । ಕೇಳಬಲ್ಲವರಿಗೆ
ಹೇಳುವೆನು ಸೊಲ್ಲ (೫೯)

—ಶ್ರೀ ವಾದಿರಾಜ ಸ್ವಾಮಿಗಳ ಕೃತಿಗಳು

೭೩೫ ಆತುರಗಾರನಿಗೆ ಬುದ್ಧಿ ಮಂಕು, ಆತುರದಿಂದ ಅನರ್ಥ

ಹೋಲಿಸಿ : ೧ ಕಾರ್ಯಾತುರನಱಿಗುಮೆ ಹಾನಿವೃದ್ಧಿಗಳ ಭಂಗಿಗಳಂ

—(ಪ, ೧೦೪ ಸ.ಆ.ಶಾಂತೀಶ್ವರ ಪುರಾಣಂ

೨ ಕ್ರಿಯಾತುರ ನದೆಂತಱಿವಂ ಸಮಯೋಚಿತಂಗಳಂ

—(೪–೧೧೦) ಕುಸುಮಾವಳಿ

೭೩೬ ದಯವಿಲ್ಲದ ಧರ್ಮವಿಲ್ಲ

೧ ದಯವಿಂದ ಬಿಟ್ಟು ಧರ್ಮವಿಲ್ಲ (೨) ಸಕಳೇಶ ಮಾದರಸ
ವಚನಗಳು

೨ ದಯವಿಲ್ಲದ ಧರ್ಮವಾವುದಯ್ಯ...ದಯವೇ ಧರ್ಮದ
ಮೂಲವಯ್ಯ (೨–೨೪೭) —ಬಸವೇಶ್ವರ ವಚನ

೩ ದಯಾಮೂಲಂ ಧರ್ಮಂ —(ಯಶೋದರ ಕಾವ್ಯಂ)

೪ ದಯಾಮೂಲವೆ ಧರ್ಮಂ
—(೧೧-೩೯ವ) ಧರ್ಮ ಪರೀಕ್ಷೆ

೨೩೭ ಅಳಿಯುವುದು ಕಾಯ, ಉಳಿಯುವುದು ಕೀರ್ತಿ

೧ ಕಾಯ ವಿದಳಿವುದಗ್ಗದ ಕೀರ್ತಿಯುಳಿವುದು
—(ಉ.ಪ. ೯–೭೩) ಕರ್ಣಾಟ ಭಾರತ ಕಥಾಮಂಜರಿ

೨ ಅಳಿವವೊಡಲಿದು ಅನಿಸಾಗರವಳಿಯಲುಳಿವುದು ಕೀರ್ತಿ
—(ಉ.ಪ. ೬–೪) ಕರ್ಣಾಟ ಭಾರತ ಕಥಾಮಂಜರಿ

೩ ಅಳಿವುದೊಡಲು, ಜಸವಳಿ ಜಸವೆರಡೆ ನಿಲುವವು
—(೬-೬೩) (೯-೫೩) ಸೊಬಗಿನ ಸೊಸಿ

೪ ಅಳಿವುದೊಡಲು ಉಳಿವುದು ಕೀರ್ತಿಯುಪಕೀರ್ತಿ
—(೮–೮೫) ನೇಮಿಜಿನೇಶ ಸಂಗತಿ

೫ ಉಳಿವುದು ಕೀರ್ತಿಯುಳಿವುದೊಡಲು
—(೨೮–೩೧) ನೇಮಿಜಿನೇಶ ಸಂಗತಿ

೬ ಅಳಿವುದು ಕಾಯವು ಉಳಿವುದೊಂದೇ ಕೀರ್ತಿ
—(೨-೪೫) ಪುರಂದರದಾಸರ ಕೀರ್ತನೆಗಳು

೨೩೮ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು

೧ ಮೂರ್ತಿ ಸಣ್ಣದಾದರೂ ಕೀರ್ತಿ ಜಗದಲಿಪ್ಪುದು
—(೧೪–೧೭) ಅಖಂಡೇಶ್ವರ ವಚನ

೨೩೯ ಅಪಕಾರ ಮಾಡಿದವರಿಗೂ ಉಪಕಾರ ಮಾಡಬೇಕು

೧ ತನಗಪಕಾರಂ ಗೆಯ್ದಂಗನವರತಂ ಲೇಸನೆಸಗುವುದು ಸನ್ಮಾರ್ಗಂ
—(೮–೨೦೪) ಅಭಿನವ ದಶಕುಮಾರ ಚರಿತ

೨ ಅನುಜ ಕೇಳಪಕಾರಿ ಜನದಲಿ
ನೆನೆವುದುಪಕಾರವನು; ಗುಣಹೀ
ನನಲಿ ಗುಣವನು ತೋರುವುದು ಗರುವರಿಗೆ ತೊಡಿಗೆಯಿದು
—(ಆ.ಪ. ೨೦–೧೩) ಕರ್ಣಾಟ ಭಾರತ ಕಥಾಮಂಜ

೭೪೦ ಪರೋಪಕಾರದಂಥ ಪುಣ್ಯವಿಲ್ಲ, ಪರಪೀಡೆಯಂಥ ಪಾಪವಿಲ್ಲ

೧ ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ
—(ಮಹಾಭಾರತ)

೭೪೧ ಉಪಕಾರಕ್ಕೆ ಅಪಕಾರ ಮಾಡಿದಹಾಗೆ

೧ ಉಪಕಾರಿಗೆ ಮದದೂಷಿತನಪಕಾರಂ ಗೆಯ್ವನೆಂಬುದಚ್ಚರಿಯೆ ?
—(೪-೨೦) ಆದಿಪುರಾಣಂ

೭೪೨ ಉಪಕಾರವರಿಯದವನನ್ನು ನಿಪುಣನೆಂದು ಹೇಳಬೇಡ

೧ ಉಪಕಾರ ಮನಱಿಯದಾವನುಂ ಮಾನಸನೇ
—(೫-೯೯) ಆದಿಪುರಾಣಂ

೭೪೩ ಉಂಡಮನೆಗೆ ಎರಡು ಬಗೆಯಬೇಡ, ತುಂಬಿದ ಕೆರೆಗೆ ಕಲ್ಲು ಹಾಕಬೇಡ

೧ ಕೂಡಿದಂಗೆರಡಂ ತಾಂ ಬಗೆನಾತನುಂ ನರಕದೊಳ್ ಬೀೞ್ವನ್ನೆಗಂ ಸಂದೆಯಂ —(ಶಬ್ದಮಣಿ ದರ್ಪಣಂ)

೨ ಉಂಡಮನೆಗೆರಡನ್ನು ಬಗೆಯುತಿಪರು
—(ಪು. ೨೩೨) ಹ.ಕೀ.ತ.

೩ ಉಂಡಮನೆಗೆರಡನ್ನು ಬಗೆಯುವಾತನೆ ಹೊಲೆಯ
—(ಪು. ೪೪೫) ಹ.ಕೀ.ತ.

೪ ಉಂಡಮನೆಗೆರಡೆಣಿಪ ನುರಿದು ಬಿದ್ದರೆ ಏನು
(ಪು. ೧೯೮) ಹ.ಕೀ.ತ.

೫ ಉಂಡಮನೆಗೆರಡನ್ನು ಬಗೆಯುವಾತನೆ ಮೂರ್ಖ
—(ಪು. ೨೧೯) ಹ.ಕೀ.ತ,

೬ ಉಂಡಲ್ಲಿಗೆರಡ ಬಗೆವುದಾ ಕ್ಷತ್ರಿಯ ಪಿಂಡ
(೩೭–೮೬) ರಾಮನಾಥ ಚರಿತ

೭ ಉಂಡಮನೆಗೆರಡ ಬಗೆಯದಿರು
—(ಸಂ ೧೨–೧೯) ಬಿಜ್ಜಳ ಚರಿತ್ರೆ

೭೪೪ ಏರಿದ ಏಣಿ ಕಾಲಲ್ಲಿ ಒದೆದ

ಹೋಲಿಸಿ : ೧ ಬೆಟ್ಟವ ನೆಮ್ಮಿ ಕಟ್ಟಿಗೆಯು ತಳ್ಳುವುದು ಅದಾವ
ಅಚ್ಚರಿ ? —ಮರಳುಶಂಕರದೇವ

೨ ಪೆರ್ಬೆಟ್ಟಮಂ ನಂಬಿ ಮೂಡೆಯು ನೊದೆವು
ದಾವುದರಿದು (೮–೪೨) —ಸೌಂದರಪುರಾಣಂ

೭೪೫ ಕೆರೆಯಲ್ಲುಂಡು ತೊರೆ ಹೊಗಳಿದಂತೆ

೧ ಕೆರೆಯಲುಂಡು ತೊರೆಯ ಹೊಗಳುವರೆ
—ಅಲ್ಲಮಪ್ರಭು

೨ ಕೆಱೆನೀರನುಂಡು ತೋಱೆಯಂ ಪೊಗಳ್ವಂತೆ ಕೃತಘ್ನರ್
—(೧೦) ಗುರುಮೂರ್ತಿ ಶಂಕರಶತಕ

೭೪೬ ತಾನು ನೆಟ್ಟ ಬೀಳು ತನ್ನ ಎದೆಗೆ ಹಬ್ಬಿತು

ಹೋಲಿಸಿ : ತಾನಿಟ್ಟ ಬೇತಾಳ ತನ್ನ ತಿಂದಿತು
—(೧೦೨೦) (೯೬೫) ಪ್ರಭುದೇವರ ವಚನಗಳು

೭೪೭ ಹಾವಿಗೆ ಹಾಲೆರೆದ ಹಾಗೆ

೧ ಉಪಚಾರ : ಕೃತೋ ನೀಚೇಷ್ವಪಚಾರಾಯ ಕಲ್ಪ್ಯತೇ

ಪಯಃ ಪಾನಂ ಭುಜಂಗಾನಾಂ ಕೇವಲಂ ವಿಷವರ್ಧನಂ —(ಸು)

೨ ಪಾವಿಂಗೆ ಪಾಲನೆಱದೊಡೆ ಕೇವಳಮದು ವಿಷವೆಂಯಕ್ಕುಂ
—(೧೪–೧೫೯) ಆದಿಪುರಾಣಂ

೩ ಪಾಲನೆಱೆವಿರ್ ಪಾವಿಂಗೆ, ದಾಯಾದ್ಯರಂ ಪಿರಿಯರ್
ಮಾಡಿದಿರ್ (೨–೮೯) —ವಿಕ್ರಮಾರ್ಜುನ ವಿಜಯಂ

೪ ಪಾಯುಸಮುಂ ಪುಲಿಯನೂಡಿ ಪೊರೆದಂತಕ್ಕುಂ
—(೩-೭೧) ಸಮಯಪರೀಕ್ಷೆ

೫ ದುಷ್ಟಪನ್ನಗಾಪತ್ಯಚಯಕ್ಕೆ ಪಾಲ ನೆಱೆಯಲ್ ವಿಷವಾವಾದ ವುದು —(೫೯) ನಳ ಚಂಪು

೬ ಹಾವಿಂಗೆ ಹಾಲದೆಱೆದೊಡೆ ತೀವಿದ ವಿಷವಪ್ಪುದು —(೨೧೦) ನಳಚಂಪು

೭ ಬಿಡದೆ ಹಾಲನೇಸನೆಱೆದೊಡೆ ಬಿಡುವುದೇ ಫಣಿ ವಿಷವನಿನಿತಾ ದೊಡೆ —(೫೭–೪೯) ಬಸವಪುರಾಣ

೮ ಹಾವಿಗೆ ಹಾಲನೆಱೆದು ಮೇಲ್ಬಿಸದಿಂದ ಬೇವವೊಲ್ —(೨೫–೧೧) ಸೊಬಗಿನ ಸೋನೆ

೯ ಪಾಲನೂಡಿ ಫಣಿಯುಂ ಸಾಕಲ್ಕೆ ವಿಶ್ವಾಸಿಯೇ —(೪೧) ಸೋಮೇಶ್ವರ ಶತಕ

೧೦ ಹಾವಿಗೆ ಹಾಲೆಱೆದು ನೆಱೆಸಲಹೆ ವಿಷಮೇಲಪ್ಪುದು —(೫–೭) ಜೀವಂಧರ ಚರಿತೆ

೧೧ ಅಹಿಗೆನಿಸುದಿನಂ ಹಾಲೆಱೆದಡೆ ವಿಷಮುಂತಿನಿದಹುದೆ ? —(೨೮-೫೭) ಸಿಂಗಿರಾಜಪುರಾಣಂ

೧೨ ಹಾವಿಗೆ ಹಾಲನೆರೆಯಲದರೊಡಲೊಳಗಾ ವಿಷಪೂರಿಸುವಂತೆ — ನೇಮಿಜಿನೇಶ ಸಂಗತಿ

೧೩ ಸುಧೆಯನು ಕಾಳಸರ್ಪಂಗೆರದು ಸಲಹುವರುಂಟೆ ? —(ಸ.ಸ್ಕಂಧ, ಸಂ ೧೦ ಪ–೪೦) ಕನ್ನಡ ಭಾಗವತ

೧೪ ಹಾವು ಹಾಲೆರೆದವನನರಿವುದೆ ? —(ಅಷ್ಟ,ಸ್ಕಂ. ಸಂ ೯ ಪ–೨೪) ಕನ್ನಡ ಭಾಗವತ

೧೫ ಹಾಲನು ಕೃಷ್ಣಸರ್ಪಂಗೆಱೆದ ತೆಱಂ —(೧೦–೮೬–೨೫) ಕನ್ನಡ ಭಾಗವತ

೧೬ ತಾನು ಬಲ್ಲುದೆ ಹಾವು ಹಾಲನೆರೆವವರ ? —(ಪು. ೨೨೩) ಹ.ಕೀ.ತ,

೧೭ ಪಾಲನುಜ್ಜಳ ಸರ್ಪಂಗೆರೆದೊಡೆ ನಿರ್ವಿಷತೆಯಂ
ಕೈಕೊಳ್ವುದೇ ? (೪೧-೪೭) —ವೃಷಭೇಂದ್ರವಿಜಯಂ

೧೮ ಹಾವು ಹಸಿದಿದೆಯೆಂದು ಕರುಣದಿ । ಹಾವಿಗೆಯು ಹಾಲ್ಕುಡಿಸೆ
ಅದಕೆಯು ಕೇವಲದ ವಿಷ ಹೆಚ್ಚಿ ಮನುಜರ ಕಡಿವೆನೆನುತಿಹುದು
—(೧೯-೫೬) ಜ್ಞಾನಸಿಂಧು

೧೯ ಸರ್ಪಕ್ಕೆ ಕ್ಷೀರವನ್ನೆರೆದು ಸಲಹಿದಂತೆ
—(೧೭) ಮುದ್ರಾಮಂಜೂಷವು

೭೪೮ ತೊರೆ ಇಳಿವ ಮೇಲೆ ಅಂಬಿಗನ ಹಂಗೇನು ?

೧ ತೊರೆ ಇಳಿದರೆ ಅಂಬಿಗಂಗೇನುಂಟು ?
—(೬೬) ಬಸವೇಶ್ವರ ವಚನ

೨ ತೊಱೆವಾಯ್ದಂಬಿಗರ ಗಂಡ !
—(೪೪–೧೧) ಸಿಂಗಿರಾಜ ಪುರಾಣಂ

೭೪೯ ಉಸಿರುಂಟಾದರೆ ಮೊಸರು (ಉಪ್ಪು) ಮಾರಿ ತಿನ್ನಬಹುದು
ಜೀವವಿದ್ದರೆ ಬೆಲ್ಲ ಬೇಡಿ ತಿನ್ನಬಹುದು
ಬದುಕಿದ್ದರೆ ಭಿಕ್ಷವಾದರೂ ಬೇಡಬಹುದು

ಹೋಲಿಸಿ : ೧ ಜೀವ ಮುಳ್ಳೊಡೆ ಹಾಡಿಕೊಂಡುಣಲಕ್ಕುಂ
—(೨-೧೩೩) ಧರ್ಮಾಮೃತಂ

೨ ಹರಣವುಳ್ಳೊಡೆ ಪಾಡಿಕೊಂಡುಂಬ
—(೬-೫೦) ನೇಮಿನಾಥ ಚರಿತ್ರೆ

೩ ಹರಣ ಮುಳ್ಳೊಡಂ ಹಾಡಿ ಬರ್ದುಂಕುವೆನ್
—(೧೧-೨೩) ಕುಸುಮಾವಳಿ

೪ ಹರಣ ಮುಳ್ಳೊಡೆ ಹಾಡಿಯುಣಲ್ಕೆ ಬರ್ಪುದು
—(೫-೪೮) ಶಾಂತೀಶ್ವರ ಪುರಾಣಂ

೫ ಹರಣ ಮುಳ್ಳೊಡೆ ಪಾಡಿ ಬರ್ದುಂಕಲಕ್ಕು
—(೧೦–೫೫) ತ್ರಿಷಷ್ಟಿ ಪುರಾತನ ಚಾರಿತ್ರಂ

೬ ಹರಣ ಮುಳ್ಳೊಡೆ ಹಾಡಿಕೊಂಡು ಬದುಕುವೆವು
– (ಸಂ ೪೩–ಪ ೨೩) ಚೆನ್ನಬಸವ ಪುರಾಣ

೭ ಜೀವವುಳ್ಳೊಡೆ ತಂದು ಕಾರೆಯ ಸೊಪ್ಪನಾದೊಡೆ ತಿಂದು
ಬದುಕಲುಂಬಹುದು —(೫೭–೪೩) ಬಸವಪುರಾಣ

೭೫೦ ಎಳಗುರು ಎತ್ತಾಗದೆ ?

೧ ಎಳೆಗರುಂ ಎತ್ತಾಗದೆ —(೩೫) ಸೋಮೇಶ್ವರ ಶತಕ

೭೫೧ ಸಾಯದೆ ಉಳಿದರೆ ಸಾವಿರ ಚೋದ್ಯ ಕಂಡೇನು

ಹೋಲಿಸಿ : ೧ ಕಾಣಲುಃ ಬಹುದಲಾ ಜೀವಿಸಿದರತಿಶಯವನು
—(ವಿ ಪ, ಸಂ ೬–ಪ ೪೪) ಕರ್ಣಾಟ ಭಾರತ ಕಥಾಮಂಜರಿ

೭೫೨ ಒಲಿದ ಅರಸನಿಗೆ ಕುಲಶೀಲ ಒಾದೂ ಬೇಡ

೧ ಕಡುಕಾಮಿಗೆಲ್ಲಿಯ ಕುಲಶೀಲ ?
—(೩೮–೧೩) ರಾಮನಾಥಚರಿತ

೭೫೩ ಒಲುಮೆಯ ಕೂಟಕ್ಕೆ ಹಾಸಿಗೆಯ ಹಂಗೇ ಬೇಡ

೧ ಒಲುಮೆಯ ಕೂಟಕ್ಕೆ ಹಾಸಿನ ಹಂಗೇಕೆ ?
—(೪೨೫) ಪ್ರಭುದೇವರ ವಚನಗಳು

೭೫೪ ಕಾಮಕ್ಕೆ ಕಣ್ಣಿಲ್ಲ, ಸಿಟ್ಟಿಗೆ ದೃಷ್ಟಿ ಇಲ್ಲ

೧ ಅತಿ ಕಾಮಿ ಕಣ್ಗಾಣ
—(ಸ್ಥಲ ೧೪–೧೦೫) ನಂಬಿಯಣ್ಣನ ರಗಳೆ

೨ ಕಾಮಿ ಕಣ್ಗಾಣಂ —(೧–೬೩) ಅನಂತನಾಥ ಪುರಾಣಂ

೩ ಕಾಮಿಗಳ್ಕಣ್ಗಾಣರ್ —(೮–೯೦) ಪದ್ಮರಾಜ ಪುರಾಣಂ

೪ ಕಾಣರು ಕಣ್ಣ ಮೋಹಿಗಳ್
—(೧೯-೮೮) ನೇಮಿಜಿನೇಶ ಸಂಗತಿ

೫ ಕಾಮಿಗಳ್ ಕಣ್ಗಾಣರೆಂಬುದೇನಚ್ಚರಿಯೇ
(ಸಂ ೯-೧೪) ಚೆನ್ನಬಸವಪುರಾಣ

೭೫೫ ತಾನು ಒಲಿದವಳೇ ರಂಭೆ, ತಾನು ಮಿಂದದ್ದೇ ಗಂಗೆ

೧ ತಾನೋತಂ ಗಡ (ತಾನೋತಳ್) ರಂಭೆ !
—(೧೫-೬೧) ಸಮಯ ಪರೀಕ್ಷೆ

೭೫೬ ಪ್ರೀತಿಯಾಕೆ ಓತಿಯಾದಳು

೧ ಪ್ರೀತಿಯಾಕೆ ಓತಿಯಾದಳ್ —ಧರ್ಮಾಮೃತಂ

೨ ಮೋಹದಾಕೆ ಪ್ರೋತಿಯಾದಳ್ —(೨-೮೩) ಧರ್ಮಾಮೃತಂ

೭೫೭ ಮನೆ ಮಡದಿ ಬಿಟ್ಟು ಬೀದಿ ಬಸವಿ ಹುಡುಕ್ಕೊಂಡು ಹೋದ ಹಾಗೆ

೧ ಸೂಳೆವೆಂಡಿರಂ ನಂಬಿ ನಿಜಾಂಗನೆಯುರಂ ಬಿಡುವೆಗ್ಗರಂತೆ
—(೭-೨೩ ವ ; ಪು ೧೩೦) ಜೀವಸಂಬೋಧನಂ

೨ ತನ್ನ ನಚ್ಚಿದ ಸತಿಯಿರೆ ಬೆಲೆ । ವೆಣ್ಣಿಚ್ಚಿಸುವುದು ನೀತಿಯೇ
ವಿದಗ್ದಲಲಾಮ —(೧೦-೭೮) ಶೃಂಗಾರಸಾರ

೭೫೮ ಬೀದಿಸೂಳೆ ನಂಬಿ (ಸಂತೆ ಸೂಳೆ ನೆಚ್ಚಿ) ಮನೆ ಹೆಂಡತಿ ಬಿಟ್ಟ

೧ ಸಂತೆ ಸೂಳೆಯ ನಂಬಿ ಮನೆಯ ಹೆಂಡತಿ ಬಿಟ್ಟ
ಬಾಗಿಲಲಿ ಬೆಳೆವ ಬದನೆಕಾಯಿ। ನಂಬಿ
ಕರೆವೆಮ್ಮೆ ಬಿಟ್ಟ ಕುಲಗೇಡಿ

೨ ವೇಶ್ಯೆಯ ನೆಚ್ಚಿ ತನ್ನ ನಾರಿಯ ಬಿಡುವಂಥ ಪುರುಷನೇಕೆ ?
—ಹ.ಕೀ.ತ, ಕೀ, ೪೭೭

೩ ಹಾದಿ ಸೂಳೆಯ ನೆಚ್ಚಿ ಮನೆ ಹೆಂಡಿರ ಬಿಟ್ಟ
(ಮಹಲಿಂಗಸ್ವಾಮಿ)

೭೫೯ ವೇಲೆ ಬಿದ್ದ ಸೂಳೆ ಹಾಗದ ಕಾಸಿಗೂ ಬೇಡ

೧ ವೇಲಿಕ್ಕಿದ ಹೆಣ್ಣು ಹಾಗವಡೆಯುಳು
(೯-೧೫೬) ಕಂಠೀರವ ನರಸರಾಜವಿಜಯಂ

೭೬೦ ಸೂಳೆಗಿಕ್ಕೊ ಚಿನ್ನ ನಾರಿಗಿಕ್ಕು

೧ ಸೂಳೆಗಿಕ್ಕುವ ಚಿನ್ನ ನಾರಿಗಿಕ್ಕೆಲೊ ತಮ್ಮ
ನಾಳೆ ನಿನ್ನೊಡನೆ ಬರುವಳು । ನಮ್ಮೂರ
ಭೂಮಿಗೆ ಹಾಕಲು ಬೆಳೆವುದು —(ಹಳ್ಳಿಹಾ, ಪು ೧೨೧)

೭೬೧ ಅರಸನ್ನ ನಂಬಿ ತನ್ನ ಪುರುಷನನ್ನೇ ಕೈಬಿಟ್ಟಳು

೧ ಪಾದಂಗ ಗಂಡನಂ ನಂಬಿ ಮನೆಯ ಗಂಡನಂ ಬಿಡುವಂತೆ
—(೧೦-೬೭) ಧರ್ಮಾಮೃತಂ

೨ ಅರಸನ ಕಂಡು ತನ್ನ ಪುರುಷನ ಮರೆದಂತಾದೆನಯ್ಯ
—(೮೪೬) ಬಸವೇಶ್ವರ

೭೬೨ 'ಅಲಾ' ಅನ್ನೊ ಅತ್ತೆ ಇಲ್ಲ, 'ಭಲಾ' ಅನ್ನೊ ಮಾವ ಇಲ್ಲ, ದಂಡಿಸೊ ಗಂಡ ದಂಡಿಗೋಗವ್ನೆ (ತಗ್ ಬಿಗಿ ಅನ್ನು ಗಂಡ ಮೊದ್ಲೇ ಇಲ್ಲ)

೧ ಅಲೆಯೆಂಬತ್ತೆಯಿಲ್ಲ ಮಲೆಯೆಂಬ ಮಾವನಿಲ್ಲ
—(೧೫–೫೧) ಸಮಯ ಪರೀಕ್ಷೆ

೭೬೩ ನಾರಿ ಒಲಿಯೋದು ನೀಚನಿಗೆ

೧ ಚಿತ್ರಮಪಾತ್ರೆ ರಮತೇ ನಾರಿ
—(೨-೩೪) ಬೃಹತ್ಕಥಾಮಂಜರಿ

೨ ಲಕ್ಷ್ಮೀರ್ಲಕ್ಷಣ ಹೀನೇಷು ಕುಲಹೀನೇ ಸರಸ್ವತೀ
ಅಪಾತ್ರೆ ರಮತೇ ನಾರಿ ಗಿರೌ ವರ್ಷತಿ ವಾಸವಃ
—ಯಶೋಧರ ಕಾವ್ಯಂ

೭೬೪ ತುಡುತಿನ್ನಿ ಗಂಡನ ಬಡತನ ಬಲ್ಲಳೆ?

೧ ತುಡುಗುಣಿಯು ಗಂಡನಾ ಬಡತನವ ಬಲ್ಲಳೇ

ಕಡನ ತಂದಿಕ್ಕಿ – ಕುದಿಸಿ ತುಪ್ಪವ ಬೆರಸಿ
ಹೊಡೆದು ಕಳ್ಳಿಹಳು ! ಸರ್ವಜ್ಞ —(ಸರ್ವ, ಪ. ೧೬೯೪)

೭೬೫ ನಾಯಿ ಮುಟ್ಟಿದ ಮಡಕೆಯನ್ನು ತಿಪ್ಪೆಗೆ ಬಿಸಾಡೋದೆ ?

೧ ಕುನ್ನಿ ಮುಟ್ಟಿದ ಘಟಕೆ ವಿಧಿಯೇನಿನ್ನು ಸುಟ್ಟೊಡೆ ಸಾಕಲಾ ?
—(೫೨-೫೨) ಬಸವ ಪುರಾಣ

೭೬೬ ಹಾದರಗಿತ್ತಿಗೆ ಹಗಲೊಬ್ಬ, ಇರುಳೊಬ್ಬ

೧ ಹಾದರಗಿತ್ತಿಗೆ ಹಗಲೊಬ್ಬ ಇಳ್ಳೊಬ್ಬ
ಮಾಳದ ಮೇಲೊಬ್ಬ ಕೆಳಗೊಬ್ಬ । ಬೀದೀಲಿ
ಹೊಂಟ್ಹಾಕುತಾನೆ ಹೊರಗೊಬ್ಬ
—(ಹಳ್ಳಿಹಾ. ಪು. ೧೬೭)

೭೬೭ ಚಪಲೆಯರನ್ನು ಬ್ರಹ್ಮನೂ ರಕ್ಷಿಸಲಾರ

೧ ಶಿಱೈಗಾಕ್ಕುಙ್ಗಾಪ್ಪೆವನ್ ಶೆಯ್ಯುಮಗಳಿರ್
ನಿಱೈಗಾಕ್ಕುಙ್ಗಾಪ್ಪೇ ತಲೈ —ತಿರುಕ್ಕುಱಳ್
ಸೆಱೆಗಾವ ಕಾಪದೇನ್ ಗೆಯ್ಯುಂ ಮಗಳ್ದಿರನ್
ನಿಱೆಗಾವ ಕಾಪೇತಲೆ
—ಅನುವಾದಕರು–ಶ್ರೀ ಎಲ್. ಗುಂಡಪ್ಪ

೭೬೮ ಮುಪ್ಪಿನಲ್ಲಿ ಮುದುಕಿಯೂ ಪತಿವ್ರತೆ

ಆದೌ ವೇಶ್ಯಾ ಪುನರ್ದಾಸೀ ಪಶ್ಚಾದ್ಭವತಿ ಕುಟ್ಟಿನೀ ।
ಸರ್ವೋಪಾಯ ಪರಿಕ್ಷೀಣಾ ವೃದ್ಧಾ ನಾರೀ ಪತಿವ್ರತಾ ॥
ಆರ್ತಾ ದೇವಾನ್ನಮಸ್ಯಂತಿ ತಪಃ ಕುರ್ವಂತಿ ರೋಗಿಣಃ ।
ನಿರ್ಧನಾ ದಾನ ಮಿಚ್ಛಂತಿ ವೃದ್ಧಾ ನಾರೀ ಪತಿವ್ರತಾ ॥ (ಸಂ)

ಹೋಲಿಸಿ : ೧ ಬೇಲಿ ತಳಿಗೋಂಟೆ ಮದಿಲುಗ
ಳೋಲೈಸುವ ಕಾಪಿನಾಳು ಮೆಯ್ಗಾಪಿನವರ್
ಬಾಲೆಯರಂ ಕಾವರೆ, ನಿಜ
ಶೀಲಮೆ ಕಾವಪ್ಪುದು —ಸುಕವಿ ರತ್ನಾಭರಣ

೨ ಪತಿ ಕಾಗುವೆ ಪೆಂಡತಿಯುಂ
ಸತಿ ತನ್ನಂ ತಾನೆ ಕಾಗು ಪುತ್ರಮ ಜಾತಿ
ಸ್ಥಿತಿಯುಂ ಗುಣಸಂತತಿಯುಂ
ಗತಿಯುಂ ತಾಂ ಬಗೆದು ನೆಗೞೆ ಪೆಱೆ ಪೊರ್ದುಗುಮೇ
—(ಹರಿವಂಶಾಭ್ಯುದಯ)

೭೬೯ ಗಂಡು ತುಪ್ಪದ ಕೊಡ, ಹೆಣ್ಣು ಬೆಂಕಿ ಕೊಡ

೧ ಘೃತ ಕುಂಭ ಸಮಾ ನಾರೀ ತಪ್ತಾಂಗಾರ ಸಮಃ ಪುಮಾನ್
ತಸ್ಮಾದ್ಘೃತಂಚ ವಹ್ನಿಂಚ ನೈಕತ್ರ ಸ್ಥಾಪಯೇದ್ಬುಧಃ
—(ಸು)

೭೭೦ ಸುಖ ಸಾಸಿವೆಯಷ್ಟು, ದುಃಖ ಗುಡ್ಡದಷ್ಟು

೧ ಸುಖಂ ಬಿಂದು ಮಾತ್ರೇಣ ದುಃಖಂ ಪರ್ವತ ಮೇವಚ —(ಸು)

೨ ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ
—(೧೨೩) ಪ್ರಭುದೇವರ ವಚನಗಳು

೩ ಬಿಂದು ಮಾತ್ರದ ಸುಖಕೆ ಮುಂದೆ ಪರ್ವತದಷ್ಟು
ದಂದುಗವ ಹೊತ್ತು ತೊಳತೊಳಲಿ ಭವ ಭವದೊ
ಳೊಂದಿ ಸಾವವಗೆ ಸುಖವುಂಟೆ ?
—ಗುರುಬೋಧಾಮೃತ

೪ ಬಿಂದು ಮಾತ್ರವೆ ಸುಖವು ! ದುಃಖ ಪರ್ವತದಷ್ಟು
—(೫೧) ಶ್ರೀ ವಿಜಯದಾಸರ ಕೃತಿಗಳು

೭೭೧ ಹೆಣ್ಣದೆ ಎಂದು ಹೋದವ ಕೆಟ್ಟ, ಅನ್ನವಿದೆ ಎಂದು ತಿಂದವ ಕೆಟ್ಟ

ಹೋಲಿಸಿ : ಅತಿರತಿ ಸಲ್ಲದು
—(ಅರಗಿಳಿಯಾಲಾಪ ಸಂಧಿ-೨೧) ಭರತೇಶ ವೈಭವ

೭೭೨ ಮಣ್ಣಿನಿಂದ ಕೌರವ ಕೆಟ್ಟ, ಹೆಣ್ಣಿನಿಂದ ರಾವಣ ಕೆಟ್ಟ

೧ ಹೆಣ್ಣಿಗೂ ಮಣ್ಣಿಗೂ । ಉಣ್ಣದುರಿಯಲು ಬೇಡ

ಹೆಣ್ಣಿಂದ ಕೆಟ್ಟ–ದಶಕಂಠ, ಕೌರವನು
ಮಣ್ಣಿಂದ ಕೆಡನೆ ? ಸರ್ವಜ್ಞ —(ಸರ್ವ, ಪ, ೧೧೬೭)

೭೭೩ ಅಧಮನ ಕೋಪ ಹಗಲು ರಾತ್ರಿ, ಪಾಪಿ ಕೋಪ ಸಾಯೋತನಕ

೧ ಉತ್ತಮೇ ಸ್ಯಾತ್‌ಕ್ಷಣಂ ಕೋಪಃ ಮಧ್ಯಮೇ ಘಟಿಕಾದ್ವಯಂ
ಅಧಮೇ ಸ್ಯಾತ್ ಅಹೋರಾತ್ರಂ ಪಾಪಿಷ್ಠೇ ಮರಣಾಂತರಂ
ಸಂ)

೭೭೪ ಈದ ಹುಲಿ ಹಂಗಾಡ್ತಾನೆ

೧ ಈಂದ ಪುಲಿಪೋಲ್

೨ ಪಸಿದ ಪುಲಿಯಂತೆ —(೧೩–೩೩) ನೇಮಿಜಿನೇಶ ಸಂಗತಿ

೭೭೫ ಕೋಪ ಎನ್ನುವುದು ಪಾಪಿ

ಹೋಲಿಸಿ : ಕೋಪಗೊಂಬುದೆ ಸಕಲ ಪಾಪಕ್ಕೆ ಕಾರಣಂ
(ಅಯೋ.ಕಾಂ, ೯–೧೬) ಶ್ರೀಮದ್ರಾಮಾಯಣಂ

೭೭೬ ಕೋಪ ತಾಪ ತಂದಿತು, ಪಾಪ ಬ್ರಹ್ಮೇತಿ ತಂದಿತು

ಹೋಲಿಸಿ : ಕೋಪವಮಾಪತ್ತು ನೀಗುಂ
—(೧೪–೪೮) ಲೀಲಾವತಿಪ್ರಬಂಧ

೭೭೭ ತನ್ನ ಕೋಪ ತನ್ನನ್ನೇ ತಿಂದಿತು, ತನ್ನ ಶಾಂತ ಹೆರರನ್ನು ತಿಂದಿತು

ಹೋಲಿಸಿ : ಆತನ ಕೋಪ ವಹ್ನಿಯಾತನನೆ ಕರುತ್ತು ಸುಟ್ಟುದು
— (೩೦೬–೧೨೬) ಪಾರ್ಶ್ವನಾಥ ಪುರಾಣಂ

೭೭೮ ಕೆರೆ ಜೊತೇಲಿ ಮುನಿಸಿಕೊಂಡು ಕಾಲು ತೊಳೆಯದೆ ಬಿಟ್ಟರು

೧ ಕೆರೆಗೆ ಮುಳಿದು ಮಂಡೂಕಂ ಪೊಱಗಿರ್ದುದು
—(೪೪ ವ) ಕರ್ಣಾಟಕ ಪಂಚತಂತ್ರ

೭೭೯ ಬಡವನ ಕೋಪ ಅವುಡಿಗೆ ಮೃತ್ಯು

೧ ಬಡವನ ಕೋಪ ದವಡೆಗೆ ಮೃತ್ಯುವಾದಂತೆ
—(೮೪೦) ಬಸವೇಶ್ವರ ವಚನಗಳು

೨ ಬಡವನ ಕೋಪ ಅವುಡಿಗೆ ಮೃತ್ಯು
—(೨-೬೪೭) ಬಸವಣ್ಣನವರ ವಚನಗಳು

೩ ಬಡವರ ಕೋಪ ವೌಡಿಗೆ ಮೃತ್ಯು
—(ವಿ.ಪ, ೨-೨೯) ಕರ್ಣಾಟ ಭಾರತ ಕಥಾಮಂಜರಿ

೪ ಬಡವನ ಕೋಪ ವವುಡಿಗೆ ಕೇಡು ತಹವೊಲ್
— ೧೩-೩೧) ಪ್ರಭುಲಿಂಗಲೀಲೆ

೫ ಬಡವನ ಕೋಪ ವವುಡಿಂಗೆ ಮೃತ್ಯು
—(೧೨-೮೩) ಸೌಂದರ ಪುರಾಣಂ

೬ ಬಡವ ಸೆಡೆತಂ ನೋಡಿ ತಿವಿಯಿಸಿಕೊಂಡ
—(ರಾಯಸದಂಬೆಚ್ಚ ಸಂಧಿ-೬೫) ಭರತೇಶ ವೈಭವ

೭ ಬಡವನ ಕೋಪ ವೌಡಿಗೆ ಮಾರಿ
—(೧೮-೬) ಕಂಠೀರವ ನರಸರಾಜ ವಿಜಯಂ

೮ ದರಿದ್ರನ ಕೋಪ ಮಧರ ಪೀಡನೆಯಲ್ಲದೇಂ ಫಲಂ ?
(ಅಯೋ.ಕಾಂ. ೪-೪೧) ಶ್ರೀಮದ್ರಾಮಾಯಣ

೭೮೦ ಉರಿಯುವ ಬೆಂಕಿಗೆ ತುಪ್ಪ (ಉಪ್ಪು, ಎಣ್ಣೆ) ಸುರಿದಂಗೆ

೧ ಉರಿವನಳಂ ಗಾಜ್ಯಾಹುತಿ ದೊರೆಕೊಂಡ ವೋಲ್
—(೧೧-೧?) ವರ್ಧಮಾನ ಪುರಾಣಂ

೨ ಉರಿಯೊಳಾಜ್ಯವನೆಱೆದೊಡಂತುಬ್ಬರಿಸಿ ಧಗಧಗ
ಎನುತ ಶಿಖೆಯಾವರಿಸಿದ ವೊಲ್
—(ಕಾಂ : ೫, ಸಂ ೪೪-೨) ಬಸವ ಪುರಾಣ

೩ ಅಗ್ನಿಯೊಳ್ ಘೃತವ ಸುರಿದಂತೆ ಭುಗಿಲಿಡುತ್ತುರಿದು
- (ಸಂ ೪-೧೧) ಶಿವತತ್ತ್ವ ಚಿಂತಾಮಣಿ

೪ ಹುತವಹನೊಳಾಜ್ಯವೆರಸಿದ ನಿರ್ಣಯುವೆ
— (ಸಂ ೧೯-೨೩) ಶಿವತತ್ತ್ವ ಚಿಂತಾಮಣಿ

೫ ಆಜ್ಯಾಹುತಿಯುಂ ಕೊಂಡಗ್ನಿ ಜ್ವಾಲೆಯುಂತೆ
—(ಆ ೭-೩೩ ಗದ್ಯ) ಶೃಂಗಾರ ಸಾರ

೬ ಅನಲಂಗಾಜ್ಯ ಮಸೆಟಿಸಿದ ಪೋಲ್
—(೪–೮೯) ಶೃಂಗಾರ ಸಾರ

೭ ವಾಯುಸಖನೊಳ್ ತುಪ್ಪವಂ ಪೊಯ್ಯುವೊಲ್...
ಭುಗಿ ಭುಗಿಲೆನುತ್ತೆ (ಸಂ ೩೨-೩೦) — ಚೆನ್ನಬಸವ ಪುರಾಣ

೮ ಉರಿಗೆ ತುಪ್ಪವ ಹಾಕಿದಷ್ಟಕೆ ಮರಳಿ ಹೇಗೆ ವಿಶೇಷವಹುದೊ
—ಶುಕಸಪ್ತತಿ

೯ ಉರಿಗೆ ತುಪ್ಪವ ತೋರಿದಂತಾಸುರದ ಕೋಪದಿ
(೩೧–೧೯) ಕೌಶಿಕ ರಾಮಾಯಣ

೧೦ ಉರಿವಗ್ನಿಯೊಳ್ ನೆಯ್ವೊಯ್ದಂತೆ
—(೧೪ ಪು ೪೪) ಅದ್ಭುತ ರಾಮಾಯಣಂ

೧೧ ಉರಿಗಿಚ್ಚಿಗೆ ನೆಯ್ಯುಟಿಯೆ ಕಿದರ್ವಂತೆ ಕೋಪಂ ಕಿದಟಿ
(೧೫-೫) ಅದ್ಭುತರಾಮಾಯಣಂ

೧೨ ಕಿಚ್ಚಿಗಿಟ್ಟ ಬೆಣ್ಣೆಯ್ಯಂತೆ
—(೫-೧೩) ಶ್ರೀರಾಮಾಶ್ವಮೇಧಂ

೧೩ ಪೊತ್ತಿದಗ್ನಿಯೊಳ್ ನೆಯ್ಯನೆಟಿದಂತುಂ
—(ಪು ೧೪-೧೩೦; ೧೨ನೆಯ ಸಾಲು) ಶ್ರೀರಾಮಾಶ್ವಮೇಧಂ

೧೪ ಉರಿಂಜ ಗಾಯುಕ್ ಉಪ್ಪಿಡತ್ತೆ
—(ಕೊಡಗು ಗಾದೆ)

೧೫ ಸುಡುವ ಬೆಂಕಿಗೆ ಎಣ್ಣೆ ಕೊಡವ ಸುರುವಿದ್ಹಾಂಗ

—(ಹಳ್ಳಿಹಾ, ಪು. ೧೩೦)

೭೮೧ ಕೊಡದವನ ಹಣ ಮಡಗಿದಲ್ಲಿಯೇ ಹಾಳು

೧ ಗಾವಿಲನ ಧನವು–ಘನವಾಗಿ ಬಯ್ಬಿಟ್ಟ
ಠಾವಿಲೇ ಪೋಕು ಸರ್ವಜ್ಞ —(ಸರ್ವ, ಪ. ೬೦೪)

೭೮೨ ಒಕ್ಕಳ ಹೊನ್ನಿನ ಬಡವ

೧ ಇಪ್ಪತ್ತು ಪಂಜ ನಾವೇಕೆ ತಂದೇವು
ಒಕ್ಕಳೊನ್ನಿನ ಬಡವರು ನಮ್ಮ ಬೀಗರು
ಕೊಪ್ಪಿನ ಬೆಳಕಲ್ಲಿ ಬರಹೇಳಿ

—ಹೊನ್ನಬಿತ್ತೇವು, ಪು. ೭೬೪

೭೮೩ ನಾಯಿಯ ಮೊಲೇಲಿ ನಾಗಳ ಹಾಲು ದೇವರಿಗಿಲ್ಲ, ದಿಂಡರಿಗಿಲ್ಲ

೧ ನಾಯಿಯ ಹಾಲು ಪಂಚಾಮೃತಕ್ಕೆ ಸಲ್ಲದಯ್ಯ

— ಬಸವಣ್ಣನವರು

೨ ಶ್ವಾನನಾ ಮೊಲೆಯೊಳಗೆ ಹಾಲಿದ್ದರೇನು ?

೩ ನಾಯ ಮೊಲೆ ವಾಲು ತಾ ನಾಯಿ ಕುನ್ನಿಗೆ ಯೋಗ್ಯ
ಪಾಯಸಕೆ ಯೋಗ್ಯವಹುದೆ ? ಲೋಭಿಯ ಧನವು
ನಾಯಿ ಮೋಲೆವಾಲ ತೆರನಂತೆ

—ಹ.ಕೀ.ತ. ಪು. ೨೪೮

೭೮೪ ಕೊಡದ ಲೋಭಿಯ ಮಾತು ಕೊಡಲಿ ಗಾಯ

೧ ಕೊಡುವರೆ ಕೈಹಾಳೆ ? । ಎಡೆಯೇನು ದೂರವೆ ? ।
ಎಡೆಯಾಡಿಸಂತ್ತ—ಕೊಡದ ಲೋಭಿಯ ಮಾತು
ಕೊಡಲಿಯಾ ಗಾಯ ! ಸರ್ವಜ್ಞ

(ಸರ್ವ. ಪ. -೫೯೮)

೭೮೫ ತಾನೂ ತಿನ್ನ ಪರರಿಗೂ ಕೊಡ

೧ ತಾನುಣ್ಣದ ಪೆಟರ್ಗಿಕ್ಕದ...ಲೋಭಿಯ ಪೊನ್ನಂ
—(೨-೩೪) ಧರ್ಮಾಮೃತ

೨ ಉಣದಿರ್ಪಾ ಧನಮಿರ್ದೊಡೇನು
—(೧೬) ಸೋಮೇಶ್ವರ ಶತಕ

೩ ತಾನು ಉಣ್ಣದ ದ್ರವ್ಯ ತಾಳ್ಯುದ್ದ ಇದ್ದರೇನು ?
—(ಪುರಂದರದಾಸರು)

೪ ತಾನು ಉಣ್ಣದೆ ಪರರಿಗಿಕ್ಕದ ಧನವಿದ್ಯಾತಕೆ
—(೮-೧) ಎರಡನೆಯ ಭಾಗ, ಕನಕದಾಸರ ಕೃತಿಗಳು

೭೮೬ ನಾಗರ ಹಾವಿನ ತಲೆಯಲ್ಲಿ ಮಾಣಿಕ್ಯ ಇದ್ದ ಹಾಗೆ

೧ ಮುಗಿಲ ವ್ಯಾಗಿನ ಚಿಕ್ಕಿ ಹಗಲು ಮೂಡಿದರೇನ
ಅಗಲಿ ಇರುವುದರ ಗೊಡವೇನ । ಮಾಣೀಕ
ಹಾವೀನ ಬದಿಲಿದ್ದು ಫಲವೇನ

೭೮೭ ಕೃಪಣನಿಗೇ ಧನ ಒಲಿಯೋದು, ಗುಡ್ಡದ ಮೇಲೆಯೇ ಮಳೆ
ಹೊಯ್ಯೋದು

೧ ಲಕ್ಷ್ಮೀರ್ಲಕ್ಷಣ ಹೀನೇಚ ಕುಲಹೀನೇ ಸರಸ್ವತೀ ।
ಅಪಾತ್ರೆ ರಮತೇ ನಾರೀ ಗಿರೌ ವರ್ಷತಿ ವಾಸವಃ (ಸಂ)

೨ ಕೃಪಣಾನು ಸಾರಿವಿತ್ತಂ
—ಕರ್ಣಾಟಕ ಪಂಚತಂತ್ರ

೭೮೮ ಉಳ್ಳಾಗ ಉಣದವನ, ಉಳ್ಳಾಗ ಉಡದವನ, ಉಳ್ಳಾಗ ಕೊಡದವನ
ಒಡವೆ ಕಳ್ಳನಿಗೆ

೧ ಉಳ್ಳಲ್ಲಿ ಉಣಲಿಲ್ಲ । ಉಳ್ಳಲ್ಲಿ ಉಡಲಿಲ್ಲ ।
ಉಳ್ಳಲ್ಲಿ ದಾನ ಕೊಡದವನ ಒಡವೆಯದು
ಕಳ್ಳಂಗೆ ! ನೃಪಗೆ ! ಸರ್ವಜ್ಞ
—(ಸರ್ವ. ಪ, ೬೦೩)

೭೮೯ ಜೀನ ಗಳಿಸಿದ್ದು ಅಡವಿ ಪಾಲು

೧ ಜೀನ ಗಳಿಸಿದ್ದು ಅಡವೀಯಂ ಪಾಲೊಂದ ಇಮಿರಾಯು
ಅಡವೀಯ ಪಾಲೊಂದ-ಸುವ್ವೀ ।
ತಾನು ಸಂಪಾದಿಸಿದ್ದು ಮಣ್ಣುಪಾಲು ಸುವ್ವೀ !
—ಜಾನಪ (ಪು. ೧೭೦)

ಹೋಲಿಸಿ : ೧ ಲುಬ್ಧೇನ ಸಂಚಿತಂ ದ್ರವ್ಯಂ ಸಮೂಲಂಚ
ವಿನಶ್ಯತಿ —(ಸಂ)

೭೯೦ ಅಪಜಯಕ್ಕೆ ಅಹಂಕಾರವೇ ಕಾರಣ

೧ ಕಾರಣಂ ಪರಾಭವಕೆ ಗರ್ವಂ
—(೧೪–೯೬) ಚಂದ್ರಪ್ರಭ ಪುರಾಣಂ

೭೯೧ ಇಂದಿನ ಹಮ್ಮು ನಾಳೆಗಿಲ್ಲ

೧ ಇಂದಿನ ಹಮ್ಮು ನಾಳೆಗೆ ಇಲ್ಲ, ಭವ, ಬಂಧನದೊಳು ನೀನಿರೆ ಸಲ್ಲ
—(ಹ.ಕೀ.ತ, ಪು. ೪೫೫)

೭೯೨ ಮರ ಹತ್ತುವವನ ಕಾಲು ಕೆಳಗೆ

೧ ಎನಿತು ತಾಳಮರನನೇಱಿದೊಡಂ ತಲೆಗೆ ಕಾಲ್ಕೆಳಗೆಂಬಂತೆ
(ಪ, ಆಶ್ವಾ ೧೭೨ವ)ಧರ್ಮಾಮೃತ

೭೯೩ ಇದ್ದಕ್ಕಿದ್ದ ಹಾಗೆ ಕತ್ತೆಗೆ ರುದ್ರಾಕ್ಷಿ ಸರ ಬಂದಿತು

ಹೋಲಿಸಿ : ಕತ್ತೆ ರುದ್ರಾಕ್ಷಿಯು ಹೊತ್ತು ಬಂದಂತೆ
—(೧೪೦) ಉರಿಲಿಂಗಪೆದ್ದಿ

೭೯೪ ಎತ್ತಿಗಿಂತ ಕೋಡೇ ದೊಡ್ಡದು

೧ ಎತ್ತು ಗೇಣುದ್ದ, ಕೊಂಬು ಮೊಳದುದ್ದ
—ಗೋಹೇಶ್ವರಲಿಂಗ

೭೯೫ ಒಳಗೆ ಹುಳುಕು, ಹೊರಗೆ ಥಳಕು

ಹೋಲಿಸಿ : ೧ ಹೊರಹುಂಜು, ಒಳಬೊಳ್ಳೆ
—(೭೭) ಸಕಲೇಶ ಮಾದರಸನ ವಚನಗಳ

೨ ಒಳಗೆ ಧಗೆ, ನಗೆ ಹೊರಗೆ
—(ಶ.ಪ. ೨-೧) ಕರ್ಣಾಟ ಭಾರತ ಕಥಾಮಂಜರಿ

೩ ಒಳಗಣ ರಣರಂಗ, ಹೊರಗಣ ಶೃಂಗಾರ
— (೩೧೬) ಪ್ರಭುದೇವರ ವಚನಗಳ

೭೯೬ ಕಳ್ಳ ಹಣಕ್ಕೆ (ಹೊನ್ನಿಗೆ) ದೊಡ್ಡ ಮುದ್ರೆ

೧ ಸಿರುತ್ತಮಿಂ ಕಳ್ಳ ಹೊನ್ನಿಗೆ ದೊಡ್ಡ ಮುದ್ರೆಯಂ
ವಿರಚಿಸಲದಂ ಸರ್ವರೊಲ್ಗೆವೆಂಬರು
—ಸಿದ್ಧೇಶ್ವರ ಪುರಾಣ

೭೯೭ ಡಾಂಭಿಕರಿಗೆ ಗಂಭಿರ ಯಾಕೆ ?

೧ ಡಾಂಭಿಕನು ಎನಿಸುವಗೆ ಗಂಭೀರತನವೇಕೆ —ಪು.ದಾ

೭೯೮ ತೋಟ ಹೊರಗೆ ಶೃಂಗಾರ, ಒಳಗೆ ನೋಟದರೆ ಗೋ(ಳಿ)ಣಿ ಸೊಪ್ಪು

೧ ಗೋಳಿಯು ಸೊಪ್ಪನ್ನೊಳಗೊಂಡರು ಸಹ
ಸೊಬಗಿದೆ ತೋಟದ ಸಿಂಗರವು
—ಸಂಪಾದಕ, ಯುಗಪುರುಷ, ದಸರಾಸಂಚಿಕೆ, ೧೯೬

೭೯೯ ಮೂಗಿಗಿಂತ ಮೂಗುತಿ ಭಾರ

೧ ಮೂಗು ಸಣ್ಣದು ಮೂಗುತಿ ದೊಡ್ಡದು
—(೩-೧೯೮) ಪುರಂದರದಾಸ

೮೦೦ ಕರುಬಿದವನ ಮನೆ ಬರಿಮನೆ

೧ ಅವ್ವಿತ್ತ್ಟುಕ್ಕಾಱುಡೈಯಾನೈಚ್ಚೆಯ್ಯವ
ಡವ್ವೈಯೈ ಕ್ಕಾಟ್ಟಿ ವಿಡುಮ್ —ತಿರುಕ್ಕು

ತಾಳದಳ್ಕಜ ಮುಳ್ಳನನ್ ಲಕ್ಷ್ಮಿ (ತವ್)
ಅಕ್ಕನನ್ ತೋಟಿ ಬಿಡುಗುಂ (ಕರುಬನನ್ನು ಲಕ್ಷ್ಮಿ ತೊರೆಯು
ತ್ತಾಳೆ ; ಮೂದೇವಿ ಒಲಿಯುತ್ತಾಳೆ

—ಅನು॥ ಎಲ್. ಗುಂಡಪ್ಪ

೮೦೧ ಕೇಡು ಬಗೆದವನಿಗೆ ಕೇಡು ತಪ್ಪದು

೧ ಲೋಗರಿಂಗುಪಹತಿಯ ನೆನೆದಡೆ ತಾಗದಿಹುದೇ ತನಗೆ ?
—(೧–೧೨–೧೩) ಕನ್ನಡ ಭಾಗವತ

೨ ಪರರ ಕೆಡಿಪನೆಂಬಾತ ಕೆಟ್ಟಪ (೯–೧೯) ನಾಗಕುಮಾರಚರಿತಂ

೩ ಕೇಡನಿತರರಿಗಿತ್ತರದು ತನಗೂಡಂಪ್ರದು ಕೈಯೊಡನೆ
—(೧೨-ಪಲ್ಲವಿ) ಕೌಶಿಕ ರಾಮಾಯಣ

೮೦೨ ಗುಣಕ್ಕೆ ಮತ್ಸರವೇ ?

೧ ಗುಣಕ್ಕೆ ಮಚ್ಚರಮುಂಟೆ
—(೧೨–೪೦) ಅಜಿತ ತೀರ್ಥಂಕರ ಪುರಾಣತಿಲಕಂ

೨ ಗುಣಕ್ಕೆ ಮಚ್ಚರವೇ ?
—(೧೨–೧೬) ನೇಮಿನಾಥ ಪುರಾಣಂ

೩ ಮಚ್ಚರಮೆ ಗುಣಕ್ಕೆ ?
(೧೦–೧೮) ನೇಮಿನಾಥ ಪುರಾಣಂ

೪ ಗುಣಕ್ಕೆ ಹುರುಡೆ ?
—(ದ್ರೋ.ಪ. ೪–೨೮) ಕರ್ಣಾಟಕ ಭಾರತ ಕಥಾಮಂಜರಿ

೫ ಗುಣಕೇಕೆ ಮತ್ಸರ ?
—(ವಿ.ಪ. ೮–೩೮) ಕರ್ಣಾಟಕ ಭಾರತ ಕಥಾಮಂಜರಿ

೬ ಗುಣದಲಸೂಯವೇ ?
—(ದ್ರೋ.ಪ. ೧–೬೬) ಕರ್ಣಾಟಕ ಭಾರತ ಕಥಾಮಂಜರಿ

೭ ಸದ್ಗುಣಕೆ ಮತ್ಸರವೆ ?
—(ವಿ.ಪ. ಪ. ೩-೬೦) ಕರ್ಣಾಟಕ ಭಾರತ ಕಥಾಮಂಜ

೮ ಗುಣಕೆ ಮತ್ಸರವೆ ?
—(೬-೨೩-೨೩) ತೊರವೆ ರಾಮಾಯಣ

೯ ನುಡಿದಾಡಬಹುದು ಗುಣವ
ಹಗೆಯಾದವರೆಯು ಕಂಡುವನು
—(೬ ೯-೨೦) ತೊರವೆ ರಾಮಾಯಣ

೧೦ ನಿಜದಬ್ಬುಕಕೆ ಮಚ್ಚುಕವೆ ?
(೧೨-೫೪) ಸಿಂಗಿರಾಜ ಪುರಾ

೧೧ ಗುಣಕೆ ಮಚ್ಚರವುಂಟೆ ?
—(೧೩-೧೦೨, ೦೪೫) ರಾಮನಾಥ ಚರಿ

೧೨ ಗುಣಕೆ ಹುರಡೆ
—(೧೪-೨೬ : ೪೩-೬೨ : ೪೪-೧೬೧) ರಾಮನಾಥ ಚರಿ

೧೩ ಮತ್ಸರವೆ ಗುಣದೊಡನೆ
(೧೦-೫೬-೪೬) ಕನ್ನಡ ಭಾಗವ

೧೪ ಹುರುಡೇಕೆ ಗುಣದಲಿ
(ವ. ಸ್ಕಂ. ಸಂ. ೫೯-೩೫) ಕನ್ನಡ ಭಾಗವ

೧೫ ಗುಣದಲಸೂಯೆಯೇ ?
—(ಅ. ಸ್ಕಂ. ಸಂ. ೧೯-ಪ ೨೨) ಕನ್ನಡ ಭಾಗವ

೧೬ ಗುಣಕೆ ಪ್ರತಿಪರೊಳರೆ
- (೧-೬) ರಸರತ್ನಾ

೧೭ ಗುಣಕೆ ಹುರುಡೆ —(ಸಂ. ೩೮-೪೦) ಭರತೇಶ ವೈ

೧೮ ಗುಣಕೆ ಮತ್ಸರವೆ —(ಸಂ. ೬೮-೫೯) ಭರತೇಶ ವೈ

೧೯ ಗುಣಕೆ ಮತ್ಸರವೆ ? —(೩೨-೮) ಚೆನ್ನಬಸವ ಪು

೨೦ ಸದ್ಗುರುಕಟಾಕ್ಷದಿಂದ

—(೪-೮೫) ಶಬರಶಂಕರ ವಿಲಾಸ

೨೧ ಗುರುಕೆ ಮಂತ್ರದಿಂ [illegible] ಸರಿ ಮಾಡಿದನು

ದುರ್ಗಶ್ರೀಗಳು —(ಸಂ. ೧೪) ರಾಘವಾಂಕ ಚರಿತೆ

೨೨ ಗುರುವಿಗೆ ಕಲಿಗೆ ಮಂತ್ರವೆ ?

(೫-೩೭) ಕೌಶಿಕ ರಾಮಾಯಣ

೨೩ ಗುರುಕೆ ಮಂತ್ರವೆ ?

(೨೭-೨೮, ೨೯-೩೧) ಕೌಶಿಕ ರಾಮಾಯಣ

೨೪ ಗುರುಕೆ ಮರುಮಾತಿಲ್ಲ

—(೬ ಸಂ. ೪-೨೦) [illegible]

೨೫ ಗುರುಕೆ ಮಂತ್ರವುಂಟೇ ?

—(೧೫) [illegible]

೨೬ ಗುರುವಿಂಗೆ ಪ್ರಣಾಮ

—(೧೨-ನೆ ೪೧) ಅದ್ಭುತ ರಾಮಾಯಣಂ

೨೭ ಗುರುವಿಂಗೆ ಪ್ರಣಾಮ

—(೧೭-ಪ್ರ. ೧೬೪ : [illegible]) [illegible]

೨೮ ಗುರುಕೆ ಮಂತ್ರವುಂಟೆ ! —[illegible]

೧೦೩ ಮಾನವ ಕೆಟ್ಟರೆ [illegible]

೧ [illegible]

[illegible]

—(ಕಾಂ. ೪ ; ಸಂ. ೨೧-ನೆ ೪೦) ಬಸವ ಪುರಾಣ

೧೦೪ ಕೆಟ್ಟು ಪಟ್ಟಣದವಳ [illegible] 'ಹೆಣ್ಣು ಹಾಗೆ ಆಗಿ [illegible]' ಎಂದ್ಹಾಗೆ

೧ [illegible]

—(೯-೬೭) ಸಮಯ ಪರೀಕ್ಷೆ

೮೦೫ ಮನೆಯು ಕಿಚ್ಚು ಮನೆಯುಂ ಸುಡುಗು

೧ ಮನದೊಳಗಣ ಕಿಚ್ಚು ಮನೆಯು ಸುಟ್ಟಲ್ಲದೆ ನೆರೆಮನೆಯು ಸುಡದು —(೨೨೮) ಬಸವೇಶ್ವರ ವಚನ

೨ ನೆರೆ ಮನೆಯು ಕಿಚ್ಚಿಂದವಲ್ಲದೆ
ಉರಿಯದೇ ಮನೆ ತನ್ನ ಕಿಚ್ಚಿನೊಳ್
—(೨೪-೨೭) ಬಸವ ಪುರಾಣ

೩ ಮನದೊಳಗನ್ಯರಿಗಹಿತವ । ನೆನೆದರೆ ತಾಂ ಮುನ್ನ ಕಿಡುವ ತನಿಗಿಚ್ಚಿದ್ದಾ ॥

ಮನೆ ಮುನ್ನ ಬೆಂದು ಮಿಕ್ಕಿನ । ಮನೆಯುಂ ಸುಡುವಂತೆ ಚೂಡಾರತ್ನ —ನೀತಿಸಾರ

೮೦೬ ಪೆರರಿಗೆ ಕೇಡು ಬಗೆವರೆ ತನಗೆ ಕೇಡು ತಪ್ಪದು

೧ ಮಱನ್ದುಮ್ ಪಿಱನ್ಗೇಡು ಶೂಟಿಱ್ಕ ಶೂಟಿ ಱ್ಕ
ನಱಞ್ಞ್ಚು ಮಿಱಞ್ಞ್ಚುಱ್ನ್ದವನ್ಗೇಡು —(ತಿರುಕ್ಕುಱಳ್)
ಮಱೆದುಂ ಪೆಱಂಗೆ ಕೇಡೆಸದಿರ್ಕೆಣಿಸಿದೊಡೆ
ಅಱನೆಪ್ರದೆಣಿಸಿದನ ಕೇಡಂ (ಪೆರರಿಗೆ ಕೇಡೆಣಿಸಿದೊಡೆ ತನಗೆ ಕೇಡು) ಅನು–ಎಲ್. ಗುಂಡಪ್ಪ

೨ ಕೇಡನೊಬ್ಬಗೆ ಬಗೆದುಂ ।
ಕೇಡು ತಪ್ಪದು ತನಗೆ --ಸರ್ವ. (ಪ.೧೧೩೬)

೮೦೭ ಹಾವಿನ ಮತ್ಸರ ಹನ್ನೆರಡು ವರ್ಷ

೧ ಪಾವುಗಳುಳ್ಳ ಪಗೆಯಂ ಮಱೆಯುವು ಎಂಬುದಂ ನನ್ನಿಮಾಡಿ —(೫-೯೯ವ) ವಿಕ್ರಮಾರ್ಜುನ ವಿಜಯಂ

೮೦೮ ಆತ್ಮಸ್ತುತಿ ಪರನಿಂದೆ ಧನಾಕಾಂಕ್ಷೆಯಿಲ್ಲದ ಯೋಗ್ಯ ಬ್ರಾಹ್ಮಣನಾದ ನನಗೂ ಮೂರುಕಾಸು, ಆ ದಡ್ಡನಿಗೂ ಮೂರುಕಾಸೆ ?

೧ ಅನ್ಯನಿಂದಾರ್ಥ ಕಾಂಕ್ಷಾತ್ಮಸ್ತುತಿಯು ಬಿಟ್ಟು
ಮಾನ್ಯನೆನಗೀ ಖಲನ ಸಮಕೊಂದು ದುಡ್ಡೆ ?
—ಕೈವಲ್ಯಕಲ ವಲ್ಲರಿ

೮೦೯ ಎನ್ನದೂ ಹರಿನಾಮ ಮಾಧವನದೂ ಹರಿನಾಮ ;
ಎನಗೂ ಜಲಶಯನ ಮಾಧವನಿಗೂ ಜಲಶಯನ ;
ಎನ್ನದು ಕಿರಿದೇನು ಮಾಧವನದು ಹಿರಿದೇನು ? ಟೋರೊ ಟೋರೊ ಎಂದಿತು

೧ ಮಾಧವಗೆ ಹರಿನಾಮ ವೆನಗೆಯುಂ ಹರಿನಾಮ
ಮಾಧವಗೆ ಜಲಶಯನ ವೆನಗೆಯುಂ ಜಲಶಯನ
ಮಾಧವನ ಪಿರಿದೇನು ಎನ್ನ ಕಿರಿದೇನೆನುತ ಕಪ್ಪೆ ವಿಷ್ಣುವ ಜರೆವೊಲು

೮೧೦ ತನ್ನ ಗುಣ ತಾನೇ ಹೊಗಳಿಕೊಳ್ಳೋದೆ ? ಪರರು ಹೊಗಳಬೇಕು

೧ ತಾನೆ ತನ್ನನು ಹೊಗಳಿಕೊಂಬರೆ ಮಾನನಿಧಿಯಾದವನು
— (ದ್ರೋ. ಪ. ೧೬-೩೩) ಕರ್ಣಾಟಕ ಭಾರತ ಕಥಾಮಂಜರಿ

೮೧೧ ಮುಂದೆ ಹೊಗಳಬಾರದು, ಹಿಂದೆ ತೆಗಳಬಾರದು

ಹೋಲಿಸಿ : ಅಜಿನಟ್ರೀಇ ಯಲ್ಲ ವೈಶೆಯ್ದಲಿಜ್ರೀದೇ
ಪುಜಿನಟ್ರೀಇ ಪ್ಪೊಯ್ಯರ್ತ್ತು ನಗೈ
—(ತಿರುಕ್ಕುಱಳ್)
(ಹಿಂದೆ ಹಳಿದು ಎದುರಿಗೆ ಹೊಗಳುವುದು ಎಲ್ಲಕ್ಕಿಂತ ಕೆಟ್ಟುದು)

೮೧೨ ಹೊಗಳಿದ ಎಮ್ಮೆ ಹೋರಿಗರ ಹಾಕಿತು

ಹೋಲಿಸಿ : ಕೊಂಡಾಡಿಡಡೆ ಕೊಬಡು ಕುಣಿವುದು
—(೩-೧೦) ಹಿಂಗಿರಾಜಪುರಾಣ

೮೧೩ ಅತಿ ಹಂಬಲ ದುಃಖದ ಮೂಲ

೧ ಆಶಾಶಾ ಪರಮಂ ದುಃಖಂ ನಿರಾಶಾ ಪರಮಂ ಸುಖಂ (ಸಂ)

೮೧೪ ಅತಿ ಆಸೆ ಗತಿಗೆಡಿಸಿತು

೧ ಅತಿ ಆಸೆ ಮಾಡುವನು । ಗತಿಗೇಡಿಯಾಗುವನು
—(ಸರ್ವ, ಪ. ೧೩೩೫)

೨ ಅತಿಕಾಂಕ್ಷೆಯಿಂದ ವಿಪರೀತ ಸಂಭವವಹುದು
—(ಸುಂ.ಕಾ. ೧೮-೨೨) ಶ್ರೀಮದ್ರಾಮಾಯಣಂ

೮೧೫ ಚಿಕ್ಕಾಸಿಗೆ ಆಸೆ ಮಾಡಿ ಕೋಶ ಕಳೆದುಕೊಂಡ

ಹೋಲಿಸಿ : ೧ ಕಾಣಿಯ ಲೋಭ ಕೋಟಿಯ ಲಾಭವ
ಕೆಡಿಸಿದಂದು —(೨-೨೯೬) ಬಸವೇಶ್ವರ ವಚನ

೨ ಕಾಣಿಗಾಡಿ ಕಡವ ಬಿಡುವರೆ ?
—(೧-೬೧) ಸೋಮನಾಥ ಚರಿತ

೩ ಅಳಿಗಾಡಿ ಬಳ್ಳವನು ಹೋಗಾಡಿದಂತೆ
—(ಪು ೫೩೪-೪೭) ಸಾಳ್ವಭಾರತ

೪ ಪಾಕಗೆ ಚಿಂತಿಸಿ ಪಣವ ನೀಗಿದರು
—(ಕುಮಾರವಿಯೋಗ ಸಂಧಿ-೯೬) ಭರತೇಶ ವೈಭವ

೫ ಅಡ್ಡದಾಸೆಗೆ ದುಡ್ಡಿನ ಲಾಭವ ಕಳೆವರೆ
—(೯-೧೭) ಅಖಂಡೇಶ್ವರ ವಚನ

೮೧೬ ಹೆಚ್ಚು ಹಾಲಿನ ಆಸೆಗೆ ಕರೆಯೊ ಎಮ್ಮೆ (ಹಸು) ಕೆಚ್ಚಲು ಕೊಯ್ದ

೧ ....ಪಾಲ್ಕಟಿವಾತನಾಕಳೊಳ್, ತಂದಪೆನೊರ್ಮೆಯೇ ಯೆನುತೆ
ಕೆಚ್ಚಲ ಕುಯ್ವುದದೆಂತು ಸನ್ಮತಿ ? —ಸನ್ಮತಿ ಶತಕ

೮೧೭ ತುಪ್ಪದ ಆಸೆಗೆ ಎಂಜಲು ನೆಕ್ಕಿದ

೧ ತುಪ್ಪದಾಸೆಗೆಂಜಲು ತಿಂದ ಪರಿ
—(೨-೩-೪) ಕೈವಲ್ಯ ಕಲ್ಪವಲ್ಲರಿ

೮೧೮ ಮಗುವಿನ ಆಸೆಯಿಲ್ಲ, ಮಗುವಿನ ಕೈಲಿರುವ ಬಾಳೆಹಣ್ಣಿನ ಆಸೆ

೧ ಮಕ್ಕಳ ಕೈಯ ಮಾಣಿಕಮಂ ಗುಗ್ಗರಿಯಂ ತೋಟಿ
ನಂಬಿಸಿಕೊಳ್ವಂತೆ —(ದ.ಆಶ್ವಾ-೮೨೮) ಧರ್ಮಾಮೃತ

೮೧೯ ತಾನಿರುವುದು ಕೋಳಿ ಗುಡಿಸಲು, ಮೇಲುಪ್ಪರಿಗೆ ಕನಸುಕಂಡ

೧ ಒಲೆಯು ಮುಂದೊರಗಿ ಮಾಡದ ಮೇಲಿನ ಸ್ವಪ್ನ!
—(೨೬–೨೦) ಸಿಂಗಿರಾಜ ಪುರಾಣಂ

೮೨೦ ತಿರುಕ ತಿಪೆ ಯ ಮೇಲೆ ಮಲಗಿ ಉಪ್ಪರಿಗೆ ಕನಸು ಕಂಡನಂತೆ
—ಕನ್ನಡ ಬಾವುಟ (ಪು. ೫೨೬)

೮೨೧ ಹೆಳವ ಹೆಮ್ಮರದ ಹಣ್ಣು ಬಯಸಿದಂತೆ

೧ ಹೆಳವ ಮಾವಿನ ಹಣ್ಣ ಬಯಸಿ ಬಂದೆ ಹೊದಕುಳಿ ಕೊಂಬಂತೆ
—(೧೮–೮೯) ನೇಮಿಜಿನೇಶ ಸಂಗತಿ

೮೨೨ ನೆಚ್ಚಿದ ಎಮ್ಮೆ ಕೋಣ (ನಾಯಿತು) ಸನ್ನು ಈಯಿತು

೧ ನಚ್ಚಿದೆಮ್ಮೆ ಕೋಣನನೀದತ್ತು (೨-೧೦೩)
—ಧರ್ಮಾಮೃತ

೨ ನಚ್ಚಿನೆಮ್ಮೆ ಕೋಣನನೀದಂತಾದುದು
—(೭-೫೦ವ) ನೇಮಿನಾಥಪುರಾಣಂ, ನೇಮಿಚಂದ್ರ

೩ ನಚ್ಚಿನೆರ್ಮೆ ಕೋಣನನೀದತ್ತು
—(೬-೪೪) ಪಾರ್ಶ್ವನಾಥ ಪುರಾಣಂ

೮೨೩ ಹುಡುಕಿಕೊಂಡು ಹೋದ ಬಳ್ಳಿ ಕಾಲಿಗೆ ತೊಡರಿದ ಹಾಗೆ

೧ ಅಱಪ ಬಳ್ಳಿ ಕಾಲ್ತೊಡರ್ದತ್ತು
—(೪-ಪು ೫೯, ಸಾಲು ೧೮) ವಡ್ಡಾರಾಧನೆ

೨ ಅಱಸುವ ಬಳ್ಳಿ ಕಾಲ್ತೊಡರ್ದುದು ಎಂಬ ನಾಣ್ಣುಡಿ
ಪ್ರತ್ಯಕ್ಷವಾದುದು —(೨೩೨ವ) ಕರ್ಣಾಟಕ ಪಂಚತಂತ್ರ

೩ ಅಱಸುವ ಬಳ್ಳಿ ಕಾಲೊಳ್ ತೊಡರ್ದುದು
—(೯–೧೪೭) ೧೦–೨೪೮) ಧರ್ಮಾಮೃತ

೪ ಅಱಸುವ ಬಳ್ಳಿ ಕಾಲ ಸುತ್ತಿತು
—(೭೫೨) ಪ್ರಭುದೇವರ ವಚನಗಳು

೫ ಅಱಸುವ ಬಳ್ಳಿ ಕಾಲ್ದೊಡರ್ದುದು
—(೬-೬೩ವ) (೭-೫೦ವ) ನೇಮಿನಾಥಪುರಾಣಂ, ನೇಮಿಚಂದ್ರ

೬ ತಾನಱಸಿ ಪೋಗಲಿರ್ಪ ನಿಧನಮೆ ತನಗಿದಿರ್ಗೆವಂದುದು
—(೭೪-೭೮) ಪಾರ್ಶ್ವನಾಥಪುರಾಣಂ

೭ ಬಿಡದೆಯಱಸುವ ಬಳ್ಳಿ ಕಾಲನು ತೊಡರಿತು
—(೧೧-೨೪) ಪ್ರಭುಲಿಂಗಲೀಲೆ

೮ ಅರಸುವ ಬಳ್ಳಿ ಕಾಲನು ತೊಡರಿತ್ತು
(೧೩-೫೩) ನೇಮಿಜಿನೇಶ ಸಂಗತಿ

೯ ಬಿಡದಱಸುವ ಲತೆ ಕಾಲಂ ತೊಡರ್ದಂತಾಯ್ತು
—(೮-೧೨೯) ಶೃಂಗಾರಸಾರ

೧೦ ತೊಳಲುತರಸುವ ಬಳ್ಳಿ ಕಾಲ್ದೊಡಕಿದಂತೆ
—(೨-೪೫) ಕನ್ನಡ ಜೈಮಿನಿಭಾರತ

೧೧ ಬಿಡದರಸಿ ತೊಳಲುತಿಹ ಬಳ್ಳಿ ತಾನೇ ಕಾಲ್ಗೆ
ತೊಡರಲೇನೊಳ್ಳಿತಲ್ಲವೆ ?
—(ಸಂ. ೪೩-ಪ೧೪) ಚೆನ್ನಬಸವ ಪುರಾಣ

೧೨ ಅಱಸುತಿಹ ಲತೆ ಕಾಲ ತೊಡಕಲು ।
ಹಱಿದು ಬಿಸುಡುವರುಂಟೆ ?
—ಪ್ರಹ್ಲಾದಚರಿತೆ. ನರಹರಿ

೮೨೪ ಮತಿಗೆಟ್ಟರೆ ಗತಿ ಕೆಡುವುದು

೧ ಯಾಮತಿ ಸ್ಸಾಗತಿಃ —(ಸಮಯಪರೀಕ್ಷೆ)

೨ ಅಱಿವು ಕೆಟ್ಟೊಡೆ ಗತಿ ಕೆಡುಗುಂ

೮೨೫ ಬುದ್ಧಿವಂತನೇ ಬಲವಂತ

೧ ಬುದ್ಧಿರ್ಯಸ್ಯ ಬಲಂತಸ್ಯ —(ಸು)

೮೨೬ ಎಲ್ಲ ಹೋಗುವಾಗ ಅರ್ಧ ಬಿಡುವನೇ ಜಾಣ

೧ ಸರ್ವನಾಶೇ ಸಮುತ್ಪನ್ನೇ ಅರ್ಧಂ ತ್ಯಜತಿ ಪಂಡಿತಃ —(ಸಂ)

೮೨೭ ಜಾಣನ ಗೋಣಿ ಬರಿದು

೧ ಕಡು ಚಪಳನ ಗೋಣಿ ಬಱಿದೆಯಾದಂತಕ್ಕುಂ
—(೪–೨೨೮) ಧರ್ಮಾಮೃತ

೮೨೮ ದೃಢಬುದ್ಧಿಯಿಲ್ಲದವ ಕಡುಮೂರ್ಖ

೧ ದೃಢಬುದ್ಧಿಯಿಲ್ಲದವ ಕಡುಮೂರ್ಖನಯ್ಯ
—(ಪುರಂದರದಾಸರು)

೮೨೯ ಅಡವಿಯಲ್ಲಿ ಬೆಳುದಿಂಗಳು ಕಾದ ಹಾಗೆ

೧ ಕಾನನದ ಬೆಳದಿಂಗಳಂದದಿ ವ್ಯರ್ಥವಾಗಿಹುದು

೨ ಕಾನನದ ಬೆಳದಿಂಗಳಂತೆ ನಿಷ್ಫಲವು
—ಕೈವಲ್ಯಕಲ್ಪವಲ್ಲರಿ

೮೩೦ ಎತ್ತಿನ ಮುಂದೆ ತೆಂಗಿನಕಾಯಿ ಒಡೆದ ಹಾಗೆ

೧ ಎತ್ತು ತೆಂಗಿನಕಾಯಿ ಬಲ್ಲುದೆ
—(೧–೪೧) ಅನುಭವಾಮೃತ

೮೩೧ ಕಾಡಿನಲ್ಲಿ ಅತ್ತ ಹಾಗೆ

೧ ಅರಣ್ಯರುದಿತಮುದಂ ಬಗೆವಾಗಳ್
—(೧–೨೩) ಆದಿಪುರಾಣಂ

೨ ಕಾನನದ ರೋದನದ ಬಗೆ
—(ಅಯೋ.ಕಾಂ. ೪–೪೧) ಶ್ರೀಮದ್ರಾಮಾಯಣಂ

೩ ಕಾನನ ರೋದನಂ
—(೬–ಪು ೩೭ : ೧೨ನೆಯ ಸಾಲು) ಶ್ರೀರಾಮಾಶ್ವಮೇಧಂ

೮೩೨ ಕಿವುಡನ ಮುಂದೆ ಸಂಗೀತ ಹಾಡಿದ ಹಾಗೆ

೧ ದುರಾಗ್ರಹಸ್ಯ ಹಿತೋಪದೇಶೋ ಬಧಿರಸ್ಯಾಗ್ರತೊ ಗಾನಮಿವ
—(೧೩–೧೪೧) ಧರ್ಮಾಮೃತ

೨ ಬಧಿರನ ಮುಂದೆ ಸಂಗೀತ ಸಾಹಿತ್ಯವನೋದಿದರೇನು, ಕೇಳಿ
ತಿಳಿದು ಪರಿಣಾಮಿಸಬಲ್ಲನೆ ?
—ಸ್ವತಂತ್ರ ಸಿದ್ಧಲಿಂಗೇಶ್ವರ

೩ ಸದ್ಗೀತವನತಿ ಬಧಿರಂ ಬಲ್ಲನೆ ?
—(೧–೨೭) ತ್ರಿಷಷ್ಠಿ ಪುರಾತನ ಚರಿತ್ರಂ

೪ ವೇಣು ಧ್ವನಿ ಬಧಿರನ ಬಳಿ ಮಾಡಿದಂತೆ —ಕನಕದಾಸರು

೫ ಬಲ್ಲನೆ ಗಾನಮಂ ಬಧಿರನ್
—(೪೧-೩೯) ವೃಷಭೇಂದ್ರ ವಿಜಯ

೬ ಬಧಿರಗೆ ಸೊಗಸೆ ನವರಸಭರಿತ ವೀಣಾನಿನಾದ ?
—(ಯು.ಕಾಂ ೩–೨೦)

(ಶ್ರೀರಾಮಾಭ್ಯುದಯ ಕಥಾ ಕುಸುಮ ಮಂಜರಿ)

೭ ತಿಳಿವನೇ ಬಧಿರ ಸಂಗೀತದಾಪರಿಯ
—(ಸಂ. ೮–೩ ಮಹಲಿಂಗಲೀಲೆ

೮೩೩ ಕೋಣನ ಮುಂದೆ ವೀಣೆ (ಕಿನ್ನರಿ) ಬಾರಿಸಿದ ಹಾಗೆ

೧ ಕೋಣಗೆ ವೀಣಾಗಾನವವೇತಕೆ —ಹ.ಕೀ.ತ

೨ ಕೋಣನೆದುರಿಗೆ ಕಿನ್ನರೀ ಮಿಡಿದಂತೆ
—(೧–೧೨೫) ಪುರಂದರದಾಸರ ಕೀರ್ತನೆಗಳು

೩ ಕೋಣಗೇತಕೆ ಗೀತ ವೀಣಾರವದ ಸುಸ್ವರವು
— (೧–೪೧) ಜ್ಞಾನಸಿಂಧು

೪ ದೃಢಮೂರ್ಖತೆಯುಂ ಪೊಂದಿದ । ಜಡನಿದಿರೊಳ್ಶಾಸ್ತ್ರ
ತತ್ವವಂಗಳ ಪುವುದೇಂ ॥
ಬಿಡದೆಯುಂ ಕೋಣಂಗಿದಿರೊಳ್ನುಡಿಯಿಪ ಕಿನ್ನರಿಯ ಇಂಚರಕೆ
ಸಮನಕ್ಕುಂ ॥ —(೩೭) ಕನ್ನಡ ನೀತಿಸಾರವು

೮೩೪ ಗೋಡೆ ತೊಳೆದರೆ ಬರೀ ಮಣ್ಣು

೧ ಕುದುರನೇಸು ತೊಳೆದರೆಯುಂ ಕೆಸರುಃ ಮಾಬುದೆ ?
—ಬಸವೇಶ್ವರ ವಚನ

೨ ಕುದಿಜಿನೆಸಿತೆನಿತು ಕರ್ಚುವೊಡಮನಿತನಿತೆ ಕೆಸರ್ನೆಗೆವಂತೆ
—(ಪು ೪೯-೧೮ವ) ಜೀವ ಸಂಬೋಧನ

೩ ಗೋಡೆಯ ನಃಡುಗ ದೊರಸುತ್ತೂರಸುತಂ ತೊಳೆದೊಡೆ
ಬಱಿಯ ಮಣ್ಣಪ್ಪುದಲ್ಲಾ ?

೮೩೫ ನೀರಿನ (ಬೂದಿಯು)ಲ್ಲಿ ಹೋಮ ಮಾಡಿದ ಹಾಗೆ

೧ ಬೂದಿಯಲಿ ಬೇಳ್ದ ಹವಿ
—(ಸಪ್ತವಶಾ-೨೪) ಜಗನ್ನಾಥವಿಜಯಂ

೨ ಬೂದಿಯೊಳು ಬೀಳುವಂತೆ —ಸಿದ್ಧರಾಮಚಾರಿತ್ರ

೩ ಬೂದಿಯೊಳು ಬೇಳಿದ ಹವಿಸ್ಸು
—(ಉ,ಪ. ೪-೪೯) ಕರ್ಣಾಟಕ ಭಾರತ ಕಥಾಮಂಜರಿ

೪ ಬೂದಿಯ ಮೇಲೆ ಬಿಳ್ದಹವಿ
—(೧೬) ಗುರುಮೂರ್ತಿ ಶಂಕರಶತಕ

೫ ಬೂದಿಯಲಿ ಬೇಳಿದ ಹೋಮ
(೪೧–೨೩) ಶಿವತತ್ವ ಚಿಂತಾಮಣಿ

೬ ಬೂದಿಯೊಳ್ ಬೇಳ್ದ ಹೋಮ
—(ದ್ವಾ.ಆಶ್ವಾ ; ೮೪) ವೀರಭದ್ರವಿಜಯ

೭ ಬೂದಿಯ ಹೋಮ
—(೬೧) ಶ್ರೀವಾದಿರಾಜ ಸ್ವಾಮಿಗಳ ಕೃತಿ

೮ ಬೂದಿಯೊಳು ಬೇಳ್ದ ಹವಿ !
(೯-೬೧) ರಾಘವಾಂಕಚರಿತ್ರೆ

೯ ಜಲಧಿಕೃತ ಹೋಮ
—(ಕಿ.ಕಾಂ. ೧೪-೧೩) ಶ್ರೀಮದ್ರಾಮಾಯಣಂ

೧೦ ಬೂದಿಯೊಳಗಣ ಹೋಮ
—(೧೦-೧೫) ಅನುಭವಾಮೃತ

೧೧ ಬೂದಿಯ ಲೊಳಿದು ಬೇಳಿದ ಹವಿಯ ಪೋಲಹುದು
—(ಸಂ. ೩-೪೦ ಉಪಶಮಪ್ರಕರಣ) ಲಘುಯೋಗ ವಾಸಿಷ್ಠ

೧೨ ನೀರಿನೊಳ್ ಹೋಮವ ಗೆಯ್ವ ಪೊಲ್

೮೩೬ ಬೋರೆ ಮೇಲೆ ಮಳೆ ಸುರಿದ ಹಾಗೆ

೧ ಗಿರೌ ವರ್ಷತಿ ವಾಸನಃ (ಸು)

೨ ಬೋರೆಗಲ್ಲಿನ ಮೇಲೆ ನೀರು ಎರೆದಂತೆ
—ಕನ್ನಡ (ಜಾ, ಪು. ೨೬೮)

೩ ಮೂರ್ಖಂಗೆ ಬುದ್ಧಿಯನು । ನೂರ್ಕಾಲ ಪೇಳಿದರೆ
ಬೋರ್ಕಲ್ಲ ಮೇಲೆ-ಮಳೆಗರೆದರಾಕಲ್ಲು
ನೀರ್ಕೊಳ್ಳಲಹುದೆ ? ಸರ್ವಜ್ಞ —(ಸರ್ವ, ಪ. ೯೩೫)

೮೩೭ ಸಗಣಿಯ ಬೆನಕನಿಗೆ ಸಂಪಗೆ ಹೂ ಮುಡಿಸಿದರೆ ಗಂಜಳದ ವಾಸನೆ ಬಿಟ್ಟೀತೆ ?

೧ ಸಗಣಿಯ ಬೆನಕಂಗೆ ಸಂಪಗೆಯರಳಿನಲ್ಲಿ ಪೂಜಿಸಿದರೆ ರಂಜನೆ
ಯಲ್ಲದೆ ಅದರ ಗಂಜಳ ಬಿಡದು —ಬಸವೇಶ್ವರ ವಚನ

೮೩೮ ಹಂದಿ ತೊಳೆದರೂ ಕೆಸರಿನಲ್ಲಿ ಹೊರಳೋದು ಬಿಡದು

ಹೋಲಿಸಿ : ಹಂದಿಗೆ ಶ್ರೀಗಂಧ ಹಚ್ಚಿದರೂ ಕೊಚ್ಚೆಯಲ್ಲಿ
ತಿರುಗಾಡುವುದನ್ನು ಬಿಡದು

೮೩೯ ಹಂದಿಗೆ ಸಕ್ಕರೆ ತುಪ್ಪ ಉಣಿಸಿದರೆ ಆನೆ ಆಗುತ್ಯೆ ?

೧ ಹಂದಿಗೆ ಸಕ್ಕರೆ ತುಪ್ಪವನ್ನುಣಿಸಲು ದಂತಿಯಾಗಬಲ್ಲುದೆ ?
—ಪುರಂದರದಾಸರು

೮೪೦ ಅಂಗಡಿಮಾರಿ ಗೊಂಗಡಿ (ಕಂಬಳಿ) ಹೊದ್ದ

ಹೋಲಿಸಿ : ಸಾಲವ ಮಾಡಿ ಸಕ್ಕರೆ ಮೆದ್ದ ತೆರ ।
—(೨೨-೨೭) ಹರಿಕಥಾಮೃತಸಾರ

೮೪೧ ಇಲಿಗೆ ಹೆದರಿ ಇದ್ದ ಮನೆ ಸುಡಬಹುವೆ ?

೧ ಇಲಿಗಂಜಿ ಮನೆಯ ಸುಡುವರುಂಟೆ ? —ಬಸವೇಶ್ವರ ವಚನ

೨ ಕಚ್ಚುವ ತ್ರಿಗುಣೆಗಾಗಿ ಮನೆಯ ಸುಟ್ಟವರುಂಟೆ
—ಮಡಿವಾಳ ಮಾಚಿದೇವ

೩ ಆಖು ಭಯದಿಂದಾವಾಸಮಂ ಮಾಡದಿರ್ಪರೆ
(೧-೩೭) ಧರ್ಮಪರೀಕ್ಷೆ

೪ ನಿಕೇತನವ ನಿಲಿಗಳುಕಿ ಬಿಡುವರೆ
—(೧-೨೪) ಜೀವಂಧರ ಚರಿತೆ

೫ ಸೊಳ್ಳೆಗೆ ಹೆದರಿ ಮನೆ ಬಿಡಬಹುದೆ ?
—ಪುರಂದರದಾಸರು

೮೪೨ ಎದುರಿಗೆ ಆನೆ ಬಂದಾಗ ಗುರ್ತಿಸದೆ ಹೆಜ್ಜೆ ನೋಡಿ 'ಹೋದದ್ದು ಆನೆಯೋ' ಅಂದನಂತೆ

೧ ಅನೆಗಂಡಡಿಯನಱಸುವ...ಗಾಂಪಂತೆ
—(೯-೧೧೫) ಧರ್ಮಾಮೃತ

೨ ಆನೆಗಂಡಡಿಯಂಱಸುವುದೇ —(೧-೮೦) ಸಮಯ ಪರೀಕ್ಷೆ

೩ ಆನೆಗಂಡಡಿಯನಟಿಸುವಂತೆ
—(೧೨-೨೦ವ ; ಪು ೨೨೧) ಜೀವ ಸಂಬೋಧನ

೮೪೩ ಕಂಚು ಬಿಟ್ಟು ಪಂಚು ಹಿಡಿದ

೧ ಕಂಚ ಬಿಟ್ಟೋಡಂ ಪಿಡಿವ....ಮರುಳಂ ಪೋಲ್ಕುಂ
—(೧೦-೮೩) ಧರ್ಮಾಮೃತಂ

೨ ಕಂಚನೊಲ್ಲದೆ ಬಿಟ್ಟು ಹಂಚು ಹಿಡಿದ
—ಮಡಿವಾಳ ಮಾಚಿದೇವ

೮೪೪ ಕಸ್ತೂರಿ ಹುರಿದು ಅರಳು ಮಾಡಿದಂತೆ

೧ ಕತ್ತುರಿಯ ಸುಟ್ಟರಳೆ ಕುಟಿಕಲನು ಗೆಯ್ವರೇ
—(೮–೭೬) ಹರಿಶ್ಚಂದ ಕಾವ್ಯ

೨ ಸುಡಿಸಿದರೊ ಕಸ್ತೂರಿಯ ನರಳಿಗೆ
—(೪-೫-೧೧) ತೊರವೆ ರಾಮಾಯಣ

೮೪೫ ಕೀಲಿಗಾಗಿ ದೇವಸ್ಥಾನ ಅಳಿದನಂತೆ

೧ ಬೀಗುಲಕೆ ಪೆರ್ಮರನಂ ಕಡಿವಂತೆ
—(೮-೯೫) ವಡ್ಡಾರಾಧನೆ

೨ ಸ ಪಾಪಃ ಕೇಲಕಾರ್ಥೇನ ದಹನ್ನಿವ ಸುರಾಲಯಂ
(೧೬೨) ಕರ್ಣಾಟಕ ಪಂಚತಂತ್ರಂ

೩ ಕೀಲ್ಗೆ ದೇಗುಲಮನಟಿವಂತೆ, ನೂಲ್ಗೆ ಮಣಿಯನೊಡೆವಂತೆ
—(೮-೨೯ ; ಪು. ೧೪೮) ಜೀವಸಂಬೋಧನ

೪ ಕೀಲಿಂಗೆ ದೇಗುಲವ ಕಿತ್ತು ಹಾಯ್ಕುವ ಬಗೆ !
—(೩೩-೨೬ ; ೪೩-೮, ೭-೨೯) ಅಡಿಟಿಪ್ಪಣಿ

೫ ಕೀಲಿಂಗೆ ದೇಗುಲವನಳಿವ ದರ್ಪ
—(೩-೧೦) ಹರಿಶ್ಚಂದ್ರ ಕಾವ್ಯಂ)

೬ ಹಿರಿಯ ಗುಡಿಯ ಕೆಡಹಿ ಮೊಳೆಯ ಪಡೆದ ಮಾಳ್ಕೆ !
—(೩೦-೩) ಸುಬೋಧಸಾರ

೭ ಕೀಲಿಂಗೆ ದೇಗುಲವಳವನ ತಪ್ಪದಂತೆ —(ಪು ೮೧:೯೮)

೮೪೬ ಗಂಗೆ ಇಟ್ಕೊಂಡು ಒಮಿಂದ ನೀರಿಗೆ ಕೈಒಡ್ಡಿದ ಹಾಗೆ

೧ ಸುರನದಿಯು ತೋಯುತಿರೆ ನೀರಡಸಿ ಓಮುಜಲಕೆ ಪರಿವಂತೆ
—(ಸಂ ೨೬, ಪ, ೭೬. ಕನ್ನಡ ಜೈಮಿನಿ ಭಾರತ)

೮೪೭ ಅಟ್ಟ ಪಾಯಸದಲ್ಲಿ ಕಿರ ಹೆಟ್ಟಿದ

೧ ಅಟ್ಟ ನೈವೇದ್ಯವನು ಕಿರಹಿನಲಿಟ್ಟವೊಲು
—(ಪಂ.ಸ್ಕಂ. ಸಂ ೧೦:೪೬) ಕನ್ನಡ ಭಾಗವತ

೮೪೮ ಮನೆಗೆ ಬಂದ ಮಹಾಲಕ್ಷ್ಮಿಯನ್ನು ಕಾಲಲ್ಲಿ ಒದ್ದಹಾಗೆ

೮೪೯ ಬಾಗಿಲಿಗೆ ಬಂದ ಭಾಗ್ಯವನ್ನು ಬೇಡ ಅಂದ ಹಾಗೆ

ಹೋಲಿಸಿ : ೧ ಸಿರಿಬರೆ ಪೊಣಕಾಲ ನೊಡ್ಡಿದರ್
—(೩-೧೦೮;೮-೧೬೯:೧೧-೧೭) ಧರ್ಮಾಮೃತ

೨ ಸಿರಿಬರೆ ಪೊಳಕಾಲನಾಂಪರಾದರುಮೊಳರೇ
—(೩-೬೦) ಸಮಯಂ ಪರೀಕ್ಷೆ

೩ ಸಿರಿಬರೆ ಪೊಜಗಿಕ್ಕುವರೇ
—(೭-೧೯) ಸೊಬಗಿನ ಸೋನೆ

೪ ಉತ್ತಮಾಂಗಕೆ ಬಂದ ಸಿರಿಯುನು ಮತ್ತೆ ಕಾಲಿಂದೊದೆವರೆ
—ಕನ್ನಡ ಭಾಗವತ

೮೫೦ ಹಾಲು ಒಡಿದು ಬೆಣ್ಣೆ ಹುಡುಕಿದಂತೆ

೮೫೧ ಬೆಣ್ಣೆ ಇಟ್ಕೊಂಡು ತುಪ್ಪಕ್ಕೆ ಅಲೆದ (ಅತ್ತ) ಹಾಗೆ

೮೫೨ ಮನೆಯಲ್ಲಿ ಬೆಣ್ಣೆ ಕಾಯಿಸಿಕೊಂಡು ತುಪ್ಪಕ್ಕೆ ಸಾಲಕ್ಕೆ ಹೋದರು

೧ ಹಾಲು ಒಡಿದು ಬೆಣ್ಣೆಯನರಸಲುಂಟೆ ?
—(೪೨೮) ಚೆನ್ನಬಸವಣ್ಣನವರ ವಚನಗಳು

೨ ಪಾಲ ಹಿಡಿದು ಬೆಣ್ಣೆಯನರಸಲುಂಟೆ
—(೧೧೪) ಮಹಾದೇವಿಯಕ್ಕನ ವಚನಗ

೮೫೩ ಮಜ್ಜಿಗೆ ಕೊಳ್ಳೋಕೆ ಮಾಣಿಕ್ಯ ಮಾರಿದಂತೆ

೧ ಶಿವ ಸುಖಮನಜಿ಼ಯದೀ ಮಾ
ನವ ಸುಖದ ನಿಮಿತ್ತದಿಂ ತಪಂಗೆಯ್ವವರೊ
ಪ್ಪುವ ಮಾಣಿಕಮಂ ತೌಡಿಂ
ಗವಯವದಿಂ ಮಾಱುಗೊಡುವ ಮರುಳಂ ಪೋಲ್ಗುಂ
—(೧೧-೯೧) ಶಾಂತಿಪುರಾ

೨ ಅಟಿಗೆ ಮಾಱುವವೊಲ್ ಮಾಣಿಕಮಂ
—(೪-೫೦) ಮಲ್ಲಿನಾಥ ಪುರಾ

೩ ಮಾಣಿಕಮಂ ತವುಡಿಂಗೆ ಮಾಱುವಂತಾಗಿಕ್ಕುಕ
—(೪-೩೨) ಸಮಯ ಪರಿ

೪ ಅಳಿಗೆ ಮಾಣಿಕಮಂ ಕೊಳ್ವಂತೆ
(೭-೫೦ವ) ನೇಮಿನಾಥಪುರಾಣಂ, ನೇಮಿಚ

೫ ಅಳಿಗೆ ಮಾಣಿಕಮಂ ಮಾರುವ ತೆಱದಿ
(೧-೪೬) ನೇಮಿನಾಥಪುರಾಣಂ. ನೇಮಿಚ

೬ ಗಾಜಿಗೆ ಮಣಿಯಂ ಮಾರುವವೊಲ್
—(ಲೀಲಾವತಿ ಪ್ರಬಂಧ) ನೇಮಿಚ

೭ ಫ(ಧ)ನ ಕಳಿಗೆ ಮಾಣಿಕಮ ನೀವನ ತೆಱಂ
—(೧-೬೩) ಪಾರ್ಶ್ವನಾಥ ಪುರ

೮ ಚಿಂತಾಮಣಿಯ ನಪೆಗಿತ್ತು ಗಾಜಿನ ಮಣಿಗೊಂಡ
ಮರುಳ್ಗೆ ದೊರೆಯಾದಂ
—(೭-೯೦) ಶಾಂತೀಶ್ವರ ಪುರ

೯ ರನ್ನಮನಳಿಗಿತ್ತರೆಂಬ ನಾಣ್ಣುಡಿನ ವೋಲ್
—(೮-೧೨೫) ಅಭಿನವ ದಶಕುಮಾರ

೧೦ ಮುತ್ತನೊರೆವರೆ ಮೊರದ ತೌಡಿಗೆ

—(೨೩-೩೦) ಕೌಶಿಕ ರಾಮಾಯಣ

೧೧ ಮಾಣಿಕಗೊಟ್ಟು ಮೊಸರುಗೊಳ್ಳುವ ಮರುಳನಂತೆ

೮೫೪ ಮೂಗು ಕೊಟ್ಟು ಕನ್ನಡಿ ತಕ್ಕೊಂಡ ಹಾಗೆ

೧ ಮೂಗನಿತ್ತು ಕನ್ನಡಿಯ ನೋಡುವರೆ

—(೬-೭) ಹರಿಶ್ಚಂದ್ರ ಕಾವ್ಯಂ

೮೫೫ ಒಬ್ಬನನ್ನು ಬಾರೊ ಅಂದ್ರೆ ಇಬ್ಬರು ಬಂದ್ರು ತಬ್ಬಲಿ ಮುಂಡೆ ಮಕ್ಕಳ್ರು !

೧ ಅಯ್ಯೋರು ಅಯ್ಯೋರು ಸಪ್ಪುವರು ।
ಐದು ಹೋಳಿಗೆ ಹೊಡೆಯುವರು ।
ಒಬ್ಬರ್ನ ಕರೆದರೆ ಇಬ್ಬರು ಬರತಾರ

—(ಪು. ೫೫) ಜನಾಂಗದ ಜೀವಾಳ

೮೫೬ ಮಂಚದ ಕಾಲಿನಂತೆ ಪಂಚ ಪಾಂಡವರು ಮೂರೇಜನ ಅಂತ ಎರಡು ಬೆರಳು ತೋರಿಸಿದ.

೧ ಅಂದಿರ್ದ ಪಂಚ ಪಾಂಡವರು ಮಂಚದ ಕಾಲ್ಗಳಂದದಿಂ
ಮೂವರೆಂದೆರಡುಂಗುಲಿಗಳಂ ಮುಂದಿಹರ್ಗೆ ತೋರ್ಪನಂತೆ

—(೫-೨೪-೩) ಕೈವಲ್ಯಕಲ್ಪವಲ್ಲರಿ

೮೫೭ ಮೂಳಿಯು ಮೂಗುತಿ ಹೋಗಲಾಗಿ ಮೂಲೆಯ ಕಸವೆಲ್ಲ ಹೊರಗೆ ಹೋಯಿತು.

೧ ಮೂಗುತಿ ಸಿಡಿಯೆ ಮೂಲೆಯ ಕಸವ ಬಳಿವೇ ಹುಡುಕಿ ಕಂಡಂತೆ

—(೧೮-೬) ಜ್ಞಾನಸಿಂಧು

೮೫೮ ಕೆಸರು ತೊಳೆದು ಕಾಲು ತೊಳೆದುಕೊಳ್ಳೋಕಿಂತ ತುಳಿದೇ ಇರೋದು ಮೇಲು

೧ ಪ್ರಕ್ಷಲನಾದ್ಧಿ ಪಙ್ಕಸ್ಯ ದೂರಾದಸ್ಪರ್ಶನಂ ವರಂ

—(ಪ್ರಕರಣ-೬) ರಾಯಸ್ವಾರು ವಿಜಯ

೮೫೯ ನಡೆಯುವ ಕಾಲು ಎಡವುತ್ತೆ

೮೬೦ ನಡೆಯೋದ ಕಲಿತ ಮೇಲೆ ಎಡಗೇ ಎಡಗ್ತಾನೆ

೧ ನಡೆವರೆಡಹದೆ ಕುಳಿತರೆಡಹುವರೆ ?
—(೧–೨೩) ಹರಿಶ್ಚಂದ್ರಕಾವ್ಯಂ

೨ ನಡೆವರೆಡಹದೆ ಬಜುಂಬರೆಡಹುವರೆ ?
—(೧–೧೮) ಸೋಮನಾಥ ಚರಿತ್ರೆ

೩ ನಡೆವನೆಡಹುವನಲ್ಲ ದುಡುಂದವರೆಡಹುವರೆ
—(೧–೨೮) ಜೀವಂಧರ ಚರಿತೆ

೪ ನಡೆವರೆಡಹುವರ್
—(ಅಯೋ.ಕಾಂ. ೩೩–೩೬) ಶ್ರೀಮದ್ರಾಮಾಯಣಂ

೮೬೧ ಅತ್ತೆಗೆ ಅಗಸನ ಸ್ನೇಹ, ಸೊಸೆಗೆ ಬುದ್ಧಿ ಮಾತು

೧ ಹೊದ್ದಿ ಸೊಸೆಗೆ ಬುದ್ಧಿವೇಳ್ವತ್ತೆಯುಸಗನೊಳಿದ್ದಂತೆ
—(೯–೮೨) ನಾಗಕುಮಾರಚರಿತಂ

೮೬೨ ಅತ್ತೆ ಒಡೆದ ಮಡಕೆ ಅಡಕಲಾಗೆ, ಸೊಸೆ ಒಡೆದ ಮಡಕೆ ಅಂಗಳದಾಗೆ

೧ ಅತ್ತೆ ಮಾಡಿದ ತಪ್ಪು । ಗೊತ್ತಿಲ್ಲದಡಗಿಹುದು
ತೊತ್ತದನು ಮಾಡಿ–ದಾಕ್ಷಣದಿ ಸುತ್ತಲುಂ
ಗೊತ್ತಿಹುದು ನೋಡ ! ಸರ್ವಜ್ಞ
—(ಸರ್ವ, ಪ, ೧೩೩೬)

೮೬೩ ಆನೆ ತನ್ನ ಮೇಲೆ ತಾನೇ ಮಣ್ಣು ಹಾಕಿಕೊಂಡ ಹಾಗೆ

ಹೋಲಿಸಿ : ಮಿಂದು ಮಿಂದು ಆನೆ ಹುಡಿ ಹೊಯ್ದು ಕೊಂಬಂತೆ
—(೩೬) ಶ್ರೀ ವ್ಯಾಸರಾಯರ ಕೃತಿಗಳ

೮೬೪ ತೆಂಗಿನ ಮರ ಏರಿ ಕೈಬಿಟ್ಟ ಹಾಗೆ

೧ ಮರವನೇರಿ ಕೈಬಿಟ್ಟ ಹಾಗೆ —(ಮರುಳುಶಂಕರದೇವ

೮೬೫ ಮರ ಕಡಿದು ಮೈಮೇಲೆ ಬೀಳಿಸಿಕೊಂಡ ಹಾಗೆ

೧ ತಮ್ಮ ಮೇಲೆ ತಾವೇ ಮರಂಗಡಿದರ್
—(೨೮೭ವ) ಕರ್ಣಾಟಕ ಪಂಚತಂತ್ರ

೨ ತಟಿನನಗಬ್ದು ಮೇಲೆ ಕೆಡಪಿಕೊಳ್ವರೆ
—ಚಿಕ ದೇವರಾಜ ವಂಶಾವಳಿ

೮೬೬ ಬೀ (ಹಾ) ದಿ (ದಾರಿ)ಯಲ್ಲಿ ಹೋಗುವ ಮಾರಿಯನ್ನು ಊರ (ಮನೆ) ಹೊಕ್ಕು ಹೋಗು ಅಂದಂತೆ

೧ ಹೋದ ಮಾರಿಯು ಕರೆದು ಮನೆಯೊಳಗಾದರಿಸಿದವರುಂಟೆ ?
—(ಆ.ಪ. ೨೦–೩೩) ಕರ್ಣಾಟಕ ಭಾರತ ಕಥಾಮಂಜರಿ

೨ ಉಕ್ಕಲಿಸುವನು ಗಾಂಬ ಕೂಗಿ ಮಾರಿಯನು
(೩೩–೨೫) ಸಿಂಗಿರಾಜ ಪುರಾಣಂ

೩ ಮಾತು ಮಾತಿಂದೆ ಮಾರಿಯು ಕರೆದುಕೊಂಡೆ
—(೯–೨೩) ಸಿಂಗಿರಾಜ ಪುರಾಣಂ

೪ ಊರ ಹೊಗಿಸಿದರಜಿಂದಜಿಂದು ಹೆಮ್ಮಾರಿಯನು
—(೫–೭–೧೬) ತೊರವೆ ರಾಮಾಯಣ

೫ ಕೂಗಿ ಮಾರಿಯು ಕರೆದುಕೊಂಬುದು ಕಣೆಯುವಲ್ಲ
—(೬–೨–೫೭) ತೊರವೆ ರಾಮಾಯಣ

೬ ಮನೆಗೆ ಮಾರಿಯು ಕೊಂಡು ಪೋಪವೊಲ್
—(೩–೩೭) ಐರಾವತ

೭ ಪೋದ ಮಾರಿಯುಂ ಕರೆತಂದು ಪುರಮಂ ಪಾಳ್ಮಾಡಿದ
—(೭-೬೩ವ) ನಾಗಕುಮಾರ ಚರಿತಂ

೮ ಪೋಪ ಮಾರಿಯುಂ ಕೂಗಿ ಕರೆವರೆ ?
—ಚಿಕದೇವರಾಜ ವಂಶಾವಳಿ

೯ ಕೂಗಿ ಮಾರಿಯು ಕರೆ ತಂದವೊಲಾದುದು
— ಚಿಕದೇವರಾಜ ವಂಶಾವಳಿ

೧೦ ಭಾಗ್ಯದ ಮನೆಗೆ ಮಾರಿಯು ತಹರೆ ?
(ಅರಣ್ಯ ಕಾಂ. ೫–೩೦) ಶ್ರೀರಾಮಮಾಹಾತ್ಮ್ಯದ ಕಥಾಕುಸುಮ ಮಂಜರಿ

೧೧ ಮಾರಿಯನಾಮಂತ್ರಿಸಿಕೊಂಡುಯ್ವಂತೆ
—(೩೭೭ವ) ಕೌಶಿಕ ರಾಮಾಯಣ

೧೨ ಕೂಗಿ ಮಾರಿಯು ಕರೆತಂದ ವೊಲಾದುದು
— ಕೌಶಿಕ ರಾಮಾಯಣ

೧೩ ಬಿಡದೆ ತಂದನು ಹೋದ ಮಾರಿಯು
(೩೦-೧೧) ಕೌಶಿಕ ರಾಮಾಯಣ

೧೪ ಹೋದ ಮಾರಿಯು ಕರೆದು ಕಟ್ಟಿಸಿಕೊಂಡ
—(೧೩–೧೫) ಕೌಶಿಕ ರಾಮಾಯಣ

೧೫ ಹೋದ ಮಾರಿಯು ತಂದನು
— (೩೦-೧೧) ಕೌಶಿಕ ರಾಮಾಯಣ

೧೬ ಹೋದ ಮಾರಿಯು ಕರೆದು ಮನೆಯೊಳಗಾದರಿಸಿ ಕೆಡುವಂತೆ
—(ಕೃಷ್ಣಾರ್ಜುನರ ಕಾಳಗ, ಕವಿಚರಿತ್ರೆ-೩, ಪು. ೬೮, ಮುದ್ರಣ-೧೯೨೯)

೧೭ ಹೋಗುವ ಮಾರಿಯ ಊರಿಗೆ ತರಕೊಂಡ ಹಾಗಾಯಿತಲ್ಲ !
—ಮಹಲಿಂಗಸ್ವಾಮಿ

೮೬೭ ತನ್ನ ಚಿನ್ನ ಕೆಟ್ಟದ್ದಾಗಿ ಅಕ್ಕಸಾಲೆಯನ್ನು ದೂರಿದ ಹಾಗೆ
೧ ತನ್ನಯ ಹೊನ್ನು ಸಲ್ಲದೆ ತಿರುಗಿ ಬಂದೊಡೆಯಕ್ಕಸಾಲೆಯ ದುರ್ಗುಣತನದಲಿ ಬಯ್ಯಬಹುದೆ ?
—(೬-೬೭) ಪ್ರಭುಲಿಂಗಲೀಲೆ

೮೬೮ ಕಾಡುಹಂದಿ ಹೊಲ ಮೇದರೆ ಊರಹಂದಿ ಕಿವಿ ಕೊಯ್ದರು

೧ ಪಂದಿ ಕೆಯ್ಯಂ ತಿಂದಡೆ ಕತ್ತೆಯ ಕಿವಿಯಂ ಕೊಯ್ದರ್

—(೭-೭೩) ಧರ್ಮಾಮೃತ

ಹೋಲಿಸಿ : ೧ ಪಶು ಕಱುವ ಮೆಟ್ಟಿದೊಡೆ ಗೂಳಿಯಂ ಸದೆದವನ ಕಥೆ

—(೨-೨೬) ಹರಿಶ್ಚಂದ್ರ ಕಾವ್ಯಂ

೨ ಮುಟ್ಟಿವಬ್ಬನ ಬಸವನಿರಿದರೆ । ಹಟ್ಟಿಯಲಿ ಕಟ್ಟಿರ್ದ ಕರುವನು ಘಟ್ಟಿಸುತ ಕೋಪದಲಿ ಕೊಂದಂತಾಯ್ತು

—(ಸಂ ೧೪:೪೩ ನಿರ್ವಾಣ ಪ್ರಕರಣ, ಲಘುಯೋಗವಾಸಿಷ್ಠ)

೩ ಅಕ್ಕಿಯನು ಕರು ತಿಂದೊಡೊಬ್ಬಳು ಬೆಕ್ಕ ಶೂಲಕ್ಕಿಕ್ಕಿದಳು

—(೮-೪೦) ಕೌಶಿಕ ರಾಮಾಯಣಂ

೪ ಸೂಳೆ ಬಂಟುಂಗಾಜಿಪೆ ಪಂಬಿದ ಗೊರವನಂ ಬಡಿದರ್

—(೭-೭೩) ಶ್ರೀ ರಾಮಾಶ್ವಮೇಧಂ

೫ ಪಾಲ್ಪಟಿತುದೆಂದಾವಂ ಪೊಯ್ವರೇ

—(೬-ಪ್ರ ೩೫;೨೯ನೆಯ ಸಾಲು) ಶ್ರೀ ರಾಮಾಶ್ವಮೇಧಂ

೮೬೯ ಪೆಂಡಿರ ದೋಷಕ್ಕೆ ಮಕ್ಕಳ ಮೂಗು ಕೊಯ್ದರಂತೆ

೧ ಪೆಂಡಿರ ದೋಷಕ್ಕೆ ಮಕ್ಕಳ ಮೂಗಂ ಕೊಯ್ದರ್

—(ಸ.ಆ. ೭೨ವ) ಧರ್ಮಾಮೃತ

೮೭೦ ಉಪ್ಪು ತಿಂದವ ನೀರು ಕುಡೀತಾನೆ

೧ ಉಪ್ಪು ತಿಂದವನ್ ನೀರು ಕುಡಿಕ್ಕು —(ಕೊಡಗು ಗಾದೆ)

೮೭೧ ಬೆಕ್ಕಿಗೆ ಬೆಣ್ಣೆ ಕಂಡಿತು, ಬಡಿಗೆ ಕಾಣಲಿಲ್ಲ

೧ ಬಡಿಗಂಡನಿಲ್ಲ ಪಾಲನೆ ಕಂಡಂ

—(೭-೧೯) ವಿಕ್ರಮಾರ್ಜುನ ವಿಜಯಂ

೨ ಬೆಕ್ಕು ಪಾಲಂ ಕಾಣ್ಬುದಲ್ಲದೆ ಮೇಗೆ ಬಂದರಡಸುವ ಬಡಿಗೆಯಂ ಕಾಣದು —(೧೦-೮೩) (೬-೧೨೮) ಧರ್ಮಾಮೃತ

೮೭೨ ಗಂಗಮ್ಮನಂತೋಳು ಮೂರು ಸಾರಿ ಮುಳುಗುಸ್ತಾಳೆ, ಮೂರ್ಸಾರಿ ತೇಲಿಸ್ತಾಳೆ

೧ ನೀರು ಹೊರಗಿಕ್ಕುವುದು ಮೂಗೇ । ಬಾರಿ ಬಳಿಕದ ಪಾಪಿ ಜಾಡಿಸೆ ಸೈರಿಸದು
—(ವಿ.ಪ, ೩-೩೬) ಕರ್ಣಾಟಕ ಭಾರತ ಕಥಾಮಂಜರಿ

೨ ಮೂರು ಬಾರಿಯಾಲಿ ತಡಿಗೆ ಜಾಜುವುದಬುಧಿ
—(೬-೪೭-೩೪) ತೊರವೆ ರಾಮಾಯಣ

೩ ನೀರು ಹೊರಗಿಕ್ಕುವುದು ಮೂರೇ ಬಾರಿ
—(೧೨-೨೫) ಕೌಶಿಕ ರಾಮಾಯಣ

೮೭೩ ಹಾಲಿಗಾದರೂ (ಹಾಕು) ಅದ್ದು. ನೀರಿಗಾದರೂ (ಹಾಕು) ಅದ್ದು

೧ ಹಾಲಲದ್ದು, ನೀರಲ್ಲದ್ದು
—(೨-೪೭೯) ಬಸವೇಶ್ವರ ವಚನ

೨ ಹಾಲಲದ್ದೈ ನೀರಲದ್ದಯ್ಯ
—(೨೭-೬೬) ಬಸವಪುರಾಣ

೩ ಪಾಲೊಳದ್ದಲ್ಲದೀಗಳ್...ನೀರೊಳದ್ದು
(೭) ಗುಮ್ಮಟ ಶತಕ

೪ ಭಾರ ನಿನ್ನದ್ದು ಎಂದು ನಂಬಿದ ಅನಾಥಳನು ಕ್ಷೀರದೊಳಗದ್ದು ನೀರೊಳಗದ್ದು ಗತಿ ನೀನೆ
—ಉದಯರಾಗ, ಹ.ಕೀ. ತ

೫ ಕ್ಷೀರದೊಳದ್ದು, ನೀರೊಳಗದ್ದು ಗೋವಿಂದ (೧೩) ೨ನೆಯ ಭಾಗ — ಕನಕದಾಸರ ಕೃತಿಗಳು

೮೭೪ ದಾರಿತಪ್ಪಿ ಹಾರಿದರೇನು ಫಲ
ದಾರಿತಪ್ಪಿದ ಮೇಲೆ ಬಳಿಕ ಚಿಂತಿಸಲೇನು, ನಿಷ್ಫಲವು
—(೨೯-೧೦) ಕೌಶಿಕ ರಾಮಾಯಣ

ಕಳ್ಳನ ಮನಸ್ಸು ಹುಳ್ಳುಳ್ಳಗೆ
ಹೋಲಿಸಿ : ಸಶಂಕಿತರಲ್ತೆ ದೋಷಿಗಳ್
—(೧೮-೧೯) ಪಾರ್ಶ್ವನಾಥ ಪುರಾಣಂ

೮೭೫ ಜಿರಳೆ (ಬೆಣ್ಣೆ) ತಿಂವ ಬೆಕ್ಕಿನ ಹಾಗೆ

೧ ಬೆಣ್ಣೆಯುಂ ತಿಂವ ಬೆಕ್ಕನಂತೆ
—(೧೩೭ವ) ಕರ್ಣಾಟಕ ಪಂಚತಂತ್ರ

೨ ಬೆಣ್ಣೆಯುಂ ತಿಂದ ಬೆಕ್ಕನಂತೆ
—(೬-೧೧೫) ಧರ್ಮಾಮೃತ

೩ ಬೆಣ್ಣೆಯುಂ ನುಂಗಿದ ಬೆಕ್ಕನತೆಱಂ
—(೧೪-೪೨) ಸಮಯ ಪರೀಕ್ಷೆ

೪ ಸುಣ್ಣ ತಿಂದ ತಿಮ್ಮಣ್ಣನಂದದಿ ಬೆದರಿ
ಬೆಣ್ಣೆ ತಿಂದ ಬೆಕ್ಕಿನ ಹಾಗೆ । ಕಣ್ ಕಣ್ ಬಿಡುತ ಇಲ್ಲಿಗೆ ಬಂದಿ
(೪೪೧) ಹ.ಕಿ.ತ.

೮೭೬ 'ಉಪಾದ್ರೇ ! ನಿಮ್ಮ ಮಗ ಬೇವಿನಕಾಯಿ ತಿಂತಾನೆ' ಅಂದ್ರೆ
'ಕಹಿಯಾದರೆ ಅವನೇ ಬಿಟ್ಟುಬಿಡ್ತಾನೆ' ಅಂದರು

೧ ಕಯ್ಪೆಯಯುಣ್ಬ ರಸಮೆಬಾರಿತುಂ
—(ಪಪ್ಪ-ಪ೭೭) ಶಾಂತಿಪುರಾಣ

೮೭೭ ಕತ್ತೆ ಖಂಡುಗ ಹೊತ್ತರೆ ಸೆಟ್ಟಿ ಅನಿಸಿಕೊಳ್ಳುವುದಿಲ್ಲ
ಕತ್ತೆಯೂ ಹೊರುತ್ತೆ ಮೂರುಮಣ್ವ

೧ ಮುತ್ತು ಹವಳಂ ಹಣಂಗಳ
ಕತ್ತೆಯುಂ ತಾಂ ಪೊತ್ತರೇನು ಬೆಲೆಯರಿದಪುದೆ ?

೨ ಕತ್ತೆ ಬಲ್ಲುದೆ ಹೊತ್ತ ವಸ್ತ್ರದಾ ಭೋಗವನು
—(೧-೧೨೫) ಪುರಂದರ ದಾಸರ ಕೀರ್ತನೆಗಳು

೮೭೮ ಕತ್ತೆಗೇನು ಗೊತ್ತು ಕಸ್ತೂರಿ ಪರಿಮಳ

೧ ಕತ್ತೆ ಬಲ್ಲುದೇ ಕಸ್ತೂರಿಯ ವಾಸನೆಯ
—(೩೧) ದೇವರದಾಸಿಮಯ್ಯನ ವಚನಗಳು

೨ ಕತ್ತೆ ಬಲ್ಲುದೆ ಹೊತ್ತ ಕಸ್ತೂರಿಯ ಪರಿಮಳವನು
(ಹ.ಕೀ.ತ ಕೀ, ೨೨೩)

೩ ಕತ್ತೆ ಕಸ್ತೂರಿಯ ಪರಿಮಳವ ಅರಿಯಲರಿವುದೆ ?
—(ಸಂ.ಸ್ಕಂ, ಸಂ. ೭-೪೨) ಕನ್ನಡ ಭಾಗವತ

೪ ಕತ್ತೆಯರಿವುದೇ ಕಸ್ತೂರಿಯ
—(೧-೪೧) ಅನುಭವಾಮೃತ

೫ ಕಸ್ತೂರಿಯು ತಾನೇಕೆ ಕತ್ತೆಗೆ —(೧-೩೯) ಜ್ಞಾನಸಿಂಧು

೮೭೯ ಕುರುಡನ ಕೈಗೆ ಕನ್ನಡಿ ಕೊಟ್ಟ ಹಾಗೆ

೧ ಲೋಚನಾಭ್ಯಾಂ ವಿಹೀನಸ್ಯ ದರ್ಪಣಃ ಕಿಂ ಕರಿಷ್ಯತಿ
—(ಸುಭಾಷಿತ)

೨ ಕುರುಡಂಗೆ ಕನ್ನಡಿಯುಂ ತೋಱಿಹವುಂ
ಮೂರ್ಖನಂ ಬುದ್ಧಿವಂತನೋಲ್ಕೈಸುಹವುಂ
— (೧೩೬-೧೧) ಪಂಚತಂತ್ರ

೩ ಅಂಧಕನ ಕೈಲಿ ದರ್ಪಣವಿದ್ದು ಫಲವೇನು ?
—(೮೩೯) ಬಸವೇಶ್ವರ ವಚನ

೪ ಕಣ್ಗುರುಡನೇಗೈದುವುಂ ಕಾಣದಿರೆ ಮುಕುರ ಕೆಡುವುದೇ
—(೧-೩೦) ಸೋಮನಾಥ ಚರಿತ್ರೆ

೫ ಏಕೆ ಕನ್ನಡಿ ಕುರುಡಂಗೆ
(ಸ. ಪ. ೯-೩೬) ಕರ್ಣಾಟಕ ಭಾರತ ಕಥಾ ಮಂಜರಿ

೬ ಏಗೈದೊಡಂ ಕಾಣ್ಬನೇ ಅಂಧಕಂ ಮುಕುರದೊಳ್
ನಿಜ ಪ್ರತಿಬಿಂಬವಂ —(೧-೧೮) ಶಿವ ತತ್ತ್ವ ಚಿಂತಾಮಣಿ

೭ ಕಣ್ಣು ಕಾಣದ ಕುರುಡ ಕನ್ನಡಿ ವಿಡಿದತೆಱನಂತೆ.
—(ಪು. ೨೩೦-೨೦) ಪ್ರಭುಲಿಂಗ ಲೀಲೆ

೮ ಕುರುಡಂಗೆ ಕನ್ನಡಿಯು ತೋರಿದರೆ ನೋಡ ಬಲ್ಲನೆ ಅಯ್ಯ ?
—(೬೪೫) ತೋಂಟದ ಸಿದ್ಧೇಶ್ವರ

೯ ಕುರುಡ ಕನ್ನಡಿಯ ಹಿಡಿದರೇನು ? ತನ್ನ ಮುಖವ ಕಾಣಲರಿಯ
—(೧೬೩) ಸ್ವತಂತ್ರ ಸಿದ್ಧಲಿಂಗೇಶ್ವರ ವಚನ

೧೦ ಕಣ್ಣು ಕಾಣದವನಿಗೆ ಕನ್ನಡಿಯು ತೋರಿದಂತೆ
—(ಹ. ಕಿ. ತ, ಕೀ. ೪೬೦)

೧೧ ಅಂಧಕರ ಕೈಗೆ ಕನ್ನಡಿ ಕೊಟ್ಟು ಫಲವೇನು ?
— (ಪುರಂದರದಾಸರು)

೧೨ ಕುರುಡ ಕನ್ನಡಿವಿಡಿದವೊಲ್
—(ಸಂ ೨–೬) ಲಘುಯೋಗ ವಾಸಿಷ್ಠ

೧೩ ಕಾಣದಗೆ ಕನ್ನಡಿಯದೇತಕೆ
—(೧–೪೦) ಅನುಭವಾಮೃತ

೧೪ ಹುಟ್ಟುಗುರುಡನ ಕೈಗೆ ಕನ್ನಡಿಯು ಕೊಟ್ಟಂತೆ
—(೧೨-೧೧) ಅಖಂಡೇಶ್ವರ ವಚನ

೧೫ ಕಾಣದನಿಗೇತಕ್ಕೆ ಕನ್ನಡಿ — (೧–೯೧) ಜ್ಞಾನಸಿಂಧು

೧೬ ಕುರುಡ ಬಲ್ಲನೆ ಕನ್ನಡಿಯ ಸಿಂಗರವ
—(ಯು. ಕಾಂ ೧.೭) ರಾಮಾಯಣ

೧೭ ಜಾತ್ಯಂಧ ಮೌಕ್ತಿಕದ ವರ್ಣವನು ಪರಿಕಿಸಲು ತಿಳಿದನೆ
- (ಸಂ೮–೩) ಮಹಲಿಂಗ ಲೀಲೆ

೧೮ ಕುರುಡ ಬಲ್ಲನೆ ಕನ್ನಡಿಯ ಸಿಂಗರ ? —(ಸನ್ಮತಿ ಶತಕ)

೧೯ ಕಾಣದಂಧಕಗೇಕೆ ಕನ್ನಡಿ

೮೮೦ ಕುರುಜರ ಹಳ್ಳಿಯಲ್ಲಿ ಗಾಜೇ ಮಾಣಿಕ್ಯ

೧ ಕುರುಬರೂರಲಿ ಗಾಜು ಮಾಣಿಕ
—(ಕರ್ಣಾಟಕ ಭಾರತ ಕಥಾ ಮಂಜರಿ)

೨ ಕುರುಬರರಿಯುದಡೇನು ಮಾಣಿಕ ಮಾನ್ಯವಲ್ಲವೇ
—(ಕನ್ನಡ ಭಾಗವತ)

೮೮೧ ಕೋತಿ ಕೈಲಿ ಮುತ್ತಿನ ಸರ ಕೊಟ್ಟ ಹಾಗೆ

೧ ಮುತ್ತಿನ ಹಾರ ಕಪಿಗೆ ಹಾಕಲು ಸಲ್ಲ
—(ಕೀ. ೨೦೯) ಹ. ಕೀ. ತ.

೮೮೨ ಕೋತಿಯ ಕೈಯಲ್ಲಿ ಹೂವಾಲೆ ಕೊಟ್ಟರೆ ಮೂಸಿ ನೋಡಿ ಎಸೆದಿತ್ತು.

೧ ಕಪಿಯ ಕೋಲಿಲೊಳ್ ಪೂಮಾಲೆಯುಸಿಕ್ಕಿದಂತೆ
(೧-೧೧೭ವ) ಧರ್ಮಾಮೃತ

೨ ಮರ್ಕಟನ ಕೈಯಲ್ಲಿ ಹೂಮಾಲೆಯು ಪಿಸ್ತಾರಂ
(೧೦-೩೫) ಅಭಿನವ ದಶಕುಮಾರ ಚರಿತೆ

೩ ಮರ್ಕಟನ ಕೈಯಲಿ ಕರೆದು ಹೂಮಾಲೆಯನು ಕೊಟ್ಟಂತಾಯ್ತು
—(೮ ಸ್ಕಂ. ಸಂ. ೧-೮) ಕನ್ನಡ ಭಾಗವತ

೪ ಮರ್ಕಟ ಹಸ್ತ ದಸ್ತ್ಯಟಿತ ಮಲ್ಲೀ ಮಾಲಿಕಾವಸ್ಥೆಯಂ

೫ ಕೋಡಗನ ಕೈಯ ಮಾಲೆಯು ಕೊಟ್ಟ ತೆರನಾದುದು
—(ಯಕ್ಷಗಾನ ಪ್ರಸಂಗ, ಗಿರಿಜಾ ಕಲ್ಯಾಣ)

೮೮೩ ಮಂಗನ ಕೈಲಿ ಮಾಣಿಕ್ಯ ಕೊಟ್ಟರೆ ಅದರ ಇಂಗಿತ ಬಲ್ಲುದೆ ?

೧ ಜೇಡಂ ಮಾಣಿಕಮೊಂದಂ ಕಾಡೊಳ್ ಕಂಡೊರ್ಮೆ ಮೆಲ್ದು
ಪಗಿಸಲ್ಲೆಂದೀಡಾಡಿದನ್ —(೧-೧೨೫) ಧರ್ಮಾಮೃತ

೨ ಮರ್ಕಟನ ಕೈಲಿ ಮಾಣಕವಿಟ್ಟು ಫಲವೇನು
—(೧-೧೦೮) ಬಸವಣ್ಣನವರ ವಚನಗಳು

೩ ಮೂರ್ಖತನ ಕೈಯ್ಯ ರತ್ನ

—(೨೩೪-೬೭) ಪಾರ್ಶ್ವನಾಥ ಪುರಾಣಂ

೪ ಕೋಡಗಕುತ್ತಮು ಮಾಣಿಕವನು ಕೊಡಲೀಡಾಡವವೊಲು

(ಸಂ ೧-೩೨) ನೇಮಿಜಿನೇಶ ಸಂಗತಿ

೫ ಮಂಗನ ಕೈಯ ಮಾಣಿಕ್ಯದಂತೆ

—(ಕೀ. ೧೮೮) ಹ.ಕೀ.ತ.

೬ ಮಾಣಿಕವು ಕೋಡಗನ ಕೈಯಲ್ಲಿ ಇದ್ದಂತೆ

—(ಕೀ. ೪೬೬) ಹ.ಕೀ.ತ.

೭ ಕೋಡಗವು ಬಲ್ಲುದೇ ರತ್ನದಾಭರಣವನು

—(ಕೀ. ೨೨೩) ಹ.ಕೀ.ತ

೮ ಕಾಡಕಪಿ ಬಲ್ಲುದೆ ಮಾಣಿಕದ ಬೆಲೆಯ

—(ಪುರಂದರದಾಸರು)

೯ ಕುಮತಿ ಕಪಿಗೇಕಮಲ ಮಾಣಿಕ

—(ಸ,ಪ. ೮–೩೪) ಕರ್ಣಾಟಕ ಭಾರತ ಕಥಾಮಂಜರಿ

೧೦ ಮಿಂಗೆ ರಂಜಿಸುವ ರತ್ನ ಪರೀಕ್ಷೆಯರಿವುದೇ ಕಪಿ

—(೧–೧೮) ಜೀವಂಧರ ಚರಿತೆ

೧೧ ಮಾಣಿಕ್ಯಮಂ ಧೂರ್ತ ವಾನರನೇಂ ಬಲ್ಲುದೆ

(೪೧–೪೦) ವೃಷಭೇಂದ್ರವಿಜಯಂ

೧೨ ಕಪಿಯು ಕೈಯಲಿ ಮಾಣಿಕ ಸಿಕ್ಕಿದಂದದಿ

—(೬–೧೧೦) ಪದ್ಮಾವತೀ ಚರಿತೆ

೧೩ ಕಪಿಯು ಕೈಯ್ಯಲ್ಲಿ ರತ್ನವ ಕೊಟ್ಟರೆ ಅದು ಹಣ್ಣೆಂದು ಕಡಿದು ನೋಡಿ ಕಲ್ಲೆಂದು ಬಿಸುಡುವುದಲ್ಲದೆ ಆ ರತ್ನದ ದಿವ್ಯಬೆಳಗನರಿವುದೇನಯ್ಯ —(೧೦–೧೩) ಅಖಂಡೇಶ್ವರ ವಚನ

೧೪ ಮಾಣಿಕದ ಮರ್ಕಟನ ಕೈಯಲಿ ಕೊಟ್ಟ ತೆರ
—(೧೬–೩೨) ಹರಿಕಥಾಮೃತಸಾರ

೧೫ ಕಪಿ ರತ್ನಂ ಬಲ್ಲುದೆ
—(ಅಧ್ಯಾಯ : ೧–೨೩) ಪರಶುರಾಮ ರಾಮಾಯಣ

೧೬ ತಿಳಿವುದೆ ಶಾಖಾಮೃಗವೋ । ನೆಲೆ ಮಾಣಿಕದಿರವನದರ
ಬೆಲೆಯುಂ ನೆಲೆಯುಂ —(೨೪) ಕನ್ನಡ ನೀತಿಸಾರವು

೧೭ ಮರ್ಕಟಗೇಕೆ ಮಾಣಿಕವು ?

೮೮೪ ಮೀನು ಬಲ್ಲಿ ತಾನಿರುವ ನೀರು ಸವುಳು ಸ್ವಾದ ಅನ್ನುವುದನ್ನ ?

೧ ಮೀನು ಬಲ್ಲುದೆ ನೀರು ಸೌಳು ಸ್ವಾದೆಂಬುದನು
—(ಕೀ. ೨೨೩) ಹ.ಕೀ.ತ.

೮೮೫ ಹಂಚಿನಲ್ಲಿ ಉಣ್ಣೋನಿಗೆ ಹರಿವಾಣ ಯಾಕೆ ?

೧ ಓಡೊಳಗೆ ತಿಂಬುವಗೆ ಹರಿವಾಣವೇಕೆ ?
—(ಕೀ. ೨೨೫) ಹ.ಕೀ. ತ.

೮೮೬ ಶ್ವಾನನ ಮುಂದೆ ಗಾನ ಮಾಡಿದ ಹಾಗೆ

೧ ಶ್ವಾನ ಬಲ್ಲುದೆ ರಾಗ ಭೇದಂಗಳ ?
—(ಕೀ. ೨೨೩) ಹ,ಕೀ.ತ.

೮೮೭ ಹುರಿಯುವ ಹಂಚು ಅವಲಕ್ಕಿ ರುಚಿ ಹೇಗೆ ತಿಳಿದೀತು ?

೧ ಓಡೆತ್ತಬಲ್ಲುದೋ ಅವಲಕ್ಕಿ ರುಚಿಯು ?
—ಬಸವಣ್ಣನವರ ವಚನ

೮೮೮ ಹೇನಿಗೆ ಮುಡಿದ ಹೂವಿನ ಪರಿಮಳ ಗೊತ್ತೆ ?

೧ ಹೇನು ಬಲ್ಲುದೆ ಮುಡಿದ ಹೂವಿನ ಪರಿಮಳವ ?
—(ಕೀ. ೨೨೩) ಹ.ಕೀ.ತ

೮೮೯ ಪ್ರಾಣ ಬಿಟ್ಟು ಮಾನ ಕಾಯಿ

೧ ಪ್ರಾಣಂ ವಾಪಿ ಪರಿತ್ಯಜ್ಯ । ಮಾನೋ ರಕ್ಷ್ಯಸ್ಸದಾನೃಭಿಃ ।
ಅನಿತ್ಯಮಧ್ರುವಂ ಪ್ರಾಣಂ । ಮಾನಮಾಚಂದ್ರ ತಾರಕಂ ॥
(ಸಂ)

೨ ಅಸುವನಳಿದಾದಡೆಯು ಸಂರಕ್ಷಿಸಲು ಬೇಕಭಿಮಾನವನು
—(ಯು. ಕಾಂ ೧೯-೩೦) ಶ್ರೀರಾಮಾಭ್ಯುದಯ ಕಥಾ ಕುಸುಮಮಂಜರಿ

೮೯೦ ಮಾನ ಹೋದ ಮೇಲೆ ಮರಣದಪಾದ ಹಾಗೆ

ಹೋಲಿಸಿ : ಅಪಯಶೋ ಯದ್ಯಸ್ತಿ ಕಿಂ ಮೃತ್ಯುನಾ
—(ಭರ್ತೃ, ನೀತಿ, ಪದ್ಯ-೪೫)

೧ ಮಾನಭಂಗಮೆ ಮರಣಕ
—(೧೨-೧೭೮) ನೇಮಿನಾಥ ಪುರಾಣಂ, ಕರ್ಣಪಾರ್ಯ

೨ ಮಾನಭಂಗಂ ತಾನಿದು ಮರಣಕ್ಕಮಧಿಕಂ
—(೧೨-೯೭) ಜಗನ್ನಾಥ ವಿಜಯಂ

೩ ಪೋದಭಿಮಾನಮಿಂ ಮಗುಳೆ ಬರ್ಪುದೆ, ಸಾಲ್ವುದು ಮಾನಹಾನಿ
ಯಿಂದಾದ ಬದುಂಕದೇವುದು ?
—(೭-೧೩೧) ಶಾಂತೀಶ್ವರ ಪುರಾಣಂ

೪ ಮಾನಧನರಿಗೆ ವಧಯೆನಿಪುದಭಿಮಾನ ಭಂಜನ
—(ಅ.ವ. ೨೨-೪೦) ಕರ್ಣಾಟಕ ಭಾರತ ಕಥಾಮಂಜರಿ

೫ ಮಾನಿಗೆ ಮಾನಭಂಗವೆ ಭಂಗ
—(೧೩-೩೧) ಸೊಬಗಿನ ಸೋನೆ

೬ ಪಡೆದಪಮಾನದಿಂ ಮರಣ ಮಿನ್ನುಂಟೆ ?
—(೩-೭-೨) ಕೈವಲ್ಯ ಪದ್ಧತಿ

೮೯೧ ಊರ ಮುಂದೆ ಎಕ್ಕಡದಲ್ಲಿ ಹೊಡೆದು ಒಳ ಮುಂದೆ ಕಾಲು ಕಟ್ಟಿಕೊಂಡ

೧ ಊಱಿಯು ಕೋಲಿಹರೆಯು ಹೋಹುದೆ ಯಾಗಾರವೊಳಗೆ
ಕಾಲ್ಪಿಡಿಯೆ —(೩೫-೫೨) ರಾಮನಾಥಚರಿತೆ

೮೯೨ ಮುಂದಲೆ ಕೊಯ್ದು ಮುಡಿಗೆ ಹೂವು ಮುಡಿಸಿದ ಹಾಗೆ

೧ ಮುದಲೆಯ ಕೊಯ್ದು ಮುಡಿಗೂವು ಮುಡಿಸಿದಂತೆ
—(ಕೀ ೨೨೭) ಹ.ಕೀ.ತ.

೮೯೩ ಮೂಗು ಕೊಯ್ದು ಮೊಗ್ಗಿನ ತುರಾಯಿ (ಕನ್ನಡಿ ಕೊಟ್ಟ ಹಾಗೆ)

೧ ಮೂಗನಱಿದು ಕನ್ನಡಿಯಂ ತೋಱುವಂತೆ
—(ನ.೪-೨೧೦ ವ) ಧರ್ಮಾಮೃತ

೨ ಕೊಯಿದ ಮೂಗಿಗೆ ಕನ್ನಡಿಯ ತೋರುವಂತೆ
—(೨-೩೦೪) ಬಸವೇಶ್ವರ ವಚನ

೩ ಮೂಗಂ ಕೊಯ್ದು ಕನ್ನಡಿಯ ತೋರುವಂತೆ
—(೮-೧೨) ಹರಿಶ್ಚಂದ್ರ ಕಾವ್ಯಂ

೪ ಮೂಗನಿತ್ತು ಕನ್ನಡಿಯ ನೋಡುವರೆ ?
—(೮-೭೬) ಹರಿಶ್ಚಂದ್ರಕಾವ್ಯಂ

೫ ಮೂಗನರಿದಿಬ್ಬಗೆಯಿಂದೊರಸಿ ತೋಱಿಸನೆ ಕನ್ನಡಿಯ
—(ಕಾಂ ೫, ಸಂ ೫೯, ಪ ೪೦) ಬಸವ ಪುರಾಣ

೬ ಮೂಗ ಕೊಯ್ದು ಕನ್ನಡಿಯ ತೋರಿ
—(೨೮) ಘನಲಿಂಗಿದೇವರ ವಚನ

೭ ಮೂಗು ಕೊಯ್ದು ಮೂದಲಿಸಿ ಮತ್ತೆ ತಂದು ದರ್ಪಣ
ತೋರುವಂತೆ —(೧೯-೩೨) ಸಿಂಗಿರಾಜ ಪುರಾಣಂ

೮ ತೊಗಲ ಮೂಗ್ಹರಿದು ಚಿನ್ನದ ಮೂಗನಿತ್ತಂತೆ
—(ಕೀ ೨೨೭) ಹ.ಕೀ.ತ.

೯ ಮೂಗರಿದು ಕನ್ನಡಿಯ ಕೈಗೀವೆ
—(೧೬-೩೯) ರಾಘವಾಂಕ ಚರಿತೆ

೮೯೪ ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು

೧ ಅಡಿಕೆ ಹೋಳಿಗೆ ಹೋದ ಮಾನ । ಆನೆ ಕೊಟ್ಟರು ಬಾರದೊ
—(ಕೀ. ೪೮೭) ಹ.ಕೀ.ತ.

೮೯೫ ತಾಗಿದವ ಬಾಗಿಯಾನು

೧ ತಾಗಿ ಬಾಗಿದಂತೆ
—(ತೃ.ಆ. ೩೪ ವ) ವಿಕ್ರಮಾರ್ಜುನ ವಿಜಯಂ

೨ ತಾಗಿ ತಲೆಯೊಡೆದವರು ಭಾವಿಸೆ ಬಾಗದಿಹರೇ
—(೮–೧೮) ಪ್ರಭುಲಿಂಗ ಲೀಲೆ

೩ ತಾಗಿ ಬಾಗಲದೇಕೆ ದೇಹತ್ಯಾಗ ಪರಿಯಂತ
—(೮.ಸ್ಕಂ, ಸಂ. ೧:೩೦) ಕನ್ನಡಭಾಗವತ

೪ ತಾಗುವ ಮುನ್ನವೇ ಬಾಗುವ ತಲೆ ಲೇಸು
—(೧೪೧೪) ಸರ್ವಜ್ಞ

೫ ತಾಗಿದಲ್ಲದೆ ಬಾಗರೆಂಬ ನಾಣ್ಣುಡಿ
—(ಸಂ. ೧೨:೬೭) ಬಿಜ್ಜಳನ ಚರಿತ್ರೆ

೮೯೬ ಬಿಸಿ ಪರಮಾನ್ನದಲ್ಲಿ ಬಾಯಿಸುಟ್ಟುಕೊಂಡ ಮಗು ಮೊಸರನ್ನು ಊದಿ ಊದಿ ಕುಡಿಯಿತು

೧ ಬಾಲಃ ಪಾಯಸ ದಗ್ಧೋ ದಧ್ಯಪಿ ಫೂತ್ಕೃತ್ಯ ಭಕ್ಷಯತಿ
— (ಸು)

೨ ಬಿಸಿದುಪ್ಪ ತುಪ್ಪಮಾಸಜ್ಜಿಯದೆ ಶಿಶು ನುಂಗಿದಂತೆ
—ಧರ್ಮಾಮೃತ

೮೯೭ ಅವರೆವರಿಗೆ ಎಣ್ಣೆಗೂ ಸೀಗೆಗೂ ಹೇಗೊ ಹಾಗೆ

೧ ಎಣ್ಣೆ ಸೀಗೆ
—(೧೩–ಪ್ರ ೧೧೧ : ೧೧ನೆಯ ಸಾಲು) ಶ್ರೀರಾಮಾಶ್ವಮೇಧಂ

೨ ಒಬ್ಬರಿಗೊಬ್ಬರು ಎಣ್ಣೆ ಸೀಗೆಕಾಯಿಯಂತೆ

(ನೀಗಟ್ಟು ೯೦)

೫೯೮ ಇದ್ದ ಊರಿನ ಹಗೆ ಸಲ್ಲ, ಕದ್ದ ಕೋಂಬರ ನೆರೆ ಸಲ್ಲ

೧ ಬಿದ್ದ ಮೊಲೆಯುಳು ಹೊಲ್ಲ। ಇದ್ದೂರ ಹಗೆ ಸಲ್ಲ!

—(ಸರ್ವ, ಪ. ೧೫೮೩)

೫೯೯ ಬೆಣ್ಣೆ ಬೆಂಕಿಗೆ ವೈರಿ, ಸುಣ್ಣ ಕಣ್ಣಿಗೆ ವೈರಿ.

೧ ಬೆಣ್ಣೆ ಬೆಂಕಿಗೆ ವೈರಿ, ಸುಣ್ಣ ಕಣ್ಣಿಗೆ ವೈರಿ
ಜೀವಕ್ಕೆ ವೈರಿ ಹಗೆಯೋರು–ತಮ್ಮಯ್ಯ
ಚಿನ್ನಕ್ಕೆ ವೈರಿ ತಳವೋರು —(ಹೊನ್ನಬಿ, ಪು. ೧೪೧)

೬೦೦ ಮನುಷ್ಯ ತನಗೆ ತಾನೇ ಶತ್ರು, ತನಗೆ ತಾನೇ ಮಿತ್ರ

೧ ಆತ್ಮೈಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ

—(ಭ.ಗಿ, ಅ,೬, ಶ್ಲೋ.೫)

೬೦೧ ಸಾಲವನ್ನೂ ರೋಗವನ್ನೂ ಶತ್ರುವನ್ನೂ ಮೊದಲು ಕಳೆದುಕೊ

೧ ಋಣ ಶೇಷ ಶ್ಚಾಗ್ನಿ ಶೇಷಃ ಶತ್ರು ಶೇಷಸ್ತಥೈವಚ
ಪುನಃ ಪುನಃ ಪ್ರವರ್ಧಂತೇ ತಸ್ಮಾ ಚ್ಛೇಷಂ ನರಕ್ಷಯೇತ್

—(ಸು)

೨ ವಿರೋಧಿಯುಮಂ ವ್ಯಾಧಿಯುಮಂ ಬಳೆಯದ ಮುನ್ನಮೆ
ಕಿಱಿದೆಂದು ಕಡೆಗಣಿಸದೆ ಕಿಡಿಸುವುದು ಕಜ್ಜಂ

(ಪು ೧೯೨–೧೭ವ) ನೇಮಿನಾಥ ಪುರಾಣ

೩ ಎಳವೆಯೊಳೆ ತನ್ನ ವೈರಿಯ ಮೊಳೆಯುಮನೆಗೆ ತಪ್ಪರುಜೆಯಂ
ಮೊಳೆ ಯಂಮನೊಗೆದಾಗಳೆ ಕಳೆಗೆ

—(೧೧–೩೫) ಸುಕುಮಾರ ಚಂ

೪ ಸಾಲವನು ಶತ್ರುವನು ವಹ್ನಿ | ಜ್ವಾಲೆಯನು ರೋಗವನು ತ

ತ್ಕಾಲದಲಿ ಹಟಿಗಡಿಯದಿದ್ದರೆ ಬಳಿಕ ಸಾಧ್ಯವಲಾ
—(೧೨-೪-೪೩) ಕನ್ನಡ ಭಾಗವತ

೯೦೨ ತಾವು ಮಾಡುವುದನ್ನು ಗಂಧರ್ವರು ಮಾಡಿದರು

೧ ಅಸ್ಮಾಭಿರ್ಯದನುಷ್ಠೇಯಂ ಗಂಧರ್ವೈ ಸ್ತದನುಷ್ಠಿತಮ್
—(ಸಂ. ಭಾರತ)

೨ ಎಸಗುವುದು ನಾವಾವ ಕಾರ್ಯದೊ
ಳಸುವನಿಕ್ಕಿ ತದರ್ಥವನು ಪರ
ರೆಸಗಿದೊಡೆ ನಮಗೇನು ಬಾಧಕವೆಂದನಾ ಭೀಮ
—(ಅ.ಪ. ಸಂ ೭೦-ಪ-೧೨) ಕರ್ಣಾಟಕ ಭಾರತ ಕಥಾಮಂಜರಿ

೯೦೩ ಮುಯ್ಯಿಗೆ ಮುಯ್ಯಿ, ಸೇಡಿಗೆ ಸೇಡು

೧ ನೆಪ್ಪಿಂಗೆ ನೆಪ್ಪುಗೊಳ್ಳದೆ ಮಾಣೆಂ
—(೧೧-೨ ಗದ್ಯ) ವಿಕ್ರಮಾರ್ಜುನ ವಿಜಯಂ

೨ ನೇರ್ಪಿಂಗೆ ನೇರ್ಪು
—(೭-೪೮) ಸಾಹಸ ಭೀಮವಿಜಯ

ಹೋಲಿಸಿ : ಕಿರ್ಚಿಂಗೆ ಕಿರ್ಚು ಮರ್ದಕ್ಕುಂ
— (೪-೭೧) ಪಾರ್ಶ್ವನಾಥಪುರಾಣ

೯೦೪ ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು

೧ ಪಾಟಿಸುವೆನೊಯ್ಯನೆ ಮುಳ್ಳೊಳೆ ಮುಳ್ಳನ್
—(೯-೬೭) ವಿಕ್ರಮಾರ್ಜುನ ವಿಜಯಂ

೨ ಮುಳ್ಳನಾ ಮುಳ್ಳಿಂದ ತೆಗೆವೊಲ್
—(ಕನ್ನಡ ಆದಿತ್ಯಪುರಾಣ)

೩ ಮುಳ್ಳು ಮುಳ್ಳಲಿ ತೆಗೆಯಬೇಹುದು
—(೫-೭) ಕೌಶಿಕ ರಾಮಾಯಣ

ಹೋಲಿಸಿ : ವಜ್ರವನ್ನು ವಜ್ರದಿಂದಲೇ ಕೊಯ್ಯಬೇಕು
(ವಜ್ರಂ ವಜ್ರೇನ ಭಿದ್ಯತೆ)

೯೦೫ ಹೆಣ ಕೊಂದು ಸೇಡು ತೀರಿಸಿಕೊಂಡರು

೧ ಪೆಣನಿರಿದು ಪಗೆಗೊಂಡರೆಂಬ ನಾಣ್ನುಡಿ
—(೧೨-೨೯ಪ) ವಿಕ್ರಮಾರ್ಜುನ ವಿಜಯಂ

೨ ಪೆಣನಿರಿದು ಪಗೆಯೇಕೆ ?
—(ಕ.ಪ. ೧೭-೪೧) ಕರ್ಣಾಟಕ ಭಾರತ ಕಥಾಮಂಜರಿ

೩ ಹೆಣನನು ಹೊಯ್ದು ಹೆಸರುಂಟೆ?
—(೩೩-೨೧) ಕೌಶಿಕ ರಾಮಾಯಣ

೯೦೬ ಆನೆಗೆ ಗುಂಗುರು ಕಾಡಿದಂತೆ

ಹೋಲಿಸಿ : ೧ ಬೆಟ್ಟವುಂ ಗುಂಗುರು ಕಾಡಿತ್ತು
—(೧೩-೧೨೨) ಧರ್ಮಾಮೃತ

೨ ಗುಂಗುರು ಮುಸುಕಿದೊಡಾನೆಯುಳ್ಳುವುದುಂಟೆ ?
—(೧೮-೧೧೩) ನಾಗಕುಮಾರ ಚರಿತಂ

೯೦೭ ಕಿಡಿಯಿಂದ ಕಾಡು ಸುಡಬಹುದು

೧ ಕಿಡಿ ಕಿಱಿದಾದೊಡಂ ಸುಡದೆ ಕಾನನಮಂ
—(೪-೪೮) ರಾಮಚಂದ್ರ ಚರಿತಪುರಾಣಂ

೨ ಕಿಡಿ ಕಿರಿದಾದೊಡೆ ದಂದಹ್ಯ ಮಾನವನುರೆ ಮಾಡದಿಹುದೇ
ಕಾನನವನು —(೨೪-೪೦)ನೇಮಿಜಿನೇಶ ಸಂಗತಿ

೩ ಬಿತ್ತರದಡವಿಯನದೊಂದೆ ಕಿಡಿ ಸುಟ್ಟುರುಪದೆ
—(ಪು ೪೯೯-೫) ಸಾಳ್ವಭಾರತ

೪ ಎಳ್ಳಿನಷ್ಟು ಕಿಚ್ಚು ಮನೆಗಳೆಲ್ಲ ಸುಡದೆ ನಿಲ್ಲುವುದುಂಟೆ ?
— (ಯಕ್ಷಗಾನ ರಾಮಾಯಣ-ಪಾರ್ತಿಸುಬ್ಬ)

೯೦೮ ಹಾವು ಮರಿಯಾದರೂ ವಿಷ ಮರಿಯಲ್ಲ

೧ ಹಾವಿನ ಮರಿ ಹಾವಿನಂತೆ — (೪-೪೨) ಪದ್ಮಾವತಿ ಚರಿತೆ

೨ ಸಣ್ಣ ಸರ್ಪನ ಮರಿ ಸಣ್ಣಕ್ಕಿದ್ದರೇನು
ಸಣ್ಣಕ್ಕಿದ್ದರೂ ವಿಷ ಬಹಳ । ಅತ್ತಿಗೆ
ಸಣ್ಣವಳ ಕೆಣಕಿ ಕೆಡಬೇಡ

ಹೋಲಿಸಿ : ೧ ಕರಗಸದ ನಡು ಬಡವಾದರೆಯು ಕುರಿ
ಕುಯ್ದಿಕ್ಕದೇ ತರುವ ?
—(ಆ.ಪ. ೮-೨೮) ಕರ್ಣಾಟಕ ಭಾರತ ಕಥಾಮಂಜರಿ

೨ ಚೇಳ್ ಚಿಕ್ಕದೆಂದವಳ್ಕಿರಿಂ ತೆಗೆಯಲ್ ಕಚ್ಚದೆ
—(೪೧) ಸೋಮೇಶ್ವರ ಶತಕ

೯೦೯ ಇರುವೆ ಹೊಡೆಯೋಕೆ ಒನಕೆಯೇ ?

೧ ಇರುವೆಗಾಯುಧವೇಕೆ ?
—(೧೫-೬೩) ಕೌಶಿಕ ರಾಮಾಯಣ

೯೧೦ ಉಗುರಿನಿಂದ ಹೋಗುವುವಕ್ಕೆ ಕೊಡಲಿ ತಕ್ಕಂಡ ಹಾಗೆ

೧ ಉಗುರಿಂದ ಪೋಪ್ಪುದಕೇತಕೆ ಕೊಡಲಿಯು ತೆಗೆವೆ ?
—(೩೫-೩೯) ರಾಮನಾಥಚರಿತ

೨ ಉಗುರಿನಲಿ ಪೋಹುದಕೆ ಕೊಡಲಿಯು ನೆಸೆಯಬೇಕೆ ?
— (ಪು ೪೬೧-೬೪) ಸಾಳ್ವಭಾರತ

೩ ಉಗುರಿಂದ ಹೋಹುದಕೆ ಕೊಡಲಿ ?
—(ರಾಯಸದ ಬೆಟ್ಟಸಂಧಿ-೧೭) ಭರತೇಶ ವೈಭವ

೪ ಉಗುರೊಳು ಬಾಜಿಪ ಬೀಣೆಗೊನಕೆಗೊಂಬ ಬಗೆ !
—(೬-೨೭) ಹದಿಬದೆಯ ಧರ್ಮ

೫ ಉಗುರಿಂ ಚಿವುಡಲ್ಕಾಗುವ್ಪೊಂದು ಕಜ್ಜಕ್ಕೆ ಕೊಡಲಿಯೊಂದು
ನೆರವಂ ಪಾರ್ವರೇ ?
—(೮-ಪು ೫೮; ೨೨-೩೩ನೆಯ ಸಾಲು) ಶ್ರೀರಾಮಾಶ್ವಮೇಧಂ

೯೧೧ ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವೆ ?

ಹೋಲಿಸಿ : ಪಕ್ಷಿಗೆ ತೊಡಲದೇತಕೆ ಪಾಶುಪತವಂ
—(೨೧-೪೧) ಬಸವಪುರಾಣ

೯೧೨ ನರಿಕೊಂದರೆ ಬರಿ (ವಾಸನೆ) ಹೇಲು

೧ ನರಿಯಂ ಬಡಿದೊಡೆ ಪೇಲ್ಸುರಿಗುಂ
—(೧೩-೧೨೭) ಧರ್ಮಾಮೃತ

೯೧೩ ಬಾಳೆ ಹಣ್ಣ್ಣ ಕೊಯ್ಯೋಕೆ ಗರಗಸ ಯಾಕೆ ?

೧ ಬಾಳೆ ಹಣ್ಣಿಗೆ ಕೊಡಲಿ ಬೇಕೆ ? —(ಕನಕದಾಸರ ಕೀ)

೨ ಬಾಳೆಯ ಹಣ್ಣಿಗುಂಟೆ ಗರಗಸ
(ಸಂ ೧೦-೭೦) ಚೆನ್ನಬಸವಪುರಾಣ

ಹೋಲಿಸಿ : ೧ ಎಳೆಗೊನೆಯ ಚಿಪ್ಪುಟುವಡೆ ಕೊಡಲಿಯ ತಳಿಸುವರೆ
—(೬-೨೩-೧೮) ತೊರವೆ ರಾಮಾಯಣ

೨ ಕೊಡಲಿಯೇ ಕೆಳಗೊನೆಗೆ
—(೬-೧-೨) ತೊರವೆ ರಾಮಾಯಣ

೯೧೪ ಶಾಟ ಸುಟ್ಟರೆ ಇದ್ದಲೂ ಅಲ್ಲ, ಬೂದಿಯೂ ಅಲ್ಲ

೧ ತುಷ್ಟೇಸತಿ ನ ಲಾಭಾಯ ರುಷ್ಟೇ ನಾಶಾಯ ನೈವಚ
ಪ್ರಜ್ವಲಿತಾನಿ ಶಷ್ಪಾಣಿ ನಾಂಗಾರಾಯ ನ ಭಸ್ಮನೇ (ಸಂ)

೯೧೫ ಆನೆಗೆ ಸೊಳ್ಳೆ ಕಡಿದ ಹಾಗೆ

೧ ಗುಂಗುರಿನ ದಷ್ಟಕೆ ಮದಿತಗಜವಂಜುವುದೆ ?
—(ಯು.ಕಾಂ. ೯-೩೪) ಶ್ರೀರಾಮಾಭ್ಯುದಯ
ಕಥಾಕುಸುಮ ಮಂಜರಿ

೯೧೬ ಆನೆ ಮೇಲೆ ಹೋಗುವವನನ್ನು ಶ್ವಾನ ಕಚ್ಚುವುದುಂಟೆ ?

೧ ಆನೆ ಮೇಲೆ ಬಪ್ಪಗೆ ಶ್ವಾನ ಕಚ್ಚಬಲ್ಲುದೆ ?
—ಬಸವಣ್ಣನವರು

೯೧೭ ಉಡೀಲಿ ಸುಣ್ಣ ಕಟ್ಕೊಂಡು ಮಡು ಬಿದ್ದಹಾಗೆ
ಉಡೀಲಿ ಕೆಂಡ ಧರಿಸಿದಂತೆ

೧ ಸುಣ್ಣ ಕಲ್ಪುಡಿಗಟ್ಟಿ ಮಡುವಿನೊಳಿಱಿದಂತೆ

ಹೋಲಿಸಿ : ಕೆಂಡವ ಮಡುಲೊಳಿಕ್ಕುವುದರ್ತಿಯೇ ?
—(ಅ.ಪ. ೨೦-೪೦) ಕರ್ಣಾಟಕ ಭಾರತ ಕಥಾಮಂಜರಿ

೯೧೮ ಕಾದ ನೀರು ಮನೆ ಸುಡಲಾರದು

೧ ಕಾಯ್ದ ಬೆನ್ನೀರ್ ಮನೆ ಸುಡದು
— (೯-೩೮) ವಿಕ್ರಮಾರ್ಜುನ ವಿಜಯಂ

೨ ಕಡುಗಾಯ್ದುಂ ನೀರ್ ಮನೆಯುಂ ಸುಡಲಱಿಗುಮೆ ?
—(೨-೧೦೧) ಧರ್ಮಾಮೃತ

೩ ಎನಿತುಂ ಕಾಯ್ದುಂ ಬೆಂನೀರ್ ಮನೆ ಸುಡದು
—(೨೩೫) ಕಾವ್ಯಾವಲೋಕನ

೪ ಎನಿತುಂ ಕಾಯ್ದುಂ ಬೆಂನೀರ್ ಮನೆ ಸುಡದು
—(೪-೧೯೩-೩) ಶಬ್ದಮಣಿ ದರ್ಪಣ

೯೧೯ ಕೆಂಡದ ಗಿರಿಗೆ ಅರಗಿನ ಬಾಣದಲ್ಲಿ ಹೊಡೆದಂತೆ

೧ ಕೆಂಡದಗಿರಿಯನರಗಿನ ಬಾಣದಲೆಚ್ಚಡೆ ಮರಳಿ ಬಾಣವನಱಸ
ಲುಂಟೆ ? —(೬೮೩) ಪ್ರಭುದೇವರ ವಚನಗಳು

೨ ಹೋಲಿಸಿ : ಉರಿಯು ರಾಜ್ಯವ ಸೂರೆಗೊಳಲೆನುತರಗು
ಪರಿದವೊಲಾಯ್ತು
—(ಭೀ.ಪ. ೮-೫೭) ಕರ್ಣಾಟಕ ಭಾರತ ಕಥಾಮಂಜರಿ

೯೨೦ ಕೆಂಡ ತಕ್ಕೊಂಡು ಮಂಡೇಲಿಟ್ಟುಕೊಂಡರಂತೆ

೧ ಅಣಗಿಸೆ ತಲೆಯೊಳ್ನವೆಯಂ ಮಿಣುಗುವ ಕೊಳ್ಳಿಯುಲಿ ತುರಿಸಿ
ಕೊಂಡವೊಲಕ್ಕುಂ —(೯೯) ಕನ್ನಡ ನೀತಿಸಾರವು

೯೨೧ ದೊಡ್ಡವರ ಹಗೆ ಸಲ್ಲ, ಬಡವರ ನೆರೆ ಸಲ್ಲ

೧ ಬಲ್ಲಿದರೊಳಗೆ ವಿರೋಧಿಸುವವ ಕೆಟ್ಟ
—(ಉಗಾಭೋಗ ಸಂ. ೨೭ ಹ.ಕೀ.ತ

೨ ಬಲವಂತರೊಡನ ಹಗೆ ಬೇಡ
– (೧೯೦) ಕನಕದಾಸರು

ಹೋಲಿಕೆ : ಬಲ್ಲಿದರ ಕೂಡ ಪಾರು ಪಂಥದ ಮಾತು ತರವೆ ?
—(೧-೪೪) ಪ್ರೌಢರಾಯನ ಕಾವ್ಯ

೯೨೨ ಪ್ರಳಯಾಗ್ನಿಯ ಮುಂದೆ ಪತಂಗದಾಟವೆ ?

೧ ಸಿಂಹದ ಮುಂದೆ ಜಿಗಿದಾಟವೆ, ಪ್ರಳಯಾಗ್ನಿಯ ಮುಂದೆ ಪತಂಗದಾಟವೆ...ನಿಮ್ಮ ಮುಂದೆ ಎನ್ನಾಟವೆ ಕಲಿದೇವರ ದೇವ ? — (ಕಲಿದೇವಯ್ಯ) ಕವಿಚರಿತ್ರೆ ೩, ಪು ೩೩೬

೯೨೩ ಸಿಡಿಲನ್ನು ಪೊಟ್ಟಣ ಕಟ್ಟಿ ಶಾಖ ಕೊಟ್ಟ ಹಾಗೆ

೧ ಸಿಡಿಲ ಪೊಟ್ಟಣ ಕಟ್ಟಿ ಸೇಕವ ಕೊಡುವರೆ?
--(ಸ.ಪ, ೧೪-೩೭) ಕರ್ಣಾಟಕ ಭಾರತ ಕಥಾಮಂಜರಿ

೯೨೪ 'ಅಲ್ಲಿ ಇಲ್ಲಿ ತಿರುಗುವುದಕ್ಕಿಂತ ಬೆಲ್ಲ ತಿಂದು ಸಾಯಿ' ಅಂದ

೧ ಕೆಳೆಗೊಂಡ ಹಗೆ --(೨-೯೯) ಸೋಮನಾಥ ಚರಿತ್ರೆ

೯೨೫ ಕಂಡ (ಬಡ)ವರ ಮಕ್ಕಳ ಬಾವಿಗಿಳಿಸಿ (ತಳ್ಳಿ, ನೂಕಿ) ಆಳ ನೋಡಿದರು

೧ ಲೋಗರ ಮಕ್ಕಳ ನಿಕ್ಕಿ ನೆಲೆಯು ನೋಡಿಹೆನು
—(೨೪೮) ಚೆನ್ನಬಸವಣ್ಣನವರ ವಚನಗಳು

೨ ಪೆಱರ ಮಕ್ಕಳನಿಕ್ಕಿನೆಲೆಯಂನಱಿವುದನಿಳೆಯೊಳಗೆನ್ನಲ್ಲಿ ಮಾಡ್ಪಿರೇ ? —(ಸ.೮-೫೦) ಗಿರಿಜಾಕಲ್ಯಾಣ

೯೨೬ ತಾನುಂಟೊ, ಮೂರುಲೋಕವುಂಟೊ ?

೧ ತಾನುಳ್ಳಡೆ ಮೂಱುಲೋಕಮುಂಟು

೯೨೭ ಹೊರಗಿನ ಮಾರಿ ಹೊರಗೇ ಹೋಗಲಿ, ಮನೆಗಂಡನಿಗೆ ಜಯವಾಗಲಿ

೧ ಹೊರಗಣ ಮಾರಿ ಹೊರ ಹೊರಗೆ
—(ದ್ರೋ.ಪ. ೮–೨೫) ಕರ್ಣಾಟ ಭಾರತ ಕಥಾ ಮಂಜರಿ

೯೨೮ ಮದುವೆ ಮನೆಯಲ್ಲಿ ಅನ್ನ ಇಕ್ಕಿ ಹಿತಪಡಕೊಂಡಂತೆ

೧ ಪೆಱರ ಮನೆಯ ಮದುವೆಯೊಳ್ ಲೋಗರಂ ನಂಟರ್ಮಾಡಿ
ಕೊಳ್ಳದವನು ಬುದ್ಧಿವಂತನಲ್ಲ
—(ಏ.ಆ. ೮೯ ವ) ಧರ್ಮಾಮೃತ

೨ ಮದುವೆಯ ತುಪ್ಪವಂ ಬಡಿಸಿ ಮೊಗವರಿತಮಂ ಮಾಡಿಕೊಂಡಂತೆ
—(೩–೬೦) ಸೋಮನಾಥ ಚರಿತ್ರೆ

೯೨೯ ಅತಿ ಸರ್ವತ್ರ ವರ್ಜಯೇತ್

೧ ಅತಿ ತ್ಯಾಗೀ ಹತಃ ಕರ್ಣಃ ಅತಿಮಾನೀ ಸುಯೋಧನಃ
ಅತಿ ಸರ್ವತ್ರ ವರ್ಜಯೇತ್ (ಸು)

೨ ಸರ್ವತ್ರಾತಿಶಯಂ ತ್ಯಜೇತ್
— (೧೦–೧೦೯) ರಾಜಶೇಖರವಿಲಾಸಂ

೯೩೦ ಅತಿ ಗತಿ ಕೆಡಿಸಿತು

೧ ಮಿತವಾಗಿದ್ದರೆ ಹಿತವಗೆಯ್ಯುವುದು । ಅತಿಯಾದರೆ ನಿಜಗತಿಯ
ಕೆಡಿಸುವುದು

೯೩೧ ತಲೆ ಬಲಿಯಿತು ಅಂತ ಕಲ್ಲು ಹಾಯಬಾರದು

೧ ತಲೆ ಬಲ್ಲಿತೆಂದು ಕಲ್ಲನೆ ಹಾಯಬೇಡ
—(೭–೨೩) ಮೋಹನತರಂಗಿಣಿ

೨ ತಲೆ ಬಲ್ಲಿತೆಂದು ಕಲ್ಲಂ ಪಾಯ್ವೆಲಾ
—(೧೪–೯) ಕನ್ನಡ ಜೈಮಿನಿ ಭಾರತ

೩ ಶಕುತಿಯುಳ್ಳರೆನುತ್ತ ತಲೆಗಳಂ ಶಿಲೆಗಳಿಂ ಪ್ರಕಟದಿಂ ತಾಗಿದವ

ರುಂಟೆ ?

—(ಸುಂ.ಕಾಂ. ೧೭-೨-೯) ಶ್ರೀಮದ್ರಾಮಾಯಣ

೪ ತನ್ನ ಮಂಡೆ ಗಟ್ಟಿಯೆನುತ್ತ–ಮರಕೆ ಜಪ್ಪುವುದುಂಟೆ ಅಣ್ಣದೇವ

—ಭಾರತದ ಜಾನಪದ ನೃತ್ಯಗಳು–(ಪು. ೫೧. ಬಯಲಾಟದ ಕೃತಿಗಳು)

೯೩೨ ಎಲ್ಲರೂ ಎಳ್ಳಿನಲ್ಲಿ ಎಣ್ಣೆ ತೆಗೆದರೆ ಇವ ಮರಳಿನಲ್ಲೇ ತೆಗೀತಾನೆ

ಹೋಲಿಸಿ : ೧ ಮಳಲಂ ಪಿಟ್ಟಿದೆಣ್ಣೆಯನಜಿಸುವ ನಿರ್ಬುದ್ಧಿ ಯುಮಂ ಪೋಲ್

—(ಆಶ್ವಾ.೭-೧೫೭ ರಿಂದ ೧೬೯ರ ವರೆಗಿನ ಪದ್ಯಗಳ ನಡುವಣ ಗದ್ಯ)

೨ ಸೈಕತವಲ್ಲಿ ತೈಲವುಂ ಘನತರ ಯತ್ನದಿಂ ತೆಗೆಯಲಕ್ಕುಮೆ ?

—(೨೮-೫೧) ವೃಷಭೇಂದ್ರ ವಿಜಯ

೩ ಮಳಲೊಳೆಣ್ಣೆಯ ಪಡೆವೆನೆಂಬವ

—(೭೦-೩೨) ಸದ್ಗುರುರಹಸ್ಯ

೯೩೩ ಕಲ್ಲಿನಿಂದ ನಾರು ಎತ್ತುತಾನೆ

ಹೋಲಿಸಿ : ೧ ಕಲ್ಲಲ್ಲಿ ನಾರೆತ್ತುವರ್ ಜೋಡೆಯರ್

—ಧರ್ಮಾಮೃತ

೨ ಪುರುಡಂ ಪುಟ್ಟಿಸಿ ಕಾಷ್ಠಮಂ ಕೊನರಿಪರ್ ಕಲ್ಲಲ್ಲಿ ನಾರೆತ್ತುವರ್ (ಕವಿಗಳ್

—(ಆಶ್ವಾ. ೧–೧೩) ನೇಮಿಚಂದ್ರ

೯೩೪ ನಗುವವರ ಮುಂದೆ ಎಡವಿ ಬಿದ್ದ ಹಾಗೆ

೧ ಬಿದ್ದೆನೆ ನಗುವವರಿಗೆಡೆಯಾಗಿ

—(೭–೩೯) ಪ್ರಭುಲಿಂಗಲೀಲೆ

೨ ನಗುವರ ಮುಂದಿಟ್ಟು ತಗಲಿಬಿದ್ದ ಮೇಲಿನ್ನೇನಿನ್ನೇನು !

—(ಪುರಂದರದಾಸರು)

೩ ನಗುವ ಸವತೆಯರ ಮುಂದೆ ಎಡಹಿದ ತೆರನಾಯ್ತು
—(ಮಹಲಿಂಗಸ್ವಾಮಿ)

೪ ನಗುವರೆಡೆಯೊಳಗೆಡಹಿ ಬಿದ್ದೆವು
—(ರಾಮಾಯಣ ಸಂಗ್ರಹ)

೯೩೫ ಎಮ್ಮೆ ಕರು ತನ್ನ ಚೆಂದಕ್ಕೆ ಹಂದಿ ಮರಿಯನ್ನು ಆಡಿಕೊಂಡಿತು

ಹೋಲಿಸಿ : ಸರಸಮರಿ ಕೋಗಿಲೆಗೆ ವಾಯಸವನಣಕಿಸುವ ತೆರ ನಾಯ್ತು —(೪೩) ರಾಮಧಾನ್ಯಚರಿತೆ

೯೩೬ ಕಾಗೆ ಚೆಂದಕ್ಕೆ ಕೋಗಿಲೆ ಜರೀತು

ಹೋಲಿಸಿ : ಕೋಗಿಲೆ ಸ್ವರಗೈಯುತ್ತಂದು ಕಾಗೆ ಅದಕ್ಕೆ ಇದಿರಾಗಿ ಕುಳಿತು ಕರ್ರೆಂದು ಕಟಕಿಯನಾಡಿದರೆ ಆ ಕೋಗಿಲೆ ಗಾದ ಕೊರತೆಯೇನು ?
—(೫೯) ಘನಲಿಂಗಿ ದೇವರ ವಚನ

೯೩೭ ಅಂಡೆ ಕಟ್ಟಬಹುದು, ಮುಂಡೆ ಬಾಯಿ (ದೊಂಡೆ) ಕಟ್ಟುವುದಕ್ಕೆ ಸಾಧ್ಯವೆ? ಮಡಕೆ ಬಾಯಿ ಕಟ್ಟಬಹುದು, ಮನುಷ್ಯರ ಬಾಯಿ ಕಟ್ಟಲಾಗದು

೧ ಅಂಡೆ ಬಾಯಿಯನೊಬ್ಬ । ಕಂಡು ಮುಚ್ಚಲುಬಹುದು
ಮುಂಡೆಗಳ ಬಾಯ—ಮುಚ್ಚಲುಂ ಸಲ್ಲದಿದು
ಖಂಡಿತವು ನೋಡ ! ಸರ್ವಜ್ಞ —ಸರ್ವ, (ಪ. ೧೩೩೪)

೯೩೮ ಊರ ಬಾಯ ಮುಚ್ಚೀಯೋ, ಗೆರಸಿ ಬಾಯ ಮುಚ್ಚಿಯೊ !

೧ ಕೆರೆಯ ಬಾಯಂ ಮುಚ್ಚಲ್ ಕೆರಸಿಯ ಬಾಯಂ
ಮುಚ ಲಾರ್ಗುಮೇಂ ಬಂದಪುದೇ
—(೧೨೧–೪೩) ನೇಮಿನಾಥಪುರಾಣಂ

೯೩೯ ನೆಕ್ಕುವ ನಾಯಿಗೆ ಲಿಂಗವೇನು, ಪೀಠವೇನು ?
(ಪಾನ ಬಟ್ಟಲೇನು, ಪಾಣಿಪಟ್ಟವೇನು ?)

೧ ನೆಕ್ಕೊ ನಾಯಿಗೆ ಲಿಂಗವೇನ್ಯೆ ಮಿಕ್ಕಿರುವ ಪಾಣ್ಬಟ್ಟವೇನ್ಯೆ
(೩೪–೪೬) ಜ್ಞಾನಸಿಂಧು

೯೪೦ ಸೇರಿಗೆ ಸವ್ವಾಸೇರು, ನೀನು ಅಂದರೆ ನಿಮ್ಮಪ್ಪ !

೧ ಸೇರಿಗೆ ಸವ್ವಾಸೇರು ರುವ್ವಿಗೆ ಪಂಚೇರು ಮಾಡಿ ನಡೆದ
—(೮) ಶ್ರೀ ಮೋಹನದಾಸರ ಕೀರ್ತನೆ

೯೪೧ ಆನೆ ಕಂಡು ಶ್ವಾನ ಬಗುಳಿದ ಹಾಗೆ

೧ ಅಳವರಿಯದೊಳ್ವ ಕುಕ್ಕುರ ಕುಳವುಂ ಲೆಕ್ಕಿಪುದೆ ಪೋಪ
ಮದ ಶುಂಡಾಲಂ —(ಆಶ್ವಾ. ೧೧-ಪ ೭೧) ಉದ್ಭಟಕಾವ್ಯ

೨ ಶ್ವಾನನಾನೆಯ ಬೊಗಳೆ। ಲಾನೆ ತಾ ಬೊಗಳುವುದೆ
ಜ್ಞಾನಿಯಾ ಶ್ವಾನ । ನಂತೆ ತಾ ಬೊಗಳಲಭಿ
ಮಾನವಮಗಿಹುದೆ ? ಸರ್ವಜ್ಞ —(ಸರ್ವ, ಪ. ೩೧೯)

೩ ನಾಯಾನೆಗುಂ ಬಗುಳ್ವುವೊಲಕ್ಕುಂ
—(೧೨೨) ಕನ್ನಡ ನೀತಿಸಾರವು

೯೪೨ ಚಂದ್ರನನ್ನು ನೋಡಿ ನಾಯಿ ಬಗುಳಿದ ಹಾಗೆ

ಹೋಲಿಸಿ : ಮುಳಿದು ಬಗುಳುವ ನಾಯ್ಗೆ ಚಂದ್ರಮನಳಕುವನೆ
—(ಉ.ಪ. ೯-೫೧) ಕರ್ಣಾಟ ಭಾರತ ಕಥಾಮಂಜರಿ

೯೪೩ ಜನರ ಸ್ವಭಾವ ಗೊತ್ತಿಲ್ವೆ ; ಮುಂದೆ ಹೊಗಳ್ತಾರೆ, ಹಿಂದೆ ತೆಗಳ್ತಾರೆ

ಹೋಲಿಸಿ : ಮುಂದೆ ಭಲಾಯೆಂದು ಹಿಂದೆ ನಿಂದಿಪರನ್ನು ಕೂಡ
ಬಾರದು —(ಕನಕದಾಸರು)

೯೪೪ ತಿಪ್ಪೆ ಮೇಲೆ ರತ್ನಹಾಕಿದರೆ ಅದರ ಯೋಗ್ಯತೆ ಹೋದೀತೆ ?

೧ ವರರತ್ನಂ ಪೇಲೊಳ್ ಬಿದ್ದಿರೆಯದು ಪೊಲ್ಲೆಂದು
ಬಿಸುಡಲಹುದೆ ?

೯೪೫ ನರಿ ಊಳಿಟ್ಟರೆ ನಾಗಲೋಕ ಹಾಳೇ ?

೯೪೬ ನಾಯಿ ಬಗುಳಿದರೆ ದೇವಲೋಕ ಹಾಳೇ

೧ ಶ್ವಾನನಜಿುವುದೆ ನಾಗಲೋಕವ ನಾಕಲೋಕವ
—(೫೯-೪೩) ಬಸವಪುರಾಣ

೨ ಭಷಕಂಗಳಗ್ರ ಕೂಗಲು ಸ್ವರ್ಗ ಹಾಳಪುದೆ ?
(೨೭-೫೫) ಸಿಂಗಿರಾಜ ಪುರಾಣಂ

೩ ನರಿಯೂಳಿಡೆ ಸುರಲೋಕಂ ಪಾೞ್ಪೋಕುಮೆ
—(೫-ಪು ೫೯ ; ೭೧-೨೨ನೆಯ ಸಾಲು)

೪ ಶುನಕ ಬಗುಳಲು ಹಾನಿಯುಪ್ಪುದೆ ವಿಮಲವಹ ದಿವಕೆ
(ರಾಮಾಯಣ ಸಂಗ್ರಹ)

೯೪೭ ಬೈದರೆ ಬಯ್ದುವರ ಬಾಯೇ ನೋಯುತ್ತೆ

೧ ಬೈದಡೆ ಬೈದರ ಬಾಯಿ ನೊಂದಪುದು
—(೧೧೧-೫-ಪ) ಗೀತಗೋಪಾಲ

೨ ನಿಂದೆಗೆಯ್ವರು ನಿಂದಿಸುತಿರಲಿ....ಬೈದಡೆ ಬೈನರ ಬಾಯಿ
ನೊಂದಪುದು

೯೪೮ ಮಸಿ ಅರಿವೆಯಲ್ಲಿ ಮಾಣಿಕ್ಯ ಕಟ್ಟಿದರೆ ಅನರ ಬೆಲೆ ಕಡಿಮೆಯಾಗುವುದಿಲ್ಲ

೧ ಮಸಿಯಿರುವೆಯಾವರಿಸಿ ಬೆಳಗುವ ನೂತ್ನ ರತ್ನದ ಪರಿಯೊಳು
—(ಕಾಂ ೪;ಸಂ ೨೧-೪೧) ಬಸವಪುರಾಣ

೨ ಮಾಣಿಕ್ಯ ಮಸಿಗಪ್ಪಡದೊಳಗಿರಲದ ಕೂಣೆಯುವೇನು ?
—(೧೪-೨೮) ನಾಗಕುಮಾರ ಚರಿತಂ

೯೪೯ ಸೂರ್ಯನಿಗೆ ಉಗುಳಿದರೆ ತನ್ನ ಮುಖದ ಮೇಲೆ ಬೀಳುವುದು

ಸೂರ್ಯನ ಮೇಲೆ ಮಣ್ಣು ತೂರಿದರೆ ನಮ್ಮ ಕಣ್ಣಲ್ಲಿಯೇ ಬೀಳುವುದು

ಹೋಲಿಸಿ : ೧ ಎಲರ್ಗೆ ಹುಡಿ ಹತ್ತುವುದೇ ?
(೧೯-೬೫) ರಾಘವಾಂಕ ಚರಿತ್ರೆ

೨ ಅಮಲ ಗಗನವ ಕೆಸರೊಳಿಟ್ಟವನ ಮೆಯ್ಯಿ ಕೆಸರಹುದಲ್ಲದಾಗ
ಸದಮಳ ಕೆಡುವುದೆ ?
—(೧೦-೧೯) ಶಂಕರದಾಸಿಮಯ್ಯ ಪುರಾಣ

೩ ಸೂರ್ಯನಿಗೆ ಮೋಳಿಟ್ಟರೆ ಸೂರ್ಯನಿಗೆ ತಗಲಲುಂಟೆ
—(ಪು. ೪೧೧) ಜಾನಪದ

೯೫೦ ಊರಿಗೆ ಹಂದಿ ಬೇಕು, ನೆರೆಗೆ ಸಿಂದಕ ಬೇಕು

೧ ಸಿಂದಕರಿರಬೇಕು ॥ಪ॥ ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ಧವೊ ಹಾಂಗೆ ॥ಅ॥ಪ॥ —(ಕೀ. ೪೬೧) ಹ.ಕೀ.ತ.

೯೫೧ ನಿಂದಿಸಿದವನಿಗೆ ವಂದಿಸಬೇಕು

೧ ಒಂದೆ ನಿಂದಿಪರನ್ನು ವಂದಿಸುತಲಿರಬೇಕು
—(ಕೀ ೨೪೦) ಹ.ಕೀ.ತ.

೯೫೨ ಸಾವಿರ (ಹಲವು) ಚಿತ್ತಾರವನ್ನು ಒಂದು ಮುಸಿ ನುಂಗಿತು

೧ ಶತಗುಣವನೊಂದೇ ಲೋಭ ಗೆಲುವಂತೆ
—(ದ್ರೋ.ಪ, ೧೦-೬) ಕರ್ಣಾಟ ಭಾರತ ಕಥಾಮಂಜರಿ

೨ ನೂರು ಚಿತ್ತಾರವನೊಂದೇ ಬಾರಿ ನುಂಗುವುದೊಂದು ಮುಸಿ ಯೆಂಬೂರ ಗಾದೆ —ರಾಮಾಯಣ ಸಂಗ್ರಹ

೯೫೩ ಹೂಸಿದರೂ ಹೂಲಿ ಎಬ್ಬಿಸು

ಹೋಲಿಸಿ : ಊರು ಸುಟ್ಟವನ ಹೊಯ್ಲು ಮುಂದೆ

೯೫೪ ತಮ್ಮ ಕಣ್ಣು ಕಾಡಿಗೆ ನೋಡುತ್ತವೆಯೆ ?

೧ ಕಾಣದಂದೆಂತುಂ ಕಣ್ಗಳ್ ತಮ್ಮ ಕಾಡಿಗೆಯುಂ
—(೧-೫೧) ಕವಿರಾಜ ಮಾರ್ಗ

೨ ಆತ್ಮದೋಷಂ ನ ಪಶ್ಯತಿ —(೫-೨೮ ವ) ಧರ್ಮಪರೀಕ್ಷೆ

೩ ತನ್ನಯ ದೋಷ ತನಗೆ ಕಾಣಿಸದೆಂಬ ಸನ್ನುತ ನೀತಿ ತಪ್ಪಗುಮೆ?
—(೬-೮೯) ನಾಗಕುಮಾರ ಚರಿತಂ

೯೫೫ ತನ್ನ ಬೆನ್ನು ತನಗೆ ಕಾಣಿಸದು, ಗುಲಗಂಜಿಗೆ ಕಪ್ಪು ಕಾಣಿಸದು

೧ ನಿನ್ನ ಬೆನ್ನನೇನೆಂದಱಿಯೈ

—(ಆ : ೪-೧೮೬) ಧರ್ಮಾಮೃತ

೨ ಇದಿರ ಗುಣವ ಒಲ್ಲೆ ಎಂಬರು, ತಮ್ಮ ಗುಣವ ತಾವರಿಯರು

—(೧೮೭) ಬಸವೇಶ್ವರ

೩ ತನಗುಳ್ಳವ ಗುಣಮುಂ ಗುಣ
ವೆನುತಿರ್ಪರನ್ಯರ ಗುಣಂಗಳಂ ದುರ್ಗುಣ
ವೆನುತಿರ್ಪ ಪಾಪರ ಚಿತ್ತ
ವನಾವಂ ತಿಳಿಪಲಾರ್ಪನಾತನೆ ದೇವಂ

(೫) ಧರ್ಮಪರೀಕ್ಷೆ

೪ ಅನ್ಯರನು ಮನಗಾಂಬರಲ್ಲದೆ ತನ್ನ ತಾ ಮನಗಾಂಬರೇ

—(ವಿ.ಪ. ೭-೨೩) ಕರ್ಣಾಟ ಭಾರತ ಕಥಾಮಂಜರಿ

೯೫೬ ದೀಪದ ಬುಡದಲ್ಲಿ (ನೆರಳು) ಕತ್ತಲೆ

೧ ಒಡಲ ಬಳಿ ನೆಳಲು

—(ದ್ರೋ.ಪ. ೧೫-೫೩; ವಿ.ಪ. ೧-೯) ಕರ್ಣಾಟ ಭಾರತ ಕಥಾಮಂಜರಿ

೯೫೭ ಅರಿಸಿನ ಕುತ್ತ್ರದವನಿಗೆ ಲೋಕವೇ ಹಳದಿ

೧ · ನಿಜದೋಷಾವೃತ ಮನಸಾಮತಿಸುಂದರ ಮೇವ ಭಾತಿ ವಿಪರೀತಮ್ ।
ಪಶ್ಯತಿ ಪಿತ್ತೋಪಹತಃ ಶಶಿಶುಭ್ರಂ ಶಂಕಮಪಿ ಪೀತಂ ॥ (ಸು)

೯೫೮ ಪಿತ್ತತಲೆಗೇರಿದವನಿಗೆ ಶಂಖ ಹಳದಿಯಾಗಿ ಕಂಡರೆ ಅದರ ಬಣ್ಣ ಕೆಟ್ಟೀತೆ?

ಹೋಲಿಸಿ : ೧ ಮದ್ದು ಕುಣಿಕೆಯುಂ ತಿಂದಂಗೆ ಕಲ್ಲುಂ ಮಣ್ಣುಂ
ಮರಸಂ ಪೊಂಬಣ್ಣಮಾಗಿ ತೋರ್ಪಂತೆ

—(೧-೧೧೭ ಗದ್ಯ) ಧರ್ಮಾಮೃತ

೨ ಮದ್ದು ಗುಣಿಕೆಯಂ ತಿಂದು ಸೊರ್ಕಿದಾತಂಗೆ ಕಾಷ್ಠ ಲೋಷ್ಠಾದಿ
ಗಳೆಲ್ಲಂ ಹೊಂಬಣ್ಣವಾಗಿ ತೋರ್ಪಂತೆ

—(ಪು ೧೨೫:೬ ಗದ್ಯ) ಜೀವ ಸಂಬೋಧನೆ

೩ ಇಟ್ಟೆಯು ಹಣ್ಣು ನರಿ ತಿಂದು ಸೃಷ್ಟಿ ತಿರುಗಿತೆಂಬಂತೆ
—(೨-೫೨೮) ಬಸವೇಶ್ವರ

೪ ಪಿತ್ತಾಧಿಕನು ತಿರುಗುತ ಲೋಕ ತಿರುಗುವುದೆಂಬ ತೆರನಂತೆ
—(ಭೀ. ಪ. ೩-೫೫)

೫ ತಾ ತಿರುಗಿ ಮೇಣ್ ವಸುಧೆ ತಿರುಗಿತ್ತೆಂಬವೊಲು
—(ಪ.ಸ್ಕಂ, ಸಂ ೨-೧೫) ಕನ್ನಡ ಭಾಗವತ

೬ ತಾ ತಿರುಗಿ ಕಂಗೆಟ್ಟು ತಿರುಗಿತು ಭೂತಳವಿದೆಂಬಂತೆ
—(ದ. ಸ್ಕಂ. ಸಂ ೪೩-೪೬) ಕನ್ನಡ ಭಾಗವತ

೯೫೯ ತನ್ನ ಎಡೆ ಮೇಲೆ (ಎಲೇಲಿ)ಕತ್ತೆ ಸತ್ತುಬಿದ್ದಿದ್ದರೂ ಇನ್ನೊಬ್ಬರ ಎಲೆಯಲ್ಲಿ ನೊಣ ಹೊಡೆಯೋಕೆ ಹೋದ

೧ ತನ್ನೆಡೆಯಲ್ಲಿ ಕತ್ತೆ ಸತ್ತುಬಿದ್ದುದನರಿಯದೆ ಪರರೆಲೆಯಲ್ಲಿ
ನೊಣವನ್ನಾರಿಸುವ ಮರುಳು ಮಾನವನಂತೆ
—(೧೦-೯೭) ಅಖಂಡೇಶ್ವರ ವಚನ

೯೬೦ ಕೇಡುಗಾಲಕ್ಕೆ ಕೂಡುವುದು ದುರ್ಬುದ್ಧಿ

೧ ಬುದ್ಧಿ ಕೆಡುಗುಂ ಕೇಡೆಯ್ದುವಂದಾರೊಳಂ
—(೮-೭೫) ಜಗನ್ನಾಥವಿಜಯ

೨ ಕೇಡಿಗೆ ಬುದ್ಧಿಯನಿಸು ತೋರುವುದಿಲ್ಲ
(೨೮-೩೨) ನೇಮಿಜಿನೇಶ ಸಂಗತಿ

೩ ಕೇಡಡಸಿದ ಪೊಳ್ಮಾರ್ಗಂ ಕೂಡದು ಸನ್ಮತಿ
ಸುಬುದ್ಧಿಪೇಳ್ದರೊಡನೆ ಮಾತಾಡರವರ್
—(ಸ. ಆ-ಪ ೪೦) ವೀರಭದ್ರ ವಿಜಯಂ

೪ ಕೇಡು ಬಹಕಾಲಕ್ಕೆ ಕೂಡುವವೆ ಬುದ್ಧಿಗಳು
—(೭೭೬) ಸರ್ವಜ್ಞ

೫ ಕೇಡು ಬಂದೊದಗುವವ ಸರದಿ ಬುದ್ಧಿಗಳೊಂದುಗೂಡ
ವಾಗರ್ಾದೊಡಂ
—(ಅಯೋ.ಕಾಂ. ೨೨-೩೩) ಶ್ರೀ ಮದ್ರಾಮಾಯಣಂ

೬ ಕೂಡಿ ಬಂದುದು ಕೆಡುವ ಕಾಲದಲಿ
—(ಸಂ ೪–೫) ಕೌಶಿಕ ರಾಮಾಯಣ

೭ ಕೇಡು ಬರುವ ಕಾಲಕ್ಕೆ ಕೂಡಿತು ದುರ್ಬುದ್ಧಿ
—(ಪು. ೩೦) ಜಾನಪದ

ವೀರಾಜೆ ದೊರೆಗೆ ಕೇಡುಗಾಲಕೆ ಬುದ್ಧಿ ಕೂಡಿತು...ತಂದ ನಾನಾ
(ಪು. ೩೪೬) ಜಾನಪದ

೮ ಕೇಡಡಸು ವರ್ಗಕ್ಕುಂ ಪ್ರಕೃತಿ ವಿಕೃತಿ —(೩೦೩–೧೦೫)

೯೬೧ ಸೀತೆ ತಂದ ರಾವಣ ಮನೆಗೆ ಮಾರೀನೂ ತಂದ

ಹೋಲಿಸಿ : ಮಾರಿಯನಾಮಂತ್ರಿಸಿ ಕೊಂಡೊಯ್ವಂತೆ
—(೩೭೭ವ) ಕರ್ಣಾಟಕ ಪಂಚತಂತ್ರ

೯೬೨ ವಿನಾಶಕಾಲಕ್ಕೆ ವಿಪರೀತ ಬುದ್ಧಿ

೧ ಅಳಿಃ ಕುಳಿರ್ವೃಶ್ಚಿಕ ವೇಣುಃರಂಭಾ ವಿನಾಶ ಕಾಲೇ
ಫಲಮುತ್ಸೃಜಂತಿ

ಯಥಾ ತಥಾ ಸಜ್ಜನ ದುರ್ಜನಾನಾಂ ವಿನಾಶ ಕಾಲೇ
ವಿಪರೀತ ಬುದ್ಧಿಃ (ಸು)

೨ ಬಿದಿರ್ಗಳ್ ಫಲಮಾಗಲೊಡನೆ ಸಾವುವು ಧರೆಯೊಳ್
—(೩–೧೭೦) ಧರ್ಮಾಮೃತ

೩ ಎಸಡಿಯು ಬಸಿಱನೊಡೆದು ಪುಟ್ಟುವೆ ಮಱಿಗಳ್
(ಪು ೧೫೯–೭೨) ನೇಮಿನಾಥಪುರಾಣಂ

೪ ಹೀನ ಕಾಲಕೆ ಮತಿ ವಿರೂಪಕವಹುದು
—(ಕನ್ನಡ ಭಾಗವತ)

೫ ವಿಪರೀತ ಬುದ್ಧಿ ಜನಿಸುವ್ರುದಪಕರ್ಷದ ಕಾಲಕೆ
— (೬–೭೩) ಚಿಕದೇವರಾಜವಿಜಯಂ

೬ ಅಳಿವ ಕಾಲಕೆ ಬುದ್ಧಿ ತಲೆಕೆಳವು
— (೧೨–೨೮) ಪದ್ಮಾವತಿ ಚರಿತೆ

೭ ದಾಶರಥಿಯು ಕೊಡೆ–ಕರುತ ಬೇಡೆಂದರೆ–ಅಣ್ಣದೇವ
ವಿನಾಶಕಾಲಕ್ಕೆ ಬುದ್ಧಿ–ವಿಪರೀತವಾದುದೆ–ಅಣ್ಣದೇವ
—(ಪ್ರು. ೫) ಬಯಲಾಟದ ಕೃತಿಗಳು, ಭಾರತದ ಜಾನಪದ ನೃತ್ಯಗಳು

೮ ಜಾನಕಿಗೆ ಫಲಂ ಪುಟ್ಟಿಬಂತದೆ ಕಡೆ ಜೋಗಿಗುರೆ ಗರ್ಭವಾದುದೆ ಕಡೆ
ವಿಪರೀತ ಬುದ್ಧಿ ವಿನಾಶಕಾರಕ ವಲಾ
—(ಭರತಭಕ್ತಿ ಕಾವ್ಯ)

೯೬೩ ಕೋತಿ ತಾನು ಕೆಡುವುದಲ್ಲದೆ ಪಳು ವನ ಕೆಡಿಸಿತು

೧ ತಾ ಕೆಡುತ್ತೆ ಪೆಕ್ಕಲ ಕೆಡಿಸಿದನೆಂಬ ಲೋಕದ ನುಡಿ
(೧೯-೬೫) ನಾಗಕುಮಾರಚರಿತೆ

೨ ತಾಂ ಕೆಡುತೆ ನೆರೆಯುವರನೆಲ್ಲರಂ ಕೆಡಿಪುವರವಾಳ್ಕೆ !
— (ಸಂ ೩೨–ಪ ೪೭) ಚೆನ್ನಬಸವಪುರಾಣ

೯೬೪ ಕೆಟ್ಟಮೇಲೆ ಲೊಟ್ಟೆ

೧ ಕೆಟ್ಟ ಮೇಲೆ ಲೊಟ್ಟೆಯೋ

೯೬೫ ನಾ ಬಿಟ್ಟರೂ ಅದು ಬಿಡದು

೧ ನಾ ಬಿಟ್ಟೆನೆನ್ನಂ ಬಿಡದಿದು
—(೧೯–೨೨) ಬಸವಪುರಾಣ

೨ ನಾಂ ಬಿಟ್ಟೆನೆಂದೊಡಂ ಬಿಡದಲಾ
—(೬-೧೩) ಚೇರಮ ಕಾವ್ಯಂ

೯೬೬ ಕೆಟ್ಟ ಮೇಲೆ ಬುದ್ಧಿ ಬಂತು, ಅಟ್ಟ ಮೇಲೆ ಒಲೆ ಉರಿಯಿತು

೧ ಅಟ್ಟ ಮೇಲೆ ಒಲೆಯು ಉರಿಯುವಂತೆ ಎನಗೀಗ
ಕೆಟ್ಟಮೇಲೆ ಅರಿವು ಬಂದಿತಯ್ಯ।

—(ಕೀ. ೨೬೭) ಹ. ಕೀ. ತ

೨ ಸುಟ್ಟೊಲೆಯು ಬಿಡದೆ ತಾ । ನಟ್ಟ ಮೇಲುರಿದಂತೆ

—ಸರ್ವ, (ಪ. ೧೩೩)

೯೬೭ ಕೊಡ ಹಾಲು ಕೆಡಿಸುವುದಕ್ಕೆ ಅಪ್ಲವೆಷ್ಟು ಬೇಕು ?

೧ ಮರುಗುವ ಪಾಲ್ಗಳೆಯು ಪನಿಗಳಂ ಬೆರಸಿದಪ್ಪೊಲ್

—(೫–೫೮) ಕವಿರಾಜಮಾರ್ಗ

೨ ಪುಳ್ಳಳೆ ಪಾಲಂ ಕೆಡಿಸುವಂತೆ

—(೬–೭೪ವ) ನೇಮಿನಾಥಪುರಾಣಂ

೩ ಕೊಡವಾಲ ಕೆಡಿಸುವ್ಪೊಡಾಮ್ಲವೆನಿತಾಗಬೇಕು

—(೭–೨೨) ಹರಿಶ್ಚಂದ್ರ ಕಾವ್ಯಂ

೯೬೮ ಕ್ಷುದ್ರಗೇಡಿ ನೆರೆಯಲ್ಲಿದ್ದು ಇದ್ದಷ್ಟು ಬುದ್ಧಿಯೂ ಹೋಯಿತು

೧ ಇದ್ದರೆ ಇರಬೇಕು ಪುಣ್ಯವಂತರ ನೆರೆಯು
ಕುದ್ದುರು ಗೇಡಿ ಕುಲಗೇಡಿ । ನೆರೆಯಾಗ
ಇದ್ದ ಬದ್ದೆಲ್ಲ ಕಳಕೊಂಡಿ (ಹಳ್ಳಿಹಾ. ಪು. ೧೬೫)

೯೬೯ ಹೇಳುವವರು ಹೇಳಿದರೆ ಕೇಳುವವರಿಗೆ ಬುದ್ಧಿಯಿಲ್ಲವೊ ?

ಹೋಲಿಸಿ : ಪಿಸುಣನೆ ಕಷ್ಟ ಮತ್ತಮವನಿಂದತಿ ಕಷ್ಟ ಪಿಸುಣಗೆ
ಕಿವಿಗೊಟ್ಟವನು

—(೯–೨೦) ನಾಗಕುಮಾರ ಚರಿತಂ

೯೭೦ ಕೆಳಗೆ ಬಿದ್ದರೂ ಮೂಗು ಮೇಲು
ಮುಗ್ಗಿ ಎಳ್ದುಂ ಮೂಗು ಮೇಲೆಂಬರ್

—ಚಿಕದೇವರಾಜ ವಂಶಾವಳಿ

೯೭೧ ಊರೋದು ಜಾರೋದು ನಾರೋದು ಎಲ್ಲ ಕಲಿತಿದ್ದವನೇ ಜಾಣ

ಹೋಲಿಸಿ : ಸಮಯೋಚಿತಕ್ಕೆ ತಕ್ಕಂತೆ ನೆಗಟ್ಟುದೆ ಮಂತ್ರಂ
—(೧೩-೫೮ವ) ಅನಂತನಾಥ ಪುರಾಣಂ

೯೭೨ ಕಾರ್ಯವಾಸಿ ಕತ್ತೆ ಕಾಲು ಕಟ್ಟು

೧ ಕಾರ್ಯ ವಶಕ್ಕೆ ಕತ್ತೆಯ ಕಾಲ್ವಿಡಿದನ್

೨ ಕಾರ್ಯಾಂತಕಿ ವಸುದೇವ ಕತ್ತೆಕಾಲ್ಪಿಡಿದ
—(೧೮-೬೨) ಸೊಬಗಿನ ಸೋನೆ

ಹೋಲಿಸಿ : ಕಾಲವುಳ್ಳವನಾದಡೆ ಕಾರ್ಯ ಜಾತೆಗೆ ಹೊಲೆಯನ
ಕಳಿಗೊಳ್ಳಬಹುದು
—(೧೫-೬೨) ಅನಂತನಾಥಪುರಾಣಂ

೯೭೩ ಗಾಳಿ ಬಂದಾಗ ತೂರಿಕೊ

೧ ಗಾಳಿ ಇದ್ದಲ್ಲಿ ತೂಱಿಕೊಳ್ಳಿ ಬಳಿಕಱಿಸಿದರುಂಟೆ ಪರಮಸುಖವು
—(ಸ್ವತಂತ್ರಕಪಿಲಸಿದ್ಧ ಮಲ್ಲೇಶ್ವರ ಕವಿ.ಚ. ೨, ದ್ವಿ.ಸಂಪುಟ)

೨ ಗಾಳಿ ಬೀಸುವ ದಿನದಲೇ ತೂಱುವುದು ಹೊಟ್ಟುಗಳು
—(೧೬-೧೨) ಪ್ರಭುಲಿಂಗಲೀಲೆ

೩ ಗಾಳಿ ಬಂದ ಕೈಯಲ್ಲಿ ತೂರಿಕೊಳ್ಳಿರೊ
—(ಪು. ೪೬೬) ಹ.ಕೀ.ತ

೪ ಗಾಳಿ ಬಂದಲ್ಲಿ ತೂರುವುದು —ಸಿದ್ಧೇಶ್ವರ ಪುರಾಣ

೫ ಗಾಳಿ ಬೀಸುವ ವ್ಯಾಳ್ಯದಲ್ಲಿ ತೂರಿಕೊಳ್ಳಿರೊ ಬೇಗ
—(೯-೧೨) ಅಖಂಡೇಶ್ವರ ವಚನ

೬ ಗಾಳಿ ಬಿಟ್ಟಲ್ಲಿ ತೂರಿಕೊಳ್ಳಿರಯ್ಯ

೭ ಹಾಲುಳ್ಳಲ್ಲಿ ಹಬ್ಬಮಾಡು, ಗಾಳಿ ಇದ್ದಲ್ಲಿ ತೂಱಿಕೊಳ್ಳಿ

೯೭೪ ಗೆದ್ದೆತ್ತಿನ ಬಾಲ ಹಿಡಿಯುವುದು

೧ ಗೆದ್ದ ಎತ್ತದ ಬಾಲ ಪ್ರಡಿಚ್ಚನಕೆ —(ಕೊಡಗು ಗಾದೆ)

೯೭೫ ನಿರ್ವಾಣದ ಪಟ್ಟಣದಲ್ಲಿ ಕೌಪೀನವಿದ್ದವನೇ ಹೆಡ್ಡ

೯೭೬ ಬತ್ತಲೆ ಇರೋ ಊರಲ್ಲಿ ಬಟ್ಟೆ ಉಟ್ಟವರೇ ಹುಚ್ಚರು

೧ ನಿರಸ್ತ ವಸನೇಗ್ರಾಮೇ ಹಾಸ್ಯಃ ಕೌಪೀನವಾನ್ನರಃ (ಸಂ)

೯೭೭ ಹಲ್ಲಿರುವಾಗಲೇ ಕಡಲೆ ತಿನ್ನಬೇಕು

೧ ಪಲ್ಲಿರ್ಪಾಗಂ ಕಡಲೆಯು ಮೆಲ್ವುದು —(ನೀತಿವಲ್ಲರಿ)

೯೭೮ ಇರುಳು ಕಂಡ ಬಾವಿಗೆ ಹಗಲು ಬಿದ್ದಹಾಗೆ

೧ ಇರುಳ್ ಬಿಳ್ದ ಕುಟಿಯೊಳ್ ಪಗಲೇಕೆ ಬೀಟ್ವ
(ಪ್ರ ೧೬೧–೨೫) ಜೀವಸಂಬೋಧನೆ

೨ ಇರುಳ್ ನಿಟ್ಟಿಸಿದ ಪೆಬ್ಬಾವಿಗೆ ಹಗಲೆ ಬಿದ್ದಂತೆ
—ಮೋಹನತರಂಗಿಣಿ

೩ ದೀಪವ ಹಿಡಿದು ಗುಳಿಯೊಳು ಬಿದ್ದೊಲಾಯಿತು !
—(೧೨–೧೦) ಶಂಕರದಾಸಿಮಯ್ಯ ಪುರಾಣ

೪ ಹಗಲು ಕಂಡ ಕಮರಿಯು ಇರುಳು ಬೀಳುವರೆ?
—(೧೦–೨೮) ಅಖಂಡೇಶ್ವರ ವಚನ

೫ ಇರುಳ್ ಕಂಡ ಪಳ್ಳಿದೊಳ್ಪಗಲ್ ಬೀಳ್ವರೆ
—ಚಿಕದೇವರಾಜ ವಂಶಾವಳಿ

೬ ಕಾಣುತ ಗರ್ತದೊಳಗೆ ಕೆಡೆದಪ್ಪುದ್ಯುಕ್ತವೇ ?
—(ಕಿ.ಕಾಂ. ೧೮-೪೦) ಶ್ರೀಮದ್ರಾಮಾಯಣಂ

೭ ಇರುಳ್ ಕಂಡ ಬಾವಿಯೊಳ್ ಪಗಲೊಳ್ ಬೀಳ್ವಂತೆ
(೧೫-ಪು ೧೩೭; ೭೭-೨೮ನೆಯ ಸಾಲು)
—ಶ್ರೀರಾಮಾಶ್ವಮೇಧಂ

೮ ಇರುಳು ಕಂಡ ಬಾವಿಯಲ್ಲಿ ಹಗಲು ಬಿದ್ದಂತೆ
—ಮಹಲಿಂಗಸ್ವಾಮಿ

೯ ರಾತ್ರೆ ಯರಿತ ಬಾವಿಗೆ ಹಗಲೇ ಬೀಳ್ವರೆಲ್ಲ
—ಆಧ್ಯಾತ್ಮ ಗೀತಾವಳಿ

೯೭೯ ಕುರಿ ನಂಬುವುದಂ ಕಟುಕನನ್ನೇ

೧ ತಿಂಬರನಲ್ಲದೆ ಕುರಿ ಮೆಚ್ಚದೆಂಬ ನುಡಿ
(೨-೬೪) ಅಜಿತ ತೀರ್ಥಂಕರ ಪುರಾಣಂ

೨ ಮೆಚ್ಚುವಂತೆ ಕುರಿ ತಿಂಬವರಂ
—(ಪ್ರ ೧೨೪-೩ ಪು: ೧೨-೨೧ವ) ಜೀವಸಂಬೋಧನೆ

೩ ಮಾರಿ ತಿಂಬರ ಕುರಿ ಮೆಚ್ಚುಗು —(೩೬೩) ನೀತಿಸಾರ

೪ ಕುರಿ ತನ್ನಂ ತಿಂಬವರನೆ ಮೆಚ್ಚುವುದಂ ಕಂಡಲ್ಲಿ ನೀಕಲ್ತುದೊ
ಪೇಳ್ ಕುರಿಗಳ್ ನಿನ್ನಲ್ಲಿ ಕಲ್ತುವೊ ?
—(ಪ್ರ ೧೨ : ೨೧ ವ)

೯೮೦ ಕೊಂದ ಕೊಲೆ ಬೆನ್ನು ಬಿಡದು
ಕೊಂದವನಿಗೆ ಕೊಲೆ ತಪ್ಪದು

೧ ಕೊಂದವರ್ ಕೊಲೆ ಸಾವರ್
(೧೪-೧೦ವ) ವಿಕ್ರಮಾರ್ಜುನ ವಿಜಯಂ

೨ ಕೊಂದರ್ಕೊಲೆ ಸತ್ತರ್ —(೧೪-೧೧೨) ಧರ್ಮಾಮೃತಂ

೩ ಕೊಂದವರ್ ಬದ್ಧಹರೇ (೧೨-೧೨೧) ಧರ್ಮಾಮೃತಂ

೪ ಕೊಂದವಗೆ ಕೊಲೆ ತಪ್ಪದು
—(೧೧-೧೪) ಪ್ರಭುಲಿಂಗಲೀಲೆ

೫ ಕೊಂದವಗೆ ಕೊಲೆ ಬಿಡದು —(೨೪೯-೩೩) ಪ್ರಭುಲಿಂಗಲೀಲೆ

೬ ಕೊಂದವಗೆ ಕೊಲೆ ತಪ್ಪಲುಬುವುದೆ ?
(೧೦-೨-೧೨) ಕನ್ನಡ ಭಾಗವತ

೭ ಕೊಂದವರಿಗೆ ಕೊಲೆ ತಪ್ಪದು
—(೧೩-೨೭) ನಾಗಕುಮಾರ ಚರಿತಂ

೮ ಕೊಂದವರ್ಗೆ ಕೊಲೆ ಬಿಡದು
—(೧೪-೧೨) ಪ್ರೌಢರಾಯನ ಕಾವ್ಯ

೯ ಕೊಂದವಗೆ ಕೊಲೆಯುಟ್ಟಿದುಳಿವುದೆ ?
—(೩೦-೭) ಕೌಶಿಕ ರಾಮಾಯಣ

೯೮೧ ಸಾರಿ ದೂರಿ ಕೊಂದರೆ ಪಾಪವಿಲ್ಲ

೧ ಸಾರಿ ಕೊಲ್ವ ಮನ್ನೆಯಂಗೆ ದೋಷವಿಲ್ಲ
—(೯-೧೧.ಗಪ) ಲೀಲಾವತಿ ಪ್ರಬಂಧ

೨ ಸಾರಿಲಿ ಕೊಂದಡೆ ದೋಷವಿಲ್ಲ
—(೧೪-೧೩; ೧೪-೨೦) ಸಿಂಗಿರಾಜ ಪುರಾಣ

೩ ಸಾರಿ ಕೊಂದರೆ ದೋಷವಿಲ್ಲ
—(೧೦-೭) (೨೯-೪೩) ಕೌಶಿಕ ರಾಮಾಯಣ

೪ ಸಾರಿ ಕೊಂದರೆ ಪಾಪವಿಲ್ಲ—ವಸುಪಾರಯ್ಯದಿರುವುದು
ನಡವಳಿಯಲ್ಲ ॥ಪ॥—(ಯಕ್ಷಗಾನ ರಾಮಾಯಣ, ಪಾರ್ತಿಸುಬ್ಬ)

೯೮೨ ಊರಿನ ಎತ್ತು [illegible] ಅಂತ [illegible] ಎತ್ತು [illegible]

ಹೋಲಿಸಿ: *೧ [illegible]
(೭-೬೯) ವಿಕ್ರಮಾರ್ಜುನ ವಿಜಯಂ

೨ [illegible]
(೧೦-೬೮) ಧರ್ಮಾಮೃತ

೩ ಕೋಗಿಲೆ ಸ್ವರಕ್ಕೆ [illegible] ಕಾಗೆ [illegible]
—(೨೧೯) [illegible] ವಚನ

೪ [illegible]
[illegible] —(೩೭) ಘನಲಿಂಗಿ ದೇವರ ವಚನ

---

* [illegible] ಧರ್ಮರಾಯನು ಕಟ್ಟಿಸಿದ್ದ ಧರ್ಮವನ್ನು [illegible] ತಾನೂ [illegible] ಕಟ್ಟಿಸಿದ ಧರ್ಮವನ್ನು ಧರ್ಮರಾಯನಿಗೆ [illegible] ಪ್ರಸಂಗ.

೯೮೩ ಎಲ್ಲರೂ ನಗ್ತಾರೆ ಅಂತ ಕಿವುಡ ತಾನೂ ನಕ್ಕ

ಹೋಲಿಸಿ : ಕುರುಡರೆಲ್ಲರು ಗೊಂಬೆಯಾಡುವಲ್ಲಿಗೆ ಬಂದು ನೆರೆದವರೊಳು ತಾವು ನಗುತಿರುವಂತೆ

—(೫–೨೯–೩) ಕೈವಲ್ಯ ಕಲ್ಪವಲ್ಲರಿ

೯೮೪ ನಾಯಿಗೇಕೆ ನವಿಲಾಟ

೧ ನಾಯ್ಗೆ ನವಿಲಾಟಮೆ —(೧–೪೭) ಧರ್ಮಾಮೃತ

೯೮೫ ಕಾಗೆ ನಂದನವನದಲ್ಲಿ ಕುಳಿತು ಕೂಗಿದರೆ ಕೋಗಿಲೆಯಾದೀತೆ ?

೧ ಕಾಗೆ ನಂದನವನದೊಳಗಿದ್ದರೇನು, ಕೋಗಿಲೆಯಾಗ ಬಲ್ಲುದೆ ?

—ಬಸವೇಶ್ವರ

೯೮೬ ನವಿಲು ಜಾಗರ ಆಡುತ್ತೆ ಅಂತ ಕೆಂಬೂ(ಬೇ)ತ ಪುಕ್ಕ ತರಕೊಂಡಿತು

೧ ನವಿಲು ನಲಿಯಿತ್ತೆಂದಡೆ ಕಾಡ ಕೋಳಿ ಪುಚ್ಚವ ತೆರ ಕೊಂಡಂತೆ

—(೩೯) ದೇವರ ದಾಸಿಮಯ್ಯ ವಚನ

೨ ನವಿಲಾಡಿತ್ತೆಂದು ಕೆಂಬೋತ ಪುಕ್ಕವ ತರ ಕೊಂಡಂತೆ

—(೨೯) ತೋಂಟದ ಸಿದ್ಧೇಶ್ವರ ವಚನ

ಹೋಲಿಸಿ :

೧ ನೋಡಕೆ ಮಯೂರ ಕುಣಿವಂತೆ ಕುಕ್ಕುಟ ಕುಣಿಯಬಲ್ಲುದೆ?

—(ಪುರಂದರದಾಸರು)

೨ ಕುಮಾರ ಕುದುರೆಯನೇರಿದನೆಂದು ಗುಲಾಮ ಕುನ್ನಿಯನೇರಿದಂತೆ

೩ ಕೋಗಿಲೆ ಸ್ವರಗೈಯಿತೆಂದು ಕಾಗೆ ಅದಕ್ಕೆ ಇದಿರಾಗಿ ಕುಳಿತು ಕರ್ರೆಂದು ಕಟಕಿಯನಾಡಿದರೆ ಆ ಕೋಗಿಲೆಗಾದ ಕೊರತೆಯೇನು?

೪ ಬಲ ಮುರಿಯ ಶಂಖ ಭುಗಿಲು ಭುಗಿಲೆಂದು ಝೇಂಕರಿಸಿತೆಂದು ಕೆರೆಯೊಳಗಣ ಗುಳ್ಳೆ ಕಿಚು ಕಿಚು ಎಂಬಂತೆ

೫ ಅಂದಿನ ಕಾಲದ ಹನುಮ ಲಂಕೆಯ ದಾಂಟಿದನೆಂದು ಇಂದಿನ ಕಾಲದ ಕಪಿ ಹಳ್ಳವ ದಾಟಿದಂತೆ

—(೩೭) ಘನಲಿಂಗಿದೇವರ ವಚನ

೬ ಆನೆ ಮದವೆದ್ದು ಸೋಮ ವೀಥಿಯ ಸೂರೆ ಮಾಡಿತೆಂದು
ಆಡು ಮದವೆದ್ದು ಬೇಡರಕೇರಿಗೆ ಹೋಗಿ ಕೊರಳ ಮುರಿಸಿ
ಕೊಂಬಂತೆ —(೩೭) ಘನ ಲಿಂಗಿ ದೇವರ ವಚನ

೭ ಉತ್ತಮಾಶ್ವವು ಕುಣಿಯೆ ಕಂಡೇ ಕತ್ತೆ ಕುಣಿಯಲು
ಸರಿಯಹುದೇ —(೪೨-೭೭) ಜ್ಞಾನಸಿಂಧು

೯೮೭ ಮೋಡ ನೋಡಿ ನವಿಲು ಕುಣಿದರೆ ಗೂಗೆ ನೋಡಿ ಕೋಳಿ ಕುಣಿಯಿತಂತೆ

ಹೋಲಿಸಿ: ನೋಗೆ ನರ್ತಿಸುವಂತು ಮೇಘ ನಿನಾದಕೆ ಗೂಗೆ ತಾನೇನ
ನರ್ತಿಪ್ಪುದು ? —(೧-೭೧) ನಾಗಕುಮಾರ ಚರಿತಂ

೯೮೮ ಹಂಸೆಯ ಹಾಗೆ ನಡೆಯೋಕೆ ಹೋಗಿ ಗುಬ್ಬಿ ಕುಪ್ಪಳಿಸಿ ಬಿತ್ತು

೧ ಹಂಸಸ್ಯ ಗತಿ ಮನ್ವಿಚ್ಛನ್ ಪೂರ್ವಗತ್ಯಾ ವಿವರ್ಜಿತಃ
ಇತೋಭ್ರಷ್ಟಸ್ತತೋ ಭ್ರಷ್ಟೋ ಬಕಃ ಕುಜೋऽಪಿ ಕೇವಲಂ
(ಸಂ)

೯೮೯ ಹುಲಿ ಬಣ್ಣ ನೋಡಿ ನರಿ ಬರೆ ಹಾಕಿ (ಮೈ ಸುಟ್ಟು) ಕೊಂಡಿತು

೧ ಹುಲಿಯ ಬಣ್ಣಕ್ಕೆ ನರಿ ಮೈಸುಟ್ಟು ಕೊಂಡಂತೆ
—(೨೧೯) ತೋಂಟದ ಸಿದ್ಧೇಶ್ವರ ವಚನ

೨ ಹುಲಿಯಹೆನು ನಾನೆಂದು ನರಿ ತನು ಬಲುಹಿಂದಲಿ ಸುಟ್ಟು
ಕೊಂಡಡೆ ಹುಲಿಯು ತಾನೆಂತಹುದು ?
— (೪೨-೭೮) ಜ್ಞಾನಸಿಂಧು

೯೯೦ ಇದ್ದ ತಂಗುಳು ನನಗಿಕ್ಕು ನಿನಗೆಂದಿಗೂ ಹಸಿವಿಲ್ಲದ ಹಾಗೆ ಮಾಡ್ತೇನೆ
ಹಸಿವೆಯಾಗದಂತೆ ಗಿಡ ಕೊಡ್ತೇನೆ ನನಗರ್ಧ ರೊಟ್ಟಿ ಕೊಡು

೧ ಹಸಿವಿಲ್ಲದ ಮದ್ದು ಕೊಟ್ಟೇನು ಅಶನ ನೀಡು
—(೪೯೩) ಚೆನ್ನಬಸವಣ್ಣನವರ ವಚನಗಳು

೨ ಹಸಿ ತೃಷೆಗಳಾಗದಿಹ ಪರ ಮೂಲಿಕೆಯ ನಿನಗೆ
ನಿಜದದಿಂದಲಿ ಕೊಡುವೆ ನೀರಾನ್ನಗಳನೆನಗೆ
ಬಸಿದು ನೀಡು — (೧೪-೫೪) ಮಹಾಲಿಂಗ ಲೀಲೆ

ಹೋಲಿಸಿ: ಬೇಚರದ ಮದ್ದು ಕೊಟ್ಟೇನು ತೊಡರಿದು
ದಾಂಟಿಸು —(೯೯೩) ಚೆನ್ನ ಬಸವಣ್ಣನವರ ವಚನಗಳು

೯೯೧ ವ್ಯವಹಾರಕ್ಕೂ ಆಹಾರಕ್ಕೂ ದಾಕ್ಷಿಣ್ಯ ಮಾಡಬಾರದು

೧ ಗೀತೇ ವಾದ್ಯೇ ತಥಾ ನೃತ್ಯೇ ಸಂಗ್ರಾಮೇ ಸಂಗ ಮೇಪಿವಾ
ಆಹಾರೇ ವ್ಯವಹಾರೇಚ ತ್ಯಕ್ತ್ವ ಲಜ್ಜಾ ಸುಖೀ ಭವೇತ್
—(ಸಂ)

೨ ಊಟಕ್ಕೆ ನಾಚ್ಚಬಾರದು । ಕೂಟಕೆ ಬೇಹಾರಕೋದಿಗಂ
ನಾಣ್ಚದಿರ್ಕೆ —(ಸಿದ್ಧನೀತಿ)

೩ ಗೀತದೊಳಂ ಧನ ಧಾನ್ಯ ವ್ಯವಹಾರದೊಳಂ
ಆಹಾರದೊಳಂ ನಾಣ್ಚಿಗೆಯ್ಯಾಗದೆಂಬರ್
—(೭-೩೪) ಅದ್ಭುತ ರಾಮಾಯಣಂ

೯೯೨ ಅಚ್ಚಕ್ಕಿ ಇದ್ದಾಗ ನುಚ್ಚಕ್ಕಿ ಹಂಗೇನು ?

೧ ಅಚ್ಚಕ್ಕಿ ಇದ್ದಾಗ ನುಚ್ಚಕ್ಕಿ ಹಂಗೇನು
ಇಚ್ಛೆಳಗಾತಿ ತಾಯಮ್ಮ ಇದ್ದಾಗ
ಬಿಚ್ಚುವರ ಸಂಗ ನಮಗೇನು —(ಜಾ. ಹಾ. ಪು.೯೬)

೯೯೩ ಅಕ್ಕಿ ಕೊಟ್ಟು ಉಣ್ಣೋಕೆ ಅಕ್ಕನ ಹಂಗೇನು ?

ಹೋಲಿಸಿ: ೧ ಅಕ್ಕಿ ಕೊಟ್ಟು ಮಡಗೂಟುಣ್ಬಂದದಮುಂ
ಪೋಲದೇ —(೧೪-೩೨) ಆದಿ ಪುರಾಣ

೨ ಅಕ್ಕಿಗೊಟ್ಟು ಮಡಗೂಳನುಣ್ಬ ಮರುಳಂ ಪೋಲ್ವಂ
—(೧೪-೧೬೦) ಸಮಯ ಪರೀಕ್ಷೆ

೯೯೪ 'ಗಂಧ ದ್ವಾರಾಂ' ಅಂದಾಗ ಸಾಣೆಕಲ್ಲು ಗಂಧವ ಕೊರದು ಹುಡುಕಿದ
ಹಾಗೆ

೧ ಗಂಧ ದ್ವಾರಾಂ ದುರಾಧರ್ಷಾಂ ನಿತ್ಯ ಪುಷ್ಟಾಂ ಕರೀಷಿಣೀಂ

ಈಶ್ವರಿಂ ನರ ಭೂತರಾಗಿ ಕಾಮ ಹೋದ ಪ್ರಯೋ
ಕ್ರಿಯೆಯು

— ಇದು ಗಂಧ ಪಂಚಾಭಿಷೇಕದಲ್ಲಿ ಹೇಳಿದ ಮಾತು

೯೯೫ ಮನೆ ಹತ್ತಿದಾಗ ಭಾವಿ ತೋಡಿದಂತೆ

೧ ಸಂದೀಪ್ತೇ ಭವನೇ ತು ಕೂಪಖನನಂ ಪ್ರತ್ಯುದ್ಯಮಃ ಕೀದೃಶಃ ।
—(ಭ.ಸು, ಪು ೬೨)

೨ ನ ಕೂಪ ಖನನಂ ಯುಕ್ತಂ ಪ್ರದೀಪ್ತೇ ವಹ್ನಿನಾ ಗೃಹೇ ।
(ಸು)

೩ ಕಿಚ್ಚಿಟ್ಟ ಬಳಿಕ ನಡಿಸಲ್ಕಗದಿಂ ಬಾವಿದೋಡುವಂತಿರೆ
—(೧೪-೧೧೦) ರಾಮಚಂದ್ರಚರಿತ ಪುರಾಣಂ

೪ ಕಿಚ್ಚೆದ್ದ ಬಳಿ ಬಾವಿದೋಡುವವನಂ ತೆರಬ್ಬಂ
—(೬-೪೩) ಸಮಯಪರೀಕ್ಷೆ

೫ ಕಿರ್ಚುಬ್ಬಗಳ್ ಬಾವಿಯಂ ತೋಡಲಾದೀತ್ತೇನೋ ಗುರಿತ್ತಾಗ,
ಸಾವಿನಮಾರಗಳ್ ಧರ್ಮಕೆಯ್ದಪೆವೆಂದು ಅರ್ಪಿಸ
ದೊರೆಕೊಳ್ವುದು, ಮುನ್ನವೇ ಸೆರಬ್ಬುದು
—(೧೦-೬೪ : ಪು ೧೬೫) ಜೀವಸಂಬೋಧನಂ

೬ ಉರಿದಿದ್ದ ಬಳಿಕ್ಕ ಬಾವಿದೋಡುವವೆ
—ಗುರುಮೂರ್ತಿಶಂಕರ ಶತಕ

೭ ಉರಿದಿದೆ ಕಾಳ್ಗಿಚ್ಚು ಜಾತರದೊಳೆ ಬಾವಿಯ ನಗೆಲ್ವಾಗಿದೆ
ಸಮಂ —(೬೮) ಕನ್ನಡ ನೀತಿಸಾರವು

೮ ಮರಣ ಸಮೀಪಿಸಿದಾಗಳ್
ಪರ ಮುಕ್ತಿಯ ಪಡವೆನೆನಲು ಅರಿಯದ ಮನುಜ ।
ತ್ವರಿತದಿ ಬಾವಿಯ ತೋಡಿಸಿ
ಪರ ಜಲದಿಂ ತಣಿವೆನೆಂಬ ಮೂರ್ಖನ ಸಾಮ್ಯಂ ॥

೯೯೬ ಮೇಲಿನ ಮೋಡ ನೋಡಿ ಸೇದುವ ಬಾವಿಗೆ ಉಚ್ಚೆ ಹುಯ್ದನಂತೆ

ಹೋಲಿಸಿ : ೧ ಮುಗಿಲ ನೀರಂ ಮೆಚ್ಚಿ ಡೋಣಿಯ ನೀರಂ
ತುಳುಂಕಿದ ಕೋಡಗದಂದಂ
—(೧೯ ವ.) ಕರ್ಣಾಟಕ ಪಂಚತಂತ್ರ

೨ ಮಳೆಯ ಮುಗಿಲ ನೋಡಿ ಮನೆಯೊಳಿರ್ದರ್ದವ ತುಳುಂಕುವ
ಕಮ್ಮರಿದ್ದರಂತೆ —(೩೪-೩) ನೇಮಿಜಿನೇಶ ಸಂಗತಿ

೩ ಮುಗಿಲ ನೀರಂ ನೋಡಿ ದೋಣಿಯ ನೀರಂ ಬಿಡದೆ ತುಳುಂಕುವ
ಮರುಳನಂತೆ —(೧೨.೨೧ವ) ವಚನ

೯೯೭ ಎತ್ತು (ಕೋಣ) ಈಯಿತು ಅಂದರೆ 'ಕೊಟ್ಟಿಗೇಲಿ ಕಟ್ಟು'

೧ ಎತ್ತೀಯಿತೆಂದೊಡೆ ಮೂಲೆಯೊಳದ ಕಟ್ಟಿಸುವುದೆಂಬನ ಚಾಳಿ
ಯೇತಕೆ —(೨೮-೩೫) ಬಸವಪುರಾಣ

೨ ಎತ್ತು ಕರುವನು ಈಯೆ ಹಿತ್ತಲಿಗೆ ಹೊಡೆ
—ಮಹಲಿಂಗಸ್ವಾಮಿ

೩ ಎತ್ತೀಯಿತೆಂಬುದನುತ್ತ ಮೇಳೆ ಕೇಳ್ದರಗದೆ ಕಟ್ಟು ಕೊಟ್ಟಿಗೆ
ಯೊಳೆಂಬವೊಲ್ (೧೭-೩೧)

೪ ಎತ್ತೀಯಿತೆಂದೆನಲೊಳಗೆ ಕಟ್ಟೆನಲಾದುದು
—(೧೦-೧೮) ಶಂಕರದಾಸಿಮಯ್ಯಪುರಾಣ

೫ ಗಂಡುಗುದುರೆಯೀಯಿತೆಂದರೆ ಒಳಗೆ ಕಟ್ಟು !
—(೨೩-೭) ಕೌಶಿಕ ರಾಮಾಯಣ

೯೯೮ ಕತ್ತೆ ಒಂಟೆ ಹೊಗಳಿಕೆ : ಅಹೋರೂಪ ! ಅಹೋಗಾನ !

೧ ಉಷ್ಟ್ರೀ ಉಷ್ಟ್ರ ವಿವಾಹೇ ಚ ಗೀತಂ ಗಾಯಂತಿ ಗಾರ್ದಭಾಃ।
ಪರಸ್ಪರಂ ಪ್ರಶಂಸಂತಿ ಅಹೋರೂಪ ಮಹೋಧ್ವನಿಃ ॥
(ಸಂ)

೨ ನರಿಯ ಗೀತಕೆ ಕಿವಿಯನಿತ್ತರೆ ಮರುಳು ತಲೆದೂಗುವ
ಪೋಲಾಯ್ತು —(೬-೨-೧೬) ತೊರವೆರಾಮಾಯಣ

೩ ನರಿಯು ಗೀತಕೆ ಬಳ್ಳು ಮೆಚ್ಚಿದ ತೆರ !
—(೫-೬೦) ಸಾಳ್ವಭಾರತ

೯೯೯ ಕುರುಡಿಯು ಕುಣಿತಕ್ಕೆ ತಪರಗಣ್ಣಿಯು ತಾಳ

ಹೋಲಿಸಿ : ಕುರುಡಿಯು ಕುಣಿತಕ್ಕೆ ತೂತು ಮದ್ದಳೆ
(೧-೬೮) ನಾಗಕುಮಾರಚರಿತಂ

೧೦೦೦ ಕುರುಡನ ಕೈಕೋಲು ಕಿತ್ತುಕೊಂಡ ಹಾಗೆ

೧ ಮುರವ್ವ ಮಗುವಿಗೆ ಹೊಲ್ಲ । ಕುರುವ್ವ ಕುಂಡಿಗೆ ಹೊಲ್ಲ
ಕುರುಡನಾ ಕೋಲು-ಕಳ ಹೊಲ್ಲ —(ಸರ್ವ, ಪ ೬೪೧)

೨ ನಡುಗಾಡೊಳಂಧೆಯು ಕರದಂಡಮನೆಳೆದುಕೊಂಡ ಪ್ರೋಲ್
—(೧೩-೧೨೯) ರಾಜಶೇಖರವಿಲಾಸಂ

೧೦೦೧ ಅಟ್ಟದಿಂದ ಬಿದ್ದವನನ್ನು ದಡಿ ತಕ್ಕೊಂಡು ಚುಚ್ಚಿದರು

ಹೋಲಿಸಿ : ೧ ಉದ್ದದಿಂದ ಬಿದ್ದವರನೊದ್ದೊದ್ದು ಕೊಲುವಂತೆ
—(೧೯-೮) ಶಿವತತ್ತ್ವ ಚಿಂತಾಮಣಿ

೨ ಎಡಹಿ ಬಿದ್ದವನ ಕೈವಿಡಿದೆತ್ತಿ ಕೆಡಹುವರೆ
—(೭-೨೯) ಪ್ರೌಢರಾಯನ ಕಾವ್ಯ

೩ ಹಗಹದಲ್ಲಿ ಬಿದ್ದವರ ಮೇಲೆ ಒರಳ ನೂಂಕುವರೆ ?
—(೨-೩೧೬) ಬಸವೇಶ್ವರ

೧೦೦೨ ಹುಣ್ಣಿನ (ಉರಿಯುವ ಗಾಯದ) ಮೇಲೆ ಬರೆ ಹಾಕಿದ ಹಾಗೆ

ಹೋಲಿಸಿ : ೧ ಬೆಂದ ಹುಣ್ಣ ಕಂಬಿಯಲಿ ಕೀಸುವರೆ
—(೪೬೨) ಬಸವೇಶ್ವರ

೨ ಬೆಂದ ಹುಣ್ಣ ಕಂಬಿಯಿಸಿಕ್ಕ ನೂಕಿ ಕೀಸದಿರ್
(೭-೩೪) ಸಿದ್ಧರಾಮ ಚಾರಿತ್ರ

೩ ಬೆಂದ ಹುಣ್ಣಂ ಕಂಬಿಯಲಿ ಕೀಸಲೇಕೆ ?
—(೯-೯೦) ಸೋಮನಾಥ ಚರಿತ್ರೆ

೪ ಬೆಂದುದ ಬೆದಕಿ ನೋಯಿಸಬೇಡ
—(ವಿ.ಪ. ೯–೩೮) ಕರ್ಣಾಟ ಭಾರತ ಕಥಾಮಂಜರಿ

೫ ಬೆಂದ ಹುಣ್ಣಲಿ ಸಾಸಿವೆಯ ಬಳಿಯದಿರು
—(ದ್ರೋ ಪ. ೧-೮) ಕರ್ಣಾಟ ಭಾರತ ಕಥಾಮಂಜರಿ

೬ ಬೆಂದ ಹುಣ್ಣನು ಕೀಸುವರೆ ಕಂಬಿಯಲಿ ?
—(೭-೬೪) ಪ್ರಭುಲಿಂಗಲೀಲೆ

೭ ಬೆಂದ ಪುಣ್ಣಂ ಕಂಬಿಯೊಳಿಕ್ಕಿ ಕೀಸಿದವೊಲ್
—(೬-೧೦) ಚೇರಮ ಕಾವ್ಯಂ

೮ ಬೆಂದ ಹುಣ್ಣಂ ಕಂಬಿಯಿಂದ ಕೀಸದಿರು
—(೪-೩೭) ರಾಘವಾಂಕ ಚರಿತೆ

೯ ಬೆಂದ ಹುಣ್ಣನು ಬೆದಕಲೇತಕ್ಕೆ ?
—(೩೦–೨೨) ಕೌಶಿಕ ರಾಮಾಯಣ

೧೦ ಕತ್ತಿದ ಕಡಿಯೊಳುಪ್ಪಂ ಲೆಪ್ಪಿಸಿದುಂತುಂ !
—(೧೪-ಪು ೧೩೦ ; ೧೩ನೆಯ ಸಾಲು) ಶ್ರೀ ರಾಮಾಶ್ವಮೇಧಂ

೧೧ ಬೆಂದ ಹುಣ್ಣಿಗೆ ಹುಳಿವೆರಸಿದಾ ತೆರದಿ
—(ಬಭ್ರುವಾಹನ ಕಾಳಗ-ಯಕ್ಷಗಾನ)

೧೧೦೩ ಬಿದಿರೆಲೆಯಲ್ಲಿ ರಸ ಅರಸಿದಂತೆ

೧ ಬಿದಿರೆಲೆಯಲ್ಲಿ ರಸಮನಜಿಸುವಂತೆ —ಧರ್ಮಾಮೃತ

ಹೋಲಿಸಿ : ೧ ಸಿತಗನೊಳು ಗುಣಮನರಸುವರೆ ?
(ಸ್ಥಲ. ೧೫-೧೯೧) ನಂಬಿಯಣ್ಣನ ರಗಳೆ

೨ ಕುಲಹೀನರಲಿ ಗುಣವನರಸಲೇಕೆ ?
(ಕ.ಪ. ೨೫-೪೨) ಕರ್ಣಾಟ ಭಾರತ ಕಥಾಮಂಜರಿ

೩ ಇದ್ದಿಲೊಳು ಬೆಳರ್ವಣ್ಣಮಂ ಬೆದಕುವರೆ
(೪-೩೭) ರಾಘವಾಂಕ ಚರಿತೆ

೪ ಗಾಳಿಬರೊಡನಾಡಿ ಗುಣವನರಸಿದರುಂಟೇ

—(೫೦೮) ನೀತಿಸಾರ

೧೦೦೪ ಜನ ಮರುಳೊ, ಜಾತ್ರೆ ಮರುಳೊ ಕೋಚು ಭಟ್ಟನ ಕೂದಲು ಮರುಳೊ

೧ ಜನ ಮರುಳೊ ಜಾತ್ರೆ ಮರುಳೊ

—(೧೧೮) ಪ್ರಭುದೇವರ ವಚನಗಳು

೨ ಇಲಿಯುಂ ಕಪ್ಪೆಯುಮೊಲವಿಂ
ದುಲಿದಟ್ಟಿ ತಗಳ್ದು ತಿಂಬ ಪುತ್ತಿನ ಪುಳುವಂ ॥
ಸಲೆ ನಾಗರೆಂದು ಪೂಜಿಪ
ರೊಲವಿಂ ಜನ ಮರುಳೊ ಜಾತ್ರೆ ಮರುಳೊ ಎನಿಸಾ ॥

—(ಸೋಂಚಿಗಳು) ಕವಿಚರಿತೆ

೧೦೦೫ ಜನ ಮೆಚ್ಚಿಸಲು ಜನಾರ್ದನನ ಕೈಲೂ ಅಸಾಧ್ಯ

೧ ಲೋಕ ಮನುಜರ್ ಮೆಚ್ಚಿಸಲ್ ಗಿರಿಜನಾರ್ದನನೆ?

—(೭) ನಳ ಚಂಪು

೨ ಜನರಂ ಮೆಚ್ಚಿಸಲಾಗದೈ —(೮೩) ಸೋಮೇಶ್ವರ ಶತಕ

೧೦೦೬ ಎತ್ತಿ ಹಾಕಿದ ನಾಯಿ ಮೊಲ ಹಿಡಿದೀತೆ ?
ಹಿಡಿದು ತಂದ (ಹೊರಿಸಿಕೊಂಡು ಹೋದ) ನಾಯಿ ಮೊಲ ಹಿಡಿದೀತೆ ?

೧ ಹೊರಿಸಿ ಕೊಂಡು ಹೋದ ನಾಯಿ ಮೊಲನೇನ ಹಿಡಿವುದಯ್ಯ

—(೪೨೮) ಬಸವೇಶ್ವರ

೧೦೦೭ ಒತ್ತಿ ಹಣ್ಣು ಮಾಡಿದರೆ ಎತ್ತಣ ರುಚಿ
ತಟ್ಟಿ (ಗುದ್ದಿ) ಬಡಿದು ಹಣ್ಣು ಮಾಡಿದ ಹಾಗೆ

೧ ಒತ್ತಿ ಹಣ್ಣ ಮಾಡಿದಡೆ ಅದೆತ್ತಣ ರುಚಿಯಪ್ಪುದೊ

—(೬೪೬) ಪ್ರಭುದೇವರ ವಚನ

೨ ಹೂಮಿಡಿಯ ಹರಿದು ಒತ್ತಿ ಹಣ್ಣ ಮಾಡಿದೆನೆಂದಡೆ ಹಣ್ಣಾಗ
ಬಲ್ಲುದೆ ? —(೬೯೬) ಪ್ರಭುದೇವರ ವಚನಗಳು

೩ ಹೊಡೆದುದು ಮರಿದವೆ ಹಣ್ಣಾಗಲಿಲ್ಲವೆ ?
—(೫೬)ಸಕಲೇಶ ಮಾದರಸನ ವಚನಗಳು

೧೦೦೮ ಮೊದಲು ಭಕ್ತಿ ಕಲಿಸಿದರು. ಕೆಡವಿ ಲಿಂಗ ಕಟ್ಟಿದರು
ಒಲ್ಲದಾತಂಗೆ ಲಿಂಗ ಕಟ್ಟಿದ ಹಾಗೆ

೧ ಬಡಿದು ಭಕ್ತಿಯ ಮಾಡಿಸಬೇಡ
—(೭-೨೩) ಸೊಬಗಿನಸೋನೆ

೧೦೦೯ ಹಣ ಒಲ್ಲದಿದ್ದರೆ ಮನ್ಮಥನ ಮಗನಿಗೆ ಮದುವೆ ಮಾಡಿಯಾನು ?

ಬಡಿದೊಲ್ಲ ಹೆಣ್ಣ ಮನ್ಮಥನಾತಗೆ ಹೆಣ್ಣನೋಲ್ವನೆಂಬ ಮಾತಾಯ್ತು
—(೭೧-೮೮)ಭರತೇಶ ವೈಭವ

೧೦೧೦ ಅಂಗಿ ಕೊಟ್ಟು (ಹರಿದ) ಭಂಗಿ ಸೇದಿ ಮಂಗನಾದ

೧ ಅಂಗಿ ಅರಿವೆಯು ಹರಿದು । ಭಂಗಿಯನು ತಾ ಸೇದಿ
ಮಂಗನಂದದಲಿ ಕುಣಿವಾತ ಭವ ಭವದಿ
ಭಂಗಗೊಳುತಿಹನು ಸರ್ವಜ್ಞ —(ಸರ್ವ, ಪ.೧೧೮೩)

೧೦೧೧ ಕಳ್ಳಿಕೊಂಗಿ ಕಿವುಚಿದಂಗೆ

೧ ಕಳ ಹೋಗಿ ಕಿವುಚಿದಂತಕ್ಕು ಸರ್ವಜ್ಞ (ಸರ್ವ, ಪ)

೨ ಕನ್ನವಿಕ್ಕಿ ಕಳ್ಳನು ಮನೆಯ ಪೊಕ್ಕು ಕಿವುಚಿದಂತಾಯಿತು
—ಪಾಂಚಾಳಗಂಗ

೧೦೧೨ ಹೊಡೆದರೆ ಆನೆ ಹೊಡೆಯಬೇಕು, ದೋಚಿದರೆ ಭಂಡಾರ ದೋಚಬೇಕು

೧ ಮಾರೇತೊ ಹಾಥೀಕೋ ಮಾರನ. ಲೂಟೇತೋ ಭಂಡಾರಕೋ
ಲೂಟನಾ —ಹಿಂದಿ

೧೦೧೩ ಕಳ್ಳನ ತಾಯಿಯ (ಸೊಂಡಕಿಯ ತಂಗಿಯ) ಕಣ್ಣ ಕೇಳಿದರೆ 'ಹಳ್ಳಗುಂಟ
ಹೋಗು' ಅಂದಳು

೧ ಕಳ್ಳನ ತಾಯ ಕಣಿಯ ಕೇಳ ಹೋದಂತೆ —ಶಂಕರೇಶ್ವರಲಿಂಗ

೧೦೧೪ ಕಳ್ಳನಿಗೆ ಸಂಪಾದಿಸಿಟ್ಟು (ಕಳ್ಳನನ್ನು ಒಳಕ್ಕೆ ಕರೆದು) ಬಡವನಿಗೆ ಹುಯ್ಲಿಕ್ಕಿದ

೧ ಕಳಲ್ ಬಂದವಂಗೆ ಕೈಗಿಂಡಿಗೊಟ್ಟರ್
—(೨–೧೪೬) ಧರ್ಮಾಮೃತ

೧೦೧೫ ಕುಸುಬೆಯ ಹೊಲದಲ್ಲಿ ಕಳ್ಳ ಹೊಕ್ಕ ಹಾಗೆ

೧ ಕುಸುಬೆಯ ಹೊಲದಲ್ಲಿ ಕಳ್ಳ ಹೊಕ್ಕಂತೆ
—(ಕೀ.ಪ್ರ, ೪೭೬) ಹ.ಕೀ.ತ.

೧೦೧೬ ಕೈಯಿಲ್ಲದಿದ್ದರೆ ಕಳ್ಳ, ಹೊಟ್ಟೆಗಿಲ್ಲದಿದ್ದರೆ ಬಡವ

ಹೋಲಿಸಿ : ಬುಭುಕ್ಷಿತಃ ಕಿಂ ನಕರೋತಿ ಪಾಪಂ ? (ಸಂ)

೧೦೧೭ ಚಂದ್ರನ ಬೆಳಕು ಕಳ್ಳನಿಗೆ ಅಳುಕು

೧ ಕಳ್ಳಂಗೆ ಬೆಳ್ದಿಂಗಳ್ ಸೊಗಸದವೊಲ್ ಪಾರ್ಗ್ಗಣಿ (೨–೧೨೪)

೨ ಸೊಗಯಿಸುಮೆ ಚೋರಂಗೆ ಚಂದ್ರಿಕಾ ವಿಸ್ತಾರಂ
—(ಪ್ರ ೨೪–೩೫) ವರ್ಧಮಾನ ಪುರಾಣಂ

೩ ಬೆಳದಿಂಗಳಿಪ್ಪವೆ ಜಾರ ಚೋರರಿಗೆ

೧೦೧೮ ಇರುಳು ಇದ್ದ ಕಳ್ಳಗೆ ಹೆಬ್ಬಾಗಿಲಲ್ಲೇ ಬೆಳಗಾಯಿತು

೧ ನಡುವಿರುಳಿದ್ದ ಕುರುಡಂಗೆ ಅಗುಸೆಯಲ್ಲಿ ಬೆಳಗಾದಂತೆ
—ಬಸವೇಶ್ವರ

೧೦೧೯ ಎಳ್ಳಿನ ಗುಣ ಗಾಣಿಗ ಬಲ್ಲ, ಕಳ್ಳನ ಗುಣ ತಳವಾರ ಬಲ್ಲ

೧ ಎಳ್ಳು ಗಾಣಿಗ ಬಲ್ಲ - ಸೊಪ್ಪು ಕಿಂಟಿಗ ಬಲ್ಲ ।
ಕಳ್ಳರನು ಬಲ್ಲ । ತಳವಾರ, ಬಾಳಿಗಳ
ಬಿಲ್ಲನನು ಬಲ್ಲ ! ಸರ್ವಜ್ಞ —(ಸರ್ವ, ಪ. ೧೨೯೩)

42

೨ ಬಳ್ಳಿ ತೋಟಿಗ ಬಲ್ಲ । ಎಳ್ಳು ಗಾಣಿಗ ಬಲ್ಲ
ಕಳ್ಳರನು ಬಲ್ಲ-ತಳವಾರ, ಸೂಳೆ ಹಣ
ಸುಳ್ಳನರಿದಿಹಳು ! ಸರ್ವಜ್ಞ —(ಸರ್ವ, ಪ. ೧೭೪೮)

೧೧೨೦ ಕಳ್ಳನ ಹೆಜ್ಜೆ ಕಳ್ಳ ಬಲ್ಲ, ಹಾವಿನ ಹೆಜ್ಜೆ ಹಾವು ಬಲ್ಲುದು

೧ ಕಳ್ಳಂಡ ಪೊಟ್ಟ್ ಕಳ್ಳಂಗೆ ಗೊತ್ತು —(ಕೊಡಗು ಗಾ)

೨ ಪಾವು ಪಾವಿನ ಪಜ್ಜೆಯುಂನಱಿವಂತೆ
—(೧೭೨ವ) ಕರ್ಣಾಟಕ ಪಂಚತಂತ್ರ

೩ ಹಾವಿನಡಿಯನು ಹಾವುಗಳು ನೆಱೆಬಲ್ಲವು
(೧೨-೧೨) ಪ್ರಭುಲಿಂಗಲೀಲೆ

೪ ಅಹಿಯ ಪದಸರಣಿಯಹಿ ಕಾಲವರಿವುದು
—(ಸಂ.ಕಾಂ. ೧೪೫ ; ೪-೩೨) ಶ್ರೀಮದ್ರಾಮಾಯಣಂ

೧೧೨೧ ಹುತ್ತದ ಡೊಂಕು ಹಾವು ಬಲ್ಲುದು, ಹಾವಿನ ಡೊಂಕು ಹುತ್ತ ಬಲ್ಲದು

೧ ಹುತ್ತದ ಡೊಂಕು ಹಾವಿಗೆ ಸಸಿನ ?
—(ಅನುಬಂಧ ೪-೩೮) ಲಿಂಗಿರಾಜಪುರಾಣ

೧೧೨೨ ಕಳ್ಳ ಒಕ್ಕಲಲ್ಲ, ಕಳ್ಳಿ ಕಟ್ಟಿಗೆಯಲ್ಲ

ಹೋಲಿಸಿ : ಕಳ್ಳನೊಕ್ಕಲಾದುದಿಲ್ಲ, ನಾಯಿ ಜಂಗುಳಿಯಾದುದಿಲ್ಲ
—(ಪ.ಆ. ೧೩೨ ಗದ್ಯ) ಧರ್ಮಾಮೃತ

೧೧೨೩ ಅಂಜುವರ ಮ್ಯಾಲೆ ಕಪ್ಪೆ ಎಸೆದ ಹಾಗೆ

೧ ಅಂಜುವವರ ಮೇಲೆ ಕಪ್ಪೆಯುಂ ಬಿಸುಟರ್
—(೫೪ ವ) ಪುಣ್ಯಾಸ್ರವ

೧೧೨೪ ಅಂಜುವವನಿಗೆ ಹಗ್ಗವೂ ಹಾವು

೧ ಅಳುಕುವಗೆ ಕಾವಳದೊಳು ಹುಲುಸರವೆ ತುಳಿದರೆ ಮನಸಿಗೆ
ಪೊಳೆವೋದು ಫಣಿಯೆಂದು — (ವಿಜಯದಾಸರು)

೧೦೨೫ ಎಗ್ಗನಿಗೆ ಹಗ್ಗವೇ ಹಾವು

೧ ಬೊತ್ತೆನವಂಗ್ ಬೋಟಿಯೇ ಕೂಳಿ
(ಹೆದರಿದವನಿಗೆ ಮೋಟಿಯೇ ದೆವ್ವ)

೧೦೨೬ ಕಳ್ಳನಿಗಂಜಿ ಕಾಡು ಹೊಕ್ಕು ಹುಲಿಗಂಜಿ ಹುತ್ತ ಹೊಕ್ಕ ಹಾಗೆ

೧ ಪುಲಿಗಂಜಿ ಪುತ್ತಪೇಱುವಂತೆ
—(ಆಶ್ವಾ : ೬-೧೭೪ ಗದ್ಯ) ಧರ್ಮಾಮೃತ

೨ ಕೇಟಿಂಗಂಜಿ ಪುತ್ತ ವೇಱುವಂತೆ
—(ಆಶ್ವಾ:೬–೧೭೪ ಗದ್ಯ) ಧರ್ಮಾಮೃತ

೩ ಕರಡಿಗಂಜಿ ಪುಲಿಯ ಗುಹೆಯಂ ಪುಗುವಂತೆ
—(ಆಶ್ವಾ:೬–೧೭೪ ಗದ್ಯ) ಧರ್ಮಾಮೃತ

೪ ಕಳ್ಳಗಂಜಿ ಕಾಡಪೊಕ್ಕರೆ ಹುಲಿ ತಿಂಬುದು ಮಾಣ್ಬುದೆ
—ಪ್ರಭುದೇವರ ವಚನಗಳು

೫ ಹುಲಿಗಂಜಿ ಹುತ್ತುವ ಹೊಕ್ಕಡೆ ಸರ್ಪ ತಿಂಬುದ ಮಾಬುದೆ ?
—ಪ್ರಭುದೇವರ ವಚನಗಳು

೬ ಪುಲಿಗಂಜಿ ಪುತ್ತನೇಱಿದೊಡಲ್ಲಿಯುಂ ಮುರಪಾವುಕೊಂಡುದು
—(೨–೩೧ವ;ಪು೪೧) ಜೀವಸಂಬೋಧನಂ

೭ ಪುಲಿಗಂಜಿ ಪುತ್ತನೇಱಿದೊಡರಪಾವು ಕೊಂಡುದು
—(೭-೧೧) ಪುಷ್ಪದಂತ ಪುರಾಣಂ

೮ ಪುಲಿಗಂಜಿ ಪುತ್ತನೇಱಿದೊಡರ ಪಾವು ಕೊಂಡುದು
(೩–೧೪೧–೧) ಶಬ್ದಮಣಿ ದರ್ಪಣ

೯ ಪುಲಿಗಂಜಿ ಪುತ್ತುವ ಪೊಕ್ಕವೊಲಾಯ್ತು
—(ಪು ೧೫೮–೨೨) ನಾಗಕುಮಾರ ಚರಿತಂ

೧೦೨೭ ಪಂದೆ ಬಾಯಿ ನಾರಿ ಓಂದೆ

೧ ಪಂದೆಗಳ ಬಾಯ್ಗೊಬ್ಬ ಪಿಂದೆ ನಾರಿಯರೆಡೆಯೊಳ್
(೧೪-ಪ್ರ೪೬) ಅದ್ಭುತ ರಾಮಾಯಣಂ

೧೦೨೮ ಶಾಟಕ್ಕಂಜಿ ಶಾಲೆ ಉಡೋದು ಬಿಟ್ಟಳಂತೆ

೧ ಯುಕಾ ಭೀತಿಯಿಂ ದಂಬರಂ ಪರಿಹರ್ತವ್ಯಮೋ
—(ಆ ೧-೪೨) ಚಂದ್ರಪ್ರಭ ಪುರಾಣಂ

೧೦೨೯ ಹುಳುವಿಗಂಜಿ ಹುತ್ತಿನಲ್ಲಿ ಕೂತಿದ್ದಂತೆ

೧ ಹುಳುಪಿನಂಜಿಕೆಗೋಗಿ ಹುತ್ತದಲ್ಲಿ ಕುಳಿತಂತೆ
(ಕೀ ೪೭೬) ಹ.ಕೀ.ತ.

೧೦೩೦ ಗರುಡನ ಗೆರೆಯುವಗೆ ಉರಗದ ಅಂಜಿಕೆ ಯಾಕೆ ?

ಹೋಲಿಸಿ : ಗರುಡನ ಮಂತ್ರವ ಕಲಿತು ಜಪಿಸುವವಗೆ ಉರಗನ ಹಾವಳಿಯೆ ? —ಪುರಂದರದಾಸರು

೧೦೩೧ ಧೈರ್ಯಂ ಸರ್ವತ್ರಸಾಧನಂ

೧ ಕಾರ್ಯಸಾಧನಕೆ ಕಾರಣಗಳಗಣಿತವಿಹವು ಧೈರ್ಯವೊಂದೇ ಮುಖ್ಯಸಾಧನ
—(ಸುಂ.ಕಾಂ. ೧೩-೩೭) ಶ್ರೀಮದ್ರಾಮಾಯಣಂ

೧೦೩೨ ಮನಸ್ಸಿನಲ್ಲೇ ಮಂಡಿಗೆ ತಿಂದ ಹಾಗೆ

೧ ಮನದ ಮಂಡಿಗೆ ತಾನದಂತಿರಲನುವನೆನ್ನದು ಹೇಳಿದೆನು
—(ಸಂ ೧೩-೩೩ ನಿರ್ವಾಣಪ್ರಕರಣ) ಲಘುಯೋಗ ವಾಸಿಷ್ಠ

೧೦೩೩ ಸತ್ತು ಸ್ವರ್ಗ ಕಾಣೋಕಿಂತ ಇದ್ದು ನರಕವೇ ಲೇಸು

೧ ನಾಳೆ ಬಪ್ಪ ಪೊನ್ನಿಂದ ಮಿಂದು ಬಪ್ಪ ಪಣಮೆ ಲೇಸು
(೧-೫೮ವ) ಮದನತಿಲಕಂ

೨ ನಾಳೆ ತಿಂಬನ್ನದಿನಿಂದ ಮಿಂದು ತಿಂಬ ಲಾವಗೆ ಲೇಸು
—(೧-೫೮ವ) ಮದನತಿಲಕಂ

೩ ಸತ್ತು ಕೊಳ್ವ ಸಗ್ಗದಿಂ ಬರ್ದುಕೊಳ್ವ ನರಕಂ ಲೇಸು ಎಂಬುದು
ನಾಣ್ಣುಡಿ —(ಆ ೨-೧೩೨ವ) ಧರ್ಮಾಮೃತ

೪ ಸತ್ತು ಕಾಣ್ಬ ಸಗ್ಗದಿಂದಿರ್ದು ಕಾಣ್ಬ ನರಕಮೆ ಲೇಸೆಂಬ
ನಾಣ್ಣುಡಿ —(೪-೩೯ವ) ಜಗನ್ನಾಥವಿಜಯಂ

೫ ಇರ್ದು ಕಾಣ್ಬ ಸಗ್ಗದಿಂ ಕಟಿತ್ತಿಯಿಂ ಸತ್ತು ಕಾಣ್ಬ ನರಕ
ವೇಪುದು —(೪-೩೯ವ) ಜಗನ್ನಾಥವಿಜಯಂ

೬ ಸತ್ತು ಕಾಣ್ಬ ಸ್ವರ್ಗಕ್ಕಿರ್ದು ಕಾಣುತಿಹ ನರಕವೇ ಲೇಸು
—(೩-೫೯) ಸೋಮನಾಥ ಚರಿತ್ರೆ

೭ ಸತ್ತು ಕಾಣ್ಬೆಂದು ಸಗ್ಗದಿ ನಿರ್ದಲ್ಲಿಯು ನಾಡೆ ಕಾಣ್ಬ ನರಕಂ
ಲೇಸು —(೫–೧೧೬)ಧರ್ಮನಾಥ ಪುರಾಣಂ

೧೦೩೪ ಹುತ್ತದ ಮೇಲಿನ ಸರವಿ ಹಾಗೆ

೧ ಹುಲುಸರವಿ ಹಾವಹುದು ಹುತ್ತಿನ
ತಲೆಯಲಿರಲಜ್ಞರಿಗೆ ಹಿಸುಣರ
ಬಳಕೆ ಹೊಗುವುದು ಕಳುಹಬೇಕೆಂದೆರಗಿದನು ಕರ್ಣ
—(ಉದ್ಯೋ, ಸಂ ೧೦, ಪ–೨೪) ಕರ್ಣಾಟ ಭಾರತ
ಕಥಾಮಂಜರಿ

೧೦೩೫ ಉಣ್ಣುತಾ ಕೈ ಮರೆತರಂತೆ

೧ ಉಣ ಹೋಗಿ ಬಾಯ ಮರೆತಂತೆ
—(೭೮) ಶ್ರೀ ವಾದಿರಾಜಸ್ವಾಮಿಗಳವರ ಕೃತಿಗಳು

೧೦೩೬ ಕುರುಬ ಹೆಗಲಲ್ಲಿ ಕುರಿ ಹೊತ್ತುಕೊಂಡು 'ನನ್ನ ಕುರಿ ಎಲ್ಲಿ ?' ಅಂತ
ಹಗಲಲೆಲ್ಲ ಹುಡುಕಿದನಂತೆ

೧ ಕಕ್ಷೆಯ ತನ್ನಯ ಮರಿಯನಿಟ್ಟು ಮರಿಯ ಕಾಣೆನೆಂದು ಭಾವಿಯ
ನೀರಲ್ಲಿ ನೋಡಿ ಭಾವಿಯ ನೀರೊಳಗೆ ಮರಿಯ ಕಂಬವ
ಕಂಡು ಬೀಳುವ ಗೋಪನಂತೆ
— (೧೯೫) ಸ್ವತಂತ್ರ ಸಿದ್ಧಲಿಂಗೇಶ್ವರ ವಚನ

೨ ಕುರಿಯು ಪೊತ್ತಗಾಗು ಮರೆದು ಸುತ್ತಲಿರಸುವ ಕುರುಬನಂದ !
—(೫–೧೪–೯) ಕೈವಲ್ಯ ಕಲ್ಪವಲ್ಲರಿ

೧೦೩೭ ಅತ್ತರೆ ಮುತ್ತು (ಮೃತ್ಯು) ಸುರಿಯುತ್ತ್ಯೆ ?

೧ ಅಳ್ತರೆ ಮುತ್ತೊತ್ತಕ್ಕುವು
—(೩-೧೪೦) ಧರ್ಮನಾಥ ಪುರಾಣಂ

೧೦೩೮ ಕುರುಡನಿಗತ್ತು ಕಣ್ಣು ಕಳ ಕೊಂಡ ಹಾಗಾಯ್ತು

೧ ಕುರುಡನಿಗೆ ಅತ್ತು ಕಣ್ಣು ಕಳೆದುಕೊಳ್ಳಬಾರದು
—ಪ್ರಭುದೇವರು

೨ ನೆರೆಮನೆಗಳ್ತು ಕಣ್ಣುಗಾಣದೇಂ ಮರುಳ್ಗೊಂಡಪರೊ !
— (೭೩) ಪಂಪಾ ಶತಕಂ

೩ ನೆರೆಯುವರಿಗತ್ತು ಕಣ್ಣು ಹೋಹಂದ
— (೯-೪೧) ಸಿದ್ಧರಾಮ ಚರಿತ್ರೆ

೧೦೩೯ ಹಾದಿಯಲ್ಲಿ ಹೋಗುವವ ಸತ್ತ, ದನ ಕಾಯುವವ ಅತ್ತ

ಹೋಲಿಸಿ : ಕೀಳುಕೋಟೆಯೊಳೊಬ್ಬ ಅಗಸಾಲಿ ಸತ್ತರೆ
ಮೇಲುಕೋಟೆಯೊಳೊಬ್ಬ ಅಗಸತಿ ಅಳುವಳು
(೨-೧೨-೩) ಪುರಂದರ ದಾಸರ ಕೀರ್ತನೆಗಳು

೧೦೪೦ ಅಲ್ಲಿ ಸರಸ ಇಲ್ಲಿ ಸರಸ ; ಮಾರ್ತ್ಯಮ್ಮನ ಹಲ್ಲ ಮೇಲೆ ಸರಸವೇ ?

೧ ಮಾರಿಯು ಸರಸವಾಡುವರುಂಟೆ ?
(ವಿ.ಪ. ೨-೩೫) ಕರ್ಣಾಟ ಭಾರತ ಕಥಾಮಂಜರಿ

೨ ಸರಸ ಮಾರಿಯು ಕೂಡೆ ಲೇಸಲ್ಲ
(೬-೮-೫೮) ತೊರವೆ ರಾಮಾಯಣ

೧೦೪೧ ಸರಸ ತಪ್ಪಿದರೆ ವಿರಸ
ಸರಸ ವಿರಸವಾಗದೆ ?

೧ ಸರಸಂ ವಿಗ್ರಹಮಾಗದೆ !

—(೪೯) ಸೋಮೇಶ್ವರ ಶತಕ

೨ ಸರಸ ವಿರಸವಾಗಬಾರದು —(ಪ್ರ ೫೦೦-೨೨) [illegible]

೩ ಸರಸ ವಿರಸವಹುದು

— ([illegible] ಸಂಧಿ-೬೬) [illegible]

೧೭೪೨ ನಗೆ ಹೋಗಿ ಹೊಗೆಯಾಯಿತು

೧ ನಗೆ ಹೋಗಿ ಹೊಗೆಯಾಯಿತು,

—(೧೬-೯೪) ಮಹಲಿಂಗರಂಗ

೧೭೪೩ [illegible] ?

೧ [illegible] ?

೨ [illegible] ?

—([illegible]) [illegible]

೧೭೪೪ ಕಳ್ಳ, ಕಳ್ಳ ! ಹುಲಿ ಇದೆ !

೧ [illegible]

—(೭-೭೫) [illegible]

೧೭೪೫ ಶಕ್ತಿಗಿಂತ ಯುಕ್ತಿ ಮೇಲು

೧ ಶಕ್ತಿಯುಳ್ಳವನಾದರು ಯುಕ್ತಿ ಬೇಕು

—([illegible] ಸಂಧಿ-೪೭) [illegible]

೧೭೪೬ ಕೈ [illegible]

೧ ಕಣ್ಣಿಂ ಓದಿದೊಡೆ [illegible]

—(೧೧-೩) ಕನ್ನಡ [illegible]

೨ [illegible]

—([illegible]) [illegible]

೧೦೪೭ ಮೂಗು ಹಿಡಿದರೆ ಬಾಯಿ ತೆರೆಯಿತು

೧ ನೆರೆ ನಿರ್ಬಂಧಿಸೆ ಮೂಗಂ ತೆರೆಯುವದೆ ವೇಳ್ಬಾಯ್
—(೭೬) ಕನ್ನಡ ನೀತಿ ಸಾರವು

೧೦೪೮ ತಿನ್ನ ಬಾರದ ಹಣ್ಣು ಬಹಳ ರುಚಿ

೧ ಮರದಾಗ ಮರ ಹುಟ್ಟಿ ಬಲು ಚಕ್ರ ಕಾಯಾಗಿ
ತಿನ್ನಲಾರದ ಹಣ್ಣು ಬಲು ಸವಿ
— (ಪು. ೯೧) ಜನಾಂಗದ ಜೀವಾಳ

೧೦೪೯ ಆನೆ ಬರ್‍ತಾವೆ ಅಂತ ಅರು ಬಣವೆ ಕೊಂಡ

*೧ ಸರಕ್ ಸರಿತಲ್ಲ ಬೀಗರ ಸುರಸ್ಪ ತಿಳಿತಲ್ಲ ॥ಪ॥
ಆನಿ ಬರತಾವಂತ ಆರು ಬಣವಿ ಕೊಂಡ
ಆನೆಲ್ಲಿ ನಿಮ್ಮ ದಳವೆಲ್ಲಿ ? । ಬೀಗಾ ।
ಬೋಳಿಸ್ಹೋರಿ ಮ್ಯಾಲ ಬರತಾರ
—(ಪು. ೧೦೬) ಜನಾಂಗದ ಜೀವಾಳ

೧೦೫೦ ಆಂಜನೇಯ ಬ್ರಹ್ಮಪಟ್ಟಕ್ಕೆ ಕಾದು ಕುಳಿತ ಹಾಗೆ

೧ ವೀರ ರಾವಣನೊಡನೆ ಹೋರಿದ। ವೀರ ರಗ್ಗದ ಕಪಿಗಳವರೊಳು
ಮಾರುತನ ಮಗನೇನು ಧನ್ಯನೊ ಬ್ರಹ್ಮ ಪಟ್ಟದಲಿ ಸೇರಿಸಿದೆ
—(೪೪) ಹರಿಭಕ್ತಿಸಾರ

೧೦೫೧ ಊರ ಅಕ್ಕಿ ಊರ ಬೇಳೆ ಉಂಡು ಹೋಗೆ ಮಾ(ಮಿ)ರವ್ವ

೧ ಊರಕ್ಕಿ ಊರೆಣ್ಣೆ ಉಣ್ಣು ಮಾರಿಕವ್ವ
—(೪೦೭) ಪ್ರಭು ದೇವರ ವಚನಗಳು

೧೦೫೨ ಬೇಕಾದದ್ದು ಬೇವಿನ ಕಾಯಾದರೂ ಬೆಲ್ಲಕ್ಕಿಂತ ಸಿಹಿ

* ಇದು ಉತ್ತರ ಕರ್ನಾಟಕದಲ್ಲಿ ರೂಢಿಯಲ್ಲಿರುವ ಬೀಗರ ಹಾಡು

೧ ತನಗೆ ಬೇಕಾದ ವಸ್ತುವೊಳ್ ಪುಟ್ಟಿದವಗುಣವಂ ನೋಡರ್
—(ನಾಣ್ಣುಡಿ)

೨ ತನಗೆ ಬೇಡದ ವಸ್ತು ವಿಷವಾದುದು ಕಾಣಿರೈ
—ಚೆನ್ನಬಸವ ಪುರಾಣ

೩ ತನಗೆ ಬೇಕಾದುದೆಯಮೃತ
—(೧೪-೧೦೬) ನಾಗಕುಮಾರ ಚರಿತ

೧೦೫೩ ಇಷ್ಟವಿಲ್ಲದ ವಸ್ತು ಎಷ್ಟಿದ್ದರೇನು ?

೧ ಖ್ಯಾತಿ ಬಾರದ ವಸ್ತು ಎಷ್ಟಿದ್ದರೇನು ?
—ಪುರಂದರದಾಸರು

೧೦೫೪ ಊರೆಲ್ಲ ತೊಳೆದರೂ ಮಸಿ ಬೆಳ್ಳಗಾಗದು

೧ ಮಸಿಯು ನೇಸು ಕಾಲ ಬೆಳಗಿದರೆ ಬಿಳಿದಾಗಬಲ್ಲುದೇ ?
—(೬೧) ಬಸವೇಶ್ವರ

೨ ಇದ್ದಲು ಶುಭ್ರವಾದ ತೆರನಂತೆ
—ಮೋಳಿಗೆ ಮಾರಯ್ಯ

೩ ಮಸಿಯುಂ ಪಾಲಿಂದೆ ಕರ್ಚಲ್ ಬಿಳಿದೆನಿಕುಮೆ ?
—ಗುಮ್ಮಟಶತಕ

೪ ಊರೆಲ್ಲಂ ಕೂಡಿ ತೊಳೆಯೆ ಮಸಿ ಬೆಳ್ಪಹುದೇ
—(ವರಕವಿಚಂದ್ರ) ಕವಿಚರಿತ್ರೆ

೫ ಮಸಿ ಎಂದಾದರೂ ಬಿಳ್ಪಾದುದುಂಟೆ
—(೫೯) ತೋಂಟದ ಸಿದ್ಧೇಶ್ವರ

೬ ಇದ್ದಲಿಯನೇ ತಂದು ಹಾಲಿನೊಳದ್ದಿ ತೊಳೆಯಲು ಮಲಿನ ಹೋಹುದೇ —(೧-೪೪) ಜ್ಞಾನಸಿಂಧು

೭ ತೊಳೆದರೆ ಮಸಿಗೆ ಧವಳತೆಯುಂಟೆ ?
—(೩೬-೪೭) ಕೌಶಿಕ ರಾಮಾಯಣ

೮ ಇದ್ದಿಲೊಳಂ ಬೆಳ್ಪಿರ್ದಪುದೆ ಬೆದಕುವರೆ (೪-೩೭) ?

೧೦೫೫ ಎಣ್ಣೆ ಅಳೆದ ಮಾನದಲ್ಲಿ ಜಿಡ್ಡು ಹೋದೀತೆ ?

೧ ಎಣ್ಣೆಯನ್ನು ಅಳೆದ ಮಾನದಂತೆ
—(೩) ಮುದ್ರಾಮಂಜೂಷವು

೧೦೫೬ ಊರೆಲ್ಲ ನೀರ್ಕಂಡು ಎತ್ತೆತ್ತೊಗೆದರೂ ಕಂಬಳಿ ಬೆಳ್ಳಗಾಗದು

೧ ಹಲವು ಸೂಳುದಕ ದೊಳಲುಂಬಿ ಸೆಳೆ
ಸೆಳೆದೊಗೆದೊಡಂ ಬಿಳಿದಹುದೆ ಕಂಬಳಿ
—(೫೯-೪೮) ಬಸವಪುರಾಣ

೨ ನೀರ್ಗಳಿಂ ತೊಳೆಯುತ್ತುಂ ಬಿಡಿದೆತ್ತಿ ಕಂಬಳಿ ಬೆಳ್ಪಂ
ತಾಳ್ದುದೇ ? —(೪೧-೪೭) ವೃಷಭೇಂದ್ರವಿಜಯ

೩ ಕಂಬಳಿ ಕರ್ರಗಾಗೆ ಬಗೆಯುಳ್ಳಿದಪ್ಪುದೆ
—(೫೨೬) ನೀತಿಸಾರ

೧೦೫೭ ಕಸ್ತೂರಿ ಮುಚ್ಚಿಟ್ಟರೂ ಅದರ ವಾಸನೆ ಮುಚ್ಚಿದೋಕೆ ಆಗುತ್ಯೆ ?

೧ ಯದಿ ಸಂತಿ ಗುಣಾಃ ಪುಂಸಾಂ ವಿಕಸಂತ್ಯೇವ ತೇ ಸ್ವಯಮ್
ನಹಿ ಕಸ್ತೂರಿಕಾ ಮೋದಃ ಶಪಥೇನ ನಿವಾರ್ಯತೇ (ಸಂ)

೧೦೫೮ ನಾಯಿಯ ಬಾಲ ಎಂದೂ ಡೊಂಕೇ

೧ ನಳಿಕಾಗತಮಪಿ ಕುಟಿಲಂ ನಭವತಿ ಸರಳಂ ಶುನಃ ಪುಚ್ಛಂ ।
ದುರ್ಜನಃ ಪ್ರಕೃತಿಂ ಯಾತಿ ಸೇವ್ಯಮಾನೋಽಪಿ ಯತ್ನತಃ (ಸು)

೨ ಸ್ವೇದನಾಭ್ಯಂಜನೋಪಾಯೈಃ ಶ್ವಪುಚ್ಛಮಿವನಾಮಿತಂ ॥
—(೬೯) ಕರ್ಣಾಟಕ ಪಂಚತಂತ್ರ

೩ ನಾಯಿಯ ಬಾಲ ಡೊಂಕು —(೨-೯೩) ಧರ್ಮಾಮೃತ

೪ ತೆಂಗಿನ ಪೊಸನೇಣಿಂದಱು
ದಿಂಗಳ್ವರ ಮಡಸಿ ಕಂಬಿಯಿಂ ಕಟ್ಟಿದೊಡಂ ।
ತಾಂಗಡ ಬಿಟ್ಟೊಡೆ ಮತ್ತಂ
ಹಿಂಗದು ಡೊಂಕೆಂಬ ನಾಯಬಾಲದ ತೆಱದಿಂ ॥

— (ದ್ವಿ.೮) ಧರ್ಮಾಮೃತ

೫ ಶ್ವಾನನ ಬಾಲದ ಡೊಂಕಂ
ಕಾನನದೊಳು ಹರಿವ ಹಳ್ಳಕೊಳ್ಳದ ಡೊಂಕಂ
ಮಾನಿನಿಯ ಮನದ ಡೊಂಕಂ
ಭೂನಾಥಂ ತಿದ್ದಲಱಿಯ ಸುಜನೋತ್ತಂಸಾ

—(೭೮೦) ಕಂದಪದ್ಯಗಳು

೬ ಕಂಬಿಟ್ಟು ನಾಯ ಬಾಲವ ಹಿಂಬಿ ಕಟ್ಟಿದೊಡೆ ನೈತವೇನಾದ
ಪ್ಪವೇ ? —(೧-೪೨) ಸೂಕ್ತಿಸುಧಾರ್ಣವಂ

೭ ಹಗಲುಗಳ ಸಿಕ್ಕಿ ಬಿಗಿದೊಡೆ ನಾಯ ಬಾಲವದು
ಬಳಿಕ ನೀಳಕೆ ಸಸಿನಬಹುದೆ ?

— (೫೯-೪೮) ಬಸವಪುರಾಣ

೮ ನಾಯ ಬಾಲ ಸಿಡಿಯಂ ಕಟ್ಟಲ್ಕೆ ಚೆನ್ನಪ್ಪುದೆ ?

— (೪೭) ಸೋಮೇಶ್ವರ ಶತಕ

೯ ಶುನಕ ಪುಚ್ಛದ ಡೊಂಕ ಸಸಿನ ಮಾಡುವನಂತೆ

—(೩೯-೫೦) ಶಿವತತ್ತ್ವ ಚಿಂತಾಮಣಿ

೧೦ ಕಂಬಿಯೊಳಡಸಿ ಬಿರಂಕಟ್ಟಿರೆ ನಾಯ ಬಾಲಂ
ಸಸಿನಂ ತಾನಕ್ಕುಮೆ ? —(೫೭) ಗುಮ್ಮಟೇಶತಕ

೧೧ ವಸುಂಧೆಯೊಳು ನಾಯ ಬಾಲ ಸಸಿನಮಹುದೇ ಕಟ್ಟಿಬಿಡಲು
ಬೋಧಾವರತ್ನ —(೫೨೫) ಕಂದಪದ್ಯಗಳು

೧೨ ಕಾಷ್ಟ ನೀಡೆ ಶ್ವಾನನ ಕುಡಿ ಬಾಲವೇನ್ ಸಸಿನಪ್ಪುದೆ ?
(೫೫) ಗುರುಮೂರ್ತಿ ಶಂಕರಶತಕ

೧೩ ನಾನಾ ಜಾಲಕೆ ನಾರಾಯಣ ಕೃಷ್ಣವ ಬಿಸು ಬಾರಿ ತಿಂದವರೆ
ನಿಃಜಾಲುವುದೇ ?
—(೫೯) ಶ್ರೀಪಾದರಾಜ ಸ್ವಾಮಿಗಳವರ ಕೃತಿಗಳ

೧೪ ಕಾಣದ ನದಿಯ ಜಾಲದ ನೆಟ್ಟಿಗೆಯು ಮಾಡುವೆನು ಎನಲು
—(೩೪-೨೦)

೧೫ ನಾರದೋಕ್ತನ ಜಾಲ ಬಲೆಗೆ ಸಿಲುಕಬೇಡ ನೇರವಾಗಬಲ್ಲುದೆ ?
—(೧೦) ಶ್ರೀ ಮೋಹನದಾಸರ ಕೃತಿಗಳ

೧೬ ನಾಯ ಜಾಲಮಂ ಕಟ್ಟಿಯುಲಿಕ್ಕೆ ಕಟ್ಟಿದೊಡೆ
ಪಡಾಸ್ಯದೆ ತನ್ನಯ ಮುನ್ನಿನುದಮಯವಂ
—(೫೭೬) ನೀತಿಸಾರ

೧೭ ಲೀಲೆಯೋಳ್ ನಿಃಜಾಗದೆ ।
ಭೂತಲದೊಳ್ ನಾಯಿ ಬಾಲಮಂಡಲದಂತಿದೆ
—(೮೫) ಕನ್ನಡ ನೀತಿಸಾರ

೧೮ ನಾಯ ಬಾಲದ ಡೊಂಕಿನಂತಾಗುವದೆ
—(೫-೫೪) ಬಿಜ್ಜಳ ಚರಿತ್ರೆ

೧೦೫೯ ನೀರುಳ್ಳಿಗೆ (ಬೇವಿನ ಮರಕ್ಕೆ) ಬೆಲ್ಲದ ಕಟ್ಟೆ ಕಟ್ಟಿ, ಹಾಲುತುಪ್ಪ
ಅಭಿಷೇಕ ಮಾಡಿದರೂ ಅದರ ದುರ್ವಾಸನೆ(ಕಹಿ) ಹೋಗದು

೧ ಮಧುನಾ ಸಿಂಚಯೇನ್ನಿತ್ಯಂ ನಿಂಬಃ ಕಿಂ ಮಧುರಾಯತೇ ।
ಜಾತಿ ಸ್ವಭಾವ ದೋಷೋಽಯಂ ಕಟುಕತ್ವಂ ನ ಮುಂಚತಿ ॥
—(ಸು

೨ ಬೇವಿನ ಗಿಡಮಂ ತಂದು
ಬಿತ್ತಿದ ನೆಲಕೆ ಹಾಲ ನೆರೆದು ನಡಪಿದೊಡೆ ಕೇಳ್ ·
ಬೇವಿಗೆ ಕಹಿ ಹಿಂಗದು ಭೂವಳಯದೊಳ್
—(೫-೧೫೬) ಧರ್ಮಾಮೃ

೩ ಬೇವಿಗೆ ಕಹಿ ಸಹಜ —(೧೧-೪೭) ಧರ್ಮಾಮೃ

೪ ಬೇವಿನ ಬೀಜವನು ಬಿತ್ತಿ, ಬೆಲ್ಲದ ಕಟ್ಟೆಯನು ಕಟ್ಟಿ,
ಆಕಳ ಹಾಲ ನೆರೆದು ಬೆಳಸಿದ್ದ ಫಲವಿನ್ನೆರೆ
ಸಿಹಿಯಾಗಬಲ್ಲುದೆ ಕಹಿಯಾಗದಲ್ಲದೆ ? —ಬಸವೇಶ್ವರ

೫ ಬೆಲ್ಲದ ಬಿರಿದಿದರೇನು ಬೇವು ಸಿಹಿಯಪ್ಪುದೆ ?
—(೧೧೭) ಚೆನ್ನಬಸವಣ್ಣನವರ ವಚನಗಳು

೬ ಮಧುವ ನೀರೆರೆದೊಡೆಯುಂ ಬೇವು ಬಿಟ್ಟಿಹುದು
ಕಹಿಗೆ ತಾನಾಗದಿಹುದೆ ? —(೫೯—೪೯) ಬಸವಪುರಾಣ

೭ ಗುಡಹಾಸಿಗಳೊಳಿದ್ದ ಬೇವಿನ ಫಲಂ ಸ್ವಾದವಪ್ಪುದೆ
—(೯೮) ಸೋಮೇಶ್ವರ ಶತಕ

೮ ಬೇವಿನ ಮರಕ್ಕೆ ಬೆಲ್ಲದ ಕಟ್ಟೆಯಂ ಕಟ್ಟಿ, ಗೋವಿನ ಹಾಲನು
ಪಾಲನೆಱೆದಡಂ ತನ್ನ ಗುಣ ಹೋಪುದೇ
—(೧೬-೮) ಶಿವತತ್ತ್ವ ಚಿಂತಾಮಣಿ

೯ ಬೆಲ್ಲದ ಕಟ್ಟೆಯ ಕಟ್ಟಿ ಬೇವಿನ ಬೀಜವ ಬಿತ್ತಿ, ಜೇನುಮಳೆ
ಗರೆದರೆ ವಿಷ ಹೋಗುವುದೆ
—(ಅನುಬಂಧ-೨೧) ಪುರಂದರದಾಸರ ಕೀರ್ತನೆಗಳು

೧೦ ನಿಂಬಕಂಬಿದಪ್ಪುದೆ ಮಧುವಂ ನೆರೆವುತ ಪಾಲೆರೆದು
—(೪೧–೪೮) ವೃಷಭೇಂದ್ರವಿಜಯ

೧೧ ಬೇವಿನೊಳು ಕಹಿಯುಂ ಪಿಡಾರಿಪರೆ ?
—(೮–೬) ಶಂಕರ ದಾಸಿಮಯ್ಯ ಪುರಾಣ

೧೨ ಸಕ್ಕರೆಯನು ಮಧು ಕಲಸಿ ಅವರೆಯೊಳು । ಇಕ್ಕೆ ಬೇವಿನ ಬೀಜ
ಅವಕೆಯನು ಚೆಕ್ಕೆಯದ ಗೋಕ್ಷೀರ ದುರದುಂಬು ಕಹಿಯಹುದಾರ
ಸಹುದೆ ? —(೧೯-೭೭) ಜ್ಞಾನಸಿಂಧು

೧೩ ನಿಂಬದ ಬಿತ್ತು ಪಾಲೆರೆದು ಸಕ್ಕರೆಯಿಂದವಿ ಸಿಹಿಯಾಗದೆ
—(೫೬೯) ಹಿತಸಾರ

೧೪ ಬೇವಿನ ಸವಿಯುಂ ತಂದಿ

ಬನ್ನಿಸಿ ಮೊರೆನಾಲ ನೆರೆದು ಕಟಿಸಿದೊಡದು ತಾಂ
ಬೇವಲ್ಲದಮೃತಮಾಗದು
ಗಾವಿಲರೊಡನಾಡಿ ಗುಣವನಂಟಿದರುಂಟೆ
—(೫೦೮) ನೀತಿಸಾ

೧೫ ಬೇವಿನ ಮರಕೆ ಬೆಲ್ಲದ ಪಾತಿ ಕಟ್ಟಿ
ಜೇನುತುಪ್ಪದ ಜೊಂಪನೀರ-ಹಾಕಿದರ
ಬೇವು ತನ್ನ ಕಹಿ ಬಿಡಲಿಲ್ಲ —(ಜಾಗೀ, ಪು. ೯೧

೧೦೬೭ ನೆನೆದ ಕಲ್ಲು ಮೆತ್ತಗಾಗದು

೧ ಪಲಕಾಲಂ ನೀರೊಳಗಿರೆ ಶಿಲೆ ಮೆತ್ತಿತ್ತಾಗಲರಿದು
—ಧರ್ಮಾಮೃ

೨ ಎನಿತು ಕಾಲ ಕಲ್ಲು ನೀರೊಳಗಿದ್ದರೇನು ?
ನೆನೆದು ಮೃದುವಾಗಬಲ್ಲುದೆ —(೭೯೪) ಬಸವೇಶ್ವ

೩ ಮಹೋತ್ತುಂಗ ಮಂದಿರದ ಮಧ್ಯಸ್ಥಿತ ಪೀಠದೊಳ್ನಿಜೇಶ
ದೈವಂ ಮಾಡಿ ಶಿಧಾರೆಯುಮಂ ॥ ಸುರಿದೆಲ್ಲಂ ಪೂಜೆವಟ್ಟು
ಪೂಜಿಸಿದೊಡಂ ಕಲ್ ಮೆಲ್ಲಿತೇನಾದುದೇ ?
—(ಅಶ್ವಾ. ೧-೫೧) ಲೀಲಾವತಿ ಪ್ರಬಂಧ

೪ ಜಲದೊಳಗಾಗಲು ನೆನೆವುತಿರ್ದೊಡೆ ಶಿಲೆಯು ಮೃದುವಾಗಿಪ್ಪುದೆ
—(೫೯-೪೮) ಬಸವಪುರಾ

೫ ನೀರೊಳಗೆ ಕಲ್ಲು ಕೊಳೆತಪ್ಪುದೆ ?
—(ವರಕವಿಚಂದ್ರ) ಕವಿಚರಿ

೬ ಕಲ್ಲಿರ್ದೊಡಂತಿರ್ದೊಡಂ ಮೆಲ್ಪು ಸಮಂತೇನಕ್ಕುಮೆ ?
—(೫೬) ಗುಮ್ಮಟಶ

೭ ಜಲದೊಳ್ಗಾಂ ಶಿಲಾಚಯಕ್ಕೆ ಮೃದುಭಾವಂ ಬಪ್ಪುದೆ ?
—(೪೧-೪೭) ವೃಷಭೇಂದ್ರ ವಿಜ

೮ ಕಾಯಿದ ಕಬ್ಬಿಣದೊಳ್ಬಿದ್ದ ನೀರ್ವೊಲ್ ಕರ್ಪುರ ಮಿಕ್ಕಿ ತಪ್ಪುದೆ ?

—(೫.೨೬) ನೀತಿಸಾರ

೧೦೬೬೧ ಮಾಮರದಲ್ಲಿ ಕಾಗೆ ಇದ್ದರೆ ಪಂಚಮಸ್ವರ ಬರುವು(ಹಾಡು)ತೆ ?

೧ ಪಂಚಮ ಸ್ವರವಾದಾತೆ ಕೋಗಿಲೆಗಲ್ಲದೆ ಕಾಗೆಗಳ್ಗುಂಟೇ ?

— (೬೭೪) ಸಿದ್ಧರಾಮೇಶ್ವರನ ವಚನಗಳು

೨ ಕಾಕನ ಮಾಮರದಲ್ಲಿದೆ ಪಂಚಮಸ್ವರವಾಗಬಲ್ಲುದೇ ?

—(೧೩೬) ಕನ್ನಡ ನೀತಿಸಾರವು

೧೦೬೬೨ ಬೇವಿನ ಮರದಲ್ಲಿ ಮಾವಿನ ಫಲ ಬಿಡುತ್ತೆ ?

ಹೋಲಿಸಿ : ಬೊಬ್ಬುಳಿಯ ಮರಕ್ಕೆ ನೀರ್ ಕರ್ಪೂರವಂ ಹೊಯಿದೊಡಂ,
ಹೀರ ನೀರ್ದೊಡೆದು ಮಾವಿನ ಮರದಂತೆ ಫಲವಾಗ
ಲಾರ್ಪುದೆ ? —(೭-೭೭) ಧರ್ಮಾಮೃತ

೧೦೬೬೩ ಮೀನಿನ ಮರಿಗೆ ಈಜು ಕಲಿಸಬೇಕೆ ?

೧ ಮೀನ ಮಕ್ಕಳಿಗೀಸ ಕಲಿಪ ಗುರುಗಳುಂಟೆ ?

—(ಮೋಹನತರಂಗಿಣಿ)

೨ ಹೋಲಿಸಿ : ಹುಲಿ ಮರಿಗೆ ಬೇಟೆಯಂ ಕಲಿಸುವಂತೆ

—(೨-೬೭) ಸೋಮನಾಥ ಚರಿತ್ರೆ

೧೦೬೬೪ ಮುದಿಯಾಳ ಮಾತ್ಸ್ಯವರೆ ಮಾದರಿ ಬರುತ್ತೆ ?

೧ ಮುದಿಯವಾಳ ಮಾತ್ಸ್ಯದೆ ಮರಿಮಾಳ ಬರುವುದೆ

— ಪಞ್ಚಾ. (ಪ್ರ. ೧೩.೫)

೧೦೬೬೫ ಹುಟ್ಟುಗುಣ ಹೋಗುವ ತನಕ

೧ ಹುಟ್ಟಿನ ಹಾಗು ಬುದ್ಧಿಯು ಬಿಡದು ಮರಣದವರೆಗೆ

— ಬಾದರ ಸಜ್ಜನ ಚರಿತೆ

೧೦೬೬೬ ಹುಟ್ಟುಗುಣ ಹೋಗಿ ಕಟ್ಟು ಗುಣ ಬಂದೀತೆ ?

೧ ಪ್ರಕೃತಿರ್ದುಸ್ತ್ಯಜಾ ನಾಮ (ಸು)

೧೦೬೭ ಕಲಿತ ಚಾಳಿ ಬಿಟ್ಟರೆ ಹೋಗದು

೧ ತಾಂ ಪಿಂಗುಗುಮೇ ಬಗೆಯುಲ್...ಸಂದಭ್ಯಾಸಂ
—(೮-೩೮) ನೇಮಿನಾಥಪುರಾಣಂ, ಕರ್ಣಪಾರ್ಯ

೧೦೬೮ ಕಲಿತ ಬುದ್ಧಿ ಕಳೆದೋದಿಲ್ಲ

೧ ನಾಯಿ ಕುನ್ನಿಗೆ ಕೂರ್ತು ರಾಜ್ಯಮನಿತ್ತು ಪಾಸಿನ ಮೇಲೆ ತಂ
ದಾಯತಿಕ್ಕೆಯಿನೊಪ್ಪವಾಗಿರಿಸಿ ಪ್ರಭೂತ್ಯರ ಮಿರ್ದುಕ
ಟ್ಟಾಯದಿಂದೊಡನೋವದೋಲಗಿ ಸುತ್ತುಮಿರ್ಪೊಡೆ ಮತ್ತಮಾ
ನಾಯ ಕುನ್ನಿ ಸಮಂತು ಮಾಣ್ಬುದೆ ಪೇಲ ತಿಂಬುದನೆಲ್ಲಿಯುಂ
—(ಏಕಾ : ೧೬೪) ಧರ್ಮಾಮೃತ

೨ ಅಂದಣವನೇರಿದ ಸೊಣಗನಂತೆ ಕಂಡಡೆ ಬಿಡದು ತನ್ನ ಮುನ್ನಿನ
ಸ್ವಭಾವವನು —(೧೭೪) ಬಸವೇಶ್ವರ

೧೦೬೯ ಸಕಲ ಗುಣ ಸಂಪನ್ನ, ಏಕ ಗುಣಹೀನ, ಅವಗುಣ ಪರಿಪೂರ್ಣ

೧ ಸಕಲ ಗುಣ ಸಂಪನ್ನೆ, ಏಕಗುಣಹೀನೆ
—(೧೧–ಪು. ೯೩;೮ನೆಯ ಸಾಲು) ಶ್ರೀರಾಮಾಶ್ವಮೇಧಂ

೧೦೭೦ ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ

೧ ದೂರತಃ ಪರ್ವತೋ ರಮ್ಯಃ —(ಸು)

೨ ದೂರದ ಬೆಟ್ಟದ ತೆಜದಿಂ ನೇಜಿತ್ತಾಗಿಕ್ಕುಂ
—(೬–೮೩) ಸಮಯಪರೀಕ್ಷೆ

೩ ಆರ ನೆಗಟ್ತೆಯುಂ ಬಲಮುಮಾಯತಿಕೆಯುಂ ಚಲಮುಂ
ಪ್ರಭುತ್ವಮುಂ ದೂರದೊಳಿರ್ದು ನೋಡೆ ಸೊಗಯಿಪ್ಪುದು
ಬೆಟ್ಟದ ನುಣ್ಪನಂತೆ, —(೧೭–೪೩೫) ಕಾವ್ಯಸಾರಂ

೪ ದೂರದಲ್ಲಿಹ ಪರ್ವತ ಘನಾಕಾರ ತೋರ್ಪುದು ನೋಳ್ಪಜನರಿಗೆ
—(೧೬–೧೬) ಹರಿಕಥಾಮೃತಸಾರ

೫ ನಂಟನ ನೇಹ ಗಿರಿಯುನಯಿ
ವ್ಯಂಟಾಗಿರೆ ದೂರದಿಂದಲರಿವುದು, ಮತ್ತಾ ॥
ನಂಟನ ಹೊದ್ದುವುದವಗುಣ ।
ಕಂಟಕ ಗುಳಿ ಕೆವರು ಬೆಟ್ಟವೆಂಬುದ ನರಿಯಾ

—(೫೭೩) ನೀತಿಸಾರ

೮. ಸಂಕೀರ್ಣ

೧೦೭೧ ಬಲ್ಲವನೇ ಬಲ್ಲ ಬೆಲ್ಲದ ಸವಿಯ

೧ ಬಲ್ಲವನೇ ಬಲ್ಲನಲ್ತೆ ಬೆಲ್ಲದ ಸವಿಯಂ (?)

೧೦೭೨ ಬಂಜೆ ಬೇನೆಯರಿಯಳು......

೧ ವಿದ್ವಾನೇವ ವಿಜಾನಾತಿ ವಿದ್ವಜ್ಜನ ಪರಿಶ್ರಮಂ
ನಹಿ ವಂಧ್ಯಾ ವಿಜಾನಾತಿ ಗುರ್ವೀಂ ಪ್ರಸವ ವೇದನಾಂ ॥ —ಸು

೨ ಬಿತ್ತರಿಸದೆ ತಾಂ ಕಾವ್ಯವ। ಗೊತ್ತರಿಯಲಳವೆ ಕವಿಯೆದೆಯಂ
ಗೆತ್ತಿರದ ವಿಮರ್ಶಕನೇಂ
ಪೆತ್ತರಿಯದ ಬಂಜೆ ಸೂಲಗಿತ್ತಿಯೆ ಜಗದಿ (?)

೩ ಪೆತ್ತಬಲೆಯುಱಿವಂದದಿಂ ಬಂಜೆ ಬೇನೆಯುಱಿದಪಳೇ–
—(೧-೧೦) ಜಾತಕತಿಲಕಂ

೪ ಬಂಜೆ ಬೇನೆಯನರಿಯದಂತೆ
—(೭೪೬) ಬಸವೇಶ್ವರ ವಚನಗಳು

೫ ಬಂಜೆ ಬೇನೆಯರಿಯಳು ಬಲತಾಯಿ ಮುದ್ದ ಬಲ್ಲಳೆ
—ಮಹಾದೇವಿಯಕ್ಕನ ವಚನಗಳು

೬ ಬಂಜೆ ಬೇನೆಯಱಿಯದವೊಲ್
(೯ನೆಯ ಸ್ಥಲ-೧೮೧) ಬಸವರಾಜದೇವರ ರಗಳೆ

೭ ಪ್ರಸವಕಾಲದ ವೇದನೆಯ ಸಾಹಸವ ಬಲ್ಲಳೆ ಬಂಜೆ ?
—(೧–೧೮) ಜೀವಂಧರ ಚರಿತ್ರೆ

೧೦೭೩ ಮೂಕನ ಸ್ವಪ್ನ ಹೇಳಲಿಕ್ಕೆ ಬಾರದು, ಹೇಳದೆ ತೀರದು

೧ ಮೂಕಾಸ್ವಾದನವತ್ — (ನಾರದಭಕ್ತಿ ಸೂತ್ರ)

೨ ಮೂಗರ್ ಕಂಡ ಕನಸಿನಂತೆ ಪೆಱರ್ಗೆ ಪೇೞಲರಿಯದೆ
(೮-೧೨) ಧರ್ಮಾಮೃತ

೩ ಮೂಗರು ಕಂಡ ಕನಸು
—(೨೦) ಆದಯ್ಯನ ವಚನಗಳು

೪ ಮೂಗ ಕಂಡ ಕನಸು —(೨೨೩) ಪ್ರಭುದೇವರ ವಚನಗಳು

೫ ಮರುಳ ಕಂಡ ಕನಸಿನ ಪರಿ —ಬಸವೇಶ್ವರ ವಚನಗಳು

೬ ಮೂಗ ಕಂಡ ಕನಸಿನಂತೆ
—(೨-೩೯೫) ಬಸವೇಶ್ವರನ ವಚನ

೭ ಶಿಶು ಕಂಡ ಕನಸಿನಂತೆ —ಚೆನ್ನಬಸವಣ್ಣನವರ ವಚನಗಳು

೮ ಮೂಗರ್ ಕಂಡ ಕನಸು
—(೭–೮೩ವ) ಲೀಲಾವತಿ ಪ್ರಬಂಧ

೯ ಮೂಗರ್ ಕಂಡ ಕನಸಿನಂತೆ
—(೭–೧೫ವ) ನೇಮಿನಾಥ ಪುರಾಣಂ

೧೦ ಮೂಗರ್ ಮಿಂಗೆ ಕಂಡ ಕನಸಿನಂತಾಯ್ತು
—(೯-೭೭) ಅಭಿನವ ದಶಕುಮಾರ ಚರಿತೆ

೧೧ ಹೇಳ ಬಲ್ಲನೆ ಮೂಕ ಕನಸು ಕಂಡುದನು
—(೧–೧೨೫) ಪುರಂದರದಾಸರ ಕೀ.

೧೨ ಮೂಗರು ಕಂಡ ಕನಸಿನಂತೆ (ಆತ್ಮ ಯೋಗವನ್ನು ಆರಾಡ
ಬಹುದು) (ಸಂ, ೨-೯೨) ಭರತೇಶ ವೈಭವ

೧೩ ಮೂಗಂ ಕಂಡ ಕನಸನದ ಬಣಿತೆಯಿಂ ಹೇಳಬಲ್ಲುವರುಂಟೆ ?
—(ಸಂ.೨೩–೬೬) ಸಿದ್ಧೇಶ್ವರ ಪುರಾಣ

೧೪ ಮೂಗ ನಂಜನು ಕಂಡಿದ ಪರಿ
—(೩-೬೭) ಕೌಶಿಕ ರಾಮಾಯಣ

೧೫ ಶಿಶು ಮೂಕರ ಕನಸಿನ ಪರಿ —ಕೈವಲ್ಯ ಕಲ್ಪವಲ್ಲರಿ

೧೧೭೪ ಆನೆ ಬಿಂಡಾವರೆ ಕೊಟ್ಟಿಗೆ ಹೊಕ್ಕೀತೆ ?

೧ ಆನೆ ತಳಂದಕ ಕೊಟ್ಟ್‌ಲ್ ಕೂಡ —(ಕೊಡಗು ಗಾದೆ)

೧೧೭೫ ಕಡಲೆ ತಿನ್ನುವ ಯೋಗ್ಯತೆ ಕಲ್ಲು ತಿನ್ನಲು ಬಂದೀತೋ ?

೧ ಕಡಲೆಗಳಂ ತಿಂಬ ಪೊಗ್ಗು ಕಲ್ಗಳೊಳುಂಟೇ ?
—(೧–೧೭೫) ಧರ್ಮಾಮೃತ

೧೧೭೬ ಕಾದ ನೀರು ಮನೆ ಸುಡಲಾರದು

೧ ಬಿಸುನೀರ್ ಮನೆಯುಂ ಸುಡುಗುಮೆ ?
(ಪ್ರ ೧೫೯-೭೩ವ) ನೇಮಿನಾಥ ಪುರಾಣಂ

೨ ಕಡುಗಾಯ್ದುಂ ನೀರ್ ಮನೆಯುಂ ಸುಡಲರಿಗುಮೆ
(ತಂದೆ, ತಾಯಿ, ಪತಿ ಇವರ ಕೋಪ ಕೆಟ್ಟದಲ್ಲ)
—(ದ್ವಿ. ಆಶ್ವಾಸ–೧೦೧) ಧರ್ಮಾಮೃತ

೧೧೭೭ ಕುಪ್ಪಟೆಯೊಳಗೆ ತಾವರೆ ಗಡ್ಡೆ ಹುಟ್ಟುತ್ತ್ಯೇ ?

೧ ಕುಪ್ಪಟೆಯೊಳಗೆ ತಾವರೆ ಗಡ್ಡೆ ಹುಟ್ಟುವುದೆ ?
—(೨೯–೨೮) ಬಸವ ಪುರಾಣ

೧೧೭೮ ಕೆಂಡಕ್ಕೆ ಇರುವೆ ಮುತ್ತೀತೆ ?

೧ ತನಿಗೆಂಡಮನೊಡಲೆ ಪತ್ತಲೇನಜಿದಪ್ಪುದೇ ?
—(೧೪–೨೯) ಶಾಂತೀಶ್ವರ ಪುರಾಣ

೨ ಸದರವೇ ಉರಿಗೆಂಡಪೊರಲೆಯು ಬಾಯ್ಗೆ ?
—(ದ್ರೋ. ಪ, ೩-೬೦) ಕರ್ಣಾಟ ಭಾರತ ಕಥಾ ಮಂಜರಿ

೩ ಕೆಂಡವ ಒರಲೆ ಮುಟ್ಟಲಜಿಗುಮೆ
—(೨-೧೨) ತ್ರಿಷಷ್ಟಿ ಪುರಾತನ ಚಾರಿತ್ರಂ

೪ ಇರುವೆಯು ಪಿಂಡು ಕೆಂಡವ ಕಂಡಂದ
—(೩೧–೩೧) ನೇಮಿಜಿನೇಶ ಸಂಗತಿ

೫ ಕೆಂಡಕೆ ಒರಳೆ ಮುತ್ತುವುದುಂಟೆ ?

—(೩-೧೦೯) ಪುರಂದರ ದಾಸರ ಕೀ.

೬ ಕಿಚ್ಚಿಗೆ ಇರುವೆ ಮುತ್ತುವುದೆ ?

—(೨–೧೧೯) ಪುರಂದರದಾಸರ ಕೀ.

೭ ಕೆಂಡವ ಇರುಹೆ ಮುತ್ತಬಲ್ಲುದೆ ?

—(೩೦೪) ತೋಂಟದ ಸಿದ್ಧೇಶ್ವರ ವಚನ

೮ ಒರಲೆಗೆ ಕೆಂಡ ಸಾಧ್ಯವೇ ?

—(೨೩-೭) ಕೌಶಿಕ ರಾಮಾಯಣ

೯ ಕೆಂಡ ಒರಲೆಗೆ ಸಾಧ್ಯವೇ ?

—(೧೦–೪೬) ಕೌಶಿಕ ರಾಮಾಯಣ

೧೦ ಕಿಚ್ಚಿಗಿರುವೆ ಮುತ್ತಲುಂಟೇ, ಬಚ್ಚಲ ಮಾಳಿಗೆಯೂ ಸರಿಯೆ?

—ಯಕ್ಷಗಾನ ರಾಮಾಯಣ, ಪಾರ್ತಿಸುಬ್ಬ
(ರಾವಣ–ಮಂಡೋದರಿ ಸಂವಾದ)

೧೦೭೯ ಕೊರಡು ಕೊನರಾಗಬಲ್ಲುದೆ, ಬರಡು ಹಯನಾಗಬಲ್ಲುದೆ ?

೧ ನೀನೊಲಿದರೆ ಕೊರಡು ಕೊನರುವುದಯ್ಯ ನೀನೊಲಿದರೆ ಬರಡು ಹಯನಹುದಯ್ಯ —ಬಸವೇಶ್ವರನ ವಚನಗಳು

೧೦೮೦ ಕೊರಳ ಮಟ್ಟಿಗೂ ಹೂಳಿ 'ಮುಗಿಲಮಟ್ಟಿಗೂ ಹಾರು' ಅಂದ ಹಾಗೆ

೧ ಕೊರಳುದ್ದಕ್ಕೆ ಹೂಳಿಸಿ ಕೊಂಡು ಮುಗಿಲುದ್ದಕ್ಕೆ ನೆಗೆದಹೆನ್

—(೧೧೨) ಸ್ವತಂತ್ರ ಸಿದ್ಧಲಿಂಗೇಶ್ವರ ವಚನ

೨ ಕೊರಳುದ್ದ ನೆಲದೆ ಹೂಳಿಸಿಕೊಂಡು ಗಗನದ ಪರಿಯಂತ ಹಾರುವೆ (೨–೨೯–೩) ಕೈವಲ್ಯ ಕಲ್ಪವಲ್ಲರಿ

೧೦೮೧ ಗಂಧ ತೇಯುವಲ್ಲಿ ನೊಣದ ಉಪಟಳವೆ ?

೧ ಗಂಧವನು ತೇವಲ್ಲಿ ಒಂದು ನೊಣವನು ಕಾಣೆ
ಸಂದಿಸಿಹ ಮಲವ-ಬಿಡುವಲ್ಲಿ ನೊಣ ಮುತ್ತು

ವಂದವನು ನೋಡು! ಸರ್ವಜ್ಞ
—(ಸರ್ವ, ಪ.೭೩೩.)

೧೦೮೨ ಗಾಳಿ ಬೆವರುತ್ಯೇ?

೧ ಗಾಳಿ ಬೆಮರುವುದುಂಟೆ?
—(ದ್ರೋ. ಪ. ೪–೪೧) ಕರ್ಣಾಟ ಭಾರತ ಕಥಾಮಂಜರಿ

೧೦೮೩ ಗೋಡೆ ಇಲ್ಲದೆ ಚಿತ್ರ ಬರೆದಂತೆ

೧ ಕೇಬ್ಲಿಲ್ಲದೆ ಚಿತ್ರದ ವಿರಚನೆ
—(೧೧–೯೯) ಶಾಂತಿ ಪುರಾಣಂ

೨ ಕೇರಿಲ್ಲದೆ ಚಿತ್ರಮಂ ಬರೆವೆನೆಂಬ......ಪಚ್ಚಪಸಿಯೆಗ್ಗನಂ
ಪೋಲ್ಕುಂ —(ಪ್ರ. ಆಶ್ವಾ–೬೬ವ)

೩ ಭಿತ್ತಿಯಿಲ್ಲದೆ ಬರೆಯಬಹುದೇ ಚಿತ್ತಾರವ
—(೮೪೧) ಬಸವೇಶ್ವರನ ವಚನಗಳು

೧೦೮೪ ದೋಣ್ಣೆ ಹಿಂಡಿದರೆ ಎಣ್ಣೆ ಬಂದೀತೆ ?

೧ ಬಡಿ ದೋಣ್ಣೆಯು ಹಿಂಡಿದೊಡೇಂ ತುಡುಗುಮೇ ಎಣ್ಣೆಯುನದೆಂತು
ಮುಜ್ಜುಗಿಸಿದೊಡಂ —(೫೩) ಕನ್ನಡ ನೀತಿಸಾರ

೧೦೮೫ ಬೆಟ್ಟಕ್ಕೆ ಚಳಿಯಾದರೆ ಹೊಚ್ಚುವುದು ಸಾಧ್ಯವೆ ?

೧ ಬೆಟ್ಟಕ್ಕೆ ಚಳಿಯಾದರೆ ಏನು ಹೊದ್ದಿಸುವರಯ್ಯ
—(೧೮೯) ಪ್ರಭುದೇವರ ವಚನಗಳು

೨ ಬೆಣ್ಣೆ ತಿಂದು ಹಲ್ಲು ಬಿದ್ದು ಹೋಯ್ತಂತೆ

೧ ಬೆಣ್ಣೆ ತಿಂದವರ ಹಲ್ಲೆಲ್ಲಾ ಹೋದವು
—(೫೫೫) ಪ್ರಭುದೇವರ ವಚನಗಳು

೧೦೮೬ ಬೆಂದ ಬತ್ತ ಮೊಳೆಯುವುವೆ ?

೧ ಬೆಂದ ಬೀಜಂ ಪುಟ್ಟದು
—(೧೧೬ ವ) ಕರ್ಣಾಟಕ ಪಂಚತಂತ್ರ

೧೦೮೭ ಹೆಂಚಿಗೆ ಹಲ್ಲು ಕಿಸಿದರೆ ಕನ್ನಡಿ ಆದೀತೆ ?

೧ ಓಡಿನೊಳುಂಟೆ ಕನ್ನಡಿಯ ನೋಟ
—(೧೪೬) ಪ್ರಭುದೇವರ ವಚನಗಳು

೨ ಹಂಚಿನಿದಿರಲಿ ಹಲ್ಲು ತೆರೆದರೆ ಮಿಂಚು ಕನ್ನಡಿಯಾಗಬಲ್ಲುದೆ?
—(೧೫೮) ಶ್ರೀ ಪ್ರಸನ್ನವೆಂಕಟದಾಸರ ಕೃತಿಗಳು

೩ ಕನ್ನಡಿಯೊಳು ರೂಪು ಹೊಳೆದಂತೆ ಹಂಚಿನೊಳ್ ಇನ್ನು
ಕಾಣಿಸಬಲ್ಲುದೆ —(೧೦) ಶ್ರೀ ಮೋಹನದಾಸರ ಕೃತಿಗಳು

೧೦೮೮ ಅಂಡಿನ ಮೇಲೆ ಹೊಡೆದರೆ ದವಡೆ ಹಲ್ಲು ಉದುರಿತಂತೆ

೧ ಪೃಷ್ಠ ತಾಡನೇ ದಂತ ಭಗ್ನಂ

೨ ತಿಗದ ಮೇಲೆ ಹೊಡೆದರೆ ಬಾಯಿ ಹಲ್ಗಳುದುರುವವೆ ?
—(೫-೫-೨) ಕೈವಲ್ಯ ಕಲ್ಪವಲ್ಲರಿ

೧೦೮೯ ಅತ್ತ ಗಂಡನಿಗಿಲ್ಲ, ಇತ್ತ ಮಿಂಡನಿಗಿಲ್ಲ

೧ ಹೆತ್ತ ಶಿಶುವಿಂಗಿಲ್ಲ, ವಿತ್ತವನಿತ್ತ ವಿಟನಿಂಗಲ್ಲ
—(೨-೧೦೬) ಅನುಭವಾಮೃತ

೧೦೯೦ ಇತ್ತ ಪುಲಿ, ಅತ್ತದರಿ

೧ ಅತ್ತ ಪುಲಿ ಇತ್ತ ದರಿ
—(೯-೧೬) ಸಾಹಸ ಭೀಮ ವಿಜಯಂ

ಹೋಲಿಸಿ : ಮುಂದೆ ನೋಡಿದರೆ ಹೆಬ್ಬಾವು ನುಂಗುತಲಿದೆ
ನಾರಾಯಣಸ್ವಾಮಿ

ಹಿಂದೆ ನೋಡಿದರೆ ಹೆಬ್ಬುಲಿ ಬಾಯ ಬಿಡುತಿದೆ
ನಾರಾಯಣಸ್ವಾಮಿ
— ಹ.ಕೀ.ತ. ಕೀ, (೨೫೯)

೧೧೯೧ ಹಿಂದೆ ಹೋದರೆ ಕೆರೆ, ಮುಂದೆ ಹೋದರೆ ಬಾವಿ

೧ ಹಿಂದಣ ಕೆರೆ ಮುಂದಣ ಬಲೆ ಹಮುಳವೆಲ್ಲಿಯದು ಹೇಳಾ

ಹಿಂದಣ ಹಳ್ಳ ಮುಂದಣ ತೊರೆ ಸಲ್ಲುವ ಪರಿಯೆಂತು ಹೆ

—ಮಹಾದೇವಿಯಕ್ಕನ ವಚ

೨ ಮುಂದೆ ಘಾವಿ ಹಿಂದೆ ಕಿಚ್ಚು ಬೆನ್ನಟ್ಟುತಿದೆ

—ಅಚಲಾನಂದ, ಉಗಾಭೋ

೧೧೯೨ ಇರಿದು ಕೊಂಡೇನೆ ! ಹೊಟ್ಟೆ, ತಿವಿದುಕೊಂಡೇನೆ ! ಕಣ್ಣು

೧ ಇರಿದುಕೊಂಡರೆ ಹೊಟ್ಟೆ, ತಿವಿದುಕೊಂಡರೆ ಕಣ್ಣು

— ಕನಕದ

೧೧೯೩ ಉಗಿದರೆ ತುಪ್ಪ ಕೆಡುತ್ತದೆ, ನುಂಗಿದರೆ ಗಂಟಲು ಸುಡುತ್ತದೆ

೧ ಉಗುಳಬಾರದು ನುಂಗಬಾರದು ಸಂಕಟದ ಪರಿಯು

— (೩೨–೧೨) (೧೨–೨೬) ಕೌಶಿಕ ರಾಮ

೧೧೯೪ ಲಿಂಗವಿಲ್ಲದ ಗುಡಿ, ಜಂಗಮರಿಲ್ಲದ ಮಠ — ಜಾನಪದ, (ಪು.

೧೧೯೫ ಹಾವು ಕಚ್ಚಿ ಬರೀಬಾಯಿ

೧ ಸರ್ಪವು ಕಚ್ಚಿ ಬರಿಯ ಬಾಯಲ್ಲಿ ಹೋಯಿತು

—(೧೦೪) ಸ್ವತಂತ್ರ ಸಿದ್ಧಲಿಂಗೇಶ್ವರ

೨ ಸರ್ಪವು ಕಚ್ಚಿ ಬರಿ ಬಾಯೆಂಬ ಗಾದೆಯ ತೆರದಿ

—(೨–೬೪) ಅನುಭವಾ

೧೧೯೬ ಕಂಡವರ ಹೆಣ್ಣಿಗೆ ಬಳೆ ತೊಡಿ (ಸೀರೆ ಉಡಿ) ಸಿದರೆ, ಬಳೆಗೇಡು ಬತ್ತಗೇಡು, ಮಾನಗೇಡು, ಮರ್ಯಾದೆಗೇಡು

೧ ಅನ್ಯರ ಚೆನ್ನೆಗೆ ಬಳೆದೊಡಿಸುವಂದಮಂ ಪ್ರೋಲ್ತಿರ್ಕುಂ

೨ ಪೆಱರ ಪೆಂಡಿರ್ಗೆ ಬಳೆದೊಡಿಸುವ
(೯-೨೩-ಪು. ೭೨) ಜೀವ ಸಂಭೋಧನಂ

೧೦೯೭ ಕಬ್ಬನ್ನು ಕೊನೆಯಿಂದ ತಿಂದರೂ ಒಂದೇ, ಬುಡದಿಂದ ತಿಂದರೂ ಒಂದೇ

೧ ಕರ್ಬು ಮೊದಲಿಂದಂ ಕಡೆವರಮಿನಿದು
—(೭-೨೪೧) ಧರ್ಮಾಮೃತ

೧೦೯೮ ಬೆಲ್ಲದ ಗೊಂಬೆ ಎಲ್ಲಿ ಚುಂಬಿಸಿದರೂ ಸಿಹಿಯೇ

೧ ಬೆಲ್ಲದ ಪುತ್ತಳಿಯ ಕೈಯಲ್ಲಿ ಹಿಡಿದು ಎಲ್ಲಿ ಚುಂಬಿಸಿದರೂ
ಇನಿದಹುದು —(೫೭೭) ಪ್ರಭುದೇವರ ವಚನಗಳು
(ಬಸವಣ್ಣನವರ ವಚನಗಳು)

೧೦೯೯ ಇರುವೆ ಕಣ್ಣಿಗೆ ಎಮ್ಮೆಗಂಜಳ ಜಲಪ್ರಳಯ

೧ ಪಿಪೀಲಿಕದಾಲಿಗಿರದೇ ಗೋಷ್ಪದದ ಕೀಲಾಲ ವಿಲಯಾಂಬುವಿನ
ವೊಲು —(೬-೧೨-೧೩) ತೊರವೆ ರಾಮಾಯಣ

೧೦೦ ಬಾವಿಯೊಳಗಿನ ಕಪ್ಪೆಗೆ ಕೊಳಚೆಯೇ ಸಮುದ್ರ

೧ ಕೂಪಮಂಡೂಕ ನ್ಯಾಯ (ಸಂ)

೨ ಬಾವಿಯ ಕಪ್ಪೆ ಸಮುದ್ರಮಂ ಮೆಚ್ಚದಂತೆ
—(೧೧-೫ವ, ಪು. ೧೮೭) ಜೀವ ಸಂಬೋಧನಂ

೩ ಕೂಪದ ಮೀನು —(೨೬-೭೬) ಭರತೇಶ ವೈಭವ

೪ ಬಾವಿಯೊಳಗೆ ಕಪ್ಪೆ ಬಾಳ್ವಂತೆ —ಭರತೇಶವೈಭವ

೫ ಬಾವಿಯ ನೀರೆ ಪಿರಿದು ಎಂದು ಮಂಡೂಕ ಭಾವಿಸುವಂದ
—(೬-೧೦೯) ಪದ್ಮಾವತಿ ಚರಿತೆ

೧೧೦೧ ಸಾಸಿವೆ ಕಾಳು ಚಿಕ್ಕಗೆ ಪರ್ವತ, ಇರುವೆ ಕಣ್ಣಿಗೆ ಸಾಸಿವೆಕಾಳು ದೊಡ್ಡದು

೧ ಮರುಳ ಕಣ್ಗೆ ಸಾಸವಿಯ ನಾಡೆಯುಂ ಕೊಡದ ತೋರ
—(೧೫-೬೨) ಸಮಯಪರೀಕ್ಷೆ

೨ ಮರುಳ ಕಣ್ಣಿಗೆ ಕೊಡನ ತೋರವಲಿರದೆ ಸಾಸವೆ

—(ವಿ.ಪ. ೭–೧೧) ಕರ್ಣಾಟ ಭಾರತ ಕಥಾಮ

ಪೋಲಿಸಿ : ೧ ಕಟಕಮುಂ ಕಂಡಱಿಯದವಂಗೆ ಪಳ್ಳಿ ಪಿರಿಯ
ರಾಗಿ ತೋರ್ಪಂತೆ

—(ಆಶ್ವಾ ೧–೧೭೭ ವ) ಧರ್ಮಾ

೨ ಉಂಡಱಿಯದರ್ಗುಂಡುದೆಲ್ಲ ಮಚ್ಚರಿ

—(ಆಶ್ವಾ. ೭-೨೯) ಧರ್ಮಾ

೩ ಕುರುಬರೂರಲಿ ಗಾಜು ಮಾಣಿಕ

—(ಸ.ಪ. ೮–೩೪) ಕರ್ಣಾಟ ಭಾರತ ಕಥಾಮ

೪ ಹಳ್ಳಿಯ ಕುರುಡು ಗೌಡಿಗೆ ಗೌಡ ಚಕ್ರೇಶ್ವರನಲಾ

—(೨-೨-೧೫) ಕನ್ನಡ ಭಾಗ

೫ ಮಂಜಿನಮೊತ್ತ ಮಕ್ಕಳಿಗೊಂದು ಗಿರಿ

—(ಕವಾಟ ವಿಸ್ಫೋಟನ ಸಂಧಿ–೬೩) ಭರತೇಶ ವೈ

೧೧೦೨ ಕಾರಣವಿಲ್ಲದೆ ಕಾರ್ಯವಿಲ್ಲ, ಮಾರಣವಿಲ್ಲದ ಮಾಟವಿಲ್ಲ

೧ ಕಾರಣಮಿಲ್ಲದೆ ಕಾರ್ಯ ವಿಚಾರಂ ಸಿದ್ಧಿಸದು

—(೮–೧೨೧) ಅಭಿನವ ದಶಕುಮಾರ ಚ

೨ ಕಾರಣಮಿಲ್ಲದೆ ಕಾರ್ಯವೆಂತಾದಪುದು

೩ ಕಾರಣವನಿಡಿದಿಹುದು ಕಾರ್ಯವು

—(ಸಂ ೧೫–೨೦, ನಿರ್ವಾಣ ಪ್ರಕರಣ) ಲಘುಯೋಗ ವಾ

೧೧೦೩ ಬೆಂಕಿಯಿದ್ದಲ್ಲಿ ಬೆಳಕು, ನೀರಿದ್ದಲ್ಲಿ ಕೆಸರು

೧ ನೀರ ತಡಿ ಕೆಸರಕ್ಕುಂ —(೪–೯೩) ಧರ್ಮಾ

೨ ನೀರ ಹೊಳೆ ಕೆಸರಾಗದಿಹುದೆ ?

—(೨೨–೨೪) ಪ್ರಭುಲಿಂಗ ಲ

೧೧೦೪ ಮೆ (ಮು) ಟ್ಟಿದಲ್ಲದೆ ಹಾವು ಕಡಿಯದು

೧ ತುಳಿದೊಡೆ ಮುಳಿದಗಿವುದು ಫಣಿ
—(೧-೫೧) ವೃಷಭೇಂದ್ರ ವಿಜಯ

೧೧೦೫ 'ಆಡಿ' ಅನ್ನೋಕೆ ಅವಳೇ ಇಲ್ಲ, ಪುಳ್ಳೆ ಪೇರು ರಾಮಕೃಷ್ಣ

ಹೋಲಿಸಿ : ೧ ಅವಳಿಲ್ಲ ಗಡವಳ ಮಕ್ಕಳೊಳವೇಂ ಪೇಳಿಂ
—(೧೦-೪) ಸಮಯಪರೀಕ್ಷೆ

೨ ಕಾಮಿನಿಯಿಲ್ಲ ಕೈಧಾರೆ ಮಂತ್ರವೆ ?
—(ಕಟಕ ವಿನೋದಸಂಧಿ-೧೯) ಭರತೇಶ ವೈಭವ

೧೧೦೬ ಮುಂದೆ ಹುಟ್ಟುವ ಕೂಸಿಗೆ ಇಂದೇ ಮೊಲೆ ಕೊಡುವುದೆ ?

೧ ಮುಂದೆ ಹುಟ್ಟುವ ಕೂಸಿಂಗೆ ಇಂದು ಮೊಲೆಯ ಕೊಡುವಂತೆ
—(೨೧೦) ಪ್ರಭುದೇವರ ವಚನಗಳು

೧೧೦೭ ಹೊಟ್ಟೆಯೊಳಗಿನ ಕೂಸು ಹೊಟ್ಟೆಯಲ್ಲಿರುವಾಗಲೇ 'ಪುಟ್ಟಪ್ಪ' ಅಂತ ಹೆಸರಿಟ್ಟರಂತೆ

ಹೋಲಿಸಿ : ಪುಟ್ಟದ ಕೂಸಿಂಗೆ ಪೆಸರಿಡುವೆನೆಂಬ...ಮರುಳನಂತೆ
—(ದ್ವಾ. ಆಶ್ವಾ-೨೩೨) ಧರ್ಮಾಮೃತ

೧೧೦೮ ಹಾದರಗಿತ್ತಿಗೆ ಅರಮನೆ, ಗರತಿಗೆ ಹುಲ್ಲುಮನೆ, ಶತದ್ರೋಹಿಗೆ ಶಾಲು ಜೋಡಿ

ಹೋಲಿಸಿ : ೧ ಛತ್ರ ಚಮರದ ನೆಳಲು ಖಳರಿಗಾತಪದ ಬಲು
ಬೇಗೆ ಬುಧ ಜನಕೆ
—(ಸ.ಪ. ೧-೩೪) ಕರ್ಣಾಟ ಭಾರತ ಕಥಾಮಂಜರಿ

೨ ಆಳಿದೊಡೆಯಂಗೆರಡು ಬಗೆಯುವಾತಗೆ ಒಳ್ಳೆಮಾಳಿಗೆಯ ಮನೆ
ತುರುವು ಧನ ಧಾನ್ಯವು —(೧೨) ಕನಕದಾಸ ಕೃತಿಗಳು

೩ ಉತ್ತಮ ಪತಿವ್ರತೆಯು ಪತಿ ಸೇವೆ ಗತಿಯೆನಲು ।
ಮುತ್ತೈದೆಗುಡುವುದಕೆ ವಸ್ತ್ರವಿಲ್ಲ ॥

ಮತ್ತೆ ಪೃಥಿವಿಯೊಳಗೆ ತೊಡಿಗೆ ಬಂಗಾರಗಳು ।
ವರ್ತನೆಯಿದೇನಯ್ಯ ಕಲಿಯುಗದ ಮಹಿಮೆ
—(೧೨) ಕನಕದಾಸ ಕೃ

೪ ಅಱಿತವರೊಂದಡಕೆವಡೆಯರೀ ಕಲಿಯುಗದೊಳ್
—(೮೦) ತ್ರಿಲೋಕ

೫ ದಿನಂ ಪಲವು ದ್ರವ್ಯಕೊಡೆಯು ಬಾಗಿಗೆ ನೆಲೆ ಬಡತನಂ
—(ಸಂ ೧೬-೪೧) ಶಂಕರದಾಸಿಮಯ್ಯ ಪು

೧೧೦೯ ಕೀಳು ಮೇಲಾಯ್ತು, ಮೇಲು ಕೀಳಾಯ್ತು

೧ ಕೀಳು ಮೇಲು–ಮೇಲು ಕೀಳಾಗಿ ನಡೆವುದು
ಕಾಲವೆಗ್ಗಳವಾಯಿತೊ, ಹೇ ದೇವ —(ಹ.ಕೀ.ತ. ಕೀ ೪

೧೧೧೦ ಕೂಸು ಕುಂಚಿಗೆ ತಿಂತು, ಹಾಸಿಗೆ ನೆಲ ತಿಂತು

೧ ಕೂಸು ಕುಂಚಿಗೆ ತಿಂತು, ಹಾಸಿಗೆ ನೆಲ ತಿಂತು
ಭಾವಯ್ನ ಗಡ್ಡ ಇಲಿ ತಿಂತು । ಮಿಕ್ಕದ್ದು
ದೀವಳಿಗೆ ಮುಂದೆ ಚಿಗತಾವು —(ಹಳ್ಳಿಹಾಡ) ಪು. ೧

೧೧೧೧ ಚೆಂಡು ಮುಳುಗಿದರೇನು, ಗುಂಡು ತೇಲಿದರೇನು
—ಹ.ಕೀ.ತ, ಕೀ. (೧

೧೧೧೨ ಕೂಪಕ್ಕಿಳಿಯೋನಿಗೆ ನೇಣು ಹರಿದ ಹಾಗೆ

೧ ಕೋಪವೆಂಬುದು ಕೇಳಿ । ಪಾಪದಾ ನೆಲೆಗಟ್ಟು
ಕೂಪದೊಳು ನೇಣು । ಹರಿದಂತೆ ನರಕದೊಳು
ಕೋಪಿ ತಾನಿಳಿವ ಸರ್ವಜ್ಞ —(ಸರ್ವ, ಪ. ೪

೧೧೧೩ ಬಾವಿ ತೆಗೆಯಲು ಹೊರಟರೆ ಬೇತಾ(ಬಗೆದಾ)ಳ ಹೊರಟಿತು

೧ ಶಾಂತಿ ಗೆಯ್ಯೆ ಬೇತಾಳಂ ಮೂಡಿತು
—(೧೫೦ವ) ಕರ್ಣಾಟಕ ಪಂಚ

೨ ಶಾಂತಿ ಮಾಡದೆ ಬೇತಾಳಂ ಮೂಡುವ ತೆಱಂ
—(೪–೪೧) ಸಮಯಪರೀಕ್ಷೆ

೩ ಶಾಂತಿಯ ಮಾಡದ ಹೋದರೆ ಬೇತಾಳನಾಯಿತ್ತು
—(೮೦೧) ಬಸವೇಶ್ವರ ವಚನಗಳು

೪ ಶಾಂತಿ ಮಾಡದೆ ಬೇತಾಳಂ ಮೂಡುವ ತೆಱದಿಂ
—(ತ್ರ. ಅವತಾರ; ೧೬) ಯಶೋಧರ ಕಾವ್ಯಂ

೫ ಶಾಂತಿ ಮಾಡಲ್ಕೆ ಪ್ರಳಯಾಂತಂ ಮೂಡಿತು
—(೪–೪೩) ಸಿಂಗಿರಾಜ ಪುರಾಣ

೬ ತೋಡಲು ಬಾವಿ ಬೇತಾಳ ಹೊರಟಿತು ಇನ್ನೇನಿನ್ನೇನು ?
—(ಹ.ಕೀ. ತ, ಕೀ. ೪೦೮)

೭ ಶಾಂತಿ ಕರ್ಮದಲಿ ಬೇತಾಳ ಮೂಡಿದ ತೆರಂ

೧೧೧೪ ಚಿಂತೆಯೇ ಮುಪ್ಪು, ಸಂತೋಷವೇ ಯೌವ್ವನ

೧ ಚಿಂತೆಯೇ ಮುಪ್ಪು, ಸಂತೋಷವೇ ಜವ್ವನ
—(ಭರತೇಶ ನಿರ್ವೇಗ ಸಂಧಿ–೧೧, ಚಿತ್ತ ನಿರ್ವೇಗ ಸಂಧಿ–೧೩.೭)

೧೧೧೫ ಅಜ್ಜಿಗೆ ಅರಿವೆ ಚಿಂತೆ, ಮಗಳಿಗೆ ಮಿಂಡನ ಚಿಂತೆ....
ಊರಿಗೆ ಊರ ದುಃಖ, ಕೋಳಿಗೆ ಮದುವೆ ದುಃಖ

ಹೋಲಿಕೆ: ಊರಿಗುಕ್ಕಿಯ ಚಿಂತೆ, ನೀರಿಗೆ ಮದುವೆಯ ತೋರ ಚಿಂತೆ
—(೨೪–೮೮) ಜ್ಞಾನ ಚರಿತ

೧೧೧೬ ಎಮ್ಮೆಗೆ ಹೆರೋ ದುಃಖ, ಕೋಣನಿಗೆ ಏರೋ ದುಃಖ

೧ ಮಹಿಷ್ಯಾಂ ಪ್ರಸವಾತುರಾಯಾಂ ಮಹಿಷೋ ಮದನಾತುರಃ
—(ಸಂ)

೧೧೧೭ ಮಿಂಚಿ ಹೋದ ಕೆಲಸಕ್ಕೆ ಚಿಂತಿಸಿ ಫಲವೇನು ?

೧ ಪೋದ ತೊಱೆಯಂ ಬಿಂದಕ್ಕೊಬ್ಬುವರೆ?
—(೪–೧೫೪) ಪಾರ್ಶ್ವನಾಥಪುರಾಣ

೨ ಒಂದಣ ಸೋಲವನು ನೆನೆದೇನು ಫಲ ?
—(೨-೭೫) ಐರಾವ

೩ ದಾರಿ ತಪ್ಪಿದ ಬಳಿಕ ಚಿಂತಿಸಲೇನು ? ನಿಷ್ಫಲವು
—(೨೬-೧೦) ಕೌಶಿಕ ರಾಮಾಯಣ

೪ ಕಳೆದು ಹೋದ ಮಾತಿಗೆ ಕಳವಳಗೊಂಡು ಫಲವೇನು ?
—(೧೭) ಮುದ್ರಾಮಂಜೂಷ

೫ ನಡೆದು ಹೋದ ಮಾತಿಗೆ ಈಗ ನುಡಿದು ಫಲವೇನು ?
—(೫) ಮುದ್ರಾಮಂಜೂಷವು

೬ ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು?
—(೮, ೧೧, ೧೮) ಮುದ್ರಾಮಂಜೂಷವು

೭ ಗತಂ ನಶೋಚಯೇ ಪ್ರಾಜ್ಞ —(೮) ಭಗವದ್ಗೀತೆ

೮ ಒಡೆದು ಬಿಟ್ಟೊಡವೆ ಕೈಸಾರಿವಡಿಲ್ಲ, ಮತ್ತೆ ಮರುಗಿನರಿಲ್ಲ
—ಜಾಂಬೇಶ್ವರಾ

೯ ಗತಸ್ಯ ಶೋಚ್ಯತಾ ನಾಸ್ತಿ —(ಸಂ)

೧೦ ಮಿಂಚಿದ ಕಾರ್ಯಕ್ಕೆ ಚಿಂತೆಯಾತಕೆ........ತಂದನಾನಾ
ಹಾಲು ಅನ್ನವ ಊಟವ ಮಾಡಯ್ಯ........
—ಜನಪದ ಕಥನ ಗೀತೆಗಳು (೩೪೮)

೧೧೧೮ ಅಜಗತಾಂತರ ನ್ಯಾಯ

೧ ಹಸ್ತಿಮಲ ಕಾಂತರಂ —(೫-೭೨) ಶಾಂತಿಪುರಾಣ

೨ ಅಂತರಮಜಗಜ —(೩-೮೫) ನೇಮಿನಾಥ ಪುರಾಣಂ

೩ ಅಜಗಜಾಂತರ —(೧೫-೯) ಕೌಶಿಕ ರಾಮಾಯಣ

೧೧೧೯ ಆನೆ ಎತ್ತ, ಆಡು ಎತ್ತ ?

ಹೋಲಿಸಿ : ೧ ಮೇರುವೆತ್ತಣುವೆತ್ತ
—(ಬಾ. ಕಾಂ. ೧೯-೫೦) ಶ್ರೀ ಮುದ್ರಾಮಾಯಣಂ

೨ ಏಳು ನೆಲೆಯುಪ್ಪರಿಗೆಯೆತ್ತ, ಕೇಳುದಿಪ್ಪೆಯದೆತ್ತ
—(೭–೩) ಸಾಳ್ವಭಾರತ

೩ ಎತ್ತಣ ಕೋಗಿಲೆ ಯೆತ್ತಣ ಮಾಮರ
—(೧೨-೫೦) ಲೀಲಾವತಿ ಪ್ರಬಂಧ

೧೧೨೦ ಗರುಡನ ಮುಂದೆ ಗುಬ್ಬಚ್ಚಿಯೆ ?

ಹೋಲಿಸಿ : ಶರಧಿಯ ಮುಂದೆ ಪಲ್ವಲದ ಪೆರ್ಮೆಯೆ ?
—(೧೮–೨೮) ವೃಷಭೇಂದ್ರ ವಿಜಯ

೧೧೨೧ ಕಾಗೆ ಕಪ್ಪಗಿದ್ದರೆ ಕೋಗಿಲೆ ಆದೀತೆ ?

ವಸಂತ ಕಾಲ ಬಂದರೆ ಕಾಗೆ ಕಾಗೆಯೇ, ಕೋಗಿಲೆ ಕೋಗಿಲೆಯೇ

೧ ಕಾಕಃ ಕೃಷ್ಣಃ ಪಿಕಃ ಕೃಷ್ಣಃ ಕೋಭೇದಃ ಪಿಕ ಕಾಕಯೋಃ
ವಸಂತ ಕಾಲೇ ಸಂಪ್ರಾಪ್ತೇ ಕಾಕಃ ಕಾಕಃ ಪಿಕಃ ಪಿಕಃ (ಸಂ)

೧೧೨೨ ಓಟ್ಟು ಓಟ್ಟೇ, ಬೂದಿ ಬೂದಿಯೇ

ಹೋಲಿಸಿ : ೧ ತುದಿಯೊಳ್ಕಾಚು ಕಾಚೆ, ಮಣಿ ಮಣಿಯೆ ವಲಂ
—(೮–೨೪೫) ಸಮಯಪರೀಕ್ಷೆ

೨ ಪಿಟ್ಟು ಬೂದಿಯುಮಂ ಸಮವೆನಿಪ್ಪವ್ರೋಲ್ ಮತಿಹೀನರ್
—(೧೫-೬) ಸಮಯಪರೀಕ್ಷೆ

೧೧೨೩ ಇರುಳು ಕನಸಿನಲ್ಲಿ ಕಂಡ ಬತ್ತಕ್ಕೆ ಹಗಲು ಗೋಣಿ ಹಾಸಿದ ಹಾಗೆ

೧ ಕನಸಿನ ಬತ್ತಕ್ಕೆಚ್ಚತ್ತು ಗೋಣಿಯಹಾಂತಂತೆ
—(೨-೧೩೨) ಧರ್ಮಾಮೃತಂ

೨ ಕನಸಿನ ಭತ್ತಕ್ಕೆ ಗೋಣಿಯಾಂಪಂತಕ್ಕುಂ
—(೧೩-೫೫) ಸಮಯಪರೀಕ್ಷೆ

೩ ಕನಸಿನ ಭತ್ತಕ್ಕೆ ಗೋಣಿಯಾಂತವರೊಳರೇ
—(೧೮-೧೧೨) ಜಗನ್ನಾಥವಿಜಯ

೪ ಕನಸಿನ ಛತ್ರಕ್ಕೆ ಗೋಣೆಯಾಂಪರೆ
—(೪-೭೦) ಲೀಲಾವತಿ ಪ್ರಬಂ

೫ ಕನಸಿನ ಛತ್ರಕ್ಕೆ ಗೋಣೆವೊಯ್ಯುವೊಲ್
—(೬-೧೧೧) ಧರ್ಮನಾಥ ಪುರಾಣ

೬ ಕನಸಿನ ಛತ್ರಕ್ಕೆ ಗೋಣೆಯುನಾಂತರ್
—(೨೭-೫೫) ಮೋಹನತರಂಗಿ

೭ ಕನಸಿನ ಛತ್ರಕ್ಕೆ ಗೋಣೆಯುನಾಂತರು
—(೨೫-೬೮) ನಾಗಕುಮಾರ ಚರಿತ

೮ ಕನಸಿನ ಛತ್ರಕ್ಕೆ....ಗೋಣೆಯುನಾಂಪತೇಜಂ !
—(೧೧-೧೦೭) ವಿಷ್ಣುಪುರಾಣ

೯ ಕನಸಿನಲ್ಲಿ ತೋರುವ ಛಾಸ್ಯಕ್ಕೆ ಗೋಣೆಯುನ್ನೊಡ್ಡಿದಂತಾಯ್ತು
—(ಯಕ್ಷಗಾನ, ಬಾಣಾಸುರ ಕಾಳಗ

ಹೋಲಿಸಿ : ೧ ಕನಸಿನಲಿ ಜೇಳೂರಿದೊಡೆ ವೇದನಿಸಿತೆಂದಿರದೆದ್ದು
ನರಳುವ ಮನುಜರುಂಟೆ ?
—(೭-೮೨) ಪ್ರಭುಲಿಂಗಲೀಲ

೨ ಕನಸಿನ ಕನ್ನಡಿ....ನೋಡಲ್ಕಿಲ್ಲ
—(೨೮-೫೭) ಸಿಂಗಿರಾಜಪುರಾಣ

೩ ಕನಸಿನ ಮಿಱುಪ ಮಾಣಿಕ ಕೈಗೆ ಬಂದೆಚ್ಚಱಿನ ಕೂಡಳಿವಂತೆ
—(೧-೧೨-೪೧) ಕನ್ನಡ ಭಾಗವ

೪ ತುತ್ತುಗೊಂಡವರುಂಟೆ ಕನಸಿನ ಬತ್ತದೋಗರವನು
—(೯-೧೩-೨೫) ಕನ್ನಡ ಭಾಗವ

೧೧೨೪ ಕನಸಿನಲ್ಲಿ ಕಂಡ ಗಂಟನ್ನು ಲೆಕ್ಕಕ್ಕೆ ಸೇರಿಸಿಕೊಂಡ ಹಾಗೆ

೧ ಕನಸಿನ ಪೊನ್ನ ಕಾಣದೆ ದುಃಖಿಪಡುವರೆ
—(ದ್ರೋ.ಪ. ೭-೨೮) ಕರ್ಣಾಟ ಭಾರತ ಕಥಾಮಂಜ

೨ ಕನ್ನಡಿಯೊಳಗಿನ ಗಂಟು ಕನಸಿನೊಳಗಿನ ನಂಟು
—(೧೪೮೦-೧೬೦೦) ವಾದಿರಾಜರು

೩ ಕನ್ನಡಿಯುಲಿಹ ಗಂಟಿನಂದದಿ ಜಗವಿದಘಟಿತ ಘಟನೆಯಾಗಿಹುದು
—(ಸಂ ೩-೫೫) ಲಘುಯೋಗ ವಾಸಿಷ್ಠ

೪ ಕನ್ನಡೊಳಗಣ ಗಂಟ ಕೈನೀಡಿ ತೆಗೆವಂತೆ —ನೀತಿವಾರ್ಧಕ

೫ ಕನ್ನಡಿಯು ಗಂಟು!
—(ಸುಂ. ಕಾಂ. ೯-೧೯) ಕಿ.ಕಾಂ. ೧೪-೩)
ಶ್ರೀಮದ್ರಾಮಾಯಣಂ

೬ ಸ್ವಪ್ನದಿ ಕಂಡ ಸಿರಿ ಹುಲ್ಲಿನ ಉರಿ
—(೮-೧೪) ಮಹಲಿಂಗಲೀಲೆ

೭ ಕನ್ನಡಿಯು ಗಂಟಿಂದುತ್ತಮವಲೆ ಕಯ್ಯ ಗಂಟು ಪಿರಿಯರ
ಮತದಿಂ —(೧೨೫) ಕನ್ನಡ ನೀತಿಸಾರವು

೧೧೨೫ ಕತ್ತೆಮರಿ ಚೆಂದ, ತೊತ್ತಿನ ಮಾತು ಚೆಂದ

೧ ಕತ್ತೆಮರಿ ಚೆಂದ, ತೊತ್ತಿನ ನುಡಿ ಚೆಂದ
ಮುತ್ತುಗದ ಹೂವು ಕಡುಚೆಂದ [1] ಕಂದಯ್ಯ
ನಿನ್ನಾಟ ಚೆಂದ ನಮಗೆಲ್ಲ —(ಜಗೀ, ಪು. ೭೬)

೧೧೨೬ ಕತ್ತೆಗೆ ಕೊಂಬಿಲ್ಲ, ತೊತ್ತಿಗೆ ಗುಣವಿಲ್ಲ

೧ ತೊತ್ತಿನಲ್ಲಿ ಗುಣವಿಲ್ಲ । ಕತ್ತೆಗಂ ಕೋಡಿಲ್ಲ
— ಸರ್ವ, ಪ. ೧೩೨೪

೨ ಎತ್ತಿಗೆ ಮಾತುಂಟೆ ಕತ್ತೆಗೆ ಕೋಡುಂಟೆ ?
— ಜಾನಪಕ. ಪು. ೨೧೬

೧೧೨೭ ಕುದುರೆಗೆ ಕೋಡಿಲ್ಲ, ಕೋಣಕ್ಕೆ ದಾರುಕಿಲ್ಲ

೧ ಕುದುರೀಗೆ ಕೋಡಿಲ್ಲ ಕ್ವಾಣಕ್ಕ ಡುಬ್ಬಿಲ್ಲ
—ಜಾಗೀ, ಪು ೨೯೭೦

೧೧೨೮ ಹಾವಿನ ಹೆಡೆ ಚೆಂದ । ಮಾವಿನ ಮಿಡಿ ಚೆಂದ

೧ ಹಾವಿನ ಹೆಡಿ ಚೆಂದ ಮಾವಿನ ಮಿಡಿ ಚೆಂದ
ಹಾರಾಡಿ ಬರುವ ಗಿಳಿ ಚೆಂದ । ನನಕಂದ
ನೀ ಚೆಂದ ನನ್ನ ಮನಿಗೆಲ್ಲ —ಜಾಗೀ, ಪು. ೯

೧೧೨೯ ಹಾವು ಕಚ್ಚಿದ ಮೇಲೆ ಹಳೆಯ ಬಟ್ಟೆಯಲ್ಲಿ ಒರಸಿದರೆ ಹೋದೀತೆ ?

೧ ಕೆಟ್ಟ ಹಾವು ಕಚ್ಚಿದ ಘಾಯಕೆ ಹಳೆ ಬಟ್ಟೆಯೊರಸೆ ವಿಷ
ಹೋದೀತೆ ? —ಹ.ಕೀ.ತ, ಕೀ. ೨೯೪

೨ ಕಾಳೋರಗವು ಕಚ್ಚಿದುದ ರಸದಿಂದ ತೊಡೆದರದು ಪೋದುಪ್ಪುದೆ?
—(ಕಿ. ಕಾಂ. ೭-೧೧) ಶ್ರೀ ಮದ್ರಾಮಾಯಣಂ

೧೧೩೦ ಬೀಜವಿಲ್ಲದೆ ಮರವಿಲ್ಲ, ಮರವಿಲ್ಲದೆ ಬೀಜವಿಲ್ಲ

೧ ಬೀಜ ವೃಕ್ಷದೊಳಾಯ್ತು ವೃಕ್ಷಕ್ಕೆ ಬೀಜವಾರಿಂದಾಯ್ತು
— (೨೩) ರಾಮಧಾನ್ಯ ಚರಿತೆ

೧೧೩೧ ಬರಗಾಲಕ್ಕೆ ರೊಕ್ಕ ಒಡಿದು ಬತ್ತಕ್ಕೆ ಅಲಿದರು

೧ ಒಕ್ಕಲ ಗೇರ್ಯಾಗ ಮಳೆರಾಜ। ಅವರು ಮಕ್ಕಳ ಮಾರ್ಯಾರೆ
ಮಳೆರಾಜ। ಮಕ್ಕಳ ಮಾರಿ ರೊಕ್ಕs ಹಿಡಕೊಂಡು ಭತ್ತಾಕ
ತಿರಗ್ಯಾರೋ ಮಳೆರಾಜ— (ಪು. ೧೭) ಜನಾಂಗದ ಜೀವಾಳ

೧೧೩೨ ಬಂದ ಹಾಗೇ ಹೋಗಪ್ಪ ಸುಬ್ಬರಾಯ

೧ ಬಂದ ಬಟ್ಟೆಯಿಂದ ಬಿಜಯಂಗೆಯ್ವ
— (೯-೪೮ವ) ವಿಕ್ರಮಾರ್ಜುನ ವಿಜಯಂ

೨ ಅಂಗವಿಸುವುದು ಬಂದ ಬಟ್ಟೆಯ ಸಂಗದಲಿ
—(೪-೧೦-೨೭) ಕೌಶಿಕ ರಾಮಾಯಣ

೩ ಬಂದ ಬಟ್ಟೆಯು ಪತ್ತು
—(೨೮-೪೧) ಕೌಶಿಕ ರಾಮಾಯಣ

೧೧೩೩ ಹೇಡಿ ಬಿರುದು ಕಟ್ಟಿ ಕೊಂಡ ಹಾಗೆ

೧ ಮರುಳನ ಸಿರಿಯುಂ ಪಂದೆಯ ಬಿರುದುಂ ಸುಖಮಾಗಲಾಱ ವೆಂದು ಕಡೆಯೊಳ್ —(೬-೯೯) ಧರ್ಮಾಮೃತಂ

೨ ಹೇಡಿ ಬಿರುದು ಕಟ್ಟಿದಂತಾಯಿತ್ತು
(೮೮೮) ಬಸವೇಶ್ವರನ ವಚನಗಳು

೧೧೩೪ ಬೀಸತ್ತು ಬೇಲಿ ಒರಗಿದರಂತೆ

೧ ಬೇಸತ್ತು ಬೇಲಿಯ ಮೇಲೊರಗಿದಂತೆ
—(ಹ. ಕೀ. ತ, ಕೀ. ೪೭೬)

೧೧೩೫ ಬೇವ ಕಾಗೆಗೆ ಇಂಪು, ಮಾವು ಕೋಗಿಲೆಗೆ ಇಂಪು (ಬೇವ ಮೆಚ್ಚಿದ ಕಾಗೆಗೆ ಮಾವು ಸಿಹಿ.

೧ ಬೇವು ಕರಂ ಪಣ್ತೊಡೆ ಕಾಕವಳಿಗುಪಯೋಗ್ಯ
—(೬-೮೦) ಬ್ರಹ್ಮ ಶಿವ

೨ ಬೇವಿನ ಹಣ್ಣು ಕಾಗೆಗೆ ಇಸಿದಲ್ಲದೆ ಕೋಗಿಲೆಗೆ ಮುಲಬಾರದು
—(೨-೩೦೩) ಬಸವಣ್ಣನವರ ವಚನಗಳು

೩ ಬೇವಿನ ಹಣ್ಣು ಕಾಗೆಗಲ್ಲದೆ, ಕೋಗಿಲೆಗಲ್ಲ
—ಚನ್ನಬಸವಣ್ಣನವರ ವಚನಗಳು

೪ ಬೇವಂ ಮೆಚ್ಚಿದ ಕಾಗೆಗೆ ಮಾವಿಟಿದು
—(೨-೪೫) ಯಶೋದರ ಕಾವ್ಯ

೫ ಬೇವು ತಿಂಬ ಕಾಗೆ ಬೆಲ್ಲದ ಸವಿಯನೆತ್ತ ಬಲ್ಲುದಯ್ಯ
—(೪೦೬) ತೋಟಂದ ಸಿದ್ಧೇಶ್ವರ ವಚನಗಳು

೬ ಬೇವಿಂಗೆರಗುವ ಕಾಕಮ್ಮಾವಿಂಗೆರಗುಗುಮೆ ಗಿಳಿಯು ಪೋಲ್
—(೧-೫೫) ವೃಷಭೇಂದ್ರ ವಿಜಯ

೭ ಬೇವ ತಿಂಬುವ ಕಾಗೆ ಮಾವಿಗೆರಗುವುದೆ ?

—(೨-೧-೩) ಕೈವಲ್ಯ ಕಲ್ಪವಲ್ಲಿ

೮ ಮಾವಿನಿಂಬಣ್ಣ ಮಸವಾಜಿ (ಸವಿ) ಸವಿದು
ಮೈಮಱೆದುರ್ಕಿ ಸೊರ್ಕಿರುವರ ಗಿಳಿ ಗಾವಳಿವಡೆದು
ಕಾಗೆಗಳೆಱಗುವ ಬೇವಿನ ಪಣ್ಣಾಸೆವೆತ್ತೆಱಗುವುದೆ ?

—(೬-೫) ಶ್ರೀ ಗೀತ ಗೋಪಾಲ

೯ ಬೇವಿನ ಪಣ್ ಕಾಗೆಗೈಸೆ

—(೫೯) ರಂಗಧಾಮ ನೀತಿ ಶತಕ ಸಾಹಿತ್ಯ

೧೦ ಕಾಗೆಗೆ ಬೇವಿನಿದು ಬಳಿಕ ಕೋಗಿಲೆಗಿನಿದೇ ?

—(೮೭೦) ನೀತಿಸಾರ

೧೧ ಇನಿವಣ್ಣಿರೆ ಬಿಸುಟೊಯ್ಯನೆ ವನಮಂ ಪೊಕ್ಕು ಕಾಕ ನೊಲ್ವುದ
ಗಡ ಬೇವಿನ ಪಣ್ಣ

೧೧೩೬ ಮಳೆ ಬಿಟ್ಟರೂ ಮರದ ಹನಿ ಬಿಡದು

೧ ಮಳೆ ಮಾಣ್ದೊಡೆ ಹನಿ ಮಾಣದು

—(೯-೪೭) ಗಿರಿಜಾಕಲ್ಯಾಣ

೨ ಮಳೆ ಬಿಟ್ಟೊಡಂ ಮರದ ಹನಿ ಬಿಡದು

—(೫-೧೩) ಸೌಂದರ ಪುರಾಣ

೩ ಮರುಳ ತಾ ಮಳೆ ಗಂಜಿ । ಮರದಡಿಯು ಸಾರಿದರೆ
ಮರದ ಹನಿ ಬಿಡದು—ಮಳೆನಿಂದು, ದುರುಳರಾ
ನೆರಳು ಇಂತೆಂದ ! ಸರ್ವಜ್ಞ —ಸರ್ವ, ಪ. ೭೫

೪ ಮಳೆ ಬಿಟ್ಟರೂ ಮರದ ಹನಿ ಬಿಡದು ತಾಯವ್ವ
ನೀ ಬಿಟ್ಟರೂ ನಿನ್ನ ಮನೆ ಬಿಡದು । ನನ್ನವ್ವಾ
ನಿನ್ನಾಸೆ ನನ್ನ ಬಿಡದಲ್ಲ ॥ —ಜಗೀ, ಪು, ೬೮

೫ ಮಳೆಯು ಬಂದರೆ ಬರಲಿ ಮರದs ಮೇಲಿರುವೆ
ಮಳೆ ನಿಂತ್ರು ಮರದs ಹನಿ ಬಿಡದ—ಹಡೆನವ್ವ
ನೀ ಬಿಟ್ರು ನಿನ್ನ ಮನಿ ಬಿಡದ —ಜಾಗೀ, ಪು. ೬೧

೧೧೩೭ ಬಲವಿಲ್ಲದ ಕಾಲಕ್ಕೆ ನೆಲವೆದ್ದು ಬಡಿಯಿತು, ದೆಸೆ ಮುರಿದ ಕಾಲಕ್ಕೆ ಕಸವೆದ್ದು ಬಡಿಯಿತು

೧ ಬಲ ಹೋದ ಕಾಲಕ್ಕೆ । ನೆಲವೆದ್ದು ಬಡಿಯುವುದು ।
ಕುಲ ಛಲವು ಕಲಹ-ಸಿರಿಯು, ಸಂಗ್ರಾಮಗಳು,
ಬಲವಿರುವ ತನಕ ! ಸರ್ವಜ್ಞ —(ಸರ್ವ, ಪ. ೮೦೫)

೧೧೩೮ ಕೊತ್ತಿ ಬಡವಾದರೆ ಕೋಳಿ ಕಣ್ಣು ಕುಟುಕಿತಂತೆ
ಬೆಕ್ಕು ಬಡವಾದ್ರೆ ಇಲಿ ಹುಬ್ಬು ಹಾರಿಸಿದ ಹಾಗೆ

ಹೋಲಿಸಿ : ಕೈದು ಇಲ್ಲದವನನ್ನು ಕರು ಬೆದರಿಸಿತು
—(೨, ರಾಯ್ಯಾರು ವಿಜಯ)

೧೧೩೯ ಹಲ್ಲು ಕಿತ್ತ ಹಾವು

೧ ಪಲ್ಲೋದ ಪಾವಿನಂತೆ
—(೮-೧೬೭) ನೇಮಿನಾಥಪುರಾಣಂ, ನೇಮಿಚಂದ್ರ

೨ ಹಲ್ಲು ಮುರಿದಹಿಯಂತೆ —(೧೯-೩) ಕೌಶಿಕರಾಮಾಯಣ

ಹೋಲಿಸಿ : ೧ ಪಲ್ಲುಡಿದುಗ್ರ ದಿಗ್ಗಜದವೋಲ್
—(೧೦-೭೬) ನೇಮಿನಾಥಪುರಾಣಂ, ಕರ್ಣಪಾರ್ಯ

೨ ಪಲ್ಮುರಿದ ಗಜದಂತೆ
—(೨೪-೧೩೧) ನೇಮಿಜಿನೇಶ ಸಂಗತಿ

೧೧೪೦ ಆಪತ್ತಿಗೆ (ಸಾಹಸಕ್ಕೆ) ಆದವನೇ ಬಂಟ, ಸಮಯಕ್ಕಾದವನೆ ನಂಟ

೧ ಆಪತ್ತಿನೊಳ್ ಮುಂದುಂ ನೋಡದ ಬಂಧುವೇತಕೆ
—(೧೬) ಸೋಮೇಶ್ವರ ಶತಕ

೨ ಎಡರಿಗಂ ತಾನಾಗದಂ ನಂಟನೆ ?
—(೨೨) ಸೋಮೇಶ್ವರ ಶತಕ

೩ ಉಪರಕ್ಕಾಗದ ಬಂಟನೇ —(೨೨) ಸೋಮೇಶ್ವರ ಶತಕ

೪ ಅವಸರದ ಲಾಪವನೆ ನಂಟನು, ಬವರದೊಳಗಾದವನೆ ಬಂ…
—(೧೯–೩೨) ಕೌಶಿಕ ರಾಮಾ…

೫ ಸೇವಕನಿದ್ದು ಫಲವೇನು ಸಮಯಕಂ ದೊರಕದೊಡೆ ?
—(ಅಯೋ. ಕಾಂ. ೧೦-೯) ಶ್ರೀಮದ್ರಾಮಾಯ…

೧೧೪೧ ಮೈಯಲ್ಲಿ ಹುಟ್ಟಿದ್ದ ರೋಗಕ್ಕಿಂತ ಕಾಡಿನಲ್ಲಿ ಕಷ್ಟ ವಾಸಿ

೧ ಪೆರನಾದೊಡಮೇಂ ? ಹಿತಮಾ । ಚರಿಪನೆ ಸದ್ಬಂಧು ಮ…
ಬಂಧುವೆ ಬಾ…
ಕರ ಮಹಿತಂ ದೇಹದೊಳಗೆ ಮಿರು ರೋಗಂ ಬನದೊಳುದಿ…
ದೌಷಧಮೆಹಿ…

ಹೋಲಿಸಿ : ೧ ಪರನಾದಲೆಯು ಹಿತವಾವಗುಂಟವ ಬಂಧು …
—ನಯ…
ಬಂಧುವಿಗಾವನಹಿತನು ಪರನುಕಾಣ
—(೬-೩-೩೨) ತೊರವೆರಾಮಾ…

೨ ತನಗತ್ಯಂತ ಸುಖಿ …
ಟ್ಟಿನೆ ಸಂಬಂ ದುಃಖಿಪೋಯ್ದುಪನೆ ಪಗೆ
—(ಪು.೬೯: ಪ೧೫) ಜೀವ ಸಂಬೋ…

೧೧೪೨ ಹೊತ್ತಿಗೊದಗಿದ ಮಾತು ಸತ್ತವನು ಎದ್ದ ಹಾಗೆ

೧ ಹೊತ್ತಿಗೊದಗಿದ ಮಾತು ಸತ್ತವನು ಎದ್ದಂತೆ
ಹೊತ್ತಾಗಿ ನುಡಿದ–ಮಾತು ಕೈ ಜಾರಿದಾ
ಮುತ್ತಿನಂತಿಹುದು । ಸರ್ವಜ್ಞ —ಸರ್ವ, ಪ. ೧…

೧೧೪೩ • ತನಗಿಲ್ಲದ ಬದುಕು ಇದ್ದರೇನು ಹಾಳಾದರೇನು

೧ ತನಗಿಲ್ಲದಾವಸ್ತುವೆಲ್ಲಿದ್ದರೇನು
—(೨–೧೮೩) ಪುರಂದರದಾಸರ ಕೀರ್ತನೆ…

೧೨೪೪ ಪ್ರಸ್ತಾಪ ತಪ್ಪಿ ನುಡಿವರೆ ದೇವಾಂಗ ದುಸ್ತು ಬಿದ್ದಂತೆ

೧ ಪ್ರಸ್ತವನು ನುಡಿಯೆ ಪ್ರಾಶಸ್ತವಾಗಿರಬೇಕು
ಪ್ರಸ್ತವನು ತಪ್ಪಿ–ನುಡಿದರಾ ದೇವಾಂಗ
ದುಸ್ತು ಬಿದ್ದಂತೆ ! ಸರ್ವಜ್ಞ —ಸರ್ವ, ಪ.೧…